# ವಿಧಿಯ ಚಕ್ರಗಳು



ಆಂಗ್ಲ ಮೂಲ: ಎನ್. ಎಸ್. ಹೇಮಾ

ಕನ್ನಡ ಅನುವಾದ: ಎಂ. ಏ. ಎನ್. ಪ್ರಸಾದ್

ಅಭಿಜಿತ್ ಪ್ರಕಾಶನ, ಮುಂಬೈ

ಇದು ಮಹಿಳೆಯೊಬ್ಬಳು ಪೋಲಿಯೊ ಕಾಯಿಲೆಯೊಡನೆ ನಡೆಸಿದ ಹೋರಾಟ ಮತ್ತು ಅವಳ ಧೈರ್ಯ ಹಾಗೂ  ಸ್ಥೈರ್ಯದ ಕತೆ. ಜನರು ವಿಕಲಾಂಗತೆಯನ್ನು ಒಂದು ಕಾಯಿಲೆ ಎಂದು ತಿಳಿಯುತ್ತಿದ್ದ ಕಾಲದಲ್ಲಿ ಬೆಳೆದ ಹೇಮಾ ತಾನು  ಪಟ್ಟ ಕಷ್ಟಗಳನ್ನು ಓದುಗರ ಮುಂದಿಡುತ್ತಾರೆ. ಈ ಕಷ್ಟಗಳು ಅವರನ್ನು ಮುಂದೆ ಒಂದು ಮಹತ್ತರವಾದ ಪಾತ್ರಕ್ಕೆ ಅಣಿಮಾಡಲು ಅವರ ಜೀವನದಲ್ಲಿ ಒದಗಿದವು ಎಂಬುದು ಅವರ ದೃಢ ನಂಬಿಕೆ. ಇದು ಜೀವನದಲ್ಲಿ ಸಾದ್ಯತೆಗಳಬಗ್ಗೆ ಪ್ರೇರೇಪಿಸುವ ಒಂದು ಆತ್ಮ ಕತೆ.



ಅಭಿಜಿತ್ ಪ್ರಕಾಶನದ ೧೦೩ ನೆಯ ಕೃತಿ

# ವಿಧಿಯ ಚಕ್ರಗಳು

ಆಂಗ್ಲ ಮೂಲ :
ಎನ್.ಎಸ್.ಹೇಮ

ಕನ್ನಡ ಅನುವಾದ :
ಎಂ.ವಿ.ಎನ್. ಪ್ರಸಾದ್

ಅಭಿಜಿತ್ ಪ್ರಕಾಶನ, ಮುಂಬೈ

VIDHIYA CHAKRAGALU

TRANSLATED BY
M. A. N. PRASAD
213, 1st Floor, 4th main,
18th Cross, Malleswaram,
Bangalore – 560 055
E-mail: man.prasad@gmail.com

Copyrights with the Author

First Edition : December 2019

No of Copies Printed : 1000

No of Pages : 2016 + xii

PUBHLISHER:
ABHIJIT PRAKASHANA
A/404, Vinayak Ashish,
MMM Road, Near P & T Colony,
Mulund West, Mumbai – 400 080

PRICE: RS.200/-

ISBN: 978 – 81 – 902767 – 3

PRINTED BY:
PADMASHREE PRINTERS
#123, 1st 'K' Block, Dr. Rajkumar Road
Rajajinagar, Bengaluru - 560010

ವಿಧಿಯ ಚಕ್ರಗಳು

# ಮುನ್ನುಡಿ

**ಮಣಿಯದಿಹ ಮನವೊಂದು**
**ಸಾಧಿಸುವ ಹಠವೊಂದು**
**ನಿಜದ ನೇರಕೆ ನಡೆವನಿಶ್ಚಲತೆಯೊಂದು**
**ಅನ್ಯಾಯಕ್ಕೆಂದೆಂದೂ ಬಾಗದೆಚ್ಚರವೊಂದು**

ಎಂಬ ಕವಿವಾಣಿ ತಕ್ಷಣ ನನ್ನ ನೆನಪಿಗೆಬಂದದು ಹಿರಿಯ ಮಿತ್ರರಾದ ಶ್ರೀ ಎಂ.ಏ.ಎನ್. ಪ್ರಸಾದ್ ಅವರು ಅನುವಾದಿಸಿದ ಎನ್.ಎಸ್. ಹೇಮ ಅವರ 'ವಿಧಿಯ ಚಕ್ರಗಳು' ಆತ್ಮಕತೆಯನ್ನು ಓದಿ ಮುಗಿಸಿದ ಬಳಿಕ. ತನ್ನ ನೋವು ನಲಿವುಗಳನ್ನು ಬದಿಗೊತ್ತಿ ಸಮುದಾಯದ ಕಣ್ಣೀರನೊರಸಲು ತನ್ನನ್ನು ಸುಟ್ಟುಕೊಂಡು ಬೆಳಕು ನೀಡುವ ಬತ್ತಿಯಂತೆ ಬಾಳಿಗೆ ಬೆಳಕಾದ ತ್ಯಾಗಮಯಿ ಮಹಿಳೆಯೊಬ್ಬಳ ಆತ್ಮಕಥನ ಇದಾಗಿದೆ.ಇದೊಂದು ಭಿನ್ನ ಬಗೆಯ ಆತ್ಮಕಥನ. ಮಹಿಳೆಯೊಬ್ಬಳ ಸ್ವಾಭಿಮಾನ, ಮಾನವೀಯ ದೃಷ್ಟಿಕೋನ, ಭೂತದಯೆ, ಆತ್ಮಶ್ರೇಯ, ಓಜಸ್ಸು ಇಲ್ಲಿ ಮಿಂಚಿದೆ. "ಜೀವನದಲ್ಲಿ ಸಾಧನೆ ಮಾಡಬೇಕು ಎಂಬ ಆಸೆಯೇ ಮುಖ್ಯ. ಅದು ವಿಕಲಾಂಗರನ್ನು ತಮ್ಮ ದೈಹಿಕ ಮಿತಿಯನ್ನು ಮೀರಿ ಸಾಧನೆಯ ಮತ್ತು ಸಾರ್ಥಕ ಜೀವನದ ಕಡೆಗೆ ಕರೆದುಕೊಂಡು ಹೋಗುತ್ತದೆ. . . ನನಗೆ ವಿಕಲಾಂಗರಲ್ಲಿ ಹಾಗೂ ಇತರರಲ್ಲಿ ಯಾವುದೇ ವ್ಯತ್ಯಾಸವೂ ಕಾಣುವುದಿಲ್ಲ. . . ವಿಕಲಾಂಗರಿಗೆ ಗೌರವದಿಂದ ಜೀವಿಸಲು ಮತ್ತು ಮರಣ ಹೊಂದಲು ಸ್ಥಳವೇ ಇಲ್ಲ. . . ನನಗೆ ಹೆಂಗಸಾಗಿರುವುದು ಇಷ್ಟ.ನಾನು ಇನ್ನೊಂದು ಜನ್ಮದಲ್ಲಿಯೂ ಹೆಂಗಸಾಗಿ ಹುಟ್ಟಲು ಇಚ್ಛಿಸುತ್ತೇನೆ. . . ನಮ್ಮ ಸಮಾಜದಲ್ಲಿ ಗಂಡಸು ವಿಕಲಾಂಗನಾದರೆ ಹೆಂಡತಿಯು ಪತಿವ್ರತೆಯಾಗಿ ಅವನೊಡನೆಯೇ ಕೊನೆಯವರೆಗೂ ಇದ್ದು ಅವನ ಸೇವೆ ಮಾಡಬೇಕೆಂದು ಅಪೇಕ್ಷಿಸುತ್ತದೆ. ಆದರೆ ಇದೇ ರೀತಿ ಹೆಂಡತಿಯು ವಿಕಲಾಂಗಳಾದರೆ ಗಂಡನು ಅವಳನ್ನು ನೋಡಿಕೊಂಡು ಅವಳ ಸೇವೆ ಮಾಡಬೇಕೆಂದು ಅಪೇಕ್ಷಿಸುವುದಿಲ್ಲ. . . ನಾನು ನನ್ನ ಜೀವನಕ್ಕೆ, ಅದರಲ್ಲಿ ಏನೇ ಸವಾಲುಗಳು ಬಂದರೂ ಕೃತಜ್ಞಳಾಗಿದ್ದೇನೆ" – ಹೀಗೆ ಇಲ್ಲಿನ ಬರವಣಿಗೆಯಲ್ಲಿ ಗಂಭೀರ ಚಿಂತನೆ, ವಿಪುಲವಾದ ಲೋಕಾನುಭವ, ಪಕ್ವಮನಸ್ಸು ಎದ್ದು ಕಾಣುತ್ತದೆ. ಸ್ವತಃ ವಿಕಲಚೇತನರಾಗಿದ್ದೂ ಬಾಳನ್ನು ಗೋಳಿನ ಕಥೆಯೆಂದು ಕೈಚೆಲ್ಲಿ ಮನೆಯ ಮೂಲೆಯಲ್ಲಿ ಕೂಡದೆ ತನ್ನಲ್ಲಿ ವಿಶ್ವಾಸವಿರಿಸಿ ಸಹಸ್ರ ಸಹಸ್ರ ಜನರಿಗೆ ಹೊಸಬಾಳು ನೀಡಲು ನಡೆಸಿದ ಸಂಘರ್ಷ, ಹೋರಾಟ ಈ ಕೃತಿಯಲ್ಲಿ ಮಡುಗಟ್ಟಿದೆ.

"ಬದುಕು ಜಟಕಾ ಬಂಡಿ, ವಿಧಿ ಅದರ ಸಾಹೇಬ" ಎಂಬ ಕವಿವಾಣಿಯನ್ನು ಸುಳ್ಳು ಮಾಡಿ ತೋರಿಸಿದ ದಿಟ್ಟ ಮಹಿಳೆಯ ಅಪೂರ್ವ ಆತ್ಮಕಥನವಿದು. ಪೋಲಿಯೋ ಪೀಡಿತರಾಗಿದ್ದೂ ಅದಕ್ಕೆ ಅಂಜದೆ ಜೀವನ ಪರ್ಯಂತ ಪರರಿಗಾಗಿ ಛಲಬಿಡದೆ ಕೆಲಸ ಮಾಡಿ ಬದುಕನ್ನು ಗೆದ್ದ ವೀರ ಧೀರ ಮಹಿಳೆಯ ಬಾಳ ಪಯಣದ ಕಥೆ, ವ್ಯಥೆ ಇಲ್ಲಿ ಮನೋಜ್ಞವಾಗಿ ದಾಖಲಾಗಿದೆ. ದೈಹಿಕ ನ್ಯೂನತೆ ಹೊಂದಿಯೂ ತಳಮಳಗೊಳ್ಳದೆ ಛಲಬಿಡದೆ ಅಂಗವಿಕಲರಿಗಾಗಿ ಪೋಲಿಯೋ ಪೀಡಿತರಿಗಾಗಿ ಏನೆಲ್ಲ ಮಾಡಲು ಸಾಧ್ಯ ಎಂಬುದನ್ನು ಮಾಡಿ ರಾಷ್ಟ್ರಮಟ್ಟದಲ್ಲಿ ಮಿಂಚಿದವರು ಹೇಮ. ಆರೋಗ್ಯವಂತರು ನಾಚುವಂತೆ ಸಮಾಜಕ್ಕೆ ಅಪೂರ್ವವಾದ ಕೊಡುಗೆಯನ್ನು ನೀಡಿದವರು. ಹೇಮಾ ಬದುಕಿನೊಡನೆ ಹೋರಾಡುತ್ತ ದೊಡ್ಡ ಶಕ್ತಿಯಾಗಿ ಬೆಳೆದ ಬಗೆ ಬಹು ರೋಚಕವಾಗಿದೆ. ಅವರ ತ್ಯಾಗಮಯ ಜೀವನ, ನಿಸ್ಪೃಹ ಕಾರ್ಯವೈಖರಿ, ಬದುಕನ್ನು ಎದುರಿಸಿದ ದಿಟ್ಟತನ, ಅವರ ಅದಮ್ಯ ಜೀವನೋತ್ಸಾಹ, ಸಾಹಸ ಸಾಧನೆಗಳೆಲ್ಲ ಇಲ್ಲಿ ಕಣ್ಣಿಗೆ ಕಟ್ಟುವಂತೆ ದಾಖಲಾಗಿದೆ. ಹೇಮ ಅವರ ಸಾಧನೆಯ ಬದುಕು ಇಂದಿನ ಮುಂದಿನ ಪೀಳಿಗೆಗೆ ಮಾದರಿಯಾಗಿದೆ. ನಾವು ಏನನ್ನಾದರು ಮಾಡಲೇ ಬೇಕು ಎಂಬ ಸಂಕಲ್ಪತೊಟ್ಟರೆ ಅದು ಆಗೇ ಆಗುತ್ತದೆ ಎಂಬ ಸಂದೇಶ ಈ ಆತ್ಮ ಕಥನದಲ್ಲಿ ಮನಂಬುಗುವಂತೆ ದಾಖಲಾಗಿದೆ.

ಹೇಮಾ ಅವರ ಸಾಧನೆಗೆ ಸಾಟಿಯಿಲ್ಲ. ಹತ್ತು ಜೀವಮಾನದಲ್ಲಿ ಮಾಡಬಹುದಾದುದ್ದನ್ನು ಅವರು ಒಂದು ಜೀವಮಾನದಲ್ಲಿ ಮಾಡಿ ತೋರಿಸಿದ್ದಾರೆ. "ಸರಿಯಾದುದ್ದನ್ನು ಸರಿಯಾದ ರೀತಿಯಲ್ಲಿ ಸರಿಯಾದ ಕಾಲಕ್ಕೆ ಮಾಡಿ ಮುಗಿಸುವವರನ್ನೇ ಯಶಸ್ಸು ಹುಡುಕುತ್ತಿರುತ್ತದೆ"ಎಂದಿದ್ದಾನೆ ಸಂತ ಕಬೀರ. ಎಲ್ಲ ಅಡೆತಡೆಗಳನ್ನು ಬದಿಗೊತ್ತಿ ಜಗದಗಲ ಓಡಾಡಿ ವಿಕಲಚೇತನರ ಬಾಳಿಗೆ ಬೆಳಕಾಗಲು ಹೇಮ ಅವರು ಪಟ್ಟ ಪರಿಶ್ರಮ ಓದಿದರೆ ಯಾರೂ ನಿಬ್ಬೆರಗಾಗಬೇಕು. ವಿಕಲಚೇತನರೂ ಯಾರಿಗೂ ಕಡಿಮೆಯಿಲ್ಲ. ಪ್ರತಿಯೊಬ್ಬರಿಗೂ ತಮ್ಮ ಬದುಕನ್ನು ತಮ್ಮದೇ ಆದ ರೀತಿಯಲ್ಲಿ ಬಾಳುವ ಹಕ್ಕಿದೆ. ಅಂಗ ವಿಕಲರಿರಬಹುದು, ಮಹಿಳೆಯರಿರಬಹುದು, ಯಾರೇ ಆಗಲಿ ಕೀಳರಿಮೆಯಿಂದ ಬಳಲಬಾರದೆಂಬ ಆಶಯ ಇಲ್ಲಿ ವ್ಯಕ್ತವಾಗಿದೆ. ಜಗತ್ತಿನಲ್ಲಿ ಪ್ರತಿಯೊಂದು ವಸ್ತುವಿಗೂ ಪ್ರತಿಯೊಂದು ಜೀವಜಂತುವಿಗೂ ಅದರದೇ ಆದ ಅಸ್ತಿತ್ವವಿದೆ, ಅವಶ್ಯಕತೆಯಿದೆ. ಹೀಗಿರುವಾಗ ಅಂಗ ಊನವಾದವರು ಸಮಾಜಕ್ಕೆ ಹೊರೆಯಾಗಬಾರದು. ಆತ್ಮವಿಶ್ವಾಸ, ಕಾರ್ಯಕ್ಷಮತೆ ಮೈಗೂಡಿಸಿಕೊಂಡರೆ ಯಾರೂ ಸಾಧಕರಾಗಲು ಸಾಧ್ಯ ಎಂಬುದನ್ನು ಲೇಖಕಿ ಈ ಕೃತಿಯಲ್ಲಿ ತೋರಿಸಿಕೊಟ್ಟಿದ್ದಾರೆ. "ನಡೆದಷ್ಟೂ ದಾರಿ ಇದೆ. ಪಡೆದಷ್ಟೂ ಭಾಗ್ಯವಿದೆ ಎಂಬುದೇ ನಮಗೆ ಜಗತ್ತು ಕೊಡುವ ಸಂದೇಶ" ಎಂಬ ವಿ.ಕೃ.ಗೋಕಾಕರ ಮಾತನ್ನು ಈ ಕೃತಿ ನೆನಪಿಸಿ ಕೊಡುತ್ತದೆ.

ವಿಕಲಚೇತನ ಮಹಿಳೆಯೊಬ್ಬಳ ಬದುಕು–ಬವಣೆ–ಭರವಸೆ, ಹೋರಾಟ, ಸಾಧನೆಗಳೆಲ್ಲ ಇಲ್ಲಿ ಬಹು ಸ್ವಾರಸ್ಯವಾಗಿ ದಾಖಲಾಗಿದೆ. ಅಂಗವಿಕಲರಾಗಿ ಸಮುದಾಯದಲ್ಲಿ ಸುತ್ತಲಿನ ಜಗತ್ತಿನಲ್ಲಿ ತಾವು ಪಟ್ಟ ನೋವು, ಹಿಂಸೆ, ಪಾಡನ್ನು ಇವತ್ತಿನ ತಲೆಮಾರಿಗೆ ಪರಿಚಯಿಸುವ ತವಕ ಈ ಬರವಣಿಗೆಯಲ್ಲಿದೆ. ವಿಶಿಷ್ಟ ರೀತಿಯ ಸ್ವಾಭಿಮಾನ, ಕೆಚ್ಚು ಹೇಮಾ ಅವರಲ್ಲಿತ್ತು. ಅವರ ಜೀವನಗಾಥೆಯನ್ನು ಓದಿದರೆ ಎಂಥವರೂ ಬೆರಗಾಗಬೇಕು. ಇದು ಹೇಮ ಅವರ ಆತ್ಮಕಥನವೋ ಅಥವಾ ಅವರು ಬಾಳಿನುದ್ದಕ್ಕೂ ನೊಂದವರ ಬೆಂದವರ ವಿಕಲಚೇತನರ ಏಳಿಗೆಗೆ ನಡೆಸಿದ ಹೋರಾಟವೋ, ಅಥವಾ ಅನೇಕ ಸಂಸ್ಥೆಗಳನ್ನು ಹುಟ್ಟುಹಾಕಿ ಅಂಗವಿಕಲರೇನು ಕಮ್ಮಿಯಿಲ್ಲ ಎಂಬುದನ್ನು ಸಾಬೀತು ಪಡಿಸಿದ ಅಪೂರ್ವಸಾಧನೆಯ ದುಸ್ತರ ಬಾಳಿನ ವರ್ಣನೆಯೋ, ಹೀಗೆ ಎಲ್ಲವೂ ಇಲ್ಲಿ ಹಾಸು ಹೊಕ್ಕಾಗಿರುವುದು ವಿಶೇಷ. ಅಂಗವಿಕಲರು ನಿಷ್ಪ್ರಯೋಜಕರಲ್ಲ. ಪ್ರಪಂಚದಲ್ಲಿ ಯಾರೂ ಪರಿಪೂರ್ಣರಲ್ಲ. ಪ್ರತಿಯೊಬ್ಬ ವ್ಯಕ್ತಿಯಲ್ಲೂ ಪ್ರತಿಭೆ, ಕ್ರಿಯಾಶೀಲತೆ ಇದ್ದೇ, ಇರುತ್ತದೆ ಎಂಬುದನ್ನು ಲೇಖಕಿ ಇಲ್ಲಿ ತೋರಿಸಿಕೊಟ್ಟಿದ್ದಾರೆ. ಶಾಲೆಯ ಮೆಟ್ಟಿಲು ಹತ್ತದ, ರೂಪ, ಸಂಪ್ರದಾಯಕ ಶಿಕ್ಷಣವಿಲ್ಲದ ಮಹಿಳೆ ಲೀಲಾಜಾಲವಾಗಿ ವಿಶ್ವವ್ಯಾಪಿಯಾಗಿ ಓಡಾಡಿ ಅನೇಕ ಬಗೆಯ ಸುಧಾರಣೆಗೆ ಕಾರಣರಾಗಲು ಸಾಧ್ಯ ಎಂಬುದನ್ನು ಈ ಕಥನ ನಮಗೆ ತೋರಿಸಿಕೊಡುತ್ತದೆ. ಬಾಲ್ಯದಲ್ಲೇ ಪೋಲಿಯೋ ಪೀಡಿತರಾಗಿಯೂ ನನ್ನಿಂದ ಏನು ಮಾಡಲು ಸಾಧ್ಯ ಎಂದು ನಿರಾಶೆ ಹೊಂದದೆ ಇತರರಿಗೆ ಭಾರವಾಗದಂತೆ ಸಮುದಾಯದ ಭಾರವನ್ನು ಇಳಿಸಲು ಯತ್ನಿಸಿದ ಕಥನವಿಲ್ಲಿದೆ. ಕುರುಡಿಯೂ ಮೂಗಿಯೂ ಆಗಿದ್ದ ಹೆಲನ್ ಕೆಲ್ಲರ್ ಮಾಡಿದ ಸಮಾಜ ಸೇವೆ ಜನಜನಿತವಾಗಿದೆ. ಅದೇ ಮಾದರಿಯಲ್ಲಿ ಹೇಮಾ ಅವರು ವೈಯಕ್ತಿಕ ಊನಗಳ ನಡುವೆಯೂ ಕಳೆದ ಶತಮಾನದ ಉತ್ತರಾರ್ಧದಲ್ಲಿ ಅಂಗವಿಕಲರ ಅಗತ್ಯ ಸಾಧನೆಗಳ ತಯಾರಿ, ಶಾಲೆಗಳ ನಿರ್ಮಾಣ, ಪುನರ್ವಸತಿ, ಪರಿಹಾರ, ಸಂಶೋಧನೆ, ಯೋಜನೆಗಳ ಮೂಲಕ ಗೈದ ಮಹಾ ಸಾಧನೆಗೆ ಯಾರೂ ಬೆರಗಾಗ ಬೇಕು. ತನ್ನ ಬದುಕು ನರಕವಾಗಿದ್ದರೂ ಸುತ್ತಮುತ್ತಲಿನ ಬದುಕನ್ನು ಸ್ವರ್ಗವಾಗಿಸಲು ಹೆಣಗಿದ ಹೆಣ್ಣೊಬ್ಬಳ ಸಾಹಸ ಕಥನ ಯಾರನ್ನೂ ಬಡಿದೆಬ್ಬಿಸುವಂತೆ ಮೂಡಿಬಂದಿದೆ. ನಾವು ಮರೆತ ಕರ್ನಾಟಕದ ದಿಟ್ಟ ಸಾಹಸಿ ಮಹಿಳೆಯೊಬ್ಬರ ಆತ್ಮಕಥನವನ್ನು ಸೊಗಸಾಗಿ ಎಂ.ಎ.ಎನ್.ಪ್ರಸಾದ್ ಅವರು ಕನ್ನಡಕ್ಕೆ ತಂದಿರುವುದು ಶ್ಲಾಘನೀಯ ಸಂಗತಿ. ಕೈಕಾಲು ಸರಿ ಇರುವವರೂ ಮಾಡಲಾಗದ ಸಾಹಸ ಸಾಧನೆಗಳಿಂದ ಮಿಂಚಿ ಮಾಯವಾದ ಸಾಧಕಿ ಹೇಮಾ ಅವರನ್ನು ಈ ಮೂಲಕ ಪ್ರಸಾದ್ ಅವರು ಕನ್ನಡ ಸಹೃದಯರಿಗೆ ಪರಿಚಯಿಸಿರುವುದು ಯೋಗ್ಯ ಉಪಕ್ರಮ. ಕನ್ನಡನಾಡಿನ ಮಹಿಳೆಯೊಬ್ಬಳ ಪ್ರತಿಭೆ, ಪರಿಶ್ರಮ, ಧೈರ್ಯ, ಕಾರ್ಯದಕ್ಷತೆ ಈ ಕೃತಿಯ ಮೂಲಕ ಲೋಕಮುಖಕ್ಕೆ ತಿಳಿಯುವಂತಾಗಿದೆ.

ಏಳಿಯ ಚಕ್ರಗಳು

ಈ ಕೃತಿಯನ್ನು ಅನುವಾದಿಸಿರುವ ಎಂ.ಪಿ.ಎನ್. ಪ್ರಸಾದ್ ಅವರು ವಿಜ್ಞಾನದ ವಿದ್ಯಾರ್ಥಿ. ಅವರು ಬಹುಭಾಷಿಕ ಸಂವೇದನೆಯನ್ನು ಮೈಗೂಡಿಸಿಕೊಂಡ ಲೇಖಕರು. ಮುಂಬೈಯಲ್ಲಿ ಕನ್ನಡವನ್ನು ಕಟ್ಟುವ ಕೈಂಕರ್ಯದಲ್ಲಿ ಅವರು ತಮ್ಮನ್ನು ಸಕ್ರಿಯವಾಗಿ ತೊಡಗಿಸಿಕೊಂಡವರು. ಪ್ರಸಾದ್ ಅವರು ರಚಿಸಿರುವ, ಅನುವಾದಿಸಿರುವ ಕೃತಿಗಳು ಸಾಕಷ್ಟು ಜನಪ್ರಿಯವಾಗಿವೆ. ಇದೀಗ ಎನ್.ಎಸ್.ಹೇಮಾ ಅವರ ಆತ್ಮಕಥನವನ್ನೂ ಕನ್ನಡಕ್ಕೆ ಸೊಗಸಾಗಿ ಅನುವಾದಿಸಿದ್ದಾರೆ. ಈ ಕೃತಿಗಾಗಿ ಪ್ರಸಾದ್ ಅವರನ್ನು ಹಾರ್ದಿಕವಾಗಿ ಅಭಿನಂದಿಸುತ್ತೇನೆ.

**ಡಾ. ಜಿ.ಎನ್.ಉಪಾಧ್ಯ**

ಮುಖ್ಯಸ್ಥರು, ಕನ್ನಡ ವಿಭಾಗ

೧೦.೧.೨೦೧೯

ಮುಂಬೈ ವಿಶ್ವವಿದ್ಯಾಲಯ, ಮುಂಬಯಿ-೪೦೦೦೯೮

# ಅನುವಾದಕನ ಮಾತು

ಸುಮಾರು ಮೂರು ವರ್ಷಗಳ ಹಿಂದಿನ ಮಾತು. ನಮ್ಮ ಕುಟುಂಬದ ಒಂದು function ನಲ್ಲಿ ನಾನು ಶ್ರೀ ವರದರಾಜನ್ ಅವರನ್ನು ಸಂಧಿಸಿದೆ. ಆಗ ಅವರು ನನಗೆ ಹೇಮಾ ಅವರು ಬರೆದಿರುವ Wheels of Destiny ಪುಸ್ತಕದ ಬಗ್ಗೆ ಹೇಳಿ, ಅದು ಹೆಚ್ಚು ಹೆಚ್ಚು ಜನರಿಗೆ ತಲುಪಬೇಕು, ಆದ್ದರಿಂದ ಅದನ್ನು ಕನ್ನಡಕ್ಕೆ ಅನುವಾದ ಮಾಡಬೇಕು ಎಂದು ಹೇಳಿ, ನನ್ನನ್ನು ಆ ಪುಸ್ತಕವನ್ನು ಕನ್ನಡಕ್ಕೆ ಅನುವಾದಿಸುವಂತೆ ಹೇಳಿದರು. ನಾನು ಆಗಲಿ ಮಾಡುತ್ತೇನೆ, ಆದರೆ ನಾನು ಆ ಪುಸ್ತಕವನ್ನು ಓದಿಲ್ಲಾ ಎಂದೆ. ಅವರು ಆ ಪುಸ್ತಕವನ್ನು ನನಗೆ ಕಳುಹಿಸಿ ಕೊಡುವುದಾಗಿ ಹೇಳಿದರು. ಅಂತೆಯೇ ಕೆಲವು ದಿನಗಳಲ್ಲಿ ಆ ಪುಸ್ತಕವು ನನ್ನನ್ನು ತಲಪಿತು.

ಇದಾದ ಕೆಲವು ದಿನಗಳಲ್ಲಿ ನಾವು ಅಮೇರಿಕಕ್ಕೆ ಹೋಗುವುದಿತ್ತು. ನಾನು ಜೊತೆಯಲ್ಲಿ ಈ ಪುಸ್ತಕವನ್ನು ಕೊಂಡು ಹೋದೆ. ಅಲ್ಲಿ ಇದರ ಅನುವಾದ ಪ್ರಾರಂಭವಾಯಿತು. ಅಮೇರಿಕದಿಂದ ಹಿಂದಿರುಗಿ ಬರುವುದರಲ್ಲಿ ಪುಸ್ತಕದ ಸುಮಾರು ಅರ್ಧದಷ್ಟು ಅನುವಾದವಾಗಿತ್ತು. ನಂತರ ನನ್ನ ಕಂಪ್ಯೂಟರ್‌ನಲ್ಲಿ ಕನ್ನಡದ software ಕೆಟ್ಟು ಹೋಗಿ ಸುಮಾರು ಸಮಯ ಅನುವಾದದ ಕೆಲಸವು ಸ್ಥಗಿತವಾಗಿತ್ತು. ಹೊಸದೊಂದು ಕಂಪ್ಯೂಟರ್ ಬಂತು, ಅದರೊಂದಿಗೆ ಹೊಸದೊಂದು ಕನ್ನಡದ software ಕೂಡ ಬಂತು. ಅರ್ಧಕ್ಕೆ ನಿಂತಿದ್ದ ಅನುವಾದದ ಕೆಲಸವು ಮತ್ತೆ ಪ್ರಾರಂಭವಾಯಿತು. ಹೀಗಾಗಿ, ಈ ಕೃತಿಯು ಹೊರಬರಲು ಸಾಕಷ್ಟು ಸಮಯ ಹಿಡಿದಿದೆ.

ಈ ಕೃತಿಯನ್ನು ಮುಂಬಯಿಯ 'ಅಭಿಜಿತ್ ಪ್ರಕಾಶನ' ಹೊರತಂದಿದೆ. ಅವರಿಗೆ ನನ್ನ ಕೃತಜ್ಞತೆಗಳು.

ನನ್ನ ಮಿತ್ರರಾದ ಡಾ. ಜಿ.ಎನ್.ಉಪಾಧ್ಯ ಅವರು ಇದಕ್ಕೆ ಮುನ್ನುಡಿಯನ್ನು ಬರೆದುಕೊಟ್ಟಿದ್ದಾರೆ. ಅವರಿಗೆ ನನ್ನ ಕೃತಜ್ಞತೆಗಳು. ಪುಸ್ತಕವನ್ನು ಸುಂದರವಾಗಿ ಮುದ್ರಿಸಿರುವ ಪದ್ಮಶ್ರೀ ಪ್ರಿಂಟರ್ಸ್, ಬೆಂಗಳೂರು ಇವರಿಗೂ ನನ್ನ ಕೃತಜ್ಞತೆಗಳು.

ಈ ಪುಸ್ತಕವನ್ನು ಮುದ್ರಿಸುವ ಖರ್ಚನ್ನು ಶ್ರೀಮತಿ ಆಂಡಾಳ್ ಮತ್ತು ಶ್ರೀವರದರಾಜನ್ ದಂಪತಿಗಳು ಪ್ರಾಯೋಜಿಸಿದ್ದಾರೆ ಮತ್ತು ಪುಸ್ತಕ ಮಾರಾಟದಿಂದ ಬರುವ ಹಣವನ್ನು A.P.Dಗೆ ದೇಣಿಗೆಯಾಗಿ ಕೊಡುತ್ತಿದ್ದಾರೆ. ಅವರಿಗೆ ನನ್ನ ಅನಂತ ಧನ್ಯವಾದಗಳು.

ಹೇಮಾ ಅವರು ಬರೆದಿರುವ Wheels of Destinyಯಲ್ಲಿ ಅನೇಕ ಉಪಯುಕ್ತ ಮಾಹಿತಿ ಇರುವುದಲ್ಲದೆ, ಅದನ್ನು ಅವರು ಬಹಳ ಸರಳವಾಗಿ ಮತ್ತು ಸುಂದರವಾಗಿ ತಿಳಿಸಿದ್ದಾರೆ. ಈ ಅನುವಾದವು ಕನ್ನಡ ಓದುಗರಲ್ಲಿ ಆ ಉಪಯುಕ್ತ ಮಾಹಿತಿಯನ್ನು ತಲಪಿಸುವದರಲ್ಲಿ ನೆರವಾಗುವುದೆಂದು ಆಶಿಸುತ್ತೇನೆ.

– ಎಂ.ಎ.ಎನ್. ಪ್ರಸಾದ್

We are grateful to

**Smt. Andal and Shri. C.N.Varadarajan,**

who have sponsored the entire cost

of printing this book.



The entire sales proceed of this book will be donated to Association for Physically Disabled (APD), which is doing yeoman service to the disabled. Late Smt. N.S.Hema founded this institution when she was quite young with a view of spreading awareness about the problems faced by disabled, and nurtured it well. Over the years it has grown into a huge organization serving the various needs of the disabled. APD is celebrating its 50th year this year.

By donating the sales proceed of this book to APD, we are doing our small bit towards promotion of awareness and understanding of the needs of the disabled, a cause for which late Smt. Hema worked throughout her life.

# ಪರಿವಿಡಿ


| ಕ್ರಮಾಂಕ | ವಿಷಯ | ಪುಟ ಸಂಖ್ಯೆ |
|---|---|---|
| 1. | ಹಾಲು ನದಿ | 1 |
| 2. | ನೀರಿನ ಟ್ಯಾಂಕ್ | 10 |
| 3. | ಚಕ್ರಗಳು | 19 |
| 4. | ಶುರು ಶುರುವಿನಲ್ಲಿ | 29 |
| 5. | ದಿವಾನ್ | 46 |
| 6. | ಪ್ರೇಮದಲ್ಲಿ | 57 |
| 7. | ಮಹಿಳೆ ಮತ್ತು ವಿಕಲಾಂಗತೆ | 71 |
| 8. | ನೋವು ಮತ್ತು perseverence | 90 |
| 9. | ಎ.ಪಿ.ಡಿ.ಯೊಡನೆ ಬೆಳೆಯುತ್ತಾ ... | 113 |
| 10. | ನಿರ್ಣಯಗಳು ಮತ್ತು ಬಹುಮಾನಗಳು | 132 |
| 11. | ಹೊಸ ದಿಶೆಗಳು | 146 |
| 12. | ಹೊಸ ದಿಗಂತಗಳು | 160 |
| 13. | ಭರವಸೆಯ ಉದ್ಯಾನ | 170 |
| 14. | ಒಳಗಿನ ಪಯಣ | 183 |
| 15. | ಜೀವನದ ಇಂಧನ : ಕುಟುಂಬ ಮತ್ತು ಗೆಳೆಯರು | 193 |

# ಹಾಳು ನದಿ

ತಣ್ಣಗೆ, ಒದ್ದೆಯಾದ, ತೋಳಗಳೂ, ಕರಿ ನೆರಳುಗಳೂ, ವಿಷತುಂಬಿದ ನಾಯಿಕೊಡೆಗಳೂ ಇದ್ದ ಈ ಕಾಡೇ ನಮ್ಮ ಆಟದ ಬಯಲಾಗಿತ್ತು. ಆಗ, ಅಂದರೆ ನಾವು ಊಟಿಗೆ ಹೋದಾಗ, ನನಗೆ ಮೂರು ವರ್ಷ ವಯಸ್ಸು, ನನ್ನ ಅಕ್ಕ ಪ್ರಭಳಿಗೆ ಐದು ಮತ್ತು ನನ್ನ ತಂಗಿ ಕುಮುದಿನಿ ಕೆಲವು ತಿಂಗಳ ಮಗು.

ಊಟಿ, ಉದಕಮಂಡಲ, ಒಂದು ಹಸಿರು ಸ್ವರ್ಗ. ಅಲ್ಲಿ ಯಾವಾಗಲೂ ಮಳೆ. ನಮ್ಮ ಅಡಿಗೆಯ ಮಮ್ಮ್ಯ ಪ್ರತಿದಿನ ಬೆಳಿಗ್ಗೆ ಬಿಸಿಬಿಸಿಯಾದ ಇಡ್ಲಿ, ಚಟ್ನಿ ಮತ್ತು ಕಾಫಿಯೊಡನೆ ನಮ್ಮ ದಿನವನ್ನು ಪ್ರಾರಂಭಿಸುತ್ತಿದ್ದಳು. ನನಗೆ ಆ ದಿನಗಳ ನೆನೆಪು ಇಂದಿಗೂ ಹಸಿರಾಗಿದೆ. ನಾನು ನನ್ನ ಇಷ್ಟಬಂದಂತೆ ಸ್ವೇಚ್ಛೆಯಾಗಿ, ರೈನ್ ಕೋಟಿನಲ್ಲಿ ಎಲ್ಲೆಲ್ಲೂ ತಿರುಗಾಡುತ್ತಿದ್ದೆ.

ನಮ್ಮ ತಾತ – ನುಗ್ಗೇಹಳ್ಳಿ ನರಸಿಂಹ ಐಯ್ಯಂಗಾರ್ – ನನಗೆ ಕರ್ನಾಟಕದ ನದಿಯಾದ ಹೇಮಾವತಿಯ ಹೆಸರನ್ನು ಇಟ್ಟಿದ್ದರು. ಅವರು ಹೆಸರಾಂತ ಎಂಜಿನಿಯರ್ ಆದ ಸರ್ ಎಂ. ವಿಶ್ವೇಶ್ವರಯ್ಯ ಅವರ ವಿದ್ಯಾರ್ಥಿ. ಅವರು ಮುಂಬಯಿಯಲ್ಲಿ ಕೆಲಸ ಮಾಡುತ್ತಿದ್ದಾಗ ಅವರನ್ನು ವಿಶ್ವೇಶ್ವರಯ್ಯನವರು ಮೈಸೂರು ರಾಜ್ಯಕ್ಕೆ ಕರೆದ ಮೇರೆಗೆ ಅವರು ಇಲ್ಲಿಗೆ ಬಂದು, ಇಲ್ಲಿ ಅನೇಕ ಇಲಾಖೆಗಳಲ್ಲಿ ಕೆಲಸ ಮಾಡಿ ಕೊನೆಗೆ ಇಲ್ಲಿನ ಮುಖ್ಯ ಎಂಜಿನಿಯರ್ ಆದರು. ನಾನು ಹುಟ್ಟಿದಾಗ ಅವರು ಹೇಮಾವತಿ ನದಿಯ ಮೇಲೆ ಒಂದು ಅಣೆಕಟ್ಟನ್ನು ಕಟ್ಟಿಸುತ್ತಿದ್ದರು. ಹೇಮಾವತಿ ನದಿಯು ಪಶ್ಚಿಮ ಘಟ್ಟದಲ್ಲಿ ಹುಟ್ಟಿ, ಕುಣಿಯುತ್ತಾ ನಲಿಯುತ್ತಾ ಬಂದು ಕಾವೇರಿಯೊಡನೆ ಸೇರುತ್ತದೆ. ನನಗೆ ಇದರದೇ ಸ್ವಭಾವ ಬಂದಿರಬೇಕು. ನನ್ನ ತಂಗಿ ಹುಟ್ಟಿದಾಗ ನಮ್ಮ ತಾತ ಅವಳಿಗೆ ಆಂಧ್ರದಲ್ಲಿ ಹರಿಯುವ ನದಿ ಕುಮುದಿನಿಯ ಹೆಸರಿಟ್ಟರು. ಅವರು ಆ ಕಾಲಕ್ಕೆ ಬಹಳ ವಿಶಾಲವಾದ ದೃಷ್ಟಿಯುಳ್ಳವರೂ ಮತ್ತು ವ್ಯವಹಾರದಲ್ಲಿ ಇಂಗ್ಲಿಷ್ ನವರಂತೆಯೂ ಇದ್ದರು ಎಂದು ನಮ್ಮ ತಂದೆ ತಾಯಿ ಯಾವಾಗಲೂ ಹೇಳುತ್ತಿದ್ದರು. ಅವರು ಕೆಲಸದಿಂದ ನಿವೃತ್ತರಾದ ನಂತರ ಆರು ತಿಂಗಳು ಪ್ರಪಂಚವನ್ನೆಲ್ಲಾ ಸುತ್ತಿಬಂದರು. ಅಲ್ಲಿನ ಅನೇಕ ಸೋಜಿಗಮಯ ವಸ್ತುಗಳು ಅವರಿಗೆ ಹಿಡಿಸಿದವು. ಆದರೆ ಅವರಿಗೆ ತಮ್ಮ ನುಗ್ಗೇಹಳ್ಳಿಯಲ್ಲಿರುವ ತೋಟ ಮತ್ತು ಸಕಲೇಶಪುರದಲ್ಲಿರುವ ಕಾಫಿ ತೋಟವು ಬಹಳ ಪ್ರಿಯವಾಗಿದ್ದವು. ನಮ್ಮ ಅಜ್ಜಿ ಕಮಲಮ್ಮ ಚಿಕ್ಕಮಗಳೂರಿನ ಕಾಫಿ ತೋಟದವರ ಮನೆತನಕ್ಕೆ ಸೇರಿದವರು. ಅವರು

ಮತ್ತು ನಮ್ಮ ತಾತ ಬಹಳ ಅಚ್ಚುಮೆಚ್ಚಿನ, ಪ್ರೀತಿಯ ಜೋಡಿ. ನಮ್ಮ ತಾತ ತಮ್ಮ ಅರವತ್ತನೇ ವಯಸ್ಸಿನಲ್ಲಿ ದೈವಾಧೀನರಾದಾಗ ನಮ್ಮ ಅಜ್ಜಿಯು ಬಹಳ ಕಾಲದ ವರೆಗೆ ಶೋಕದಲ್ಲಿ ಮುಳುಗಿದ್ದರು.

ಅವರ ಇಬ್ಬರು ಹೆಣ್ಣುಮಕ್ಕಳು, ವೈದೇಹಿ – ಅವರನ್ನು ನಾವು ದೀ ಎಂದು ಕರೆಯುತ್ತಿದ್ದೆವು – ಮತ್ತು ಶಾರದ, ಇವರನ್ನು ಯಾವ ಶಾಲೆಗೂ ಕಳುಹಿಸಲಿಲ್ಲ. ನಮ್ಮ ತಾತ ಅವರು ಕೆಲಸದ ನಿಮಿತ್ತ ಬಹಳ ಊರುಗಳಲ್ಲಿ ಇದ್ದರು. ಆದ್ದರಿಂದ, ಇವರಿಗೆ ಅವರೇ ಪಾಠ ಹೇಳಿಕೊಡುತ್ತಿದ್ದರು.

ನಮ್ಮ ತಂದೆ, ನುಗ್ಗೇಹಳ್ಳಿ ಸೀತಾರಾಮ ಐಯ್ಯಂಗಾರ್, ಅವರ ಸಹೋದರರಂತೆ ಬೆಂಗಳೂರಿನಲ್ಲಿ ಓದಿ ನಂತರ ಹೆಚ್ಚಿನ ವ್ಯಾಸಂಗಕ್ಕೆ ಇಂಗ್ಲೆಂಡಿಗೆ ಹೋದರು. ಅವರ ಸಹೋದರರು ಕೇಂಬ್ರಿಜ್‌ನಲ್ಲಿ ಓದಿದರೆ ಇವರು ಎಡಿನಬರ್ಗ್‌ನಲ್ಲಿ ಓದಿದರು. ನಮ್ಮ ತಾತ ಅವರ ಮಕ್ಕಳಿಗೆ ಅವರವರ ವೃತ್ತಿಗಳನ್ನು ಆಯ್ಕೆ ಮಾಡಿದರು. ನಮ್ಮ ತಂದೆಯ ಒಡಹುಟ್ಟಿದವರಲ್ಲಿ ಒಬ್ಬರು ಎಂಜಿನಿಯರ್ ಮತ್ತು ಒಬ್ಬರು ಬ್ಯಾರಿಸ್ಟರ್ ಆದರು. ನಮ್ಮ ತಂದೆ ಅಗ್ರಿಕಲ್ಚರ್ ಬಗ್ಗೆ ಓದಿದರು, ಆದರೆ ಅವರ ಕಾಫಿ ತೋಟವನ್ನು ನೋಡಿಕೊಳ್ಳಲು ತೊಡಗುವುದಕ್ಕೆ ಮುಂಚೆ ಸ್ವಲ್ಪದಿನ ಕೆಲಸ ಮಾಡಿ ಸಂಪಾದಿಸಬೇಕು ಎಂದು ಮದರಾಸಿನಲ್ಲಿ ಇಂಪೀರಿಯಲ್ ಕೆಮಿಕಲ್ ಇಂಡಸ್ಟ್ರೀಸ್‌ಗೆ ಸೇರಿಕೊಂಡರು ಮತ್ತು ಅಲ್ಲಿ ೩೫ ವರ್ಷ ಕೆಲಸ ಮಾಡಿದರು. ೧೯೪೨ರಲ್ಲಿ, ೨ನೆಯ ಮಹಾಯುದ್ಧವಾಗುತ್ತಿದ್ದಾಗ ಸಮುದ್ರ ತೀರದಲ್ಲಿರುವ ಮದರಾಸಿನ ಮೇಲೆ ಬಾಂಬ್ ಬೀಳಬಹುದೆಂಬ ಹೆದರಿಕೆಯಿಂದ ಅವರ ಸಂಸ್ಥೆಯ ಕಾರ್ಯ ಕಲಾಪಗಳು ಊಟಿಯಿಂದ ನಡೆಯುತ್ತಿದ್ದವು. ಆದ್ದರಿಂದ ನಾವೂ ಊಟಿಗೆ ಹೋದೆವು.

ಪ್ರಭ ಮತ್ತು ನಾನು ಆ ಹಸಿರು ಮಲೆನಾಡಿನಲ್ಲಿಬೆಳೆದ ದಿನಗಳನ್ನು ಸಂತೋಷದಿಂದ ಕಳೆದೆವು. ನಮ್ಮ ಹುಡುಗಾಟಗಳು ಮತ್ತು ಚೇಷ್ಟೆಗಳು, ಮಮತೆ ಮತ್ತು ಪ್ರೀತಿಯಿಂದ ತುಂಬಿದ ನಮ್ಮ ದೊಡ್ಡ ಕುಟುಂಬದ ಆಸರೆಯಲ್ಲಿ ಯಾವ ತಡೆಯೂ ಇಲ್ಲದೆ ನಡೆಯುತ್ತಿದ್ದವು. ಮಮ್ಮೈ ಅಡಿಗೆಯ ಮನೆಯಲ್ಲಿ ಒಲೆಯ ಹತ್ತಿರ ಒಂದು ಡ್ರಮ್ಮಿನಮೇಲೆ ಕುಳಿತುಕೊಳ್ಳುತ್ತಿದ್ದಳು. ಅದು ಇಡೀ ಮನೆಯಲ್ಲೇ ಅತಿ ಬೆಚ್ಚಗಿದ್ದ ಜಾಗ. ನಾನು ಮತ್ತು ಪ್ರಭ ಅವಳನ್ನು ಅಲ್ಲಿಂದ ಎಬ್ಬಿಸಿ ಆ ಡ್ರಮ್ಮಿನ ಮೇಲೆ ಕೂರಲು ಏನೇನೋ ಉಪಾಯ ಮಾಡುತ್ತಿದ್ದೆವು. ಒಮ್ಮೆ ಡ್ರಮ್ಮು ನಮಗೆ ಸಿಕ್ಕಿದರೆ ಮಮ್ಮೈ ಎಷ್ಟು ಬೇಡಿಕೊಂಡರೂ, ಎಂತಹ ಉಪಾಯ ಹೂಡಿದರೂ

ನಾವು ಅದನ್ನು ಬಿಡುತ್ತಿರಲಿಲ್ಲ. ಪಾಪ ಮಮ್ಮ್ಮೌ ನಮ್ಮ ಚೇಷ್ಟೆಗಳನ್ನೆಲ್ಲಾ ತಾಳ್ಮೆಯಿಂದ ಸಹಿಸಿಕೊಳ್ಳುತ್ತಿದ್ದಳು.

ನಾವು ಸ್ವೇಚ್ಚೆಯಾಗಿ ತಿರುಗಾಡಿ ನಮ್ಮ ಮನೆಯ ಬೇಲಿಯಪಕ್ಕದಲ್ಲಿಬೆಳೆಯುತ್ತಿದ್ದ ಬಟಾಣಿಯನ್ನು ತಿನ್ನುತ್ತಿದ್ದೆವು. ಘಂಟೆಗಟ್ಟಲೆ ಗುಬ್ಬಚ್ಚಿಗಳು ಗೂಡು ಕಟ್ಟುವುದನ್ನು ನಮ್ಮ ವರಾಂಡಾದಿಂದ ನೋಡುತ್ತಾ ಕುಳಿತುಕೊಳ್ಳುತಿದ್ದೆವು. ಕೆಲವು ಸಲ ಗುಬ್ಬಚ್ಚಿಯ ಪುಟ್ಟ ಮರಿಗಳು ಗೂಡಿನಿಂದ ನೆಲದಮೇಲೆ ಬಿದ್ದು ಸತ್ತು ಹೋಗುತ್ತಿದ್ದವು. ಆ ರೀತಿ ಆದಾಗಲೆಲ್ಲಾನಮಗೆ ಬಹಳ ದುಃಖವಾಗುತ್ತಿತ್ತು. ನಾವು ಅವನ್ನು ನಮ್ಮ ತೋಟದಕೊನೆಯಲ್ಲಿ ಹೂತು ಆ ಜಾಗದಲ್ಲಿ ಪರಕೆ ಕಡ್ಡಿಯಿಂದ ಶಿಲಬೆಯನ್ನು ಮಾಡಿ ನೆಡುತ್ತಿದ್ದೆವು. ಸಂಜೆಯಹೊತ್ತು ಆ ಗುಬ್ಬಚ್ಚಿಯನ್ನು ಹೂತ ಸ್ಥಳದ ಮುಂದೆ ಕುಳಿತು ನಿಶಬ್ದವಾಗಿ ಅವುಗಳಿಗಾಗಿ ಪ್ರಾರ್ಥಿಸುತ್ತಿದ್ದೆವು.

ನಾನು ಆಗಲೂ ಬೇಗ ಏಳುತ್ತಿರಲಿಲ್ಲ. ನಮ್ಮ ಅಮ್ಮ ಕೈಪಳಿಗೆ ನಮ್ಮೆಲ್ಲರನ್ನೂ ನೋಡಿಕೊಳ್ಳುವುದೇ ಸಾಕಾಗಿತ್ತು. ಆದ್ದರಿಂದ ಅವರು ನನ್ನನ್ನು ನನ್ನ ಪಾಡಿಗೆ ಬಿಟ್ಟು ಬಿಡುತ್ತಿದ್ದರು. ನೀರಾದ ಕಾಫಿ ಕುಡಿದು ರೈನ್‌ಕೋಟ್ ಹಾಕಿಕ್ಕೊಂಡು ಪ್ರಭಳೊಂದಿಗೆ ನಾನೂ ಸ್ಕೂಲಿಗೆ ಓಡುತ್ತಿದ್ದೆ. ದಾರಿಯಲ್ಲಿ ಸಿಗುವ ಪುಟ್ಟ ಹಣ್ಣುಗಳನ್ನು ಆರಿಸಿಕ್ಕೊಂಡು ತಿನ್ನುತ್ತಿದ್ದೆವು.

ಆಗಿನ ಕಾಲದಲ್ಲಿ ಬಾಡಿಗೆಗೆ ಮನೆಗಳು ಸಿಗುವುದು ತುಂಬ ಕಷ್ಟವಾಗಿತ್ತು. ಮನೆಗಳನ್ನು ಹೆಚ್ಚು ಜನ ತಮ್ಮ ವಾಸಕ್ಕಾಗಿ ಕಟ್ಟಿಕೊಳ್ಳುತಿದ್ದರು ಮತ್ತು ಊರಿನಿಂದ ಹೊರಗೆ ಹೋಗುವಾಗ ಕೆಲವು ದಿನಗಳಿಗೆ ಮನೆಯನ್ನು ಬಾಡಿಗೆಗೆ ಕೊಡುತ್ತಿದ್ದರು. ಆದ್ದರಿಂದ ನಾವು ಪ್ರತಿ ಆರು ತಿಂಗಳಿಗೆ ಹೊಸ ಮನೆಗೆ ಹೋಗುತ್ತಿದ್ದೆವು. ಆ ರೀತಿಯ ಒಂದು ಮನೆಯಿಂದ ಸ್ಕೂಲಿಗೆ ಹೋಗಲು ಒಂದು ಲಂಬಾಣಿಗಳ ಬಿಡಾರವನ್ನು ಹಾಯ್ದು ಹೋಗಬೇಕಾಗಿತ್ತು. ನಮಗೆ ಆ ಜಾಗ ವೆಂದರೆ ಬಹಳ ಹೆದರಿಕೆ. ಜೊತೆಗೆ, ದೊಡ್ಡವರೆಲ್ಲಾ ಕಾಂಡಹಾರದಿಂದ ಬಂದಿರುವ ಲಂಬಾಣಿಗಳು ಪುಟ್ಟ ಮಕ್ಕಳನ್ನು ಹೊತ್ತುಕ್ಕೊಂಡು ಹೋಗುತ್ತಾರೆ ಎಂದು ಹೇಳಿ ನಮ್ಮನ್ನು ಹೆದರಿಸಿದ್ದರು. ಅದಕ್ಕೇ ನಾವು ಆ ಲಂಬಾಣಿಗಳ ಬಿಡಾರ ಬಂದರೆ ಹಿಂತಿರುಗಿಯೂ ನೋಡದೆ ಒಂದೇ ಸಮನೆ ಓಡಿ ಹೋಗುತ್ತಿದ್ದೆವು. ಸ್ಕೂಲು ಮುಗಿದನಂತರ ಮನೆಗೆ ಹೋಗುವ ದಾರಿಯಲ್ಲಿ ನಾವು ನಮ್ಮ ತಂದೆ ತಾಯಿಯರ ಫ್ರೆಂಡ್ಸ್ ಆದ ನಾರಾಯಣ ಸ್ವಾಮಿಯವರ ಮನೆಗೆ ಹೋಗುತ್ತಿದ್ದೆವು. ಅವರೂ ಮದ್ರಾಸಿನಲ್ಲಿ ಇದ್ದವರು ಮತ್ತು ಆ

ಮಾಮಿಗೆ ನಮ್ಮನ್ನು ಕಂಡರೆ ಬಹಳ ಪ್ರೀತಿ. ರುಚಿ ರುಚಿಯಾದ ತಿಂಡಿಗಳನ್ನು ಕೊಡುತ್ತಿದ್ದರು. ಅವನ್ನೆಲ್ಲಾ ಸಂತೃಪ್ತಿಯಾಗಿ ತಿಂದು ಮನೆಗೆ ಹಿಂತಿರುಗುತ್ತಿದ್ದೆವು. ನಾಲ್ಕೂವರೆ ಘಂಟೆಯಷ್ಟು ಹೊತ್ತಿಗೆ ನಮ್ಮ ತಂದೆ ಆಫೀಸಿನಿಂದ ಮನೆಗೆ ಬರುತ್ತಿದ್ದರು.

ನಮ್ಮ ತಂದೆ ಹೆಚ್ಚು ಮಾತಿನವರಲ್ಲ. ಎಲ್ಲರ ಮಾತನ್ನೂ ಕೇಳಿಕೊಳ್ಳುತ್ತಿದ್ದರು ಆದರೆ ಅವರು ಎಂದೂ ಹರಟೆ ಹೊಡೆಯುತ್ತಿರಲಿಲ್ಲ. ಅವರ ಕೆಲಸದಲ್ಲಿ ಮಗ್ನರಾಗಿರುತ್ತಿದ್ದರು. ಮಾತುಕತೆಯೆಲ್ಲಾ ನಮ್ಮ ತಾಯಿಯದೇ. ನಮ್ಮ ಹುಡುಗಾಟ, ಕೋಪತಾಪಗಳೆಲ್ಲಾ ಅವರೊಡನೆಯೇ. ಅವರು ನಮ್ಮನ್ನು ಚೆನ್ನಾಗಿ ಅರ್ಥ ಮಾಡಿಕೊಳ್ಳುತ್ತಿದ್ದರು. ನಮ್ಮ ಜೀವನದಲ್ಲಿ ನಾವು ಬೆಳೆಸಿಕೊಂಡ ಮೌಲ್ಯಗಳು ಇವರಿಬ್ಬರಿಂದ ಬಂದದ್ದು. ಹೆಚ್ಚು ಮಾತೇ ಇಲ್ಲದೆ, ಮೌನವಾಗಿ ನಮಗೆ ಎಲ್ಲವನ್ನೂ ಕಲಿಸಿದರು.

ಊಟಿ ಬಿಡುವುದಕ್ಕೆ ಕೆಲವು ದಿನಗಳ ಮುಂಚೆ ನಾವು ಮಾಡರ್ನ್ ಹಿಂದೂ ಹೋಟೆಲ್ಲಿನಲ್ಲಿ ಇದ್ದೆವು. ಅಲ್ಲಿ ಬಿಸಿ ನೀರನ್ನು ಕಾಯಿಸಲು ದೊಡ್ಡ ಸೌದೆಯ ಬಾಯ್ಲರ್ ಇತ್ತು. ನಾವು ಅಲ್ಲಿಯ ಉಗ್ರಾಣದಿಂದ ಆಲೂಗೆಡ್ಡೆಯನ್ನು ತಂದು ಆ ಬಾಯ್ಲರಿನ ಉರಿಯಲ್ಲಿ ಬೇಯಲು ಹಾಕುತ್ತಿದ್ದೆವು. ನಾವು ಆಟವಾಡಿಕೊಂಡು ಬರುವ ಹೊತ್ತಿಗೆ ಅದು ತಯಾರಾಗಿರುತ್ತಿತ್ತು. ನಾವು ಅದನ್ನು ಬೆಣ್ಣೆ ಹಾಕಿಕೊಂಡು ತಿನ್ನುತ್ತಿದ್ದೆವು. ನನ್ನ ತಂಗಿಯನ್ನು ನೋಡಿಕೊಳ್ಳಲು ರಾಜು ಎಂಬ ಕೇರಳದ ಹುಡುಗನೊಬ್ಬ ಬರುತ್ತಿದ್ದ. ಅವನು ನಮ್ಮ ಜೊತೆ ಆಡಲು ಸಿಕ್ಕಿದ ನಮ್ಮ ಗೆಳೆಯ. ಅವನ ಜೊತೆಗೆ ಒಂದು ಬೀದಿ ನಾಯಿಯೂ ಸಹ ನಮ್ಮ ಗುಂಪಿಗೆ ಸೇರಿಕೊಂಡಿತು. ರಾಜು ನಮಗಿಂತ ಸ್ವಲ್ಪ ದೊಡ್ಡವನಾದ್ದರಿಂದ ನಮ್ಮ ಆಟ ಪಾಟಗಳು ಮತ್ತು ಚೇಷ್ಟೆಗಳಲ್ಲಿ ನಮಗೆ ಮುಂದಾಳಾಗಿದ್ದ. ನಮಗೆ ಕೊಟ್ಟ ಯಾವ ಆಟದ ಸಾಮಾನೂ ಒಂದು ದಿವಸಕ್ಕಿಂತ ಹೆಚ್ಚು ಉಳಿಯುತ್ತಿರಲಿಲ್ಲ. ನಮ್ಮ ತಂದೆಯು ಪನ್ರೂಟಿಯಿಂದ ತಂದಿದ್ದ ಒಂದು ಗೊಂಬೆಗೆ ನಾವು ಸ್ನಾನ ಮಾಡಿಸಿದೆವು. ಬಣ್ಣ ಬಣ್ಣ ವಾಗಿ ಸುಂದರವಾಗಿದ್ದ ಗೊಂಬೆಯು ಒಂದೇ ರೀತಿಯ ಮಂಕು ಬಣ್ಣದ್ದಾಯಿತು. ರಾಜುವಿನ ಚೇಷ್ಟೆಗಳು ಏನೇ ಇರಲಿ ಅವನು ನಮಗೆ ನಮ್ಮ ತೋಟದಲ್ಲಿಒಂದು ಸುಂದರವಾದ 'ಟೆಂಟ್' ಮಾಡಿ ಕೊಟ್ಟನು. ಹಳೆಯ ಸೀರೆಗಳು, ಟೊವೆಲ್ಲುಗಳು ಮತ್ತು ಒಂದು ಕೊಡೆಯನ್ನು ಸೇರಿಸಿ ಮಾಡಿದ ಈ 'ಟೆಂಟು' ನಮ್ಮೆಲ್ಲರಿಗೂ – ಆ ಪುಟ್ಟ ನಾಯಿ ಮರಿ ಜಿಪ್ಸಿಯೂ ಸೇರಿ – ಆಡಲು ಒಂದು ಒಳ್ಳೆಯ ಜಾಗವಾಯಿತು.

ನನ್ನನ್ನ ಬೆಳೆಸೋದು ಬಹಳ ಕಷ್ಟ ಅಂತ ನಮ್ಮ ಹೇಳುತಿದ್ದುದು ನನಗೆ ಚೆನ್ನಾಗಿ ಜ್ಞಾಪಕ ಇದೆ. ನನಗೆ ಎಲ್ಲಾ ಮೊದಲು ಬೇಕಿತ್ತು. ನನ್ನ ಅಕ್ಕ ನನಗೋಸ್ಕರ ಎಲ್ಲಾ

ಬಿಟ್ಟುಕೊಡಬೇಕು ಅಂತ ನಾನು ಎದುರು ನೋಡುತ್ತಿದ್ದೆ. ಅಮ್ಮ ಎಲ್ಲಿಹೋದರೂ ನಾನೂ ಅವಳಹಿಂದೆ ಹೋಗುತ್ತಿದ್ದೆ, ಮತ್ತು ನನಗೆ ಬೇಕಾದ ಆಟದ ಸಾಮಾನುಗಳು ಮತ್ತು ನನಗೇ ಗಮನ ಕೊಡಬೇಕು ಎನ್ನುತ್ತಿದ್ದೆ. "ಇವಳು ತುಂಬ ತೊಂದರೆ ಕೊಡ್ತಾಳೆ, ಅವಳನ್ನ ಅವಳಪಾಡಿಗೆ ಬಿಟ್ಟುಬಿಡಿ" ಅಂತಿದ್ದರು ನಮ್ಮ ಅಮ್ಮ. ನಾನು ಎಲ್ಲಾದಕ್ಕೂ ಹಠ ಹಿಡೀತಿದ್ದೆ. ಮನೇಗೆ ಬಂದವರನ್ನ ಎಲ್ಲಿಗಾದರೂ ಕರ್ಕೊಂಡು ಹೋಗ್ಬೇಕಾದಾಗ ನಾನೂ ಬರ್ತೀನಿ ಅಂತ ಕಾರ ಬಾಗಿಲನ್ನ ಹಿಡ್ಕೊಂಡುಬಿಡುತ್ತಿದ್ದೆ. ವಿಧಿ ಇಲ್ಲದೇ ಕರೆದುಕೊಂಡು ಹೋಗ್ತಿದ್ದರು. ಕಾರಿನಲ್ಲಿ ಕುಳಿತಮೇಲೆ ಅಮ್ಮ ಬೈಯ್ಯುತಿದ್ದಳು, ಆದರೆ ನನ್ನ ಕೆಲಸ ಆಗಿತ್ತಲ್ಲ, ಆದ್ದರಿಂದ ಅದೇನೂ ಪರವಾಗಿರಲಿಲ್ಲ. ನನಗೆ ಆಗ ಯಾವುದ್ಯಾವುದೋ ವಸ್ತುಗಳು ಕಂಡರೆ ಬಹಳ ಪ್ರೀತಿ. ಮಮ್ಮಿ ಅವಳ ಕೂದಲಿಗೆ ಗಂಟು ಹಾಕಿಕೊಳ್ಳಲು ಒಂದು ಚೌರಿ ಇಟ್ಟುಕೊಂಡಿದ್ದಳು. ಅದು ನನ್ನ ಕಣ್ಣಿಗೆ ಬಿದ್ದರೆ ಸಾಕು, ನಾನು ಅದನ್ನು ತೆಗೆದುಕೊಂಡು ಯಾರಿಂದಲಾದರೂ ಅದನ್ನ ನನ್ನ ಪುಟ್ಟ ಕೂದಲಿಗೆ ಹಾಕಿಸಿಕೊಳ್ಳುತಿದ್ದೆ. ಇತ್ತೀಚೆಗೆ ಪ್ರಭ ನನಗೆ ಆವಳು ಮತ್ತು ಅಮ್ಮ ಆ ಚೌರಿಯನ್ನು ನನ್ನಿಂದ ಬಚ್ಚಿಡಲು ಮಾಡಿದ ಹರಸಾಹಸಗಳ ಬಗ್ಗೆ ಹೇಳಿದಳು. ನನ್ನ ಅಕ್ಕ ನನಗೆ ತಿಳಿಯದಂತೆ ಒಂದು ಸೆಲ್ಲ್ಯೂಲಾಯ್ಡ ಗೊಂಬೆಯನ್ನು ಇಟ್ಟುಕೊಂಡಿದ್ದಳು, ನಾನೂ ಒಂದು 'ಟೆಡ್ಡಿಬೇರ್' ಅನ್ನು ಹತ್ತು ವರ್ಷ ಯಾರಗೂ ಕೊಡದೆ ಇಟ್ಟು ಕೊಂಡಿದ್ದೆ. ಪಾಪ ನಮ್ಮ ಅಮ್ಮ, ಅವಳ ಇತರ, ಗಲಾಟೆ ಮಾಡದ ಮಕ್ಕಳಿಗೂ ಅವರವರ ಭಾಗದ ಆಟದ ಸಾಮಾನುಗಳನ್ನು ಕೊಡಬೇಕಾಗಿತ್ತಲ್ಲ.

೧೯೪೪ ರ ಪೂರ್ವಾರ್ಧ. ಆಗ ನನಗೆ ಐದು ವರ್ಷ. ನಮ್ಮ ಸ್ಕೂಲಿನಲ್ಲಿಒಂದು 'ಪಿಕ್ನಿಕ್' ಏರ್ಪಡಿಸಿದ್ದರು. ನನಗೆ ಜ್ವರ ಮತ್ತು ಶೀತ. ಆದರೂ ನಾನು ಹಠ ಹಿಡಿದು ಪಿಕ್ನಿಕ್ಕಿಗೆ ಹೋದೆ. ತಿರುಗಿ ಬರುವ ವೇಳೆಗೆ ತಲೆ ನೋವು. ಜ್ವರವೇನೂ ಹೆಚ್ಚಾಗಿರಲಿಲ್ಲ. ಡಾಕ್ಟರಿಗೆ ತೋರಿಸಿ ಔಷಧಿ ಕೊಡಿಸಿದರು. ನಾಲ್ಕುದಿನಗಳ ನಂತರ ನನ್ನ ಮೈಯೆಲ್ಲಾ ಮರವಾದಂತಾಯಿತು. ಸಿಡಿಯುವ ತಲೆನೋವು, ಮೈಕೈಯೆಲ್ಲಾ ನೋವು. ಬಹಳ ಬೆವರುತ್ತಿದ್ದೆ. ನಮ್ಮ ಅಮ್ಮನಿಗೆ ಆದ ಆಘಾತದಲ್ಲಿ ಏನೂ ತಿಳಿಯದಂತಾಯಿತು. ಈ ರೀತಿ ಎಂದೂ ನನ್ನನ್ನು ನೋಡಿರಲಿಲ್ಲ. ಎಲ್ಲವೂ ಕ್ಷಣಮಾತ್ರದಲ್ಲಿ ಆದಂತೆ ಇತ್ತು. ಮಾರನೆಯ ದಿನ ಬೆಳಿಗ್ಗೆಯ ಹೊತ್ತಿಗೆ ನನ್ನ ಕೈ ಕಾಲುಗಳಲ್ಲಿ ಸ್ವಾದೀನವೇ ಇರಲಿಲ್ಲ. ನನಗೆ ಕುಳಿತುಕೊಳ್ಳಲು ಆಗುತ್ತಿರಲಿಲ್ಲ, ಕೈ ಕಾಲುಗಳನ್ನು ಆಡಿಸಲಾಗುತ್ತಿರಲಿಲ್ಲ, ತಲೆ ಎತ್ತಲಾಗುತ್ತಿರಲಿಲ್ಲ.

ನನ್ನ ತಂದೆ ತಾಯಿಯರಿಗೆ ಏನಾಗುತ್ತಿದೆ ಎಂದು ತಿಳಿಯಲಿಲ್ಲ. ಡಾಕ್ಟರಗಳು ಬಂದು ನೋಡಿದರು ಆದರೆ ಅವರಿಂದ ಏನೂ ಮಾಡಲಾಗಲಿಲ್ಲ. ತಡೆಯಲಾರದಷ್ಟು ನೋವಿರುತಿತ್ತು.

ನನ್ನನ್ನು ಮುಟ್ಟುವುದಿರಲಿ, ನಾನು ಮಲಗಿದ್ದ ಮಂಚವನ್ನು ಯಾರಾದರೂ ಮುಟ್ಟಿದರೇನೇ ನಾನು ಕಿರುಚಿಕೊಳ್ಳುತ್ತಿದ್ದೆ. ಮೈ ಎಲ್ಲಾ ನವೆಯಾಗುತ್ತಿತ್ತು. ಎಲ್ಲಿ ಹಿಂಸೆಯಾಗಿತ್ತಿದೆ ಎಂದು ತೋರಿಸುವುದಕ್ಕೂ ನನಗೆ ಆಗುತ್ತಿರಲಿಲ್ಲ. ಅಮ್ಮ ನನ್ನ ಕಾಲುಗಳನ್ನು ಮೃದುವಾಗಿ ಸವರಿಕೊಡುತಿದ್ದಳು. ನನಗೆ ನೋವಿನಿಂದ ಕಿರುಚುವುದೊಂದೇ ಆಗುತಿತ್ತು. ಊಟಿಯಲ್ಲಿ ಆಗ ಬಹಳ ಹುಳುಗಳಿದ್ದವು. ಯಾವುದೋ ಹುಳುವು ಕಚ್ಚಿ ಈ ರೀತಿಯಾಗಿರ ಬಹುದು ಎಂದು ಅಮ್ಮ ಅಂದುಕೊಂಡಿದ್ದಳು. ಅದಕ್ಕೇ ಹಾಸಿಗೆಯನ್ನು ತೆಗೆದು ಕ್ಲೀನ್ ಮಾಡಿ ತಿರುಗಿಸಿ ಹಾಕಿ ಎಲ್ಲಾ ಮಾಡಿದಳು. ಆದರೆ ನನ್ನ ನವೆ ಮತ್ತು ಮೈ ಕೈ ನೋವು ಮಾತ್ರ ಕಮ್ಮಿಯಾಗಲಿಲ್ಲ.

ಮಮ್ಮೈ ಮತ್ತು ನಮ್ಮ ಮನೆಯ ಕೆಲಸದವಳು ಇವರಿಬ್ಬರಿಗೂ ಏನೂ ತಿಳಿಯಲಿಲ್ಲ. ಒಬ್ಬರಾದಮೇಲೆ ಒಬ್ಬರು ಡಾಕ್ಟರ್‌ಗಳಿಗೆ ಕಾಯಿಲೆ ಏನೆಂದು ಕಂಡುಹಿಡಿಯಲಾಗದಿದ್ದಾಗ ಅವರು ಇದೇನೋ ಮಂತ್ರ ಮಾಯ ಇರಬೇಕು ಅಂತ ನಿರ್ಧಾರ ಮಾಡಿದರು. ಮನೆ ಮತ್ತು ಸುತ್ತು ಮುತ್ತಲೂ ಮಂತ್ರ ಮಾಯದ ಅವಶೇಷಗಳಿಗಾಗಿ ಹುಡುಕಾಡ ತೊಡಗಿದರು.

ನನಗೆ ಸ್ನಾನ ಮಾಡಿಸಲು ಹಾಸಿಗೆಯಿಂದ ಎತ್ತಿಕೊಳ್ಳ ಬೇಕಾಗುತ್ತಿತ್ತು. ನನ್ನ ಕೈ ಕಾಲುಗಳಿಗೆ ಸ್ವಾಧೀನವೇ ಇರಲಿಲ್ಲ, ಜೊತೆಗೆ ನನ್ನ ಅಳು ಮತ್ತು ಚೀರಾಟ ಎಲ್ಲರಿಗೂ ಇನ್ನಷ್ಟು ಹೆದರಿಕೆ ಉಂಟುಮಾಡುತ್ತಿತ್ತು. ನನಗೆ ಲಕ್ವ ಹೊಡೆದ ಮೊದಲನೆಯ ದಿನವಂತೂ ಯಾರೂ ನನ್ನನ್ನು ಮುಟ್ಟಲೂ ಆಗುತ್ತಿರಲಿಲ್ಲ, ನನಗೆ ಅಷ್ಟುನೋವಿತ್ತು. ನನ್ನ ಡ್ರೆಸ್ಸಿಗೆ ಗುಂಡಿ ಹಿಂದುಗಡೆ ಇತ್ತು. ಆ ಡ್ರೆಸ್ ಬದಲಾಯಿಸಲು ನನ್ನನ್ನು ಎತ್ತಲು ಆಗುತ್ತಿರಲಿಲ್ಲ, ಕೊನೆಗೆ ನನ್ನ ಅಮ್ಮ ಅದನ್ನು ಕತ್ತರಿಸಿ ತೆಗೆಯಬೇಕಾಯಿತು. ಅದು ನನಗೆ ಬಹಳ ಹಿಡಿಸಿದ್ದ ಗುಲಾಬಿ ಬಣ್ಣದ ಪೋಲ್ಕಾ ಡಾಟ್ ಇದ್ದ ಫ್ರಾಕ್. ನಾನು ಬಹಳ ಅತ್ತೆ. ನನ್ನ ಗೋಳು ತಡೆಯದೆ ಅಮ್ಮ ರೇಗಿದಳು. ಈ ರೀತಿಯೋ ಮತ್ತೊಂದು ರೀತಿಯೋ ಪ್ರತಿನಿತ್ಯ ಮನೆಯಲ್ಲಿ ಡ್ರಾಮಾ ನಡೆಯೋದು. ಅಮ್ಮ ನನ್ನನ್ನ ಸಂತೈಸೋದರಲ್ಲಿ ಸುಸ್ತಾಗಿ ಹೋಗುತಿದ್ದಳು. ಮಮ್ಮೈ ದೇವರಿದ್ದಾನೆ, ಮುಂದೊಂದು ದಿನ ನಾನೂ ನಡೆಯುತ್ತೇನೆ ಎಂದು ಹೇಳಿ ಅಮ್ಮನಿಗೆ ಸಮಾಧಾನ ಮಾಡುತ್ತಿದ್ದಳು.

ಎರಡು ವಾರಗಳು ನಮ್ಮ ಮನೆಯವರೆಲ್ಲಾ ನನಗೆ ಮೈ ಸರಿ ಹೋಗುತ್ತದೆ ಎನ್ನುವ ಭರವಸೆಯಲ್ಲಿ ಬಹಳ ಪಾಡು ಪಟ್ಟರು.ಆದರೆ ನಾನು ಹಾಗೆಯೇ ಇದ್ದೆ. ನಮ್ಮ ತಂದೆ ಬಹಳ ಆತಂಕದಿಂದ ನೋಡುತ್ತಿದ್ದರು. ನಾನು ಕಾಯಿಲೆ ಬೀಳುವುದಕ್ಕೆ ಮುಂಚೆಯೇ ನಮ್ಮ ಮನೆಯವರು ಮದರಾಸಿಗೆ ಹಿಂತಿರುಗಲು ಯೋಚಿಸುತ್ತಿದ್ದರು, ಯಾಕೆಂದರೆ

ನಮ್ಮ ತಂದೆಯ ಆಫೀಸು ಪುನಃ ಮದರಾಸಿನಲ್ಲಿ ಕೆಲಸ ಶುರುಮಾಡಿತ್ತು ಮತ್ತು ನಮ್ಮ ತಂದೆ ಅಲ್ಲಿ ಕೆಲಸಕ್ಕೆ ಸೇರಿಕೊಳ್ಳಬೇಕಿತ್ತು. ಆ ಕಾರಣ ನಮ್ಮ ತಾಯಿ ನನ್ನನ್ನು ಬೆಂಗಳೂರಿಗೆ ಕರೆದುಕೊಂಡು ಹೋದರು ಮತ್ತು ಇತರರೆಲ್ಲಾ ಮದರಾಸಿಗೆ ಹೋದರು. ಬೆಂಗಳೂರಿನಲ್ಲಿ ನಾವು ಬಸವನಗುಡಿಯಲ್ಲಿ ನಮ್ಮ ತಾತನ ಮನೆಯಲ್ಲಿ ಇದ್ದೆವು. ಅಲ್ಲಿ ನಮ್ಮ ತಂದೆಯ ಸಹೋದರರು ಇಬ್ಬರೂ ಇದ್ದರು. ಮತ್ತೆ ಡಾಕ್ಟರ್‌ಗಳ ಓಡಾಟ ಶುರುವಾಯಿತು. ಅಲ್ಲಿನ ಒಬ್ಬ ಹೆಸರಾಂತ ಡಾಕ್ಟರ್ ನನಗೆ ಬೆರಿನ್ ಇಂಜೆಕ್ಷನ್‌ಗಳನ್ನು ಕೊಟ್ಟರು. ಅನೇಕ ವರ್ಷಗಳ ನಂತರ ಅದು ನನ್ನ ಕಾಯಿಲೆಗೆ ಕೊಡಲೇ ಬಾರದಾದ ಔಷಧ ಎಂದು ನನಗೆ ತಿಳಿಯಿತು. ಆದರೆ ಆಗ ಯಾರಿಗೂ ಏನೂ ಗೊತ್ತಿರಲಿಲ್ಲ.ನಾವು ಊಟಿಯಿಂದ ಹೊರಟಾಗ ನಮ್ಮ ತಂದೆ ಸ್ಟೇಷನ್ನಿಗೆ ನಮ್ಮ ನಾಯಿ ಜಿಪ್ಪಿಯನ್ನು ತಂದಿದ್ದರು.ಅದನ್ನು ಮದರಾಸಿಗೆ ಕರೆದುಕೊಂಡು ಹೋಗುವುದಾಗಿಯೂ ಹೇಳಿದರು, ಆದರೆ ನಾನು ಜಿಪ್ಪಿಯನ್ನು ಮತ್ತೊಮ್ಮೆ ನೋಡಲೇ ಇಲ್ಲ.

ನಾನು ಸುಲಭವಾಗಿ ಒಪ್ಪಿಕೊಳ್ಳುತ್ತಿರಲಿಲ್ಲ, ಬಹಳ ಗಲಾಟೆ ಮಾಡುತ್ತಿದ್ದೆ. ಇಪ್ಪತ್ತನಾಲ್ಕು ಘಂಟೆಯೂ ಅಮ್ಮ ನನ್ನ ಪಕ್ಕದಲ್ಲಿಯೇ ಇರಬೇಕು ಎನ್ನುತ್ತಿದ್ದೆ. ನನ್ನ ಚಿಕ್ಕಮ್ಮ ಶಾರದಾ ನನ್ನ ಗಮನ ಬೇರೆಕಡೆ ಮಾಡಲು ಗಾಜಿನ ಬಳೆ ಚೂರುಗಳನ್ನು ಕಾಯಿಸಿ ಅಂಟಿಸಿ ಮಾಡಿದ ಉಂಗುರಗಳನ್ನು ನನಗೆ ಕೊಡುತ್ತಿದ್ದರು. ಅದನ್ನು ಬೆರಳಿಗೆ ತೊಡಿಸಿಕೊಂಡು ಆಟವಾಡುತ್ತಾ ಸ್ವಲ್ಪಹೊತ್ತು ನಾನು ಎಲ್ಲವನ್ನೂ ಮರೆಯುತ್ತಿದ್ದೆ. ಆಗ ಅವರಿಗೆ ಸುಧಾರಿಸಿಕೊಳ್ಳಲು ಸ್ವಲ್ಪ ಸಮಯ ಸಿಗುತಿತ್ತು. ನನ್ನ ಕಸಿನ್ಸ್ ನಿತ್ಯ ಬಂದು ಸ್ವಲ್ಪ ಹೊತ್ತು ನನ್ನೊಡನೆ ಆಡುತ್ತಿದ್ದರು. ನಿತ್ಯ ನನ್ನನ್ನು ಸ್ವಲ್ಪ ಹೊತ್ತು ದಿಂಬುಗಳ ಸಹಾಯದಿಂದ ಕುಳಿತುಕೊಳ್ಳಲು ಬಿಡುತ್ತಿದ್ದರು.

ಎರಡು ದಿನಕ್ಕೊಮ್ಮೆ ನನಗೆ ಇಂಜೆಕ್ಷನ್ ಕೊಡಲು ಡಾಕ್ಟರ್ ಮನೆಗೆ ಬರುತ್ತಿದ್ದರು. ಒಂದು ಬೂದಿ ಬಣ್ಣದ ಕೋಟು, ಕ್ಯಾನವಾಸ್ ಶೂಸ್, ದೊಡ್ಡ ರೂಮಾಲು ಮತ್ತು ಹಣೆಯಲ್ಲಿ ದೊಡ್ಡ ನಾಮ, ಇದು ಅವರ ವೇಷ. ಅವರನ್ನು ಕಂಡೊಡನೆಯೇ ನನ್ನ ಕಸಿನ್ಸ್ ಮನೆಗೆ ಓಡಿಬಂದು ಅವರ ಬರುವಿಕೆಯನ್ನು 'ಎನೌನ್ಸ್' ಮಾಡುತ್ತಿದ್ದರು. ಅವರ ಇಂಜೆಕ್ಷನ್ನಿನ ದೊಡ್ಡ ಸೂಜಿಯನ್ನು ನೋಡಿದೊಡನೆ ನಾನು ಕಿರುಚುತ್ತಾಇದ್ದೆ. ನನಗೆ ಲಕ್ವ ಆಗಿದ್ದರೂ, ನನ್ನ ಆರೈಕೆಯೊಂದಿಗೆ ನಮ್ಮ ಮನೆಯವರು ನನ್ನನ್ನು ೨೪ ಘಂಟೆಯೂ ಹಾಸಿಗೆಯಲ್ಲಿಯೇ ಇರಲು ಬಿಡಲಿಲ್ಲ. ಎಲ್ಲರಂತೆ ನಾನೂ ಹೊರಗೆಲ್ಲಾ ಹೋಗಿ ಓಡಾಡುವಂತೆ ಮಾಡಿದರು. ನಮ್ಮ ಮನೆಯಲ್ಲಿ ನಾಲ್ಕು ಮಕ್ಕಳ 'ಸ್ಟ್ರೋಲ್ಲರ್' ಇತ್ತು. ಅದರಲ್ಲಿ ನನ್ನನ್ನು

ಅಮ್ಮ ಮತ್ತು ಅತ್ತೆ ಬಸವನಗುಡಿಯ ದೊಡ್ಡ ಪಾರ್ಕಿಗೆ ಕರೆದುಕೊಂಡು ಹೋಗಿ ಸುತ್ತಾಡಿಸುತ್ತಿದ್ದರು. ಆಗ ಅವರಿಗೆ ನನ್ನ ಕಾಯಿಲೆ ಏನೆಂದು ಗೊತ್ತಿರಲಿಲ್ಲ, ಆದರೆ ಅವರು ನಾನು ಯಾವಾಗಲೂ ಹಾಸಿಗೆಗೇ ಗಂಟು ಬಿದ್ದಿರದಂತೆ ನೋಡಿಕ್ಕೊಂಡರು. ದಿನಗಳು ಬೇಗ ಕಳೆದವು.

ಒಂದು ಮಧ್ಯಾಹ್ನ ನನಗೆ ನಾನೇ ನನ್ನ ತಲೆಯನ್ನು ಎತ್ತಲು ಆಯಿತು. ಇದು ಇಷ್ಟು ದಿನ ನನ್ನಿಂದ ಸಾಧ್ಯವಾಗುತ್ತಿರಲಿಲ್ಲ. ಇನ್ನೂ ಕೆಲವು ದಿನಗಳಲ್ಲಿ ನನಗೆ ನನ್ನ ಬಲಗೈಯನ್ನು ಉಪಯೋಗಿಸಲಾಯಿತು. ಇದು ತಾನಾಗೇ ಆಯಿತು. ಈಗ ನನಗೆ ಸ್ವಲ್ಪ ಸ್ವತಂತ್ರವಾಗಿ ಇರಲು ಸಾಧ್ಯ ವಾಯಿತು. ದೇಹಕ್ಕೆ ಸ್ವಲ್ಪ ಶಕ್ತಿ ಬಂದಿತ್ತು.

ಎರಡನೇ ಮಹಾಯುದ್ಧವು ಮುಗಿದಿತ್ತು. ನಮ್ಮ ಮನೆಯವರೆಲ್ಲಾ ಮದರಾಸಿನಲ್ಲಿದ್ದರು. ಅಮ್ಮನೂ ನಾನೂ ಅವರನ್ನು ಅಲ್ಲಿ ಸೇರಿಕೊಂಡೆವು. ಮತ್ತೆ ನಮಗೆ ಮನೆಯ ಹುಡುಕಾಟ ಶುರುವಾಯಿತು. ಹೇಗೋ ನಮ್ಮ ತಂದೆಯು ಒಂದು ಮನೆಯ ಭಾಗವನ್ನು ಬಾಡಿಗೆಗೆ ತೆಗೆದುಕೊಂಡರು. ಒಂದು ಭಾಗದಲ್ಲಿ ನಾವು ಮತ್ತು ಮತ್ತೊಂದು ಭಾಗದಲ್ಲಿ ಮನೆಯ ಮಾಲೀಕರು. ಮನೆಗೆ 'ಪಾಮ್ ಗ್ರೋವ್' ಎಂದು ಹೆಸರಿತ್ತು. ಎರಡು ಮನೆಗಳ ನಡುವೆ ಒಂದು ತೆಳ್ಳಗಿನ ಗೋಡೆ. 'ಪ್ರೈವೆಸಿ' ಎಂಬುದೇ ಇರಲಿಲ್ಲ. ಆದರೂ ಹೇಗೋ ದಿನಗಳು ಶಾಂತವಾಗಿ ಕಳೆಯುತ್ತಿದ್ದವು. ಅವರ ಮನೆಯಲ್ಲಿ ಇಬ್ಬರು ಮಕ್ಕಳು ಮತ್ತು ನಮ್ಮ ಮನೆಯಲ್ಲಿ ಕೆಲಸ ಮಾಡುತ್ತಿದ್ದ 'ತಾಯಿ'. ತಾಯಿ ಸಣ್ಣಕ್ಕೆ ಎಷ್ಟು ಮೂಳೆ ಮೂಳೆಯಾಗಿದ್ದಳು ಎಂದರೆ ಅವಳು ನನ್ನನ್ನು ಎತ್ತಿಕೊಂಡರೆ ಅವಳ ಮೂಳೆಗಳು ನನಗೆ ನೋವು ಮಾಡುತ್ತಿದ್ದವು.

ಕೆಲವು ದಿವಸಗಳಲ್ಲಿ ತೊಂದರೆ ಶುರುವಾಯಿತು. ಒಂದು ದಿನ ಅವರು 'ತಾಯಿ' ಅವರ ಮನೆಯ ರಂಗೋಲಿಯನ್ನು ಕದಿಯುತ್ತಿದ್ದಾಳೆ, ಅವಳನ್ನು ಕೆಲಸದಿಂದ ಓಡಿಸಿ ಎಂದು ಅಮ್ಮನಿಗೆ ಹೇಳಿದರು. ಅಮ್ಮ ಒಪ್ಪಲಿಲ್ಲ. ಆ ಹುಡುಗಿ ಚೆನ್ನಾಗಿ ಕೆಲಸ ಮಾಡುತ್ತಿದ್ದಳು. ಕೊನೆಗೆ ಅವರು ನಮ್ಮನ್ನು ಮನೆ ಬಿಡಲು ಒತ್ತಾಯ ಮಾಡಿದರು. ನಮ್ಮ ತಂದೆಯ ಬಾಡಿಗೆ ಮನೆಯ ಬೇಟೆ ಮತ್ತೆ ಶುರುವಾಯಿತು. ಒಂದು ದಿವಸ, ಕೆಲಸದಿಂದ ಸುಸ್ತಾಗಿ ಬಂದು ನಮ್ಮ ತಂದೆ ಮಹಡಿಯ ಮೆಟ್ಟಲು ಹತ್ತುತಿದ್ದಾಗ, ಮನೆಯ ಮಾಲೀಕರು ಹಿಂದೆ ಬಂದು ಯಾವಾಗ ನಾವು ಮನೆ ಕಾಲಿ ಮಾಡುತ್ತೇವೆ ಎಂದು ಕೇಳಲಾರಂಭಿಸಿದರು. ನಮ್ಮ ತಂದೆ ಬಹಳ ಶಾಂತ ಸ್ವಭಾವದವರು. ಅವರಿಗೆ ಬೇಗ ಕೋಪ ಬರುವುದಿಲ್ಲ. ಆದರೆ ಆದಿನ ಅವರಿಗೆ ಎಲ್ಲಿಲ್ಲದ ಕೋಪ ಬಂದಿತು. ಅವರು ಆ ಮನೆಯ ಮಾಲೀಕನನ್ನು ಗೋಡೆಗೆ ತಳ್ಳಿ ಹಿಡಿದುಕ್ಕೊಂಡು ನಮ್ಮ ಪ್ರಾಣತೆಗೆಯುವುದನ್ನು ಬಿಡಹೇಳಿದರು. ಆ

ಮನುಷ್ಯನೋ ತೆಳ್ಳಗೆ ಕಡ್ಡಿಯಂತೆ ಇದ್ದರು. ನಮ್ಮ ತಂದೆ ಒಳ್ಳೆಯ ಮೈಕಟ್ಟು ಉಳ್ಳವರು. ಮಮ್ಮೈ ನನ್ನನ್ನು ಎತ್ತಿಕೊಂಡು ಮೆಟ್ಟಲುಗಳ ಮೇಲಿಂದ ನೋಡುತ್ತಿದ್ದಳು. ನಮ್ಮ ಅಮ್ಮ ಕೆಳಗೆ ಗಾಬರಿಯಿಂದ ನಮ್ಮ ತಂದೆಗೆ "ಆ ಮನುಷ್ಯನನ್ನು ಬಿಟ್ಟುಬಿಡಿ" ಎಂದು ಕೂಗಿಕೊಳ್ಳುತ್ತಿದ್ದಳು. ಅವಳಿಗೆ ಇದು ಎಲ್ಲಿ ಹೋಗಿ ಮುಗಿಯುತ್ತದೆಯೋ ಎಂಬ ಹೆದರಿಕೆ ಇರಬೇಕು. ನನಗೆ ಈ ಸಂದರ್ಭ ಚೆನ್ನಾಗಿ ನೆನಪಿದೆ. ಅಮ್ಮಾನೂ ಮಮ್ಮೈಯೂ ನಡುಗುತ್ತಾ ಇದ್ದರು. ನಮ್ಮ ತಂದೆ ಕೋಪದಿಂದ ತಮ್ಮ ರೂಮಿನೊಳಗೆ ಹೋದರು. ಮೆಟ್ಟಲಮೇಲೆ ಆ ಮನುಷ್ಯ ಮೆಲ್ಲಗೆ ನರಳುತ್ತಿದ್ದ. ನಮ್ಮ ಅದೃಷ್ಟ, ಇದಾದ ಕೆಲವೇ ದಿನಗಳಲ್ಲಿ ನಾವು ಎಡ್ವರ್ಡ್ ಎಲ್ಲಿಯಟ್ಸ್ ರೋಡಿನಲ್ಲಿದ್ದ ಬೇರೆಮನೆಗೆ ಹೋದೆವು. ಇದು ಬೇರ್‍ಯಾರೂ ಇಲ್ಲದೆ ನಾವೇ ಇದ್ದ ದೊಡ್ಡ ಮನೆ. ಇಲ್ಲಿ ನಮ್ಮ ಕ್ರಿಯಾಶೀಲತೆ ಹೊರ ಹೊಮ್ಮಿತು.

ನಾವು ಮದರಾಸಿನಲ್ಲಿದ್ದ ಈ ಸಮಯದಲ್ಲಿ ಡಾ. ಕಿನ್ನಿ ಗೆ ನನ್ನನ್ನು ತೋರಿಸಿದರು. ಅವರು ಮದರಾಸಿನ ಜನರಲ್ ಆಸ್ಪತ್ರೆಯ ಹೆಸರಾಂತ ವೈದ್ಯರಾಗಿದ್ದರು. ಅವರು ನೋಡಿದ ಕೂಡಲೇ ನನ್ನ ಕಾಯಿಲೆಗೆ 'ಫಿಸಿಯೋಥೆರಾಪಿ' ಯನ್ನು ಬಿಟ್ಟರೆ ಬೇರೆ ಏನೂ ಔಷಧಿ ಇಲ್ಲ ಎಂದರು. ನನಗೆ ಕತ್ತಿನಿಂದ ಕಾಲಿನವರೆಗೆ ಪ್ಲಾಸ್ಟರ್ ಹಾಕಿ ಒಂದು ವರ್ಷ ಇಟ್ಟರೆ ಸರಿಹೋಗುತ್ತದೆ ಎಂದರು. ಕೊನೆಗೂ ನನ್ನ ಕಾಯಿಲೆ ಏನೆಂದು ಒಬ್ಬರಾದರೂ ಕಂಡು ಹಿಡಿದರು. ನನಗೆ ಬಹಳ ಜೋರಾದ 'ಪೋಲಿಯೋಮೈಲೈಟಿಸ್' ಆಗಿತ್ತು.

* * *

# ನೀರಿನ ಟ್ಯಾಂಕ್

ಆಗ ಪೋಲಿಯೋ ಬಗ್ಗೆ ಹೆಚ್ಚು ವಿಷಯ ಗೊತ್ತಿರಲಿಲ್ಲ. ಈ ಕಾಯಿಲೆ ಪ್ರಪಂಚದಾದ್ಯ ಹರಡಿದ್ದರೂ ನಮಗೆ ತಿಳಿದವರು ಯಾರಿಗೂ ಇದು ಇರಲಿಲ್ಲ. ಡಾ. ಕಿನ್ನಿ ಈ ಕಾಯಿಲೆಯ ಬಗ್ಗೆ ನಮಗೆ ಸಾಕಷ್ಟು ವಿಷಯ ತಿಳಿಸಿದರು. ಈ ಕಾಯಿಲೆ ಬಂದ ಮೊದಲ ೪೦ ದಿನಗಳು ಇದರ ಸೊಂಕು ಬಹಳ ಪ್ರಬಲವಾಗಿರುತ್ತದೆ ಎಂದು ತಿಳಿಸಿದರು. ನಮ್ಮ ಮನೆಯಲ್ಲಿ ಆ ೪೦ ದಿನಗಳಲ್ಲಿ ನನ್ನ ಕಸಿನ್ಸ್ ಎಲ್ಲಾ ಜೊತೆಯಲ್ಲಿ ಇದ್ದರು. ಅವರೆಲ್ಲಾ ಸುಮಾರು ನನ್ನ ವಯಸ್ಸಿನವರೇ. ಇದನ್ನು ಯೋಚಿಸಿಕೊಂಡರೆ ಈಗಲೂ ಭಯವಾಗುತ್ತದೆ. ಅವರಲ್ಲಿ ಯಾರಿಗಾದರೂ ಈ ಕಾಯಿಲೆ ಹರಡ ಬಹುದಾಗಿತ್ತು.

ಡಾ. ಕಿನ್ನಿ ಪ್ಲಾಸ್ಟರ್ ಹಾಕಿಕೊಳ್ಳಬೇಕು ಎಂದು ಹೇಳಿದರೂ, ನನ್ನ ತಂದೆ ತಾಯಿ ಮತ್ತೊಬ್ಬ ಡಾಕ್ಟರಿನ ಸಲಹೆ ಕೇಳಿದರು. ಒಂದು ಇಡೀ ವರ್ಷ ಪ್ಲಾಸ್ಟರ್ ಹಾಕಿಕೊಂಡು ಇರುವುದು ಊಹಿಸಿಕೊಳ್ಳಲೂ ಸಾಧ್ಯವಿರಲಿಲ್ಲ. ನಮ್ಮ ಅದೃಷ್ಟಕ್ಕೆ ನಮ್ಮ 'ದೀ' ಅತ್ತೆ – ನಮ್ಮ ತಂದೆಯ ತಂಗಿ – ಮುಂಬೈಯಿನ ಹೆಸರಾಂತ ಸರ್ಜನ್ ಆದ ಡಾ. ಕತ್ರಕ್ ಅವರನ್ನು ನೋಡಲು ಒಂದು ಅಪ್ಪಾಯಂಟ್‌ಮೆಂಟ್ ತೆಗೆದುಕೊಂಡರು. ಅವರು ನನ್ನನ್ನು ಪ್ಲಾಸ್ಟರ್ ನಲ್ಲಿ ಒಂದು ವರ್ಷ ಬಿಡುವುದು ನನ್ನ ಮಾಂಸಖಂಡಗಳನ್ನೆಲ್ಲಾ ಮರವಾಗಿಸುತ್ತದೆ. ಆಮೇಲೆ ಅವನ್ನು ಉಪಯೋಗಿಸುವುದಕ್ಕೇ ಆಗುವುದಿಲ್ಲಾ ಎಂದರು. ಅವರೂ ಕೂಡ ನಾನು ಕುಳಿತುಕೊಳ್ಳ ಬಾರದು. ಮಲಗಿರಬೇಕು ಮತ್ತು ದೀರ್ಘ ಕಾಲ 'ಫಿಸಿಯೋಥೆರಾಪಿ' ಮಾಡಿಸಿಕೊಳ್ಳಬೇಕು ಎಂದರು. ಡಾ. ಕತ್ರಕ್ ನನ್ನ ಕೈ ಕಾಲುಗಳನ್ನು ಹೇಗೆ ಇಡಬೇಕು ಇಲ್ಲದಿದ್ದರೆ ಅವು ವಿಕಲವಾಗುತ್ತವೆ ಎಂದು ಹೇಳಿದ್ದನ್ನು ನಮ್ಮ ಮನೆಯವರು ಬಹಳ ಗಮನವಿಟ್ಟು ಕೇಳಿಕೊಂಡರು. ವಿಕಲತೆಯು ಉಂಟಾದರೆ ಅದನ್ನು ಸರಿಮಾಡಲು ಶಸ್ತ್ರಚಿಕಿತ್ಸೆಮಾಡಬೇಕಾಗುತ್ತದೆ. ಅದರಲ್ಲಿ ಅನೇಕ ತೊಂದರೆಗಳು ಉಂಟು. ಆದ್ದರಿಂದ ಅವರು ಕೈ ಕಾಲಿನ ಮಾಂಸ ಖಂಡಗಳಲ್ಲಿ ಶಕ್ತಿ ಬರಲು ವ್ಯಾಯಾಮ ಮಾಡಬೇಕು ಎಂದರು.

ಡಾ. ಕತ್ರಕ್ ನನ್ನನ್ನು ಮುಂದಿನ ಒಂದು ವರ್ಷದ ವರೆಗೆ ಪ್ರತಿ ತಿಂಗಳೂ ನೋಡಬೇಕು ಎಂದರು. ಇದು ಆಗಬೇಕಾದರೆ ನಾನು ಮುಂಬೈಯಲ್ಲೇ ಇರಬೇಕಾಗಿತ್ತು. ಮತ್ತೆ ನಮ್ಮ ಕುಟುಂಬದಲ್ಲಿ ಒಬ್ಬೊಬ್ಬರು ಒಂದೊಂದು ಕಡೆ. ನಮ್ಮ ಅಮ್ಮ ಮತ್ತು ನನ್ನ ತಂಗಿ

ನನ್ನೊಡನೆ ಇದ್ದರು. ನಮ್ಮ ತಂದೆ ಮದರಾಸಿನಲ್ಲಿ ಉಳಿಯಬೇಕಾಯಿತು. ನನ್ನ ಅಕ್ಕ ಪ್ರಭನ ಓದಿನ ಪ್ರಶ್ನೆ ಇತ್ತು, ನನ್ನ ಈ ಕಾಯಿಲೆಯು ಮನೆಯಲ್ಲಿ ಸಾಕಷ್ಟು ಅಸ್ಥಿರತೆಯನ್ನು ಉಂಟುಮಾಡಿತ್ತು. ಪ್ರಭಳಿಗೆ ಆಗ ಏಳು ವರ್ಷ. ಅವಳನ್ನು ನಮ್ಮ ಅಮ್ಮನ ತಂದೆ ತಾಯಿಯರೊಂದಿಗೆ ಬೆಂಗಳೂರಿನಲ್ಲಿ ಬಿಡಲು ಏರ್ಪಾಡಾಯಿತು. ಮೂರು ಹೆಣ್ಣು ಮಕ್ಕಳಿರುವ ಕಿರಿಯ ದಂಪತಿಗಳಿಗೆ ಮನಸ್ಸಿನಲ್ಲಿ ಎಷ್ಟು ಗೊಂದಲವಾಗಿರಬಹುದು?

ಮುಂಬೈಯಲ್ಲಿ ನಮ್ಮ ಅಮ್ಮ ನನ್ನ ಆರೈಕೆಗೇ ಅವಳ ಪೂರ್ಣ ಧ್ಯಾನ ಕೊಟ್ಟಳು. ಡಾಕ್ಟರಿಂದ ಫಿಸಿಯೋಥೆರಾಪಿಯನ್ನು ಕಲಿತುಕೊಂಡು ಅವಳೇ ಮಾಡ ತೊಡಗಿದಳು. ನಾನು ಸಂಪೂರ್ಣವಾಗಿ ಹಾಸಿಗೆ ಹಿಡಿದಿದ್ದೆ. ಕುಳಿತುಕೊಳ್ಳ ಕೂಡದು ಎಂದಿದ್ದರು. ನನ್ನ ಬೆನ್ನು ಸರಿಯಿರಲಿಲ್ಲ. ನನಗೆ 'ಸಿಲಿಕೊಸಿಸ್' ಆಗಿತ್ತು. ಬೆನ್ನು ಬಾಗಿತ್ತು. ಅದರಿಂದ ಇಡೀ ಮೈ ವಿಕಲ ವಾಗಿತ್ತು. ನಮ್ಮ ಮೈ ರಚನೆ ಎಷ್ಟು ಸೂಕ್ಷ್ಮ, ಎಷ್ಟು ಸಮತೋಲನವಾಗಿದೆ ಎಂದು ಯೋಚಿಸಿದರೆ ಆಶ್ಚರ್ಯ ವಾಗುತ್ತದೆ.

ನನ್ನ ಎಡಗೈಯಲ್ಲಿ ಈಗಲೂ ಸ್ವಾಧೀನ ಇಲ್ಲ. ನನಗೆ ಈ ಕೈ ಯಲ್ಲಿ ಒಡಿದುಕೊಳ್ಳಲಾಗುತ್ತದೆ ಆದರೆ ಬೆರಳುಗಳನ್ನು ಚಲಿಸಲಾಗುವುದಿಲ್ಲ. ನನಗೆ ಈ ಕೈಯನ್ನು ಎತ್ತುವುದೂ ಕಷ್ಟ, ಏಕೆಂದರೆ ನನ್ನ ಭುಜವು 'ಡಿಸ್ಲೊಕೇಟ್' ಆಗಿದೆ. ನನ್ನ ದೇಹದ ಬಲ ಭಾಗಕ್ಕೆ ಶಕ್ತಿ ಕಮ್ಮಿ. ನನ್ನ ಬಲಗಾಲು ಮತ್ತು ಎಡಗೈ ಎರಡೂ ಬಹಳ ಸ್ವಾಧೀನವಿಲ್ಲದಾಗಿವೆ. ಕಾಲ ಕ್ರಮೇಣ ನನ್ನ ಬಲಗೈ ಸರಿ ಹೋಗಿ ಈಗ ಅದೇ ನನ್ನ ಅತ್ಯಂತ ಶಕ್ತಿಯುತ ಅಂಗವಾಗಿದೆ. ಬೆರಳುಗಳು ಇನ್ನೂ ಸರಿಹೋಗಿಲ್ಲ. ಆದರೂ ನಾನು ನನ್ನ ಬಲಗೈಯಿಂದ ಎಲ್ಲಾ ಮಾಡಬಲ್ಲೆ. ಬಹುಶಃ ನಮ್ಮ ದೇಹಕ್ಕೆ ಒಂದು ಕುಂದು ಬಂದರೆ ಅದನ್ನು ಸರಿತೂಗಿಸಲು ಮತ್ತೊಂದು ಅಂಗ ಶಕ್ತಿಯುತ ವಾಗುತ್ತದೆಎಂದು ತೋರುತ್ತದೆ. ನಾವು ಸಹಜವಾಗಿ ಮತ್ತೊಂದು ಮಾಂಸಖಂಡವನ್ನು ನಮ್ಮ ಕೆಲಸಕ್ಕೋಸ್ಕರ ಉಪಯೋಗಿಸಲು ಕಲಿತುಕೊಳ್ಳುತ್ತೇವೆ. ಇದನ್ನು ನಮಗೆ ಯಾರೂ ಹೇಳಿಕೊಡುವುದಿಲ್ಲ. ನಮಗೆ ತಿಳಿದಿರುವುದಕ್ಕಿಂತ ಹೆಚ್ಚಾಗಿ ನಮ್ಮಲ್ಲಿ ನಮ್ಮ ಜೀವವನ್ನು ಉಳಿಸಿಕೊಳ್ಳುವ ಶಕ್ತಿ ಇದೆ ಎಂದು ತೋರುತ್ತದೆ.

ಡಾ. ಕತ್ರಕ್ ಅವರ ಕಾಯಿಲೆಯನ್ನು ಗುಣ ಮಾಡುವ ವಿಧಾನ ಬಹಳ ಚೆನ್ನಾಗಿತ್ತು. ನನ್ನ ಅಮ್ಮನಿಗೆ 'ಫಿಸಿಯೋಥೆರಾಪಿ' ಕಲಿಸಿಕೊಟ್ಟು ಅವರು ನನ್ನ ಆರೈಕೆಗೆ ಬೇಕಾದ ಎಲ್ಲಾ ಸೇವೆಗಳೂ ನನಗೆ ಸಿಗುವಂತೆ ಖಚಿತ ಪಡಿಸಿಕೊಂಡರು. ಅವರು ನನಗೆ 'ಹೈಡ್ರೋಥೆರಾಪಿ' ಕೂಡ ಮಾಡ ಹೇಳಿದರು, ಏಕೆಂದರೆ, ನೀರಿನಲ್ಲಿ ನಮ್ಮ ದೇಹದ ತೂಕ ಕಮ್ಮಿಯಾಗುವುದರಿಂದ, ಅದರಲ್ಲಿ ಅರ್ಧ ಘಂಟೆ ವ್ಯಾಯಾಮ ಮಾಡುವುದು ಹೊರಗೆ ಎರಡು ಘಂಟೆ ವ್ಯಾಯಾಮ

ಮಾಡಿದಷ್ಟು ಪರಿಣಾಮಕಾರಿ. ನಮ್ಮ ಅತ್ತೆ ಮಾವ ನನಗೋಸ್ಕರ ಅವರ ಮನೆಯ ಥಾರಸಿಯಮೇಲೆ ಒಂದು ಸ್ಪೆಷಲ್ ಟ್ಯಾಂಕ್ ಕಟ್ಟಿಸಿಕೊಟ್ಟರು. ಪ್ರತಿದಿನ ನಾನು ಬೆಳಿಗ್ಗೆ ಆ ಟ್ಯಾಂಕಿನ ನೀರಿನಲ್ಲಿ ಬಿದ್ದುಕೊಂಡು ಬೊಂಬಾಯಿನ ಬಿಸಿಲಿನಲ್ಲಿ ಎರಡು ಘಂಟೆಗಳನ್ನು ಕಳೆಯುತ್ತಿದ್ದೆ.

ಇದೆಲ್ಲಾ ನನಗೆ ಬಹಳ ಸಹಾಯ ಮಾಡುತ್ತಿತ್ತು. ಆದರೆ ನಮ್ಮ ಅಮ್ಮನಿಗೆ ಬಹಳ ಕಷ್ಟ ಕೊಡುತ್ತಿತ್ತು. ಪಾಪ ಅವಳಿಗೆ ನನ್ನ ಆರೈಕೆಯ ಜೊತೆಗೆ ಅವಳ ಇತರ ಮಕ್ಕಳ ಚಿಂತೆಯೂ ಕಾಡುತ್ತಿತ್ತು. ನನ್ನ ಆರೈಕೆಯಲ್ಲಿ ಅವರನ್ನು ನಿರ್ಲಕ್ಷಿಸುತ್ತಿದ್ದೇನೆಯೇ ಎಂಬ ಯೋಚನೆ. ಅಮ್ಮ ಈ ರೀತಿಯ ಸಂದಿಗ್ಧ ಪರಿಸ್ಥಿತಿಯಲ್ಲಿದ್ದಾಗ ನಮ್ಮ ದೀ ಅತ್ತೆ ಅವಳ ಸಹಾಯಕ್ಕೆ ಬಂದರು. ಅವರ ಮನೆಯಲ್ಲಿ ಏನೇ ನಡೆದರೂ ಅದರಲ್ಲಿ ನನ್ನನ್ನು ಸೇರಿಸಿಕೊಳ್ಳುತ್ತಿದ್ದರು. ಕೆಲವು ಸಲ ಮಾಮ ನನ್ನನ್ನು ಎತ್ತಿಕೊಂಡು ಬೀಚಿಗೆ ಕರೆದು ಕೊಂಡು ಹೋಗುತ್ತಿದ್ದರು. ಅವರ ಮಕ್ಕಳು ನನ್ನನ್ನು ಎತ್ತಿಕೊಂಡು ಮೆಟ್ಟಿಲುಗಳನ್ನು ಇಳಿಸಿ ಅವರ ಗಾರ್ಡನ್ನಿನಲ್ಲಿದ್ದ ಉಯ್ಯಾಲೆಯಲ್ಲಿ ಕೂಡಿಸಿ ಆಡಿಸುತ್ತಿದ್ದರು.

೧೯೪೬ ರಲ್ಲಿ ನನಗೆ ಕಮಲಾ ನಿಮ್ಕರ್ ಎಂಬ ಅಮೇರಿಕನ್ ಹೆಂಗಸಿನ ಪರಿಚಯವಾಯಿತು. ಅವಳು ಅಲ್ಲಿ 'ಆಕ್ಯುಪೇಶನಲ್ ಥೆರಾಪಿ' ಯಲ್ಲಿ ಪದವಿಯನ್ನು ಪಡೆದು ಭಾರತಕ್ಕೆ ಹಿಂತಿರುಗಿದ್ದಳು ಮತ್ತು ನಮ್ಮ ದೀ ಅತ್ತೆಗೆಬಹಳ ಪರಿಚಯವಿದ್ದವಳು. ಅವರಿಬ್ಬರೂ ಬಿಜಾಪುರದಲ್ಲಿ ಬರವಿದ್ದಾಗ ಅಲ್ಲಿನ ಪೀಡಿತರಿಗಾಗಿ ಹಣ ಸಂಗ್ರಹಿಸಿದ್ದರು. ನಾನೇ ಅವಳಿಗೆ ಮೊದಲನೆಯ ಪೇಷೆಂಟ್. ದೀ ಅತ್ತೆಯ ಮನೆಗೆ ಬಂದು ನನಗೆ ವ್ಯಾಯಾಮ ಹೇಳಿಕೊಡುತ್ತಿದ್ದಳು. ಇದರಿಂದ ನನ್ನ ಮಾಂಸಖಂಡಗಳಿಗೆ ಶಕ್ತಿಬರುತ್ತಿತ್ತು. ಕಮಲಾ ನಿಮ್ಕರ್ ಭಾರತದಲ್ಲಿ 'ಆಕ್ಯುಪೇಶನಲ ಥೆರಾಪಿ' ಯನ್ನು ಪ್ರಾರಂಭಿಸಿದ 'ಪಯೋನೀರ್'. ಇಂದಿಗೂ ಅವಳ ಹೆಸರಿನಲ್ಲಿರುವ ವಿಭಾಗಗಳು ಸಕ್ರಿಯವಾಗಿ ಜನಸೇವೆಯಲ್ಲಿ ತೊಡಗಿವೆ.

ಮುಂಬೈಯಲ್ಲಿ ಒಂದು ವರ್ಷದ ನಂತರ ನಮ್ಮ ಅಮ್ಮ ಮದರಾಸಿಗೆ ಹಿಂತಿರುಗಿ ಹೋಗಲು ನಿರ್ಧರಿಸಿದರು. ಆಗ ೧೯೪೭ ನೇ ವರ್ಷ. ದೇಶವೆಲ್ಲಾ ಸ್ವಾತಂತ್ರದ ಗುಂಗಿನಲ್ಲಿತ್ತು. ಎಲ್ಲೆಡೆಯೂ ಬಿಳಿಯ ಟೋಪಿಗಳು, ಖಾದಿ ಉಡುಪುಗಳು, ಮತ್ತು ಸ್ವದೇಶಿ ಚಿಹ್ನೆಗಳು ಕಂಡು ಬರುತ್ತಿದ್ದವು. ನಂತರ ಕೋಮುಗಲಭೆಗಳ ಮತ್ತು ಹಿಂಸಾಚಾರದ ಸುದ್ದಿಗಳು ಬರಲಾರಂಭಿಸಿದವು. ನನಗೆ ನಮ್ಮ ಮನೆಯವರೆಲ್ಲಾ ರೇಡಿಯೋ ಸುತ್ತಲೂ ಸೇರಿಕ್ಕೊಂಡು ಅದರಲ್ಲಿ ಬರುತ್ತಿದ್ದ ಭಯಂಕರ ಸುದ್ದಿಯನ್ನು ಕೇಳುತ್ತಿದ್ದಿದ್ದು ಚೆನ್ನಾಗಿ ನೆನಪಿದೆ. ಹೀಗೇ

೧೯೪೮ ರ ಜನವರಿ ೩೦ ರಂದು ರೇಡಿಯೋ ಜೋರಾಗಿ ಮೋಹನದಾಸ ಕರಮಚಂದ್ ಗಾಂಧಿಗೆ ಗುಂಡಿಟ್ಟುಕೊಂದ ಸುದ್ದಿಯನ್ನೂ ತಿಳಿಸಿತು. ನಮ್ಮ ತಂದೆ ಮನೆಯವರಿಗೆಲ್ಲಾ ಈ ಸುದ್ದಿಯನ್ನು ತಿಳಿಸಿದರು. ಎಲ್ಲರೂ ದುಃಖದಲ್ಲಿ ಮುಳುಗಿದೆವು. ರೇಡಿಯೋದಲ್ಲಿ ನ್ಯೂಸ್ ಓದುವ ಮೆಲ್ವಿಲ್ ಡಿಮೆಲ್ಲೋ ಗಾಂಧಿಯ ಕೊನೆಯ ಪಯಣವನ್ನು ವರ್ಣಿಸಿದ್ದನ್ನು ಎಲ್ಲರೂ ಕೇಳಿದೆವು. ನಮ್ಮ ಮೈ ಮರಗಟ್ಟಿತ್ತು. ಮಮ್ಮಿ ರೇಡಿಯೋಗೆ ಅಂಟಿಕೊಂಡುಕುಳಿತಿದ್ದಳು. ಅಡಿಗೆಯ ಮನೆಯು ಗಾಂಧಿಗೆ ಗೌರವಾರ್ಥವಾಗಿ ಮುಚ್ಚಲಾಗಿತ್ತು. ಮಮ್ಮಿ ಅಳುತಿದ್ದಳು ಮತ್ತು ಮಧ್ಯೆ ಮಧ್ಯೆ ನಾಥೂರಾಂ ಗೋಡ್ಸೆಯನ್ನು ಬೈಯ್ಯುತಿದ್ದಳು. ನನ್ನ ತಂಗಿ ಕುಮ್ಮುಗೆ ಆಗ ಆರು ವರ್ಷ. ಅವಳಿಗೆ ಬೇಜಾರಾಗಿತ್ತು, ಪದೇ ಪದೇ ಆಯಿತಾ ಇನ್ನೂ ಇದೆಯಾ ಅಂತ ಕೇಳುತಿದ್ದಳು.

ಪ್ರತಿ ತಿಂಗಳೂ ಡಾ. ಕತ್ರಕ್‌ಗೆ ನನ್ನನ್ನು ತೋರಿಸಲಾಗಲಿಲ್ಲ. ನಮ್ಮತಂದೆ ನನ್ನ ಫೋಟೋ ತೆಗೆದು ಅವರಿಗೆ ಕಳುಹಿಸಿತ್ತಿದ್ದರು. ನನ್ನ ವ್ಯಾಯಾಮ ಪ್ರತಿದಿನ ಮನೆಯಲ್ಲಿ ನಡೆಯುತ್ತಿತ್ತು. ವರ್ಷದಲ್ಲಿ ಎರಡು ಸಲ ನನ್ನನ್ನು ಮುಂಬೈಗೆ ಡಾಕ್ಟರ್ ಕತ್ರಕ್‌ಗೆ ತೋರಿಸಲು ಕರೆದುಕೊಂಡು ಹೋಗುತ್ತಿದ್ದರು. ಮದರಾಸಿನಲ್ಲೂ ನನಗೋಸ್ಕರ ಒಂದು ಈಜು ಕೊಳ ಕಟ್ಟಿಸಿದ್ದರು. ಕೆಲವುಸಲ ನನ್ನನ್ನು ಮರಿನಾ ಬೀಚಿನ ಈಜು ಕೊಳಕ್ಕೆ ಕರೆದು ಕೊಂಡು ಹೋಗುತ್ತಿದ್ದರು. ನನ್ನ ತಂದೆ ತಾಯಿಗೆ ದಿಕ್ಕೇ ತೋಚದಂತಾಯಿತು. ಪೋಲಿಯೋ ವೈರಸ್ ಬಗ್ಗೆ ತಿಳಿದುಕೊಳ್ಳುವುದು ಒಂದಾದರೆ, ಪೋಲಿಯೋ ಆಗಿರುವ ತಮ್ಮ ಮಗಳು ಗುಣವಾಗಿ ಸರಿಹೋಗುತ್ತಾಳೆ ಎಂಬ ಆಸೆ ಮತ್ತೊಂದಲ್ಲವೇ? ಅವರು ಯಾರು ಎಲ್ಲಿ ಪೂಜೆ ಮಾಡಿದರೆ ಒಳ್ಳೆಯದು ಎಂದು ಹೇಳಿದರೋ ಅಲ್ಲೆಲ್ಲಾ ನನ್ನನ್ನು ಕರೆದು ಕೊಂಡು ಹೋಗಿ ಪೂಜೆ ಮಾಡಿಸಿದರು. ಯಾವಾಗಲೂ ಯಾವುದಾದರೂ ಒಂದು ದೇವಸ್ಥಾನವೋ ಅಥವಾ ಒಬ್ಬ ಸಾಧು ಸಂತನೋ, ಅಥವಾ ಫಕೀರನೋ ನನ್ನನ್ನು ಗುಣಪಡಿಸುತ್ತಾನೆ ಎಂದು ನಮ್ಮ ಮಿತ್ರರೋ ಹಿತೈಷಿಗಳೊ ಹೇಳುತ್ತಿದ್ದರು. ಕೆಲವುಸಲ ಅವರನ್ನು ಮನೆಗೆ ಕರೆದುಕೊಂಡೂ ಬರುತ್ತಿದ್ದರು. ಈ ದಿವ್ಯ ಅನುಗ್ರಹದಿಂದ ಕಾಯಿಲೆಯನ್ನು ಗುಣಪಡಿಸುವ ಎಲ್ಲಾ ಪ್ರಯೋಗಗಳಿಗೂ ನಾನೇ 'ಗಿನ್ನಿ ಪಿಗ್' ಆಗಿದ್ದೆ. ೧೯೪೮ ರಲ್ಲಿ ನನ್ನನ್ನು ಪಾಂಡಿಚೇರಿಯಲ್ಲಿ ಶ್ರೀ ಅರಬಿಂದೋ ಆಶ್ರಮಕ್ಕೆ ಕರೆದುಕೊಂಡು ಹೋದರು. ನಮಗೆ ಆ ಆಶ್ರಮದಲ್ಲಿ ಅವರ ಸ್ವಚ್ಛತೆ ಮತ್ತು ನಿಶಬ್ದತೆಯ ನಿಯಮಗಳೊಡನೆ ಇರುವುದು ಕಷ್ಟವಾಯಿತು. ಅದಕ್ಕೇ ನಾವು ಬೇರೊಂದು ಫ್ರೆಂಚ್ ರೀತಿಯ ಬಂಗಲೆಯಲ್ಲಿ ಉಳಿದುಕೊಂಡೆವು. ನನಗೆ ನಮ್ಮ ತಂದೆಯು ನನ್ನನ್ನು ಎತ್ತಿಕೊಂಡು ಕಂಭದ ಸುತ್ತಲೂ ಇರುವ ಮೆಟ್ಟಲುಗಳನ್ನು ಹತ್ತಿ ನನ್ನನ್ನು ದರ್ಶನಕ್ಕೆ ಕರೆದುಕೊಂಡು ಹೋದದ್ದು ನೆನಪಿದೆ. ಆ ಸ್ಥಳವು ನಿಶಬ್ದವಾಗಿತ್ತು

ಮತ್ತು ದರ್ಶನಕ್ಕಾಗಿ ಒಬ್ಬರ ಹಿಂದೆ ಒಬ್ಬರು ಹೋಗುತ್ತಿದ್ದರು. ನನಗೆ ಶ್ರೀ ಅರಬಿಂದೋ ಮತ್ತು ಮಾತಾಜೀ ಯವರ ಮುಖಗಳು ಚೆನ್ನಾಗಿ ನೆನಪಿದೆ. ನನ್ನನ್ನು ತಿರುವಣ್ಣಾಮಲೈಯಲ್ಲಿರುವ ರಮಣ ಮಹರ್ಷಿಯವರ ಆಶ್ರಮಕ್ಕೂ ಕರೆದುಕೊಂಡು ಹೋಗಿದ್ದರು. ನಮ್ಮ ಮನೆಯವರು ಈ ಅನುಭಾವಿಗಳ ಆಶೀರ್ವಾದದಿಂದ ನನ್ನ ಕಾಯಿಲೆಯು ಅತಿ ಶೀಘ್ರ ವಾಸಿಯಾಗುತ್ತದೆ ಎಂದು ಆಶಿಸಿದ್ದರು.

ಆಗ ನನಗೆ ಕೊಟ್ಟ 'ಕ್ಯಾಲಿಪರ್' ನೋಡಿದರೆ ಈಗ ನಾವು ಎಷ್ಟು ಸುಧಾರಿಸಿದ್ದೇವೆ ಎಂಬುದು ತಿಳಿಯುತ್ತದೆ. ಅದು ನನಗಿಂತ ಭಾರವಾಗಿತ್ತು ಮತ್ತು ಅದನ್ನು ವಿಶೇಷವಾಗಿ ಮುಂಬೈಯಿಂದ ತರಿಸಲಾಗಿತ್ತು. ನನ್ನ ಕಾಲಿಗೆ ಆ 'ಕ್ಯಾಲಿಪರ್' ಕಟ್ಟಿ, ನನ್ನನ್ನು ಮಂಚಕ್ಕೆ ಕಟ್ಟಿ, ಮಂಚವನ್ನು ನಿಧಾನವಾಗಿ ನಾನು ನಿಂತುಕೊಳ್ಳುವ ತನಕ ಬಗ್ಗಿಸಿದರು. ತಿಂಗಳಾನುಗಟ್ಟಲೆ ಮಲಗಿದ್ದ ನನ್ನನ್ನು ಒಮ್ಮೆಲೇ ನಿಲ್ಲಿಸಿದ್ದರಿಂದ ನನಗೆ ತಲೆ ಸುತ್ತಿತು. ಆದರೆ ಈಗ ಎಲ್ಲಾ ಹೊಸದಾಗಿ ಕಾಣ ತೊಡಗಿದವು.

ಡಾ. ಕತ್ರಕ್ ಅವರ ಸಲಹೆಯಂತೆ ನನ್ನ ತಂದೆ ತಾಯಿ ನನ್ನ ಬಗ್ಗೆ ಅತಿಯಾದ ಕಾಳಜಿ ವಹಿಸುವುದನ್ನು ಬಿಟ್ಟು ನನ್ನನು ಬಹಳ ಒಲ್ಲದ ಮನಸ್ಸಿನಿಂದ ನನ್ನ ಪಾಡಿಗೆ ಬಿಟ್ಟರು. ನಾನೇ ಸ್ನಾನ ಮಾಡಿಕೊಳ್ಳಲಾರಂಭಿಸಿದೆ, ಆದರೆ ನನಗೆ ನಾನೇ ಬಟ್ಟೆ ಹಾಕಿಕೊಳ್ಳಲು ಆಗುತ್ತಿರಲಿಲ್ಲ. ನನ್ನ ಕೈ ಗಳು ಇನ್ನೂ ಧೃಡವಾಗಿರಲಿಲ್ಲ. ಚಿಕ್ಕ ಕೆಲಸವೂ ಒಂದು ದೊಡ್ಡ ಪ್ರಯಾಸವಾಗಿತ್ತು. ಎಲ್ಲಾದಕ್ಕಿಂತ ಕಷ್ಟವಾದದ್ದು ನನ್ನ ಕೂದಲು. ನನಗೆ ದಟ್ಟವಾದ ಗುಂಗುರು ಕೂದಲಿತ್ತು. ಅದನ್ನು ಬಾಚಿಕೊಳ್ಳಲೋ, ಬ್ರಶ್ ಮಾಡಲೋ ಅದು ನನ್ನ ಕೈಗೆ ಎಟುಕುತ್ತಾ ಇರಲಿಲ್ಲ. ಪೋಲಿಯೋ ಬಂದನಂತರ ನನ್ನ ಸ್ವಾಸ್ಥ್ಯವು ಕ್ಷೀಣಿಸಿತ್ತು. ನನ್ನ ಮತ್ತು ಕುಮ್ಮುವಿನ ಸ್ವಾಸ್ಥ್ಯವು ಆಗಾಗ ಬಿಗಡಾಯಿಸುತ್ತಿತ್ತು. ನಮ್ಮ ತಂದೆ ತಾಯಿಯರಿಗೆ ನಮ್ಮಿಬ್ಬರನ್ನೂ ನೋಡಿಕೊಳ್ಳುವುದು ಕಷ್ಟವಾಯಿತು. ಜ್ವರ, ಶೀತ, ಕುಮ್ಮು ಸ್ಕೂಲಿನಿಂದ ಮನೆಗೆ ತಂದಿದ್ದ ಹೇನು, ನನ್ನ ಮೈಮೇಲೆ ಗುಳ್ಳೆಗಳು – ಈ ರೀತಿ ಏನಾದರೊಂದು ಆಗುತ್ತಲೇ ಇತ್ತು. ಆಂಟಿಬಿಯೋಟಿಕ್ಸ್ ಇಲ್ಲದ ಆ ಕಾಲದಲ್ಲಿ ಪ್ರತಿಯೊಂದೂ ಅಮ್ಮನಿಗೆ ಬಹಳ ಕಷ್ಟ ಕೊಡುತ್ತಿತ್ತು.

ನನಗೆ ಚೆನ್ನಾಗಿ ನೆನಪಿದೆ. ಒಂದು ಸಲ ನನಗೆ ಮೈಯೆಲ್ಲಾ ಕೀವು ತುಂಬಿದ ಗುಳ್ಳೆಗಳಾದವು, ಜೊತೆಗೆ ಜೋರಾದ ಜ್ವರ ಬೇರೆ. ಡಾಕ್ಟರ್‌ಗಳು ಹುಣ್ಣನ್ನು ಕ್ಲೀನ್ ಮಾಡುವ ಲೋಷನ್ ಮಾತ್ರ ಬರೆದು ಕೊಟ್ಟಿದ್ದರು. ಇದನ್ನೆಲ್ಲಾ ನೋಡುತ್ತಿದ್ದ ಮಮ್ಮೈಗೆ ಇದೆಲ್ಲಾ ಮಾಟ ಮಂತ್ರದಿಂದ ಎಂದು ತೋರಿತು. ಅವಳು ಶಾಸ್ತ್ರ ತಿಳಿದ ಒಬ್ಬ ಮಾಂತ್ರಿಕನನ್ನು ಕರೆತರುವುದಾಗಿ ಹೇಳಿದಳು. ಅವಳ ಮನಸ್ಸಿನಲ್ಲಿ ಅವನು ನನ್ನ ಮುಖದ ಮೇಲೆ 'ಸಿಂಹ' ಎಂದು ಬರೆದರೆ

ಈ ಮಾಟವು ಮೂರು ದಿನಗಳಲ್ಲಿ ಮಾಯವಾಗುವುದು ಎಂಬ ನಂಬಿಕೆ ಬಂದಿತ್ತು.ಅದ್ದರಿಂದ ಅವಳು ದಿನಾ ಸಂಪ್ರದಾಯದ ಹಂಗೆ ಒಂಬತ್ತು ಗಜದ ಸೀರೆಯನ್ನು ಉಟ್ಟುಕೊಂಡು, ನನ್ನನ್ನೂ ಕರೆದುಕೊಂಡು ಒಂದು ಆಟೋ ರಿಕ್ಷಾದಲ್ಲಿ – ಅದರ ಡ್ರೈವರ್ ಒಬ್ಬ ಕುಡುಕ ಮುದುಕ – ಮಾರ್ಕೆಟ್ಟಿಗೆ ಕರೆದುಕೊಂಡು ಹೋಗುತ್ತಿದ್ದಳು. ಅಲ್ಲಿ ಒಬ್ಬ ವಿಚಿತ್ರವಾದ ಮನುಷ್ಯ ನನ್ನ ಮುಖದಮೇಲೆ ಆ ಮಂತ್ರಿಸಿದ ಪದವನ್ನು ಬರೆಯುತ್ತಿದ್ದನು. ಈ ನಾಟಕ ನಡೆಯುತ್ತಲೇ ಇತ್ತು. ಕೊನೆಗೆ ಒಂದು ದಿನ ನನ್ನ ಗುಳ್ಳೆಗಳೆಲ್ಲಾ ಒಣಗಿದವು, ಅವುಗಳ ಹೊಟ್ಟು ಬಿದ್ದು ನನ್ನ ಚರ್ಮವು ಮೊದಲಿನಂತೆ ಸ್ವಚ್ಚವಾಯಿತು. ಯಾವುದು ನನ್ನ ಗುಳ್ಳೆಗಳನ್ನು ವಾಸಿಮಾಡಿತು? ಸಮಯವೋ, ಡಾಕ್ಟರ್ ಕೊಟ್ಟ ಲೋಷನ್ನೋ ಅಥವಾ ಸಿಂಹವೋ, ನೀವೇ ನಿರ್ಧರಿಸಿ.

ಮದರಾಸಿನಲ್ಲಿ ನಾವು ಮನೆ ಮಾಲೀಕರ ಮರ್ಜಿಯಂತೆ ಮನೆಯನ್ನು ಬದಲಾಯಿಸುವ ತೊಂದರೆಯ ಜೊತೆಯಲ್ಲಿ ಅಲ್ಲಿನ ಬಿಸಿಲಿನ ಬೇಗೆಯೂ ಸೇರಿಕೊಂಡಿತು. ಪ್ರತಿಯೊಂದು ಹೊಸ ಮನೆಯಲ್ಲೂ ಅಮ್ಮ ನಮಗೆ ಬೇಕಾದ ಬದಲಾವಣೆಗಳನ್ನು ಮಾಡಿಕೊಳ್ಳಬೇಕಾಗಿತ್ತು. ಕಾಯಿಲೆಯಿಂದ ಹಾಸಿಗೆ ಹಿಡಿದವರು ಒಬ್ಬರು ಮನೆಯಲ್ಲಿದ್ದರೆ, ಅವರ ಆರೈಕೆ ಯಲ್ಲಿ ಅನೇಕ ವಿಧವಾದ ಕಷ್ಟಗಳನ್ನು ಎದುರಿಸಬೇಕಾಗುತ್ತದೆ – ಮುಖ್ಯವಾಗಿ ಕಕ್ಕಸ್ಸಿನ ವಿಷಯದಲ್ಲಿ. ಈ ವಿಷಯಕ್ಕೆ ಯಾಕೆ ಪ್ರಾಧಾನ್ಯವೇ ನೀಡುವುದಿಲ್ಲವೋ, ಆಶ್ಚರ್ಯವಾಗುತ್ತದೆ. ಆ ಕಾಲದಲ್ಲಿ ಕಮ್ಮೋಡ್ ಇರುವ ಕಕ್ಕಸ್ಸುಗಳು ಹೆಚ್ಚು ಮನೆಗಳಲ್ಲಿ ಇರಲಿಲ್ಲ. ಈಗಲೂ ಈ ರೀತಿಯ ಪೇಷೆಂಟ್ಸ್ ಇರುವ ಮನೆಯಲ್ಲಿ ಬೆಡ್ ಪ್ಯಾನ್, ಕೊಮ್ಮೊಡ್, ಪಾಟ್ಟಿ ಇತ್ಯಾದಿಗಳನ್ನು ಉಪಯೋಗಿಸುವುದು ತಿಳಿದಿರುವುದಿಲ್ಲ. ಈಗಲೂ ನಾನು ಅಂಗ ವಿಕಲತೆ ಇರುವರನ್ನು ಸಂದರ್ಶಿಸಿದರೆ ಮೊದಲು ಕೇಳುವುದು ಹೇಗೆ ಅವರು ಈ ವಿಷಯವನ್ನು ಸಂಭಾಳಿಸುತ್ತಾರೆ ಯೆಂದು?

ನಮ್ಮ ಮನೆಯಲ್ಲಿ ದೇಸಿ ಬಗೆಯ ಕಕ್ಕಸ್ಸು ಇದ್ದುದರಿಂದ ನಾನು 'ಪಾಟ್ಟಿ'ಯನ್ನು ಉಪಯೋಗಿಸಬೇಕಾಯಿತು. ಇದು ಅಷ್ಟು ಸುಲುಭವಾಗಿರಲಿಲ್ಲ. 'ಪಾಟ್ಟಿ'ಯ ಮೇಲೆ ಕೂರಲು ನಾನು ಒಂದು ಸ್ಟೂಲಿನ ಮೇಲೆ ಕುಳಿತು ಅದರಿಂದ ಕಿಟಕಿಯಲ್ಲಿ ಕುಳಿತು ಅಲ್ಲಿಂದ 'ಪಾಟ್ಟಿ'ಗೆ ಜಾರಬೇಕಾಗಿತ್ತು. ಯಾರ ಸಹಾಯವೂ ಬೇಡದೆ ಇರುಲು, ನಾನೇ ಈ ಸರ್ಕಸ್ಸೆಲ್ಲಾ ಮಾಡುತ್ತಿದ್ದೆ. ನಾನು ಸ್ವಲ್ಪ ದೊಡ್ಡವಳಾದಾಗ ನನಗೆ ಅಮ್ಮಾನೇ ನಾನು ಪ್ರತಿಸಲ 'ಪಾಟ್ಟಿ' ಉಪಯೋಗಿಸಿದಾಗಲೂ ಅದನ್ನು ತೊಳೆಯುತ್ತಾಳೆ ಎಂದು ತಿಳಿಯಿತು.ನಮ್ಮ ತಂದೆ ಚಿಕ್ಕ ವಿಷಯಗಳಿಗೂ ಬಹಳ ಗಮನ ಕೊಡುತ್ತಿದ್ದರು. 'ಬೆಡ್ ಪ್ಯಾನ್' ಚೆನ್ನಾಗಿ

ತೊಳೆಬದೆಯೆ? ಅದನ್ನು ಚೆನ್ನಾಗಿ ಒಣಗಿಸಿದೆಯೇ? ವಾರಕ್ಕೊಂದು ಸಲ ಅವರೇ ಅದನ್ನು ತೊಳೆಯುವರು. ನನ್ನ ತಂದೆ ತಾಯಿಯರು ಈ ರೀತಿ ಕೆಲಸಗಳನ್ನು ಮಾಡುವುದು ನನಗೆ ಇಷ್ಟವಾಗುತ್ತಿರಲಿಲ್ಲ. ಆದರೆ ಏನು ಮಾಡುವುದು ಎಂದು ತಿಳಿಯುತ್ತಿರಲಿಲ್ಲ.

ಒಂದು ವಿಧದಲ್ಲಿ ಅಮ್ಮನಿಗಿಂತ ನಮ್ಮ ತಂದೆಯೇ ಬಹಳ ನೋವು ಅನುಭವಿಸುತ್ತಿದ್ದರು. ಅಮ್ಮನಿಗೆ ಅವಳ ದುಃಖವನ್ನು ತೋಡಿಕೊಳ್ಳಲು ಅವಳ ಮನೆಯವರು ಮತ್ತು ಸ್ನೇಹಿತರಿದ್ದರು. ನಮ್ಮ ತಂದೆ ಹೆಚ್ಚು ಮಾತಿನವರಲ್ಲ. ಕೆಲವರೊಂದಿಗೆ ಮಾತ್ರ ಮಾತಾಡುತ್ತಿದ್ದರು. ನಮ್ಮ ತಾಯಿ ನನ್ನ ನಿಜ ಸ್ಥಿತಿಯನ್ನು ಒಪ್ಪಿಕೊಂಡು ಅದಕ್ಕೆ ಏನೇನು ಮಾಡಬೇಕೋ ಅದೆಲ್ಲಾ ಮಾಡಲು ತಯಾರಾಗಿದ್ದಳು. ಆದರೆ ನಮ್ಮ ತಂದೆಗೆ ನನ್ನ ಭವಿಷ್ಯದ ಬಗ್ಗೆಯೇ ಚಿಂತೆ. ಅವರ ಕಾಲದ ನಂತರ ನಾನು ಹೇಗೆ ಜೀವಿಸುತ್ತೇನೆ? ಅವರು ತಮ್ಮ ಕಾಫಿ ತೋಟದಲ್ಲಿ ಇರಬೇಕೆಂದು ಇದ್ದ ಯೋಚನೆಯನ್ನು ಬಿಟ್ಟರು, ಯಾಕೆಂದರೆ ಅವರಿಗೆ ನಾನು ಅಲ್ಲಿ ಇರಲಾರೆ ಎಂದೆನಿಸಿತ್ತು. ಎಷ್ಟೋಸಲ ನನಗೆ ನಾವು ಕಾಫಿ ತೋಟದಲ್ಲಿದ್ದಿದ್ದರೆ ಹೇಗೆ ನಾನು ಅದರಲ್ಲೆಲ್ಲಾ ಓಡಿ ಆಡುತಿದ್ದೆ ಎಂದು ಅನ್ನಿಸುತ್ತದೆ. ನಮ್ಮ ತಂದೆಗೆ ನನ್ನ ಅಕ್ಕ ತಂಗಿಯರು ಸ್ಕೂಲಿಗೆ ಹೊಗುತ್ತಾರೆ ಆದರೆ, ನನಗೆ ನನ್ನ ಈ ಕಾಯಿಲೆಯಿಂದ ಹೋಗಲಾಗುವುದಿಲ್ಲವೆಂಬುದು ಬಾಧಿಸುತ್ತಿದ್ದಿರಬೇಕು. ನನಗೇನೋ ಅಂಟು ರೋಗವಿದ್ದಂತೆ, ಇಂದಿಗೂ ಅನೇಕರು ವಿಕಲಾಂಗರನ್ನು ಕಂಡರೆ ರೋಗಿಗಳಂತೆ ಕಾಣುತ್ತಾರೆ. ಅವರೊಂದಿಗೆ ಹೇಗೆ ಮಾತನಾಡಬೇಕು ಅಥವಾ ವರ್ತಿಸಬೇಕು ಎಂಬುದು ತಿಳಿಯದೆ ಮುಜುಗರ ಪಡುತ್ತಾರೆ.

ನಾನು ಈ ಕಕ್ಕಸ್ಸಿನ ಸಮಸ್ಯೆಯೊಡನೆ ಹೋರಾಡುತ್ತಿದ್ದೆ, ನನಗೆ ಒಂದು ಜಾಗದಿಂದ ಮತ್ತೊಂದು ಜಾಗಕ್ಕೆ ಚಲಿಸುವುದು ದೊಡ್ಡ ಸಮಸ್ಯೆಯಾಗಿ ಎದುರಾಯಿತು. ಆಗಿನ ಕಾಲದಲ್ಲಿ 'ವ್ಹೀಲ್ ಚೇರ್' ಬಗ್ಗೆ ಯಾರಿಗು ಇನ್ನೂ ತೋಚಿರಲಿಲ್ಲ. ನಾವು ಹೊರಗೆ ಹೋದಾಗಲೆಲ್ಲಾ ನಮ್ಮ ತಂದೆ ನನ್ನನ್ನು ಎತ್ತಿಕೊಂಡು ಹೋಗುತ್ತಿದ್ದರು. ನಾನು ಬೆಳೆಯುತ್ತಾ ನನ್ನ ತೂಕವು ಹೆಚ್ಚಾದಂತೆ ನನ್ನನ್ನು ಎತ್ತಿಕೊಳ್ಳುವುದು ಅವರಿಗೆ ಕಷ್ಟವಾಗುತ್ತಿತ್ತು.

ನನಗೆ ಹನ್ನೊಂದು ವರ್ಷಗಳಾಗುವವರೆಗೆ ನಾವು ಒಂದು ಚಿಕ್ಕ ಮನೆಯಲ್ಲಿದ್ದೆವು. ಅದರಲ್ಲಿ ನಾನು ಮಂಡಿ ಹಾಕಿಕೊಂಡು ಓಡಾಡುತ್ತಿದ್ದೆ. ನನ್ನನು ಇಂದು ನೋಡುವವರು ನಾನು ಹುಟ್ಟಿದಾಗಿನಿಂದ ಮೋಟರ್ ಇರುವ ವ್ಹೀಲ್ ಚೇರನ್ನೇ ಉಪಯೋಗಿಸುತ್ತಿದ್ದೇನೆ ಎಂದುಕೊಳ್ಳುವುದು ಸಹಜ. ಅವರಿಗೆ ನಾನು ಆ ಕಾಲದಲ್ಲಿ ನನ್ನ ಪೈಜಾಮ ಕುರ್ತಾದೊಂದಿಗೆ ಮನೆಯೆಲ್ಲೆಲ್ಲಾ ತೆವಳಿಕೊಂಡು ಮನೆಯನೆಲವನ್ನು ಸಾರಿಸುತ್ತಿದ್ದೆ ಎಂದು ಹೇಳುತ್ತೇನೆ.

ನನಗೆ ಹತ್ತು ವರ್ಷಗಳಾಗುವ ವೇಳೆಗೆ ನನ್ನ ವಿಕಲತೆಯ ಬಗ್ಗೆ ನನಗೆ ಸಂಕೋಚವಾಗುತ್ತಿತ್ತು. ಮನೆಯವರ ಮುಂದೆ ತೆವಳುವುದು ಪರವಾಗಿಲ್ಲ ಆದರೆ ಬೇರೆ ಯಾರಾದರೂ ಬಂದರೆ ನಾನು ಅವರು ಹೋದ ನಂತರವೇ ರೂಮಿನಿಂದ ಹೊರಗೆಬರುತ್ತಿದ್ದೆ. ಯಾಕೆಂದರೆ, ನನ್ನ ಕೈ ಕಾಲುಗಳ ವಿಕಲತೆಯನ್ನು ನೋಡಿದರೆ ಅವರು ಅಮ್ಮನನ್ನು ಕೊನೆಯಿಲ್ಲದ ಪ್ರಶ್ನೆಗಳನ್ನು ಕೇಳುತ್ತಿದ್ದರು ಎಂದು ನನಗೆ ಗೊತ್ತಿತ್ತು.

ಒಂದು ಹಂತದಲ್ಲಿ ನನ್ನ ಮನಸ್ಸು ಆಧ್ಯಾತ್ಮದ ಕಡೆ ತಿರುಗಿತು. ಪ್ರತಿ ಶುಕ್ರವಾರ ನಮ್ಮ ಮನೆಯಲ್ಲಿ ನಡೆಯುತ್ತಿದ್ದ ಭಜನೆಗಳು ಇದಕ್ಕೆ ಕಾರಣವಿರಬಹುದು. ನನ್ನ ರೂಮಿನಲ್ಲಿ ಒಂದು ಮೂಲೆಯಲ್ಲಿ ಒಂದು ಪುಟ್ಟ ದೇವಾಲಯ ಮಾಡಿದ್ದೆ. ಪ್ರತಿ ಶುಕ್ರವಾರ ಆ ದೇವಸ್ಥಾನದಲ್ಲಿ ಮಂಟಪ ಕಟ್ಟಿ ಅಲಂಕಾರಮಾಡುತ್ತಿದ್ದೆ. ಮುನಿಸ್ವಾಮಿ ಎಂಬ ನಮ್ಮ ಮನೆಕೆಲಸದ ಚಿಕ್ಕ ಹುಡುಗನಿದ್ದ. ಆವನು  ಹೂವು, ಗಿಡಗಳನ್ನು ತಂದು ನನ್ನ ಶುಕ್ರವಾರದ ಪೂಜೆಗೆ ಸಹಾಯ ಮಾಡುತ್ತಿದ್ದ. ಜೊತೆಗೆ ನೈವೇದ್ಯಕ್ಕೆ ಮಮ್ಮ್ಮಿತಯಾರಿಸಿದ ಪ್ರಸಾದ ಇರುತ್ತಿತ್ತು. ಕುಮ್ಮು ಅವಳ ಗೆಳೆಯರೊಂದಿಗೆ ಆಟದಲ್ಲಿ ಮಗ್ನಳಾಗಿರುತ್ತಿದ್ದರಿಂದ ನಾನು ನನ್ನ ವಯಸ್ಸಿನವಳಾದ ಕುಟ್ಟಿಯನ್ನು – ನಮ್ಮ ಮನೆಯ ಕೆಲಸದವಳ ಮಗಳು – ಜೊತೆಗಾರ್ತಿ ಮಾಡಿಕೊಂಡಿದ್ದೆ, ಅಲ್ಲದೆ ಅವಳು ಬೇಕಾದ ಚಿಕ್ಕ ಪುಟ್ಟ ಕೆಲಸಗಳನ್ನು ಮಾಡಿಕೊಡುತ್ತಿದ್ದಳು. ಇದರಲ್ಲಿ ನನ್ನ ಪರವಾಗಿ ದೇವರನ್ನು ಪ್ರಾರ್ಥಿಸುವುದೂ ಒಂದಾಗಿತ್ತು. ಕುಟ್ಟಿ ನನ್ನ ಪರವಾಗಿ ಗಣೇಶನನ್ನು ಅನೇಕಸಲ ಪ್ರಾರ್ಥಿಸಿ ತೆಂಗಿನಕಾಯಿ ಒಡೆದಿದ್ದಾಳೆ. ಇದಕ್ಕೆ ಹೆಚ್ಚೇನೂ ಖರ್ಚಾಗುತ್ತಿರಲಿಲ್ಲ. ಆಗ ಎರಡೇ ಆಣೆ ಆಗುತ್ತಿತ್ತು.

ಆಗ ನಮ್ಮ ಮನೆಯಲ್ಲಿ ಯಾವಾಗಲೂ ಚಿಕ್ಕ ಹುಡುಗರು ಕೆಲಸಮಾಡಲು ಇರುತ್ತಿದ್ದರು. ಅವರಲ್ಲಿ ಕೆಲವರು ವಿಕಲಾಂಗರಾಗಿದ್ದರು. ಆಗಿನ ಕಾಲದಲ್ಲಿ ಚಿಕ್ಕ ಹುಡುಗರನ್ನು ಕೆಲಸಕ್ಕೆ ಇಟ್ಟುಕೊಳ್ಳುವುದು  ವಾಡಿಕೆಯಾಗಿತ್ತು. ಒಂದುಸಲ ನಮ್ಮ ತಂದೆಯು, ಅವರ ಸಾಮಾನನ್ನು ಸ್ಟೇಷನ್ನಿನಿಂದ ಮನೆಗೆ ತಂದ ಹುಡುಗನನ್ನು, ನಮ್ಮ ಮನೆಯಲ್ಲೇ ಇರ ಹೇಳಿದರು. ಅವನು ಯಾವುದೋ ದೂರದ ಹಳ್ಳಿಯಿಂದ ಬಂದಿದ್ದ ಮತ್ತು ಕಾಲು ವಿಕಲವಾಗಿ ಕುಂಟುತ್ತಿದ್ದ. ಅವನು ನಮ್ಮ ಮನೆಯಲ್ಲಿ ಸ್ವಲ್ಪದಿನಗಳಿದ್ದ ನಂತರ ನಮ್ಮ ತಾತ ಅವನನ್ನು ಬೆಂಗಳೂರಿಗೆ ಕರೆದುಕೊಂಡು ಹೋದರು. ಅಲ್ಲಿ ಅವನು ಮುಂದಿನ ಹದಿನೆಂಟು ವರ್ಷಗಳಿದ್ದ. ಅವರು ಬಹಳ ಶಿಸ್ತಿನವರು. ಅವರಿಗೆ ಎಲ್ಲಾ ಸರಿಯಾಗಿ ಓರಣವಾಗಿ ಇರಬೇಕು. ಹೊಳೆಯುತ್ತಿರುವ ಕಪ್ ಸಾಸರ್ ನಲ್ಲಿ ಟೀ ತರಬೇಕು, ಇತ್ಯಾದಿ ಇಂಗ್ಲಿಷ್ ಶೈಲಿಯವರು. ಊಟಿಯಲ್ಲಿ ನಮ್ಮ ತಂದೆ ಒಬ್ಬ 'ಶಿಂಗ್ರಿ' ಎನ್ನುವ ಹುಡುಗನ್ನ ಕೆಲಸಕ್ಕಿಟ್ಟುಕೊಂಡಿದ್ದರು.

ಅವನಿಗೆ ಕಾಲು 'ಕ್ಲಬ್ ಫುಟ್' ಆಗಿತ್ತು. ವಿಕಲಾಂಗರನ್ನು ಕೆಲಸಕ್ಕೆ ಇಟ್ಟುಕೊಳ್ಳುವುದು ಪ್ರಜ್ಞಾಪೂರ್ವಕವಾಗಿರಲಿಲ್ಲ. ನನ್ನ ತಂದೆ ತಾಯಿಯರ ಕರ್ಮವಿರಬೇಕು. ಮುಂದೆ ನನ್ನ ವಿಕಲಾಂಗತೆಗೆ ತಯಾರಾಗುತ್ತಿದ್ದರೇನೊ?

ನನಗೆ ಒಂಬತ್ತು ವಯಸ್ಸಾದಾಗ ನಾನು ಋತುಮತಿಯಾದೆ. ನನಗೆ ಗಾಬರಿಯಾಯಿತು. ಕುಟ್ಟಿಯನ್ನು ದೇವಸ್ಥಾನಕ್ಕೆ ಕಳುಹಿಸಿ ನನ್ನ ಈ ಕಾಹಿಲೆಯನ್ನು ಗುಣಪಡಿಸಲು ಪ್ರಾರ್ಥಿಸಿದ್ದಾಯಿತು. ಮುಂದಿನ ತಿಂಗಳು ಮತ್ತೆ ಈ ರೀತಿಯಾದಾಗ ನಾನು ಮನೆಯವರಿಗೆ ತಿಳಿಸಿದೆ. ಅವರಿಗೆ ಹೊಸದೊಂದು ಚಿಂತೆ ಶುರುವಾಯಿತು. ಈಗ ನಾನು ಈ ಸ್ಥಿತಿಯನ್ನೂ ಸಂಭಾಳಿಸಬೇಕಲ್ಲ ಎಂದು. ನನಗೆ ಕೋಪ, ಜೊತೆಗೆ ಏನೂ ತಿಳಿಯದಂತಾಗಿತ್ತು, ಅಳುತ್ತಿದ್ದೆ. ಯಾರೂ ನನ್ನ ಅಳುವುದರ ಬಗ್ಗೆ ಗಮನಕೊಡುತ್ತಿರಲಿಲ್ಲ. ಒಂದುದಿನ ಸಂಜೆ ನನ್ನ ಅಮ್ಮ ಅವಳ ತಂಗಿ ಮತ್ತು ಅಮ್ಮನೊಡನೆ ತನ್ನ ದುಃಖ ಹಂಚಿಕೊಂಡು ಅಳುತ್ತಿರುವುದು ಕೇಳಿಸಿತು. ನನ್ನ ಪರಿಸ್ಥಿತಿಯ ಜೊತೆಗೆ ಚಿಕ್ಕವಯಸ್ಸಿನಲ್ಲೇ ಈ ತೊಂದರೆ ಬೇರೆ ಸೇರಿಕೊಂಡದಕ್ಕೆ ಅವಳಿಗೆ ಬೇಸರವಾಗಿತ್ತು. ಮಮ್ಮೈ ಆ ದಿನಗಳಲ್ಲಿ ನನ್ನನ್ನು ನೋಡಿಕೊಳ್ಳುವುದಾಗಿ ಹೇಳಿದಳು. ನನಗೆ ಚಿಂತೆಯಾಗುತ್ತಿತ್ತು, ಏಕೆಂದರೆ ವಿಕಲತೆಯೊಂದಿಗೆ ಈ ಸ್ಥಿತಿಯನ್ನು ಮತ್ತಷ್ಟು ತೊಂದರೆಯಾಗುವುದಲ್ಲಾ ಎಂದು ಕಷ್ಟವಾಯಿತು.

ನನ್ನ ವಿಕಲತೆಯ ಕಥೆಯನ್ನೂ ಅದರ ಕಷ್ಟಗಳನ್ನೂ ಹಂಚಿಕೊಳ್ಳಲು ನನಗೆ ಸುಮಾರು ಐವತ್ತು ವರ್ಷಗಳು ಬೇಕಾಯಿತು. ಆದರೆ ಇಂದು ನನಗೆ ವಿಕಲತೆ ಉಳ್ಳವರನ್ನು ಹೊರ ಜಗತ್ತಿಗೆ ತೆರೆದು ಅದರ ಚಟುವಟಿಕೆಗಳಲ್ಲಿ ಭಾಗವಹಿಸಲು ಬಿಡಬೇಕೆಂದು ಅನ್ನಿಸುತ್ತದೆ. ಯಾಕೆಂದರೆ, ಒಮ್ಮೆ ಹೊರಜಗತ್ತಿನ ಚಟುವಟಿಕೆಗಳಲ್ಲಿ ತೊಡಗಿದರೆ, ಅವರ ಸಂಕೊಚ ಸ್ವಭಾವವು ತಾನಾಗಿ ಹೋಗುತ್ತದೆ. ಜೊತೆಗೆ ಅವರ ಮತ್ತು ಸಮಾಜದ ನಡುವೆ ಒಳ್ಳೆಯ ಬಾಂಧವ್ಯ ಏರ್ಪಡುತ್ತದೆ. ವಿಕಲಾಂಗ ವ್ಯಕ್ತಿಯ ಮತ್ತು ಅವನ ಅಥವಾ ಅವಳ ಕುಟುಂಬದವರು ಅನುಭವಿಸುವ ಮಾನಸಿಕ ತೊಳಲಾಟ ಬಹಳ ತೀವ್ರವಾದದ್ದು. ಆದರೆ ಬದುಕಬೇಕೆಂಬ ಆಸೆ ಅದಕ್ಕಿಂತ ತೀವ್ರವಾದದ್ದು.

* * *

# ಚಕ್ರಗಳು

ನನ್ನ ತಂದೆಗೆ ಹೇಗಾದರೂ ಮಾಡಿ ನಾನು ಓಡಾಡುವಂತೆ ಆಗಬೇಕೆಂದು ಆಸೆ. ಅವರು ನಮ್ಮ ಮಾವನ ಫ್ಯಾಕ್ಟರಿಯಲ್ಲಿ ನನಗೋಸ್ಕರ ಒಂದು 'ವ್ಹೀಲ್ ಚೇರ್' ಮಾಡಿಸಿದರು. ಅದು ಒಂದು ಮಡಿಸಬಹುದಾದ ಕುರ್ಚಿಗೆ ಚಕ್ರಗಳನ್ನು ಜೋಡಿಸಿ ಮಾಡಿದ್ದು. ಅದು ಬಹಳ ಕಷ್ಟವಾದ ಸಾಧನವಾಗಿತ್ತು. ನನಗೆ ಏನೂ ಕಂಟ್ರೋಲ್ ಇರಲಿಲ್ಲ. ಪ್ರತಿಸಾರಿ ಅದು ಯಾವುದಕ್ಕಾದರೂ ಡಿಕ್ಕಿ ಹೊಡೆದರೆ, ನನ್ನ ಕೈಬೆರಳುಗಳು ಜಜ್ಜಿ ಹೋಗುವ ಸಂಭವ ಇತ್ತು. ನಮ್ಮ ತಂದೆ ನನ್ನನ್ನು ಬೀಳದಂತೆ ಆ ಕುರ್ಚಿಗೆ ಒಂದು ಹಳೆಯ ಟೋವೆಲ್ಲಿನಿಂದ ಕಟ್ಟಿ ಕುರ್ಚಿಯನ್ನು ಮೆಲ್ಲಗೆ ತಳ್ಳುತಿದ್ದರು. ನನಗೆ ಇದು ಇಷ್ಟವೇ ಆಗುತ್ತಿರಲಿಲ್ಲ. ಯಾವಾಗ ಬೀಳುವೆನೋ ಅಥವಾ ಬೆರಳು ಮುರಿಯುವುದೋ ಎಂಬ ಹೆದರಿಕೆ.

ನಮ್ಮ ತಂದೆ ಇದರಲ್ಲಿ ಇನ್ನೂ ಹೆಚ್ಚಿನ ಸಾಧ್ಯತೆ ಕಂಡರು. ಈ ಕುರ್ಚಿಯನ್ನು ಮಡಿಚಿ ಕಾರಿನಲ್ಲಿಡಬಹುದಿತ್ತು. ಈಗ ನಾನು ಮನೆಯವರೊಡನೆ ಎಲ್ಲೆಲ್ಲೂ ಹೊಗಲು ಸಾಧ್ಯವಾಯಿತು. ಅವರು ನನ್ನನ್ನು ನಮ್ಮ ಕಾಫಿ ಎಸ್ಟೇಟ್‌ಗೆ ಕರೆದುಕೊಂಡು ಹೋದರು. ಅಲ್ಲಿ ಹಳ್ಳ ಕೊಳ್ಳದ, ಕೊಚ್ಚೆಯಿರುವ ರಸ್ತೆಯಲ್ಲಿ ಹೋಗುತಿದ್ದಾಗ, ಆನೆಯ ಲದ್ದಿ ಕಾಣಿಸಿತು. ನನಗೆ ಆನೆ ಇನ್ನೂ ಅಲ್ಲೇ ಯೆಲ್ಲೋ ಇರಬಹುದು ಎಂಬ ಹೆದರಿಕೆ. ಅದಕ್ಕೆ ನಾನು ಮನೆಗೆ ಹೋಗೋಣ ಎಂದು ಹೇಳಿದೆ. ನಾವು ಬೇಗನೆ ಮನೆ ಸೇರುವ ಗಡಿಬಿಡಿಯಲ್ಲಿ ಗಾಡಿಯ ಚಕ್ರ ಕಿತ್ತು ಹೋಯಿತು. ಈಗ ಆನೆ ಬಂದರೆ ತಂದೆ ಏನು ಮಾಡುತ್ತಾರೆ ಎಂಬ ಗಾಬರಿ ನನಗೆ. ಸಧ್ಯ ಹಾಗೇನೂ ಆಗಲಿಲ್ಲ, ನಾವು ಒಂದು ಎತ್ತಿನ ಗಾಡಿಯಲ್ಲಿ ಕಾರಿನವರೆಗೆ ಹೋದೆವು.

ಕ್ರಮೇಣ ಒಳ್ಳೆಯದಾಗುತ್ತಾ ಬಂತು. ಸೈನ್ಯದಲ್ಲಿದ್ದ ನಮ್ಮ ಒಬ್ಬ ಮಾವ ಅಲ್ಲಿನ ಆಸ್ಪತ್ರೆಯಲ್ಲಿ ಮಾರಲ್ಪಟ್ಟ ಒಂದು ಹಳೆಯ ಮರದ ವ್ಹೀಲ್ ಚೇರ್ ತಂದು ಕೊಟ್ಟರು. ಅದು ಎಷ್ಟು ದೊಡ್ಡದಾಗಿತ್ತೆಂದರೆ ಅದನ್ನು ಮನೆಯೊಳಗೆ ತರಲಾಗುತ್ತಿರಲಿಲ್ಲ. ನಾನು ಮುಂದಿನ ಮೆಟ್ಟಿಲುಗಳ ಪಕ್ಕದಲ್ಲಿದ್ದ ಕಟ್ಟೆಗೆ ಹತ್ತಿ ಅಲ್ಲಿಂದ ಆ ಕುರ್ಚಿಯ ಮೇಲೇರಲು [illegible]ತೆ. ನನ್ನ ಸ್ನೇಹಿತರಿಗೂ ಬಹಳ ಖುಷಿ. ನಾವು ನಿತ್ಯವೂ ಬೀಚಿಗೆ ಹೊಗುತ್ತಿದ್ದೆವು.

ವ್ಹೀಲ್ ಚೇರ್ ಬರುವುದಕ್ಕೆ ಮೊದಲು ನನ್ನ ತಂದೆ ತಾಯಿ ನನಗೆ ಒಂದು ರಿಕ್ಷಾ ಗೊತ್ತು ಮಾಡಿದ್ದರು. ಅದರಲ್ಲಿ ನಿತ್ಯ ನಾಲ್ಕು ಘಂಟೆಗೆ ನಾನು ಮರಿನಾ ಬೀಚಿಗೆ ಹೋಗುತ್ತಿದ್ದೆ,

ಅಲ್ಲಿ ಅವರ ಡ್ರೈವರ್ ನನ್ನನ್ನು ಮರಳಿನ ಮೇಲೆ ಕೆಳಗಿಳಿಸಿ ಬಿಡುತಿದ್ದನು. ಅಲ್ಲಿ ನಾನು ನನ್ನ ಅಕ್ಕ ತಂಗಿಯರೋಡನೆ ಮತ್ತು ಸ್ನೇಹಿತರೊಡನೆ ಆಡುತ್ತಿದ್ದೆ. ಕೆಲವು ಘಂಟೆಗಳ ನಂತರ ಅವನು ಬಂದು ನಮ್ಮನ್ನು ಮನೆಗೆ ವಾಪಸ್ ಕರೆದುಕೊಂಡು ಹೋಗುತಿದ್ದ. ಆದರೆ ಈ ಮರದ ವ್ಹೀಲ್ ಚೇರ್ ಬಂದ ನಂತರ ನಾನು ಸ್ವತಂತ್ರಳಾದೆ. ನಾನು ಒಂದು ಮಕ್ಕಳ ಕ್ಲಬ್ ಸೇರಿಕೊಂಡೆ. ಅದರಲ್ಲಿ ಪ್ರತಿ ಭಾನುವಾರ ಚಿತ್ರ ಬರೆದು ಬಣ್ಣ ತುಂಬುವ ಕ್ಲಾಸ್ ಇರುತಿತ್ತು. ಸುತ್ತಲೂ ಮಕ್ಕಳು ಮತ್ತು ಅವರೊಡನೆ ಆಡುವುದೂ ನನಗೆ ಬಹಳ ಇಷ್ಟವಾಯಿತು.

ನಾರಾಯಣ ಸ್ವಾಮಿಯವರು ಕ್ಲಬ್ಬಿನ ಸೆಕ್ರೆಟರಿಯಾಗಿದ್ದರು. ಅವರು ಬಹಳ ಕ್ರಿಯಾಶೀಲರು. ಅವರು ಕ್ಲಬ್ಬಿನಿಂದ ಅನೇಕ ಕಾರ್ಯಕ್ರಮಗಳನ್ನೂ ಪಿಕ್ನಿಕ್‌ಗಳನ್ನೂ ಏರ್ಪಾಡು ಮಾಡುತಿದ್ದರು. ನಮ್ಮ ತಂದೆ ಅವೆಲ್ಲದರಲ್ಲೂ ನಾವು ಭಾಗವಹಿಸಲು ಏರ್ಪಾಡು ಮಾಡುತಿದ್ದರು. ಅವರು ಅಲ್ಲಿ ಸರಿಯಾದ 'ಟಾಯ್ಲೆಟ್' ಇದೆಯಾ ಎಂದು ವಿಚಾರಿಸಿ – ಅನೇಕ ಜಾಗದಲ್ಲಿ ಅದು ಇರುತ್ತಿರಲಿಲ್ಲ – ಅದು ಇಲ್ಲದಿದ್ದಾಗ ನನ್ನ 'ಪಾಟ್ಟಿ'ಯನ್ನು ನಮ್ಮ ಕಾರಿನಲ್ಲಿ ತರುತಿದ್ದರು. ನನಗೆ ಬಹಳ ಸಂಕೋಚವಾಗುತ್ತಿತ್ತು. ನಾವು ಟೆಂಟಿನಲ್ಲಿ ಇರುತ್ತಿದ್ದೆವು. ಕುಮ್ಮು, ನಮ್ಮ ತಂದೆ ತಾಯಿ ಮತ್ತು ನಾನು ಬಹಳ ಖುಷಿಯಾಗಿರುತ್ತಿದ್ದೆವು. ನಮ್ಮ ತಂದೆ ತಾಯಿಗೆ ನಾನು ಎಲ್ಲದರಲ್ಲೂ ಭಾಗವಹಿಸಿ ಎಲ್ಲವನ್ನೂ ಅನುಭವಿಸಬೇಕು, ನನ್ನ ವಿಕಲತೆಯ ಕಾರಣವಾಗಿ ಯಾವುದರಿಂದಲೂ ಹೊರಗೆ ಉಳಿಯಬಾರದು ಎಂಬ ದೃಢ ನಂಬಿಕೆ. ಅವರ ಈ ಸಕಾರಾತ್ಮಕ ಪ್ರಜ್ಞೆ ಮತ್ತು ಆಗ್ರಹವೇ ನಾನು ಎಲ್ಲಾಚಟುವಟಿಕೆಗಳಲ್ಲೂ ಭಾಗವಹಿಸಲು ಕಾರಣವಾಯಿತು.

ನಾನು ಕರ್ನಾಟಕ ಸಂಗೀತವನ್ನೂ ಕಲಿತೆ. ನನ್ನ ಸಂಗೀತದ ಮೇಷ್ಟ್ರು ಮನೆಗೆ ಬಂದು ಸಂಗೀತ ಕಲಿಸುತ್ತಿದ್ದರು. ಅವರನ್ನು ನಾನು ಸಾಕಷ್ಟು ಗೋಳುಹುಯ್ಕೊಳ್ಳುತ್ತಿದ್ದೆ. ಅವರು ಕುಳ್ಳಕ್ಕೆ ಸಣ್ಣಕ್ಕೆ ಇದ್ದರು. ನಾವು ಅವರಿಗೆ 'ಜೀಪ್' ಅಂತ ಹೆಸರಿಟ್ಟಿದ್ದೆವು. ಅವರು ಹಾಡುಗಾರರಿಗಿಂತ ಹೆಚ್ಚು ಕಲಾವಿದರಾಗಿದ್ದರು. ನನಗೆ ಹಾಡಲು ಇಷ್ಟವಿಲ್ಲದಿದ್ದರೆ, ನಿನಗೇನು ಇಷ್ಟವೋ ಅದನ್ನು ಮಾಡು ಎಂದು ಹೇಳಿ ಕೋಪಬಂದಂತೆ ನಟಿಸುತ್ತಿದ್ದರು. ಸ್ವಲ್ಪ ಹೊತ್ತಿನಂತರ ನನ್ನನ್ನು ಪುಸಲಾಯಿಸಿ ಹಾಡುವಂತೆ ಮಾಡುವರು. ಅವರು ನನಗೆ ಅನೇಕ ವಿಷಯಗಳ ಬಗ್ಗೆ ತಿಳಿಸಿ ನನ್ನ ಉತ್ತಮ ಸಂಗಾತಿಯಾದರು.

ನನಗೆ ಸಂಗೀತ ಮತ್ತು ಕಲೆ ಬಹಳ ಪ್ರಿಯವಾಯಿತು. ನಾವು ಬೆಂಗಳೂರಿಗೆ ಹಿಂದಿರುಗಿದ ನಂತರವೂ ನಾನು ಸಂಗೀತ ಪಾಠ ಮುಂದುವರಿಸಿದೆ. ಪ್ರಭ ವೀಣೆ ಕಲಿತಳು, ನಾನು

ಮತ್ತು ಕುಮ್ಮು ಸಂಗೀತ ಕಲಿತೆವು. ನಾನು ಇಪ್ಪತ್ತು ವರ್ಷ ಸಂಗೀತ ಕಲಿತೆ. ಕುಮ್ಮುವಿಗೆ ಮದುವೆಯಾಗಿ ಅವಳು ಬೆಂಗಳೂರಿನಿಂದ ಹೋದಮೇಲೆ ನಾನು ಹಾಡುವುದನ್ನು ನಿಲ್ಲಿಸಿದೆ. ಈಗ ನನಗೆ ಒಂದು ಹಾಡೂ ನೆನಪಿಲ್ಲ, ಬಾತ್ ರೂಮಿನಲ್ಲಿ ಗುನುಗುನಾಯಿಸಲೂ ಆಗುವುದಿಲ್ಲ.

ನನಗೆ ಆಗ ತಿಳಿಯಲಿಲ್ಲ. ನಾನು ಕಾರ್ಯಕ್ರಮಗಳಲ್ಲಿ ಭಾಗವಹಿಸದಿದ್ದರೂ ನನಗೆ ಅವನ್ನು ಚೆನ್ನಾಗಿ ಸಂಯೋಜಿಸುವ ಶಕ್ತಿಯಿತ್ತು. ನಾವು ಎಡ್ವರ್ಡ್ ಎಲ್ಲಿಯಟ್ಸ್ ರೋಡಿನ ಕಾಲೊನಿಯಲ್ಲಿದ್ದಾಗ ನಾನು ಅನೇಕ ಸ್ನೇಹಿತರನ್ನು ಸಂಪಾದಿಸಿದ್ದೆ. ಅಲ್ಲಿ ಆಡಲು ಹುಣಸೇ ಮರಗಳಿದ್ದ ದೊಡ್ಡ ಮೈದಾನವಿತ್ತು. ನನ್ನ ವಯಸ್ಸಿನ ಹತ್ತು ಹದಿನೈದು ಮಕ್ಕಳು ನಾವು ಸೇರಿಕೊಂಡು ಪ್ರತಿ ಸಂಜೆ ಆಟಪಾಠ, ಸಂಗೀತ, ನಾಟಕ, ಡ್ಯಾನ್ಸ್, ಇತ್ಯಾದಿ ಎಲ್ಲಾ ಮಾಡುತ್ತಿದ್ದೆವು. ನಾನು ಹಾಡುವ ಗುಂಪಿಗೆ ಸೇರಿಕೊಳ್ಳುತಿದ್ದೆ. ವರ್ಷದಲ್ಲಿ ಒಮ್ಮೆ ಕಾಲೊನಿಯ ಎಲ್ಲರನ್ನೂ ಕರೆದು ನಾವು ಒಂದು ಪ್ರೋಗ್ರಾಮ್ ಮಾಡುತ್ತಿದ್ದೆವು. ಒಂದು ಸ್ಟೇಜ್ ನಿರ್ಮಿಸುತ್ತಿದ್ದೆವು, ಲೀಲಾ ಮಾಮಿ ನಮ್ಮ ಮೇಕಪ್‌ಗೆ ಸಹಾಯ ಮಾಡುತಿದ್ದರು. ಗಡ್ಡ ಮೀಸೆಯನ್ನು ಇದ್ದಿಲಿನಿಂದ ಬರೆದುಕೊಳ್ಳುತ್ತಿದ್ದೆವು. ಲಿಪ್ಸ್ಟಿಕ್ ಗೆ ಕೆಂಪು ಕ್ರೇಪ್ ಪೇಪರ್ ಜಜ್ಜಿ ಅದರ ಬಣ್ಣ ಹಚ್ಚಿಕೊಳ್ಳುತಿದ್ದೆವು. ಮುನಿಸ್ವಾಮಿ ನಮ್ಮ ಪುಟ್ಟ ಸಹಾಯಗಾರ, ನಟ ಎಂಜೀಯಾರ್ ಅವರ ಭಕ್ತ. ಅವನು ನೋಡಿದ ಎಂಜೀಯಾರ್ ಸಿನೆಮಾದ ಕಥೆಯನ್ನು ನಮಗೆ ಹೇಳುತಿದ್ದನು, ನಾವು ಬೆರಗಾಗಿ ಕೇಳುತಿದ್ದೆವು. ಅವನು ಹೊಸ ಹೊಸ ಕಥೆಗಳನ್ನು ಊಹಿಸಿಕೊಂಡು ಅದನ್ನು ನಮ್ಮಿಂದ ಆಡಿಸುತ್ತಿದ್ದನು. ನಾನು ಬಹಳ ವರ್ಷ ಈ ನಾಟಕಗಳಿಂದ ದೂರ ಇದ್ದೆ. ಅವನು ಒಂದು ಸಲ ನಾನು ನಟಿಸದಿದ್ದರೆ ನಾಟಕವನ್ನೇ ರದ್ದು ಮಾಡುವುದಾಗಿ ಹೆದರಿಸಿದ. ನಾನು ನಾಟಕದಲ್ಲಿ ನಡೆಯಬೇಕಾಗಿರುವುದಿಲ್ಲ ಮತ್ತು ಪರದೆ ತೆಗೆಯುವುದಕ್ಕೆ ಮುಂಚೆ ನನ್ನನ್ನು ಸ್ಟೇಜಿನ ಮೇಲೆ ಎತ್ತಿಕೊಂಡು ಹೋಗಿರುತ್ತಾರೆ, ನಾನು ಕೇವಲ ನಾಲ್ಕು ವಾಕ್ಯಗಳನ್ನು ಹೇಳಬೇಕು ಎಂದೆಲ್ಲಾ ಭರವಸೆ ನೀಡಿದ. ಒಪ್ಪಿಕೊಂಡೆ. ಪರದೆ ಎದ್ದಾಗ ನನ್ನ ಬಾಯಲ್ಲಿ ಮಾತುಗಳೇ ಬರಲಿಲ್ಲ. ನನ್ನ ಮನಸ್ಸಿನಲ್ಲಿ ಆಗ ನನ್ನ ಬಟ್ಟೆ ಬಹಳ ಭಾರ ಎಂಬುದೊಂದೇ ಯೋಚನೆ ತುಂಬಿತ್ತು. ಕೊನೆಗೆ ಮುನಿಸ್ವಾಮಿಯೇ ನನ್ನ ಮಾತುಗಳನ್ನು ಪರದೆಯ ಹಿಂದಿನಿಂದ ಓದಬೇಕಾಯಿತು. ಆಮೇಲೆ ನಮ್ಮಿಬ್ಬರ ನಡುವೆ ಆದ ವಾಗ್ವಾದ ನನಗೆ ಇನ್ನೂ ಚೆನ್ನಾಗಿ ನೆನಪಿದೆ.

ಮುನಿಸ್ವಾಮಿ ಮಣ್ಣಿನಲ್ಲಿ ಗೊಂಬೆ ಮಾಡುವುದು, ಪೇಪರಿನಲ್ಲಿ ಅಲಂಕಾರದ ವಸ್ತುಗಳನ್ನು ಮಾಡುವುವು ಮುಂತಾದ ಕಲೆಗಳಲ್ಲಿ ಪರಿಣಿತ. ಗಣೇಶನ ಹಬ್ಬ ಬಂದರೆ ಅವನು ಮಣ್ಣಿನಲ್ಲಿ

ಮೂರ್ತಿಗಳನ್ನು ಮಾಡುತ್ತಿದ್ದ, ಅವಕ್ಕೆ ಪೇಪರಿನ ಕೊಡೆಗಳನ್ನು ಮಾಡಿ ಅಲಂಕಾರ ಮಾಡುತ್ತಿದ್ದ, ನಾವು ಕೆಲವನ್ನು ಮಾರ್ಕೆಟ್ಟಿನಲ್ಲಿ ಮಾರಿ ಸ್ವಲ್ಪ ಹಣ ಮಾಡಿಕೊಳ್ಳುತಿದ್ದೆವು. ಒಂದು ಸಲ ನಾವು ಬೆಂಗಳೂರಿನಲ್ಲಿದ್ದಾಗ ಅವನಿಗೆ ಜೋರಾದ 'ಫಿಟ್ಸ್ ಅಟ್ಯಾಕ್' ಆಯಿತು. ಅವನ ಈ 'ಎಪಿಲೆಪ್ಸಿ ಅಟ್ಯಾಕ್' ನಮ್ಮೆಲ್ಲರನ್ನೂ ನಡುಗಿಸಿ ಬಿಟ್ಟಿತು. ನಾವ್ಯಾರಿಗೂ ಈ ಕಾಯಿಲೆಯ ಬಗ್ಗೆ ಗೊತ್ತಿರಲಿಲ್ಲ. ಡಾಕ್ಟರ್‌ಗಳೂ ಸ್ಪಷ್ಟವಾಗಿ ಏನೂ ಹೇಳಲಿಲ್ಲ. ಎಲ್ಲರೂ ಅದೇನೋ ಭೂತ ಪ್ರೇತದ ಚೇಷ್ಟೆ ಎಂದುಕೊಂಡರು.

ಈ ಎಲ್ಲದರ ನಡುವೆ ನನ್ನ ಔಷಧಿ–ಆರೈಕೆ ನಡೆಯುತ್ತಲೇ ಇತ್ತು, ಪೂಜೆ ಪುನಸ್ಕಾರಗಳು ನಡೆಯುತ್ತಲೇ ಇದ್ದವು.ನನಗೂ ನಾನು ಒಂದು ದಿನ ಓಡಬಲ್ಲೆ ಎಂದು ನಂಬಿಕೆ ಇತ್ತು, ಯಾಕೆಂದರೆ ನಮ್ಮ ಮನೆಯವರಿಗೆ ಈ ಬಗ್ಗೆ ಧೃಢವಾದ ನಂಬಿಕೆಯಿತ್ತು. ಅದು ನನ್ನನ್ನೂ ಆವರಿಸಿತ್ತು. ಎಲ್ಲಾ ವಿದವಾದ ಚಿಕಿತ್ಸೆಯನ್ನೂ ಮಾಡಿಸಿ ನೋಡಿದರು. ಒಂದು ಆಂಧ್ರದ ಚಿಕಿತ್ಸೆ ಇತ್ತು. ಅದರಲ್ಲಿ ನನ್ನ ಮೈಯೆಲ್ಲಾ ಬಿಸಿ ತುಪ್ಪವನ್ನು ಬಳಿದು, ಮೈಯನ್ನು ಬಟ್ಟೆಯಲ್ಲಿ ಸುತ್ತಿ ಇಡೀ ರಾತ್ರಿ ಕಳೆಯ ಬೇಕಾಗಿತ್ತು. ಬೆಳಿಗ್ಗೆ ಸ್ನಾನ ಮಾಡಿ ಮತ್ತೆ ಅದೇ ಕ್ರಮ ಶುರು. ಮದರಾಸಿನ ಬೇಗೆಯಲ್ಲಿ ಈ ಚಿಕಿತ್ಸೆ ತಡೆಯಲಾರದ್ದಾಗಿತ್ತು. ಬಹಳ ಬೇಗ ನನಗೆ ಕೋಪಬಂದು ಎಲ್ಲರ ಮೇಲೂ ಕೂಗಾಡಲಾರಂಭಿಸುತ್ತಿದ್ದೆ. ನನ್ನ ಮೈಯನ್ನು ಮಸಾಜಿಗೆ ಒಡ್ಡಲು ನನಗೆ ಮುಜುಗರವಾಗುತ್ತಿತ್ತು. ವಯಸ್ಸು ೭ ಆದರೇನು, ಚಿಕ್ಕ ಮಗುವಿಗೂ ಅದರ ಮೈ ಬಗ್ಗೆ 'ಪ್ರೈವೆಸಿ' ಇರಬೇಕು ಎಂದು ಅನಿಸುವುದಿಲ್ಲವೆ?

ಮತ್ತೊಂದು ಚಿಕಿತ್ಸೆ ಕೇರಳದ್ದು. ನನ್ನನ್ನು ತ್ರಿಶೂರಿಗೆ ಆಯುರ್ವೇದದ ಚಿಕಿತ್ಸೆಗೆ ಕರೆದುಕೊಂಡು ಹೋದರು. ದೊಡ್ಡದೊಂದು ಬಳಗವೇ – ನನ್ನ ತಾಯಿ, ನನ್ನ ತಾತ, ಕುಮ್ಮು, ಮಮ್ಮು, ಹೀಗೆ – ನನ್ನೊಡನೆ ಪ್ರಯಾಣ ಬೆಳೆಸಿತು. ನನಗೆ ಬೆಳಿಗ್ಗೆ ೭.೦೦ ರಿಂದ ಮಧ್ಯಾಹ್ನದ ವರೆಗೆ ವಿಧವಿಧವಾದ ಮಸಾಜ್ ಕೊಡುತಿದ್ದರು. ನಾನು ಮಲಗಲು ಬಿಡುತ್ತಿರಲಿಲ್ಲ. ಮತ್ತೆ ೪.೩೦ ಕ್ಕೆ ಮತ್ತೊಂದು ಮಸಾಜ್ ಸೆಷನ್ ಶುರುವಾಗುತಿತ್ತು. ಇದು ತಣ್ಣೀರಿನ ಸ್ನಾನದೊಂದಿಗೆ ಮುಕ್ತಾಯವಾಗುತಿತ್ತು. ಕೊನೆಯಿಲ್ಲದ ಮಸಾಜ್ ಸೆಷನ್‌ಗಳು ಎಂದೆನಿಸುತಿತ್ತು. ಇದಾದ ನಂತರ ಕೇರಳದ ಕೆಲವು ಮಸಾಜ್ ತಜ್ಞರು ಮದರಾಸಿಗೆ ಬಂದು ಮಸಾಜನ್ನು ಮುಂದುವರಿಸಿದರು. ಅವರು ೪೧ ದಿನಗಳ ಚಿಕಿತ್ಸೆಯನಂತರ ನಾನು ಓಡಬಲ್ಲೆ ಎಂದು ಹೇಳಿದರು. ನನ್ನ ಬೆನ್ನಿನ ವಿಕಲತೆಯನ್ನೂ ಸರಿಮಾಡುವುದಾಗಿ ಹೇಳಿದರು. ನಮ್ಮ ತಂದೆ ಈ ಗೊಂದಲಗಳಿಂದ ದೂರವಿದ್ದರು, ಆದರೆ ನನ್ನ ಅಮ್ಮ ಅವರ ಮಾತಿನ ಬಲೆಗೆ ಬಿದ್ದಳು. ಕೈಗಳಿಂದ ಮಸಾಜ್ ಪ್ರಯೋಜನವಿಲ್ಲ ಎಂದು ಹೇಳಿ

ಸೂರಿಗೆ ಕಟ್ಟಿದ್ದ ಹಗ್ಗದಿಂದ ತಮ್ಮನ್ನು ತಾವು ನೇತು ಬಿಟ್ಟುಕೊಂಡು, ತಮ್ಮ ಕಾಲಿನಿಂದ ನನ್ನ ಬೆನ್ನು ಮತ್ತು ಕಾಲನ್ನು ತುಳಿದು ಮಸಾಜ್ ಮಾಡುತಿದ್ದರು. ಇದರ ತೊಂದರೆ ಸಾಲದೆಂಬಂತೆ ಅವರು ನಮ್ಮ ಅಯ್ಯಂಗಾರ್ – ಅಪ್ಪಟ ಶಾಖಾಹಾರಿ – ಮನೆಯಲ್ಲಿ ಮಧ್ಯ, ಮಾಂಸ ಬೇಕೆಂದು ಬೇಡುತ್ತಿದ್ದರು. ನಮಗೆ ಒಳ್ಳೆಯ ಮಿತ್ರರು ಇದ್ದರು, ಅವರು ಈ ಬೇಡಿಕೆಗಳನ್ನು ಪೂರೈಸುತ್ತಿದ್ದರು.

ಇವರು ಒಂದು ದಪ್ಪ ತೆಂಗಿನ ಮರದಿಂದ ನನ್ನ ಕಾಲಿನ ಅಳತೆಗೆ ಸರಿಯಾಗಿ ಕತ್ತರಿಸಿ ಮಾಡಿದ 'Splint' ಅನ್ನು ನನ್ನ ಕಾಲಿಗೆ ಕಟ್ಟಿ ನನ್ನನ್ನು ನಡೆಸಲು ಪ್ರಯತ್ನ ಮಾಡಿದರು. ನಮ್ಮ ರೂಮಿನಲ್ಲಿ ಒಂದು ಕಿಟಕಿಯಿಂದ ಇನ್ನೊಂದಕ್ಕೆ ನನ್ನ ಭುಜದ ಎತ್ತರಕ್ಕೆ ಒಂದು ಹಗ್ಗವನ್ನು ಕಟ್ಟಿ ಅದನ್ನು ಹಿಡಿದುಕೊಂಡು ನನ್ನನ್ನು ಆ 'Splint'ನೊಡನೆ ನಡೆಯುವಂತೆ ಮಾಡಿದರು.ನನ್ನ ಬೆನ್ನಿಗೆ ಯಾವ ಆಸರೆಯೂ ಇರಲಿಲ್ಲ, ಬಹಳ ಕಷ್ಟವಾಗುತಿತ್ತು, ಆದರೆ ಅವರು ನನ್ನನು ಮತ್ತೆ ಮತ್ತೆ ನಡೆಯುವಂತೆ ಹೇಳುತಿದ್ದರು.ನಾನು ಹತ್ತು ಸಲ ನಡೆದರೆ ನನಗೆ ಓಡಲಾಗುತ್ತೆ ಎನ್ನುತಿದ್ದರು. ನನಗೆ ಆಗ ಓಡುವುದು ಬೇಕಾಗಿರಲಿಲ್ಲ. ಒಂದು ತಿಂಗಳಿಗೆ ನಾನು ಹೆಚ್ಚು ಕಷ್ಟವಿಲ್ಲದೆ ನಡೆಯಲು ಕಲಿತೆ. ಎಲ್ಲರೂ ಅವರು ಹೇಳಿದ ೪೧ ದಿನಗಳಿಗೆ ಕಾಯುತಿದ್ದೆವು. ಆ ದಿನವು ಬಂತು,ಆದರೆ ವ್ಯತ್ಯಾಸವೇನೂ ಕಾಣಲಿಲ್ಲ, ನನ್ನದು ಯಥಾಸ್ಥಿತಿಯಾಗಿತ್ತು. ಕೆಲವುಸಲ ಅವರು ಆ ತೆಂಗಿನಮರದ ಕಾಲನ್ನು ತೆಗೆದು ನನ್ನನ್ನು ಹಾಗೆಯೇ ನಡೆಯ ಹೇಳುವರು. ಅದು ಅಸಾಧ್ಯ ಎಂಬುದು ಅವರಿಗೆ ಗೊತ್ತಿರಲಿಲ್ಲ. ಅವರ ಪುಸಲಾವಣೆ, ಬೆದರಿಕೆ ಯಾವುದೂ ನಡೆಯಲಿಲ್ಲ. ನನಗೆ ಕಾಲನ್ನು ಕೆಳಗಿಳಿಸಲೇ ಆಗುತ್ತಿರಲಿಲ್ಲ, ನನ್ನ ಮಂಡಿ ಮಡಿಚಿಕೊಂಡುಬಿಡುತಿತ್ತು. ಅವರ ಚಿಕಿತ್ಸೆಯ ಎರಡು ಘಂಟೆಗಳು ನರಕಯಾತನೆಯಾಗಿರುತಿತ್ತು. ಅಮ್ಮ ನನ್ನ ಮೇಲೆ ರೇಗುತಿದ್ದಳು ಮತ್ತು ಮಮ್ಮು ಸಮಾಧಾನ ಮಾಡಲು ಪ್ರಯತ್ನಿಸುತ್ತಿದ್ದಳು. ಆಗ ನಮಗೆ ಏನು ತೋಚಲಿಲ್ಲವೆಂದರೆ, ಸರಿಯಾದ ಆಸರೆಯಿಲ್ಲದೆ ನಡೆಯಲು ಪ್ರಯತ್ನಿಸುವುದು ವಿಕಲತೆಯನ್ನು ಇನ್ನೂ ಹೆಚ್ಚಿಸುತ್ತದೆ ಎಂಬುದು. 'ಕ್ಯಾಲಿಪರ್ಸ್' ಅನ್ನು ಸರಿಯಾದ ಸ್ಥಳದಲ್ಲಿ, ಸರಿಯಾಗಿ ಮತ್ತು ಭದ್ರವಾಗಿ ಕೂರಿಸಿದರೇನೇ ನಡೆಯಲಾಗುವುದು. ಈ ವೈಜಾನಿಕ ಕ್ರಮ ಆಯುರ್ವೇದದ ವೈದ್ಯರಿಗೆ ತಿಳಿದಿರಲಿಲ್ಲ.

ಕೆಲವು ದಿನಗಳ ನಂತರ ಮಸಾಜ್ ಮಾಡುವ ಗಂಡಸರಿಗೆ ಬದಲು ಒಬ್ಬಳು ಹೆಂಗಸು ಬರತೊಡಗಿದಳು. ಅವಳಿಗೆ ಮಲಯಾಳಂ ಮಾತ್ರ ಗೊತಿತ್ತು, ಆದ್ದರಿಂದ ಅವಳು ಬಂದರೆ ಬಹಳ ತಮಾಷೆಯಾಗಿರುತಿತ್ತು. ಆದರೆ ಅವಳು ಮೃದುವಾಗಿ ಮಸಾಜ್ ಮಾಡುತಿದ್ದಳು. ಆಗಿನ ಕಾಲದಲ್ಲಿ ಕೇರಳದ ಹೆಂಗಸರು ಸೊಂಟದ ಮೇಲೆ ಕುಪ್ಪುಸವೋ

ಅಥವಾ ಯಾವ ಬಟ್ಟೆಯನ್ನೋ ಧರಿಸುತ್ತಿರಲಿಲ್ಲ. ಅವಳು ಮದರಾಸಿನಲ್ಲಿ ನಮ್ಮೊಡನೆ ಇದ್ದಾಗ ಮನೆಯಲ್ಲಿ ಗಂಡಸರಿದ್ದರೆ ಒಂದು ಶಾಲು ಹೊದ್ದುಕೊಳ್ಳುವಳು. ಅವರು ಮನೆಯಿಂದ ಹೊರಗೆ ಹೋದನಂತರ ಅವಳು ಅದನ್ನು ತೆಗೆದು ಬಿಡುತಿದ್ದಳು. ಸಂಜೆ ನಾಲ್ಕು ಘಂಟೆಯ ಹೊತ್ತಿಗೆ ನಿತ್ಯ ಅಮ್ಮ ಅವಳಿಗೆ ಗಂಡಸರು ಮನೆಗೆ ಬರುವ ಹೊತ್ತು ಎಂದು 'ವಾರ್ನಿಂಗ್' ಕೊಡುತ್ತಿದ್ದಳು. ನಮಗೆ ಬಹಳ ನಗು ಬರುತಿತ್ತು. ಈ ರೀತಿಯ ಕಷ್ಟದ ಪರಿಸ್ಥಿತಿಯಲ್ಲೂ ನಮ್ಮ ಹಾಸ್ಯ ಪ್ರಜ್ಞೆಯನ್ನು ನಾವು ಉಳಿಸಿಕೊಂಡದ್ದು ಆಶ್ಚರ್ಯವೇ.

ನನ್ನ 'ಕಸಿನ್ಸ್'ಗಳು ಬೇಸಿಗೆ ರಜದಲ್ಲಿ ಮದರಾಸಿಗೆ ಬರುತಿದ್ದರು. ಅದು ಒಂದು ತುಂಟರ ಗುಂಪು. ಅವರಲ್ಲಿ ರಮೇಶ್ ಅತ್ಯಂತ ತುಂಟ. ಮತ್ತೊಬ್ಬ ಶ್ರೀಹರಿ; ಅವನನ್ನು ನಾವು 'ಚೋಟು' ಎಂದು ಕರೆಯುತಿದ್ದೆವು. ಯಾರು ಮದರಾಸಿಗೆ ಬಂದರೂ ಅವರೊಡನೆ ಅವನೂ, ಹಾಕಿಕೊಂಡಿದ್ದ ಬಟ್ಟೆಯೊಂದಿಗೇ ತಾನೂ ಬಂದು ಬಿಡುತಿದ್ದ. ಅಮ್ಮ ತಕ್ಷಣ ಟೈಲರನ್ನು ಕರೆಸಿ ಅವನಿಗೆ ಬೇಕಾದ ಬಟ್ಟೆ ಹೊಲಿಸುತ್ತಿದ್ದಳು. ಆಗಿನ ಕಾಲದಲ್ಲಿ 'ರೆಡಿಮೇಡ್' ಬಟ್ಟೆ ಇರುತ್ತಿರಲಿಲ್ಲ. ಆ ಟೈಲರ್ ಅರ್ಧ ದಿನದಲ್ಲಿ ಹೊಸ ಬಟ್ಟೆಯನ್ನು ಹೊಲಿದು ಕೊಡುತಿದ್ದನು. ಚೋಟುವಿಗೆ ಬೀಚಿಗೆ ಹೋಗುವ ಆತುರ. ನನ್ನ ಚಿಕ್ಕ ವಯಸ್ಸಿನ ಸಾವಿರ ಕಷ್ಟಗಳಿದ್ದರೂ ನಾವು ಎಷ್ಟು ಖುಷಿಯಾಗಿದ್ದೆವು.

ನನ್ನ 'ಕಸಿನ್'ಗಳು ಬಂದೊಡನೆ ನಮ್ಮ ಮನೆಯಲ್ಲಿರುವ 'ಟೆಂಟ್' ಬೇಕೆಂದು ಕೇಳುವರು. ನಮ್ಮ ತಂದೆ ಹೊರದೇಶಕ್ಕೆ ಹೊದಾಗ ಒಂದು 'ಟೆಂಟ್' ತಂದಿದ್ದರು ಅದನ್ನು ನಮ್ಮ ಮನೆಯ ಅಟ್ಟದಲ್ಲಿ ಇಟ್ಟಿರುತಿದ್ದರು. ಇವರು ಅದನ್ನು ಕೆಳಗೆ ತಂದು, ನಮ್ಮ ಗಾರ್ಡನ್ನಿನಲ್ಲಿ ಕಟ್ಟಿ ಅದರಲ್ಲಿ ನಮ್ಮ ಮನೆಯ ಹಳೆಯ ಗ್ರಾಮಾಫೋನಿನಲ್ಲಿ ತಮಿಳು, ಕನ್ನಡ ಮತ್ತು ಇಂಗ್ಲೀಷ್ ಹಾಡುಗಳನ್ನು ಹಾಕುತಿದ್ದರು. ಆ ಹಳೆಯ ಗ್ರಾಮಾಫೋನು ಒಡೆದು ಬೀಳುವಂತಿತ್ತು. ಅದನ್ನು ಚೆನ್ನಾಗಿ ಕಟ್ಟಿ, ಅದರ ಸೂಜಿ ಮೊಂಡಾದಾಗ ಅದನ್ನು ತಾವೇ ಚೂಪು ಮಾಡಿ ರೆಕಾರ್ಡ್ ಹಾಕುತಿದ್ದರು. ಈಗ ಕೆಲವು ದಿನಗಳ ಹಿಂದೆ ನನ್ನ ಕಸಿನ್ ಜಯರಾಮ್ ನಮ್ಮ ತೋಟದಲ್ಲಿ ಕುಳಿತು ಹಳೆಯದಿನಗಳನ್ನು ನೆನಪಿಸಿಕೊಳ್ಳುತಿದ್ದ. ನಮ್ಮ ಕುಟುಂಬ ಬಹಳ ನಿಕಟವಾದ ಸಂಬಂಧ ಉಳ್ಳದ್ದು. ನನ್ನ ಕಸಿನ್ಸ್ ನನ್ನ ಜೀವನದಲ್ಲಿ ಬಹಳ ಮುಖ್ಯವಾದ ಪಾತ್ರ ವಹಿಸಿದ್ದಾರೆ. ಪ್ರತಿಯೊಬ್ಬರೂ ನನ್ನ ವಿಲಕತೆಯನ್ನು ಅವರದ್ದೇ ಆದ ರೀತಿಯಲ್ಲಿ ನೋಡಿದ್ದಾರೆ.

೧೯೫೦ ರಲ್ಲಿ ನಮ್ಮ ತಂದೆ ಇಂಗ್ಲೆಂಡಿಗೆ ಹೋದರು. ಅವರ ಕಂಪನಿ ಅವರಿಗೆ ಮತ್ತು ಅವರ ಪತ್ನಿಯನ್ನು ೬ ತಿಂಗಳಿನ ರಜೆಯಲ್ಲಿ ಅಲ್ಲಿಗೆ ಕಲುಹಿಸುವುದಾಗಿ ಹೇಳಿತು. ನನ್ನ ಕಾಯಿಲೆಯ ಪ್ರಯುಕ್ತ ನಮ್ಮ ತಂದೆ ಇದಕ್ಕೆ ಮುಂಚೆ ಈ ರೀತಿಯ ಪ್ರವಾಸವನ್ನು ಯೋಚಿಸಿಯೂ ಇರಲಿಲ್ಲ. ಆದರೆ ಈಗ ಅವರ ಮನಸ್ಸಿನಲ್ಲಿ, ಅಲ್ಲಿ ನನ್ನ ಚಲನೆ ವಲನೆಗೆ ಸೂಕ್ತವಾದ ಯಾವುದಾದರೂ ಉಪಕರಣವಿದೆಯೇ ಎಂದು ನೋಡುವ ಆಸೆ ಇತ್ತು. ಲೀಲಾ ಮಾಮಿ ಮತ್ತು ಮಮ್ಮ್ಯ ನನ್ನನ್ನು ನೋಡಿಕೊಳ್ಳುವುದಾಗಿ ಹೇಳಿ ನಮ್ಮ ಅಮ್ಮನನ್ನೂ ನಮ್ಮ ತಂದೆಯ ಜೊತೆ ಇಂಗ್ಲೆಂಡಿಗೆ ಹೋಗುವಂತೆ ಆಗ್ರಹ ಪಡಿಸಿದರು, ಆದರೆ ಅಮ್ಮ ಒಪ್ಪಲಿಲ್ಲ. ನಮ್ಮ ತಂದೆ ಅಲ್ಲಿ ಅನೇಕರನ್ನು ಭೇಟಿ ಮಾಡಿದರು ಮತ್ತು ಅನೇಕ ಕಡೆ ವಿಚಾರಿಸಿದರು. ಅವರು ಹಿಂತಿರುಗಿದಾಗ ಎರಡು ಮಡಿಚುವಂತ, ಚಕ್ರಗಳಿರುವ ಕುರ್ಚಿಗಳನ್ನು ತಂದರು. ಒಂದುಮನೆಯೊಳಗೆ ಉಪಯೋಗಿಸಲು ಮತ್ತೊಂದು ಹೊರಗೆ ಉಪಯೋಗಿಸಲು. ಆ ಮನೆಯೊಳಗೆ ಉಪಯೋಗಿಸುವ ವ್ಹೀಲ್ ಚೇರ್ ಇನ್ನೂ ನನ್ನೊಡನೆ ಇದೆ. ಚೋಟು ಆಶ್ಚರ್ಯಕರ ರಿಪೇರಿಗಾರ. ನನ್ನ ವ್ಹೀಲ್ ಚೇರ್‌ಗೆ ಏನಾದರೂ ಆದರೆ ಕೂಡಲೇ ಅದನ್ನು ಸರಿಮಾಡಿಕೊಡುತಿದ್ದ. ಒಂದು ದಿನ ನಮಗೆಲ್ಲಾ ಆಶ್ಚರ್ಯವಾಗುವಂತೆ ನನ್ನ ವ್ಹೀಲ್ ಚೇರಿನಂತೆಯೇ ಮತ್ತೊಂದನ್ನು ಅವನ ಫ್ಯಾಕ್ಟರಿಯಿಂದ ಮಾಡಿಸಿಕ್ಕೊಂಡು ತಂದ. ಈಗ ನನ್ನ ಹತ್ತಿರ ಎರಡು ವ್ಹೀಲ್ ಚೇರ್ ಆದ್ದರಿಂದ ಆತಂಕ ವಿರಲಿಲ್ಲ. ನಮ್ಮ ತಂದೆಗೆ ಇಂಗ್ಲೆಂಡಿನಲ್ಲಿ ವಿಕಲಾಂಗರು ಉಪಯೋಗಿಸುತ್ತಿದ್ದ ಮೂರು ಚಕ್ರದ 'ಟ್ರೈಸಿಕಲ್' ಬಹಳ ಹಿಡಿಸಿತು. ಅವರಿಗೆ ಅದು ನನಗೊಂದು ದಿನ ಬಹಳ ಉಪಯೋಗಿಯಾಗುವುದೆಂಬ ನಂಬಿಕೆ ಇತ್ತು.

ಈ ಮಧ್ಯದಲ್ಲಿ ನನಗೆ ಪಾಠ ಕಲಿಸಲು ಒಬ್ಬ ಮೇಷ್ಟ್ರನ್ನು ಇಟ್ಟರು. ಅವರು ನನಗೆ ಇಂಗ್ಲಿಷ್ ಮತ್ತು ಗಣಿತವನ್ನು ಕಲಿಸುತಿದ್ದರು. ಮೊದಲು ನನಗೆ ಅವರೊಡನೆ ಸಮಸ್ಯೆಗಳಿದ್ದವು, ಆದರೆ ನಂತರ ನಾವು ಒಳ್ಳೆಯ ಸ್ನೇಹಿತರಾದೆವು. ನನಗೆ ಗಣಿತಚೆನ್ನಾಗಿ ಬರುತಿತ್ತು, ಆದರೆ ಆ ಮೇಷ್ಟ್ರಿಗೆ ಆಲಜೀಬ್ರ ಮತ್ತು ಜ್ಯಾಮೆಟ್ರಿಯಲ್ಲಿ ಆಸಕ್ತಿ ಇರಲಿಲ್ಲ. ಆದ್ದರಿಂದ ಅವರು ಅವನ್ನು ಹೇಳಿಕೊಡುತ್ತಿರಲಿಲ್ಲ. ನಾವು ಬಹಳ ಓದುತಿದ್ದೆವು. ನಾನು ಕಥೆಗಳನ್ನು ಓದುತಿದ್ದೆ, ನಂತರ ಅವನ್ನು ನಾವು ಚರ್ಚಿಸುತಿದ್ದೆವು. ಒಬ್ಬರಾದ ಮೇಲೆ ಒಬ್ಬರು ಮೇಷ್ಟ್ರು ಮನೆಗೆ ಬರುತಿದ್ದರು. ನಮ್ಮ ಮನೆ ಶಾಲೆಯಂತಿತ್ತು.

ನನಗೆ ಹದಿಮೂರು ವಯಸ್ಸಾದಾಗ ನನಗೆ ಎಸ್.ಎಸ್.ಎಲ್.ಸಿ ಪರೀಕ್ಷೆ ಕಟ್ಟಿ ಪಾಸಾಗಬೇಕು ಎನಿಸಿತು. ಆದರೆ ಹೇಗೆ ಎಂದು ತಿಳಿಯಲಿಲ್ಲ. ಅದಕ್ಕೆ ಎಲ್.ಎಸ್ ಪಾಸಾದ

ಅಥವಾ ಸ್ಕೂಲಿನಲ್ಲಿ ಓದಿದ ಸರ್ಟಿಫಿಕೇಟ್ ಬೇಕಿತ್ತು. ಆ ಸಮಯದಲ್ಲಿ ನಮ್ಮ ತಂದೆ ಸೆಂಚುರಿ ಕ್ಲಬ್ಬಿನಲ್ಲಿ ಆಗಿನ ಡೈರೆಕ್ಟರ್ ಆಫ್ ಪಬ್ಲಿಕ್ ಇನ್ಸ್ಟ್ರಕ್ಷನ್ ಅವರನ್ನು ಭೇಟಿ ಮಾಡಿದರು. ಅವರಿಗೆ ನನ್ನ ವಿಷಯವನ್ನು ಹೇಳಿದಾಗ ಅವರು ನನಗೆ ವಿಶೇಷ ವಾಗಿ ಸೌಲಭ್ಯವನ್ನು ಕೊಡುವುದಾಗಿ ಹೇಳಿ ಪರೀಕ್ಷೆಗೆ ಮೂರು ತಿಂಗಳು ಮುಂಚೆ ತಮ್ಮನ್ನು ಕಾಣ ಹೇಳಿದರು. ನಮ್ಮ ತಂದೆ ಬಹಳ ಖುಷಿಯಾಗಿ ಮನೆಗೆ ಹಿಂದಿರುಗಿದರು.

ಪರೀಕ್ಷೆಗೆ ತಯಾರಿ ಮಾಡಿಕೊಳ್ಳಲು ನನ್ನ ಹತ್ತಿರ ಎರಡು ವರ್ಷಗಳ ಸಮಯವಿತ್ತು. ನಾವು ಸಿಲಬಸ್ ಮತ್ತು ಪುಸ್ತಕಗಳನ್ನು ಸಂಗ್ರಹಿಸಲು ಶುರುಮಾಡಿದೆವು. ರಮೇಶ್ ನನಗೆ ಕೆಲವು ಪುಸ್ತಕ ಮತ್ತು ನೋಟ್ಸ್ ಬೆಂಗಳೂರಿನಿಂದ ಕಳುಹಿಸಿದನು. ನಾನೂ ಬಹಳ ಕಷ್ಟಪಟ್ಟು ಓದಿದೆ. ಪರೀಕ್ಷೆಗೆ ಐದು ತಿಂಗಳಿರುವಾಗ ನಮ್ಮ ತಂದೆ ಡಿ.ಪಿ.ಐ ಯನ್ನು ಸಂದರ್ಶಿಸಲು ಪ್ರಯತ್ನ ಪಟ್ಟರು. ಆದರೆ ಅವರು ನಮಗೆ ನೆರವಾಗುವುದರ ಬದಲು ನಮ್ಮ ತಂದೆಯನ್ನು ನೋಡದೇ ಇರಲು ಯತ್ನಿಸುತ್ತಿದ್ದರು. ನಮ್ಮ ತಂದೆಗೆ ಏನೂ ತೋಚದಂತಾಯಿತು. ಹೇಗೆ ಅವರು ಈ ಸಮಾಚಾರವನ್ನು ನನಗೆ ತಿಳಿಸುವುದು? ನಾನೋ ತಿಂಗಳಾನುಗಟ್ಟಲೆ ಮುಂಚೆಯೇ ಈ ಪರೀಕ್ಷೆಗಾಗಿ ತಯಾರಾಗಿದ್ದೆ. ನನಗೆ ಬಹಳ ನಿರಾಸೆಯಾಯಿತು, ಜೊತೆಗೆ ತನ್ನ ಮಾತಿಗೆ ತಪ್ಪಿದ ಆ ಮನುಷ್ಯನಮೇಲೆ ಬಹಳ ಕೋಪ ಬಂತು. ನಮ್ಮ ತಂದೆ ನನ್ನನ್ನು ಶಾಂತ ಗೊಳಿಸಲು ಪ್ರಯತ್ನಿಸಿದರು. ನಾನು ಯಾವ ಕೆಲಸಕ್ಕೂ ಸೇರುವುದಾಗಿರಲಿಲ್ಲವಾದ್ದರಿಂದ ನನಗೆ ಆ ಸರ್ಟಿಫಿಕೇಟ್ ಬೇಕಿರಲಿಲ್ಲ ಎಂದರು. ಕೊನೆಗೆ ನಾನು ಆ ವಿಷಯವನ್ನು ಮರೆತೆ. ಆದರೆ ೧೯೭೦ ರ ತನಕ.

ನಾನು ಬೆಂಗಳೂರಿನಲ್ಲಿದ್ದಾಗ ಅಲ್ಲಿನ ಸರ್ಕಾರವು ೧೮ ವರ್ಷ ತುಂಬಿದವರು ಯಾರಾದರೂ ಎಸ್.ಎಸ್.ಎಲ್.ಸಿ. ಪರೀಕ್ಷೆಯನ್ನು ಪ್ರೈವೇಟ್ ಆಗಿ ಕಟ್ಟ ಬಹುದು, ಅದಕ್ಕೆ ಸ್ಕೂಲಿನ ಹಾಜರಿ ಬೇಕಾಗಿಲ್ಲ ಎಂಬ ಠರಾವು ಹೊರಡಿಸಿದರು. ಚಂದ್ರ ಸುಬ್ರಮಣ್ಯಂ ಎಂಬ ನಮ್ಮ ಸ್ನೇಹಿತರು ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಸೈನ್ಸ್ ನಲ್ಲಿ ಮೈಕ್ರೋಬಯಾಲಜಿ ಓದುತಿದ್ದರು. ಅವರು ನನಗೆ ಫೋನ್ ಮಾಡಿ ಈ ವಿಷಯ ತಿಳಿಸಿದರು. ನಾನು ಅವರಿಗೆ "ನನಗ್ಯಾಕೆ ಈ ವಿಷಯ ಹೇಳ್ತಿದ್ದೀರಾ?" ಅಂತ ಕೇಳಿದೆ. ಅದಕ್ಕೆ ಅವರು "ನೀನು ಪರೀಕ್ಷೆಗೆ ಕಟ್ಟಲಿ ಅಂತ" ಎಂದು ಹೇಳಿದರು. ಹಳೆಯ ಕಹಿ ನೆನಪುಗಳು ಮನಸ್ಸಿನಲ್ಲಿ ಮರುಕಳಿಸಿದವು. ನಾನು ಅವರಿಗೆ "ನನಗೆ ಪರೀಕ್ಷೆ ಕಟ್ಟುವುದು ಬೇಕಾಗಿಲ್ಲ, ನಾನು ಓದಿದೆಲ್ಲಾ ಮರೆತು ಹೋಗಿದೆ" ಎಂದೆ. ಆದರೆ ಅವರು ಬಿಡಲಿಲ್ಲ ವಾರಕೊಮ್ಮೆ ನನಗೆ ಬಿಡದೆ ಫೋನ್ ಮಾಡುತ್ತಾ ಇದ್ದರು. ಕೊನೆಗೆ ನಿಧಾನವಾಗಿ ನನ್ನ ಮನಸ್ಸಿನಲ್ಲಿ ಬದಲಾವಣೆ ಆಯಿತು.

ಅವರ ಬಿಡದ ಪ್ರಯತ್ನ ಕೆಲಸ ಮಾಡಿತು. ನನ್ನ ಮನಸ್ಸಿನಲ್ಲಿಯೂ "ಯಾಕೆ ನಾನು ಪರೀಕ್ಷೆ ಬರೆಯಬಾರದು" ಎಂಬ ಯೋಚನೆ ಬೆಳೆಯ ತೊಡಗಿತು. ನಮ್ಮ ತಂದೆಗೆ ನನ್ನ ಈ ನಿರ್ಧಾರ ಬಹಳ ಖುಷಿ ಕೊಟ್ಟಿತು. ಮೇಷ್ಟ್ರುಗಳು ಮನೆಗೆ ಬಂದರು. ಮತ್ತೊಮ್ಮೆ ಪರೀಕ್ಷೆಯ ತಯಾರಿ ಶುರುವಾಯಿತು. ನನಗೆ ಪರೀಕ್ಷೆಯನ್ನು ಭಾಗ ಭಾಗ ವಾಗಿ ತೆಗೆದುಕೊಳ್ಳಲು ಹೇಳಿದರು. ನಾನು ಮೊದಲು ಸುಲಭವಾದ ವಿಷಯಗಳನ್ನು ಓದಿದೆ. ಆ ಸಮಯದಲ್ಲಿ ನನ್ನ ಜೀವನದಲ್ಲಿ ಅನೇಕ ಚಟುವಟಿಕೆಗಳು ನಡೆಯುತ್ತಿದ್ದವು. ನನ್ನ ವಿದೇಶ ಪ್ರಯಾಣದ ನಂತರ ನಾನು ಎಸ್.ಎಸ್.ಎಲ್.ಸಿ. ಪರೀಕ್ಷೆ ಪಾಸ್ ಮಾಡಿ ಸರ್ಟಿಫಿಕೇಟ್ ಪಡೆದೆ. ಈ ಸಾಧನೆಗೆ ಒಂದೂವರೆ ವರ್ಷ ಬೇಕಾಯಿತು.

ಅನಂತರ ನಮ್ಮ ತಂದೆ ನನ್ನ ಕಾಲೇಜಿನ ಓದಿನ ಬಗ್ಗೆ ಯೋಚಿಸತೊಡಗಿದರು. ನಮ್ಮ ಮನೆಯ ಹತ್ತಿರ ವಿದ್ದ ಎಮ್.ಇ.ಎಸ್ ಕಾಲೇಜಿನ ಪ್ರಾಂಶುಪಾಲರನ್ನು ಕಂಡು ಪ್ರೀ ಯುನಿವರ್ಸಿಟಿ ಕೋರ್ಸಿಗೆ ಸೇರಬೇಕೆಂದೆ. ನನ್ನ ತರಗತಿ ಗ್ರೌಂಡ್ ಫ್ಲೋರಿನಲ್ಲೇ ಇರಬೇಕಾಗಿತ್ತು. ಸೇರಿದ ಹದಿನೈದು ದಿನಕ್ಕೇ ಕಾಲೇಜನ್ನು ಬಿಟ್ಟೆ, ಯಾಕೆಂದರೆ ಹದಿನಾರು ಹದಿನೇಳು ವಯಸ್ಸಿನ ಹುಡುಗ ಹುಡುಗಿಯರ ಜೊತೆ ಕುಳಿತರೆ, ಅವರು ನಡು ವಯಸ್ಸಿನ ನನ್ನನ್ನು ಸಹಪಾಠಿಯಾಗಿ ಒಪ್ಪುತ್ತಿರಲಿಲ್ಲ. ಅವರೊಡನೆ ನನಗೆ ಸ್ಪಂದಿಸಲೂ ಆಗುತ್ತಿರಲಿಲ್ಲ. ಆದ್ದರಿಂದ ನಾನು ನನ್ನನ್ನು ಸಂಜೆ ಕಾಲೇಜಿಗೆ ವರ್ಗ ಮಾಡುವಂತೆ ಕೇಳಿಕೊಂಡೆ. ಇದು ಸರಿಹೋಯಿತು. ಇಲ್ಲಿ ನನ್ನ ಸಹಪಾಠಿಗಳು ನನಗಿಂತ ವಯಸ್ಸಾದವರಾಗಿದ್ದರು. ಬೆಳಿಗ್ಗೆ ಹೊತ್ತಿನಲ್ಲಿ ಕೆಲಸಕ್ಕೆ ಹೋಗಿ ಅವರು ಸಂಜೆ ಕಾಲೇಜಿನಲ್ಲಿ ಓದುತ್ತಿದ್ದರು. ನಮ್ಮ ಕ್ಲಾಸ್ ಚೆನ್ನಾಗಿತ್ತು. ನನಗೆ ಪ್ರೀ ಯೂನಿವರ್ಸಿಟಿ ಸರ್ಟಿಫಿಕೇಟ್ ಸಿಕ್ಕಿತು. ಆದರೆ ನನ್ನ ವಯಸ್ಸಿನ ಕಾರಣ ಅದನ್ನು ತೆಗೆದುಕೊಳ್ಳುವಾಗ ನನಗೆ ಬಹಳ ಸಂಕೋಚವಾಯಿತು. ನಮ್ಮ ತಂದೆಗೆ ನಾನು ಆರ್ಟ್ಸ್‌ನಲ್ಲಿ ಡಿಗ್ರೀಗೆ ಓದಬೇಕೆಂಬ ಆಸೆ ಇತ್ತು, ಆದರೆ ಕಾಲೇಜಿನಲ್ಲಿ ಆ ತರಗತಿಯನ್ನು ನನಗೋಸ್ಕರ ಗ್ರೌಂಡ್ ಫ್ಲೋರಿಗೆ ಸ್ಥಳಾಂತರಿಸಲಾಗಲಿಲ್ಲ. ಹಾಗಾಗಿ ನನ್ನ ಓದು ಅಲ್ಲಿಗೇ ನಿಂತಿತು.

ಕೆಲವು ಸಲ ನನಗೆ ನಾನೂ ಓದಿ ಡಿಗ್ರೀ ಪಡೆದು ಕೆಲಸಕ್ಕೆ ಸೇರಿದ್ದರೆ? ಸಂಪಾದಿಸಿ ನನ್ನದೇ ಆದ ಹಣವಿದ್ದಿದರೆ? ಎಂಬ ಯೋಚನೆಗಳು ಮನಸ್ಸಿನಲ್ಲಿ ಹಾದು ಹೊಗುತ್ತಿತ್ತು. ಆದರೆ, ನಮ್ಮ ತಂದೆ ತಾಯಿ ನಾನು ಹಣಕಾಸಿನ ವಿಷಯದಲ್ಲಿ ಸ್ವಾವಲಂಬಿಯಾಗಿರುವುದರ ಬಗ್ಗೆ ಎಂದೂ ಮಾತಾಡಿರಲಿಲ್ಲ. ಒಂದು ಸಲ, ಅವರು ಕೆಲಸದಿಂದ ನಿವೃತ್ತರಾದ ಬಳಿಕ ನನ್ನ ಖರ್ಚಿಗೆ ಪ್ರತಿ ತಿಂಗಳು ಎಷ್ಟು ಹಣ ಬೇಕು ಎಂದು ಕೇಳಿದ್ದರು. ನಾನು ಐನೂರು

ರೂಪಾಯಿ ಎಂದು ಹೇಳಿದ್ದೆ. ಅದು ೧೯೫೭ ರಲ್ಲಿ. ನನಗೆ ಹಣಕಾಸಿನ ಜವಾಬ್ದಾರಿಯನ್ನು ಅಮ್ಮ ಚಿಕ್ಕ ವಯಸ್ಸಿನಿಂದ ಕಲಿಸಿದ್ದಳು. ಈಗಿನ ಬೆಲೆಗಳಲಿ ೫೦೦ ರೂಪಾಯಿಗಳಿಂದ ಏನಾಗುತ್ತೆ? ನನಗೆ ನಾನು ಕೆಲಸಕ್ಕೆ ಸೇರದಿದ್ದದ್ದು ಯಾವ ವಿಧದಲ್ಲೂ ಬಾಧಿಸುತ್ತಿಲ್ಲ. ನಮ್ಮ ತಂದೆ ತಾಯಿ ಸಾಕಷ್ಟು ಸೌಕರ್ಯಗಳನ್ನು ಒದಗಿಸಿದ್ದರು. ಎಷ್ಟು ಜನಕ್ಕೆ ಆ ರೀತಿಯ ಅದೃಷ್ಟವಿರುತ್ತೆ?

ನನ್ನ ಎಸ್.ಎಸ್.ಎಲ್.ಸಿ. ಪರೀಕ್ಷೆ ಬರೆಯುವ ಪ್ರಯತ್ನವು ವಿಫಲವಾದ ನಂತರ ಬಹಳ ಸಂಗತಿಗಳು ನಡೆದಿದ್ದವು. ನಿಧಾನವಾಗಿ ನನ್ನ ಜೀವನದಲ್ಲಿ ಬದಲಾವಣೆಗಳು ಶುರುವಾದವು, ಜೊತೆಗೆ ಇವು ಇನ್ನೂ ಸಾವಿರಾರು ಜನರ ಜೀವನದಲ್ಲಿ ಬದಲಾವಣೆಯನ್ನೂ ತಂದಿತು. ಚಕ್ರಗಳಮೇಲೆ ನನ್ನ ಪಯಣ ಪ್ರಾರಂಭವಾಗಿತ್ತು.

* * *

# ಶುರು ಶುರುವಿನಲ್ಲಿ

ನಮ್ಮ ತಂದೆ ಬಹಳ ಮುಂದಾಲೋಚನೆಯುಳ್ಳವರು.ಅವರು ತಮ್ಮ ಮತ್ತು ನನ್ನ ಕ್ಷೇಮ, ಜೀವನದ ಬಗ್ಗೆ ಯೋಚಿಸಿದ್ದರು. ಮುವತ್ತೈದು ವರ್ಷಗಳು ಮದರಾಸಿನಲ್ಲಿದ್ದರೂ ಅವರು ಆ ಊರಿನೊಡನೆ ಬಾಂಧವ್ಯ ಬೆಳೆಸಿಕೊಳ್ಳಲಿಲ್ಲ. ನಮ್ಮ ಮೂಲ ಬೆಂಗಳೂರಾದ್ದರಿಂದ ಅದರೊಡನೆ ನಮ್ಮ ಬಾಂಧವ್ಯ ಬೆಳೆದಿತ್ತು. ಅವರು ಕೆಲಸ ದಿಂದ ನಿವೃತ್ತರಾದಾಗ ಅವರಿಗೆ ೫೨ ವಯಸ್ಸು. ಅದೇನೋ, ಐಸಿಐಯಲ್ಲಿ ಭಾರತೀಯ ಆಫೀಸರ್‌ಗಳು ಅವರ ಇಂಗ್ಲೀಷ್ ಸಹೋದ್ಯೋಗಿಗಳಿಗಿಂತ ೨ ವರ್ಷ ಮುಂಚೆ ನಿವೃತ್ತರಾಗಬೇಕಿತ್ತು. ನಮ್ಮ ತಂದೆ ತೋಟಗಳ ಊರಾದ ಬೆಂಗಳೂರಿಗೆ ಬಂದು ನೆಲೆಸಲು ಎದುರು ನೋಡುತ್ತಿದ್ದರು. ದೂರ ದೂರಕ್ಕೆ ವಾಕಿಂಗ್, ಕ್ಲಬ್ಬಿನಲ್ಲಿ ಬೀರ್ ಕುಡಿಯುವುದು, ಅವರ ಸಹೋದರರೊಡನೆ ಒಡನಾಟ ಇವೆಲ್ಲವನ್ನೂ ಅವರು ಎದುರು ನೋಡುತ್ತಿದ್ದರು. ನಾವು ಶಾಂತವಾದ ಮಲ್ಲೇಶ್ವರಂ ಬಡಾವಣೆಯಲ್ಲಿ ಒಂದು ಮನೆ ಮಾಡಿದೆವು. ಅವರು ನನ್ನನ್ನು ತಮ್ಮ 'ಆಸ್ಟಿನ್' ಕಾರಿನಲ್ಲಿ ಊರೆಲ್ಲಾ ಸುತ್ತಿಸಿದರು. ಆ ದಿನಗಳಲ್ಲಿ ಬೆಂಗಳೂರು ಬಹಳ ಸುಂದರ ಮತ್ತು ಹಸಿರಾಗಿತ್ತು. ಬೆಳಿಗ್ಗೆ ೧೦ ಘಂಟೆಯವರೆಗೆ ಮಂಜು ಇರುತ್ತಿತ್ತು, ಮತ್ತು ಚಳಿಗೆ ದಪ್ಪ ಕೋಟ್ ಬೇಕಾಗುತ್ತಿತ್ತು.

ಅವರಿಗೆ ನಾನು ನನ್ನ ಪಾಡಿಗೆ ನಾನು ಮಲ್ಲೇಶ್ವರದಲ್ಲಿ ಓಡಾಡಬೇಕು ಎಂಬ ಆಸೆ ಇತ್ತು. ಅವರು ಇಂಗ್ಲೆಂಡಿನಲ್ಲಿ ಇದ್ದಾಗ ಅಲ್ಲಿನ ಕೈ ಚಾಲಿತ 'ಟ್ರೈಸಿಕಲ್' ನೋಡಿ ಮೆಚ್ಚಿಕೊಂಡಿದ್ದರು. ಆ ರೀತಿಯವಾಹನವನ್ನು ಭಾರತದಲ್ಲಿ ಯಾರಾದರೂ ಮಾಡುತ್ತಾರಾ ಎಂದು ಹುಡುಕುತ್ತಿದ್ದರು. 'ರೆಡ್ ಕ್ರಾಸ್ ಹೋಮ್' ನಲ್ಲಿ ಸೈನ್ಯದ ಲಕ್ವ ಪೀಡಿತ ಜವಾನರಿಗೋಸ್ಕರ ಈ ರೀತಿಯ 'ಟ್ರೈಸಿಕಲ್' ಮಾಡುವರೆಂದು ತಿಳಿಯಿತು, ಆದರೆ ಅವರು ಅದನ್ನು ಬೇರೆಯವರಿಗೆ ಕೊಡುತ್ತಿರಲಿಲ್ಲ. 'ರೆಡ್ ಕ್ರಾಸ್ ಹೋಮ್' ನಲ್ಲಿದ್ದ ದಿವಾನ್ ಎನ್ನುವವರು ತಮ್ಮ 'ಟ್ರೈಸಿಕಲ್'ನ್ನು ನನಗೆ ಉಪಯೋಗಿಸಿ ನೋಡಲು ಕೊಟ್ಟರು. ಅವರು ಬೇಗ ನಮ್ಮ ಮಿತ್ರರಾಗಿ ಬಿಟ್ಟರು. ನಾನು ಆಗಾಗ ಅವರನ್ನು ನೋಡಲು ಹೋಗಿ ಅವರ 'ಟ್ರೈಸಿಕಲ್' ಉಪಯೋಗಿಸುತ್ತಿದ್ದೆ. ಕೊನೆಗೆ ನಮ್ಮ ದೊಡ್ಡಪ್ಪ ಇಂಗ್ಲೆಂಡಿಗೆ ಹೋದಾಗ ಅವರಿಗೆ ನನಗೆ ಬೇಕಾದ ಟ್ರೈಸಿಕಲ್ಲಿನ ವಿವರಗಳನ್ನು ಕೊಟ್ಟು ಅಲ್ಲಿಂದ ಒಂದು ಟ್ರೈಸಿಕಲ್ ತರಿಸಿಕೊಂಡೆವು. ಆದರೆ ಅದು ಬಂದ ದಿನ ಅದನ್ನು ನಾನು ನಮ್ಮ ಗೇಟಿನಿಂದ ಹೊರಗೆ ತೆಗೆದು ಕೊಂಡು ಹೋಗಲಾಗಲಿಲ್ಲ, ಏಕೆಂದರೆ ರಸ್ತೆಯ ಸ್ಥಿತಿ ಹಾಗಿತ್ತು. ನಾವು ಅಲ್ಲಿನ ಕಾರ್ಪೋರೇಟರ್ ಮೊರೆ ಹೊಕ್ಕೆವು. ಒಂದು ವಾರದೊಳಗೆ ಅವರು ರಸ್ತೆ ಸರಿಮಾಡಿಸಿದರು.

ನನಗೆ ಈಗ ಹೊರಗೂ ಹೋಗಲಾಯಿತು. ಮಲ್ಲೇಶ್ವರದ ರಸ್ತೆಗಳಲ್ಲಿ ಏರಿಳಿತ ಜಾಸ್ತಿ. ಕೆಳಗಿಳಿಯುವಾಗ ಬಹಳ ಚೆನ್ನಾಗಿರುತ್ತಿತ್ತು, ಆದರೆ ಮತ್ತೆ ಮೇಲೇರುವುದು ಬಹಳ ಕಷ್ಟವಾಗುತ್ತಿತ್ತು. ನನಗೆ ಯಾವಾಗಲೂ ಸಹಾಯ ಸಿಗುತ್ತಿತ್ತು. ನನ್ನ ಕಸಿನ್‌ಗಳ್ಯಾರಾದರೂ ನನ್ನ ಜೊತೆ ಬರುತ್ತಿದ್ದರು ಮತ್ತು ನಾವು ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಸೈನ್ಸ್ ಗೆ ಹೋಗುತ್ತಿದ್ದೆವು. ಓಡಾಡಲಾಗಿದ್ದು ನನ್ನ ಜೀವನದಲ್ಲಿ ದೊಡ್ಡ ಬದಲಾವಣೆಯನ್ನು ತಂದಿತು. ಕೆಲವೇ ದಿನಗಳಲ್ಲಿ ನಮ್ಮ ತಂದೆಯು ಮುಂಬೈಯಲ್ಲಿ ಸ್ಟಾಂಡರ್ಡ್ ಬ್ಯಾಟರಿ ಕಂಪನಿಯಲ್ಲಿ ಕಲಸಕ್ಕೆ ಸೇರಿಕೊಂಡರು. ಇದು ನಮ್ಮ ಮಾವ ನಡೆಸಿತ್ತಿದ್ದ ಕಂಪನಿ. ಈ ಕಾರಣ ನಾನು ಎರಡು ವರ್ಷ ಮುಂಬೈಯಲ್ಲಿ ಇದ್ದೆ. ಆಗ ಅಲ್ಲಿನ ಹಾಜಿ ಅಲಿ ಹತ್ತಿರವಿದ್ದ ಮಕ್ಕಳ ಆರ್ಥೋಪೀಡಿಕ್ ಆಸ್ಪತ್ರೆಯ ವೈದ್ಯರಾದ ಡಾ. ಮುಲ್ಲ ಫಿರೋಜ್ ಮತ್ತು ಶ್ರೀಮತಿ ಕೆಲ್ಲೋಕ್ ನನ್ನ ಚಿಕಿತ್ಸೆ ಮಾಡಿದರು. ಈ ಸಮಯದಲ್ಲಿ ನನಗೆ ಫಾತಿಮಾ ಇಸ್ಮೈಲ್ ಪರಿಚಯವಾಯಿತು. ಅವಳು ಒಂದು ಆಸ್ಪತ್ರೆಯನ್ನು ತೆಗೆದಿದ್ದಳು. ಅದು ಇಡೀ ಏಷ್ಯಾದಲ್ಲೇ ಹೆಸರುವಾಸಿಯಾಗಿತ್ತು. ಅವಳು "ಫೆಲೋಷಿಪ್ ಆಫ್ ದಿ ಫಿಸಿಕಲ್ಲಿ ಹಾಂಡಿಕ್ಯಾಪ್ಡ್" ಎಂಬ ಸಂಸ್ಥೆಯನ್ನು ಪ್ರಾರಂಭಿಸಿದ್ದಳು. ಅವಳು ಅಲ್ಲಿ ನಡೆಸುತ್ತಿದ್ದ ದೊಡ್ಡ ಕಾರ್ಯಾಗಾರವನ್ನು ನೋಡಿ ನನಗೆ ಆಶ್ಚರ್ಯವಾಯಿತು. ಅದರಲ್ಲಿ ಪ್ರತಿಯೊಂದು ಕೆಲಸವನ್ನೂ ವಿಕಲಾಂಗರೇ ಮಾಡುತ್ತಿದ್ದರು. ಅದರ ವೈಸ್ ಪ್ರಸಿಡಂಟ್ ಆದ ಹೇರಂಭ್ ಖೇರ್ ಕೂಡಾ ವಿಕಲಾಂಗರು. ಇದನ್ನು ನೋಡಿ ನಮಗೂ ಈ ರೀತಿಯ ಚಟುವಟಿಕೆಯನ್ನು ನಮ್ಮ ಊರಿನಲ್ಲಿ ಪ್ರಾರಂಭಿಸುವ ಪ್ರೇರಣೆ ಸಿಕ್ಕಿತು. ಖೇರ್ ಅವರ ಮಗ ಬೆಂಗಳೂರಿನ ಋಷಿ ವ್ಯಾಲಿ ಸ್ಕೂಲಿನಲ್ಲಿ ಓದುತ್ತಿದ್ದರಿಂದ ಅವರು ಆಗಾಗ ಬೆಂಗಳೂರಿಗೆ ಬರುತ್ತಿದ್ದರು. ನಮ್ಮ ಪ್ರಯತ್ನಗಳು ಒಂದೇ ದಿಕ್ಕಿನಲ್ಲಿ ಹರಿಯ ತೊಡಗಿದವು.

೧೯೫೭ ರಲ್ಲಿ ಬೆಂಗಳೂರಿನಲ್ಲಿ ಎನ್.ಡಿ.ದಿವಾನ್ ಮತ್ತು ಹೇರಂಭ್ ಖೇರ್ ಅವರು ಭೇಟಿ ನಮ್ಮ ತಂದೆಯ ಮೂಲಕ ಆಯಿತು. ಅವರಿಬ್ಬರಲ್ಲೂ ಒಂದು ಆಳವಾದ ಗೆಳೆತನ ಬೆಳೆಯಿತು. ಫಾದರ್ ಅಂಯೋವರ್ಘ್ ಥೋಮಸ್, ಬಿಷಪ್ ಕಾಟನ್ ಸ್ಕೂಲಿನ ಪ್ರಾಂಶುಪಾಲರು ಡಾರ್ಜೀಲಿಂಗ್‌ನಲ್ಲಿ ಕೆಲಸ ಮಾಡುತ್ತಿದ್ದಾಗ ಅವರಿಗೆ ಪೋಲಿಯೋ ಕಾಯಿಲೆ ಆಯಿತು. ನಮಗೆ ಅವರು ಸಿನೆಮಾ ನೋಡಲು ಹೋದಾಗ ಪರಿಚಯವಾದರು. ನಂತರ ಅವರು ನಮ್ಮ ಚಟುವಟಿಕೆಗಳಲ್ಲಿ ಭಾಗಿಯಾದರು. ಮೊದ ಮೊದಲು ನಾವು ತಿಂಗಳಿಗೊಮ್ಮೆ ಯಾರಾದರೊಬ್ಬ ಸದಸ್ಯರ ಮನೆಯಲ್ಲಿ ಸೇರುತ್ತಿದ್ದೆವು. ಈ ಸಭೆಗಳಿಗೆಲ್ಲಾ ದಿವಾನ್ ಅವರೇ ಕೇಂದ್ರ ಬಿಂದು. ಕ್ರಮೇಣ ನಮ್ಮ ಗುಂಪು ೪೦ ರಷ್ಟಾಯಿತಾದ್ದರಿಂದ ಅದಕ್ಕೆ ಒಂದು ವ್ಯವಸ್ಥಿತ ಕಾರ್ಯಕ್ರಮವಿರಬೇಕು ಎಂದು ಅನೇಕರಿಗೆ ಅನ್ನಿಸಿತು. ನನಗೆ

ಇನ್ನೂ ಫಾತಿಮ ಇಸ್ಮೈಲಳ ಕಾರ್ಯಾಗಾರವೇ ಮನಸ್ಸಿನಲ್ಲಿ ಇತ್ತು. ದಿವಾನ್ ಮತ್ತು ಫಾದರ್ ಥೋಮಸ್ ಅವರಿಗೆ ವಿಕಲಾಂಗ ಮಕ್ಕಳಿಗೆ ಒಂದು ಶಾಲೆ ತೆಗೆಯುವ ಯೋಚನೆ ಇತ್ತು. ಲಕ್ಷ್ಮಿ ಮೆನನ್‌ಗೆ – ಮತ್ತೊಬ್ಬ ವ್ಹೀಲ್ ಚೇರ್ ಉಪಯೋಗಿಸುತ್ತಿದ್ದ ಮಹಿಳೆ – ಒಂದು ಸ್ವಾಸ್ಥ್ಯ ಕೇಂದ್ರವನ್ನು ತೆಗೆಯುವ ಯೋಚನೆ. ಈ ನಮ್ಮ ಸಮಾಲೋಚನೆಗಳು ನಮ್ಮ ಸಂಸ್ಥೆಯನ್ನು "ಅಸೋಸಿಯೇಷನ್ ಆಫ್ ಫಿಸಿಕಲ್ಲಿ ಹ್ಯಾಂಡಿಕ್ಯಾಪ್ಡ್" ಎಂಬ ಹೆಸರಿನಿಂದ ನೋಂದಣಿ ಮಾಡುವಂತೆ ೧೯೮೯ ರ ಮೇ ತಿಂಗಳಲ್ಲಿ ಪ್ರೇರೇಪಿಸಿದವು. ನಮ್ಮ ಕನಸು ನೆರವೇರಿತು. ಆ ಸಂಸ್ಥೆಗೆ ಫಾದರ್ ಥೋಮಸ್ ಅಧ್ಯಕ್ಷ ರಾದರು ಮತ್ತು ಲಕ್ಷ್ಮಿ ಮೆನನ್ ಕಾರ್ಯದರ್ಶಿಯಾದರು. ನಮ್ಮ ತಂದೆಯನ್ನು ಖಜಾಂಚಿಯಾಗಿ ಆಯ್ಕೆ ಮಾಡಲಾಯಿತು.

ನಾವು ಕೇಂಬ್ರಿಜ್ ಲೇಔಟಿನಲ್ಲಿ, ಒಂದು ಬಾಡಿಗೆ ಮನೆಯಲ್ಲಿ ಒಂದು ತರಬೇತಿ ಕೇಂದ್ರವನ್ನು ಪ್ರಾರಂಭಿಸಿದೆವು. ಅಲ್ಲಿ ವಿಕಲಾಂಗ ಹೆಂಗಸರಿಗೆ ಹೊಲಿಗೆ ಕಲಿಸಲಾಗುತಿತ್ತು. ಆದರೆ ನಮ್ಮ ಈ ಪ್ರಯತ್ನ ಹೆಚ್ಚು ಏನೂ ಬೆಳೆಯಲಿಲ್ಲ. ನನ್ನ ತಂದೆ ನನ್ನನ್ನು ಅನೇಕಸಲ ಅಲ್ಲಿನ ಕೆಲಸದ ಉಸ್ತುವಾರಿ ಮಾಡಲು ಅಲ್ಲಿಗೆ ಕರೆದು ಕೊಂಡು ಹೋಗಬೇಕಾಗುತಿತ್ತು. ಆದರೆ, ನಾನು ಹಿಂತಿರುಗಿ ಬಂದ ನಂತರ ಅಲ್ಲಿ ಕೆಲಸವನ್ನು ನೋಡಿಕೊಳ್ಳಲು ನಂಬಿಕಸ್ಥರು ಯಾರೂ ಇರಲಿಲ್ಲ. ಆದ್ದರಿಂದ ಈ ಚಟುವಟಿಕೆಯನ್ನು ನಮ್ಮ ಮನೆಗೆ ಹತ್ತಿರ ನಡೆಸಬೇಕಾಗಿತ್ತು. ನಮ್ಮ ಮನೆಯ ಹತ್ತಿರವಿರುವ ಎಮ್.ಇ.ಡಬ್ಲ್ಯೂ.ಎಸ್. ಕ್ಲಬ್ಬಿನಲ್ಲಿ ನಮಗೆ ಒಂದು ರೂಂ ಕೊಟ್ಟರು. ಅಮ್ಮ ನನ್ನ ಟ್ರೈಸಿಕಲ್ ಅನ್ನು ನಮ್ಮ ಮನೆಯಿಂದ ತಳ್ಳಿಕೊಂಡು ಮ್ಯೂಸ್ ಕ್ಲಬ್ಬಿಗೆ ಕರೆದುಕೊಂಡು ಹೋಗುತ್ತಿದ್ದರು. ಅಲ್ಲಿ ನಾನು ಅಲ್ಲಿನ ಕೊಳಕು ಮೆಟ್ಟಲುಗಳಮೇಲೆ ತೆವಳಿ ಒಳಗೆ ಹೋಗ ಬೇಕಾಗಿತ್ತು. ಕೆಲವು ದಿನಗಳಿಗೆ ಇದೂ ಬೇಸರವಾಯಿತು. ನಮ್ಮ ಚಟುವಟಿಕೆಗಳನ್ನು ನಮ್ಮ ತಂದೆಯ ಗ್ಯಾರೇಜ್‌ಗೆ ಸ್ಥಳಾಂತರಿಸಿದೆವು. ಹೊಲಿಗೆ ಮತ್ತು ಕಸೂತಿ ಕೆಲಸ ಅಷ್ಟು ಪರಿಣಾಮಕಾರಿಯಾಗಿ ಕೆಲಸಮಾಡುತ್ತಿರಲಿಲ್ಲ. ಒಂದು ಧಿನ ಆಕಸ್ಮಿಕವಾಗಿ ಒಬ್ಬ ವಿಧವೆಯೊಡನೆ ನಮ್ಮ ಪರಿಚಯವಾಯಿತು. ಅವಳು ಒಂದು ಚಿಕ್ಕ ಕಾರ್ಯಾಗಾರವನ್ನು ನಡೆಸುತ್ತಿದ್ದಳು. ಅವಳು ನಮ್ಮ ದೊಡ್ಡಪ್ಪ ಮ್ಯಾನೇಜಿಂಗ್ ಡೈರೆಕ್ಟರ್ ಆಗಿದ್ದ ಎಮ್.ಇ.ಐ. ಗೆ ಅವಳ ಕಾರ್ಯಾಗಾರದಲ್ಲಿ ತಯಾರಿಸಿದ ವಸ್ತುಗಳನ್ನು ಮಾರುತಿದ್ದಳು. ನನ್ನ ಆಗ್ರಹಕ್ಕೆ ನಮ್ಮ ತಂದೆ ಅವಳನ್ನು ಆ ವಸ್ತುಗಳನ್ನು ನಮಗೆ ಮಾರಲು ಒಪ್ಪಿಸಿದರು. ಎಮ್.ಇ.ಐ. ನ ಎಂಜಿನೀರ್ ನನಗೆ ತರಬೇತಿ ಕೊಟ್ಟರು ಮತ್ತು ನಾನು ನಮ್ಮ ಕಾರ್ಯಗಾರದಲ್ಲಿ ತರಬೇತಿ ಪಡೆಯುತ್ತಿದ್ದವರ ಕೆಲಸವನ್ನು ನೋಡಿಕೊಳ್ಳುತಿದ್ದೆ. ಕೆಲವು ದಿನಗಳಲ್ಲಿ ನಮ್ಮ ಗ್ಯಾರೇಜ್ ಚಿಕ್ಕದಾಯಿತು.

ನನಗೆ ಒಂದು ದಿನ ಎಲೀನೊರ್ ಹ್ಯೂ ಎಂಬ ಅಮೇರಿಕದ ಹೆಂಗಸು ಫೋನ್ ಮಾಡಿದ್ದು ಚೆನ್ನಾಗಿ ನೆನಪಿದೆ. ಆಕೆ ಥಿಯೊಸೋಫಿಕಲ್ ಸೊಸೈಟಿಯಲ್ಲಿ ಇರುತ್ತಿದ್ದಳು. ಅಲ್ಲಿ ಅಕ್ಕ ಪಕ್ಕದಲ್ಲಿ ಅವಳು ಒಬ್ಬ ವಿಕಲಾಂಗ ಹುಡುಗ ಭಿಕ್ಷೆ ಬೇಡುವುದನ್ನು ನೋಡಿದ್ದಳು. ನಮ್ಮ ಸಂಸ್ಥೆಯಬಗ್ಗೆ ಕೇಳಿದಾಗ ಅವಳು ಆ ಹುಡುಗನಿಗೆ ಒಂದು ಕೆಲಸ ನಮ್ಮಲ್ಲಿ ಸಿಗುತ್ತದಯೇ ಎಂದು ಕೇಳಲು ಫೋನ್ ಮಾಡಿದ್ದಳು. ನಾವು ಒಳ್ಳೆಯ ಸ್ನೇಹಿತರಾದೆವು. ನನಗೆ ಓದಲು ಪುಸ್ತಕಗಳನ್ನು ತಂದು ಕೊಡುತ್ತಿದ್ದಳು. ಕೆಲವು ಸಲ ತಾನೇ ನನಗೆ ಓದುತ್ತಿದ್ದಳು. ವಾಲ್ಟ್ ವಿಟಮ್ಯಾನ್‌ನ ಕವಿತೆಗಳನ್ನು ನನಗೆ ಪರಿಚಯ ಮಾಡಿದವಳು ಅವಳೇ.

ನಾವು ಬೆಂಗಳೂರಿಗೆ ಹಿಂದಿರುಗಿದ ನಂತರ ನನ್ನ ಕಲಿಕೆ ಭರದಿಂದ ನಡೆಯಿತು. ನನಗೆ ಸಂಗೀತ, ಹಿಂದಿ, ಪೈಂಟಿಂಗ್, ಸಾಮಾನ್ಯ ಜ್ಞಾನ, ಇತ್ಯಾದಿ ಎಲ್ಲಾದಕ್ಕೂ ಮೇಷ್ಟ್ರು ಬರುತಿದ್ದರು. ನನಗೆ ಚಿತ್ರ ಬಿಡಿಸುವುದು ಮತ್ತು ಬಣ್ಣ ತುಂಬುವುದು ಬಹಳ ಇಷ್ಟವಾಗುತಿತ್ತು. ನನ್ನ ಮೇಷ್ಟ್ರು ಬಹಳ ಆಸಕ್ತಿಯಿಂದ ನನಗೆ ಸ್ಕೆಚಿಂಗ್, ವಾಟರ್ ಕಲರ್, ಆಯಿಲ್ ಪೈಂಟಿಂಗ್ ಎಲ್ಲಾ ಹೇಳಿಕೊಟ್ಟರು. ನಾನು ಪೈಂಟ್ ಮಾಡುತಿದ್ದರೆ ಅದನ್ನು ನೋಡಿ ಸೂಕ್ತ ಸಲಹೆಗಳನ್ನು ಕೊಡುತಿದ್ದರು. ನನಗೆ ಹೆಸರಾಂತ ವ್ಯಕ್ತಿಗಳ ಚಿತ್ರ ಬಿಡಿಸುವುದು ಬಹಳ ಇಷ್ಟವಾಗುತಿತ್ತು, ಅದರಲ್ಲೂ ಅವಲ್ಲಿ ಅವರ ಹಸ್ತಾಕ್ಷರ ಮಾಡಿಸಿ ಕೊಳ್ಳುವುದು. ನಾನು ಆಚಾರ್ಯ ವಿನೋಬಾ ಭಾವೆಯ ಚಿತ್ರ ಬಿಡಿಸಿದ್ದೆ. ಅವರು ಬೆಂಗಳೂರಿಗೂ ಬಂದಿದ್ದರು. ಆದರೆ ನನಗೆ ಅವರನ್ನು ಭೇಟಿ ಮಾಡಲಾಗಲಿಲ್ಲ. ಅದಾದ ನಂತರ ನಾನು ರವೀಂದ್ರನಾಥ್ ಟಾಗೋರ್ ಮತ್ತು ಕವಿ ವಾಲ್ಟ್ ವಿಟಮ್ಯಾನ್‌ನ ಚಿತ್ರ ಬಿಡಿಸಿದೆ.

ನನಗೆ ಪ್ರಧಾನ ಮಂತ್ರಿ ಜವಹರಲಾಲ್ ನೆಹ್ರೂ ಕಂಡರೆ ಬಹಳ ಮೆಚ್ಚುಗೆ. ಅವರ ಪುಸ್ತಕಗಳನ್ನು ನಾನು ಓದಿದ್ದೆ. ತಂದೆ ನನಗೆ ಅವರ 'ಲೆಟರ್ಸ್ ಟು ಮೈ ಡಾಟರ್' ತಂದು ಕೊಟ್ಟಿದ್ದರು. ಅವರ ವ್ಯಕ್ತಿತ್ವದಿಂದ ಪ್ರಭಾವಿತಳಾದ ನಾನು ಅವರ ಚಿತ್ರವನ್ನು ಬಿಡಿಸಿದೆ. ಅದರಮೇಲೆ ಅವರ ಹಸ್ತಾಕ್ಷರ ಪಡೆಯಬೇಕು ಎಂದು ಆಶಿಸುತ್ತಿದ್ದೆ. ಅವರು ೧೯೬೧ ರಲ್ಲಿ ಕಾಂಗ್ರೆಸ್ ವಸ್ತು ಪ್ರದರ್ಶನ ಉದ್ಘಾಟಿಸಲು ಬಂದರು. ನಮಗೆ ತಿಳಿದವರೊಬ್ಬರು ಅಂದಿನ ಶಾಂತಾ ರಾವ್ ಅವರ ನೃತ್ಯಕ್ಕೆ ಟಿಕೆಟ್ಟನ್ನು ಕೊಟ್ಟರು. ಆ ಕಾರ್ಯಕ್ರಮಕ್ಕೆ ಪಂಡಿತ್ ನೆಹ್ರೂ ಬರುತ್ತಾರೆಂದು ನನಗೆ ತಿಳಿದಿತ್ತು. ನನಗೆ ಮೈ ತುಂಬಾ ಕೋಲಾಹಲ. ನನ್ನ ತಂಗಿ ಕುಮ್ಮು ಮತ್ತು ಕಸಿನ್ ಶ್ರೀಮತಿ ನನ್ನ ಜೊತೆ ಟೌನ್ ಹಾಲಿಗೆ ಬಂದರು. ಆ ಕಾರ್ಯಕ್ರಮದ ವ್ಯವಸ್ಥಾಪಕರು ನನಗೆ ಮೊದಲು ಅಲ್ಲಿ ನಾನುಪಂಡಿತ್ ನೆಹ್ರೂವನ್ನು ಸಂದಿಸಬಹುದೆಂದು

ಹೇಳಿದ್ದರೂ, ಅವರು ಬಂದಮೇಲೆ ನಮ್ಮನ್ನು ಹತ್ತಿರವೂ ಬಿಡಲಿಲ್ಲ. ಆದರೆ ಕುಮ್ಮು ಮತ್ತು ಶ್ರೀಮತಿ ನನಗೆ ನಿರಾಸೆಯಾಗಲು ಬಿಡಲಿಲ್ಲ. ನನ್ನ ವ್ಹೀಲ್ ಚೇರನ್ನು ಮುಂದೆ ತಳ್ಳಿ ನಿಲ್ಲಿಸಿದರು. ನೆಹ್ರೂ ಮುಂದಿನ ಸಾಲಿನಲ್ಲಿ ಕುಳಿತಿದ್ದರು. ಅವರು ನನ್ನನ್ನು ನೋಡಿದ ತಕ್ಷಣ ಎದ್ದು ಬಂದು ನನ್ನನ್ನು ಮಾತನಾಡಿಸಿದರು. ನಾನು ಬಿಡಿಸಿದ್ದ ಚಿತ್ರವನ್ನು ಅವರಿಗೆ ತೋರಿಸಿದೆ. ಅದನ್ನು ನೋಡಿ ಅವರು ನನ್ನನ್ನು 'ಏನು ಬೇಕು' ಎಂದು ಕೇಳಿದರು. ನಾನು ಅದರ ಮೇಲೆ ಅವರ ಹಸ್ತಾಕ್ಷರ ಬೇಕೆಂದು ಕೇಳಿದೆ. ಅವರು ಮಾಡಿಕೊಟ್ಟರು. ನನ್ನ ಸಂತೋಷಕ್ಕೆ ಮಿತಿಯೇ ಇರಲಿಲ್ಲ. ಆ ಪೈಂಟಿಂಗ್ ನನ್ನ ಬಹಳ ಅಮೂಲ್ಯ ಸಂಗ್ರಹ.

ದಿನಗಳು ಕಳೆದಂತೆ ನಾನು ನನ್ನ ಕೆಲಸದ ಬಗ್ಗೆ ಗಮನ ಕೊಡಲಾರಂಭಿಸಿ ನನ್ನ ಹವ್ಯಾಸಗಳನ್ನು ಮರೆಯಲಾರಂಭಿಸಿದೆ. ನನ್ನ ಜೀವನದಲ್ಲಿ ನಾನು ನೀಡುವ ಪ್ರಾಮುಖ್ಯತೆ ಬದಲಾಗಿತ್ತು. ಈಗ ನನಗೆ ಅನ್ನಿಸುತ್ತದೆ, ಜೀವನದಲ್ಲಿ ಕಲಾತ್ಮಕ ಮತ್ತು ಸೃಜನಾತ್ಮಕ ಹವ್ಯಾಸಗಳು ಇರಬೇಕು. ಇಲ್ಲದಿದ್ದರೆ ಜೀವನ ಯಾಂತ್ರಿಕವಾಗಿ ಬಿಡುತ್ತದೆ. ನಾನು ನನ್ನ ಪೈಂಟಿಂಗ್ ಮುಂದುವರಿಸಬೇಕಿತ್ತು ಎಂದೆನಿಸುತ್ತದೆ. ಹಾಗೆ ಮಾಡಿದ್ದರೆ ನನ್ನ ಜೀವನದ ಪಥವೇ ಬೇರೆಯಾಗುತ್ತಿತ್ತೇನೋ?

ಅದೊಂದು ಆಕಸ್ಮಿಕವಿರಬೇಕು, ಅಥವಾ ನಮ್ಮೆಲ್ಲರ ಸೃಜನ ಶಕ್ತಿ ಇರಬೇಕು. ನಮ್ಮ ಸಂಸ್ಥೆಯನ್ನು ನಮ್ಮ ಗ್ಯಾರೇಜಿಗೆ ಸ್ಥಳಾಂತರಿಸಿದ ಕೆಲವೇ ದಿನಗಳಲ್ಲಿ ನಮ್ಮ ತಂದೆ ವಿ.ಟಿ.ಪದ್ಮನಾಭನ್ ಅವರನ್ನು ಭೇಟಿ ಮಾಡಿದರು. ಅವರು ಬಹಳ ದೊಡ್ಡ ದಾನಿ. ಬಹಳ ಜನೋಪಕಾರಿ ಕೆಲಸಗಳನ್ನು ಮಾಡುತಿದ್ದರು. ಅವರು ನಮ್ಮ ಎ.ಪಿ.ಡಿ. ಗೆ (ನಮ್ಮ ಸಂಸ್ಥೆಯ ಹೆಸರನ್ನು 'ಅಸೋಸಿಯೇಷನ್ ಫಾರ್ ಪೀಪಲ್ ವಿತ್ ಡಿಸೆಬಿಲಿಟೀಸ್' ಎಂದು ಬದಲಾಯಿಸಲಾಗಿತ್ತು.ನಾನು ಇನ್ನು ಮುಂದೆ ನಮ್ಮ ಸಂಸ್ಥೆಯನ್ನು "ಎ.ಪಿ.ಡಿ." ಎಂದೇ ನನ್ನ ಕತೆಯಲ್ಲಿ ಕರೆಯುತ್ತೇನೆ) ೧೯೬೧ ರಲ್ಲಿ ಎರಡು ಎಕರೆ ಜಮೀನನ್ನು ಊರಿನ ಹೊರ ವಲಯದಲ್ಲಿ ದಾನವಾಗಿ ಕೊಟ್ಟರು. ಆಗ, ಆ ಸ್ಥಳವು ಏನೂ ಇಲ್ಲದೆ ಬಂಜರಾಗಿದ್ದರೂ, ಹೇಳಿಕೊಳ್ಳಲು ನಮಗೆ ಒಂದು ವಿಳಾಸವಿತ್ತು. ನಮಗೆ ಚಿಕ್ಕ ಪುಟ್ಟ ಎಲೆಕ್ಟ್ರಿಕ್ ಕೆಲಸ, ಕೆಲವು ತರಬೇತಿ ಪಡೆಯುತ್ತಿದ್ದ ಕೆಲಸಗಾರರು ಮತ್ತು ನಾವು ಸರಿಯಾದ ಹಾದಿಯಲ್ಲಿ ಮುಂದುವರಿಯುತ್ತಿದ್ದೇವೆ ಎಂಬ ಧೃಢ ನಂಬಿಕೆಇತ್ತು. ಒಂದು ಸುಸಜ್ಜಿತ ಕಾರ್ಯಗಾರಕ್ಕೆ ಬೇಕಾದ ಕಟ್ಟಡ ಕಟ್ಟುವ ಕೆಲಸ ಪ್ರಾರಂಭವಾಯಿತು. ಅದರ ಅಂಕುರಾರ್ಪಣಾ ವನ್ನು ಮೈಸೂರಿನ ಮಹಾರಾಜರಾದ ಶ್ರೀ ಜಯಚಾಮರಾಜ ಒಡೆಯರ್ ಅವರು ಮಾಡಿದರು. ಮಹಾರಾಜರು ಬಂದಾಗ, ಅವರನ್ನು ಸ್ವಾಗತಿಸಲು ಬಹಳ ಜನ ಮುನ್ನುಗ್ಗಿ ಬಂದರು.

ಟೀವಾನ್ ಮತ್ತು ಫಾದರ್ ಥೋಮಸ್ ತಮ್ಮ ತಮ್ಮ ವ್ಹೀಲ್ ಚೇರ್‌ಗಳಲ್ಲಿ ನಿಗದಿತ ಸ್ಥಾನದಲ್ಲಿ ಕಾಯುತ್ತಿದ್ದರು. ಆದರೆ ಇತರರು ಅವರಿಗೂ ಮುಂಚೆ ನುಗ್ಗಿದರು. ಆದರೂ ಸರಳವಾಗಿ ಆಯೋಜಿಸಿದ್ದ ಕಾರ್ಯಕ್ರಮವು ಚೆನ್ನಾಗಿ ನಡೆಯಿತು. ಫಾದರ್ ಥೋಮಸ್ ನಮ್ಮ ಸಂಸ್ಥೆಯ ಧ್ಯೇಯ ಮತ್ತು ಗುರಿಗಳಬಗ್ಗೆ ಬಹಳ ಚೆನ್ನಾಗಿ ಮಾತನಾಡಿದರು.

ಮತ್ತೊಂದು ಮುಖ್ಯವಾದ ಪ್ರಸಂಗ ೧೯೬೧ರಲ್ಲಿ ನಡೆಯಿತು. ಎ.ಪಿ.ಡಿ. ಅಂಬೆಗಾಲಿಡುತ್ತಿದ್ದ ಸಂಸ್ಥೆಯಾದರೂ, ಬೆಂಗಳೂರಿನಲ್ಲಿ ನಡೆದ ದೊಡ್ಡ 'ಕಾನ್ಫೆಂಸ್' ಒಂದಲ್ಲಿ ಭಾಗವಹಿಸಿತು. ಅದು ಮೆಡಿಕಲ್ ಕಾಲೇಜಿನಲ್ಲಿ ನಡೆಯಿತು. ಅಲ್ಲಿ ನಾನು ಡಾ. ಸಂತ್ ಅವರನ್ನು ಸಂಧಿಸಿದೆ. ಡಾ. ಸಂತ್ ಮುಂಬೈಯಲ್ಲಿ ವಿಕಲಾಂಗ ಮಕ್ಕಳಿಗೆ ಇರುವ ಆಸ್ಪತ್ರೆಯಂತೆ ಒಂದು ಆಸ್ಪತ್ರೆಯನ್ನು ನಡೆಸುತ್ತಿದ್ದರು. ಅದರಲ್ಲಿ ಶಸ್ತ್ರ ಚಿಕಿತ್ಸೆ ಮತ್ತು ವಿಕಲಾಂಗರು ನಡೆಯಲು ಬೇಕಾದ ಕ್ಯಾಲಿಪರ್ ಇತ್ಯಾದಿ ಸಾಧನಗಳನ್ನು ಕೂಡ ಅವರಿಗೆ ಜೋಡಿಸಿ ಕೊಡುತಿದ್ದರು. ಅವರು ನನ್ನನ್ನು ನೋಡಿ ನನ್ನ ಕ್ಯಾಲಿಪರ್ಸ್ ಅನ್ನು ಸರಿಯಾಗಿ ಜೋಡಿಸಿಲ್ಲ. ನಾನು ಹೊಸದಾಗಿ ನನ್ನ ಮಂಡಿಗೆ ಮತ್ತೊಂದು ಆಪರೇಷನ್ ಮಾಡಿಕೊಂಡರೆ ಎಲ್ಲವೂ ಸರಿಹೊಗುತ್ತದೆ ಎಂದರು. ಆದರೆ ನಾನು ಮತ್ತೊಂದು ಆಪರೇಷನ್ನಿಗೆ ತಯಾರಾಗಿರಲಿಲ್ಲ. ಡಾ. ಸಂತ್ ನಮ್ಮ ತಂದೆಯನ್ನು ನನ್ನನ್ನು ಮುಂಬೈಗೆ ಕರೆತರಲು ಒಪ್ಪಿಸಿದರು. ಮತ್ತೆ ನಾವು ದೀ ಅತ್ತೆಯಮನೆಗೆ ಬಂದೆವು. ನಾನು ಹಠವಾಗಿ ಆಪರೇಷನ್ ಬೇಡವೆಂದೆ. ಕೊನೆಗೆ ಡಾಕ್ಟರ್ ಕಾಲಿಗೆ ಪ್ಲಾಸ್ಟರ್ ಹಾಕುವುದಾಗಿ ಹೇಳಿದರು. ಆಸ್ಪತ್ರೆಯ ತಂತ್ರಜ್ಞರು ಒಂದು ವಾರ ಪ್ಲಾಸ್ಟರ್ ಹಾಕಿಕೊಂಡರೆ ಸಾಕು ಎಲ್ಲಾ ಸರಿಹೋಗುತ್ತದೆ ಎಂದು ಹೇಳಿದರು. ನಾನೂ ಒಪ್ಪಿಕೊಂಡೆ. ನನ್ನ ತೊಡೆಯಿಂದ ಪಾದದವರೆಗೆ ಎರಡು ಕಾಲುಗಳಿಗೂ ಪ್ಲಾಸ್ಟರ್ ಹಾಕಿದರು. ಎರಡು ಮೂರು ದಿನಗಳಗೊಮ್ಮೆ ನನ್ನ ಮಂಡಿಗಳ ಹತ್ತಿರ ಒಂದು ಮರದ ಗೂಟವನ್ನು ಹಾಕಿ ನನ್ನ ಮಂಡಿಗಳು ಹೊರಕ್ಕೆ ತಿರುಗುವಂತೆ ಮಾಡುತಿದ್ದರು. ನಾನು ಆರು ತಿಂಗಳು ಪ್ಲಾಸ್ಟರ್‌ನಲ್ಲಿದ್ದೆ. ಬಹಳ ನೋವಾಗುತಿತ್ತು. ಬೆಳಗ್ಗಿನಹೊತ್ತು ಪರವಾಗಿರಲಿಲ್ಲ. ದೀ ಅತ್ತೆಯ ಕೈ ಕೆಲಸದಲ್ಲಿ ನಾನು ಸಹಾಯ ಮಾಡುತಿದ್ದರಿಂದ ನನ್ನ ನೋವು ತಿಳಿಯುತ್ತಿರಲಿಲ್ಲ. ಆದರೆ ರಾತ್ರಿಯನ್ನು ಕಳೆಯುವುದು ಬಹಳ ಕಷ್ಟವಾಗುತಿತ್ತು. ಇಡೀ ರಾತ್ರಿ ಅಳುತಿದ್ದೆ. ಅಮ್ಮನೂ ನನ್ನ ಜೊತೆ ಪಾಪ ಒದ್ದಾಡುತಿದ್ದಳು. ಆ ಪ್ಲಾಸ್ಟರ್ ತೆಗೆದರೆ ಸಾಕು ಎನ್ನಿಸುತ್ತಿತ್ತು. ಡಾ. ಪ್ರತಿಸಲವೂ ಇನ್ನೆರಡು ದಿನ ಎನ್ನುತಿದ್ದರು. ನಮ್ಮ ತಂದೆ ಇವೆಲ್ಲವೂ ನಡೆಯುತ್ತಿದ್ದರೆ ಪ್ರೇಕ್ಷಕರಂತೆ ನೋಡುತಿದ್ದರು. ಕೊನೆಗೆ ಪ್ಲಾಸ್ಟರ್ ತೆಗೆದರು. ಕಾಲೆಲ್ಲಾ ಕೆಂಪಗೆ ಆಗಿ ಚರ್ಮ ಸುಲಿದು ಬರುತಿತ್ತು. ಅಮ್ಮನಿಗೆ ನನ್ನನ್ನು ಸುಮ್ಮನೆ ಮಲಗಲು ಬಿಡು ಎಂದೆ. ನಾನ ಇಡೀ ಎರಡು ದಿನಗಳು ಮಲಗಿರಬೇಕು.

ನಾನು ಸುಧಾರಿಸಿಕೊಳ್ಳಲು ಒಂದು ತಿಂಗಳಾಗಿರಬೇಕು. ನನ್ನ ಕಾಲುಗಳು ಸ್ವಲ್ಪಮಟ್ಟಿಗೆ ಗುಣವಾಗಿದ್ದವು. ಅವರು ನನಗೆ ಹೊಸದೊಂದು ಕ್ಯಾಲಿಪರ್ ಕೂಡ ಕೊಟ್ಟರು. ಅದು ನನಗೆ ಸ್ವಲ್ಪಮಟ್ಟಿಗೆ ಸ್ವಾತಂತ್ರವನ್ನು ಕೊಟ್ಟರೂ ನಾನು ಇನ್ನೂ ವ್ಹೀಲ್ ಚೇರ್ ಉಪಯೋಗಿಸಬೇಕಿತ್ತು. ಕ್ಯಾಲಿಪರ್ ಸಹಾಯದಿಂದ  ತೋಟದಲ್ಲಿ ನಡೆಯುವುದು ನನಗೆ ಬಹಳ ಬೇಕಿದ್ದ ವ್ಯಾಯಾಮವನ್ನು ಒದಗಿಸಿತು. ಆದರೆ ಕ್ಯಾಲಿಪರ್ ಮತ್ತು ವ್ಹೀಲ್ ಚೇರ್ ನಡುವೆ ಆಯ್ಕೆ ಮಾಡುವುದು ದೊಡ್ಡ ಸಮಸ್ಯೆಯಾಯಿತು. ಡಾ. ಮುಲ್ಲಾ ಫಿರೋಜ್ ಇದು ಪ್ರತಿಯೊಬ್ಬರ ವ್ಯೆಯಕ್ತಿಕವಾದ ವಿಷಯ ಎಂದರು. ನಾನು ನಡೆಯಬೇಕೆ ಅಥವಾ ವ್ಹೀಲ್ ಚೇರ್ ಉಪಯೋಗಿಸಬೇಕೆ? ನನಗೆ ಆಯ್ಕೆ ಸುಲಭವಾಯಿತು. ಯಾಕೆಂದರೆ ನನಗೆ ನಡೆಯುವುದು ಬಹಳ ಕಷ್ಟಕರವಾಗಿತ್ತು.

ನನ್ನ ಕಾಲಿನ ಚಿಕಿತ್ಸೆಯು ಮುಗಿದು ನಾವು ಬೆಂಗಳೂರಿಗೆ ಹಿಂದಿರುಗುವಾಗ ನಡೆದದ್ದುನನಗೆ ಚೆನ್ನಾಗಿ ನೆನಪಿದೆ. ನನಗೆ ಯಾರೋ ಸಹಾಯ ಮಾಡಿ ವ್ಯಾನಿನಲ್ಲಿ ಕೂರಿಸಿದರು. ನಮ್ಮ ತಂದೆ ದೀ ಅತ್ತೆಗೆ ಧನ್ಯವಾದಗಳನ್ನು ಹೇಳಿಬರಲು ತಿರುಗಿದರು. ಅವರ ಮನಸ್ಸಿನಲ್ಲಿ ದುಃಖವು ತುಂಬಿ ಮಾತೇ ಹೊರಡಲಿಲ್ಲ. ಬಹಳಹೊತ್ತು ಅಳುತಿದ್ದರು. ನಾನು ವ್ಯಾನಿನಿಂದ ಅವಾಕ್ಕಾಗಿ ನೋಡುತ್ತಿದ್ದೆ. ಅವರಿಗೆ ನನ್ನ ಪರಿಸ್ಥಿತಿಯನ್ನು ಕಂಡು ಬಹಳ ಬೇಸರವಾಗಿದೆ ಎಂದು ನನಗೆ ಗೊತ್ತಿತ್ತು. ಅವರು ಅವರಕೈಯಲ್ಲಿಏನೇನಾಗುತ್ತದೆಯೋ ಅದೆಲ್ಲಾ ನನಗೋಸ್ಕರ ಮಾಡಿದ್ದರು. ಅವರಿಗೆ ಮತ್ತವರಿಗೆ ತೊಂದರೆಯಾಗುವುದು ಇಷ್ಟವಿರಲಿಲ್ಲ. ವಿಕಲಾಂಗ ಮಕ್ಕಳ ತಂದೆತಾಯಿಯರು ಬಹಳ ಕಷ್ಟ ಅನುಭವಿಸುತ್ತಾರೆ. ಬಹಳ ದುಃಖ ಮತ್ತು ನೋವು ಅನುಭವಿಸುತ್ತಾರೆ, ಜೊತೆಗೆ ಎಲ್ಲಾ ಸರಿಹೋಗುತ್ತದೆಂಬ ನಂಬಿಕೆಯನ್ನೂ ಇಟ್ಟುಕೋಳ್ಳುತ್ತಾರೆ.

ಬೆಂಗಳೂರಿನಲ್ಲಿ, ನಾವು ನಮ್ಮ ಕಾರ್ಯಾಗಾರದ ಕಟ್ಟಡ ಕಟ್ಟಲು ಪ್ರಾರಂಭಿಸಿ ನಾಲ್ಕು ವರ್ಷಗಳಾದ ಮೇಲೆ ನಾನು ಒಂದುದಿನ ಅದರಲ್ಲಿ ಸಾಂಪ್ರದಾಯಿಕವಾಗಿ ದೀಪ ಹಚ್ಚಿ ಎ.ಪಿ.ಡಿ. ಯ ಹೊಸ ಕಟ್ಟಡವನ್ನು ಉದ್ಘಾಟಿಸಿದೆ. ಆ ವರ್ಷದ ಕೊನೆಯ ಹೊತ್ತಿಗೆ ಅಲ್ಲಿ ೩೦ ಜನ ಟ್ರೈನೀಗಳು ಮತ್ತು ಎಮ್.ಇ.ಐ.  ಮತ್ತು ಐ.ಟಿ.ಐ ಯಿಂದ ನಿರಂತರವಾಗಿ ಬರುತ್ತಿದ್ದ ಆರ್ಡರ್‌ಗಳು ಇದ್ದು, ಸುಮಾರು ಜನ ವಿಕಲಾಂಗರು ಕೆಲಸ ಮಾಡಲು ಕಾಯುತ್ತಿದ್ದರು. ದೀವಾನ್ ಅಲ್ಲಿಯೇ ಉಳಿದುಕೊಂಡು "ರೆಸಿಡೆಂಟ್ ವಾರ್ಡನ್" ಆಗಿ ಕೆಲಸ ಮಾಡುತ್ತಿದ್ದರು.

ಈ ಮಧ್ಯೆ ನನ್ನ ಜೀವನವು ಆರಾಮವಾಗುತಿತ್ತು. ಎ.ಪಿ.ಡಿ.ಯಿನ ಸವಾಲುಗಳು ಮತ್ತು ನಮ್ಮ ಮನೆಯವರ ಪ್ರೀತಿ ವಿಶ್ವಾಸ ನನ್ನನ್ನು ಮೈಮರೆಯುವಂತೆ ಮಾಡುತಿತ್ತು. ನಾನು ಮನೆಯಲ್ಲಿರುವುದು ನನ್ನ ತಂದೆ ತಾಯಿಯರನ್ನು ಮನೆಗೆ ಕಟ್ಟಿ ಹಾಕಿತ್ತು. ಅವರು ಮುಂಬೈ ಅಥವಾ ಹೈದರಾಬಾದ್‌ನಲ್ಲಿ ನನ್ನ ಅಕ್ಕ ತಂಗಿಯರೊಡನೆಯೋ, ಅಥವಾ ಬೇರೆಲ್ಲಿಗಾದರೋ ಹೋಗಲಾಗುತ್ತಿರಲಿಲ್ಲ. ಅವರು ನನ್ನನ್ನು ಒಬ್ಬಳೇ ಬಿಟ್ಟು ಎಲ್ಲಿಗಾದರೂ ಹೋಗುವುದನ್ನು ಸ್ವಪ್ನದಲ್ಲಿಯೂ ಯೋಚಿಸಿಕೊಳ್ಳಲಾಗುತ್ತಿರಲಿಲ್ಲ. ಅದಕ್ಕೆ ನಾನೊಂದು ದೊಡ್ಡ ನಿರ್ಧಾರಕ್ಕೆ ಬಂದೆ. ಸರಿಯಾದ ಸಂದರ್ಭಕ್ಕೋಸ್ಕರ ಕಾಯುತ್ತಿದ್ದೆ, ಕೊನೆಗೇ ಅದು ಎಸ್ತರ್ ಮೂಯಿರ್ಹೆಡ್ ಎಂಬುವಳ ರೂಪದಲ್ಲಿ ಬಂತು. ಎಸ್ತರ್ 'ಓಕ್ಸ್ಫಾಮ್' ಎಂಬ ಕಟ್ಟಡ ಕಟ್ಟುವ ಸಂಸ್ಥೆಯಲ್ಲಿ ಕೆಲಸ ಮಾಡುತಿದ್ದಳು. ಈ ಸಂಸ್ಥೆಯೇ ನಮ್ಮ ಕಟ್ಟಡ ಕಟ್ಟಿದ್ದು, ಒಂದು ದಿನ ಅವಳು ನಮ್ಮ ಸೆಕ್ರೆಟರಿ ಈಶ್ವರ್‍ಯ್ಯನವರೊಡನೆ ನನ್ನನ್ನು ನೋಡಲು ಬಂದಳು. ಅವಳು ನಾನು ಇಂಗ್ಲೆಂಡಿಗೆ ಹೋಗಿ ಅಲ್ಲಿ ಬೇಡರ್ಸ್ ಕುಟುಂಬದ ಜೊತೆ ಇರಬೇಕು ಎಂದಳು. ಬೇಡರ್ಸ್ ಕುಟುಂಬ (ರೆಸಿನ್) ಡಿಭುಟಿ ಗಳ ವ್ಯಾಪಾರ ಮಾಡುತಿತ್ತು. ಅವರಿಗೆ ಅವರ ವಸ್ತುಗಳನ್ನು ಉಪಯೋಗಿಸಿ ಆರ್ಟ್ ವರ್ಕ್ ಮಾಡುವವರು ಒಬ್ಬರು ಬೇಕಿದ್ದರು. ಅವರು ಪ್ರಪಂಚವೆಲ್ಲಾ ಸುತ್ತುತ್ತಿದ್ದಾಗ ನಮ್ಮ ಎ.ಪಿ.ಡಿ. ಗೂ ಬಂದು ನನ್ನನ್ನು ಭೇಟಿ ಮಾಡಿದ್ದರು. ಎಲ್ಲಾ ತಯಾರಿಗಳೂ ಆಗಿದ್ದವು. ಮೂಯಿರ್ಹೆಡ್ ಈ ರೀತಿ ಅನೇಕರನ್ನು ಕಲೆಹಾಕಿ ಅವರನ್ನು ಬೇರೆ ಬೇರೆ ಕಡೆಗೆ ಕೆಲಸಮಾಡಲು ಕಳುಹಿಸುತ್ತಿದ್ದಳು. ಅವಳು ನನಗೆ ಆಶ್ಚರ್ಯಕರವಾಗಿ ಈ ಮೂಲಕ ಪ್ರಪಂಚದ ಬಾಗಿಲನ್ನು ತೆರೆದಳು.

ನಮ್ಮ ತಂದೆಗೆ ಒಂದು ಕಡೆ ಸಂತೋಷದ ಜೊತೆಗೆ ಮತ್ತೊಂದು ಕಡೆ ಆತಂಕವೂ ಸೇರಿ ಅವರು ಮತ್ತೆ 'ಸಿಗಾರ್' ಸೇದಲಾರಂಭಿಸಿದರು. ಹಿಂದೆ, ನಾನು ಪ್ರಭನಜೊತೆ ಇರಲು ಹೊರದೇಶಕ್ಕೆ ಹೊಗಲು ಪ್ರಯತ್ನಪಟ್ಟಾಗ, ನಾನು ಕೇವಲ ವಿಕಲಾಂಗಿ ಎಂಬ ಕಾರಣಕ್ಕಾಗಿ, ನನ್ನ ಪ್ಯಾಸಪೋರ್ಟ್ ಅರ್ಜಿಯಲ್ಲಿ ನಾನು ಪ್ರಯಾಣಮಾಡಲು ಸಾಧ್ಯ ಎಂದು ಡಿಸ್ಟ್ರಿಕ್ಟ್ ಸರ್ಜನ್ ಸಹಿ ಹಾಕಲಿಲ್ಲ. ಆದ್ದರಿಂದ ನನಗೆ ಪಾಸಪೋರ್ಟ್ ದೊರಕಲಿಲ್ಲ. ವರ್ಷಗಳು ಕಳೆದಂತೆ ಅವನ ಮನೋಭಾವ ಎಷ್ಟು ತಪ್ಪು ಎಂಬುದು ಸಾಬೀತಾಯಿತು. ಈಗ ಆ 'ರೂಲ್ಸ್' ರದ್ದಾಗಿತ್ತು. ಆದ್ದರಿಂದ ಪಾಸಪೋರ್ಟಿಗೆ ಬೇಕಾದ ನನ್ನ ಕಾಗದ ಪತ್ರ ತಯಾರಾಗಿತ್ತು. ಅಪ್ಪಟ ಶಾಖಾಹಾರಿ ಯಾದ ನಾನು ಹೊರನಾಡಿನಲ್ಲಿ ಬದುಕಲು ಕೋಳಿ ಮೊಟ್ಟೆಯನ್ನು ತಿನ್ನುವುದನ್ನು ಕಲಿತುಕೊಂಡೆ. ಈ ಪಯಣದ ನಂತರ ನನ್ನ ಇಡೀ ವ್ಯಕ್ತಿತ್ವವೇ ಬದಲಾಗುತ್ತದೆ ಎಂಬ ನಂಬಿಕೆ ನನಗಿತ್ತು. ನಲವತ್ತೈದು ವರ್ಷಗಳ ಹಿಂದೆ

ಯಾರನ್ನಾದರೂ ಸಂಧಿಸಿದರೆ ನಾನು ತಲೆ ಎತ್ತಿ ಕೂಡ ನೋಡುತ್ತಿರಲಿಲ್ಲ ಅಥವಾ 'ಹಲ್ಲೋ' ಎನ್ನುತ್ತಿರಲಿಲ್ಲ. ಯಾರಾದರೂ ನನ್ನ ಹೆಸರನ್ನು ಕೇಳಿದರೆ ನಾನು ನನ್ನ ತಂಗಿಯ ಕಡೆ ನೋಡುತ್ತಿದ್ದೆ. ನನಗೆ ಹೇಳಲು ಏನೂ ಇರುತ್ತಿರಲಿಲ್ಲ, ಅಥವಾ ಹೇಳಲು ಏನಾದರಿದ್ದರೂ ಅದನ್ನು ಹೇಳಲು ಆಗುತ್ತಿರಲಿಲ್ಲ. ನಾನು ಈ ಸ್ಥಿತಿಯಿಂದ ಹೊರಗೆ ಬರಬೇಕಿತ್ತು.

ನನ್ನ ಮೊದಲ ಅಂತಾರಾಷ್ಟ್ರೀಯ ಪ್ರಯಾಣ ಬಹಳ ಚೆನ್ನಾಗಿತ್ತು. ಕೈರೋವಿನಲ್ಲಿ ನಿಲ್ಲುವ ಬದಲು ನಮ್ಮನ್ನು ಬೈರೂತ್‌ಗೆ ಕರೆದು ಹೋಗಲಾಯಿತು. ೧೮ ಘಂಟೆಗಳಕಾಲ ಹಾರಿ, ಮಧ್ಯದಲ್ಲಿ ಲಂಡನ್ನಿನಲ್ಲಿ ನಿಂತು ೬೦ ಮೈಲಿ ಕಾರಿನಲ್ಲಿ ಪಯಣಿಸಿ ಕೊನೆಗೆ ಸುರಿಯುವ ಮಳೆಯಲ್ಲಿ ಒಂದು ಸುಂದರ ಬಂಗಲೆಯನ್ನು ತಲಪಿದೆವು. ೪೦ ಎಕ್ಕರೆ ಜಮೀನಿನಲ್ಲಿ ಇದ್ದ ಈ ಬಂಗಲೆ ಹಿಂದೆ ಒಂದು 'ಮೊನಾಸ್ಟ್ರಿ' ಯಾಗಿತ್ತು. ಅದರಿಂದ ಚರ್ಚಿಗೆ ಮತ್ತು ಅದರ ಪಕ್ಕದಲ್ಲಿದ್ದ ಸ್ಮಶಾನಕ್ಕೆ ಒಂದು ಸುರಂಗ ಮಾರ್ಗವಿತ್ತು. ನಾನು ದಣಿದಿದ್ದರಿಂದ ಅವರ ಸುಂದರವಾದ ಉದ್ಯಾನವನ್ನು ಅಂದು ನೋಡಲು ಬೇಕಾಗಿರಲಿಲ್ಲ. ನನ್ನ ಕೋರಿಕೆಯ ಮೇರೆಗೆ ಬೇಡರ್ಸ್ ಅವರ ಮನೆಯ ಪಕ್ಕದಲ್ಲಿ ಒಂದು ದೊಡ್ಡ 'ರ್‍ಯಾಂಪ್' (ಜಾರುಬಂಡೆಯಂತೆ ಇಳಿಜಾರು) ಕಟ್ಟಿಸಿದ್ದರು. ಅದು ಬಹಳ ಇಳಿಜಾರಾಗಿ, ಪರಕುತ್ತಾಯಿತು. ನನಗೆ ಎಲ್ಲಿಂದ ಆ ಶಕ್ತಿ ಬಂತೋ ಗೊತ್ತಿಲ್ಲ. ಆದರೆ ನನ್ನ ಮನೆಯವರು ಮತ್ತು ಸ್ನೇಹಿತರಿಗೆ ನಾನು ಒಬ್ಬಳೇ ನನ್ನ ಪಾಡಿಗೆ ನಾನು ಇರಬಲ್ಲೆ ಎಂಬುದನ್ನು ತೋರಿಸಬೇಕಾಗಿತ್ತು. ಈಗಲೂ ಆ ವರ್ಷ ನಾನು ಇಂಗ್ಲೆಂಡಿನಲ್ಲಿ ಹೇಗೆ ಕಳೆದೆ ಎಂಬುದನ್ನು ಯೋಚಿಸಿದರೆ ನನಗೇ ಆಶ್ಚರ್ಯವಾಗುತ್ತದೆ.

ಅದು ಕತ್ತಲು ಜಾಗಗಳುಳ್ಳ ಹೆದರಿಕೆ ಹುಟ್ಟಿಸುವ ಮನೆಯಾಗಿತ್ತು. ಅದರ ಗೋಡೆಯಮೇಲೆ ಅಲಂಕಾರಿಕ ವಸ್ತುಗಳೂ, ದೊಡ್ಡ ದೊಡ್ಡ ಚಿತ್ರಗಳೂ ತೂಗು ಹಾಕಲಾಗಿತ್ತು. ಮನೆಯ ಹೆಚ್ಚು ಭಾಗವನ್ನು ಆಫೀಸ್ ಆಗಿ ಮಾಡಲಾಗಿತ್ತು. ನನ್ನ ರೂಮಿಗೆ ನಾನು ಅಡಿಗೆಯಮನೆಯ ಮೂಲಕ ಹೋಗಬೇಕಾಗಿತ್ತು. ಆ ರೂಮಿನಲ್ಲಿ ಅನೇಕ ವಸ್ತುಗಳನ್ನು ತುಂಬಲಾಗಿತ್ತು. ನನ್ನ ವ್ಹೀಲ್ ಚೇರ್‌ಗೆ ಸ್ವಲ್ಪವೇ ಜಾಗವಿತ್ತು. ನನ್ನ ಮಂಚ ಎತ್ತರವಿತ್ತು. ನನಗೆ ಅದರ ಮೇಲೇರುವುದಕ್ಕಾಗುತ್ತದೆಯೇ ಎಂಬ ಸಂದೇಹ ನನಗೆ. ಯಾರಾದರೂ ನನ್ನ ವ್ಹೀಲ್ ಚೇರನ್ನು ಹಿಡಿದುಕೊಂಡರೆ ನಾನು ಹತ್ತ ಬಹುದಿತ್ತು. ಆದರೆ ಪ್ರತಿದಿನ ನನ್ನ ಸಹಾಯಕ್ಕೆ ಬರುವವರು ಯಾರಿದ್ದರು? ದೂರದಲ್ಲಿ ಒಂದು ದೊಡ್ಡ ಗಡಿಯಾರದ ಘಂಟೆ ಧ್ವನಿಸಿತು. ಸುತ್ತಮುತ್ತ ಯಾರೂ ಇರಲಿಲ್ಲ. ನಾನು ಬೆಂಗಳೂರಿನಿಂದ ಬಹಳ ದೂರ ಬಂದಿದ್ದೆ.

ಅಲ್ಲಿಂದ ಒಂದು ಪುಟ್ಟ ಪ್ಯಾಸೇಜ್ ಮೂಲಕ ಹೋದರೆ ಅಲ್ಲಿ ಒಂದು 'ಟಾಯ್ಲೆಟ್'. ಅದನ್ನು ಬೆಳಗ್ಗಿನ ಹೊತ್ತಿನಲ್ಲಿ ಅಲ್ಲಿನ ಕಾರ್ಮಿಕರು ಉಪಯೋಗಿಸುತ್ತಿದ್ದರು. ಅದಕ್ಕೆ ಒಳಕ್ಕೆ ತೆಗೆದುಕೊಳ್ಳುವ ಬಾಗಿಲು ಇದ್ದಿತು. ವ್ಹೀಲ್ ಚೇರ್ ಉಪಯೋಗಿಸುವವರಿರಲಿ, ಸ್ವಲ್ಪ ದೊಡ್ಡ ಆಕಾರವಿರುವವರೂ ಅದನ್ನು ಉಪಯೋಗಿಸಲಾಗುತ್ತಿರಲಿಲ್ಲ.ನಾನು ಅವರಿಗೆ ಏನೂ ಪರವಾಗಿಲ್ಲ ಎಂದೆ. ನನ್ನ ಕೋಟ್ ಮತ್ತು ಶೂಗಳನ್ನು ತೆಗೆದು ವ್ಹೀಲ್ ಚೇರಿನಿಂದ ಇಳಿದು ಅದನ್ನು ಮಡಿಚಿ, ಒಳಕ್ಕೆ ತೆಗೆದುಕೊಂಡು ಹೋಗಿ ಮತ್ತೆ ತೆಗೆದೆ – ಇದೆಲ್ಲಾ ಒಂದೇ ಕೈಯಿಂದ. ಈ ರೀತಿ ನಾನು ಹಿಂದೆಂದೂ ನಾನು ಮಾಡಿರಲಿಲ್ಲ. ಮಾರನೆಯ ದಿನ ನಾನು ಇನ್ನೂ ದೊಡ್ಡ ಮತ್ತು ಸೌಕರ್ಯಕರ ಸೌಲಭ್ಯ ಸಿಗುತ್ತದೆಂದು ನಿರೀಕ್ಷಿಸಿದ್ದೆ. ಬೇಡರ್ ನನ್ನ ದೈನಂದಿಕ ಆಹ್ನೀಕಗಳನ್ನು ಏಳು ಘಂಟೆಗೆ ಮುಂಚೆ ನಾನು ಮುಗಿಸಿಕೊಳ್ಳ ಬೇಕು ನಂತರ ಟಾಯ್ಲೆಟ್ಟನ್ನು ಕಾರ್ಮಿಕರು ಬರುವ ಹೊತ್ತಿಗೆ ಸ್ವಚ್ಚ ಮಾಡಿ ಇಡಬಹುದು ಎಂದು ನಿರೀಕ್ಷಿಸುತ್ತಿದ್ದಳು. ಆದರೆ ಅದು ನನ್ನ ಸಮಸ್ಯೆ ಅಲ್ಲವಾಗಿತ್ತು. ಅಲ್ಲಿ ಒಂದು ಬೇಸಿನ್ ಮತ್ತು ಕಮ್ಮೋಡ್ ಇತ್ತು, ಆದರೆ ಸ್ನಾನ ಮಾಡಲು 'ಶವರ್' ಇರಲಿಲ್ಲ. ಬೇಡರ್‌ಗೆ ಈ ಸಮಸ್ಯೆಯನ್ನು ಹೇಳಿದೆ. ಆದರೆ ಅವರ ಹತ್ತಿರ ಇದಕ್ಕೆ ಉಪಾಯವೇನೂ ಇರಲಿಲ್ಲ. ಕಡೆಯ ಪಕ್ಷ ಬೇಕಿದ್ದರೆ ತೋಟದಲ್ಲಿ ಒಂದು ಪರದೆಯನ್ನು ಹಾಕಿಕೊಂಡು ಸ್ನಾನ ಮಾಡಬಹುದು ಎನ್ನಿಸಿತು. ಸಧ್ಯಕ್ಕೆ ನಾನು 'ಸ್ಪಾಂಜ್ ಬಾತ್' ಮೂಲಕ ದಿನಗಳನ್ನು ಕಳೆಯಲು ಕಲಿತೆ. ಒಂದು ದಿನ ಬೇಡರ್ ನನಗೆ ಇಂಗ್ಲೆಂಡಿನಲ್ಲಿ ಜನರು ನಮ್ಮಂತೆ ಸ್ನಾನ ಮಾಡುವುದಿಲ್ಲ ಎಂದಳು. ಇದು ನಂಬಲಸಾಧ್ಯವಾದ ಮಾತಾಗಿತ್ತು, ಹಾಗಿದ್ದಿದ್ದರೆ, ಮಹಡಿಯ ರೂಮುಗಳಲ್ಲಿ ಸುಸಜ್ಜಿತ ಬಾತ್ ರೂಂಗಳೇಕಿದ್ದವು? ಬಹುಶಃ ನಾನು ಮೆಟ್ಟಲಿನ ಮೇಲೆ ಕುಳಿತು, ಒಂದೊಂದಾಗಿ ಮೇಲಕ್ಕೇರಿ ಆ ಬಾತ್ ರೂಂ ಬಳಸ ಬಹುದಿತ್ತು. ಆದರೆ ಆ ಹೆಂಗಸು ಅದಕ್ಕೆ ಒಪ್ಪುತ್ತಿರಲಿಲ್ಲ. ನನ್ನ ಮಂಚವನ್ನು ಬದಲಾಯಿಸಿದಳು. ಆ ದೊಡ್ಡ ಮಂಚವನ್ನು ತೆಗೆದು ಒಂದು ದಪ್ಪ ಹಾಸಿಗೆಯನ್ನು ನೆಲದಮೇಲೆ ಹಾಕಿಸಿ ಕೊಟ್ಟಳು.

ಕೊನೆಗೆ ನಾನು ಈಶ್ವರ್ಯ್ಯನವರ ಶ್ರೀಮತಿಗೆ 'ಇಲ್ಲಿ ಎಲ್ಲಾ ಸರಿಯಿದೆ, ಆದರೆ ಬಾತ್ ರೂಮಿನದೇ ತೊಂದರೆ' ಎಂದು ಬರೆದೆ. ಅವರಿಗೆ ಈ ವಿಷಯವನ್ನು ದಿವಾನರನ್ನು ಬಿಟ್ಟರೆ ಮತ್ತ್ಯಾರಿಗೂ, ನನ್ನ ತಂದೆ ತಾಯಿಗೂ ತಿಳಿಸ ಬೇಡಿ ಎಂದು ಕೇಳಿಕೊಂಡೆ. ಆದರೆ ಅವರು ಮೂಯಿರ್ಹೆಡ್ಡಿಗೆ ನನ್ನ ಗೋಳನ್ನೆಲ್ಲಾ ಬರೆದು ತಿಳಿಸಿದರು. ಮರುದಿನ ಬೆಳಿಗ್ಗೆ ಅವರಿಂದ ಬೇಡರ್ಸ್‌ಗೆ ಎಂಟು ಪುಟಗಳ ಕಾಗದ ಬಂದು ಸೇರಿತು. ಅದರಲ್ಲಿ ನಾವು ಬ್ರಾಹ್ಮಣರು. ಬ್ರಾಹ್ಮಣರು ಪ್ರತಿ ನಿತ್ಯ ಸ್ನಾನ ಮಾಡಲೇ ಬೇಕುಎಂದು ಬರೆದಿತ್ತು. ನನಗೆ

ಇದನ್ನು ಕೇಳಿ ಖುಷಿಯಾಯಿತು. ಆದರೆ ಬೇಡರ್ಸ್‌ಗಳಿಗೆ ಈ ಸುದ್ದಿಯೇನೂ ಖುಷಿ ಕೊಡಲಿಲ್ಲ. ಏನೂ ಬದಲಾಗಲಿಲ್ಲ.

ಈ ಮಧ್ಯೆ ನನಗೆ ಕೆಲವರು ಮಿತ್ರರಾದರು. ಡಾ.ಸ್ಮಿತ್ ಅಲ್ಲಿನ ವೈಜಾನಿಕ ಅಧಿಕಾರಿ. ಅವರು ಸರಳವಾದ ಮನುಷ್ಯರಾಗಿದ್ದರು. ಅವರು ನನಗೆ ಅವರ ಕೆಲವು ಸಹಕಾರ್ಮಿಕರ ಪರಿಚಯಮಾಡಿಕೊಟ್ಟರು. ಅದರಲ್ಲಿ ಇಬ್ಬರು ಹುಡುಗಿಯರು. ಅವರು ನನ್ನನ್ನು ಹತ್ತಿರದ ಹಳ್ಳಿಗೆ ಕರೆದು ಕೊಂಡು ಹೋಗಿ ಅಲ್ಲಿ ಅವರ ಸ್ನೇಹಿತರ ಮನೆಯಲ್ಲಿ ಸ್ನಾನಮಾಡಲು ಅವಕಾಶ ಕಲ್ಪಿಸಿಕೊಟ್ಟರು. ಮೂರು ತಿಂಗಳ 'ಸ್ಪಾಂಜ್ ಬಾತ್' ನಂತರ ಇದು ರಾಜ ಭೋಗವೇ ಆಗಿತ್ತು. ನಾವು ಈ ಬಗ್ಗೆ ಬೇಡರ್ಸ್‌ಗೆ ಹೇಳಲಿಲ್ಲ.

ಕೆಲವು ದಿನಗಳನಂತರ ಬೇಡರ್ಸ್ ದಂಪತಿಗಳು ಊರಿನಿಂದ ಹೊರಗೆ ಹೋದಾಗ ಈ ಹುಡುಗಿಯರಿಬ್ಬರೂ ಆ ಮನೆಯಲ್ಲಿ ನನ್ನೊಡನೆ ಇದ್ದರು. ನಾನು ಮಹಡಿಯಲ್ಲಿದ್ದ ಬಾತ್ ರೂಮನ್ನು ಖುಷಿಯಾಗಿ ಉಪಯೋಗಿಸ ತೊಡಗಿದೆ. ಆದರೆ ಒಂದು ದಿನ ಬೇಡರ್ ಅವರ ಮಗ ಹಠಾತ್ತಾಗಿ ಮನೆಗೆ ಬಂದದ್ದು ನಮ್ಮ ಈ ಗುಟ್ಟನ್ನು ರಟ್ಟಾಯಿಸಿತು. ಅವನು ಅವನ ತಂದೆತಾಯಿಯರಿಗೆ ಈ ವಿಷಯವನ್ನು ತಿಳಿಸಿದ. ಅದು ಅವರಿಗೆ ಸ್ವಲ್ಪವೂ ಹಿಡಿಸಲಿಲ್ಲ. ಆದರೆ ಅವರು ಪರವಾಗಿಲ್ಲ ದಿನ ಬಿಟ್ಟು ದಿನ ನಾನು ಆ ಬಾತ್ ರೂಮ್ ಉಪಯೋಗಿಸ ಬಹುದು ಎಂದರು. ಅದೊಂದು ವಿಚಿತ್ರವಾದ ಅನುಭವವಾಗಿತ್ತು. ದಿನಾ ಸ್ನಾನ ಮಾಡುವ ಬ್ರಾಹ್ಮಣ ಹುಡುಗಿ ಈಗ ದಿನ ಬಿಟ್ಟು ದಿನ ಸ್ನಾನ ಮಾಡುವಷ್ಟು ಭ್ರಷ್ಟಳಾಗಿದ್ದಳು. ಈಗಲೂ ಕೆಲವು ಸಲ ಅಪರೂಪವಾಗಿ ನಾನು ಸ್ನಾನ ಮಾಡದೆ ಇರುತ್ತೇನೆ, ಬೇಡರ್ಸ್ ಅವರ ಕೃಪೆಯಿಂದ.

ಅಲ್ಲಿದ್ದಾಗ ನಾನು ನೇಯ್ಗೆಯ ಕ್ಲಾಸಿಗೆ ಸೇರಿದೆ. ಆ ಕ್ಲಾಸನ್ನು ನಡೆಸುತ್ತಿದ್ದವರಿಗೆ ಕಿವಿಯು ಸರಿಯಾಗಿ ಕೇಳಿಸುತ್ತಿರಲಿಲ್ಲ. ಅವರ ಮನೆಯಲ್ಲಿ ಬಹಳ ಮಗ್ಗಗಳಿದ್ದು ಚೆನ್ನಾಗಿ ಹೇಳಿಕೊಡುತ್ತಿದ್ದರು ಮತ್ತು ಸಂಜ್ಞೆಯ ಮೂಲಕ ವಿಷಯಗಳನ್ನು ಚೆನ್ನಾಗಿ ತಿಳಿಸುತ್ತಿದ್ದರು. ಆದರೆ ನಾನು ಬೇಡರ್ಸ್ ಮನೆಗೆ ಹಿಂದಿರುಗಿದಾಗ, ಆ ಸಂಜೆ ಹೊತ್ತಿನ ಬೆಳಕಿನಲ್ಲಿ ಉದ್ದುದ್ದದ ನೆರಳುಗಳು, ಅಳಿಯುತ್ತಿರುವ ಬೆಳಕು ಸೇರಿ ನನಗೆ ಬಹಳ ಹೆದರಿಕೆಯಾಗುತ್ತಿತ್ತು. ನಾನು ಚಿಕ್ಕವಳಾಗಿದ್ದಾಗ ಮುನಿಸ್ವಾಮಿ ನಮಗೆ ಪ್ರತಿದಿನ ತಾನು ನೋಡಿದ ಭೂತಗಳ ಕಥೆಯನ್ನು ಹೇಳುತ್ತಿದ್ದ. ಅವನು ಬಿಳಿಯ ಬಟ್ಟೆಯನ್ನುಟ್ಟ, ಕಾಲು ಹಿಂತಿರುಗಿ ಇರುವ ಭೂತಗಳನ್ನು ನಾಯಿಗಳು ಕಂಡುಹಿಡಿಯುತ್ತವೆ ಎನ್ನುತಿದ್ದ. ಈ ಕಥೆಗಳನ್ನು ಕೇಳಿದ

ನಂತರ ನಾವು ಕತ್ತಲಿರುವ ಕಡೆ ಇಣುಕಿಯೂ ನೋಡುತ್ತಿರಲಿಲ್ಲ. ಚಿಕ್ಕ ವಯಸ್ಸಿನಲ್ಲಿ ಬೇರು ಬಿಟ್ಟ ಈ ಹೆದರಿಕೆಯನ್ನು ನಾನು ಬಹಳ ಕಾಲ ಬೆಳೆಸಿಕೊಂಡಿದ್ದೆ. ಬೇಡರ್ಸ್ ಮನೆಯ ಕತ್ತಲು ಓಣಿಗಳು, ಅಲ್ಲಿನ ವಾತಾವರಣ ನನ್ನ ಈ ಹೆದರಿಕೆಗೆ ದೊಡ್ಡ ಸವಾಲನ್ನು ಒಡ್ಡಿತು. ಇವಷ್ಟೇ ಸಾಲದು ಎಂಬಂತೆ ಬೇಡರ್ಸ್ ತಮ್ಮ ಮನೆಯಲ್ಲಿರುವ ಭೂತಗಳು ಬಹಳ ಸ್ನೇಹಮಯವಾದವು ಎಂದು ಬೇರೆ ಹೇಳಿದ್ದರು.

ನಾನು ಬೇಡರ್ಸ್‌ಗೆ ಬಹಳ ಕೃತಜ್ಞಳಾಗಿದ್ದೇನೆ. ಯಾಕೇಂದರೆ ನಾನು ಅವರ ಮನೆಯಲ್ಲಿ ಇದ್ದಾಗ ಅವರಿಗೆ ಎಪ್ಪತ್ತು ವಯಸ್ಸು ದಾಟಿತ್ತು ಮತ್ತು ಅವರು ಯಾರಿಗೂ ವಿಕಲಾಂಗರ ಕಷ್ಟಗಳಬಗ್ಗೆ ತಿಳಿದಿರಲಿಲ್ಲ. ಅವರು ನನ್ನನ್ನು ಆದರದಿಂದ ಬರಮಾಡಿಕೊಂಡು ಅವರ ಕೈಲಾದಷ್ಟು ನನಗೆ ಬೇಕಾದ ಸೌಕರ್ಯಗಳನ್ನೆಲ್ಲಾ ಮಾಡಿಕೊಟ್ಟರು. ಎಲ್ಲಕಿಂತ ಮುಖ್ಯವಾಗಿ ನನಗೆ ನನ್ನ ಗೂಡಿನಿಂದ ಹೊರಗೆ ಹಾರಿ ಹೋಗಲು ಸಹಾಯ ಮಾಡಿದರು. ಶ್ರೀ ಬೇಡರ್ ಅವರು ಸ್ವಿಸ್ಸ್, ಇಂಗ್ಲೆಂಡಿಗೆ ಬಂದು ನೆಲೆಸಿದ್ದರು. ರಸಾಯನಿಕ ಶಾಸ್ತ್ರ ತಿಳಿದ ಅವರ ಮಿತ್ರರೊಬ್ಬರ ಜೋತೆ ಸೇರಿ ರೆಸಿನ್ ತಯಾರಿಸಲು ಪ್ರಾರಂಭಿಸಿದ್ದರು. ಎರಡನೇ ಮಹಾಯುದ್ದದ ಸಮಯದಲ್ಲಿ ಅವರ ಫ್ಯಾಕ್ಟರಿಯ ಮೇಲೆ  ಎರಡು ಸಲ ಬಾಂಬ್ ಬಿದ್ದಿತಂತೆ. ಅವರು ಮತ್ತು ಅವರ ಹೆಂಡತಿ ದರೋತಿ ಯುದ್ದದ ಸಮಯದಲ್ಲಿ ಅನಾಥರಾದ ಮಕ್ಕಳಬಗ್ಗೆ ಯೋಚಿಸಿ ಇಬ್ಬರು ಹುಡುಗರು ಮತ್ತು ಒಬ್ಬಳು ಹುಡುಗಿಯನ್ನು ದತ್ತು ತೆಗೆದುಕೊಂಡರಂತೆ.ಅವರಲ್ಲಿ ಇಬ್ಬರನ್ನು ಲಂಡನ್ ಸ್ಟೇಷನ್ನಿನಲ್ಲಿ ಅವರಿಗೆ ಒಬ್ಬಳು ನರ್ಸ್ ಕೊಟ್ಟಳಂತೆ.ಬೇಡರ್ ಅವರಿಗೆ ಅವರ ಸಂಸ್ಥೆಗೆ ಕಾರ್ಮಿಕರೇ ಮಾಲೀಕರಾಗಬೇಕೆಂಬ ಇಚ್ಚೆಯಿತ್ತು. ಕೊನೆಗೆ ಅವರು ಅದನ್ನು ಕಾರ್ಮಿಕರಿಗೇ ಕೊಟ್ಟುಬಿಟ್ಟರು.

ಅವರು, ಅವರದ್ದೇ ಶೈಲಿಯಲ್ಲಿ ಬಹಳ ಖುಷಿಯಾದ ಮನುಷ್ಯರಾಗಿದ್ದರು. ವಾರಾಂತ್ಯದಲ್ಲಿ ಎಲ್ಲಿಗೆ ಹೋಗಬೇಕು, ಏನು ಮಾಡಬೇಕು ಎಂಬುದನ್ನು ಗುರುತು ಹಾಕಿಕೊಂಡಿದ್ದರು. ಅವರು ಒಂದು ರೆಸ್ಟೋರಂಟಿಗೆ ಹೋಗಿ ಊಟವನ್ನು ಆರ್ಡರ್ ಮಾಡುತ್ತಿದ್ದರು. ಅಲ್ಲಿ ಕೂಡಲು ಸೌಲಭ್ಯವಿಲ್ಲದಿದ್ದರೆ ಅದನ್ನು ಕಟ್ಟಿಸಿಕೊಂಡು ಕಾರಿಗೆ ತರುತ್ತಿದ್ದರು. ನಂತರ ಅಲ್ಲಿನ ಹಳ್ಳಿಗಾಡಿನ ಕಡೆಗೆ ನನ್ನನ್ನು ಕಾರಿನಲ್ಲಿ ಕರೆದುಕೊಂಡು ಹೋಗುತ್ತಿದ್ದರು. ಅಲ್ಲಿನ ಸುಂದರ ದೃಶ್ಯಗಳನನ್ನು ನೋಡಿ ನನಗೆ ಬಹಳ ಸಂತೋಷವಾಗುತ್ತಿತ್ತು. ಜೊತೆಗೆ ಕಾರಿನಲ್ಲಿ ಹೋಗುವಾಗ ಕಾರಿನ ಸ್ಟೀರಿಯೋದಲ್ಲಿ ಪಾಶ್ಚಾತ್ಯ ಶಾಸ್ತ್ರೀಯ ಸಂಗೀತವನ್ನು ಹಾಕುತ್ತಿದ್ದರು. ಭಾನುವಾರ ಬಂದರೆ ಅವರು ನನ್ನನ್ನು ಅವರ ಪ್ರಾರ್ಥನಾ ಮಂದಿರಕ್ಕೆ ಕರೆಯುತ್ತಿದ್ದರು.ಅಲ್ಲಿ ಎಲ್ಲರೂ ನಿಶ್ಶಬ್ದವಾಗಿ ಪ್ರಾರ್ಥಿಸುತ್ತಿದ್ದರು. ಇದು ನನಗೆ ಬಹಳ ಕಷ್ಟವಾಗಿತ್ತು. ಕೆಲವರು

ವಯಸ್ಸಾದವರು ಆಗಾಗ ನಿದ್ದೆ ಹೊಡೆಯುತ್ತಿದ್ದರು. ಕೆಲವು ದಿನಗಳಾದ ನಂತರ ನಾನು ಈ ಕಾರ್ಯಕ್ರಮದಿಂದ ತಪ್ಪಿಸಿಕೊಂಡು ನನ್ನ ಬ್ಯಾಟರಿ ಚಾಲಿತ ತ್ರಿಕಾಲಿಯಲ್ಲಿ ೩೦, ೪೦ ಮೈಲಿ ದೂರದಲ್ಲಿದ್ದ ಹಳ್ಳಿಗಳು ಮತ್ತು ಚಿಕ್ಕ ಪುಟ್ಟ ಊರುಗಳಿಗೆ ಹೋಗಿ ಅಲ್ಲಿನ ಪ್ರಕೃತಿ ಸೌಂದರ್ಯವನ್ನು ಆಸ್ವಾದಿಸುತ್ತಿದ್ದೆ. ನನಗೆ ನಾನೇ ನನ್ನ ಪಾಡಿಗೆ ಸುತ್ತುವ ಸ್ವಾತಂತ್ರ ಬಹಳ ಹಿಡಿಸಿತು. ಮಧ್ಯಾಹ್ನದ ಹೊತ್ತಿಗೆ ಶ್ರೀಮತಿ ಬೇಡರ್ ಮಾಡಿದ ಊಟದ ನಂತರ ನಾವೆಲ್ಲರೂ ಹಳ್ಳಿಗಾಡು ಸುತ್ತಲು ಹೋಗುತ್ತಿದ್ದೆವು.

ಬೇಡರ್ ನನ್ನನ್ನು ಅಲ್ಲಿನ ದಕ್ಷಿಣ ಭಾಗಕ್ಕೂ ಕರೆದುಕೊಂಡು ಹೋದರು. ಅಲ್ಲಿ ನಾನು 'ರೆಂಪ್ಲಾಯ್' ಎಂಬ ಸಂಸ್ಥೆಗೆ ಭೇಟಿ ಕೊಟ್ಟೆ.ಈ ಸಂಸ್ಥೆಯು ೧೫,೦೦೦ ವಿಕಲಾಂಗರಿಗೆ ಕೆಲಸಕೊಟ್ಟಿತ್ತು. ಅವರೂ ಎ.ಪಿ.ಡಿ ಯಂತೆ ಸಬ್ ಕಾಂಟ್ರಾಕ್ಟ್ ಕೆಲಸ ಮಾಡುತ್ತಿದ್ದರು. ಆದರೆ ಈ ಸಂಸ್ಥೆಗೆ ಅಲ್ಲಿನ ಸರ್ಕಾರದ ನೆರವು ಇತ್ತು ಮತ್ತು ನಿರಂತರವಾಗಿ ಹೊಸ ಕೆಲಸ ಸಿಗುತ್ತಿತ್ತು.

ನನ್ನ ಇಂಗ್ಲೆಂಡಿನ ಪ್ರಯಾಣದಲ್ಲಿ ನಾನು ಲಂಡನ್ನಿನಲ್ಲಿ ಇನಾ ಮತ್ತು ಮೈಕಲ್ ಎಂಬುವರ ಜೊತೆ ಇದ್ದೆ. ಅವರು ಚೆಲ್ಸೆನ್‌ಹಾವನ್‌ನಲ್ಲಿ ನನ್ನ ಸೋದರಿಯ ಮನೆಯಪಕ್ಕದಲ್ಲಿದ್ದರು. ನಾನು ಅವರೊಡನೆ ಪತ್ರಮುಖೇನ ಸಂಪರ್ಕದಲ್ಲಿದ್ದೆ. ನೇರ ಭೇಟಿಯಾಗುವುದು ಬಾಕಿಯಿತ್ತು. ನಾನು ಮೊದಲನೆಯ ಸಲ ಇನಾಳನ್ನು ನೋಡಿದಾಗ ಅವಳಿಗೆ ನನ್ನ ಕಾಲನ್ನು ಹಿಡಿದುಕೊಂಡು ಹೇಗೆ ನನ್ನನ್ನು ಮಹಡಿ ಹತ್ತಿಸಬಹುದು ಎಂದು ತೋರಿಸಿದೆ. ಅವರು ಮೊದಲನೆಯ ಮಹಡಿಯಲ್ಲಿದ್ದರು. ನಾವು ಬಹಳ ಘಂಟೆಗಳ ಕಾಲ ಲಂಡನ್ ನಗರವನ್ನು ಸುತ್ತಿ ನೋಡುವುದರಲ್ಲಿ ಕಳೆದೆವು.ಮೈಕಲ್ ಮತ್ತು ಇನಾ ನನ್ನ ವ್ಹೀಲ್ ಚೇರನ್ನು ತಳ್ಳುತಿದ್ದರು ಮತ್ತು ಅವರ ೬ ವರ್ಷದ ಮಗಳು ಉನಾ ನನ್ನ ತೊಡೆಯಮೇಲೆ ಕುಳಿತುಕೊಳ್ಳುತಿದ್ದಳು ಅಥವಾ ಮೈಕಲ್ ಭುಜದ ಮೇಲೆ. ಈ ರೀತಿ ನಾವು ಲಂಡನ್ನಿನ ಟ್ಯೂಬ್ ರೈಲಿನಲ್ಲಿ ಮತ್ತು ಎಲ್ಲಾ ಪ್ರೇಕ್ಷಣೀಯ ಸ್ಥಳಗಳಿಗೂ ಹೋಗಿಬಂದೆವು. ೨೫ ವರ್ಷ ಗಳಾದರೂ ಲಂಡನ್ ನನಗೆ ಚೆನ್ನಾಗಿ ನೆನಪಿದೆ.

ಮುಂದಿನ ವರ್ಷಗಳಲ್ಲಿ ಇನಾ ನಮ್ಮನ್ನು ಆಗಾಗ ಭೇಟಿ ಮಾಡುತಿದ್ದಳು. ಈ ರೀತಿಯ ಭೇಟಿಯೊಂದರಲ್ಲಿ ನಾನು ಅವಳಿಗೆ ನನ್ನ ಸ್ನೇಹಿತೆಯಾದ ಐರಿಸ್‌ಳನ್ನು ಪರಿಚಯ ಮಾಡಿಕೊಟ್ಟೆ. ಐರಿಸ್ ವೇಲ್ಸ್ ನಲ್ಲಿ ವಾಸಿಸುತ್ತಿದ್ದಳು. ಅವರಿಬ್ಬರಲ್ಲೂ ಬಹಳ ಒಳ್ಳೆಯ ಸ್ನೇಹ ಬೆಳೆಯಿತು. ಅವರಿಬ್ಬರೂ ಇಲ್ಲಿಗೆ ಬಂದರೆ ಎ.ಪಿ.ಡಿ. ಯಿನ ಕಾರ್ಯಗಳಲ್ಲಿ ಆಸಕ್ತಿ ತೋರುತ್ತಿದ್ದರು. ಜೊತೆಗೆ ಪ್ರಭಾ ಅವರನ್ನು ಪ್ರೇಕ್ಷಣೀಯ ಸ್ಥಳಗಳಿಗೆ ಕರೆದುಕೊಂಡು

ಹೋಗುತಿದ್ದಳು. ಇದೂ ಅವರಿಗೆಬಹಳ ಹಿಡಿಸುತ್ತಿತ್ತು. ನಾನು ಇಂಗ್ಲೆಂಡಿನಲ್ಲಿದ್ದಾಗ ಪಾರ್ಸನ್ಸ್ ದಂಪತಿಗಳನ್ನು ಭೇಟಿ ಮಾಡಿದೆ. ಅವರಿಗೆ ಮಾನಸಿಕ ದುರ್ಬಲತೆಯುಳ್ಳ ಮಗಳಿದ್ದಳು. ಶ್ರೀಮತಿ ಪಾರ್ಸನ್ಸ್ ಬಹಳ ಸಹಾಯ ಮಾಡುವ ಸ್ವಭಾವ. ನನಗೆ ಬೇಕಾದ ವಸ್ತುಗಳನ್ನು ಅಲ್ಲಿನ ದೊಡ್ಡ ಡಿಪಾರ್ಟ್ಮೆಂಟಲ್ ಸ್ಟೋರಾದ 'ಮಾರ್ಕ್ಸ್ ಎಂಡ್ ಸ್ಪೆನ್ಸರ್ಸ್' ನಿಂದ ಖರೀದಿಸಿ ನನಗೆ ಕಳುಹಿಸುತ್ತಿದ್ದರು. ನಾನು ಐಲೀನ್ ಜ್ಯಾಕ್ಸನ್ ಅನ್ನು ಭೇಟಿ ಮಾಡಿದೆ. ಅವಳಿಗೆ "ಮಲ್ಟಿಪಲ್ ಸ್ಕ್ಲೆರೋಸಿಸ್" ಆಗಿತ್ತು. ಅವಳಿಗೆ ಮದುವೆಯಾಗಿತ್ತು, ಅವಳ ಗಂಡನಿಗೆ 'ಸೆರಿಬ್ರಲ್ ಪ್ಯಾಲ್ಸಿ' ಆಗಿತ್ತು. ನನಗೆ ಅವರ ಮದುವೆಗೆ ಹೋಗಿದ್ದು ಚೆನ್ನಾಗಿ ನೆನಪಿದೆ. ಅವರ ಮನೆಯಲ್ಲೂ ನಾನು ಅನೇಕಸಲ ಉಳಿದುಕೊಂಡಿದ್ದೇನೆ. ಆಧುನಿಕ ತಂತ್ರಜ್ಞಾನವು ನನಗೆ ಈ ರೀತಿಯ ನನ್ನ ವಿಶ್ವವ್ಯಾಪಿಯಾಗಿರುವ ಅನೇಕ ಮಿತ್ರರೊಡನೆ ಸಂಪರ್ಕದಲ್ಲಿರುವುದಕ್ಕೆ ನೆರವಾಗಿದೆ.

ಈ ಮಧ್ಯದಲ್ಲಿ ಎ.ಪಿ.ಡಿ. ಯಲ್ಲಿ ಅನೇಕ ಬೆಳವಣಿಗೆಗಳಾಗಿದ್ದವು. ನಾವು ನಮ್ಮ ಹೊಸ ನಿವೇಶನಕ್ಕೆ ಸೇರಿದ ಎರಡನೆಯ ವರ್ಷ, ಅಂದರೆ ೧೯೬೭ ವೇಳೆಗೆ ನಮ್ಮಲ್ಲಿ ೭೦ ಜನ ತರಬೇತಿ ಪಡೆಯುತ್ತಿದ್ದರು ಮತ್ತು ಅವರೆಲ್ಲರಿಗೂ ಪುರುಸೊತ್ತಿಲ್ಲದೆ ಕೆಲಸಮಾಡುವಷ್ಟು ನಮ್ಮಲ್ಲಿ ಕೆಲಸವಿರುತ್ತಿತ್ತು. ೧೯೭೦ ವೇಳೆಗೆ ನಾವು 'ಏಯಡ್ ಆರ್ಗನೈಸೇಷನ್ ಆಫ್ ಪ್ರೋಟೆಸ್ಟಂಟ್ ಚರ್ಚಸ್ ಆಫ್ ಸ್ವಿಟ್ಜರ್ಲ್ಯಾಂಡ್' ಮತ್ತು 'ಬ್ರೆಡ್ ಫಾರ್ ದಿ ವರ್ಲ್ಡ್' ಎಂಬ ಯೂರೋಪಿನ ಸಂಸ್ಥೆಗಳೊಡನೆ, ಅವರಿಗೆ ವರ್ಕ್ ಷಾಪ್ ಸ್ಥಾಪಿಸಲು ನೆರವಾಗುವುದರ ಬಗ್ಗೆ ಮಾತುಕತೆ ನಡೆಸುತ್ತಿದ್ದೆವು. ಎಲ್ಲೆಲ್ಲೂ ಬಿಸಿನೆಸ್ ವಿಸ್ತರಣೆಯ ಅಲೆಬೀಸುತ್ತಿತ್ತು, ನಮ್ಮ ಸಂಸ್ಥೆಗೂ ಹಣ ಹರಿದು ಬರುತಿತ್ತು ಮತ್ತು ನಮ್ಮೆಲ್ಲರಲ್ಲೂ ಉತ್ಸಾಹ ಉಕ್ಕಿ ಬರುತಿತ್ತು. ನಾವೂ ನಮ್ಮ ಚಟುವಟಿಕೆಗಳನ್ನು ವಿಸ್ತರಿಸಲು ಮುಂದಾದೆವು. ೧೯೭೨ ರಲ್ಲಿ ರಾಷ್ಟ್ರಪತಿ ವಿ.ವಿ.ಗಿರಿಯವರ ಹಸ್ತದಿಂದ ನಮ್ಮ 'ರೆಹಬಿಲಿಟೇಷನ್ ಸೆಂಟರ್' ಉದ್ಘಾಟನೆಗೊಂಡಿತು. ಆದರಲ್ಲಿ ೫೦ ಜನ ಕಾರ್ಮಿಕರು ಮತ್ತು ೨೦೦ ಜನ ಟ್ರೈನೀಗಳು ಇದ್ದರು. ಮುಂದಿನ ವರ್ಷದ ವೇಳೆಗೆ ಈ ಸಂಖ್ಯೆಗಳು ದ್ವಿಗುಣವಾದವು.

ಎ.ಪಿ.ಡಿ. ಕಾರ್ಯಾಗಾರಗಳಲ್ಲಿಯೇ ಒಂದು ಮಾದರಿಯಾಯಿತು. ನಮ್ಮಲ್ಲಿ ಆಧುನಿಕ ಮತ್ತು ಬಹಳ ಮೌಲ್ಯವುಳ್ಳ ಯಂತ್ರಗಳಿದ್ದವು. ನಮ್ಮಲ್ಲಿ ಅತಿ ಸೂಕ್ಷ್ಮವಾದ ಮತ್ತು ನಾಜೂಕಾದ ಕೆಲಸಗಳನ್ನು ಮಾಡುವ ಕ್ಷಮತೆಯಿತ್ತು, ಆದರೆ ನಮ್ಮ ಕೆಲಸಗಾರರು ವಿಕಲಾಂಗರಾಗಿದ್ದರು. ಅನೇಕರಿಗೆ ಓದು ಬರಹ ಕೂಡ ಗೊತ್ತಿರಲಿಲ್ಲ. ಬೆಂಗಳೂರಿನ ವಿವಿಧ ಕಡೆಯಿಂದ ಜನರು ನಮ್ಮ ಸಂಸ್ಥೆಯನ್ನು ನೋಡಲು ಬರುತ್ತಿದ್ದರು, ನೋಡಿ ಆಶ್ಚರ್ಯ ಚಕಿತರಾಗುತ್ತಿದ್ದರು.

ನಿಧಾನವಾಗಿ ಎಲ್ಲರಿಗೂ ವಿಕಲಾಂಗತೆ ಒಂದು ದಾಟಲಾಗದ ಅಡ್ಡ ಗೋಡೆಯಲ್ಲ. ವಿಕಲಾಂಗರಿಗೆ ಅವಕಾಶ ಮತ್ತು ಸೂಕ್ತ ತರಬೇತಿ ಸಿಕ್ಕಿದರೆ ಅವರೂ ತಮ್ಮಲ್ಲಿ ಆತ್ಮ ವಿಶ್ವಾಸ ಬೆಳೆಸಿ ಕೊಂಡು ಇತರರಂತೆ ಎಲ್ಲಾ ಕೆಲಸವನ್ನೂ ಮಾಡಬಹುದು, ಎಂಬುದು ತಿಳಿಯ ತೊಡಗಿತು. ಎ.ಪಿ.ಡಿ. ಪ್ರಪಂಚಕ್ಕೆ ಇತರರು ವಿಕಲಚೇತನರನ್ನು ಮರುಕದಿಂದ ಕಾಣಬೇಕಾಗಿಲ್ಲ; ವಿಕಲಾಂಗರು ಕೆಲಸ ಮಾಡದೇ ಇರುವುದಕ್ಕೆ ಕಾರಣವಿಲ್ಲ; ವಿಕಲಾಂಗತೆಯು ಕ್ಷಮತೆಯನ್ನು ಕುಂಟಿಸುವುದಿಲ್ಲ ಎಂಬುದನ್ನು ಸ್ಪಷ್ಟವಾಗಿ ತೋರಿಸಿತ್ತು. ನಾವು ಅವರಿಗೆ ಒಂದು ವೇದಿಕೆಯನ್ನು ಕಲ್ಪಿಸಿಕೊಟ್ಟೆವು, ಅವರು ಅದರಲ್ಲಿ ತಮ್ಮ ಶಕ್ತಿಯ ಮೂಲಕ ಬೆಳೆದರು. ಈ ಬೆಳವಣಿಗೆಗಳಿಂದ ಎರಡು ವಿಷಯಗಳು ಹೊರಬಂದವು. ಕೈಗಾರಿಕಾ ಕೇಂದ್ರಗಳು ವಿಕಲಾಂಗತೆಯನ್ನು ಪಕ್ಕಕ್ಕೆ ಇರಿಸಿ ನಮ್ಮ ಸಂಸ್ಥೆಗೆ ಆರ್ಡರ್ ಕೊಡತೊಡಗಿದರು. ಮತ್ತು ವಿಕಲಾಂಗರು ತಾವೂ ಇತರರಂತೆ ಅವರಿಗೆ ಸರಿಸಮನಾಗಿ ಕೆಲಸಮಾಡಬಲ್ಲೆವು ಎಂಬುದನ್ನು ಅರಿತರು.

ದಿವಾನರ ನೇತೃತ್ವದಲ್ಲಿ ಎ.ಪಿ.ಡಿಯ ಮೂಲಕ ವಿಕಲಾಂಗರ ಇನ್ನೂ ಅನೇಕ ಸಾಮರ್ಥ್ಯಗಳನ್ನು ಹೊರತರುವ ಯೋಚನೆ ಇತ್ತು. ನಾವು ಸದಾ ನಮ್ಮ ಸಂಸ್ಥೆಯವರಿಗೆ ವ್ಹೀಲ್ ಚೇರ್ ಮತ್ತು ಟ್ರೈಸಿಕಲ್ ಕೊಡುವ ದಾನಿಗಳನ್ನು ಹುಡುಕುತ್ತಿದ್ದೆವು. ಕಾಟಪಾಡಿಯಲ್ಲಿರುವ 'ವರ್ಥ್ ಟ್ರಸ್ಟ್' ಇವನ್ನು ತಯಾರು ಮಾಡುತ್ತಿದ್ದರು. ನಾನು ಕೆಲವು ಟ್ರೈನೀಗಳಿಗೆ ವಯಸ್ಕರ ಶಿಕ್ಷಣದ ಕ್ಲಾಸನ್ನು ಪ್ರಾರಂಭಿಸಿದೆ. ಆದರೆ ತೊಂದರೆ ಬಹಳ ದೂರವಿರಲಿಲ್ಲ. ನಾವು ವಿಕಲಾಂಗರಿಗೆ ತರಬೇತಿ ಕೊಟ್ಟು ಅವರಿಗೆ ಕೆಲಸ ಸಿಗುವುದಕ್ಕೆ ಸಹಾಯ ಮಾಡುತ್ತಿದ್ದೆವು. ನಮ್ಮ ನೀತಿಯು ಆದಷ್ಟು ಜನಕ್ಕೆ ಸಹಾಯಮಾಡಿ ಅವರು ಇತರರಂತೆ ಕೆಲಸಗಳಲ್ಲಿ ಸೇರಬೇಕೆಂಬುದಾಗಿತ್ತು. ಆದರೆ, ಅನೇಕರಿಗೆ, ಅವರು ವಿಕಲಾಂಗರು ಎಂಬ ಕಾರಣಕ್ಕಾಗಿ ಹೊರಗೆ ಕೆಲಸ ಸಿಗುತ್ತಿರಲಿಲ್ಲ. ಅವರು ಟ್ರೈನಿಂಗ್ ಮುಗಿದನಂತರವೂ ಅವರಿಗೆ ನಮ್ಮ ಸಂಸ್ಥೆಯಲ್ಲೇ ಉಳಿದುಕೊಳ್ಳಲು ಅನುಮತಿ ನೀಡುವಂತೆ ನಮ್ಮನ್ನು ಕೇಳಿಕೊಂಡರು. ನಾವು ಅವರ ಮೇಲಿನ ಕನಿಕರದಿಂದ ಒಪ್ಪಿಕೊಂಡೆವು. ಆದರೆ ಅವರು ನಂತರ ತಾವು ಕಾರ್ಮಿಕರೆಂದೂ ಮತ್ತು ತಮಗೆ ಇತರ ಸರ್ಕಾರಿ ಸಂಸ್ಥೆಗಳಂತೆ ಸಂಬಳ ಕೊಡಬೇಕೆಂದೂ ಕೇಳಲಾರಂಭಿಸಿದರು. ಅವರು ಸಂಘವನ್ನು ಮಾಡಿಕೊಂಡರು. ನಾವು ಅವರುಗಳನ್ನು ಸಂಘ ಮಾಡಿಕೊಳ್ಳಲು ಉತ್ತೇಜಿಸಿದೆವು. ಆದರೆ ಅವರು ಅದರಲ್ಲಿ ಹೊರಗಿನವರು ತಲೆ ಹಾಕಲು ಅವಕಾಶ ಮಾಡಿಕೊಟ್ಟರು. ಕೊನೆಗೆ ಅವರು ಸಂಪು ಹೂಡಿದರು. ಮೂರು ತಿಂಗಳು ಯಾರೂ ಕೆಲಸಕ್ಕೆ ಬರಲಿಲ್ಲ. ನಮ್ಮ ಗ್ರಾಹಕರು ನಮ್ಮಿಂದ ತಮ್ಮ ತಮ್ಮ ವಸ್ತುಗಳನ್ನು ಹಿಂದೆಗೆದು ಕೊಂಡರು. ಎಲ್ಲಾ ತಟಸ್ಥವಾಯಿತು. ೧೯೭೪ ರಲ್ಲಿ ವಿಷಯವು ಕೋರ್ಟಿನ

ಮೆಟ್ಟಿಲೇರಿತು. ಅಲ್ಲಿ ಎ.ಪಿ.ಡಿ. ತರಬೇತಿ ಕೊಟ್ಟು ಪುನರ್ವಸತಿ ಮಾಡುವ ಸಂಸ್ಥೆಯೋ ಅಥವಾ ಔದ್ಯೋಗಿಕ ಸಂಸ್ಥೆಯೋ ಎಂಬ ಪ್ರಶ್ನೆ ಎದ್ದಿತು? ಕ್ರಮೇಣಾ ಕೆಲಕಾಲ ಎಲ್ಲವೂ ಸ್ಥಗಿತವಾಯಿತು. ಪ್ರತಿ ದಿನ ನಾನು ಮತ್ತು ದಿವಾನ್ ನಮ್ಮ ಮನೆಯಲ್ಲಿ ಮುಂದಿನ ಹೆಜ್ಜೆ ಏನು ಎಂದು ಯೋಚಿಸುತ್ತಿದ್ದೆವು. ನಮ್ಮ ಟ್ರೈನಿಂಗ್ ಸೆಂಟರನ್ನು ಮತ್ತೆ ತೆಗೆದಾಗ ನಾವು ಅದರ ಟ್ರೈನಿಂಗ್ ನಮೂನೆಯನ್ನು ಬದಲಾಯಿಸಿದೆವು. ವಿಕಲಾಂಗರಿಗೆ ನಾಲ್ಕು ವಿಷಯದಲ್ಲಿ – ಡ್ರಾಫ್ಟ್‌ಮನ್‌ಶಿಪ್, ಫಿಟ್ಟರ್, ವೆಲ್ಡರ್ ಮತ್ತು ಟರ್ನರ್ – ತರಬೇತಿಕೊಟ್ಟು ಅದು ಮುಗಿದನಂತರ ಅವರಿಗೆ ಹತ್ತನೇ ಕ್ಲಾಸಿನ ಒಂದು ಸರ್ಟಿಫಿಕೇಟ್ ಕೊಡುತ್ತಿದ್ದೆವು. ಇದಲ್ಲದೆ ಎ.ಪಿ.ಡಿ.ಯ ಆಡಳಿತ ಮಂಡಳಿಯು ತನ್ನಲ್ಲಿದ್ದ ಸೌಕರ್ಯದ ಒಂದು ಭಾಗದ ಮೂಲಕ ಸುಮಾರು ನೂರು ಜನರನ್ನು ಕೆಲಸಕ್ಕೆ ಇಟ್ಟುಕೊಂಡು ಒಂದು 'ವರ್ಕ್‌ಷಾಪ್' ನಡೆಸಲು ನಿರ್ಧರಿಸಿತು.

ಒಂದೆಡೆ ಈ ಕ್ಲಿಷ್ಟವಾದ ವಿಷಯಗಳು ಇದ್ದರೆ, ಮತ್ತೊಂದೆಡೆ ಒಂದು ಹೊಸ ಯೋಜನೆ – ನನ್ನ ಮನಸ್ಸಿಗೆ ಬಹಳ ಹತ್ತಿರವಾದದ್ದು – ಬೆಳೆಯುತಿತ್ತು. ನಮ್ಮ 'ವರ್ಕ್‌ಷಾಪ್' ತಯಾರಾಗುತ್ತಿದ್ದಂತೆಯೇ ನಾನು ವಿಕಲಾಂಗ ಮಕ್ಕಳಿಗೆ ಒಂದು ಶಾಲೆಯನ್ನು ತೆಗೆಯುವ ಬಗ್ಗೆ ಯೋಚಿಸುತ್ತಿದ್ದೆ. ೧೯೭೩ ರ ಜೂನ್ ತಿಂಗಳಲ್ಲಿ ನಾನು ನಮ್ಮ ಲಿಂಗರಾಜಪುರದ ಸ್ಥಳದಲ್ಲಿ "ಶ್ರದ್ಧಾಂಜಲಿ" ಎಂಬ ಸಮ್ಮಿಲಿತ ಶಾಲೆಯನ್ನು ಹತ್ತು ಮಕ್ಕಳೊಡನೆ ಪ್ರಾರಂಭಿಸಿದೆ. ಆಗ ನಮ್ಮ ಆಡಳಿತ ಮಂಡಳಿಯಿಂದ ಶಾಲೆಯನ್ನು ತೆಗೆಯುವುದಕ್ಕೆ ಸಮ್ಮತಿಯೂ ದೊರೆತಿರಲಿಲ್ಲ. ದಿವಾನರು ನನ್ನನ್ನು ಮುಂದುವರೆಯಲು ಉತ್ತೇಜಿಸಿದರು. ನನಗೆ ಶಾಲೆಯು ಹೇಗಿರಬೇಕು ಎಂಬುದೂ ಗೊತ್ತಿರಲಿಲ್ಲ. ನಾನು ಎಂದೂ ಶಾಲೆಯೊಳಗೆ ಕಾಲಿಟ್ಟಿರಲಿಲ್ಲ. ನನ್ನ ತಂದೆಗೆ ನಾನು ಪದವಿಗಾಗಿ ಓದುವುದನ್ನು ನಿಲ್ಲಿಸಿದ್ದುದು ಬಹಳ ನಿರಾಶೆಯನ್ನು ಉಂಟುಮಾಡಿತ್ತು. ಅವರಿಗೆ ನಾನು ಎ.ಪಿ.ಡಿ.ಯಲ್ಲಿ ಮಾಡುತ್ತಿರುವ ಕೆಲಸಗಳ ಬಗ್ಗೆ ಅಷ್ಟೇನೂ ಉತ್ಸಾಹವೂ ಇರಲಿಲ್ಲ. ಆದರೆ ಅವರು ನನಗೆ ಪ್ರಿಯವಾದದ್ದನ್ನು ಮಾಡಲು ಅಡ್ಡಿಮಾಡಲಿಲ್ಲ. ನನಗೆ ಆದರೂ ಒಂದು ವಿಧವಾದ ಅಂಜಿಕೆಯಿತ್ತು. ಎಲ್ಲಿ ನನಗೆ ಗೊತ್ತಿಲ್ಲದ ವಿದ್ಯಾಕ್ಷೇತ್ರಕ್ಕೆ ನುಗ್ಗಿ ದೊಡ್ಡ ತಪ್ಪು ಮಾಡುತ್ತಿದ್ದೇನೋ ಎಂದು. ಆದರೆ ದಿವಾನ್ ಬಂಡೆಯಂತೆ ನನ್ನ ನೆರವಿಗೆ ನಿಂತರು. ಅವರಿಗೆ ನನ್ನ ಕ್ಷಮತೆಯಲ್ಲಿ ನಂಬಿಕೆಯಿತ್ತು, ಅವರು ನನ್ನನ್ನು ಮುಂದುವರಿಯಲು ಪ್ರೇರೇಪಿಸಿದರು.

ನಮ್ಮ ಮನೆಯ ಹತ್ತಿರ, ಹಿಮಾಂಶು ಜ್ಯೋತಿ ಕಲಾ ಪೀಠ ಎಂಬ ಸಂಸ್ಥೆಯು ನರ್ಸರಿ ಟೀಚರ್ಸ್‌ಗಳಿಗೆ ತರಬೇತಿ ನೀಡುತಿತ್ತು. ನಾನು ನನಗೆ ಅಲ್ಲಿ ಸೇರಲು

ಅರ್ಹತೆಯಿಲ್ಲವೆಂದು ತಿಳಿದಿದ್ದರೂ, ಅವರಲ್ಲಿ 'ಇಂಟರ್ವ್ಯೂ' ಗೆ ಹೋದೆ. ನಾನು 'ಇಂಟರ್ವ್ಯೂ' ಮಾಡಿತ್ತಿದ್ದ ಡಿ.ಡಿ.ಪಿ.ಐ. ಪೊನ್ನಪ್ಪವರನ್ನು ಸಂಧಿಸಿ ನಾನು ನನ್ನ ಶಾಲೆಯ ಸ್ವಪ್ನವನ್ನು ಪೂರೈಸಬೇಕಾದರೆ ನಾನು ಎಲ್ಲಾ ಕಲಿಯಬೇಕು ಎಂದು ಕೇಳಿಕೊಂಡೆ. ನನ್ನ ಕಥೆಯನ್ನು ಕೇಳಿ ಅವರು ನನಗೆ ಅಲ್ಲಿನ ತರಬೇತಿಗೆ ಸೇರಲು ಅನುಮತಿ ಕೊಟ್ಟರು. ಜೀವನವು ಪುರುಸೊತ್ತಿಲ್ಲದಂತಾಯಿತು. ಬೆಳಿಗ್ಗೆ ನಾನು ಏ.ಪಿ.ಡಿ. ಗೆ ಹೋಗುತ್ತಿದ್ದೆ, ಅಲ್ಲಿಂದ ಮನೆಗೆ ಊಟಕ್ಕೆ ಬಂದು ಹಿಮಾಂಷುವಿಗೆ ಟ್ರೈನಿಂಗಿಗೆ ಹೋಗುತ್ತಿದ್ದೆ, ರಾತ್ರಿ ಮನೆಯಲ್ಲಿ ಟ್ರೈನಿಂಗ್‌ಗೆ ಬೇಕಾದ ಕೈ ಕೆಲಸ ಇರುತಿತ್ತು.

ನಾನು ಟ್ರೈನಿಂಗ್ ಮುಗಿಸಿದಾಗ ನನ್ನ ಫಲಿತಾಂಶವನ್ನು ಹೇಳದೆ ಹಿಡಿದಿಟ್ಟಿದ್ದರು. ನನಗೆ ನಾನು ಪಾಸಾಗಿದ್ದೇನೆಯೇ ಇಲ್ಲವೇ ತಿಳಿಯದು. ಹಿಮಾಂಷು ಸಂಸ್ಥೆಯನ್ನು ಸಂಪರ್ಕಿಸಿ ಕಾರಣ ಕೇಳಿದಾಗ ಅವರು ನನ್ನ ವಿಕಲಾಂಗತೆಯ ಕಾರಣ 'ಬೋರ್ಡ್' ಫಲಿತಾಂಶವನ್ನು ಘೋಷಿಸಿಲ್ಲ ಎಂದರು. ನಾನು ಅವಾಕ್ಕಾದೆ. ನಾನು ನನ್ನ ಅರ್ಜಿಯಲ್ಲೂ ನನ್ನ ವಿಕಲತೆಯಬಗ್ಗೆ ಹೇಳಿಕೊಳ್ಳದಿರುವಾಗ ಬೋರ್ಡಿಗೆ ಹೇಗೆ ಈ ವಿಷಯ ಗೊತ್ತು ಎಂದು ಅವರನ್ನು ಕೇಳಿದೆ.

ನಾನು ಮತ್ತೆ ಹೋಗಿಪೊನ್ನಪ್ಪನವರನ್ನು ಸಂಧಿಸಿದೆ. ನಾನು ಫಸ್ಟ್ ಕ್ಲಾಸಿನಲ್ಲಿ ಪಾಸಾಗಿದ್ದೆ. ಆದರೆ ಅಲ್ಲಿನ ಒಬ್ಬ ವಯಸ್ಸಾದ ಟೀಚರಿಗೆ ನಾನು ವಿಕಲಾಂಗಿ, ಆದ್ದರಿಂದ ಟೀಚರ್ ಆಗಲು ಅರ್ಹಳಲ್ಲ ಎಂಬ ಭಾವನೆಯಿತ್ತು. ಅವರು 'ಬೋರ್ಡ್'ಗೆ ಆ ರೀತಿ ಬರೆದಿದ್ದರು. ಪೊನ್ನಪ್ಪನವರು ವಿಷಯವನ್ನು ಪರಿಶೀಲಿಸುವುದಾಗಿ ಭರವಸೆ ಕೊಟ್ಟರು. ನಾನು ಮತ್ತೆ ಹಿಮಾಂಷುವಿನಲ್ಲಿ ವಿಚಾರಿಸಿದಾಗ ಅವರು ನಾನು ಮತ್ತೆ ಪರೀಕ್ಷೆಯನ್ನು ಬರೆಯಬೇಕು ಎಂದರು. ನನಗೆ ಬಹಳ ಕೋಪ ಬಂತು. ನಾನು ಅವರನ್ನು "ನಾನು ಮತ್ತೆ ಪರೀಕ್ಷೆಯನ್ನು ಬರೆದರೆ ನನ್ನ ವಿಕಲಾಂಗತೆಯು ಹೋಗಿಬಿಡುತ್ತದೆಯೇ? ಅದು ಹೇಗೆ ನನಗೆ ಸರ್ಟಿಫಿಕೇಟನ್ನು ಕೊಡುವುದಕ್ಕೆ ಅರ್ಹಳಾಗಿ ಮಾಡುತ್ತದೆ?" ಎಂದು ಕೇಳಿದೆ. ನಾನು ಏನೇ ಕೂಗಾಡಿದರೂ ನನಗೆ ಬೇರೆ ದಾರಿ ಏನೂ ಇರಲಿಲ್ಲ. ಕೆಲವು ದಿನಗಳ ನಂತರ ನನಗೆ ನನ್ನ ಸರ್ಟಿಫಿಕೇಟು ಸಿಕ್ಕಿತು. ನಾನು ಮತ್ತೆ ಪರೀಕ್ಷೆ ಬರೆಯಬೇಕಿರಲಿಲ್ಲ. ವಿದ್ಯಾ ಇಲಾಖೆಯ "ರೆಡ್ ಟೇಪ್" ಸ್ವಲ್ಪ ಬಿಚ್ಚಿಕೊಂಡಿತ್ತು.

* * *

# ದಿವಾನ್

'ಪ್ಯಾರಾಪ್ಲೇಜಿಯಾ' ದಿವಾನರನ್ನು ವ್ಹೀಲ್ ಚೇರಿಗೆ ಕಟ್ಟಿ ಹಾಕಿರಬಹುದು. ಆದರೆ ಅವರು ಜೀವನದಲ್ಲಿ ಬಹಳ ಉತ್ಸಾಹಿಗಳಾಗಿದ್ದರು. ಅವರು ನನಗೆ ಒಬ್ಬ ಸಖಿ, ಮಿತ್ರ ಮತ್ತು ಮಾರ್ಗದರ್ಶಕರಾಗಿದ್ದರು. ನಾನು ಪಿ.ಪಿ.ಡಿ.ಗೆ ಬರುತ್ತಿದ್ದವರಿಗೆಲ್ಲಾ, ಎರಡೇ ನಿಮಿಷಕ್ಕಾದರೂ ಅವರನ್ನು ಭೇಟಿಮಾಡಲು ಹೇಳುತ್ತಿದ್ದೆ. ಅವರ ವ್ಯಕ್ತಿತ್ವ ಆ ಎರಡು ನಿಮಿಷಗಳಲ್ಲೂ ಅವರನ್ನು ಸಂಧಿಸಿದವರಲ್ಲಿ ಒಂದು 'ಪಾಸಿಟೀವ್' ಬದಲಾವಣೆಯನ್ನು ಪ್ರಾರಂಭಿಸಿ ಅವರ ಜೀವನವನ್ನು ಉತ್ತಮವಾಗಿಸುವ ಶಕ್ತಿ ಹೊಂದಿತ್ತು.

ಅವರನ್ನು ನಾನು ಪ್ರೀತಿಯಿಂದ 'ಗುರು' ಎಂದು ಕರೆಯುತ್ತಿದ್ದೆ. ಆಶ್ಚರ್ಯ ವೆಂದರೆ ಅವರೂ ನನ್ನನ್ನು 'ಗುರು' ಎಂದು ಕರೆಯುತ್ತಿದ್ದರು. ಅವರು ಬಹಳ ಸ್ನೇಹಮಯಿ. ನಾವು ವಾದ ಮಾಡುತ್ತಿದ್ದೆವು, ನಗುತ್ತಿದ್ದೆವು, ಒಬ್ಬರನ್ನೊಬ್ಬರು ರೇಗಿಸುತ್ತಿದ್ದೆವು ಮತ್ತು ಒಟ್ಟಿಗೆ ಕೆಲಸ ಮಾಡುತ್ತಿದ್ದೆವು. ಅವರು ಒಳ್ಳೆಯ ಆಟಗಾರರು. ಅವರಿಗೆ ಕ್ರಿಕೆಟ್ ಬಹಳ ಪ್ರಿಯ. ವ್ಹೀಲ್ ಚೆರಿನಿಂದಲೇ ಟೇಬಲ್ ಟೆನ್ನಿಸ್ ಆಡುತ್ತಿದ್ದರು. ಅವರು ತಮ್ಮ ಮಾತುಕಥೆಯಲ್ಲಿ ಆಟವನ್ನು ತಪ್ಪದೆ ಎಳೆದು ತರುತ್ತಿದ್ದರು.

ದಿವಾನ್ ಬಹಳ ಒಳ್ಳೆಯ ಹಿಂದಿ ಟೀಚರ್. ರೆಡ್ ಕ್ರಾಸಿನಲ್ಲಿ ಕೆಲಸಮಾಡುತ್ತಿದ್ದಾಗ ಹಿಂದಿಯನ್ನು ಕಲಿತು ಅವರು ಅದರಲ್ಲಿ 'ಸಾಹಿತ್ಯ ರತ್ನ' ಪದವಿಯನ್ನು ಪಡೆಯುವಷ್ಟು ಪರಿಣಿತಿಯನ್ನು ಪಡೆದಿದ್ದರು. ಅನೇಕ ಸಲ ಅವರು ಪರೀಕ್ಷೆಗೆ ಹೋದಾಗ ಅದು ಎರಡನೆಯ ಅಥವಾ ಮೂರನೆಯ ಮಹಡಿಯಲ್ಲಿದೆ ಎಂದು ತಿಳಿದು ಬರುವುದು. ಆದರೆ ಈ ರೀತಿಯ ಸಮಾಚಾರವು ಅವರನ್ನು ವಿಚಲಿತಗೊಳಿಸುತ್ತಿರಲಿಲ್ಲ. ಅವರು ಇತರ ವಿದ್ಯಾರ್ಥಿಗಳನ್ನು ಸಮಜಾಯಿಸಿ ಹೇಗೋ ತಮ್ಮನ್ನು ಮೇಲಕ್ಕೆ ಎತ್ತಿಕೊಂಡು ಹೋಗುವಂತೆ ಮಾಡುವರು. ಅದನ್ನು ನೋಡಿ ಅಲ್ಲಿನ ಅಧಿಕಾರಿಗಳ ಮುಖ ಕೆಂಪಾಗುವುದು. ಮಾರನೆಯ ದಿನದಿಂದ ಅವರ ಪರೀಕ್ಷೆ ಕೆಳಗಿನ ರೂಮಿನಲ್ಲಿ ಇರುತ್ತಿತ್ತು.

ರಾಷ್ಟ್ರಪತಿ ಡಾ. ರಾಜೇಂದ್ರ ಪ್ರಸಾದರು ರೆಡ್ ಕ್ರಾಸಿಗೆ ಭೇಟಿಕೊಟ್ಟಾಗ, ಅವರು ದಿವಾನರನ್ನು ನಿಮಗೇನು ಬೇಕು ಎಂದು ಕೇಳಿದರು. ದಿವಾನ್ ಅವರಿಗೆ ವಿಕಲಾಂಗರಾದ ನಮ್ಮ ಸೈನಿಕರಿಗೆ ಕೆಲಸ ಕೊಡಬೇಕು ಎಂದರು. ರಾಷ್ಟ್ರಪತಿಗಳು ಮತ್ತೆ ಅವರನ್ನು ನಿಮಗೆ

ವೈಯಕ್ತಿಕವಾಗಿ ಏನು ಬೇಕು ಎಂದು ಕೇಳಿದರು. ಅದಕ್ಕೆ ಅವರು "ನಾನು ದಿಲ್ಲಿಯ ಕೆಂಪು ಕೋಟೆಯಲ್ಲಿ ಸ್ವಾತಂತ್ರ ದಿನಾಚರಣೆಯನ್ನು ನೋಡಬೇಕು" ಅಂದರು. ಅವರಿಗೆ ಆ ವರ್ಷ ದಿಲ್ಲಿಯಲ್ಲಿ ನಡೆಯುವ ಸ್ವಾತಂತ್ರ ದಿನಾಚರಣೆಗೆ ಆಮಂತ್ರಣ ಬಂದಿತು ಮತ್ತು ಅವರ ಪ್ರಯಾಣದ ಖರ್ಚನ್ನೂ ಸರ್ಕಾರ ವಹಿಸಿಕೊಂಡಿತು. ದಿಲ್ಲಿಯಲ್ಲಿ ಅವರು ಪ್ರಧಾನ ಮಂತ್ರಿ ಜವಹರಲಾಲ್ ನೆಹರು ಅವರನ್ನು ಭೇಟಿಮಾಡಲು ಒಂದು ಅಪ್ಪಾಯಂಟ್ಮೆಂಟ್ ತೆಗೆದುಕೊಂಡರು. ಪಂಡಿತ್ ನೆಹರುವನ್ನು ಅವರು ಅವರ ಮನೆಯಲ್ಲಿ ಸಂದರ್ಶಿಸಿದರು. ಆಗ ನೆಹರು ಅವರನ್ನ ಅವರ ಜೀವನ ಮತ್ತು ಕೆಲಸದಬಗ್ಗೆ ಕೇಳಿತಿಳಿದುಕೊಂಡರು. ನಿಮಗೆ ಏನು ಬೇಕೆಂದು ಪಂಡಿತ್ ನೆಹರು ಅವರನ್ನು ಕೇಳಿದಾಗ, ದಿವಾನ್ ತಮ್ಮ ಹತ್ತಿರ ಒಂದು ಟ್ರೈಸಿಕಲಿದೆ ಅದು ಕೈಯಿಂದ ಓಡಿಸುವುದು ಅದಕ್ಕೆ ಮೋಟರ್ ಇಲ್ಲ, ಮೋಟರ್ ಇರುವ ಟ್ರೈಸಿಕಲ್ ಖರೀದಿಸಲು ತಮ್ಮ ಹತ್ತಿರ ಸಾಕಷ್ಟು ಹಣವಿಲ್ಲ ಎಂದರಂತೆ. ಪಂಡಿತ್ ನೆಹರು ಅವರಿಗೆ ಬೇಕಾದ ಹಣದ ಏರ್ಪಾಡು ಮಾಡಿದರು. ದಿವಾನ್ ನಂತರ ಊರೆಲ್ಲಾ ಸುತ್ತಲು ಸೌಲಭ್ಯ ಒದಗಿತು.

ಕೆಲವು ವರ್ಷಗಳ ನಂತರ ಶ್ರೀಲಂಕಾದಿಂದ ಒಬ್ಬರು ಪೂಜಾರಿ ಎ.ಪಿ.ಡಿ.ಗೆ ಬಂದಿದ್ದಾಗ ದಿವಾನ್ ಅವರ ದೇಶಕ್ಕೆ ಹೋಗುವ ಇಚ್ಛೆಯನ್ನು ತಿಳಿಸಿದರು. ಅದುವರೆಗೆ ಅವರು ಯಾವ ಹೊರದೇಶಕ್ಕೂ ಹೋಗಿರಲಿಲ್ಲ. ಅವರ ಪ್ರಯಾಣಕ್ಕೆ ಒಂದು ಪ್ಲಾನ್ ತಯಾರಿಸಿ ಅವರಿಗೆ ಒಂದು ಆಮಂತ್ರಣ ಕಳಿಸಲಾಯಿತು. ಅವರೊಂದಿಗೆ ನಾನೂ ಈ ಪುಟ್ಟ ದ್ವೀಪಕ್ಕೆ ಹೋದೆ. ನಾವು ಸುಮಾರು ಹತ್ತು ದಿನಗಳು ಕ್ಯಾಂಡಿಯಲ್ಲಿ ಉಳಿದುಕ್ಕೊಂಡು "ನುವಾರ ಎಲಿಯಾ"ದ ಸುಂದರ ಟೀ ತೋಟಗಳಿಗೆ ಭೇಟಿಕೊಟ್ಟೆವು. ನಾವು ಎಲ್ಲೆಲಿಯೂ ಕಾರಿನಲ್ಲಿ ಹೋದೆವು. ನಮ್ಮ ಜೊತೆಗೆ ಆ ಬಹಳ ದಯಾಳು ಮತ್ತು ಮಾತುಗಾರರಾದ ಪೂಜಾರಿ ಬಂದು ನಮಗೆ ಎಲ್ಲವನ್ನೂ ತೋರಿಸಿದರು. ದಿವಾನ್ ತಮ್ಮ ವಿಕಲತೆಯನ್ನು ಮರೆತು, ಉತ್ಸಾಹದಿಂದ ಕಾರಿನಲ್ಲಿ ಮುಂದೆ ಕುಳಿತುಕೊಳ್ಳುತಿದ್ದರು. ಕಾರು ಪ್ರಯಾಣದಲ್ಲಿ ಬಿಸಿಯಾಗುತ್ತಿತ್ತು ಮತ್ತು ಆ ಶಾಖಕ್ಕೆ ಅವರ ಕಾಲಿನಲ್ಲಿ ಬೊಬ್ಬೆ ಏಳುತಿತ್ತು. ಆದರೆ ಅವರಿಗೆ ಎಂದಿನಂತೆ ಅವರ ಸ್ವಾಸ್ಥ್ಯದ ಬಗ್ಗೆ ಚಿಂತೆಯೇ ಇರಲಿಲ್ಲ. ಜನರು ನನ್ನನ್ನು ಅವರ ಹೆಂಡತಿ ಎಂದು ತಪ್ಪಾಗಿ ತಿಳಿದುಕೊಂಡಾಗ ಉಂಟಾದ ಆಭಾಸಗಳಿಂದ ಅವರು ಹೇಗೋ ನುಸುಳಿಕೊಳ್ಳುತ್ತಿದರು. ನನಗೆ ತಡೆಯಲಾರದ ನಗು ಬರುತಿತ್ತು. ಆ ಸಂದರ್ಭಗಳು ನನಗೆ ಚೆನ್ನಾಗಿ ನೆನಪಿದೆ. ಅವರು ಬೇಗನೆ ತಪ್ಪನ್ನು ಸರಿಪಡಿಸಲು ಯತ್ನಿಸುತ್ತಿದ್ದರು. ನಾನು ಜನರು ಹೋದಮೇಲೆ ದಿವಾನರನ್ನು ಚೆನ್ನಾಗಿ ಲೇವಡಿ ಮಾಡುತ್ತಿದ್ದೆ.

ಅವರಿಗೆ ಮುಜುಗರವಾಗುತ್ತಿದ್ದುದು ಅವರ 'ಯೂರೀನ್ ಬ್ಯಾಗ್'ನಿಂದ. ಎಲ್ಲಾ 'ಪ್ಯಾರಾಪ್ಲೆಜಿಕ್'ರಂತೆ ಅವರೂ ಒಂದು 'ಯೂರೀನ್ ಬ್ಯಾಗ್' ತಮ್ಮ ಕಾಲಿಗೆ ಕಟ್ಟಿಕೊಂಡಿದ್ದರು. ಆಗಿನ ಕಾಲದಲ್ಲಿ ಏರ್ಪೋರ್ಟಿನಲ್ಲಿ ಈಗಿನಂತೆ ವ್ಹೀಲ್ ಚೇರಿನ ಸೌಕರ್ಯವಿರಲಿಲ್ಲ. ವಿಕಲಾಂಗರನ್ನು ಜನರು ಎತ್ತಿಕೊಂಡು ವಿಮಾನದಲ್ಲಿ ಹತ್ತಿಸಬೇಕಿತ್ತು. ದಿವಾನ್ ಅವರಿಗೆ ಹೇಗೆ ಎತ್ತಿಕೊಳ್ಳಬೇಕು ಎಂಬುದನ್ನು ಕೂಗಿ ಹೇಳುತ್ತಿದ್ದರು. ಆದರೆ, ಅನೇಕ ಸಲ ಎತ್ತಿಕೊಳ್ಳುವವರು ಅವರ ಕಾಲುಗಳನ್ನು ಎತ್ತಿ ಹಿಡಿದುಕೊಳ್ಳುತ್ತಿದ್ದರು. ಅದರ ಪರಿಣಾಮವಾಗಿ ಆ ಬ್ಯಾಗ್‌ನಿಂದ ಯೂರೀನ್ ಸೋರುತ್ತಿತ್ತು. ಅವರ ಬಟ್ಟೆಯು ಒದ್ದೆಯಾಗಿ ಅವರಿಗೆ ಬಹಳ ಕೋಪ ಬರುತ್ತಿತ್ತು.

ಅವರಿಗೆ ಒಬ್ಬ ಅಣ್ಣನಿದ್ದ – ಮಲಸಹೋದರ – ಅವನ ಕಥೆ ಹೀಗಿತ್ತು. ಅವನಿಗೆ ಆಗ ಹದಿಮೂರು ಅಥವಾ ಹದಿನಾಲ್ಕು ವರ್ಷ ವಯಸ್ಸು. ಅವನಿಗೆ ಯಾವ ನಿಯಂತ್ರಣವೂ ಇರಲಿಲ್ಲ. ಸ್ಕೂಲಿಗೆ ಸರಿಯಾಗಿ ಹೋಗುತ್ತಿರಲಿಲ್ಲ. ಅವನ ತಂದೆಗೆ ಬಹಳ ತೊಂದರೆ ಕೊಡುತ್ತಿದ್ದ. ಒಂದು ದಿನ, ಕೋಪದ ಆವೇಶದಲ್ಲಿ ಅವನ ತಂದೆ ಅವನನ್ನು ಮನೆ ಬಿಟ್ಟು ಹೋಗ ಹೇಳಿದರು. ಆ ಚಿಕ್ಕ ಹುಡುಗ ಎಲ್ಲಿಗೆ ಹೋಗುತ್ತಾನೆ? ಅವನು ಕೆಲವು ಸಂಬಂಧಿಕರ ಮನೆಯಲ್ಲಿ ಇರಲು ಪ್ರಯತ್ನ ಪಟ್ಟ. ಆದರೆ ಏನೂ ಸರಿಹೋಗಲಿಲ್ಲ. ಕೊನೆಗೆ ಮನೆಗೆ ಹಿಂದಿರುಗಿದ. ಆದರೆ ಅವನ ತಂದೆ ಮತ್ತು ಮಲತಾಯಿ ಅವನನ್ನು ಮನೆಗೆ ಸೇರಿಸಲಿಲ್ಲ. ಅವನು ತನ್ನ ತಮ್ಮ ದಿವಾನನ ಕಡೆಗೆ ತಿರುಗಿದ. ಇಬ್ಬರೂ ಸೇರಿ ಒಂದು ಉಪಾಯ ಹೂಡಿದರು. ಅವರ ಮನೆಯ ತಾರಸಿಗೆ ಹೋಗುವ ಜಾಗದಲ್ಲಿ ಸ್ವಲ್ಪ ಸ್ಥಳವಿತ್ತು. ಯಾರಿಗೂ ತಿಳಿಯದಂತೆ ಇಬ್ಬರು ಸಹೋದರರೂ ಅಲ್ಲಿ ವಾಸಿಸ ತೊಡಗಿದರು. ದಿವಾನ್ ಅವನನ್ನು ಬೆಳಗ್ಗಿನಹೊತ್ತು ಮನೆಯ ಹೊರಗೆ ಕರೆದುಕೊಂಡು ಹೋಗಿ ರಾತ್ರಿ ವಾಪಸ್ಸು ಕರೆದುಕೊಂಡು ಬರುತ್ತಿದ್ದರು. ಅಡಿಗೆ ಮನೇಯಿಂದ ಊಟದ ಪದಾರ್ಥಗಳು ಮಾಯವಾಗ ತೊಡಗಿದಾಗ ಅವರ ಅಮ್ಮ ಗಲಾಟೆ ಮಾಡಲಾರಂಭಿಸಿದಳು. ದಿವಾನ್ ಮಾತಾಡದಿದ್ದರು, ಪಾಪ ಅವರ ಮನೆಯ ಕೆಲಸದವನಿಗೆ ಶಿಕ್ಷೆಯಾಯಿತು. ಆ ಹುಡುಗನಿಗೆ ಜ್ವರಬಂದಾಗ ದಿವಾನ್ ಅವನಿಗೆ ಗಂಜಿ ಕೊಟ್ಟು ನೋಡಿಕೊಂಡರು. ಕ್ರಮೇಣ ಆ ಹುಡುಗನ ಕಾಯಿಲೆ ಜಾಸ್ತಿಯಾಗಿ ಕೆಲವು ದಿನಗಳಲ್ಲಿ ಅವನು ಸತ್ತು ಹೋದನು. ಪಾಪ, ದಿವಾನ್ ತನ್ನ ಕೈಯಲ್ಲಾದದನ್ನೆಲ್ಲಾ ಮಾಡಿದ್ದರು. ತಮಾಷೆ ಏನೆಂದರೆ, ನಾನು ಈ ಕಥೆಯನ್ನು ನನ್ನ ಸ್ನೇಹಿತೆ ಮಧು ಸಿಂಘಾಲ್‌ಗೆ ಕೆಲವು ವರ್ಷಗಳ ಹಿಂದೆ ಹೇಳಿದಾಗ, ಅವಳು ಅದನ್ನು ಹಿಂದಿಯಲ್ಲಿ ಬರೆದು ಒಂದು ಮ್ಯಾಗಜೀನಿಗೆ ಕಳುಹಿಸಿದಳು. ಅದಕ್ಕೆ ಅವಳಿಗೆ ರೂ. ೧೫೦ ರ ಬಹುಮಾನ ಸಿಕ್ಕಿತು.

ಕೆಲವುಸಲ ದಿವಾನರ ತಾಯಿ ಬೆಂಗಳೂರಿಗೆ ಬರುತ್ತಿದ್ದರು. ನನಗೆ ಬರುತ್ತಿದ್ದ ಅಲ್ಪ ಸ್ವಲ್ಪ ಮರಾಠಿಯಲ್ಲಿ ನಾನು ಅವರನ್ನು 'ಆಯಿ' ಎಂದು ಕರೆಯುತ್ತಿದ್ದೆ. ದಿವಾನ್ ನನ್ನನ್ನು ಅವರ ಮನೆಯಲ್ಲಿ ಊಟಕ್ಕೆ ಕರೆದು ಅವರ ಅಮ್ಮನಿಗೆ ಅಂದು ನನ್ನ ಹುಟ್ಟು ಹಬ್ಬ ಎಂದು ಹೇಳುತ್ತಿದ್ದರು. ಅವರು ಅದನ್ನು ನಂಬಿ ನನಗೋಸ್ಕರ ಸಿಹಿ ತಿಂಡಿಗಳನ್ನು ಮಾಡುತ್ತಿದ್ದರು. ನನಗೆ ಹುಟ್ಟುಹಬ್ಬದ ಕೊಡುಗೆ ಏನನ್ನೂ ಕೊಡಲಿಲ್ಲವಲ್ಲ ಎಂದು ಅವರಿಗೆ ಸಂಕೋಚ ಬೇರೆ. ನಾನು ಬೇಡವೆಂದು ಹೇಳಿದಷ್ಟೂ ದಿವಾನ್ ಬಿದ್ದು ಬಿದು ನಗುತ್ತಿದ್ದರು. ಕೊನೆಗೆ ನಾನು ಅವರು ಕೊಟ್ಟ ಹಣವನ್ನು ತೆಗೆದುಕೊಳ್ಳಬೇಕಾಗುತ್ತಿತ್ತು. ನಮ್ಮೆಲ್ಲರನ್ನೂ ದಿವಾನ್ ನಕ್ಕು ನಲಿಸುತ್ತಿದ್ದರು. ಆದರೆ, ವಿಕಲಾಂಗರ ಕೆಲಸದ ವಿಷಯದಲ್ಲಿ ಅವರು ಬಹಳ ಸೀರಿಯಸ್ ಆಗಿರುತ್ತಿದ್ದರು. ಒಂದು ಸಲ ಇರಾಕ್ ನಲ್ಲಿ ನಾವು ಹೋಗುತ್ತಿದ್ದಾಗ ಅಲ್ಲಿ ಒಬ್ಬ ಬಲಿಷ್ಠ ಯುವಕ ವಿಕಲಾಂಗನನು ಒಬ್ಬ ವಯಸ್ಸಾದವನು ಎತ್ತಿಕೊಂಡು ಹೋಗುತ್ತಿದ್ದ. ಅದನ್ನು ನೋಡಿದ ದಿವಾನ್ ಅವನಿಗೆ ನೀನು ಯಾಕೆ ವ್ಹೀಲ್ ಚೇರ್ ತೆಗೆದುಕೊಳ್ಳಬಾರದು, ಆ ಮುದುಕನ ಬೆನ್ನನ್ನು ಯಾಕೆ ಮುರಿಯುತ್ತಿದ್ದೀಯ? ಎಂದು ಕೇಳಿದರು. ಅದಕ್ಕೆ ಅವನು ಜೋರಾಗಿ ನಕ್ಕು, "ನಾನು ಅವನಿಗೆ ಹಣ ಕೊಡುತ್ತಿದ್ದೀನಿ. ಅವನು ನನ್ನನ್ನು ಸಂತೋಷವಾಗಿ ಎತ್ತಿಕೊಳ್ಳುತ್ತಾನೆ" ಎಂದನು. ವಿಕಲತೆಯ ಬಗ್ಗೆ ಅವನ ಮನೋಭಾವವನ್ನು ಕಂಡು ದಿವಾನ್ ಅವಾಕ್ಕಾದರು.

ಕೆಲವು ವರ್ಷಗಳ ನಂತರ ಅವರು ಜರ್ಮನಿಯಲ್ಲಿ ಒಂದು ಕ್ರೀಡಾ ಮೇಳಕ್ಕೆ ಹೋದರು. ಆಗ ಅವರಿಗೆ ಮೈ ಅಷ್ಟು ಹಿತವಿರಲಿಲ್ಲ, ಆದರೂ ಅದನ್ನು ಬದಿಗಿರಿಸಿ ಹೋದರು. ವಿಮಾನ ನಿಲ್ದಾಣದಿಂದ ಅವರನ್ನು ನೇರ ಆಸ್ಪತ್ರೆಗೆ ಕರೆದುಕೊಂಡು ಹೋದರು. ಅವರಿಗೆ ಮೂತ್ರಪಿಂಡದಲ್ಲಿ ಕ್ಯಾನ್ಸರ್ ಆಗಿದೆ ಎಂದು ತಿಳಿಯಿತು. ಅವರು ಆಸ್ಪತ್ರೆಯಿಂದ ನನಗೆ ಪತ್ರ ಬರೆದರು. ಕ್ರೀಡಾ ಮೇಳಕ್ಕೆ ಬಂದ ಅವರು ಅಲ್ಲೆಲ್ಲೂ ಹೋಗಲಾಗದೆ ಆಸ್ಪತ್ರೆಯಲ್ಲಿ ಸಿಕ್ಕಿಹಾಕಿಕೊಂಡಿದ್ದಾರೆ, ಅಲ್ಲಿ ಎಲ್ಲರೂ ಜರ್ಮನ್ ಭಾಷೆಯಲ್ಲಿ ಮಾತಾಡುತ್ತಾರೆ, ಏನೂ ಅರ್ಥವಾಗುವುದಿಲ್ಲ, ಡಾಕ್ಟರ್‌ಗಳು ಅವರಿಗೆ ಟ್ಯೂಮರ್ ಆಗಿದೆ ಎಂದು ಹೇಳಿದರು ಇತ್ಯಾದಿಯಾಗಿ ಏನೂ ಆಗಿಲ್ಲದಂತೆ ಕಾಗದ ಬರೆದಿದ್ದರು. ನನಗೆ ಆ ಕಾಗದ ಓದಿದಾಗ ಪ್ರಜ್ಞೆ ತಪ್ಪುವಂತಾಯಿತು.

ಅವರಿಗೆ ಆಪರೇಷನ್ ಆದನಂತರ ಅವರು ತಾನು ಗುಣವಾಗಿದ್ದೇನೆ, ಕಾಯಿಲೆಯು ಅಲ್ಲಿಗೇ ಮುಗಿಯಿತು ಎಂದು ಅಂದು ಕೊಂಡರು. ಆದರೆ ನನಗೆ ನಂಬಿಕೆ ಇರಲಿಲ್ಲ, ಕ್ಯಾನ್ಸರ್ ಮತ್ತೆ ಕಂಡುಕೊಳ್ಳುವ ಕಾಯಿಲೆ, ಎಂದು. ಅದಕ್ಕೆ ಸರಿಯಾಗಿ ಎರಡು ವರ್ಷಗಳ

ನಂತರ ಅದು ಮತ್ತೆ ಕಂಡುಕೊಂಡಿತು ಈಸಲ ಹೊಟ್ಟೆಯಲ್ಲಿ. ಅವರು ಅದನ್ನು ಹಾಸ್ಯಮಾಡುತ್ತಲೇ ತೆಗೆದುಕೊಂಡರು. ಅವರು 'ಪ್ಯಾರಾಪ್ಲೆಜಿಕ್' ಆದ್ದರಿಂದ ಎದೆಯ ಕೆಳಗೆ ಯಾವನೋವೂ ತಿಳಿಯುವುದಿಲ್ಲ, ಹೊಟ್ಟೆಯ ಒಂದು ಕಡೆಯಿಂದ ಎದೆಯವರೆಗೆ ಒಂದು ಬ್ರಿಡ್ಜ್ ಬೆಳೆಯುತ್ತಿದೆ, ಇತ್ಯಾದಿ. ಮುಂದಿನ ಎರಡು ವರ್ಷಗಳಲ್ಲಿ ಕಾಯಿಲೆಯು ಅವರ ಶ್ವಾಸಕೋಶವನ್ನು ಮುಟ್ಟಿತು.ಅವರಿಗೆ ತಾನು ಬದುಕಿ ಉಳಿಯುವ ಅವಕಾಶ ಕಮ್ಮಿ ಎಂಬುದು  ತಿಳಿಯಿತು. ಅವರು ಎಲ್ಲಾ ರೀತಿಯ ಚಿಕಿತ್ಸೆಯನ್ನು ಪಡೆದರು. ಕೀಮೋಥೆರಾಪಿಯಿಂದ ಅವರ ದೇಹವೆಲ್ಲಾ ಸುಟ್ಟಿತ್ತು. ಆದರೂ ಅವರು ಸೂಟು ಬೂಟು ಧರಿಸಿ ಆಫೀಸಿಗೆ ಬರಿತ್ತಿದ್ದರು. ಅವರು ಎಂದೂ ಕೈಲಾಗುವುದಿಲ್ಲ ಎಂದು ಬಿಟ್ಟು ಬಿಡಲಿಲ್ಲ, ಪುಣೆಯಲ್ಲಿ ಆರ್ಮಿ ಆಸ್ಪತ್ರೆಯ ವೈದ್ಯರಿಗೆ ಅವರು ಒಂದು ಶ್ವಾಸ ಕೋಶವನ್ನು ತೆಗೆದು ಬಿಡಿ, ನಾನು ಮತ್ತೊಂದರಲ್ಲೇ ಜೀವನ ಮುಂದುವರಿಸುತ್ತೇನೆ ಎಂದರು.

ಪುಣೆಯ ಆಸ್ಪತ್ರೆಯಲ್ಲಿ ಮತ್ತೊಬ್ಬ ರೋಗಿಯನ್ನು ಕಾಣಲು ಬಂದಿದ್ದ ಒಬ್ಬಳು ಹೆಂಗಸು ಅವರಿಗೆ ಪರಿಚಿಯವಾದಳು. ಆಶ್ಚರ್ಯಕರವಾಗಿ, ಆಕೆಗೆ ಈ ಸುಂದರ, ಪ್ಯಾರಾಪ್ಲೆಜಿಕ್ ಆದ, ಹಿಂದೆ ಸೈನ್ಯದಲ್ಲಿದ್ದ, ಈಗ ಕ್ಯಾನ್ಸರ್‌ಕಾಯಿಲೆಗೆ ಅರ್ಧ ಶರೀರವನ್ನು ಆಗಲೇ ಬಲಿಕೊಟ್ಟಿರುವ ಈ ಮನುಷ್ಯ ಆಕರ್ಷಕನಾದನು. ಅವರಿಬ್ಬರೂ ಸಂಪರ್ಕದಲ್ಲಿದ್ದರು. ಪಿ.ಪಿ.ಡಿ.ಯಲ್ಲಿ ಊಟದ ವೇಳೆಯಲ್ಲಿ ನಾನು ಅನೇಕಸಲ ದಿವಾನ್ ಅವಳೊಡನೆ ಮಾತಾಡುವುದನ್ನು ಕೇಳಿದ್ದೇನೆ. ಕೊನೆಗೆ ಒಂದು ದಿನ ಅವಳು ಅವರಿಬ್ಬರ ಮದುವೆಯ ಪ್ರಸ್ತಾಪವನ್ನು ಎತ್ತಿದಳು. ಆಗ ದಿವಾನ್ ಅವರ ಹಿಂದಿ ಸ್ಕೂಲಿನ ದಿನದ ಗೆಳೆಯರನ್ನು ಅವರ ಅಭಿಪ್ರಾಯವನ್ನು ಕೇಳಿದರು.ಅವರು ಒಪ್ಪಲಿಲ್ಲ. ನಾನೂ ಇದು ಶುದ್ಧ ಹುಚ್ಚುತನ. ದಿವಾನರಿಗೆ ಬಹಳ ಮುಂದುವರಿದ ಕ್ಯಾನ್ಸರ್ ಕಾಯಿಲೆ, ಈ ಸ್ಥಿತಿಯಲ್ಲಿ ಮದುವೆ ಏನೂ ಪ್ರಯೋಜನವಿಲ್ಲ, ಎಂದೆ. ದಿವಾನ್ ಅವರ ಹೆಂಡತಿಯಿಂದ ಅನೇಕ ವರ್ಷಗಳು ಬೇರ್ಪಟ್ಟು ಇದ್ದು, ಈಗ ಮದುವೆಗೆ ಮತ್ತೆ ಸಿದ್ಧರೆಂದು ಅನಿಸಿದರೂ, ಅವರು ತಮ್ಮ ಮಿತ್ರರು ಮತ್ತು ಹಿತೈಷಿಗಳ ಮಾತನ್ನು ಕೇಳಲು ಮುಂದಾದರು. ಪುಣೆಯಲ್ಲಿ ಒಂದು ದಿನ ಮಧ್ಯಾಹ್ನ ನಾವೆಲ್ಲರೂ ಸೇರಿದ್ದಾಗ ಅವರು ಆ ಹೆಂಗಸಿಗೆ ತಾನು ಅವಳನ್ನು ಮದುವೆಯಾಗುವುದಿಲ್ಲ ಎಂಬ ಸಮಾಚಾರವನ್ನು ಹೇಳಿದರು. ನಂತರ ಏನಾಯಿತೆಂದು ಗೊತ್ತಿಲ್ಲ, ಆದರೆ ಅವಳಿಗೆ ಕೋಪಬಂದು ಅವರು ಬರೆಯಲು ಉಪಯೋಗಿಸುತ್ತಿದ್ದ ರಟ್ಟನ್ನು ತೆಗೆದುಕೊಂಡು ಅವರ ತಲೆಯಮೇಲೆ ಹೊಡೆಯಲಾರಂಭಿಸಿದಳು. ಮುಂದಾದ ಗಡಿಬಿಡಿಗೆ ನರ್ಸ್ ಓಡಿ ಬಂದಾಗ ದಿವಾನ್ ರಟ್ಟು, ರಟ್ಟು ಎಂದು ಕೂಗಿಕೊಳ್ಳುತಿದ್ದರು ಎಂದು ತಿಳಿಯಿತು.

ಅವರಿಗೆ ಒಬ್ಬ ಹೋಮಿಯೋಪಥಿ ವೈದ್ಯ ಕ್ಯಾನ್ಸರ್ ರೋಗಿಗಳ ಚಿಕಿತ್ಸೆಯಲ್ಲಿ ಯಶಸ್ವಿಯಾಗಿದ್ದಾರೆ ಎಂದು ತಿಳಿಯಿತು. ಅವರಿಗೆ ಕ್ರಿಕೆಟ್ಟಿಗ ವಿಜಯ್ ಮರ್ಚೆಂಟ್ ಜುಹು ಹತ್ತಿರ ತಂಗಲು ಒಂದು ಸ್ಥಳವನ್ನು ಕೊಡಿಸಿ ಸಹಾಯ ಮಾಡಿದರು. ದಿವಾನ್ ಅವರ ತಾಯಿ ಮತ್ತು ಸಹಾಯಕ್ಕೆ ಎ.ಪಿ.ಡಿ.ಇಂದ ಒಬ್ಬ ಹುಡುಗನ ಜೊತೆ ಅಲ್ಲಿಗೆ ಹೋದರು.ಆದರೆ ಆ ವೈದ್ಯ ಬಹಳ ನಿರಾಶಾ ದಾಯಕವಾದವನು. ಅವನು ದಿವಾನರನ್ನು ಭೇಟಿಸಹ ಮಾಡಲಿಲ್ಲ. ನನ್ನ ಮನಸ್ಸಿನಲ್ಲಿ ಒಂದುಕಡೆ ಅವರು ಬೆಂಗಳೂರಿಗೆ ಹಿಂದಿರುಗಿ ಬರಲಾರರು ಎಂದನಿಸುತ್ತಿತ್ತು. ಆದಕ್ಕೋಸ್ಕರ ನಾನು ಬಹಳ ದುಃಖದೊಡನೆ ಮುಂಬೈಗೆ ಅವರನ್ನು ನೋಡಲು ಹೊರಟೆ. ನಾವು ಇಡೀ ದಿನ ಎ.ಪಿ.ಡಿ. ಮತ್ತು ಜೀವನದ ಬಗ್ಗೆ ಮಾತನಾಡುತ್ತಿದ್ದಿವಿ. ಅವರ ತಾಯಿಗೆ ಆಗ ಎಪ್ಪತ್ತು ವಯಸ್ಸಿರಬಹುದು. ಅವರು ಅಡಿಗೆ ಇತ್ಯಾದಿ ಕೆಲಸಗಳನ್ನು ಸಂಭಾಳಿಸುತ್ತಿದ್ದರು. ದಿವಾನರ ಸ್ಥಿತಿ ಏನೂ ಚೆನ್ನಾಗಿರಲಿಲ್ಲ. ಅಂದು ರಾತ್ರಿ ಸುಮಾರು ಎಂಟು ಘಂಟೆಗೆ ನನಗೆ ಫೋನ್ ಬಂತು. ದಿವಾನರ ತಾಯಿಗೆ ಬಹಳ ಆತಂಕ, ಅವರು ಪಬ್ಲಿಕ್ ಫೋನಿನಿಂದ ಕರೆ ಮಾಡುತ್ತಿದ್ದರು. ಅವರು ದಿವಾನರಿಗೆ ಮೂರ್ಚೆ ಬಂದಿತ್ತು ಎಂದು ಹೇಳಿ ಫೋನನ್ನು ಅಲ್ಲಿದ್ದ ಪೋಲೀಸಿನವನೊಬ್ಬನಿಗೆ ಕೊಟ್ಟರು. ಅವನು ಅವರು ಮರಾಠಿಯಲ್ಲಿ ಹೇಳುತ್ತಿದ್ದನ್ನು ನನಗೆ ಹಿಂದಿಯಲ್ಲಿ ಹೇಳಿದ.ನಾನು, ನನ್ನ ಅಕ್ಕ ಮತ್ತು ಭಾವ ತಕ್ಷಣ ಜುಹೂಗೆ ಓಡಿದೆವು. ಅಲ್ಲಿ ದಿವಾನ್ ಅವರ ಎಂದಿನ ನಗುಮುಖದೊಂದಿಗಿದ್ದರು. ಮಾತಾಡುವುದು ಕಷ್ಟವಾಗುತ್ತಿತ್ತು. ನನ್ನ ಅಕ್ಕ ಅವರ ಡಾಕ್ಟರನ್ನು ಹೋಗಿ ದಿವಾನರನ್ನು ನೋಡಲು ಹೇಳಿದಳು. ಅವರು ನೋಡಿ ಅವರಿಗೆ ತೀವ್ರವಾದ ಹೃದಯಾಘಾತ ಆಗಿದೆ ಎಂದರು. ಅಲ್ಲಿನ ವಾಚ್‌ಮನ್‌ನ ಸಹಾಯದಿಂದ ನನ್ನ ಅಕ್ಕ ಮತ್ತುಭಾವ ಅವರನ್ನು ಕಾರಿಗೆ ವರ್ಗಾಯಿಸಿ ಅಲ್ಲಿಂದ ಕರೆದುಕೊಂಡುಹೋಗಿ ನಾನಾವತಿ ಆಸ್ಪತ್ರೆಗೆ ಸೇರಿಸಿದರು.

ದಿವಾನರ ತಾಯಿ ಅವರ ಇನ್ನೊಬ್ಬ ಮಗ ಈ ಊರಲ್ಲೇ ಇದ್ದಾನೆ ಎಂದು ಹೇಳಿದರು. ಅವನ ವಿಳಾಸವನ್ನು ಒಂದು ಚೀಟಿಯಲ್ಲಿ ಬರೆದು ಕೊಂಡಿದ್ದರು ಅದು ಎಲ್ಲೋ ಕಳೆದು ಹೋಗಿ ಎಲ್ಲರೂ ಮನೆಯೆಲ್ಲಾ ಹುಡುಕಿದೆವು. ರಾತ್ರಿ ಎರಡು ಘಂಟೆಯವೇಳೆಗೆ ಆ ಚೀಟಿಯು ಒಂದು ಮೋರಿಯ ಹತ್ತಿರ ಸಿಕ್ಕಿತು. ಮಾರನೆಯ ದಿನ ನಾವು ಆಸ್ಪತ್ರೆಗೆ ಸೇರಿದಾಗ ದಿವಾನ್ ಎಂದಿನಂತೆ, ಏನೂ ಆಗದವರಂತೆ ನಗುತ್ತಿದ್ದರು. ಮುಂದಿನ ದಿನಗಳಲ್ಲಿ ಅವರಿಗೆ ಕೆಲವು ಪುಟ್ಟ ಹೃದಯಾಘಾತಗಳು ಆದವು. ಆದರೆ ದಿವಾನ್ ದೊಡ್ಡ ಹೋರಾಟಗಾರರು.ಅವರಿಗೆ ಅವರ ಜೀವನದಬಗ್ಗೆ ಬಹಳ ಪ್ರೇಮವಿತ್ತು ಆದ್ದರಿಂದ ಅದನ್ನು ಅಷ್ಟು ಬೇಗ ಬಿಟ್ಟು ಕೊಡುತ್ತಿರಲಿಲ್ಲ. ಒಂದು ದಿನ ಮಧ್ಯಾಹ್ನ ನಾನು ಅವರನ್ನು ಕಂಡಾಗ ಅವರು ಮಲಗಿದ್ದರು, ಮುಖ ಗೋಡೆಯಕಡೆ ತಿರುಗಿತ್ತು, ನನ್ನ ವ್ಹೀಲ್ ಚೇರಿನ

ಶಬ್ದ ಕೇಳಿದೊಡನೆ ಅವರು "ಹೇಮಾ, ಬಂದೆಯಾ, ನಾನು ನಿನ್ನ ಬಗ್ಗೆಯೇ ಯೋಚಿಸುತ್ತಿದ್ದೆ" ಎಂದರು. ನಿಧಾನವಾಗಿ ಅವರು ನನ್ನ ಕಡೆ ತಿರುಗಿದರು. ಅವರು ಅಳುತ್ತಿದ್ದರು. "ನನ್ನ ಕೈಯಲ್ಲಾಗುತ್ತಿಲ್ಲ. ನಾನು ಬಿಟ್ಟುಬಿಡುತ್ತೇನೆ" ಎಂದರು. ನಾನು ಅವರಿಗೆ "ನೀವು ನನ್ನ ಗುರು. ನಾವು ಗುರುಗಳನ್ನೇ ನಂಬಿರುವುದು. ಗುರುಗಳು ಕೈ ಬಿಡಲಾಗದು. ನೀವು ಹೋರಾಡಲೇ ಬೇಕು" ಎಂದೆ. ಆದರೆ ನನ್ನ ಮನಸ್ಸಿನೊಳಗೆ ಅದು ಎಷ್ಟು ಹುಚ್ಚುತನ ಎಂದು ಗೊತ್ತಿತ್ತು. ನಾವು ನಮ್ಮ ಮುಂದಾಳುಗಳನ್ನು, ಎಂದೆಂದಿಗೂ ನಮ್ಮನ್ನು ಮುಂದೆ ನಡೆಸಬೇಕೆಂದು ಆಶಿಸುತ್ತೇವೆ. ಅವರನ್ನು ಒಂದು ಎತ್ತರದ ಪೀಠದಮೇಲೆ ಕೂರಿಸಿ ಅವರೂ ಮನುಷ್ಯರು ಅವರೂ ಇತರರಂತೆ ನಾಜೂಕಾಗಿರುತ್ತಾರೆ ಎಂಬುದನ್ನು ಮರೆಯುತ್ತೇವೆ.

ದಿವಾನರ ಇತರ ಮಿತ್ರರೂ ಆಸ್ಪತ್ರೆಗೆ ಬಂದು ಅವರನ್ನು ನೋಡುತ್ತಿದ್ದರು. ಅವರಲ್ಲಿ ಒಬ್ಬರು ಸಿನೆಮಾ ಜಗತ್ತಿಗೆ ಸೇರಿದವರು. ಅವರು ದಿವಾನರನ್ನು ಸಂದರ್ಶನ ಮಾಡಲು ಮತ್ತೊಬ್ಬರನ್ನು ಕರೆತರುವುದಾಗಿ ಹೇಳಿದರು. ಅವರು ಕೂಡಲೇ ಎಲ್ಲಾ ಏರ್ಪಾಡುಗಳನ್ನೂ ಮಾಡಿದರು. ಒಂದು ಮಧ್ಯಾಹ್ನ ನಾನು ಆಸ್ಪತ್ರೆಗೆ ಹೋದಾಗ ಅಲ್ಲಿ ಎಲ್ಲೆಲ್ಲೂ ವೈರ್ ಗಳು, ಕ್ಯಾಮೆರಾ ಇತ್ಯಾದಿ ಕಂಡವು. ದಿವಾನ್ ಸ್ವಚ್ಛವಾಗಿ 'ಶೇವ್' ಮಾಡಿಕ್ಕೊಂಡು ಒಳ್ಳೆಯ ಬಟ್ಟೆಯನ್ನು ಧರಿಸಿ ಶೂಟಿಂಗ್‌ಗೆ ತಯಾರಾಗಿತ್ತಿದ್ದರು. ಸ್ವಲ್ಪ ಹೊತ್ತಿಗೆ ಹೆಸರಾಂತ ಲೇಖಕಿ ಮತ್ತು ನಿರ್ದೇಶಕಿ ಸಾಯಿ ಪರಾಂಜಪೆ ದಿವಾನರನ್ನು ಸಂದರ್ಶಿಸಲು ಬಂದಳು. ದಿವಾನ್ ನನ್ನನ್ನೂ ಅವರ ಪಕ್ಕದಲ್ಲಿ ಕುಳಿತುಕೊಳ್ಳ ಹೇಳಿದರು. ಆದರೆ ನನಗೆ ಬಹಳ ಕೋಪ ಬಂತು. ಈಗಲೋ ಆಗಲೋ ಸಾಯುವಂತ ರೋಗಿಯೊಬ್ಬನಿದ್ದರೆ, ಅವನನ್ನು ಶಾಂತಿಯಿಂದ ಇರಗೊಳ್ಳದೆ ಜನ ತೊಂದರೆ ಕೊಡುತ್ತಿದ್ದಾರಲ್ಲ, ಎಂದು. ದಿವಾನರಿಗೆ ಯಾವುದರ ಪರಿವೆಯೂ ಇರಲಿಲ್ಲ. ಅವರು ಖುಷಿಯಾಗಿ ಮುನ್ನುಗ್ಗಲು ತಯಾರಾಗಿದ್ದರು. ಅವರಿಗೆ ಶುಭ ಕೋರಿದೆ. ಅವರು ಎಂದಿನಂತೆ ಆ ದಿನದ ತಾರೆಯಾಗಿದ್ದರು.

ಅನೇಕ ವಿಷಯಗಳಲ್ಲಿ ನಮಗೆ ಭಿನ್ನಾಭಿಪ್ರಾಯವಿರುತ್ತಿತ್ತು, ಮುಖ್ಯವಾಗಿ ವರ್ಕ್‌ಶಾಪಿನ ವಿಸ್ತರಣೆಯ ವಿಷಯದಲ್ಲಿ. ನನಗೆ ಶಿಸ್ತಿಲ್ಲದ ವಿಕಲಾಂಗರಿರುವ ದೊಡ್ಡದೊಂದು ಸಂಸ್ಥೆಯನ್ನು ನಡೆಸುವುದು ಬೇಕಿರಲಿಲ್ಲ. ನನಗೆ ನಮಗೆ ಬೇಕಾದಂತೆ, ನಮ್ಮ ಸೌಕರ್ಯಕ್ಕೆ ಹೊಂದಿಕೊಂಡಿರುವರೀತಿಯಲ್ಲಿ ವಿಸ್ತರಣೆ ಬೇಕಿತ್ತು. ಆದರೆ ನಾವು ಬೇರ್‍ಯಾರೋ ಮಾಡಿದ ದೊಡ್ಡ ವರ್ಕ್‌ಷಾಪನ್ನು ಅನುಸರಿಸಿದೆವು. ಅದನ್ನು ನೋಡಿಕೊಳ್ಳುವುದೇ ನಮಗೆ ದೊಡ್ಡ ಪ್ರಯಾಸವಾಗಿತ್ತು. ನಮಗೆ ಹಣ ಹರಿದು ಬರುತ್ತಿದ್ದರೂ ಅದನ್ನು ಸಂಭಾಳಿಸುವ ಶಕ್ತಿ

ನಮಗಿದೆ ಎಂಬ ನಂಬಿಕೆ ನನಗಿರಲಿಲ್ಲ. ಆದರೆ ದಿವಾನ್ ಯಾವಾಗಲೂ 'ಪಾಸಿಟೀವ್' ಆಗಿದ್ದರು. ಅವರು ಮೊದಲು ಹಣ ಬರಲಿ ಆಮೇಲೆ ನಾವು ಅದರ ಸದುಪಯೋಗವನ್ನು ಆಲೋಚಿಸೋಣ ಎನ್ನುತ್ತಿದ್ದರು. ನಮ್ಮ 'ಬೋರ್ಡ್' ಅವರ ಹಿಂದೆ ಬಲವಾಗಿತ್ತು, ೧೯೬೮ ರ ವರೆಗೆ ನಾವು ನಮ್ಮದೇ ಶಕ್ತಿಯಿಂದ ಸಂಸ್ಥೆಯನ್ನು ನಡೆಸಿ, ಇಡೀ ದಕ್ಷಿಣ ಭಾರತದಿಂದ ೨೦೦ ಟ್ರೈನೀಗಳನ್ನು ತಯಾರು ಮಾಡಿದ್ದೆವು. ಆದರೆ ಎಚ್.ಇ.ಕೆ.ಎಸ್. ಮತ್ತು ಬಿ.ಎಫ್.ಡಬ್ಲ್ಯು ನಮ್ಮೊಡನೆ ಸೇರಿಕೊಂಡಮೇಲೆ ಇದೆಲ್ಲಾ ಬದಲಾಯಿತು. ಎ.ಪಿ.ಡಿ.ಯಿನ ಪ್ರಾರಂಭಿಕ ಖಜಾಂಚಿಯಾಗಿದ್ದ ನಮ್ಮ ತಂದೆಗೂ ನಾವು ಅಷ್ಟು ಹಣವನ್ನು ಹೊಂದಿಸುವುದರ ಬಗ್ಗೆ ವಿಶ್ವಾಸವಿರಲಿಲ್ಲ. ಅವರು ರೂ. ೩೦ ಲಕ್ಷವನ್ನು ಹೊಂದಿಸುವುದು ಬಹಳ ಕಷ್ಟ ಎಂದಿದ್ದರು. ಆದರೆ ಕೊನೆಯಲ್ಲಿ ನಾವು ಮಾಡಿದ್ದೇ ಸರಿ ಎಂದು ತೋರುತ್ತದೆ.

ನಾನು ನಾಲ್ಕು ವರ್ಷಗಳಿಂದ ನನ್ನ ಮನಸ್ಸಿನಲ್ಲಿ ದಿವಾನರ ಅಂತ್ಯವನ್ನು ಒಪ್ಪಿಕೊಂಡಿದ್ದೆ, ನನಗೆ ದಿವಾನರು ಒಂದು ದಿವಸ ಇರುವುದಿಲ್ಲ, ಕ್ಯಾನ್ಸರ್‌ಗೇ ಜಯವಾಗುತ್ತದೆ ಎಂಬುದು ಗೊತ್ತಿತ್ತು, ಆದರೆ ಮುಂದಾಗುವುದು ಏನೆಂದು ಗೊತ್ತಿರಲಿಲ್ಲ. ನನ್ನ ಆತಂಕ ಅವರಿಗೆ ಗೊತ್ತಾಗಿ ಅವರು ಸಂಕಟಪಡಬಹುದು ಎಂದು ನಾನು ಅವರಲ್ಲಿ ಈ ವಿಷಯದ ಬಗ್ಗೆ ಮಾತೇ ಆಡಿರಲಿಲ್ಲ, ಆದರೆ ದಿವಾನರಿಗೆ ನನ್ನ ಭಯ ಗೊತ್ತಾಗಿರಬೇಕು. ಅವರು ಜ್ಯೋತಿಷಿಯೊಬ್ಬ ಅವರು ಇನ್ನೂ ಇಪ್ಪತ್ತು ವರ್ಷಬದುಕಿರುವುದಾಗಿ ಹೇಳಿದ್ದಾನೆ ಎಂದು ಹೇಳಿ ನನ್ನನ್ನು ಗೇಲಿ ಮಾಡುತ್ತಿದ್ದರು. ಅವರು ಪುಣೆಯಲ್ಲಿ ಅವರ ಆರ್ಮಿ ಆಸ್ಪತ್ರೆಯ ಡಾಕ್ಟರ್ ನೋಡಲು ಪುಣೆಗೆ ಹೋದರು. ೧೯೭೬ ರ ಡಿಸೆಂಬರ್ ೧೬ ರಂದು ಬೆಳಿಗ್ಗೆ, ಅವರು ನಿದ್ದೆಯಿಂದ ಏಳಲೇ ಇಲ್ಲ. ಅವರಿಗೆ ಆಗ ೫೨ ವರ್ಷ ಆಗಿತ್ತು, ಅವರ ಸಾವು ಬಂದಾಗ ನಾನು ಅವರ ಜೊತೆಯಲ್ಲಿರಲಿಲ್ಲ, ತನ್ನ ಇಡೀ ಜೀವನವನ್ನು ನಗುತ್ತಾ ಕಳೆದ ಅವರು ಈಗ ಇಡೀ ಎ.ಪಿ.ಡಿ. ಯನ್ನು ಕಣ್ಣೀರಿನಲ್ಲಿ ಮುಳುಗಿಸಿದ್ದರು. ನಾವು ಅವರಿಗೆ ಒಂದು ಶಾಂತ ಮತ್ತು ಬಾಂಧವ್ಯದಿಂದ ಕೂಡಿದ ಸಂತಾಪ ಸಭೆಯನ್ನು ಏರ್ಪಡಿಸಿದೆವು. ಅವರು ನನಗೆ ಅವರ ವೈದ್ಯರು ಜೀವನದಲ್ಲಿ ಅದರ ಗುಣ ಅದರ ಉದ್ದಕ್ಕಿಂತ ಮುಖ್ಯ ಎಂದು ಹೇಳುತ್ತಾರೆ ಎನ್ನುತ್ತಿದ್ದರು. ಅವರು ಬಹಳ ಗುಣಾತ್ಮಕ ಜೀವನವನ್ನೇ ಜೀವಿಸಿದ್ದರು. ಅನೇಕ ವಿಕಲಾಂಗ ಯುವಕ ಯುವತಿಯರಿಗೆ ಅವರವರ ಹಳ್ಳಿ ಊರುಗಳಲ್ಲಿ ವಿಕಲಾಂಗತೆಯಿಂದ ಪೀಡಿತರಿಗೆ ಕೆಲಸ ಮಾಡಲು ಪ್ರೇರಣೆಯಾಗಿದ್ದರು. ಈ ಯುವ ಜನರ ಮತ್ತು ಎ.ಪಿ.ಡಿ.ಯಲ್ಲಿ ದಿವಾನರ ಕೊಡುಗೆ ಚಿರವಾಗಿ ಸ್ಫೂರ್ತಿ ನೀಡುತ್ತದೆ. ದಿವಾನರ ನಿಧನದ ಮೂರು ತಿಂಗಳ ನಂತರ ಅವರ ಮಿತ್ರ ವೀಡಿಯೋ ತೆಗೆದ ಅವರ ಸಂದರ್ಶನವು ನ್ಯಾಷನಲ್ ಟಿ.ವಿ. ಯಲ್ಲಿ ಪ್ರಸಾರವಾಯಿತು. ಅವರು ಬಹಳ ಉತ್ತೇಜಕ

ಭಾಷಣವನ್ನು ನೀಡಿದ್ದರು. ಅವರ ನಿಧನದ ಅನೇಕ ತಿಂಗಳುಗಳ ವರೆಗೆ ಎ.ಪಿ.ಡಿ.ಗೆ ಅನೇಕ ಜನ ಬಂದು ದಿವಾನರು ಅಲ್ಲಿ ಮಾಡಿರುವ ಅದ್ಭುತ ಕೆಲಸವನ್ನು ನೋಡಬಯಸುತ್ತಿದ್ದರು. ಅವರಿಗೆ ಅವರ ಕೊನೆಯ ದಿನಗಳಿಗೆ ಮುಂಚೆ ಅನೇಕ ಕೆಲಸಗಳನ್ನು ಮುಗಿಸುವ ಅವಸರವಿತ್ತು. ದಿವಾನರು ಹೊರಟು ಹೋದದ್ದು ನನಗೆ ಒಂದು ವಿಷಯ ಮನಸ್ಸಿನಲ್ಲಿ ನಾಟಿತು. ಅದು ನಾವು ನಮ್ಮ ಕೊನೆಗೆ ಯಾವಾಗಲೂ ತಯಾರಾಗಿರಬೇಕು ಮತ್ತು ಮಾಡಬೇಕಾದ ಕೆಲಸಗಳನ್ನು ಸೇರಿಸಿಕೊಂಡು ಪೇಚಿಗೆ ಸಿಕ್ಕಿಕೊಳ್ಳಬಾರದು, ಅದೂ ನಮ್ಮ ಸ್ವಾಸ್ಥ್ಯ ಕ್ಷೀಣಿಸಿ ಮೈಯಲ್ಲಿ ಶಕ್ತಿ ಕುಂದಿದಾಗ, ಎಂದು.

* * *

೧೯೭೭ ರಲ್ಲಿ ನಮ್ಮತಂದೆ ದೈವಾಧೀನರಾದಾಗ ಅವರು ಬಹಳ ಶಾಂತರಾಗಿದ್ದರು. ಒಂದು ವಿಧದಲ್ಲಿ ನಾನು ಅವರಿಗೆ ಬೇಕಾದದ್ದನ್ನ ಮಾಡಿದ್ದೆ, ಮತ್ತು ಅವರಿಗೆ ಸಮಾಧಾನವಾಗಿತ್ತು. ಅವರು ಅವರಿಗೆ ಮತ್ತು ಅವರ ಕುಟುಂಬಕ್ಕೆ ಬೇಕಾದದನ್ನೆಲ್ಲಾ ಮಾಡಿದ್ದರು. ಅವರು ಕೆಲಸದಿಂದ ನಿವೃತ್ತರಾದಾಗ ಅವರು ತಮ್ಮ ಸಮಯವನ್ನು ಖುಷಿಯಾಗಿ ಕಳೆಯಲು ಇಚ್ಛಿಸಿದ್ದರು – ಅಂದರೆ ಅವರ ದೈನಂದಿನ ಕೆಲಸಗಳು ಮಾಡಿ, ದೊಡ್ಡ ವಾಕಿಂಗ್‌ಗೆ ಹೋಗಿ, ಸಂಜೆ ಕ್ಲಬ್ಬಿನಲ್ಲಿ ಸ್ನೇಹಿತರೊಡನೆ ಬೀಯರ್ ಕುಡಿಯುವುದು, ಇತ್ಯಾದಿ. ಅವರು ಇದೆಲ್ಲಾಮಾಡಿದರು. ಒಂದು ದಿನ ಅವರು ವಾಕಿಂಗ್ ಹೊಗುತ್ತಿದ್ದಾಗ, ರಾಮನ್ ರಿಸರ್ಚ್ ಇನ್ಸ್ಟಿಟ್ಯೂಟಿನ ಬಳಿ ಅವರಿಗೆ ಬಹಳ ಬೆವರಿ ಉಸಿರಾಡುವುದು ಕಷ್ಟವಾಯಿತು. ಅವರಿಗೆ ತನಗೆ ಹಾರ್ಟ್ ಅಟ್ಯಾಕ್ ಆಗಿದೆ ಎಂದು ಅನಿಸಿತು. ಅವರು ಅಲ್ಲಿಯೇ ಒಂದು ಕಲ್ಲಿನ ಮೇಲೆ ಕುಳಿತುಕೊಂಡರು. ಇದು ಮುವತ್ತಾರು ವರ್ಷಗಳಹಿಂದೆ. ರಸ್ತೆಯಲ್ಲಿ ಯಾರೋ ಇರಲಿಲ್ಲ. ಅವರು ಯಾವ ಆತಂಕವೂ ಇಲ್ಲದೆ, ಕೊನೆಯ ಕರೆ ಬಂದರೆ ತಯಾರಾಗಿ ಕುಳಿತರು. ಏನೂ ಆಗಲಿಲ್ಲ, ಸ್ವಲ್ಪ ಹೊತ್ತಿನ ನಂತರ ಅವರಿಗೆ ಮೈ ಸರಿಹೋಯಿತು. ಮನೆಗೆ ವಾಪಸ್ಸು ಬಂದುತಮ್ಮ ಹಾಸಿಗೆಯ ಮೇಲೆ ಬಿದ್ದುಕೊಂಡರು.

ನಮ್ಮ ಅಮ್ಮ ಯಾಕೆ ಇವರು ಈ ರೀತಿ ವಿಶ್ರಾಂತಿ ತೆಗೆದುಕೊಳ್ಳುತಿದ್ದಾರೆ ಎಂದು ಯೋಚನೆ. ಅವರ ಪ್ರಶ್ನೆಗಳಿಗೆ ತಂದೆ ಯಾವ ಉತ್ತರವೂ ಕೊಡಲಿಲ್ಲ. ಎರಡು ದಿನಗಳವರೆಗೆ ಮನೆಯಲ್ಲೇ ಮಲಗಿದ್ದರು. ನಂತರ ಡಾಕ್ಟರ್ ಅನ್ನು ಕಂಡರು. ಡಾಕ್ಟರ್ ಅವರನ್ನು ಪರೀಕ್ಷಿಸಿ ಅವರಿಗೆ ತೀವ್ರವಾದ ಹಾರ್ಟ್ ಅಟ್ಯಾಕ್ ಆಗಿದೆ ಎಂದರು. ತಂದೆ ಆಸ್ಪತ್ರೆಗೆ ಸೇರಲು ನಿರಾಕರಿಸಿ ಮನೆಯಲ್ಲೇ ಇರುವುದಾಗಿ ತಿಳಿಸಿದರು. ಅವರಿಗೆ ಬೇಕಾದ ಔಷಧವನ್ನು ಕೊಟ್ಟು ಅವರನ್ನು ಮನೆಗೆ ಕಳುಹಿಸಿದರು. ಈಗ ಹೃದಯವನ್ನು ಪೆಟ್ಟಿಗೆಯಂತೆ ತೆರೆದು

ಏನು ತಪ್ಪಿದೆಯೋ ಅದನ್ನು ಸರಿಮಾಡುತ್ತಾರೆ, ಆದರೆ ಆ ದಿನಗಳಲ್ಲಿ ಇವೆಲ್ಲಾ ಇರಲಿಲ್ಲ. ಅವರಿಗೆ ಜೊತೆಗೆ ಡಯಾಬೆಟೀಸ್ ಬೇರೆ. ಸಾಕಷ್ಟು ಕಾಂಪ್ಲಿಕೇಷನ್ ಇತ್ತು, ಏನೆಂದು ನನಗೆ ಆಗ ತಿಳಿದಿರಲಿಲ್ಲ. ಅವರಿಗೆ ಆಗಾಗ ಬಹಳ ನೋವು ಆಗುತಿತ್ತು, ಆದರೆ ಅವರು ಏನೂ ತೋರಿಸಿಕೊಳ್ಳುತ್ತಿರಲಿಲ್ಲ. ಅವರಿಗೆ ತಮ್ಮ ವಾಕಿಂಗ್ ತಪ್ಪಿ ಹೋದದ್ದೇ ಬಹಳ ವ್ಯಥೆ. ಕೊನೆ ಕೊನೆಗೆ ಅವರಿಗೆ ನಮ್ಮ ಮನೆಯ ಗೇಟಿನ ವರೆಗೂ ಬರಲಾಗುತ್ತಿರಲಿಲ್ಲ. ಎರಡು ವರ್ಷಗಳನಂತರ ಒಂದು ದಿನ ಅವರು ಬೆಳಿಗ್ಗೆ ಕಾಫಿ ಕುಡಿದ ನಂತರ ಜ್ಞಾನ ತಪ್ಪಿ ಬಿದ್ದರು.

ನನಗೆ ಅನ್ನಿಸುತ್ತೆ, ಒಬ್ಬರ ಮರಣದ ಬಗ್ಗೆ ಯೋಚಿಸಿ ತಯಾರಿ ಮಾಡಿಕೊಳ್ಳುವುದು ತಪ್ಪೇನೂ ಅಲ್ಲ ಅಂತ. ನಾವು ಯಾವುದಕ್ಕೂ ತಯಾರಾಗಿರಬೇಕು. ದಿವಾನ್ ಅವರ ಕೊನೆಯ ದಿನಗಳಲ್ಲಿ ಅವರ ಉಯಿಲನ್ನು ಬರೆಸಲು ಆಸೆ ಪಟ್ಟರು. ಅವರು ಐ.ಸಿ.ಯು. ನಲ್ಲಿ ಅವರ ರೇಡಿಯೋ ದಲ್ಲಿ ಕ್ರಿಕೆಟ್ ಕಾಮೆಂಟರಿ ಕೇಳುತ್ತಿದ್ದರು, ಆಗ ಅವರು ನನ್ನನ್ನು ಒಬ್ಬ ಲಾಯರ್‌ಗೆ ಹೇಳಿ ಅವರ ಉಯಿಲನ್ನು ಬರೆಸಲು ಸಹಾಯ ಮಾಡಲು ಕೇಳಿಕೊಂಡರು.

ಕೊನೆಯ ದಿನಗಳಲ್ಲಿ ಯಾರು ಯಾವ ಸ್ಥಿತಿಯಲ್ಲಿರುತ್ತೇವೋ, ಎಷ್ಟು ಅಸಹಾಯಕರಾಗಿರುತ್ತೇವೋ ಗೊತ್ತಿಲ್ಲ. ನಮಗೆ ಒಬ್ಬರು ಆ ಸಮಯದಲ್ಲಿ ನೆರವಾಗಬೇಕೆಂದರೆ ನಾವು ಅವರಿಗೆ ಮುಂಚೆಯೇ ತಿಳಿಸಿ, ಅವರಿಗೆ ಸಾಕಷ್ಟು ಸಮಯವನ್ನು ಕೊಡಬೇಕು. ನಮ್ಮ ತಾಯಿಗೆ ಮೈ ಸರಿಯಿಲ್ಲದ್ದಾಗ, ಅವರು ಪೂರ್ತಿಯಾಗಿ ತಮ್ಮನ್ನು ತಮ್ಮ ಮಕ್ಕಳ ಕೈಗೆ ಒಪ್ಪಿಸಿ ಕೊಂಡರು. ಅವರಿಗೆ ನರಗಳ ದೌರ್ಬಲ್ಯದಿಂದ ಬಹಳ ನೋವಾಗುತ್ತಿತ್ತು. ಅವರಿಗೆ ತಮಗೆ ಕ್ಯಾನ್ಸರ್ ಆಗಿದೆ ಎಂಬ ಭಾವನೆ. ನಾವು ಅವರನ್ನು ಬಹಳ ಒಳ್ಳೆಯ ಡಾಕ್ಟರ್‌ಗಳಿಗೆ ತೋರಿಸಿದೆವು. ಅವರಿಗೆ ಕ್ಯಾನ್ಸರ್ ಪದವೇ ಭಯಂಕರವಾಗಿತ್ತು. ಅವರಿಗೆ 'ಸ್ಪ್ಲೀನ್'ನಲ್ಲಿ ಮ್ಯಾಲಿಗ್ನನ್ಸಿ ಇದೆ ಎಂದು ತಿಳಿದಾಗ ನಾವುಅದನ್ನು ಅವರಿಗೆ ತಿಳಿಸದೆ ಮುಚ್ಚಿಟ್ಟೆವು. ಅವರ ವಯಸ್ಸಿನಲ್ಲಿ ಶಸ್ತ್ರ ಚಿಕಿತ್ಸೆ ಕಷ್ಟ ಎಂದು ವೈದ್ಯರು ಅಭಿಪ್ರಾಯ ಪಟ್ಟರು. ಅದರ ಬದಲು ಒಂದಯ 'ಬೈ ಪ್ಯಾಸ್' ಮಾಡಿದರು. ನಂತರ ಅಮ್ಮ ಇನ್ನೂ ಮೂರು ವರ್ಷ ಜೀವಿಸಿದ್ದರು. ಅವರು ಜಾಣೆ. ಅವರಿಗೆ ತಮ್ಮ ಕಾಯಿಲೆಗೆ ಯಾವ ಔಷಧವೂ ಇಲ್ಲ ಎಂದು ತಿಳಿದಿರಬೇಕು. ಕೊನೆಯ ಕೆಲವು ತಿಂಗಳುಗಳಲ್ಲಿ ಅವರ ಮಾತೇ ಕಮ್ಮಿಯಾಗಿತ್ತು.ಅವರಿಗೆ ಪ್ರಭಾ ಮತ್ತು ಕುಮ್ಮು ಒಬ್ಬೊಬ್ಬರೂ ಸರದಿಯಮೇಲೆ ಬಂದು ಅವರನ್ನು ನೋಡಿಕೊಳ್ಳುವುದು ಬಹಳ ಸಂತೋಷದ ಸಂಗತಿಯಾಗಿತ್ತು, ೧೯೯೧ ರಲ್ಲಿ ಒಂದು ದಿನ ಅವರು ಶಾಂತಿಯಾಗಿ ನಮ್ಮ ಮನೆಯಲ್ಲೇ ತಮ್ಮ ಕೊನೆಯುಸಿರನ್ನು ಎಳೆದರು. ಅವರಿಗೆ ಆಗ ೭೪ ವರ್ಷಗಳಾಗಿತ್ತು.

ಈಗ ಈ ವಿಷಯಗಳ ಬಗ್ಗೆ ನಾನು ಮೇಲಕು ಹಾಕುತ್ತಿರುತ್ತೇನೆ, ಮತ್ತು ನನ್ನನ್ನು ನಾನೇ ನೋಡಿಕೊಳ್ಳುತ್ತೇನೆ. ನನ್ನ ಜೀವನದಲ್ಲಿ ಏ.ಪಿ.ಡಿ.ನನ್ನನ್ನು ೨೪ ಘಂಟೆಯೂ ಆವರಿಸಿತ್ತು, ಮತ್ತು ನಾನು ಇತರ ವಿಷಯಗಳನ್ನು ನನ್ನಿಂದ ದೂರ ಇಡಲು ಪ್ರಯತ್ನಿಸುತ್ತಿದ್ದೆ. ಅದೂ ಆಯಿತು ಮತ್ತು ಏ.ಪಿ.ಡಿ.ಯಲ್ಲಿ ನಡೆದ ಕೆಲವವು ಅರ್ಥವಿಲ್ಲದ ಕಲಾಪಗಳು ನನಗೆ ಒಂದು ಹೊಸ ದಿಕ್ಕನ್ನು ತೋರಿಸಿತು.

* * *

# ಪ್ರೇಮದಲ್ಲಿ

ನಾನು ಹಿಮಾಂಶು ಜ್ಯೋತಿ ಕಲಾ ಪೀಠದಲ್ಲಿ ಟ್ರೈನಿಂಗ್ ಗೆ ಹೋಗುತ್ತಿದ್ದಾಗ ನನಗೆ ಬಹಳ ಜನ ಸ್ನೇಹಿತರಾದರು. ನಮ್ಮ ಟ್ರೈನಿಂಗ್ ಮುಗಿದ ಮೇಲೆ ನನ್ನ ಜೊತೆಯಲ್ಲಿ ತರಬೇತಿ ಪಡೆದ ಇಬ್ಬರು – ಶೋಭ ಮತ್ತು ನೀರಜ – ನಮ್ಮ ಶ್ರದ್ಧಾಂಜಲಿ ಸಮ್ಮಿಲಿತ ಶಾಲೆಯಲ್ಲಿ ಟೀಚರ್ ಆಗಿ ಸೇರಿಕೊಂಡರು. ಶೋಭ ಒಬ್ಬ ಅಧ್ಭುತ ಮತ್ತು ಉತ್ತಮ ಟೀಚರ್ ಆದರು. ನಮ್ಮಲ್ಲಿ ಸಮಾಜದ ಎಲ್ಲಾಸ್ತರಗಳಿಗೆ ಸೇರಿದ, ಕೊಳಕಾದ, ಚಿಕ್ಕ ಪುಟ್ಟ ಕಾಯಿಲೆಗಳಿರುವ ಮಕ್ಕಳು ಶಾಲೆಗೆ ಬರುತ್ತಿದ್ದವು, ನಾವು ಹಿಮಾಂಶುವಿನಲ್ಲಿ ಸ್ವಾಸ್ಥ್ಯ ಮತ್ತು ಆರೋಗ್ಯದ ಬಗ್ಗೆ ಕಲಿತದ್ದೆಲ್ಲಾ ಇಲ್ಲಿ ಬಹಳ ಉಪಯೋಗವಾಯಿತು. ನಾವು ಆ ಮಕ್ಕಳ ಮನೆಯವರಿಗೆ ಅವೆಲ್ಲವನ್ನೂ ಮತ್ತು ಪ್ರಥಮ ಚಿಕಿತ್ಸೆಯನ್ನೂ ಹೇಳಿಕೊಟ್ಟೆವು. ಆದರೆ ಅವರ ಮನೆಯವರು ಏನೂ ಮಾಡಲು ಆಗದಿದ್ದಾಗ, ಅದು ನಮ್ಮ ಜವಾಬ್ದಾರಿಯಾಯಿತು. ಈ ಮಕ್ಕಳಿಗೆ ನಮ್ಮ ಶಾಲೆಯು ಎರಡನೆಯ ಮನೆ ಎಂದು ನಾವು ನಂಬಿದ್ದೆವು. ನೀರಜ ಈ ಕೆಲಸಗಳಿಗೆ ಪೂರ್ಣವಾಗಿ ತನ್ನನ್ನು ಒಪ್ಪಿಸಿಕೊಂಡಿದ್ದಳು. ಅವಳ ಸೂಕ್ಷ್ಮವಾದ ಮನಸ್ಸಿಗೆ ಆ ಮಕ್ಕಳ ಪ್ರತಿಯೊಂದು ಅಗತ್ಯವೂ ತಿಳಿಯುತ್ತಿತ್ತು ಮತ್ತು ಅವಳ ಬೇಡಿಕೆಗಳ ಪಟ್ಟಿಯು ಬೆಳೆಯುತ್ತಲೇ ಇತ್ತು.

ಪ್ರಾರಂಭದಲ್ಲಿ, ನಮ್ಮ ಶಾಲೆಯು ನಮ್ಮ ತೋಟದಲ್ಲಿ ಒಂದು ಪುಟ್ಟ ರೂಮಿನಷ್ಟೇ ಇತ್ತು. ನಮ್ಮ ಕಂಟ್ರಾಕ್ಟರ್ ಪೊನ್ನಪ್ಪ ನನ್ನ ಯೋಚನೆಗಳನ್ನು ಹೇಗೋ ಮಾಯದಂತೆ ಉಪಯೋಗಿಸಲು ಸೂಕ್ತವಾಗಿ, ಹೆಚ್ಚು ಖರ್ಚಿಲ್ಲದೆ ಮಾಡಿಕೊಡುತ್ತಿದ್ದರು. ಮೊದಲನೆಯ ತರಗತಿಯು ಬೊಂಬಿನಿಂದ ಮಾಡಿದ ಗೋಡೆಗಳ ಮೇಲೆ ಒಂದು ಸೂರು, ಅಷ್ಟೆ. ಮಕ್ಕಳನ್ನು  ಮಳೆ ಚಳಿಯಿಂದ ಕಾಪಾಡಲು ನಾನು ಗೋಡೆಗಳಿಗೆ ಟಾರಪಾಲಿನ್ ಹಾಕ ಬೇಕಾಯಿತು. ಮಕ್ಕಳು ದಿಂಬಿನ ಮೇಲೆ ಕುಳಿತು ಪುಟ್ಟ ಮೇಜುಗಳ ಮೇಲೆ ಬರೆಯುತ್ತಿದ್ದರು. ಈಗಿರುವ ಇಟ್ಟಿಗೆ, ಗಾರೆಯಿಂದ ಕಟ್ಟಿದ, ೧೬೦ ಮಕ್ಕಳು ಕೂರುವಂತ ಕಟ್ಟಡಕ್ಕೂ ಆಗಿನ ಶಾಲೆಗೂ ಸಂಬಂಧವೇ ಇಲ್ಲವೆನ್ನಬಹುದು. ಅರಬ್ಬನ ಟೆಂಟಿಗೆ ಒಂಟೆ ನುಗ್ಗಿದಂತೆ ಶಾಲೆಯು ಬೆಳೆದು ಈಗ ಏ.ಪಿ.ಡಿ.ಯ ಮೈದಾನದ ಒಂದು ಭಾಗವನ್ನು ಪೂರಾ ಆಕ್ರಮಿಸಿಕೊಂಡಿದೆ.

ಈ ಸಮಯದಲ್ಲಿ ನಾನು ಮನೆಯಲ್ಲಿ ತಿಂಗಳಿಗೆ ಒಮ್ಮೆ, ಅನೇಕ ಸಾಮಾಜಿಕ ಕೂಟಗಳನ್ನು ಏರ್ಪಡಿಸುತ್ತಿದ್ದೆ. ೧೯೭೩ ರಲ್ಲಿ, ಈ ರೀತಿಯ ಒಂದು ಕೂಟಕ್ಕೆ ನನ್ನ ಕಸಿನ್ನಿನ ಭಾವ

ಬಾಬು, ತನ್ನ ಮಿತ್ರ ವೆಂಕಟೇಶನನ್ನು ಕರೆತಂದರು. ಬಾಬು ಮತ್ತು ವೆಂಕಿ ಇಬ್ಬರಿಗೂ ದೃಷ್ಟಿದೋಷವಿತ್ತು. ಅವರಿಬ್ಬರೂ ವೈಟ್ ಫೀಲ್ಡಿನಲ್ಲಿ ಓದುತ್ತಿದ್ದರು. ವೆಂಕಿ ಸ್ವಲ್ಪ ವಿಚಿತ್ರವಾದ ವ್ಯಕ್ತಿ. ಅವನ ಗಂಟಲು ಜೋರಾಗಿತ್ತು. ಅವನು ಅಂದಿನ ಸಂಜೆಯ ನೇತೃತ್ವವನ್ನು ತನ್ನ ಕೈಗೆ ತೆಗೆದು ಕೊಂಡನು. ನನಗೆ ಅದೇನೂ ಅಷ್ಟು ಹಿಡಿಸಲಿಲ್ಲ. ನಾನು ಅವನು ತನ್ನ ಇರುವುಕೆಯನ್ನು ತೋರಿಸಿಕೊಳ್ಳಲು ಇದೆಲ್ಲಾ ಮಾಡುತಿದ್ದಾನೆ ಎಂದುಕೊಂಡೆ, ಆದರೆ ಏನೂ ಹೇಳಲಿಲ್ಲ. ಅವನು ಮದರಾಸಿನ ಕ್ರಿಶ್ಚಿಯನ್ ಕಾಲೇಜಿನಲ್ಲಿ ಮ್ಯಾಸ್ಟರ್ಸ್ ಇನ್ ಲಿಟೆರೇಚರ್ ಓದಿದ್ದ, ಆದರೆ ಅವನ ವಿಕಲಾಂಗತೆಯ ಕಾರಣ ಅವನಿಗೆ ಯಾವುದೂ ಕೆಲಸ ಸಿಕ್ಕಿರಲಿಲ್ಲ. ಅವನಿಗೆ ಮುಂಬೈಯಲ್ಲಿ ಒಂದು ಇಂಗ್ಲೀಷ್ ಟೀಚರ್ ಕೆಲಸ ಸಿಕ್ಕಿತ್ತಂತೆ. ಆದರೆ ಅವನಿಗೆ ಅದರಲ್ಲಿ ಇಷ್ಟವಿರಲಿಲ್ಲ. ಯಾಕೋ ಗೊತ್ತಿಲ್ಲ, ನಾನು ಅವನಿಗೆ ನನ್ನ ಅಕ್ಕ ಪ್ರಭನ ಫೋನ್ ನಂಬರ್ ಕೊಟ್ಟು ಏನಾದರೂ ಸಹಾಯ ಬೇಕಿದ್ದಲ್ಲಿ ಅವಳನ್ನು ಸಂಪರ್ಕಿಸಲು ಹೇಳಿದೆ.

ಒಂದು ವಾರದ ನಂತರ ಅವನು ಪ್ರಭಳನ್ನು ಸಂಪರ್ಕಿಸಿದ ಮತ್ತು ಅವಳ ಮನೆಗೆ ಹೋಗಿ ಟ್ಯಾಕ್ಸಿಯಿಂದ ಇಳಿದ. ಪ್ರಭಳಿಗೆ ಅವನಿಗೆ ಕಣ್ಣು ಸರಿಯಾಗಿ ಕಾಣುವುದಿಲ್ಲ ಎಂದು ತಿಳಿದಾಗ, ತಾನು ಹೋಗಿ ಅವನನ್ನು ಅವನನ್ನು ಮನೆಗೆ ಕರೆತರಲಿಲ್ಲವಲ್ಲ ಎಂದು ಆಘಾತವಾಯಿತು. ವೆಂಕಿ ಐದು ಭಾಷೆಗಳಲ್ಲಿ ಮಾತನಾಡುತ್ತಿದ್ದ, ಆದ್ದರಿಂದ ಅವನು ಪ್ರಭಳೊಂದಿಗೆ ಸರಾಗವಾಗಿ ಮಾತನಾಡಲಾಯಿತು. ಅವಳು ಅವರ ಸೊಸೈಟಿಯಲ್ಲೇ ಒಬ್ಬ ಕನ್ನಡಿಗರ ಮನೆಯಲ್ಲಿ ಅವನಿಗೆ ಒಂದು ಪೇಯಿಂಗ್ ಗೆಸ್ಟ್ ಜಾಗ ದೊರಕಿಸಿ ಕೊಟ್ಟಳು. ಇಡೀ ಕಾಲೊನಿಯೇ ಅವನು ಕುರುಡಾದರೂ ಸ್ವತಂತ್ರನಾಗಿ ಬದುಕುವುದನ್ನು ಕಂಡು ಆಶ್ಚರ್ಯ ಪಡಲಾರಂಭಿಸಿತು. ಅವನು ಬಸ್ಸಿನಲ್ಲಿ ಪ್ರಯಾಣ ಮಾಡುತ್ತಿದ್ದ, ಎಲ್ಲರ ಜೊತೆ ಬೆರೆಯುತ್ತಿದ್ದ, ಮತ್ತು ಪ್ರಭಳಿಗೆ ಚಿಕ್ಕ ಪುಟ್ಟ ಕೆಲಸಗಳನ್ನು ಮಾಡಿಕೊಡುತ್ತಿದ್ದ, ಅವಳು ಅವನಿಗೆ ಓದಿ ಹೇಳುತ್ತಿದ್ದಳು. ಅವನು ನಮ್ಮ ಮನೆಯವರ ಜೊತೆ ಸೇರುತ್ತಿದ್ದ ಮತ್ತು ನನ್ನ ಕಸಿನ್ ಗಳೊಡನೆ ಯಾವಾಗಲಾದರು ಒಂದೆರಡು 'ಡ್ರಿಂಕ್' ತೆಗೆದುಕೊಳ್ಳುತ್ತಿದ್ದ. ಅವನಿಗೆ ನಮ್ಮ ಕುಟುಂಬದಲ್ಲಿ ಆದರದ ಸ್ವಾಗತ ಸಿಕ್ಕಿತು.

ನಾನು ಮತ್ತೆ ವೆಂಕಿಯನ್ನು ಸುಮಾರು ಒಂದು ವರ್ಷದನಂತರ ಸಂಧಿಸಿದೆ. ಆಗ ನಾವು ಬಹಳ ಸಮಯ ಒಟ್ಟಿಗೆ ಕಳೆದೆವು. ಆಗ, ಒಂದು ಸಲ ಅವನು ನನ್ನನ್ನು ಅವನು ಮೊದಲು ನೋಡಿದ ದಿನದಿಂದಲೇ ಪ್ರೀತಿಸುವುದಾಗಿ ಹೇಳಿದನು. ನನ್ನ ಧ್ವನಿಯನ್ನು ಪ್ರೀತಿಸುತ್ತಿರುವುದಾಗಿ ಹೇಳಿದನು. ನನ್ನನ್ನು ಮದುವೆಯಾಗುವೆಯಾ ಎಂದು ಕೇಳಿದನು.

ನಾನು ಅವನಿಗೆ ಇದು ಶುದ್ಧ ಹುಚ್ಚುತನ, ನಾನು ಮದುವೆಯ ಬಗ್ಗೆ ಯೋಚಿಸಿಯೇ ಇಲ್ಲ. ನಾನು ನನ್ನ ಪಿ.ಹೆಚ್.ಡಿ.ಯೊಡನೆ ಮದುವೆಯಾಗಿದ್ದೇನೆ, ನನಗೆ ಮದುವೆ ಎಂದರೆ ಇಬ್ಬರು ಪ್ರೀತಿಯಿಂದ ಒಂದಾಗುವುದು ಎಂದೆ. ಹೀಗೆ ಹಠಾತ್ತಾಗಿ ವೆಂಕಿಯಿಂದ ಮದುವೆಯಾಗುವೆಯಾ ಎಂಬ 'ಪ್ರೊಪೋಸಲ್' ಬಂದದ್ದು ನಾನು ಸಂಭಾಳಿಸಲು ಸಾಧ್ಯವಾದದ್ದಕ್ಕಿಂತ ಹೆಚ್ಚಾಯಿತು.

ಒಬ್ಬ ವಿಕಲಾಂಗ ವ್ಯಕ್ತಿಗೆ ಮದುವೆಯಾಗುವ ಸಾಧ್ಯತೆ ಅನೇಕ ಹೆದರಿಕೆಗಳನ್ನು ಉಂಟುಮಾಡುತ್ತದೆ. ಅದು ಜೀವನದ ಅನೇಕ ಹೊಸ ಆಯಾಮಗಳನ್ನು ತೆರೆದು ಇಡುತ್ತದೆ. ನಾನು ಪ್ರೀತಿ, ಶಾರೀರಿಕ ಸಂಬಂಧ, ಮಕ್ಕಳು ಇತ್ಯಾದಿಯ ಬಗ್ಗೆ ಯೋಚಿಸಿಯೇ ಇರಲಿಲ್ಲ. ನನಗೆ ಈ ವಿಷಯಗಳ ಬಗ್ಗೆ ಡಾಕ್ಟರನ್ನು ವಿಚಾರಿಸಿ ತಿಳಿದುಕೊಳ್ಳಲೂ ಮನಸ್ಸಿರಲಿಲ್ಲ. ನಮ್ಮ ಅಮ್ಮ, ನೇರವಾಗಿ ನನಗೆ ಇಲ್ಲದಿದ್ದರೂ, ಆಗಾಗ ಹೇಳುತ್ತಿದ್ದಳು ಮದುವೆ ಮತ್ತು ಸಂಬಂಧಗಳನ್ನು ಸಂಭಾಳಿಸುವುದು ಒಬ್ಬರ ಜೀವನದಲ್ಲಿ ಎದುರಿಸಬೇಕಾದ ಬಹಳ ಕಷ್ಟಕರ ಪ್ರಶ್ನೆ ಎಂದು.

ವೆಂಕಿ ಬೆಂಗಳೂರಿಗೆ ಬಂದಾಗ ಅವನು ದಿವಾನರೊಡನೆ ಈ ವಿಷಯವನ್ನು ಪ್ರಸ್ತಾಪಿಸಿದನು. ಅವರಿಗೆ ಇದು ಬಹಳ ಮೋಜಿನ ವಿಷಯವಾಗಿ ತೋರಿತು. ನನಗೆ ಬಹಳ ಕೋಪ ಬಂತು. ಆದರೆ ವೆಂಕಿ ಎಂದಿನಂತೆ ಸೀರಿಯಸ್ ಆಗಿದ್ದ, ಅವನನ್ನು ಯಾವುದೂ ತಡೆಹಿಡಿಯುತ್ತಿರಲಿಲ್ಲ. ಅವನು ನನಗೆ 'ಬ್ರೈಲ್' ಅಕ್ಷರಗಳನ್ನು ಎರಡುಘಂಟೆಗಳ ಕಾಲ ಕಷ್ಟಪಟ್ಟು ಕಲಿಸಿಕೊಟ್ಟ, ನನ್ನ ಹತ್ತಿರ ಇನ್ನೂ ಅವನು ಮಾಡಿಕೊಟ್ಟ 'ಬ್ರೈಲ್' ಅಕ್ಷರಗಳ ಚಾರ್ಟ್ ಇದೆ. ಒಂದು ವಾರದ ನಂತರ ನನಗೆ ಒಂದು ದೊಡ್ಡ ಕಾಗದ ಬಂತು, ಅದನ್ನು ಓದಲು ನನಗೆ ಹತ್ತು ದಿನಗಳು ಹಿಡಿಯಿತು. ಅವನಿಂದ ಮುಂದಿನ ಕಾಗದ ಬರುವ ವೇಳೆಗೆ ನನ್ನ ಬ್ರೈಲ್ ಓದುವ ಶಕ್ತಿ ಹೆಚ್ಚಿತ್ತು, ಆದರೆ ನಾನು ಅದನ್ನು ಸ್ಪರ್ಶದಿಂದ ಓದದೆ, ದೃಷ್ಟಿಯಿಂದ ಓದುತ್ತಿದ್ದೆ, ಕ್ರಮೇಣ ಪತ್ರಗಳು ಹೆಚ್ಚಿದವು. ಅವಲ್ಲಿ ನಮ್ಮ ಪ್ರೇಮದ ಬಗ್ಗೆ ಅವನ ಹೇಳಿಕೆಗಳೂ ಹೆಚ್ಚಿದವು. ನನಗೆ ಅವನನ್ನು ಅರ್ಥಮಾಡಿಕೊಳ್ಳುವುದೇ ಕಷ್ಟವಾಯಿತು. ಅವನು ನಾವು ಒಳ್ಳೆಯ ಮಿತ್ರರಾಗಿರಬೇಕು, ಯಾವ ವಿಷಯವನ್ನಾದರೂ ತೆರೆದ ಮನಸ್ಸಿನಿಂದ ಚರ್ಚಿಸುವಂತಿರಬೇಕು ಎಂದು ಆಗ್ರಹಿಸುತ್ತಿದ್ದನು. ಜೊತೆಗೆ ಮದುವೆಯಾಗಬೇಕೆಂಬ ವಿಷಯದಲ್ಲಿ ಹಠಹಿಡಿಯುತ್ತಿದ್ದನು. ನಾನು ಬೇಡವೆನ್ನುತ್ತಿದ್ದೆ, ಆಗ ಬೇಸರ ಗೊಂಡು ಕೆಲಕಾಲ ಮೌನವಾಗಿರುತ್ತಿದ್ದನು. ಮತ್ತೆ ಯಥಾ ಪ್ರಕಾರ ಶುರು. ಈ ರೀತಿ ಏಳು ವರ್ಷಗಳು ಕಳೆದವು.

ನನಗೆ ಸಾಕಾಗಿಹೋಯಿತು ಎಂದು ತೋರುತ್ತದೆ. ಜೀವನದ ಈ ಹುಚ್ಚಾಟದಲ್ಲಿ ನಾವು ನಿಧಾನವಾಗಿ ಅದರ ಮತ್ತೊಂದು ಮುಖವನ್ನೂ ಮತ್ತು ಮತ್ತೊಂದು ಚಿತ್ರವನ್ನೂ ನೋಡುತ್ತೇವೆ. ನನಗೆ ಮದುವೆಯು ಹೇಗೆ ಮುಗಿಯುತ್ತದೆಯೋ ಗೊತ್ತಿರಲಿಲ್ಲ, ಆದರೆ ನನಗೆ ವೆಂಕಿಗೆ ಮದುವೆಯ ಬಗ್ಗೆ ಇರುವ ಧೃಡ ಸಂಕಲ್ಪ ತಿಳಿಯಿತು. ನಾನು ಮುನ್ನುಗ್ಗಲು ಸಿದ್ಧಳಾದೆ. ನನಗೆ ಸ್ವಾಮಿ ಚಿನ್ಮಯಾನಂದ ಹೇಳುತ್ತಿದ್ದ "ಫಾಲಿಂಗ್ ಇನ್ ಲವ್" ಎಂಬ ಮಾತು ನೆನಪಿಗೆ ಬಂತು. ಅವರು ಯಾವಾಗಲೂ ಜನರು ಪ್ರೇಮದಲ್ಲಿ ಬಂಧನಗಳನ್ನು ಬೆಳಸಿಕೊಂಡು ನಂತರ ಬಹಳ ನೋವು ಮತ್ತು ಕಷ್ಟಗಳನ್ನು ಅನುಭವಿಸುತ್ತಾರೆ ಎನ್ನುತ್ತಿದ್ದರು. ಸಮಯದೊಂದಿಗೆ ಸಂದರ್ಭಗಳು ಮತ್ತು ಜನರೂ ಬದಲಾಗುತ್ತಾರೆ. ಹಾಗಿದ್ದಮೇಲೆ ಪ್ರೇಮವು ಹೇಗೆ ಸ್ಥಿರವಾಗಿರುತ್ತದೆ? ನಾವು ಒಬ್ಬರಿಗೆ ಬಹಳ ಹತ್ತಿರವಾದಾಗ ಅವರ ಪ್ರತಿಯೊಂದು ಚಲನವಲನವನ್ನೂ ಕೂಲಂಕುಷವಾಗಿ ನೋಡುತ್ತೇವೆ. ಅವರನ್ನು ಬದಲಾಯಿಸಲು ಯತ್ನಿಸುತ್ತೇವೆ. ಆಗ ಪ್ರೇಮವು ಮಾಯವಾಗಿ ಜೀವನದಲ್ಲಿ ಬಿರುಕು ಬಿಟ್ಟುಕೊಳ್ಳುತ್ತದೆ.

ಆದರೆ ನನಗೆ ಆ ಸಮಯದಲ್ಲಿ ಏನೋ ಒಂದು ವಿಶೇಷವಾದ ಅನುಭವ. ನಾನು ನನ್ನ ಹೃದಯ ಹೋದ ದಾರಿಯಲ್ಲಿ ಹೋದೆ. ಎಲ್ಲರಿಗೂ ಆರೀತಿ ತೋಚಲಿಲ್ಲ. ನಾನು ನನ್ನ ಭಾವನಿಗೆ ಈ ಬಗ್ಗೆ ಹೇಳಿದಾಗ ಅವರು ನನಗೆ ಅದೆಲ್ಲಾ ಮರೆತು ಬಿಡು ಅಂದರು. ಅವರಿಗೆ ಇದು ಒಳ್ಳೆಯ ಯೋಚನೆ ಅನ್ನಿಸಲಿಲ್ಲ. ಆದರೆ ನಾನು ಯಾರ ಮಾತನ್ನೂ ಕೇಳುವ ಸ್ಥಿತಿಯಲ್ಲಿ ಇರಲಿಲ್ಲ. ನಮ್ಮ ತಂದೆ ದೈವಾಧೀನರಾಗಿ ಕೆಲವು ವರ್ಷಗಳಾಗಿತ್ತು, ಆದ್ದರಿಂದ ಅಮ್ಮನನ್ನು ಒಪ್ಪಿಸುವ ದೊಡ್ಡ ಕೆಲಸವನ್ನು ನಾನೇ ಮಾಡಬೇಕಾಗಿತ್ತು. ನಾನು ಶ್ರೀಮತಿ ಈಶ್ವರ್ಯಯ್ಯನವರಲ್ಲಿ ವಿಷಯವನ್ನು ಹೇಳಿಕೊಂಡೆ. ಅವರಿಗೆ ಬಹಳ ಸಂತೋಷವಾಯಿತು. ಅವರು ಇದೊಂದು ಒಳ್ಳೆಯ ಮದುವೆ ಎಂದು ಭಾವಿಸಿದರು. ಅಮ್ಮನ ಆಶೀರ್ವಾದ ನನಗೆ ಮುಖ್ಯವಾಗಿತ್ತು, ನನ್ನ ಇಡೀ ಜೀವನ ಅವಳೇ ನನ್ನನ್ನು ಎಲ್ಲಾ ವಿಧದಲ್ಲಿಯೂ – ಶಾರೀರಿಕವಾಗಿ, ಮಾನಸಿಕವಾಗಿ ಮತ್ತು ಆರ್ಥಿಕವಾಗಿ – ನೋಡಿಕೊಂಡಿದ್ದಳು. ಅವಳನ್ನು ನಾನು ಕಡೆಗಣಿಸಿ ನನ್ನದೇ ದಾರಿ ಹುಡುಕಿಕೊಳ್ಳುವುದು ಸರಿಯಿರಲಿಲ್ಲ. ವೆಂಕಿ ತಾಳ್ಮೆಯಿಂದ ಕಾಯಬೇಕಿತ್ತು.

ನಾನು ಶ್ರೀಮತಿ ಈಶ್ವರೈಯ್ಯನವರ ಸಲಹೆಯಂತೆ ನನ್ನ ಭಾವನೆಗಳನ್ನು ಅಮ್ಮನಿಗೆ ಒಂದು ಪತ್ರದಲ್ಲಿ ಬರೆದು ಅದನ್ನು ಅವಳ ರೂಮಿನಲ್ಲಿ ಇಟ್ಟೆ. ಅಮ್ಮನಿಗೆ ಗರಬಡಿದಂತಾಯಿತು. ಅವಳು ಏಕಾಂಗಿಯಾಗಿ ರೂಮಿನಲ್ಲಿ ಕುಳಿತು ಘಂಟೆಗಟ್ಟಲೆ ಅಳುತ್ತಿದ್ದಳು ಮತ್ತು ವಾಂತಿ

ಮಾಡಿಕೊಳ್ಳುತಿದ್ದಳು. ನಾನು ಮನೆಗೆ ಬಂದಾಗ ಅವಳನ್ನು ಶಾಂತಗೊಳಿಸಲು ನನಗೆ ಮಾತೇ ಹೊರಡುತ್ತಿರಲಿಲ್ಲ. ಅವಳು ನನ್ನನ್ನು ಅವಳು ಪಟ್ಟಿರುವ ಕಷ್ಟಗಳು ನನಗೆ ಗೊತ್ತೇ? ಎಂದು ಕೇಳಿದಳು. ನಾನು ಈ ರೀತಿ ಮದುವೆಯ ವಿಷಯ, ಅದೂ ಒಬ್ಬ ದೃಷ್ಟಿ ದೋಷವಿರುವವನೊಡನೆ ಯೋಚಿಸಲೂ ಕೂಡದು. ಅವಳ ಮನಸ್ಸಿನಲ್ಲಿ ದೃಷ್ಟಿ ದೋಷ ವಿಕಲತೆಗಳಲಿ ಬಹಳ ಕಷ್ಟವಾದದ್ದು. ನನಗಾಗಲೇ ಸಾಕಷ್ಟು ಬವಣೆಗಳಿವೆ, ಅದರಜೊತೆಗೆ ಮತ್ತೊಬ್ಬ ದೃಷ್ಟಿ ದೋಷವಿರುವವನನ್ನು ನಾನು ಹೇಗೆ ಸಂಭಾಳಿಸುತ್ತೇನೆ. ಈ ರೀತಿಯ ಮದುವೆಯಿಂದ ನನಗೆ ಯಾವ ಸುಖವೂ ಸಿಗುವುದಿಲ್ಲ. ಈ ಪ್ರೇಮ, ಪ್ರೀತಿ ಇದೆಲ್ಲಾ ಶುದ್ಧ ಹುಚ್ಚುತನ, ಎಂದೆಲ್ಲಾ ಕೂಗಾಡಿದಳು. ಅವಳಿಗೆ ನಾನು ಸಂತೋಷವಾಗಿರಬೇಕು ಎಂಬುದೇ ಯೋಚನೆ. ಗಂಡಸರು ಮದುವೆಯಾದ ಮೇಲೆ ಬದಲಾಗುತ್ತಾರೆ, ನೀನು ಅವರ ಬೇಡಿಕೆಗಳನ್ನು ಹೇಗೆ ಪೂರೈಸುತ್ತೀಯ ಎನ್ನುತಿದ್ದಳು. ಅದೇನೂ ನನಗೆ ಅರ್ಥವಾಗಲಿಲ್ಲ. ಆದರೆ ಅಮ್ಮ ಈ ಮದುವೆಗೆ ಒಪ್ಪಲಿಲ್ಲ. ನನ್ನ ಅಕ್ಕ ತಂಗಿಯರಿಗೂ ಆಘಾತವಾಯಿತು.ಈ ವಿಷಯವನ್ನು ನಮ್ಮ ಮನೆಯಲ್ಲಿ ಅಷ್ಟಕ್ಕೇ ನಿಲ್ಲಿಸಿದೆವು.

ನಾನು ವೆಂಕಿಗೆ ವಿಷಯವನ್ನು ತಿಳಿಸಿದೆ. ಅಮ್ಮ ಮದುವೆಗೆ ಒಪ್ಪದಿದ್ದರೆ, ನಾವು ಮದುವೆಯ ವಿಷಯವನ್ನು ಮರೆತು ಒಳ್ಳೆಯ ಸ್ನೇಹಿತರಾಗಿ ಉಳಿಯಬೇಕು ಎಂದು. ಅವನು ಕಾದು ನೋಡಲು ತಯಾರಿದ್ದ. ನಾನು ಅವನಿಗೆ ಬೇರೆ ಯಾರನ್ನಾದರೂ ಹುಡುಕಿಕೊಳ್ಳಲು ಹೇಳುತ್ತಿದ್ದೆ. ಈ ಮಾತುಗಳು ನಾಯಿಯು ಅದರ ಬಾಲವನ್ನು ಅಟ್ಟಿಸಿಕೊಂಡು ಹೊದಂತೆ, ಮತ್ತೆ ಮತ್ತೆ ಬರುತ್ತಿದ್ದವು. ಎಲ್ಲಾ ಗೊಂದಲಮಯವಾಗಿತ್ತು. ಈ ಮಧ್ಯೆ ವೆಂಕಿಯು ಆಗಾಗ ಮುಂಬೈಗೆ ಹೋಗಿಬರುತ್ತಿದ್ದ ಮತ್ತು ನನಗೆ ಮದುವೆಯ ಬಗ್ಗೆ ಇತ್ಯರ್ಥಕ್ಕೆ ಬರಲು ಒಂದು ಗಡುವನ್ನು ಕೊಡುತ್ತಿದ್ದ. ಅವನಿಗೆ ಅವನ ನಿರ್ಧಾರದ ಬಗ್ಗೆ ಬಹಳ ನಂಬಿಕೆಯಿತ್ತು. ನಮ್ಮ ಅಮ್ಮ ಅವಳ ಇಷ್ಟಕ್ಕೆ ವಿರುದ್ಧವಾಗಿ ನಾನು ಮದುವೆಯಾದರೆ ಪ್ರಾಣ ಬಿಡುವುದಾಗಿ ಹೆದರಿಸುತ್ತಿದ್ದಳು. ಈ ಇಬ್ಬರು ನನ್ನ ಬಗ್ಗೆ ಕಾಳಜಿ ವಹಿಸಿದ್ದವರುಮತ್ತು ನಮ್ಮ ಮನೆ ಇತ್ತು. ಅಮ್ಮನಿಗೆ ನಾನು ಬೇರೆ ಮನೆಯಲ್ಲಿ ನನ್ನ ವಿವಿಧ ತೊಂದರೆಗಳ ಜೊತೆ ಹೇಗೆ ಇರಲು ಸಾಧ್ಯ ಎಂಬ ಯೋಚನೆ ಬೇರೆ. ನಮ್ಮ ತಂದೆ ನನಗೋಸ್ಕರ ಆ ಮನೆಯಲ್ಲಿ ಎಲ್ಲಾ ಸೌಕರ್ಯಗಳನ್ನೂ ಒದಗಿಸಿ ಕೊಟ್ಟಿದ್ದರು. ನಾನು ಅದನ್ನು ಬಿಟ್ಟು ಬೇರೆ ಮನೆಯಲ್ಲಿ ಹೇಗೆ ಸುಖವಾಗಿರಬಹುದು? ಅವಳಿಗೆ ಅವಳದ್ದೇ ಯೋಚನೆ, ನನಗೆ ನನ್ನದೇ ಆದ ಯೋಚನೆಗಳು.

ದಿಕ್ಕು ಕಾಣದೆ ನಾನು ಆ ಊರಿನಲ್ಲಿದ್ದ ಸುಬ್ಬಣ್ಣ ಎಂಬ ಜೋತಿಷಿಯನ್ನು ಕಂಡೆ. ಅವನ ಭವಿಷ್ಯ ವಾಣಿಯು ಹಿಂದೆ ಅನೇಕ ಸಲ ನಿಜವಾಗಿತ್ತು. ಅವನು ಅಮ್ಮ ಇನ್ನೂ

ಇಪ್ಪತ್ತು ವರ್ಷಗಳು ಬದುಕಿರುತ್ತಾರೆ ಎಂದಾಗ ನಾನು ಅದನ್ನು ನಂಬಿದೆ. ನನಗೆ ನಂಬ ಬೇಕು ಎನಿಸಿತು. ಕೊನೆಗೆ ಪ್ರಭಾ ನನ್ನನು ಮುಂದುವರೆಯಲು ಪ್ರೋತ್ಸಾಹಿಸಿದಳು. ನನಗೆ ಮನಸ್ಸಿನಲ್ಲಿ ಇನ್ನೂ ದ್ವಂದ್ವವಿತ್ತು. ಅಮ್ಮ ಬಹಳ ಧೃಡವಾದ ಮನಸ್ಸಿನ ಹೆಂಗಸು. ಅವಳು ಏನಾದರೂ ಹೆದರಿಕೆಯನ್ನು ಹಾಕಿದರೆ ಅದನ್ನು ಮಾಡಿಯೇ ತೀರುವಳು. ನನಗೆ ಅದನ್ನು ಸಹಿಸಿಕ್ಕೊಂಡು ಜೀವಿಸಲಾಗುತ್ತದೆಯೇ? ಮದುವೆಯು ಅಷ್ಟು ಮುಖ್ಯವೇ? ನನಗೆ ನಮ್ಮ ತಂದೆಯ ಬಗ್ಗೆ ಯೋಚನೆ ಹರಿಯಿತು. ಅವರು ಎಂದೂ ನನ್ನೊಡನೆ ನನ್ನ ಮದುವೆಯ ಬಗ್ಗೆ ಮಾತಾಡಿರಲಿಲ್ಲ. ನಾನು ಚಿಕ್ಕವಳಾಗಿದ್ದಾಗ ಅವರೊಡನೆ ಬಹಳ ಮಾತಾಡುತ್ತಿದ್ದೆ. ಅವರು ನನ್ನ ವ್ಯಾಯಾಮ, ಮಸಾಜ್ ಇತ್ಯಾದಿಗಳಿಗೆ ಬಹಳ ಸಹಾಯ ಮಾಡುತ್ತಿದ್ದರು. ನನ್ನನ್ನು ಎತ್ತಿಕೊಂಡು ಬೇರೆ ಬೇರೆ ಸ್ಥಳಗಳಿಗೆ ಕರೆದುಕೊಂಡು ಹೋಗುತಿದ್ದರು, ನನಗೆ ಭೂಗೋಳ, ವಿಜ್ಞಾನದ ಬಗ್ಗೆ ಹೇಳುತ್ತಿದ್ದರು. ಅವರಿಗೆ ನನ್ನ ಮಿತ್ರರ ಬಗ್ಗೆ ಬಹಳ ಕಾಳಜಿ. ಹುಡುಗಿಯರು ಪರವಾಗಿರಲಿಲ್ಲ, ಆದರೆ ಹುಡುಗರನ್ನು ಕಂಡರೆ ಅವರಿಗೆ ಸರಿಹೋಗುತ್ತಿರಲಿಲ್ಲ. ಕೆಲವು ಸಲ ಅವರ ಜೊತೆ ವಿನಯವಿಲ್ಲದೆ ನಡೆದುಕೊಳ್ಳುತಿದ್ದರು. ಅನೇಕಸಲ ಅವರು ಬಂದಾಗ ನಮ್ಮ ತಂದೆಯು ವರಾಂಡಾದಲ್ಲಿಯೇ ಕುಳಿತಿರುತ್ತಿದ್ದರು, ಆದರೆ ನನಗೆ ಅವರು ಬಂದಿರುವ ವಿಷಯವನ್ನು ಹೇಳುತ್ತಲೇ ಇರಲಿಲ್ಲ, ಅವರನ್ನು ಒಳಗೆ ಕರೆಯುತ್ತಲೂ ಇರಲಿಲ್ಲ, ನನಗೆ ಹೇಳುತ್ತಲೂ ಇರಲಿಲ್ಲ. ಅನೇಕಸಲ ನನ್ನ ಮಿತ್ರರು ಈ ಬಗ್ಗೆ ನನಗೆ ದೂರು ಹೇಳಿದ್ದು ಉಂಟು, "ನಾವು ಬಾಗಿಲಬಳಿ ೧೫ ನಿಮಿಷದಿಂದ ಕಾಯುತ್ತಿದ್ದೆವು, ನಿನ್ನ ತಂದೆ ನಿನಗೆ ತಿಳಿಸಲಿಲ್ಲವೇ?" ಎಂದು. ನನಗೆ ಬಹಳ ಕೋಪ ಬರುತ್ತಿತ್ತು. ಎಷ್ಟೋಸಲ ಹುಡುಗರು ನನಗೆ ಫೋನ್ ಮಾಡಿದರೆ ಅವರು ಅವರ ಮೆಸೇಜ್ ಕೂಡ ತೆಗೆದುಕೊಳ್ಳುತ್ತಿರಲಿಲ್ಲ. ನಾನು ನನ್ನ ಅಮ್ಮನನ್ನು ಅವರಿಗೆ ನಾನು ಅವರ‍್ಯಾರನ್ನಾದರೂ ಮದುವೆಯಾಗಿಬಿಡುತ್ತೇನೆಂಬ ಹೆದರಿಕೆಯೇ? ಎಂದು ಕೇಳುತ್ತಿದ್ದೆ. ನಾನು ಅವರೊಂದಿಗೆ ಸ್ನೇಹಿತರಂತಿರಲು ಮತ್ತು ನನ್ನ ಸ್ನೇಹಿತರನ್ನು ನಮ್ಮ ಮನೆಯಲ್ಲಿ ಆದರಿಸಿ ಸತ್ಕರಿಸಲು ಆಸೆಪಡುತ್ತಿದ್ದೆ. ನಮ್ಮ ತಂದೆ ನಾನು ನನ್ನ ಕಸಿನ್ಸ್ ಜೊತೆಯಲ್ಲಿ ಹೋದರೆ ಅವರ ಕಾರನ್ನು ಉಪಯೋಗಿಸಲು ಕೊಡುತ್ತಿದ್ದರು, ಆದರೆ ಅದೇ ನಾನು ನನ್ನ ಫ್ರೆಂಡ್ಸ್ ಜೊತೆಯಲ್ಲಿ ಹೋದರೆ ಕೊಡುತ್ತಿರಲಿಲ್ಲ. ಅವರಿಗೆ ನನ್ನ ಮತ್ತು ವೆಂಕಿಯ ಸಂಬಂಧದ ಬಗ್ಗೆ ಗೊತ್ತಿರಲಿಲ್ಲ, ಆದರೆ ಅವರಿಗೆ ವೆಂಕಿ ನಮ್ಮ ಮನೆಗೆ ಬರುವುದು ಹಿಡಿಸುತ್ತಿರಲಿಲ್ಲ. ನಾನು ನನ್ನ ಪಾಡಿಗೆ ಏನು ಬೇಕೋ ಅದನ್ನು ಮಾಡುತ್ತಲಿದ್ದೆ.

ನನಗೆ ಅನೇಕರು ಆಕರ್ಷಕ ಮಿತ್ರರಾದರು. ಜ್ಯೂಸರ್ ಕೀನ್ಯಾದ ಒಬ್ಬ ಪಶುವೈದ್ಯ ಓದುತ್ತಿದ್ದ ವಿದ್ಯಾರ್ಥಿ, ಮತ್ತು ವಿಜಯ್ ಮಾರಿಷಸ್ ನಿಂದ ಬಂದಿದ್ದ ದಂತವೈದ್ಯ ವಿದ್ಯಾರ್ಥಿ.

ಇವರಿಬ್ಬರೂ ಬೆಂಗಳೂರಿನಲ್ಲಿ ಓದುತ್ತಿದ್ದರು. ವಾರಾಂತ್ಯದಲ್ಲಿ ನಮ್ಮ ಕಾಲೊನಿಗೆ ಬಂದು ನನ್ನ ಮತ್ತು ನಮ್ಮ ಕಸಿನ್ಸ್ ಜೊತೆಯಲ್ಲಿ ಕಳೆಯುತ್ತಿದ್ದರು. ನಾವು ಪಾರ್ಟಿಗಳು ಪಿಕ್ನಿಕ್‌ಗಳು ಮಾಡಿ ತುಂಬ ಆನಂದ ಪಡುತ್ತಿದ್ದೆವು. ಮನೆಯಲ್ಲಿ ಎಲ್ಲರಿಗೂ ನಮ್ಮ ಕಾರ್ಯಕ್ರಮಗಳು ಗೊತ್ತಿದ್ದವು. ನಾವು ಒಮ್ಮೆ ನನ್ನ ಕಸಿನ್ ಮಹೇಶ್ ಜೊತೆಯಲ್ಲಿ ಒಂದು ಬೆಳದಿಂಗಳ ರಾತ್ರಿ ಪಿಕ್ನಿಕ್ ಹೋದಾಗ ನನಗೆ ಕೆಲವು ವಾಯು ಸೇನೆಯ ಪೈಲೆಟ್ಟುಗಳು ಪರಿಚಯವಾದರು. ಅವತ್ತು ಮುಂಜಾನೆಯವರೆಗೆ ನಾವು ಒಳ್ಳೆಯ ಸಮಯವನ್ನು ಕಳೆದೆವು. ನನ್ನ ಕಸಿನ್ ರಾಮದಾಸ್ ಜರ್ಮನಿಯಿಂದ ಹಿಂದಿರುಗಿದನಂತರ, ಒಂದು ರಜೆಯ ದಿವಸ ನಾವು ಕಸಿನ್‌ಗಳೆಲ್ಲಾ ಒಂದು ಸೇರಿದ್ದಾಗ, ಅವನು ನಮಗೆ ನಮ್ಮ ವಂಶದ ಪೂರ್ವಜರನ್ನು ತೋರಿಸುವುದಾಗಿ ಹೇಳಿದ. ನನಗೆ ಆ ರೀತಿಯ ಆಸಕ್ತಿ ಏನೂ ಇರಲಿಲ್ಲ, ಆದರೂ ಎಲ್ಲರೊಡನೆ ನಾನೂ ಸೇರಿಕೊಂಡೆ. ಅವನು ನಮ್ಮನ್ನು ಒಂದು ಕತ್ತಲು ರೂಮಿನಲ್ಲಿ ರೌಂಡಾಗಿ ಕುಳ್ಳಿರಿಸಿದ. ಅಲ್ಲಿ ಒಂದು ದೊಡ್ಡ ಕನ್ನಡಿಯನ್ನು ಇರಿಸಿದ್ದ, ನಮ್ಮೆಲ್ಲರಿಗೂ ಒಂದು 'ಸಾಸರ್' ನಲ್ಲಿ ಸ್ವಲ್ಪ ನೀರನ್ನು ಕೊಟ್ಟಿದ್ದ. ಅವನಿಗೆ ಸಂಸ್ಕೃತ ಬರದೇ ಇರುವ ಕಾರಣ ಅವನು ಜರ್ಮನಿನಲಿ ಏನೋ ಹೇಳುತಿದ. ಮತು ನಮನು. ಏನೇನೋ ಅರ್ಥವಾಗುತ್ತಿರಲಿಲ್ಲ, ನಮ್ಮ ಚಿಕ್ಕಪ್ಪ ಒಬ್ಬರನ್ನು ಬಿಟ್ಟು, ಅವರು ಅದನ್ನು ಕೇಳಿ ನಗುತ್ತಿದ್ದರು ಸುಮಾರು ಒಂದು ಘಂಟೆಕಾಲ ಈ ನಾಟಕ ನಡೆಯಿತು. ಎಲ್ಲರಿಗೂ ಸಹನೆ ಮೀರುತ್ತಿತ್ತು. ಆಗ ಅವನು ರೂಮಿನಲ್ಲಿ ಲೈಟ್ ಹಾಕಿದ. ಪ್ರತಿಯೊಬ್ಬರ ಮುಖದಲ್ಲಿಯೂ ಕರಿಯ ಬಣ್ಣ ಬಳಿದಿತ್ತು. ಅವನು ನಮಗೆ ತಿಳಿಯದೆ ಮೊದಲೇ ಸಾಸರ್‌ಗಳಿಗೆ ಕ್ಯಾಂಡಲ್ ಉರಿಯಿಂದ ಮಸಿಯನ್ನು ಬಳಿದಿಟ್ಟಿದ್ದನು. ನಾವೆಲ್ಲಾ ಇನ್ನೊಬ್ಬರ ಮುಖದಲ್ಲಿ ಮಸಿಯಾಗಿರುವುದನ್ನು ಕಂಡು ನಗುತ್ತಿದ್ದೆವು, ನಮ್ಮ ಮುಖದಲ್ಲಿಯೂ ಮಸಿಯಾಗಿದೆ ಎಂಬುದನ್ನು ತಿಳಿಯದೆ. ಈ ಕೀಟಲೆ ಬಹಳ ಜನ ಪ್ರಿಯವಾಯಿತು ಮತ್ತು ಇನ್ನೂ ಅನೇಕ ಸ್ಥಳಗಳಲ್ಲಿ ಮತ್ತೆ ಮಾಡಲಾಯಿತು. ಇದನ್ನು ನಾನು ಆ ವಾಯು ಸೇನೆಯ ಪೈಲೆಟ್ಟುಗಳಿಗೆ ತಿಳಿಸಿದಾಗ ಅವರು ನಮ್ಮನ್ನು ಒಂದು ರಾತ್ರಿ ಊಟಕ್ಕೆ ಕರೆದರು. ಸುಮಾರು ೪೦ ಜನ ಸೇರಿದ್ದರು. ಅಂದು ಮತ್ತೆ ರಾಮದಾಸ್ ಈ ಕೀಟಳೆಯನ್ನು ಬಹಳ ಯಶಸ್ವಿಯಾಗಿ ನಡೆಸಿದ. ಗಂಡಸರೆಲ್ಲ ನಗುತ್ತಿದ್ದರು. ಚೆನ್ನಾಗಿ ಅಲಂಕಾರ ಮಾಡಿಕೊಂಡು ಬಂದಿದ್ದ ಹೆಂಗಸರಲ್ಲಿ ಕೆಲವರು ಅಳಲಾರಂಭಿಸಿದರು. ಒಟ್ಟಿನಲ್ಲಿ ಆರಾತ್ರಿ ಬಹಳ ಆನಂದಮಯವಾಗಿತ್ತು.

ವಿಜಯ್ ಮಾರಿಷಸ್ ಗೆ ಹೋಗುವ ಪ್ರೋಗ್ರಾಮ್ ಹೇಳಿದಾಗ, ನಾನೂ ಅವನ ಜೊತೆ ಅಲ್ಲಿಗೆ ಹೋಗಲು ಯೋಚಿಸಿದೆ. ಅಮ್ಮನನ್ನು ಕೇಳಿದಾಗ ಅವಳು ನನ್ನ ವಿಷಯಕ್ಕೆ

ತಲೆ ಹಾಕುವುದಿಲ್ಲ ಎಂದು ಹೇಳಿಬಿಟ್ಟಳು. ನಮ್ಮ ತಂದೆಗೆ ಇಷ್ಟವೇನೂ ಇರಲಿಲ್ಲ. ಆದರೂ ಒಲ್ಲದ ಮನಸ್ಸಿನಿಂದ ಒಪ್ಪಿಕೊಂಡರು. ಅವರಿಗೆ ನಾನು ನನ್ನ ಹಣದಿಂದಲೇ ಈ ಪ್ರಯಾಣಕ್ಕೆ ಖರ್ಚು ಮಾಡುತ್ತಿದ್ದೇನೆ ಎಂದು ಗೊತ್ತಿತ್ತು. ಎ.ಪಿ.ಡಿ. ಯನ್ನು ಲಿಂಗರಾಜಪುರಕ್ಕೆ ಸ್ಥಳಾಂತರಿಸಿದ ಮೇಲೆ ನಾನು ನಮ್ಮ ಗರಾಜಿನಲ್ಲಿ ಒಂದು ಪುಟ್ಟ ವರ್ಕ್‌ಷಾಪ್ ನಡೆಸುತ್ತಿದ್ದೆ. ಅಲ್ಲಿ ಒಂದು ರಿವೆಟ್ಟಿಂಗ್ ಮಷೀನಿನಲ್ಲಿ ಚಿಕ್ಕ ಪುಟ್ಟ ಕೆಲಸಗಳನ್ನು ಮಾಡುತ್ತಿದ್ದೆವು. ನನಗೆ ನಾನು ಎ.ಪಿ.ಡಿ.ಗೆ ಹೋಗಿಬರುವ ಖರ್ಚು ಬಂದರೆ ಸಾಕಾಗಿತ್ತು. ಅಷ್ಟು ಬರುತ್ತಿತ್ತು ಮತ್ತು ನಾನು ಸುಮಾರು ಎಂಟು ಸಾವಿರ ರೂಪಾಯಿಗಳಷ್ಟು ಉಳಿಸಿದ್ದೆ. ಅದು ನಾನು ಹೋಗಬೇಕೆಂದಿದ್ದ ಪ್ರಯಾಣದ ಖರ್ಚಿಗೆ ಸಾಕಾಗುತ್ತಿತ್ತು. ಕೆಲವು ದಿನಗಳನಂತರ ನಾನು ನಮ್ಮ ಗ್ಯಾರೇಜಿನ ವರ್ಕ್‌ಷಾಪನ್ನು ಮುಚ್ಚಿದೆ, ಯಾಕೆಂದರೆ ಎ.ಪಿ.ಡಿ.ಯೇ ನನ್ನ ಸಮಯವನ್ನೆಲ್ಲಾ ತೆಗೆದುಕೊಳ್ಳುತಿತ್ತು.

ನಾನು ಮಾರಿಷಸ್ ನಲ್ಲಿ ಒಂದು ತಿಂಗಳಿದ್ದೆ. ವಿಜಯ್ ಮನೆಯಲ್ಲಿ ಒಂದು ವೆಸ್ಟರ್ನ್ ಟಾಯ್ಲೆಟ್ ಇರುವ ರೂಮಿತ್ತು. ಅದನ್ನು ನಾನು ಮತ್ತು ವಿಜಯ್ ತಮ್ಮ 'ಷೇರ್' ಮಾಡಿಕೊಂಡು ಇರುತ್ತಿದ್ದೆವು. ಮಾರಿಷಸ್ ಒಂದು ಚಿಕ್ಕ ದ್ವೀಪ. ನಾನು ಒಂದು ಟ್ಯಾಕ್ಸಿ ಗಳು ಬಹಳ ಸುಂದರ ಮತ್ತು ಶಾಂತವಾಗಿವೆ. ಅಲ್ಲಿರುವ ಭಾರತೀಯರು, ಅವರು ನಮ್ಮ ದೇಶವನ್ನು ಬಿಟ್ಟು ಅನೇಕ ತಲೆಮಾರುಗಳಾಗಿದ್ದರೂ ನಮ್ಮ ಹಳೆಯ ಸಂಪ್ರದಾಯಗಳನ್ನು ಉಳಿಸಿ ಬೆಳೆಸಿಕೊಂಡು ಬಂದಿದ್ದಾರೆ. ಅವರು ಹಿಂದೆ, ಚೈನೀಸ್ ಮತ್ತು ಕ್ರಿಯೋಲ್ ಜನರಂತೆ ಕೂಲಿ ಕೆಲಸ ಮಾಡಲು ಚಿನ್ನದ ಆಸೆತೋರಿಸಿ ಅಲ್ಲಿಗೆ ಕರೆದುಕೊಂಡು ಹೋದವರು. ನಾನು ಅಲ್ಲಿ ಅನೇಕ ಭಾರತೀಯರು ಒಳ್ಳೆಯ 'ಫ್ರೆಂಚ್' ಮಾತನಾಡುವುದನ್ನು ನೋಡಿದೆ. ಹೆಂಗಸರನ್ನು ಅಲ್ಲಿ ಇನ್ನೂ ಕಟ್ಟುಪಾಡುಗಳಲ್ಲಿ ಬಂಧಿಸಿರುವುದನ್ನು ಕಾಣಬಹುದಿತ್ತು. ಗಂಡಸರು ಕೆಲಸಮಾಡಿದರೆ ಇವರು ಮನೆಯಲ್ಲಿ ಇರುತ್ತಿದ್ದರು. ಜೊತೆಗೆ ಜನರು ಅವರವರ ಧರ್ಮದ ಗುಂಪುಗಳಲ್ಲಿಯೇ ಒಡನಾಡುತ್ತಿದ್ದರು. ನಾನು ಬಹಳ ಓದಿ, ಅಲ್ಲಿನ ಜನರೊಡನೆ ಮತ್ತು ಅವರ ಸಂಸಾರಗಳೊಡನೆ ಬೆರೆತು ಅವರ ಜೀವನ ಶೈಲಿಯನ್ನು ಅಧ್ಯಯನ ಮಾಡಿದೆ. ಅವರು ವಿಕಲಾಂಗರಿಗಾಗಿ ಏನು ಕೆಲಸ ಮಾಡುತ್ತಿದ್ದಾರೆ ಎಂದು ಅರಿಯಲು, ನಾನು ಒಂದು 'Cheshire' ಕುಟುಂಬದವರೊಡನೆ ಓಡಾಡಿದೆ. ಅಲ್ಲಿ ವಿಶೇಷವಾಗಿ ಏನೂ ಕಾಣಲಿಲ್ಲ, ಆದರೆ ನನ್ನ ಮಾರಿಷಸ್ ಪಯಣ ನನಗೆ ಒಂದು ವಿಶೇಷವಾದ ಅನುಭವ ವಾಗಿತ್ತು. ನನಗೆ ಅದು ಚಿರಸ್ಮರಣೀಯವಾಗಿರುತ್ತದೆ.

ನಮ್ಮ ತಂದೆಗೆ ನನ್ನ ವಿಕಲಾಂಗತೆಯ ಬಗ್ಗೆ ಅವರದ್ದೇ ಆದ ವಿಚಾರಗಳು ಇದ್ದವು. ಅದರಲ್ಲಿ ಗಂಡು ಹುಡುಗರೊಡನೆ ಹೊರದೇಶಕ್ಕೆ ಪ್ರಯಾಣ ಮಾಡುವುದು ಸೇರಿರಲಿಲ್ಲ. ನನ್ನ ಚಿಕಿತ್ಸೆ ನಡೆಯುತ್ತಿದ್ದಾಗಲೂ ಅವರು ಅವರದ್ದೇ ಆದ ಪ್ರಯೋಗಗಳನ್ನು ಮಾಡುತ್ತಿದ್ದರು.ನಾವು ಮದರಾಸಿನಲ್ಲಿದ್ದಾಗ, ಅವರು ನನಗೆ ಒಂದು ನಾಯಿ ತಂದು ಕೊಟ್ಟರು. ನಮ್ಮ ಪಕ್ಕದ ಮನೆಯವರು ಕೇರಳಕ್ಕೆ ಹೋಗುತ್ತಿದ್ದರಿಂದ ಅವರಮನೆಯಲ್ಲಿದ್ದ ಎರಡು ಡಾಕ್ಸುಂಡ್ ನಾಯಿಗಳಲ್ಲಿ ಒಂದನ್ನು ನಮಗೆ ಕೊಟ್ಟರು. ರಿಕ್ಕಿ – ಅವರು ಕೊಟ್ಟ ನಾಯಿ – ನನ್ನ ಜೀವನದಲ್ಲಿ ಕಾಲಿಟ್ಟಿತು. ಅದು ಏನೊ ಕಳೆದು ಕೊಂಡಂತೆ ಕಾಣುತ್ತಿತ್ತು. ಯಾವಾಗಲೂ ಘಂಟೆಗಟ್ಟಲೆ ಮೌನವಾಗಿ ಕುಳಿತಿರುತ್ತಿತ್ತು, ಮತ್ತು ಪಕ್ಕದ ಮನೆಯನ್ನು ನೋಡುತ್ತಿತ್ತು. ನಿಧಾನವಾಗಿ ಅದು ನಮಗೆ ಹೊಂದಿ ಕೊಂಡಿತು. ಅದು ನನ್ನನ್ನು ಚೆನ್ನಾಗಿ ಕಾಯುತ್ತಿತ್ತು. ಯಾರನ್ನೂ ನನ್ನ ಹತ್ತಿರ ಬರಲು ಬಿಡುತ್ತಿರಲಿಲ್ಲ. ಯಾರಾರೂ ನನ್ನ ಪಕ್ಕದಲ್ಲಿ ಕುಳಿತರೆ ಅದು ತಕ್ಷಣ ಹಾರಿ ನಮ್ಮ ಮಧ್ಯದಲ್ಲಿ ಕುಳಿತುಕೊಳ್ಳುತಿತ್ತು. ಪಾಪ, ನನ್ನ ಟೀಚರ್ ಒಮ್ಮೆ ನನ್ನನ್ನು ಹಿಡಿದುಕೊಳ್ಳಲು ಹೋಗಿ ಅದರಿಂದ ಕಚ್ಚಿಸಿಕೊಂಡರು. ಅನೇಕ ಇಂಜೆಕ್ಷನ್ ತೆಗೆದು ಕೊಳ್ಳಬೇಕಾಯಿತು.  ನಮ್ಮ ತಂದೆ ಅವರ ಸ್ವಾಸ್ಥ್ಯದ ರೂಲ್ಸ್ ಗಳನ್ನು ಅದರಮೇಲೂ ಹೇರ ತೊಡಗಿದರು. ಆದರೆ ಅದು ಅವರಿದ್ದಾಗ ಮಾತ್ರ ನಡೆಯುತ್ತಿತ್ತು. ರಿಕ್ಕಿ ನಮ್ಮೊಡನೆ ಸುಮಾರು ೧೨ ವರ್ಷಗಳ ಕಾಲ ಇತ್ತು. ಅದು ನನ್ನ ಮಗುವಿನಂತಾಗಿತ್ತು ಮತ್ತು ನಾನು ತಮಿಳಿನಲ್ಲಿ ಹೇಳುವುದೆಲ್ಲವನ್ನೂ ಚೆನ್ನಾಗಿ ಅರ್ಥ ಮಾಡಿಕೊಳ್ಳುತಿತ್ತು. ನಾನು ನನ್ನ ವ್ಹೀಲ್ ಚೇರಿನಲ್ಲಿ ಮನೆಯಿಂದ ಹೊರಟರೆ, ಅದೂ ಗೇಟಿನಿಂದ ನುಸುಳಿ ಹೊರಗೆ ಬಂದು ನನ್ನನ್ನು ಹಿಂಬಾಲಿಸುತ್ತಿತ್ತು. ಒಂದು ಸಲ ಹೀಗೆ ಅದು ಸುಮಾರು ಎರಡು ಕಿಲೋಮೀಟರ್ ನನ್ನ ಹಿಂದೆ ಓಡಿ ಬಂದಿತ್ತು. ಅದು ಸತ್ತು ಹೋದಮೇಲೆ ನಾನು ಇನ್ನು ನನಗೆ ಯಾವ ನಾಯಿಯೂ ಬೇಡವೆಂದೆ. ನಾವು ಪ್ರೀತಿಯಿಂದ ಬೆಳೆಸಿದ ಪ್ರಾಣಿಯನ್ನು ಕಳೆದುಕೊಳ್ಳುವುದು ಮನಸ್ಸಿಗೆ ಬಹಳ ಬೇಸರವಾಗುತ್ತದೆ.

ಆದರೆ ಕೆಲವು ತಿಂಗಳ ನಂತರ, ನಮ್ಮ ಮನೆಯಲ್ಲಿ ಕೆಲಸ ಮಾಡುವ ಹುಡುಗ ಬಂದು ಅಲ್ಲಿ ರಿಕ್ಕಿಯಂತೆಯೇ ಕಾಣುವ ಒಂದು ನಾಯಿ ಮರಿಯಿದೆ. ಅದನ್ನು ಅದರ ಮನೆಯವರು ಸರಿಯಾಗಿ ನೋಡಿಕೊಳ್ಳುತ್ತಿಲ್ಲ, ಅದನ್ನು ಎಲ್ಲಿಯಾದರೂ ಬಿಟ್ಟುಬಿಡಬೇಕೆಂದಿದ್ದಾರೆ ಎಂದ. ನಾನು ಅವನಿಗೆ ಆ ಮರಿಯನ್ನು ತಂದು ತೋರಿಸಲು ಹೇಳಿದೆ. ಅವನು ಅದನ್ನು ತಂದಮೇಲೆ, ಜಿಮ್ಮಿ ವಾಪಸ್ಸು ಹೋಗಲೇ ಇಲ್ಲ. ಅದು ಒಂದುಬಹಳ ಮುದ್ದಾದ ನಾಯಿ ಮರಿ. ಆದರೆ ಅದು ನಾನು ೧೯೬೪ ರಲ್ಲಿ ಇಂಗ್ಲೆಂಡಿಗೆ ಹೋಗುವ ಮುನ್ನ ಸತ್ತು ಹೋಯಿತು.  ನಮ್ಮ ತಂದೆ ಮೀನನ್ನೂ ಬೆಳೆಸಿದ್ದರು. ಅವರು

ನನಗೆ ಮೀನಿಗೆ ಆಹಾರ ಕೊಡುವುದು ಮತ್ತು ಅದರ ಟ್ಯಾಂಕನ್ನು ನೋಡಿಕೊಳ್ಳುವುದು ಇತ್ಯಾದಿ ಎಲ್ಲಾ ಹೇಳಿಕೊಟ್ಟರು. ನಾವು ಮದರಾಸಿನಿಂದ ಬೆಂಗಳೂರಿಗೆ ಬಂದಾಗ, ನಮ್ಮ ಜೊತೆ ನಾಲ್ಕು ಬುಟ್ಟಿಗಳ ತುಂಬ 'ಕ್ಯಾಕ್ಟಸ್' ಗಿಡಗಳು ಮತ್ತು ನನ್ನ ವ್ಹೀಲ್ ಚೇರ್ ರೈಲಿನಲ್ಲಿ ಬಂದಿತು. ಇತರ ಪ್ರವಾಸಿಗಳು ನಮ್ಮನ್ನೇ ನೋಡುತ್ತಿದ್ದರು. ನಮ್ಮತಂದೆಗೆ ನನಗೆ ಸಾಕಷ್ಟು ಹೊತ್ತು ಹೋಗುವಂತ ಕೆಲಸಗಳು ಇರಬೇಕು ಎಂಬ ಭಾವನೆ. ನನಗೆ ಓದುವುದು ಇಷ್ಟ ಅಂತ ಅವರು ಬಹಳ ಪುಸ್ತಕಗಳನ್ನು ತಂದು ಕೊಡುತ್ತಿದ್ದರು. ನಾನು ಅನೇಕ ಒಳ್ಳೆಯ ವಸ್ತುಗಳನ್ನು ಸಂಗ್ರಹಿಸ ತೊಡಗಿದೆ, ದೇಶ ವಿದೇಶ ಗಳಿಂದ ಒಳ್ಳೆಯ ಪೆನ್ಸಿಲ್ಲುಗಳು, ಕಸೂತಿ ಮಾಡಿರುವ ಕರವಸ್ತ್ರಗಳು, ಗಡಿಯಾರಗಳು, ಸುಂದರ ಚಿತ್ರಗಳು ಇತ್ಯಾದಿ . . . ನಾಣ್ಯಗಳು ಮತ್ತು ಸ್ಟ್ಯಾಂಪುಗಳನ್ನು ಬಿಟ್ಟು.

ವಿಕಲಾಂಗ ಮಗುವಿನ ತಂದೆ ತಾಯಿಯರು ಬಹಳ ಶ್ರಮಪಡುತ್ತಾರೆ. ಅವರು ಆ ಮಗುವಿನ ಮೇಲೆ ಬಹಳ ಹಿಡಿತವನ್ನು ಇಟ್ಟುಕೊಳ್ಳಲು ಪ್ರಯತ್ನಿಸುತ್ತಾರೆ ಅಥವಾ ಆ ಮಗುವನ್ನು  ಚಿಕ್ಕ ಪುಟ್ಟ ಕೆಲಸಕ್ಕೂ ಅವರನ್ನೇ ಅವಲಂಭಿಸುವಂತೆ ಮಾಡಿಬಿಡುತ್ತಾರೆ. ಅವರು ಇಲ್ಲದಿದ್ದಾಗ ಆ ಮಗು ಏನೂ ಮಾಡಲರಿಯದೆ ಕಷ್ಟಪಡುತ್ತದೆ. ನನ್ನ ತಂದೆ ತಾಯಿಯರು ನನ್ನನ್ನು ಮೊದಲಿನಿಂದ ಅವರಿಲ್ಲದ ಜೀವನದಲ್ಲಿ ಸ್ವಾವಲಂಬಿಯಾಗಿ ಇರುವುದಕ್ಕೆ ತಯಾರು ಮಾಡಿದರು. ಆದರೂ, ನಾನು ಕಷ್ಟವಾದ ನಿರ್ಧಾರಗಳನ್ನು ತೆಗೆದುಕೊಳ್ಳ ಬೇಕಾಗಿದ್ದರೆ, ನನಗೆ ಅವರ ಸಹಾಯ ಬೇಕಿತ್ತು. ನಮ್ಮ ತಂದೆಯು ಹೋಗಿ ಎರಡು ವರ್ಷಗಳಾದ ಮೇಲೆ, ಅವರು ನನ್ನ ಮದುವೆಗೆ ಒಪ್ಪಿಗೆ ಕೊಡುತ್ತಿರಲಿಲ್ಲ ಎನ್ನುವುದು ನನ್ನ ಮನಸ್ಸಿಗೆ  ಗೋಚರವಾಯಿತು.  ನನ್ನ ತಾಯಿಯ ಪ್ರಕೃತಿಯಂತೂ ನನಗೆ ಏನು ಮಾಡಬೇಕೆಂದು ತಿಳಿಯದಂತಾಯಿತು. ಆದರೆ ಸಮಯವು ಕಳೆದಂತೆ, ಪ್ರೀತಿಯು ಎಲ್ಲವನ್ನೂ ಜಯಿಸುತ್ತದೆ.

೧೯೭೦ರಲ್ಲಿ ನಾನು ಎ.ಪಿ.ಡಿ. ಯ ಕೆಲಸದಲ್ಲಿ ಬಹಳ ನಿರತಳಾಗಿದ್ದೆ. ಆಗ ನನಗೆ ಮೈ ಅಷ್ಟು ಹಿತವಿರಲಿಲ್ಲ. ಬೆನ್ನು ಬೆಂಕಿಹತ್ತಿದಂತೆ ಉರಿಯುತ್ತಿತ್ತು ಮತ್ತು ಯಾವಾಗಲೂ ವಾಂತಿಯಾಗುವಂತೆ ಹಿಂಸೆ. ಯಾಕೆ ಈ ರೀತಿ ಆಗುತ್ತಿದೆ ಎಂದೂ ತಿಳಿಯಲಿಲ್ಲ. ನಾನು ನಮ್ಮ ಡ್ರೈವರಿಗೆ ನನ್ನನ್ನು ನಮ್ಮ ಮನೆಯ ಹತ್ತಿರವಿರುವ ೧೮ನೇ ಕ್ರಾಸಿನ ಡಾಕ್ಟರ್ ಷಾ ಹಿಗೆ ಕರೆದುಕೊಂಡು ಹೋಗ ಹೇಳಿದೆ. ನನ್ನೊಡನೆ ನಾಯ್ಡು ಮತ್ತು ಆಯಾ ಬಂದರು. ನಾಯ್ಡುವನ್ನು ನಾವು ಎ.ಪಿ.ಡಿ.ಯಲ್ಲಿ 'ಜೂನಿಯರ್ ನಾಯ್ಡು' ಎಂದು ಕರೆಯುತ್ತಿದ್ದೆವು – ಯಾಕೆಂದರೆ 'ಸೀನಿಯರ್ ನಾಯ್ಡು' ಅಕೌಂಟ್ಸ್ ಡಿಪಾರ್ಟ್‌ಮೆಂಟ್ ನಲ್ಲಿ ದಿವಾನ್ ಅವರ

ಸಹಾಯಕರಾಗಿ ಕೆಲಸ ಮಾಡುತ್ತಿದ್ದರು. ಅವರು ಎ.ಪಿ.ಡಿ. ಸೇರಿದ ಎರಡು ವರ್ಷಗಳಲ್ಲಿ ದಿವಾನ್ ನಮ್ಮನ್ನು ಅಗಲಿದರು, ಆದರೆ 'ಸೀನಿಯರ್ ನಾಯ್ಡು' ಎ.ಪಿ.ಡಿ.ಯಲ್ಲಿ ಮುಂದುವರಿದರು ಮತ್ತು ನನಗೆ ಬಹಳ ಒಳ್ಳೆಯ ಸ್ನೇಹಿತರಾದರು.

ನಾವು ಎ.ಪಿ.ಡಿ.ಯ ಗೇಟಿನ ಬಳಿ ತಲಪುವ ಹೊತ್ತಿಗೆ ನನಗೆ ಹಿಂಸೆ ಜಾಸ್ತಿಯಾಗಿ ನಾನು ನಮ್ಮ ಕ್ಯಾಂಪಸ್ಸಿನಲಿದ್ದ ಪುಟ್ಟ ಪಾಲಿಕ್ಲಿನಿಕ್ಕಿಗೇ ನೇರವಾಗಿ ಹೋಗಲು ಹೇಳಿದೆ. ಅಲ್ಲಿ ಡಾಕ್ಟರ್ ಶ್ರೀನಿವಾಸನ್ ಮತ್ತು ಇತರರು ಅದನ್ನು ಕೂಡಲೇ 'ಅಪ್ಪೆಂಡಿಸೈಟಿಸ್' ಎಂದು ಗುರುತಿಸಿ, ನಾನು ಕೂಡಲೇ ಆಪರೇಷನ್ ಮಾಡಿಕೊಳ್ಳಬೇಕು ಎಂದರು. ಡಾಕ್ಟರ್ ರಾಮಚಂದ್ರನ್ ನನ್ನ ಆಪರೇಷನ್ನಿಗೆ ತಯಾರಿ ಮಾಡುತ್ತಿದ್ದಾಗ ನನಗೆ ಅಮ್ಮನಿಗೆ ಈ ವಿಷಯ ತಿಳಿಸಬೇಕು ಎಂದು ತೋಚಿತು. ನಾನು ಡ್ರೈವರಿಗೆ ಕಾರು ತೆಗೆದುಕೊಂಡು ಮನೆಗೆ ಹೋಗಲು ಹೇಳಿದೆ. ನನ್ನ ತಂಗಿ ಕುಮ್ಮು ಮತ್ತು ಅಮ್ಮ ನನ್ನನ್ನು ಆಪರೇಷನ್ ಥಿಯೇಟರಿಗೆ ಕರೆದು ಕೊಂಡು ಹೋಗುತ್ತಿದ್ದಂತೆ ಅಲ್ಲಿಗೆ ಬಂದರು. ಈ ಮಧ್ಯೆ ವೆಂಕಿ ನನ್ನೊಡನೆ ಮಾತನಾಡಲು ಎಲ್ಲೆಲ್ಲೂ ಫೋನ್ ಮಾಡುತ್ತಿದ್ದ. ಕೊನೆಗೆ ಅವನಿಗೆ ನಾಯ್ಡು ಫೋನಿನಲ್ಲಿ ಸಿಕ್ಕಿದರು ಮತ್ತು ನನ್ನ ಆಪರೇಷನ್ ಬಗ್ಗೆ ತಿಳಿಯಿತು. ವೆಂಕಿ ಮಾರನೆಯ ದಿನ ಬಂದ ಮತ್ತು ನನಗೆ ಮೈ ವಾಸಿಯಾಗುವ ವರೆಗೂ ನನ್ನೊಡನೆಯೇ ಇರುವುದಾಗಿ ಹೇಳಿದ. ಅಮ್ಮನಿಗೆ ಈ ಸುದ್ದಿಯಿಂದ ಮುಜುಗರವಾಯಿತು. ನನಗೂ ಅವನು ಅಲ್ಲಿ ಇರುವುದು ಸರಿಹೋಗಲಿಲ್ಲ ಆದರೆ ನನ್ನ ಸ್ಥಿತಿಯಲ್ಲಿ ನಾನು ಏನನ್ನೂ ಮಾಡುವಂತಿರಲಿಲ್ಲ. ಅಮ್ಮನಿಗೆ ಸಮಾಧಾನ ಹೇಳಿದೆ. ಎ.ಪಿ.ಡಿ ಯ ನನ್ನ ಸಹಕರ್ಮಿ ಐವಿ ಎನ್ನುವಳು ಅವಳ ಸ್ನೇಹಿತಿ ಫೀಲೋ ಎನ್ನುವಳು ನನ್ನೊಡನೆ ರಾತ್ರಿಯ ಹೊತ್ತು ಇರುವುದಕ್ಕೆ ಏರ್ಪಾಡು ಮಾಡಿದ್ದಳು. ನಾನು ಆಸ್ಪತ್ರೆಯಲ್ಲಿ ಹತ್ತು ದಿನಗಳು ಇರಬೇಕಾಯಿತು. ಡಾಕ್ಟರ್‌ಗಳು ನನ್ನ ಹೊಟ್ಟೆಯ ಮಾಂಸಖಂಡವು ಅಷ್ಟು ಶಕ್ತಿಶಾಲಿಯಾಗಿ ಇಲ್ಲವಾದ್ದರಿಂದ ನನಗೆ ಕುಳಿತು ಕೊಳ್ಳುವುದು ಕಷ್ಟವಾಗಬಹುದು, ಹಾಗೆ ಕುಳಿತುಕೊಳ್ಳಲು ಪ್ರಯತ್ನ ಪಟ್ಟಾಗ ಹೊಲಿಗೆಗಳು ಬಿಚ್ಚಿಕೊಳ್ಳ ಬಹುದು ಎಂದು ಹೇಳಿದರು. ನಾನು ಮೂರು ತಿಂಗಳು ಹಾಸಿಗೆಯಲ್ಲೇ ಮಲಗಿರಬೇಕಾಯಿತು. ಈ ಸಮಯದಲ್ಲಿ ನನಗೆ ನೆಲದಿಂದ ವ್ಹೀಲ್ ಚೇರಿಗೆ ಹತ್ತಿ ಕುಳಿತುಕೊಳ್ಳುವ ಸಾಮರ್ಥ್ಯ ಹೊರಟುಹೋಯಿತು.

ನಾನು ಸ್ವಲ್ಪ ಚೇತರಿಸಿಕೊಂಡು ಗಟ್ಟಿಯಾದೆ. ೧೯೭೯ ರ ನವೆಂಬರ್ ತಿಂಗಳಲ್ಲಿ ನಾನು ನಾಯ್ಡು ಮತ್ತು ನೀರಜಳೊಂದಿಗೆ ಒಂದು ಸರ್ಕಾರಿ ಧನಸಹಾಯದ ಬಗ್ಗೆ "ಫೊಲೊ ಅಪ್" ಮಾಡಲು ದಿಲ್ಲಿಗೆ ಹೋದೆ. ನಾವು ದಿಲ್ಲಿಯಲ್ಲಿ ಚೆನ್ನಾಗಿ ಸಮಯ

ಕಳೆದೆವು ಮತ್ತು ಅಲ್ಲಿಂದ ತಾಜ್ ಮಹಲ್ ನೋಡಲು ಆಗ್ರಾಗೆ ಹೋದೆವು. ವೆಂಕಿ ಆಗ ಜೇಮಷೆಡ್ಪೂರಿನಲ್ಲಿದ್ದ, ಅವನು ಅವನ ಮುಂಬೈಯಿನ ಟೀಚಿಂಗ್ ಕೆಲಸವನ್ನು ಬಿಟ್ಟುಬಿಟ್ಟಿದ್ದ.ಹೊಸ ಕೆಲಸ ಹುಡುಕುತ್ತಿದ್ದಾಗ ಅವನು ಅಲ್ಲಿ ಟಾಟಾ ಸ್ಟೀಲ್ ಕಂಪನಿಯ ಮುಖ್ಯಸ್ತರಾದ ರುಸ್ಸಿ ಮೋದಿಯನ್ನು ಕಂಡಿದ್ದ. ಅವರು ಅವನಿಗೆ ಅವರ ಕಂಪನಿಯಲ್ಲಿ ಒಂದು ಕೆಲಸಕೊಟ್ಟರು. ಅವನು ಬಹಳ ಹೇಳಿದಮೇಲೆ ನಾನು ಅವನನ್ನು ಜೇಮಷೆಡ್ಪೂರಿನಲ್ಲಿ ಹೋಗಿ ಭೇಟಿಯಾದೆ. ನನ್ನ ಸ್ನೇಹಿತೆ ನಿರ್ಮಲಾ ಬ್ಲೂಮ್ ಅಡಪ ಎನ್ನುವಳು ಅಲ್ಲಿ ನನ್ನ ಜೊತೆ ಸೇರಿಕೊಳ್ಳುವುದಾಗಿ ಹೇಳಿದಳು. ನಾಯ್ಡು ಮತ್ತು ನೀರಜಾ ನನ್ನನ್ನು ಬಿಟ್ಟು ಬೆಂಗಳೂರಿಗೆ ತೆರಳಿದರು.ವೆಂಕಿ ಅಲ್ಲಿ ನನ್ನ ಇರುವಿಕೆಗೆ ಬೇಕಾದ ಏರ್ಪಾಡನ್ನು ಮಾಡಿದ್ದರು – ಮೊದಲು ಒಬ್ಬಳು ಗೆಳೆತಿಯ ಜೊತೆ, ಮತ್ತೆ ಒಂದು ಹೋಟಲಿನಲ್ಲಿ, ನಂತರ ನಮ್ಮದೇ ಆದ ಬಾಡಿಗೆಯ ಮನೆಯಲ್ಲಿ. ಅವನಿಗೆ ಆ ಊರಲ್ಲಿ ಬಹಳ ಜನ ಮಿತ್ರರು ಇದ್ದಂತೆ ಕಾಣುತ್ತಿತ್ತು. ನಾವು ದಾರಿಯಲ್ಲಿ ಎಲ್ಲೆಲ್ಲಿ ಹೋದರೂ ಅಲ್ಲಿ ಅವನಿಗೆ ಮಿತ್ರರು ಸಿಗುತ್ತಿದ್ದರು ಮತ್ತು ಮಾತಾಡಿಸುತ್ತಿದ್ದರು. ಎಲ್ಲರಿಗೂ ನಾನು ಯಾರೆಂದು ಗೊತ್ತಿದ್ದಂತೆ ತೋರುತ್ತಿತ್ತು.

ವೆಂಕಿ ಎಲ್ಲವನ್ನೂ ಬಹಳ ಚೆನ್ನಾಗಿ ಏರ್ಪಾಡು ಮಾಡುತ್ತಿದ್ದನು. ನಾವು ಮನೆಯನ್ನು ಬಾಡಿಗೆಗೆ ತೆಗೆದುಕೊಂಡ ಕೂಡಲೇ ನಮಗೆ ಬೇಕಾದ ಹಾಸಿಗೆಗಳು, ಪಾತ್ರೆ ಪಡಗ, ಕಮ್ಮೋಡು, ಇತ್ಯಾದಿ ಎಲ್ಲಾ ಆವಶ್ಯಕ ವಸ್ತುಗಳೂ ಬಂದಿತು. ನನಗೆ ಒಂದು ವೇಳೆ ವ್ಹೀಲ್ ಚೇರನ್ನು ಬಾತ್ ರೂಮಿನೊಳಗೆ ತೆಗೆದು ಕೊಂಡು ಹೋಗಲಾಗದಿದ್ದರೆ, ಎಂದು ವೆಂಕಿ ಒಂದು 'ಪಾಟ್' ಯನ್ನೂ ತಂದಿಟ್ಟ. ಒಬ್ಬ ವಿಶ್ವನಾಥ್ ಎಂಬ ಬೆಂಗಾಲಿ ಯುವಕ ನಮ್ಮ ಮನೆಯಲ್ಲಿ ಅಡುಗೆ ಮಾಡಲು ಸಿಕ್ಕಿದ. ಅವನು ನನ್ನ ಶಿಸ್ತಿಗೆ ಮತ್ತು ವೆಂಕಿಯ ದೃಷ್ಟಿ ಮಾಂಧ್ಯಕ್ಕೆಂದು ಹೇಳಿಮಾಡಿಸಿದಹಾಗಿತ್ತು. ವೆಂಕಿಗೆ ಎಲ್ಲಾ ವಸ್ತುಗಳೂ ಅದರದರ ಸ್ಥಳದಲ್ಲಿ ಇರಬೇಕಾಗಿತ್ತು. ಅವನು ಸ್ವಾತಂತ್ರವಾಗಿ ತನ್ನ ಕೆಲಸ ತಾನು ಮಾಡಿಕೊಳ್ಳುತ್ತಿದ್ದ, ಆದರೆ ಅದಕ್ಕೆ ಅವನು ಉಪಯೋಗಿಸುವ ವಸ್ತುಗಳು ಒಂದರಿಂದ ಮತ್ತೊಂದು ಸ್ಥಳಕ್ಕೆ ಬದಲಾಗುತ್ತಿದ್ದರೆ ಸಾಧ್ಯವಾಗುತ್ತಿರಲಿಲ್ಲ.

ಪ್ರತಿ ದಿನ ನಮ್ಮ ಮನೆಗೆ ಮಿತ್ರರ ದೊಡ್ಡ ಗುಂಪೊಂದು ಬರುತ್ತಿತ್ತು. ಎಲ್ಲರೂ ಸೇರಿಕೊಂಡು ಮುಂಜಾವಿನವರೆಗೆ 'ಪಾರ್ಟಿ' ಮಾಡುತ್ತಿದ್ದೆವು. ನಿಜವಾದ ಕುಡಿತ ಪ್ರಾರಂಭವಾಗುವುದಕ್ಕೆ ಮುಂಚೆ, ಪ್ರತಿದಿನ ಐವತ್ತು, ಅರವತ್ತು ಕಪ್ಪು ಚಹಾ ಮಾಡುತ್ತಿದ್ದೆವು. ನಾನು ಅಲ್ಲಿಗೆ ಬಂದ ಕೆಲವೇ ದಿನಗಳಲ್ಲಿ ನಿರ್ಮಲ ಕೂಡ ಅಲ್ಲಿಗೆ ಬಂದಳು. ಅವಳು ಮತ್ತೆ ಮದುವೆಯ ವಿಷಯವನ್ನು ಪ್ರಾರಂಭಿಸಿದಳು. ಅವಳು ನನ್ನ ಕಸಿನ್ ಚೊಟುವಿನ

ಹೆಂಡತಿಯನ್ನು – ಅವಳ ಹೆಸರೂ ನಿರ್ಮಲ, ಅವಳು ಒಬ್ಬ ಆರ್ಕಿಟೆಕ್ಟ್ – ಸಂಧಿಸಿದ್ದಳು. ಅವರಿಬ್ಬರೂ ಸೇರಿಕೊಂಡು ಮಲ್ಲೇಶ್ವರದಲ್ಲಿ ಪ್ರಾಕ್ಟೀಸ್ ಶುರು ಮಾಡಿದ್ದರು. ಅವಳನ್ನು ನಾನು 'ಮಹಾತಾಯೀ' ಎಂದು ಕರೆಯುತ್ತಿದ್ದೆ. ಅವಳು ಅತಿ ಬೇಗನೆ ನಮ್ಮಕುಟುಂಬಕ್ಕೆ ಸೇರಿಕೊಂಡಳು. ನಮ್ಮ ತಂದೆಯು ದೈವಾಧೀನರಾದ ಮೇಲೆ ಮೂರು ವರ್ಷಗಳು ಅವಳು ನಮ್ಮೊಡನೆಯೇ ಇದ್ದಳು. ನನಗೆ ಮತ್ತು ನನ್ನ ಅಮ್ಮನಿಗೆ ಅವಳು ಒಳ್ಳೆಯ ಸಂಗಾತಿಯಾದಳು. ಅವಳು ಬಹಳ ಧೈರ್ಯವಂತೆ. ಅವಳು ಬೆಂಗಳೂರು ಬಿಟ್ಟು ಬಾಟ್ಸ್ವಾನಾ ದಲ್ಲಿ ಸ್ಟ್ರಕ್ಚರಲ್ ಡಿಸೈನ್ಸ್ ಬಗ್ಗೆ ಕೆಲಸ ಮಾಡಲು ಹೋದಳು. ಅಲ್ಲಿಂದ ಅವಳು ಕೆಲವು ಮಿತ್ರರೊಡನೆ ಒಂದು ಪುಟ್ಟ ಬೋಟಿನಲ್ಲಿ ಗ್ರನಾಡ ಗೆ ಹೋಗಿ ಅಲ್ಲಿ ಎರಡು ವರ್ಷ ಇದ್ದಳಂತೆ. ಈಗ ಅವಳು ತನ್ನ ಕುಟುಂಬದವರೊಡನೆ ಸ್ವೀಡನ್ ನಲ್ಲಿ ಇದ್ದಾಳೆ.

ಆಗ ವೆಂಕಿ ಮತ್ತು ನಿರ್ಮಲ ಮದುವೆಯನ್ನು ಜೇಮಷೆಡ್ಪೂರಿನಲ್ಲಿ ಮಾಡಿಕೊಳ್ಳುವಂತೆ ಒತ್ತಾಯ ಮಾಡ ತೊಡಗಿದರು. ಬೆಂಗಳೂರಿನಲ್ಲಿ ನಮ್ಮ ಮನೆಯವರ ಭಾವನೆಗಳನ್ನು ಪರಿಗಣಿಸಿದರೆ ಅಲ್ಲಿ ಮದುವೆಯು ಸೂಕ್ತವೆಂದು ತೋರುತ್ತಿರಲಿಲ್ಲ. ನಿರ್ಮಲ ಪ್ರಭಳೊಂದಿಗೆ ಮತ್ತು ಆಗ ಮುಂಬೈಗೆ ಬಂದಿದ್ದ ನಮ್ಮ ಅಮ್ಮ ನೊಂದಿಗೆ ಮಾತನಾಡಿದಳು. ಅವರಿಬ್ಬರೂ ಏನೂ ಹೇಳಲಿಲ್ಲ, ಸುಮ್ಮನೆ ನನಗೆ ಶುಭ ಕೋರಿದರು. ನನಗೆ ಮನಸ್ಸಿನಲ್ಲಿ ಒಂದು ಇತ್ತು. ನನಗೆ ಜೇಮಷೆಡ್ಪೂರಿನಲ್ಲಿ ಇರಲು ಆಗುತ್ತಿರಲಿಲ್ಲ. ವೆಂಕಿ ಮನಸ್ಸಿನಲ್ಲಿ ಟಾಟಾ ಅವರು ಅಲ್ಲೇ ವಿಕಲಾಂಗರಿಗಾಗಿ ಏನಾದರೂ ಮಾಡಬಹುದು ಎಂಬ ಆಸೆ ಇತ್ತು. ಆದರೆ ನಾನು ಒಪ್ಪಲಿಲ್ಲ, ನಾನು ಎ.ಪಿ.ಡಿ. ಬಿಡುವಂತಿರಲಿಲ್ಲ. ಅದು ನನ್ನ ಜೀವನದ ಗುರಿಯಾಗಿತ್ತು. ನಾನು ಬೆಂಗಳೂರಿಗೆ ಹಿಂದಿರುಗಿ ಎ.ಪಿ.ಡಿ.ಯಲ್ಲಿ ನನ್ನ ಕೆಲಸವನ್ನು ಮುಂದುವರಿಸುತ್ತೇನೆ, ವೆಂಕಿಗೆ ಬೆಂಗಳೂರಿನಲ್ಲಿ ಬೇರೆ ಕೆಲಸ ಸಿಕ್ಕಿದನಂತರ ಅವನೂ ಅಲ್ಲಿಗೆ ಬಂದು ನನ್ನನ್ನು ಸೇರಿಕೊಳ್ಳಬಹುದು, ಎಂಬುದು ನನ್ನ ದೃಢವಾದ ಅಭಿಪ್ರಾಯವಾಗಿತ್ತು.

ನನಗೆ ಜೇಮಷೆಡ್ಪೂರಿನಲ್ಲಿ ದೇವಿ ಎಂಬ 'ಪ್ಯಾರಾಪ್ಲೆಜಿಕ್' ಹುಡುಗಿಯ ಸ್ನೇಹವಾಯಿತು. ಅವಳು ಒಂದು ಬಸ್ ಗಳ 'ಬಾಡಿ ಬಿಲ್ಡಿಂಗ್ ವರ್ಕ್‌ಷಾಪ್' ನಡೆಸುತ್ತಿದ್ದಳು ಮತ್ತು ಟಾಟಾ ಕಂಪನಿಯೊಂದಿಗೆ ವ್ಯಾಪಾರ ಮಾಡುತ್ತಿದ್ದಳು. ಅವಳು ನನ್ನನ್ನು ನಮ್ಮ ಮದುವೆಯಾಗುವ ದೇವಸ್ಥಾನಕ್ಕೆ ಕರೆದು ಕೊಂಡು ಹೋದಳು. ವೆಂಕಿಯ ಕೆಲವು ಮಿತ್ರರು ಆಗಲೇ ಅಲ್ಲಿದ್ದರು. ನನಗೆ ಇನ್ನೂ ಆತಂಕವಿತ್ತು. ನಾನು ಯಾರಿಗೂ ಈ ವಿಷಯ ಹೇಳಿರಲಿಲ್ಲ. ವೆಂಕಿ ಬಂಧುಗಳು ತಾವಾಗಿಯೇ ಬಂದಿದ್ದಾರೆ ಎಂದು ಹೇಳಿದ. ಈಗ ಹಿಂದಿರುಗಿ ಹೋಗುವಂತಿರಲಿಲ್ಲ. ನಮ್ಮ ಮನೆಯನ್ನು ಖಾಲಿಮಾಡಿ ನಮ್ಮ ಸಾಮಾನುಗಳೆಲ್ಲವನ್ನೂ

'ಪ್ಯಾಕ್' ಮಾಡಿ ಆಗಿತ್ತು. ಅಂದು ಮಧ್ಯಾಹ್ನ ನಾವು ಕಲ್ಕತ್ತೆಗೆ ಹೋಗಿ ಅಲ್ಲಿಂದ ಡಾರ್ಜಿಲಿಂಗಿಗೆ ಹೋಗುವುದಿತ್ತು.

ಮದುವೆಯ ಸಮಾರಂಭ ಕೆಲವೇ ನಿಮಿಷಗಳಲ್ಲಿ ಮುಗಿದು ಹೋಯಿತು. ನಾವು ಗಂಡ ಹೆಂಡತಿಯಾದೆವು. ವೆಂಕಿಯ ಮಿತ್ರರು ನಮ್ಮ ಖಾಲಿ ಮನೆಗೆ ನಮ್ಮೊಡನೆ ಬಂದರು. ಅವರಿಗೆ ನಾವು ಏನು ಕೊಡಬಹುದು ಎಂಬುದನ್ನೂ ನಾವು ಯೋಚಿಸಿರಲಿಲ್ಲ. ನಮ್ಮ 'ಜೀವ್ಸ್' ತಕ್ಷಣ ಸ್ವಲ್ಪ ಕೀರನ್ನು ಮಾಡಿ ಹೊರಗಿನಿಂದ ಸಿಹಿ ತಿಂಡಿಗಳನ್ನು ತಂದನು. ಎಲ್ಲರೂ ಖುಷಿಯಾಗಿತಿಂಡಿಗಳನ್ನು ಹಂಚಿಕೊಂಡು ತಿಂದರು. ನಂತರ ಅವರೆಲ್ಲಾ ಹೊರಟರು. ನಮ್ಮ ಮದುವೆಯ ಖರ್ಚು ಕೇವಲ ೧೦೦ ರೂಪಾಯಿಗಳಾಗಿತ್ತು, ಆದರೆ ಅದು ಶೇ ೧೦೦ ರಷ್ಟು ನಮ್ಮ ಜೀವನವನ್ನು ಬದಲಾಯಿಸಿತ್ತು.

* * *

# ಮಹಿಳೆ ಮತ್ತು ವಿಕಲಾಂಗತೆ

ಕೆಲವು ಸಲ ನನಗೆ ನಾನು ನನ್ನ ಕಥೆಯನ್ನು ನನ್ನ ಸ್ವಾರ್ಥದ ಕಾರಣಕ್ಕೋಸ್ಕರ ಹೇಳುತ್ತಿದ್ದೇನೆಯೇ ಎಂಬ ಯೋಚನೆ ಬರುತ್ತದೆ – ಯಾಕೆಂದರೆ ಈ ರೀತಿ ಕಥೆಯನ್ನು ಹೇಳುವುದು, ಮನಸ್ಸಿನಿಂದ ಎಲ್ಲವನ್ನೂ ಹೊರಗೆ ಹಾಕಿ ನಮ್ಮೊಳಗೆ ನಾವು ದಶಕಗಳಿಂದ ಕಟ್ಟಿಕೊಂಡು, ಜೋಪಾನವಾಗಿ ಕಾಪಾಡುತ್ತಿರುವ ಗಂಟುಗಳನ್ನೂ, ಗೋಜುಗಳನ್ನೂ ಬಿಡಿಸುತ್ತದೆ, ಎಂದು ಹೇಳುತ್ತಾರೆ. ಹೇಳಿ ಕೇಳಿ ಎಲ್ಲರ ಜೀವನದಲ್ಲಿಯೂ ಬರುವ ಭಾವನೆಗಳು ಮತ್ತು ಸನ್ನಿವೇಶಗಳು, ಪ್ರೀತಿ ಮತ್ತು ದ್ವೇಷಗಳು, ಸುಖ ದುಃಖಗಳು, ವಿಜಯ ಮತ್ತು ಪರಾಜಯಗಳು, ಹೆಚ್ಚು ಕಮ್ಮಿ ಒಂದೇರೀತಿಯವು ಅಲ್ಲವೇ? ವ್ಯತ್ಯಾಸವೇನೆಂದರೆ ಅವನ್ನು ನಾವು ಹೇಗೆ ಎದುರಿಸಿದ್ದೇವೆ ಎಂಬುದು, ನಮ್ಮ ನಮ್ಮ ವಿಕಲಾಂಗತೆಗಳನ್ನೂ ಮೀರಿ. ನಮ್ಮ ಸುತ್ತಲೂ ನೋಡಿದರೆ, ವಿಕಲಾಂಗತೆಯು ಹಸಿವು, ಶೋಷಣೆ ಅಥವಾ ಯುದ್ಧದಂತೆಯೇ. ಅದು ನಮ್ಮ ಮನೆಯ ನಾಲ್ಕು ಗೋಡೆಗಳ ಒಳಗೆ ಪ್ರವೇಶಿಸದಿದ್ದರೆ, ನಾವು ಅದು ಎಲ್ಲೋ ದೂರದಲ್ಲಿ ನಡೆಯುತ್ತಿರುವ ಮತ್ತು ನಮ್ಮ ಜೀವನಕ್ಕೆ ಸಂಬಂಧವಿಲ್ಲದಿರುವ, ನಮಗೆ ಅರ್ಥವಾಗದಿರುವ ವಿಷಯವೆಂದು ತಿಳಿದುಕೊಳ್ಳುತ್ತೇವೆ. ಆದರೆ ಆ ಕಠೋರವಾದ ಸತ್ಯವು ಇದ್ದೇ ಇರತ್ತದೆ. ನೀವು ಈಗ ಕಾಲವು ಬದಲಾಗಿದೆ, ಈಗ ವಿಕಲಾಂಗರ ಜೀವನದಲ್ಲಿ ಈ ರೀತಿಯ ಕಷ್ಟಗಳು ಇಲ್ಲವೆಂದು ಯೋಚಿಸಿದರೆ ಅದಕ್ಕಿಂತ ದೊಡ್ಡ ತಪ್ಪು ಇಲ್ಲ. ಪ್ರಪಂಚದಲ್ಲಿ ಅತ್ಯಂತ ಕಷ್ಟದಲ್ಲಿರುವವರು ವಿಕಲಾಂಗತೆಯೊಡನೆ, ಬಡತನದಲ್ಲಿಯೂ ಇರುವ ಹೆಂಗಸರು.

ಈ ವಿಷಯದಲ್ಲಿ ತಜ್ಞರೂ ಮತ್ತು ಸಮಾಜ ಕಾರ್ಯಕರ್ತರೂ ಆದ ಶ್ರೀಮತಿ ಇಂದುಮತಿ ರಾವ್ ಅವರು ಹಿಂದುಳಿದ ಪ್ರದೇಶಗಳಲ್ಲಿ ವಿಕಲಾಂಗರಾದ ಬಡಹೆಂಗಸರು, ಯಾರ ನೆರವಿನಿಂದ ಜೀವನ ನಡೆಸುತ್ತಾರೋ ಆ ಪುರುಷರಿಂದಲೇ ಶೋಷಣೆಗೆ ಗುರಿಯಾಗುವುದರ ಬಗ್ಗೆ ಪದೇ ಪದೇ ನಮ್ಮ ಗಮನವನ್ನು ಸೆಳೆದಿದ್ದಾರೆ. ನಡೆದಾಡಲಾಗದ ವಿಕಲಾಂಗ ಹೆಂಗಸರನ್ನು ಅವರ ಮನೆಯ ಗಂಡಸರು ಎತ್ತಿಕೊಂಡು 'ಟಾಯ್ಲೆಟ್ಟಿಗೆ' ಅಥವಾ ಬಯಲಿಗೆ, ಕರೆದುಕೊಂಡು ಹೋಗಬೇಕು. ಅವರ ಜೀವನದೊಳಗೆ ನಾವು ಹೊಕ್ಕು ನೋಡಿದರೆ, ಸಹಾಯ ಮಾಡುವ ನೆಪದಲ್ಲಿ ನಡೆಯುವ ಇವರ ಲೈಂಗಿಕ ಶೋಷಣೆಯು ತಿಳಿಯುತ್ತದೆ. ಈ ಶೋಷಿತ ಮಹಿಳೆಯರು ಕೂಗಿಕೊಂಡು ಗಲಾಟೆ ಮಾಡಿದರೆ ಅವರಿಗೆ ಸಹಾಯ ಮಾಡುವವರು ಯಾರೂ ಇರುವುದಿಲ್ಲ. ಮೌನವಾಗಿದ್ದರೆ

ಈ ಶೋಷಣೆಯನ್ನು ಒಪ್ಪಿಕೊಂಡು ಅದರೊಡನೆ ಜೀವಿಸುವಂತಾಗುತ್ತದೆ. ಅವರಿಗೆ ಮದುವೆಯ ಬಗ್ಗೆ ಯೋಚಿಸಲೂ ಸಾಧ್ಯವಿಲ್ಲ.

ನನಗೆ ತಿಳಿದ ಅನೇಕ ವಿಕಲಾಂಗ ಮಹಿಳೆಯರು ಮದುವೆಯಾಗಿಲ್ಲ, ಮದುವೆಯಾಗುವ ಯೋಚನೆಯೂ ಅವರಿಗಿಲ್ಲ. ಕೆಲವರು ಮನೆಯವರು ಗೊತ್ತು ಮಾಡಿದ ಮದುವೆಯ ಪದ್ಧತಿಯು ಅವರಿಗೆ ಮದುವೆಯ ಅವಕಾಶವನ್ನು ತಪ್ಪಿಸಿದೆ ಎಂದು ತಿಳಿದು ಕೊಂಡಿದ್ದಾರೆ. ಮತ್ತೆ ಕೆಲವರು ಈ ಪದ್ಧತಿಯನ್ನು ಮೀರಿ ಮದುವೆಯಾಗಿ ಮಕ್ಕಳೊಡನೆ ಸುಖವಾಗಿದ್ದಾರೆ. ನನಗೆ ನನ್ನ ಪ್ರೀತಿಗೋಸ್ಕರ ಮದುವೆಯಾಗಬೇಕಿತ್ತು, ನನಗೆ ಮಕ್ಕಳು ಬೇಕೆಂಬ ಆಸೆ ಇರಲಿಲ್ಲ, ವೆಂಕಿ ಮತ್ತು ನಾನು ಈ ವಿಷಯದಲ್ಲಿ ಬಹಳ ಸ್ಪಷ್ಟವಾದ ನಿಲುವನ್ನು ಹೊಂದಿದ್ದೆವು, ಅದೂ ಆ ಹುಟ್ಟುವ ಮಗುವಿಗೆ ದೃಷ್ಟಿದೋಷವು ಬರಬಹುದು ಎನ್ನುವುದರಿಂದ. ಆಗ ನಮಗೆ ಈ ವಿಷಯದಲ್ಲಿ ಸಲಹೆ ಕೊಡಬಲ್ಲ ಯಾವ ಸಂಸ್ಥೆಯೂ ಇರಲಿಲ್ಲ. ಇಂದಿಗೂ ನಮ್ಮ ಹಳ್ಳಿಗಳಲ್ಲಿ – ಎಲ್ಲಿ ಅದರ ಅವಶ್ಯಕತೆ ಹೆಚ್ಚೋ ಅಲ್ಲಿ – ಈ ರೀತಿಯ ಸೌಲಭ್ಯವಿಲ್ಲ.

ಎ.ಪಿ.ಡಿ.ಯಲ್ಲಿ ಕಳೆದ ಅನೇಕ ವರ್ಷಗಳಲ್ಲಿ ನಾನು ಅನೇಕ ವಿಕಲಾಂಗ ಮಹಿಳೆಯರನ್ನು ಕಂಡಿದ್ದೇನೆ ಮತ್ತು ಅವರ ಕಥೆಗಳನ್ನು ಕೇಳಿದ್ದೇನೆ. ಅವಲ್ಲೆಲ್ಲಾ ನಮ್ಮ ಊಹೆಗೂ ಮೀರಿದ ಶೋಷಣೆ, ಒಬ್ಬಂಟಿಗರಾಗಿರುವುದು, ಬೆಳೆಯಲು ಅವಕಾಶದಿಂದ ವಂಚಿತರಾಗಿರುವುದು, ಈ ರೀತಿಯ ವಿಷಯಗಳೇ ಪುನರಾವರ್ತಿಸುತ್ತವೆ. ಕೆಲವರು ಇವೆಲ್ಲವನ್ನೂ ಮೀರಿ, ಯಶಸ್ವಿಗಳಾಗಿ ಇತರರಿಗೆ ದಾರಿದೀಪದಂತಾಗಿದ್ದಾರೆ. ಇನ್ನು ಕೆಲವರು ದೈಹಿಕ, ಮಾನಸಿಕ, ಸಾಮಾಜಿಕ ಒತ್ತಡಗಳಿಗೆ ಬಲಿಯಾಗಿದ್ದಾರೆ. ನಾನು ನಿಮ್ಮೊಡನೆ ಈ ರೀತಿಯ ಕೆಲವು ಕಥೆಗಳನ್ನು ಹಂಚಿಕೊಳ್ಳಲು ಇಷ್ಟಪಡುತ್ತೇನೆ, ಯಾಕೆಂದರೆ ಅದನ್ನು ಕೇಳಿದರೆ ನಿಮಗೇ ನಮ್ಮ ದೇಶದಲ್ಲಿರುವ ಪರಿಸ್ಥಿತಿ ಏನು ಮತ್ತು ಅದನ್ನು ಸುಧಾರಿಸಲು ನಾವು ಇನ್ನೂ ಎಷ್ಟು ದೂರ ಹೋಗಬೇಕು ಎನ್ನುವುದು ತಿಳಿಯುತ್ತದೆ. ನನಗೆ ಮಧ್ಯಮ ವರ್ಗದ ಅನೇಕ ಹೆಂಗಸರು ಗೊತ್ತು. ಇವರು ಓದಿದ್ದಾರೆ, ಆದರೂ ಇವರಿಗೆ ತಮ್ಮ ಕುಟುಂಬದವರೊಂದಿಗೆ ತಮ್ಮ ಕಷ್ಟಗಳನ್ನು ಬಿಚ್ಚು ಮನಸ್ಸಿನಿಂದ ಹೇಳಿಕೊಳ್ಳಲಾಗುವುದಿಲ್ಲ. ಇವರು ತಮ್ಮ ಇಡೀ ಜೀವನ ಇತರರ ಮನಸ್ಸಿಗೊಪ್ಪುವಂತೆ ಅಥವಾ ಇತರರು ಹೇಳಿದಂತೆ ಸವರಿಸಿಕೊಂಡು ಹೋಗುತ್ತಾರೆ. ನಾನು ಈ ರೀತಿಯ ಕೆಲವರ ಜೀವನದಲ್ಲಿ ಬದಲಾವಣೆ ತರುವುದರಲ್ಲಿ ಸಹಾಯಕಳಾಗಿದ್ದೇನೆ. ನಾನು ಆಗಾಗ ಅವರನ್ನು ನನ್ನೊಡನೆ ಇರುವುದಕ್ಕೆ ಕರೆಯುತ್ತಿದ್ದೆ ಅಥವಾ ಅವರು ಅವರ ಮನೆಯವರಿಲ್ಲದಿದ್ದಾಗ ನನ್ನೊಡನೆ ಮನಬಿಚ್ಚಿ ಮಾತನಾಡುವಂತೆ 'ಪಿಕ್ನಿಕ್' ಏರ್ಪಾಡು ಮಾಡುತ್ತಿದ್ದೆ.

ನನಗೆ ನನ್ನದೇ ಬೆಟ್ಟದಷ್ಟು 'ಪ್ರಾಬ್ಲಮ್'ಗಳಿದ್ದವು. ನಾನು ನಿಧಾನವಾಗಿ ನನ್ನ ದೈನಂದಿನ ಕೆಲಸಗಳನ್ನು ನಾನೇ ಮಾಡಿಕೊಳ್ಳಲು ಕಲಿತುಕೊಳ್ಳುತ್ತಿದ್ದೆ. ವಿಕಲಾಂಗರಿಗೆ ಚಿಕ್ಕ ಪುಟ್ಟ ಕೆಲಸಗಳೂ ದೊಡ್ಡ ಸಮಸ್ಯೆಯಾಗಿ ತೋರುತ್ತದೆ. ನಾನು ಚಿಕ್ಕವಳಾಗಿದ್ದಾಗ ಉದ್ದದ ಲೂಸಾಗಿರುವ ಪೈಜಾಮಾ ಹಾಕಿಕೊಳ್ಳುತ್ತಿದ್ದೆ. ನಾನು ದಿನವಿಡೀ ಅದರೊಂದಿಗೆ ತೆವಳುತ್ತಿದ್ದರಿಂದ ಅದು ಕೊಳೆಯಾಗುತ್ತಿತ್ತು. ನಾನು ದೊಡ್ಡವಳಾದ ಮೇಲೆ ಲಂಗ ಧಾವಣಿ ನನ್ನ ಉಡುಪಾಯಿತು. ಇದು ಬಹಳ ತೊಂದರೆ ಕೊಡುತ್ತಾಇತ್ತು ಮತ್ತು ಇದನ್ನು ಸಂಭಾಳಿಸುವುದು ಕಷ್ಟವಾಗಿತ್ತು. ನನಗೆ ಬಹಳ ಕೋಪ ಬರುತ್ತಿತ್ತು. ಅದೃಷ್ಟವಶಾತ್ ನನಗೆ ಮುಂಬೈಯಿನ ಹಾಜಿ ಅಲಿ ಆಸ್ಪತ್ರೆಯಲ್ಲಿ ಒಬ್ಬ ಕೆನಡಾ ದೇಶದ ಡಾಕ್ಟರ್ ಪರಿಚಯವಾಯಿತು. ಅವನು ನನ್ನನ್ನು ಪ್ಯಾಂಟ್ ಷರ್ಟ್ ಹಾಕಿಕೊಂಡು ಚಿಕಿತ್ಸೆಗೆ ಬರಹೇಳಿದ. ನನ್ನ ಕಸಿನ್ ನಾನು ಹಾಕಿಕೊಂಡು ನೋಡಲೆಂದು ಅಂಗಡಿಯಿಂದ ತಂದಿದ್ದ ಪ್ಯಾಂಟ್ ಷರ್ಟ್ ಹಾಕಿಕೊಂಡು ನೋಡಿದ ನಂತರ ನನಗೆ ಅವು ಎಷ್ಟು ಸೌಕರ್ಯ ಎಂದು ತಿಳಿಯಿತು. ಕಾಜಾ, ಗುಂಡಿಗಳು, ಹುಕ್ಕುಗಳು, ಜಿಪ್ ಇತ್ಯಾದಿಗಳು ಇರುವ ಬಟ್ಟೆಗಳು ವಿಕಲಾಂಗರಿಗೆ ಎಷ್ಟು ಕಷ್ಟ. ಇನ್ನೂ ಅನೇಕ ಮಹಿಳೆಯರು ಈ ರೀತಿಯ – ಇತರರಿಗೆ ಸರಿ ಎಂದು ತೋರುವ – ಉಡುಪುಗಳೊಡನೆ ಹೆಣಗಾಡುತ್ತಾರೆ. ನನಗೆ ದಟ್ಟವಾದ, ಗುಂಗರುಗಳುಳ್ಳ ಕೂದಲಿತ್ತು. ಇದು ನನ್ನ ಮಲಬಾರಿನ ಎಣ್ಣೆ ಮಸಾಜಿನ ನಂತರ ಇನ್ನೂ ದಟ್ಟವಾಯಿತು. ಅದನ್ನು ಬಾಚಿ ಹೆರಳು ಹಾಕುವುದು ದೊಡ್ಡ ಕೆಲಸವಾಗಿತ್ತು. ನನಗೆ ಅದನ್ನು ಅಮ್ಮ ಮಾಡಿದರೇನೇ ಸಮಾಧಾನ. ಆದರೆ ಕೆಲವುಸಲ ಅಮ್ಮನೂ ಕೈ ಬಿಡುತ್ತಿದ್ದಳು. ನಮ್ಮ ಅಜ್ಜಿ ಅಥವಾ ಮಮ್ಮೈ ನನ್ನ ಸಹಾಯಕ್ಕೆ ಬರುತ್ತಿದ್ದರು, ಆದರೆ ನಾನು ಅವರ್‍ಯಾರನ್ನೂ ನನ್ನ ತಲೆ ಬಾಚಲು ಬಿಡುತ್ತಿರಲಿಲ್ಲ. ಅಮ್ಮ ನನ್ನನ್ನು ತಲೆ ಬಾಚಿ, ಕೂದಲನ್ನು ನೆಟ್ಟಗೆ ಬಾಚಿಕೊಳ್ಳುವಂತೆ ಮಾಡುತ್ತಿದ್ದಳು – ಅದು ನನಗೆ ಒಂದು ಒಳ್ಳೆಯ ವ್ಯಾಯಾಮವೋ ಎಂಬಂತೆ. ನಮ್ಮ ತಂದೆ ನನ್ನನ್ನು ಕರೆದುಕೊಂಡು ಹೋಗಿ ನನ್ನ ಕೂದಲನ್ನು ಕತ್ತರಿಸುವಂತೆ ಅಮ್ಮನಿಗೆ ಹೇಳುತ್ತಿದ್ದರು, ಆದರೆ ಆಗಿನ ಕಾಲದಲ್ಲಿ ಹುಡುಗಿಯು ಕೂದಲನ್ನು ಕತ್ತರಿಸಿಕೊಳ್ಳುವುದು ಎಂಬುದನ್ನು ಯಾರೂ ಯೋಚಿಸುತ್ತಲೂ ಇರಲಿಲ್ಲ. ಕೆಲವು ದಿನ ನಮ್ಮ ಮನೆಯ ಕೆಲಸದವಳು ನನಗೆ ತಲೆ ಬಾಚುತ್ತಿದ್ದಳು. ಆದರೆ ಅವಳಿಗೆ ಮದುವೆಯಾಯಿತು. ಮತ್ತೆ ನಾನು ಯಥಾಸ್ಥಿತಿಗೆ ಬಂದೆ. ಮತ್ತೆ ಅಮ್ಮ ನನ್ನ ಸಹಾಯಕ್ಕೆ ಬಂದರು, ಆದರೆ ಅಷ್ಟು ಹೊತ್ತಿಗೆ ನನಗೆ ಸಾಕಾಗಿ ಹೋಗಿತ್ತು. ೧೯೬೩ ರಲ್ಲಿ ನಾನು ಮುಂಬೈಯಲ್ಲಿ, ಮನೆಯವರೆಲ್ಲರಿಂದ ದೂರವಿದ್ದಾಗ, ತಾಜ್ ಹೋಟಲಿಗೆ ಹೋಗಿ ಕೂದಲನ್ನು ಕತ್ತರಿಸಿಕೊಂಡೆ. ಆ ಹೇರ್ ಡ್ರೆಸ್ಸರ್‌ಗೆ ಕೂಡ ಕತ್ತರಿಸಲು ಇಷ್ಟವಿರಲಿಲ್ಲ, ಆದರೆ ನಾನು

ಹಠಮಾಡಿದೆ. ಕಳೆದ ೫೦ ವರ್ಷಗಳಲ್ಲಿ ಸಾಕಷ್ಟು ಬದಲಾವಣೆಗಳಾಗಿವೆ. ಈಗ ಯಾರೂ ಮತ್ತೊಬ್ಬರ ವೇಷ ಭೂಷಣದ ಬಗ್ಗೆ ಗಮನ ಕೊಡುವುದಿಲ್ಲ. ಆದರೂ ಇನ್ನೂ ಕೆಲವು ಮನೆಗಳಲ್ಲಿ ಅರ್ಥವಿಲ್ಲದೆ ಹಳೆಯ ಪದ್ಧತಿಗಳಿಗೆ ಅಂಟಿಕೊಂಡಿರುತ್ತಾರೆ.

* * *

ಪ್ರಿಯ ಒಂದು ಸಂಪ್ರದಾಯಸ್ಥ ಕುಟುಂಬಕ್ಕೆ ಸೇರಿದ ಹುಡುಗಿ. ಅವಳಿಗೆ ಎರಡು ಮೂರು ವರ್ಷಗಳಾಗಿದ್ದಾಗಲೇ ಪೋಲಿಯೋ ಕಾಯಿಲೆ ಬಂದಿತು.ಅವಳಿಗೆ ಇಬ್ಬರು ಸಹೋದರರು ಮತ್ತು ಒಬ್ಬಳು ಸಹೋದರಿ. ಅವಳ ಕುಟುಂಬ ಬಹಳ ಸಂಪ್ರದಾಯಸ್ಥರು, ಆದರೂ ಸರ್ಕಾರಿ ನೌಕರಿಯಲ್ಲಿದ್ದ ಅವಳ ತಂದೆ, ಅವಳ ವಿಕಲಾಂಗ ಸ್ಥಿತಿಯಲ್ಲೂ ಅವಳನ್ನು ಸ್ಕೂಲಿಗೆ ಸೇರಿಸಿದರು. ಕಾಲೇಜಿನಲ್ಲಿ ಓದಿ ಪದವಿ ಪಡೆದ ನಂತರ ಪ್ರಿಯಳಿಗೂ ಅವಳ ತಂದೆಯು ಕೆಲಸ ಮಾಡುತ್ತಿದ್ದ ಇಲಾಖೆಯಲ್ಲಿ ಸರ್ಕಾರಿ ನೌಕರಿ ದೊರೆಯಿತು. ಅವಳಿಗೆ ಎ.ಪಿ.ಡಿ.ಯ ಬಗ್ಗೆ ತಿಳಿದಾಗ ಪ್ರಿಯಳಿಗೆ ಇಪ್ಪತ್ತು ವಯಸ್ಸಿರಬಹುದು. ಆದರೆ ಅವಳಿಗೆ ನನ್ನ ಬಗ್ಗೆ ಕೇಳಿದ್ದ ಸಮಾಚಾರವು ಸ್ವಲ್ಪ ಹೆದರಿಕೆಯುಂಟು ಮಾಡಿತ್ತು. ನಮ್ಮ ಓರ್ವ ಕೆಲಸಗಾರರು ನಾನು ಆರೀತಿಯ ಪೆಡಂಭೂತವೇನೂ ಅಲ್ಲ ಎಂದು ಹೇಳಿದಮೇಲೆ ಅವಳು ನನ್ನನ್ನು ಬಂದು ಭೇಟಿ ಮಾಡಿದಳು. ಕ್ರಮೇಣ ನಾನು ಮತ್ತು ಪ್ರಿಯ ಬಹಳ ಸ್ನೇಹಿತರಾದೆವು.

ಪ್ರಿಯ ಮೆದುವಾಗಿ ಮಾತಾಡುತ್ತಿದ್ದಳು. ಹೊಲಿಗೆ ಮತ್ತು ಕಸೂತಿ ಕೆಲಸವೆಂದರೆ ಅವಳಿಗೆ ಬಹಳ ಪ್ರಿಯ. ಅವಳು ಬಹಳ ಉತ್ಸಾಹಿ, ಎಲ್ಲವನ್ನೂ ತಿಳಿದುಕೊಳ್ಳಬೇಕೆಂಬ ಕುತೂಹಲ.ಎಷ್ಟು ಅಪಸ್ವರವಾಗಿ ಹಾಡುವಳೆಂದರೆ ನಾನು ಅವಳನ್ನು 'ಸಾಕಮ್ಮ ನಿಲ್ಲಿಸು' ಎಂದು ಕೇಳಿಕೊಳ್ಳುತ್ತಿದ್ದೆ. ಅವಳು ಬಹಳ ಚೆನ್ನಾಗಿ ಅಡಿಗೆ ಮಾಡುತ್ತಿದ್ದಳು ಮತ್ತು ಅನೇಕ ಅಡಿಗೆಯ ಸ್ಪರ್ಧೆಗಳಲ್ಲಿ ಬಹುಮಾನಗಳನ್ನು ಗೆದ್ದಿದ್ದಳು. ಅವಳ ಕುಟುಂಬದವರು ಅವಳಿಗೆ ಬಹಳ ನೆರವಾಗಿದ್ದರು. ಅವಳನ್ನು ಎಲ್ಲಾ ಸ್ಥಳಗಳಿಗೂ ಕರೆದುಕೊಂಡು ಹೋಗುತ್ತಿದ್ದರು ಮತ್ತು ಅವಳ ಸಹೋದರರು ಅವಳಿಗೋಸ್ಕರ ಏನು ಬೇಕಾದರೂ ಮಾಡಲು ತಯಾರಾಗಿದ್ದರು. ನಾವಿಬ್ಬರೂ ನನ್ನ ಮತ್ತೊಂದು ಗೆಳತಿಯೊಡನೆ ಬಹಳ ಸಮಯವನ್ನು ಕಳೆಯುತ್ತಿದ್ದೆವು. ನಾವು ಸೇರಿದಾಗ ವಿಕಲಾಂಗರ ಸಮಸ್ಯೆಗಳಬಗ್ಗೆ ಏನು ಮಾಡಬಹುದು ಎಂಬುದಾಗಿ ಚರ್ಚಿಸುತ್ತಿದ್ದೆವು. ನಾವು ಪ್ರಿಯಳನ್ನು ಅವಳ ಮನೆಯಲ್ಲಿರುವ 'ಟಾಯ್ಲೆಟ್' ಬಗ್ಗೆ ವಿಚಾರಿಸುತ್ತಿದ್ದೆವು. ಅವರ ಮನೆಯಲ್ಲಿ ಮನೆಯ ಹೊರಗೆ 'ಟಾಯ್ಲೆಟ್' ಕಟ್ಟಿದ್ದರು. ಅದಕ್ಕೆ ಮೆಟ್ಟಿಲುಗಳನ್ನು ಹತ್ತಿ ಹೋಗಬೇಕಿತ್ತು. ಒಂದು ದಿನ ಪ್ರಿಯ ಅಳಲು ಪ್ರಾರಂಭಿಸಿ

ತನ್ನ ಕಷ್ಟವನ್ನು ತೋಡಿಕೊಂಡಳು. ಅವಳಿಗೆ ಅವರ ಮನೆಯ 'ಟಾಯ್ಲೆಟ್' ಗೆ ಹೋಗಲು ಆಗುತ್ತಲೇ ಇರಲಿಲ್ಲ. ಅವಳನ್ನು ಸ್ನಾನದ ಮನೆಗೂ ಯಾರಾದರೂ ಎತ್ತಿಕೊಂಡು ಹೋಗಬೇಕಾಗಿತ್ತು, ಅವಳು ಅಲ್ಲೇ 'ಟಾಯ್ಲೆಟ್' ಕೆಲಸವನ್ನೂ ಮುಗಿಸಿಕೊಳ್ಳುತ್ತಿದ್ದಳು. ಇದು ಕಳೆದ ನಲವತ್ತು ವರ್ಷಗಳಿಂದ ನಡೆಯುತ್ತಿತ್ತು. ನಮಗೆ ಕೇಳಿ ಆಶ್ಚರ್ಯವಾಯಿತು. ಸಂಪ್ರದಾಯಸ್ಥ ಬ್ರಾಹ್ಮಣರಮನೆಯಲ್ಲಿ ಇದು ಹೇಗೆ ಸಾಧ್ಯ?

ನಾನು ಪ್ರಿಯಳಿಗೆ ಇದು ಅವಳದ್ದೇ ತಪ್ಪು, ಅವಳು ತನ್ನ ಕಷ್ಟವನ್ನು ಬಾಯಿಬಿಟ್ಟು ಹೇಳಬೇಕಿತ್ತು ಎಂದೆ. ಬೇಕಾದರೆ ನನ್ನ ಕಸಿನ್ನಿನ ಹೆಂಡತಿ ನಿರ್ಮಲ ಆರ್ಕಿಟೆಕ್ಟ್, ಅವಳಿಗೆ ಹೇಳಿ ನಿಮ್ಮ ಮನೆಗೆ ಒಂದು 'ಟಾಯ್ಲೆಟ್' ಡಿಸೈನ್ ಮಾಡಿಸಿ ಕೊಡುತ್ತೇನೆ ಎಂದೆ. ಅವರ ಮನೆ ದೊಡ್ಡದಾಗಿತ್ತು ಮತ್ತು ಅದರಲ್ಲಿ ಸುಲಭವಾಗಿ ಒಂದು 'ಟಾಯ್ಲೆಟ್' ಕಟ್ಟಲು ಸಾಕಷ್ಟು ಸ್ಥಳವಿತ್ತು. ಪ್ರಿಯ ಮನೆಗೆ ಹೋಗಿ ಈ ವಿಷಯವನ್ನು ಪ್ರಸ್ತಾಪಿಸಿದಾಗ ಅವರಿಗೆ ಅಸಮಾಧಾನವಾಯಿತು. ಅವರಿಗೆ ಪ್ರಿಯ ನನ್ನ ಜೀವನ ಶೈಲಿಯನ್ನು ನೋಡಿ ಅದನ್ನು ನಕಲು ಮಾಡಲು ಪ್ರಾರಂಭಿಸಿದ್ದಾಳೆ ಎಂದು ಅನಿಸಿತ್ತು.

ನಾನು ಪ್ರಿಯಳನ್ನು ಕೆಲವು ತಿಂಗಳು ನೋಡಲಿಲ್ಲ. ನಂತರ ಒಂದು ದಿನ ಅವಳು ನನಗೆ ಫೋನ್ ಮಾಡಿದಳು. ಅವಳ ಧ್ವನಿಯಲ್ಲಿ ಬಹಳ ಉತ್ಸಾಹವಿತ್ತು. ಅವರ ಮನೆಯನ್ನು ಒಬ್ಬ ಆರ್ಕಿಟೆಕ್ಟ್ ಕೆಡಹಿ ಹೊಸದಾಗಿ ಕಟ್ಟಿಕೊಡುವುದಾಗಿಯೂ, ಮತ್ತು ಅದರಲ್ಲಿ ಅವಳಿಗೆ ಬೇಕಾದ ಸೌಕರ್ಯಗಳನ್ನು ಒದಗಿಸುವುದಾಗಿಯೂ ಹೇಳಿದ್ದಾನೆ ಎಂದಳು. ನನಗೆ ಸ್ವಲ್ಪ ಹಿಂಜರಿಕೆ. ಆ ಮನೆಗೆ ಬೇಕಾದದು ಒಂದು ಟಾಯ್ಲೆಟ್ ಮಾತ್ರ, ಅದಕ್ಕೆ ಇಡೀ ಮನೆಯನ್ನೇ ಒಡೆದು ಮತ್ತೆ ಯಾಕೆ ಕಟ್ಟಬೇಕು? ಆದರೆ ಅವಳ ನಿಶ್ಚಯ ಧೃಢವಾಗಿತ್ತು. ಇನ್ನೆರಡು ದಿನಗಳಲ್ಲಿ ಕೆಲಸ ಪ್ರಾರಂಭವಾಗುವುದಿತ್ತು. ಮನೆಯ ಕೆಲಸವಾಗುತ್ತಿದ್ದಾಗ, ಅವರು ಕೆಲವು ವರ್ಷಗಳು ಬಾಡಿಗೆಯ ಮನೆಯಲ್ಲಿದ್ದರು. ನಾನು ಅವಳನ್ನು ಹೊಸ ಮನೆಯಲ್ಲಿ ಅವಳಿಗೆ ಸೌಕರ್ಯವಾಗುವಂತೆ ಇಳಿಜಾರುಗಳನ್ನು ಕಟ್ಟುತ್ತಿದ್ದಾರೆಯೇ ಎಂದು ಕೇಳಿದೆ, ಅದಕ್ಕೆ ಅವಳು ಕೆಲಸಗಾರರು ಎಲ್ಲಾ ಅಳತೆಗಳನ್ನೂ ತೆಗೆದುಕೊಂಡಿದ್ದಾರೆ, ಅವರು ಎಲ್ಲವನ್ನೂ ಮಾಡುತ್ತಾರೆ ಎಂದಳು. ನಾನು ಸುಮ್ಮನಾದೆ. ಒಂದು ಟಾಯ್ಲೆಟ್ ಕಟ್ಟದರೆ ಸಾಕಾಗುತ್ತಿದ್ದ ಮನೆಗೆ ಈಗ ಎರಡು ಲಕ್ಷಕ್ಕೂ ಹೆಚ್ಚಿನ ಖರ್ಚು. ಒಂದು ದೊಡ್ಡ ಕಿಟಕಿ, ಅದರಿಂದ ಅವಳು ಹೊರಗಿನ ಪ್ರಪಂಚವನ್ನೆಲ್ಲಾ ನೋಡಬಹುದು. ನಾನು ಅವಳನ್ನು ರೋಮಿಯೋ ಜೂಲಿಯೆಟ್ ಎಂದು ಕೀಟಲೆ ಮಾಡುತ್ತಿದ್ದೆ. ಆದರೆ ನನಗೆ ಆ ಮನೆ ಕಟ್ಟಿದ ಮೇಲೆ ಅದು ಹೇಗಿರುತ್ತೆ ಎಂದು ನೋಡುವ ಕುತೂಹಲ. ಕೊನೆಗೂ ಆ ಮನೆ ತಯಾರಾಯಿತು ಮತ್ತು

ನಾವು ಅದರ ಗೃಹಪ್ರವೇಶಕ್ಕೆ ಹೋದೆವು. ಆದರೆ ನೋಡಿದಾಗ ಆಘಾತವಾಯಿತು. ಅಡಿಗೆ ಮನೆಯಲ್ಲಿ ಕತ್ತಲು, ಬೆಳಕು ಗಾಳಿಯೇ ಇಲ್ಲ. ಮೆಟ್ಟಿಲುಗಳ ತುದಿಯನ್ನು ಗುಂಡಗೆ ಮಾಡಿದ್ದರು ಆದರೆ ಇಳಿಜಾರುಗಳೇ ಇರಲಿಲ್ಲ. ವ್ಹೀಲ್ ಚೇರಿನಲ್ಲಿ ಮೇಲೆ ಕೆಳಗೆ ಹೋಗಲು ಸಾಧ್ಯವೇ ಇರಲಿಲ್ಲ. ಬಾತ್ ರೂಮಿನಲ್ಲಿ ಎಲ್ಲಾ ಸೌಕರ್ಯಗಳೂ ಒಂದು ಕಟ್ಟೆಯ ಮೇಲಿದ್ದವು, ಅಲ್ಲಿಗೆ ಹೋಗಲು ಸಾಧ್ಯವೇ ಇರಲಿಲ್ಲ. ನಾನು ಮೌನವಾಗಿ ಕುಳಿತೆ. ಅವಳಿಗೆ ಏನು ಹೇಳಲಿ?

ಅವಳಿಗೆ ಬಹಳ ಅಸಮಾಧಾನವಾಯಿತು. ಆದರೆ ನಾವು ಏನೂ ಮಾಡಲಾಗಲಿಲ್ಲ. ಇದೊಂದು ರೀತಿಯ ವಿಚಿತ್ರವಾದ ಸನ್ನಿವೇಶವಾಗಿತ್ತು. ಅವಳು ಚಿಕ್ಕವಳಾಗಿದ್ದಾಗ ಅವಳ ಕುಟುಂಬದವರು ಅವಳಿಗಾಗಿ ಎಲ್ಲವನ್ನೂ ಮಾಡಿದ್ದರು. ಆದರೆ ಈಗ? ನಾವು ಪ್ರಿಯಳನ್ನು ಅವಳ ಕೆಲಸವನ್ನು ಬಿಟ್ಟು ಬರೆಯಲು ಹೇಳಿದೆವು. ಅವಳುಕನ್ನಡದಲ್ಲಿ ಬಹಳ ಚೆನ್ನಾಗಿ ಬರೆಯುತ್ತಿದ್ದಳು.  ಬಹಳ ಚೆನ್ನಾಗಿ ಕವನಗಳನ್ನು ಬರೆಯುತ್ತಿದ್ದಳು ಆದರೆ ಅವಳಿಗೆ ಆತ್ಮವಿಶ್ವಾಸವೇ ಇರಲಿಲ್ಲ. ಅವಳು ಚೆನ್ನಾಗಿ ಏನಾದರೂ ಬರೆಯುತ್ತಿದ್ದಳು, ಆದರೆ ನಾನು ಅದನ್ನು ತೋರಿಸು ಎಂದರೆ ಏನಾದರೂ ನೆಪ ಹೇಳಿ ತೋರಿಸುತ್ತಿರಲಿಲ್ಲ. ಅವಳೊಂದು ದಿನ ನನ್ನಲ್ಲಿ ಬಂದು ಅವಳು ಓಡಾಡಲು ಆಗುವ ತೊಂದರೆಯ ಬಗ್ಗೆ ಹೇಳಿಕೊಂಡಾಗ ನಾನು ಅವಳಿಗೆ ಇದು ನೀನೇ ಮಾಡಿಕೊಂಡಿರುವ ಸಮಸ್ಯೆ. ನಿನ್ನ ಓಡಾಟದ ಬಗ್ಗೆ ನೀನು ಏನು ಅಧ್ಯಯನ ಮಾಡಿದ್ದೀಯ? ನಿನ್ನದೇ ಆದ ಒಂದು ಗಾಡಿಯ ಬಗ್ಗೆ ಯೋಚಿಸಿದ್ದೀಯಾ? ಎಂದು ಕೇಳಿದೆ. ಅವಳು ಎಂದೋ ತನ್ನ ತಂದೆಯಿಂದ ಸ್ವತಂತ್ರಳಾಗಿ ತನ್ನ ಜೀವನವನ್ನು ತಾನು ನಡೆಸುವುದನ್ನು ಕಲಿಯಬೇಕಿತ್ತು. ನಾನು ಅವಳ ಮೇಲೆ ಚೆನ್ನಾಗಿ ಕೂಗಾಡಿ ನಂತರ ಸುಮ್ಮನೆ ಕುಳಿತೆ. ಆಗ ಫೋನಿನ ಘಂಟೆ ಹೊಡೆಯಿತು. ಅವಳ ಅದೃಷ್ಟವೋ ಅಥವಾ ಹಣೆಯ ಬರಹವೋ. ನನ್ನ ಸ್ನೇಹಿತೆ ಚಿತ್ರಾ ಸುಬ್ರಮಣ್ಯಂ ಮದರಾಸಿನಿಂದ ಕರೆ ಮಾಡಿದಳು. ಅವಳು ರಾಜ್ ಬೇಡರ್ ಎಂಬುವನು ಮಾಡಿರುವ ಒಂದು ಮೂರು ಚಕ್ರದ ವಾಹನದ ಬಗ್ಗೆ ಗುಣಗಾನ ಮಾಡುತ್ತಿದ್ದಳು. ಅದನ್ನು ಸ್ಕೂಟರಿನಂತೆ ಸರಾಗವಾಗಿ ಓಡಿಸಬಹುದು, ಈ ರಾಜ್ ಬೇಡರ್ ಈದಕ್ಕೆ ಮೊದಲು ಒಬ್ಬ ಸೆರೆಬ್ರಲ್ ಪಾಲ್ಸಿ ಇರುವ ಹುಡುಗನಿಗೆ ಒಂದು ಮೋಟಾರ್ ಇರುವ ಟ್ರೈಸಿಕಲ್ ಬಹಳ ಯಶಸ್ವಿಯಾಗಿ ಮಾಡಿ ಕೊಟ್ಟಿದ್ದಾನೆ ಎಂದೆಲ್ಲಾ ಹೇಳಿ,ಅವನು ಇನ್ನೊಂದೇ ದಿವಸ ಮದರಾಸಿನಲ್ಲಿರುವುದರಿಂದ ನನ್ನನ್ನು ಕೂಡಲೇ ಬಂದು ಅವನನ್ನು ಭೇಟಿಯಾಗಲು ಹೇಳಿದಳು. ನನ್ನ ಹತ್ತಿರ ಅಂಬ್ಯಾಸಡರ್ ಕಾರಿತ್ತು ಮತ್ತು ನಮ್ಮ ನೆಚ್ಚಿನ ಡ್ರೈವರ್ ಜಾರ್ಜ್ ಇದ್ದ. ಆದರೆ ನಾನು ಪ್ರಿಯಳು ಅಲ್ಲಿಗೆ ಹೋಗಬೇಕು ಎಂದು ಹೇಳಿದೆ. ಅವಳು ಆಗುವುದಿಲ್ಲವೆಂದು ಅನೇಕ

ನೆಪಗಳನ್ನು ಒಡ್ಡಿದಳು. ನಮ್ಮ ತಂದೆಗೆ ಹೇಗೆ ಹೇಳುವುದು; ನನ್ನ ಹತ್ತಿರ ಹಣವಿಲ್ಲ; ಇತ್ಯಾದಿ, ಇತ್ಯಾದಿ. ನಾನು ಅವಳಿಗೆ ಟ್ರೈನಿನಲ್ಲಿ ಹೋಗು, ಯಾರಾದರೂ ಕೂಲಿ ನಿನ್ನನ್ನು ಎತ್ತಿ ಕಂಪಾರ್ಟ್‌ಮೆಂಟಿನಲ್ಲಿ ಕೂರಿಸುತ್ತಾನೆ ಎಂದು ಹೇಳಿ ಅವಳಿಗೆ ಸ್ವಲ್ಪ ಹಣ ಕೊಟ್ಟೆ. ಅವಳು ಮದರಾಸಿಗೆ ಹೋಗಿ ಬೇಡರ್ ಮಾಡಿರುವ ಗಾಡಿಯನ್ನು ನೋಡಿದಳು. ಬೇಡರ್ ಅದರಲ್ಲಿ ಅವಳ ಸೌಕರ್ಯಕ್ಕೆ ಸರಿಯಾಗಿ ಅವಳಿಗೆ ಬೇಕಾದ ಬದಲಾವಣೆಗಳನ್ನು ಮಾಡಿಕೊಟ್ಟನು. ಈ ವಾಹನವು ಅವಳ ಜೀವನ ಶೈಲಿಯನ್ನೇ ಬದಲಾಯಿಸಿತು – ಈಗ ಅವಳಿಗೆ ಎಲ್ಲವೂ ಕೈಗೆ ಸಿಗುವಂತಾಯಿತು.

ಪ್ರಿಯಳ ಕಥೆ ಎಲ್ಲಾ ವಿಕಲಾಂಗ ಮಹಿಳೆಯರಿಗೂ ಅನ್ವಯಿಸುವಂತಹುದು. ನಮ್ಮ ಸಮಾಜ ಮತ್ತು ಸಂಪ್ರದಾಯಗಳು ಒಂದು ಕಡೆ ಅವರನ್ನು ಕಟ್ಟಿ ಹಾಕಿದರೆ ಮತ್ತೊಂದು ಕಡೆ ಅವರ ಹೆದರಿಕೆ ಮತ್ತು ಹಿಂಜರಿಕೆ ಅವರನ್ನು ಹಿಡಿದು ಕಟ್ಟಿರುತ್ತದೆ. ಇವನ್ನು ಅವರು ಮೀರಿ ಬೆಳೆದರೇನೆ ಅವರು ಹೊರಗಿನ ಪ್ರಪಂಚವನ್ನು ಕಾಣಬಹುದು. ಮನೆಯಲ್ಲಿ ಮುಟ್ಟಾದ ದಿನಗಳಲ್ಲಿ ಅವಳು, ಆಗಿನ ಸಂಪ್ರದಾಯದಂತೆ ಎಲ್ಲರಿಂದ ದೂರವಿರಬೇಕಿತ್ತು. ಯಾರೂ ಅವಳ ತಲೆ ಬಾಚುತ್ತಿರಲಿಲ್ಲ. ನಾನು ಬಹಳ ಹೇಳಿದನಂತರ ಅವಳು ತನ್ನ ಕೂದಲನ್ನು ಕತ್ತರಿಸಿಕೊಂಡಳು. ಮನೆಯವರು ಬೇಸರಪಟ್ಟು ಕೊಂಡರು. ನಮ್ಮ ಭಾರತೀಯಮನೆಗಳಲ್ಲಿ ನಮ್ಮ ಸಾಂಪ್ರದಾಯಿಕ ಹಿಡಿತಗಳು ವಿಕಲಾಂಗರ ಕಷ್ಟಗಳನ್ನು ಪರಿಗಣಿಸುವುದೇ ಇಲ್ಲ.

ಅನೇಕ ಸಲನಾನು ವಿಕಲಾಂಗತೆಗೆ ಲಿಂಗಬೇದವೇ ಇಲ್ಲ ಎಂದು ಹೇಳಿದ್ದೇನೆ. ನಮ್ಮ ಕುಟುಂಬಗಳು ಈ ಹಳೆಯ ಸಂಪ್ರದಾಯಗಳನ್ನೂ, ಮತ್ತು ಅವುಗಳಲ್ಲಿ ಮಾಡಬಾರದು ಎಂದು ಹೇಳಿರುವುದನ್ನೂ ಬಿಟ್ಟುಬಿಡಬೇಕು. ಉದಾಹರಣೆಗೆ, ಮಹಿಳೆಯು ವಿಕಲಾಂಗಳಾದರೆ ಅವಳನ್ನು ಒಬ್ಬ ಪುರುಷ ಎತ್ತಿ ಕೊಳ್ಳುವುದನ್ನು ಹೇಗೆ ತಪ್ಪೆನ್ನಬಹುದು, ಅದೂ ಅವಳಿಗೆ ಇನ್ನೊಬ್ಬರ ಸಹಾಯ ಅಷ್ಟು ಬೇಕಾಗಿದ್ದಾಗ? ಈ ರೀತಿಯ ನಮ್ಮ ಸಾಮಾಜಿಕ ಪದ್ಧತಿಗಳು ವಿಕಲಾಂಗರಿಗೆ ಬಹಳ ಕಷ್ಟ ಕೊಡುತ್ತವೆ. ನನ್ನ ಅದೃಷ್ಟ ನನಗೆ ಈ ರೀತಿಯಾದ ಅನುಭವಗಳಾಗಲಿಲ್ಲ. ಆದರೆ ಎಲ್ಲರೂ ನನ್ನಷ್ಟು ಅದೃಷ್ಟವಂತರಲ್ಲವಲ್ಲ.

ನನಗೆ ಪ್ರಿಯ ಬಹಳ ಹಿಡಿಸ ತೊಡಗಿದಳು. ಒದು ದಿನ ಇದ್ದಕಿದ್ದಂತೆ ಅದೆಲ್ಲಾ ಮುಗಿದು ಹೋಯಿತು. ಅವಳು ಪ್ರಾಣ ಬಿಟ್ಟಳು. ಅವಳು ಹಿಂದಿನ ರಾತ್ರಿ ೧೧.೦೦ ಘಟೆಯ ವರೆಗೆ ಎಚ್ಚರವಾಗಿ ನಗುತ್ತಾ ಮಾತಾಡುತ್ತಾ ಇದ್ದಳಂತೆ, ಮಾರನೆಯ ಬೆಳಿಗ್ಗೆ ಅವಳು ಇಲ್ಲವೇ ಇಲ್ಲ. ಅವಳಿಗೆ ನಲವತ್ತೈದೇ ವಯಸ್ಸಾಗಿತ್ತು. ನಾನು ಅವಳ ಮನೆಯವರನ್ನು

ಅವಳ ಮರಣದನಂತರವೇ ಭೇಟಿಯಾದೆ. ಪ್ರಿಯಳ ಮರಣದ ಕೆಲವು ತಿಂಗಳುಗಳ ನಂತರ ಅವಳ ಸಹೋದರಿಯೂ ಹೃದಯದ ಕಾಯಿಲೆಯಿಂದ ಹೋಗಿಬಿಟ್ಟಳು. ಅವಳ ಸಹೋದರನೂ ಒಬ್ಬಳು ಬ್ರಾಹ್ಮಣೇತರ ಹುಡುಗಿ ಯಾರನ್ನೋ ಮದುವೆಯಾಗಿ ಬೇರೆ ಮನೆಗೆ ಹೊರಟು ಹೋಗಿದ್ದ. ಅವಳ ತಂದೆ ತಾಯಿ ಇಬ್ಬರೇ ಆ ಮನೆಯಲ್ಲಿದ್ದರು. ನಮ್ಮ ಸಂಪ್ರದಾಯ ಮತ್ತು ನಂಬಿಕೆಗಳಿಗೋಸ್ಕರ ನಾವು ಕೆಲವು ಸಲ ಹೇಗೆ ನಮ್ಮ ಮಕ್ಕಳೊಡನೆಯೇ ನಮ್ಮ ಸಂಬಂಧವನ್ನು ಹಾಳುಮಾಡಿಕೊಳ್ಳುತ್ತೇವೆ ಎಂಬುದನ್ನು ಯೋಚಿಸಿದರೆ ದುಃಖವಾಗುತ್ತದೆ.

ಪ್ರಿಯಳು ಹೋದಾಗ ನಾನು ಅಳಲಿಲ್ಲ. ನನಗೆ ಅವಳ ಸಾವು ಒಂದು ಮುಕ್ತಿ ಎಂದು ತೋರಿತು, ಆದ್ದರಿಂದ ಅಳುವುದು ಸರಿಯಲ್ಲ ಎನಿಸಿತು. ಆದರೆ ಅವಳು ಇಲ್ಲದೆ ನನಗೆ ಹರಟಲು ಅಥವಾ ನನ್ನ ಭಾವನೆಗಳನ್ನು ಹಂಚಿಕೊಳ್ಳಲು ಯಾರೂ ಇರಲಿಲ್ಲ. ಅವಳಿಗೆ ನನ್ನ ಮನೆಯ ಹತ್ತಿರ ಇರಬೇಕೆಂಬ ಆಸೆ ಇತ್ತು. ನಾನು ಅವಳಿಗೆ "ನೀ ಬಂದು ನನ್ನೊಡನೆ ಇರು ಮತ್ತು ನನ್ನ ಅಡುಗೆ ಮನೆಯನ್ನು ನೋಡಿಕೋ" ಎಂದು ಹೇಳಿದೆ. ಆದರೆ ಅವಳಿಗೆ ಅವಳ ಕುಟುಂಬವನ್ನು ಬಿಟ್ಟು ಬರುವುದು ಸಾಧ್ಯವಿರಲಿಲ್ಲ. ನನಗೆ ಈ ರೀತಿಯ ವಿಕಲಾಂಗರಿಗೋಸ್ಕರ ಚಿಕ್ಕ ಕುಟೀರಗಳನ್ನು ಕಟ್ಟಿ ಅದರಲ್ಲಿ ಅವರು ಮೂರರಿಂದ ಆರು ತಿಂಗಳುಗಳವರೆಗೆ ಇದ್ದು ಏ.ಪಿ.ಡಿ ಯಂತ ಸಂಸ್ಥೆಗಳಲ್ಲಿ ಕೆಲಸಮಾಡಲು ಅವಕಾಶವಿರಬೇಕು ಎಂದು ಅನಿಸುತ್ತಿತ್ತು. ನಾನು ಪ್ರಿಯಳಿಗೆ ಅವಳ 'ಆಫೀಸಿ'ನಲ್ಲಿ ವಿಕಲಾಂಗರಿಗೆ ಅನುಕೂಲವಾಗುವಂತ ಶೌಚಾಲಯವನ್ನು ಒದಗಿಸಲು ಬೇಡುವಂತೆ ಹೇಳಿದ್ದೆ. ಅವಳು ಈ ವಿಷಯವನ್ನು ಆ ಇಲಾಖೆಯ ಹಿರಿಯ ಅಧಿಕಾರಿಯೊಡನೆ ಪ್ರಸ್ತಾಪಿಸಿದ್ದಳು. ಸರ್ಕಾರದಲ್ಲಿ ಪ್ರಸ್ತಾಪಗಳು ಸಾಗುವ ವೇಗ ನಿಮಗೇ ಗೊತ್ತಲ್ಲ, ಪ್ರಿಯ ಸತ್ತ ದಿನ ಆ ಶೌಚಾಲಯವು ತಯಾರಾಯಿತು.

* * *

ಕೆಲವು ವರ್ಷಗಳ ನಂತರ ನಾನು ಏ.ಪಿ.ಡಿ.ಯಲ್ಲಿ ಸಮಾಜದ ಬಲೆಯಲ್ಲಿ ಸಿಕ್ಕಿಹಾಕಿಕೊಂಡ ಮತ್ತೊಬ್ಬ ಮಹಿಳೆಯನ್ನು ಸಂಧಿಸಿದೆ. ಅವಳು ಅವಳ ಮಗಳೊಡನೆ ಒಂದು ಕ್ಯಾಲಿಪರ್ ತೆಗೆದುಕೊಳ್ಳಲು ಬಂದಿದ್ದಳು. ಅವಳಿಗೆ ಚಿಕ್ಕ ವಯಸ್ಸಿನಲ್ಲೇ ಪೋಲಿಯೋ ಆಯಿತಂತೆ. ಆ ವಿಕಲಾಂಗತೆಯೊಡನೆ ಅವಳು ಅವಳ ಓದನ್ನು ಮುಗಿಸಿ ಒಂದು ಸರ್ಕಾರಿ ಕೆಲಸಕ್ಕೆ ಸೇರಿಕೊಂಡಳು. ಅವಳಿಗೆ ಮದುವೆಯಾಗುವ ಇಚ್ಛೆ ಇತ್ತು, ಆದರೆ ಅವಳ ವಿಕಲಾಂಗತೆಯ

ಕಾರಣ ಅವಳ ತಂದೆ ತಾಯಿಗೆ ಸರಿಯಾದ ವರ ಸಿಗಲಿಲ್ಲ. ಅವಳಿಗೆ ಮದುವೆಯಾಗಬೇಕು ಎಂಬ ಆಸೆ ಬಲವಾಯಿತು. ಅವಳು ಒಬ್ಬ ಮನುಷ್ಯನನ್ನು ಸಂಧಿಸಿದಳು. ಅವನಿಗೆ ಎರಡು ಮಕ್ಕಳಿದ್ದರು. ಹೆಚ್ಚೇನೂ ಸಂಪಾದಿಸುತ್ತಿರಲಿಲ್ಲ. ಆದರೆ ಅವನು ಮದುವೆಯಾಗಲು ಒಪ್ಪಿದ್ದರಿಂದ ಇವಳು ಅವೆಲ್ಲವನ್ನೂ ಮರೆತು ಅವನಿಗೆ ಕೃತಜ್ಞಳಾದಳು.

ಮದುವೆಯಾದ ನಂತರ ಆ ಮನುಷ್ಯ ಇವಳ ಹಣವನ್ನೆಲ್ಲಾ ತನ್ನ ವಶಕ್ಕೆ ತೆಗೆದುಕೊಂಡನು. ತನ್ನ ಸಾಲಗಳನ್ನು ತೀರಿಸಿ ತನ್ನ ಮಕ್ಕಳಿಗೆ ಮದುವೆ ಮಾಡಿದನು. ಈ ಮಧ್ಯೆ ಅವರಿಗೆ ಒಬ್ಬಳು ಮಗಳು ಹುಟಿದಳು. ಇವಳಿಗೆ ಆ ಮಗುವಿನ ಭವಿಷ್ಯಕ್ಕೆಂದು ಸ್ವಲ್ಪ ಹಣವನ್ನು ಕೂಡಿಡುವ ಆಸೆ ಇತ್ತು. ಆದರೆ ಆ ಮನುಷ್ಯನಿಗೆ ಅದರಲ್ಲಿ ಯಾವ ಆಸಕ್ತಿಯೂ ಇರಲಿಲ್ಲ. ಅವನಿಗೆ ಆ ಮಗುವಿನ ಬಗ್ಗೆ ಅಸಡ್ಡೆಯಿತ್ತು. ಅವನು ಅವನ ಸಂಪಾದನೆಯಲ್ಲೇ ತನ್ನ ಖರ್ಚುಗಳನ್ನು ಮಾಡಿಕೊಳ್ಳಬಹುದಾದರೂ, ಇವಳ ಹಣವನ್ನು ತನ್ನ ಖರ್ಚಿಗೆ ಬಳಸಿಕೊಂಡನು. ಪಾಪ, ಇವಳು ಮದುವೆಗಾಗಿ ಬಹಳ ದೊಡ್ಡ ಬೆಲೆಯನ್ನೇ ತೆತ್ತಳು.

ನಮ್ಮ ದೇಶದಲ್ಲಿ ಅನೇಕ ಸ್ಥಳಗಳಲ್ಲಿ ಒಂದು ಹೆಣ್ಣು ಮಗು ಹುಟ್ಟಿದೊಡನೆ ಅದಕ್ಕೆ ಮುಂದೆ ಆಗಬಹುದಾದ ಮದುವೆಯಮೇಲೆ ಅವಳ ಅಸ್ತಿತ್ವವನ್ನು ನಿರ್ಮಿಸುತ್ತಾರೆ. ಮದುವೆಯೇ ಜೀವನದ ದೊಡ್ಡ ಗುರಿ ಮತ್ತು ಜೀವನದ ಸುರಕ್ಷೆ. ನಂತರ, ಅವಳ ನ್ಯೂನತೆಗಳು ಗೋಚರವಾದಂತೆ, ಮದುವೆಗೆ ಕೇಳಬಹುದಾದ ವರ ಅಥವಾ ಆಡಂಬರವಾದ ಮದುವೆಯ ಖರ್ಚನ್ನು ಯೋಚಿಸಿ, ಅವಳು ದೊಡ್ಡ ಹೊರೆ ಎಂದು ಅವಳ ಮನೆಯವರಿಗೆ ಅನ್ನಿಸುತ್ತದೆ. ನಾವು ನಮ್ಮ ಸಮಾಜದ ಪ್ರಗತಿಯ ಬಗ್ಗೆ ಏನೇ ಹೇಳಿಕೊಂಡರೂ, ಕೆಲವು ವಿಷಯಗಳಲ್ಲಿ ನಾವು ಇನ್ನೂ ಶತಮಾನಗಳ ಹಿಂದಿದ್ದೇವೆ. ಈ ಮದುವೆಯ ಸುರಕ್ಷತೆಯ ಯೋಚನೆಯನ್ನು ಹೆಣ್ಣು ಮಕ್ಕಳ ತಲೆಯಲ್ಲಿ ತುಂಬುವುದು ಅವಳನ್ನು ನೊಗದ ಹಾಗೆ ಕಟ್ಟಿ ಹಾಕುತ್ತದೆ. ಮದುವೆಗೆ ಒತ್ತು ಕೊಡದೆ ಹೆಣ್ಣು ಮಗುವನ್ನು ಓದಿಸುವ ಕುಟುಂಬವು ಅವಳನ್ನು ಈ ಬಂಧನದಿಂದ ಬಿಡುಗಡೆ ಮಾಡಿ ಅವಳದ್ದೇ ಆದ ಆಸೆ, ಆಕಾಂಕ್ಷೆ ಮತ್ತು ಸ್ವಪ್ನವನ್ನು ಪೂರೈಸಲು ನೆರವಾಗುತ್ತದೆ. ನಾನು ಹೇಳಿದ ಹೆಂಗಸು ತನ್ನ ಗಂಡನಿಗಾಗಿ ಅಷ್ಟೆಲ್ಲಾ ತ್ಯಾಗವನ್ನು ಮಾಡಿ ಏನನ್ನೂ ಪಡೆಯಲಿಲ್ಲ. ಈಗ ಅವಳು ತನ್ನ ಗಂಡನ ಜೊತೆಯಲಿಲ್ಲ. ಒಬ್ಬಳೇ ತನ್ನ ಮಗಳನ್ನು ಬೆಳೆಸುತ್ತಾ ಇದ್ದಾಳೆ. ಆ ಹುಡುಗಿ ಚೂಟಿಯಾಗಿದ್ದಾಳೆ ಮತ್ತು ಚೆನ್ನಾಗಿ ಮಾತನಾಡುತ್ತಾಳೆ, ಆದರೆ ತನ್ನ ತಂದೆಯನ್ನು ಕಂಡರೆ ಇಷ್ಟವಿಲ್ಲ.

* * *

ಮಹಿಳೆಯರ ಶೋಷಣೆಯು ಅಪರೂಪವೇನಲ್ಲ. ಆದರೆ ಅವರು ವಿಕಲಾಂಗರಾಗಿ ಅವರ ಮನೆಯವರ ಮೇಲೆ ಅವಲಂಬಿಗಳಾದರೆ ಅವರು ಹೆಚ್ಚು ಶೋಷಣೆಗೆ ಈಡಾಗುತ್ತಾರೆ. ಒಂದುಸಲ ಒಬ್ಬ ವಿಕಲಾಂಗ ಯುವತಿ ನನ್ನಲ್ಲಿಗೆ ಒಂದು ವಿಚಿತ್ರವಾದ ಕೋರಿಕೆಯೊಂದಿಗೆ ಬಂದಳು. ಅವಳು ಒಂದು ನರ್ಸರಿ ಶಾಲೆಯಲ್ಲಿ ಕಳೆದ ಆರು ವರ್ಷಗಳಿಂದ ಕೆಲಸಮಾಡುತ್ತಿದ್ದಳು. ಅಲ್ಲಿನ ಡೈರೆಕ್ಟರ್ ನನಗೆ ಪರಿಚಯವಿದ್ದರಿಂದ ಅವಳ ಕೆಲಸವನ್ನು ಪರ್ಮನೆಂಟ್ ಮಾಡಲು ಒಂದು ಮಾತು ಹೇಳಲು ನನ್ನನ್ನು ಕೇಳಿಕೊಂಡಳು. ನಾನು ಆ ಡೈರೆಕ್ಟರನ್ನು ಕೇಳಿಕೊಂಡಾಗ ಅವರು ಅವಳ ಕೆಲಸವನ್ನು ಪರ್ಮನೆಂಟ್ ಮಾಡಿದರು.

ಕೆಲವು ವರ್ಷಗಳ ನಂತರ ಅವಳು ಮತ್ತೆ ನನ್ನಲ್ಲಿಗೆ ಬಂದಳು. ಅವಳಿಗೆ ವ್ಹೀಲ್ ಚೇರನ್ನು ಒಳಗೆ ತೆಗೆದುಕೊಂಡು ಹೋಗುವಂತ 'ಟಾಯ್ಲೆಟ್' ಇರುವ ಒಂದು ಪುರುಷರ ಹಾಸ್ಟೆಲ್ಲಿನಲ್ಲಿ ಸ್ಥಳಬೇಕಿತ್ತು. ಅವಳ ತಂದೆ ತಾಯಿಯರು ದೈವಾದೀನರಾದಾಗ, ಅವರಿದ್ದ ಮನೆಯು ಅವಳಿಗೆ ಬಂದಿತ್ತು. ಬಾಡಿಗೆಯ ಖರ್ಚು ಇರಲಿಲ್ಲ. ಆದರೆ ಅವಳ ಸಹೋದರನು ಕಾಲವಾದಾಗ, ಅವನ ಹೆಂಡತಿ ಮತ್ತು ಎರಡು ಹುಡುಗಿಯರು ಅವಳೊಡನೆ ವಾಸ ಮಾಡ ತೊಡಗಿದರು. ಅವಳು ಆ ದೊಡ್ಡಹುಡುಗಿಯ ಮದುವೆ ಮತ್ತು ಚಿಕ್ಕವಳ ಓದಿಗಾಗಿ ತನ್ನ ಪ್ರಾವಿಡೆಂಟ್ ಫಂಡ್ ಮೇಲೆ ಸಾಲ ತೆಗೆದು ಕೊಂಡು ಖರ್ಚು ಮಾಡಿದಳು. ಈಗ ಅವಳ ಮನೆಯವರು ಆ ಚಿಕ್ಕ ಮಗಳ ಮದುವೆಯ ಖರ್ಚನ್ನೂ ಅವಳೇ ಮಾಡಬೇಕೆಂದು ಎದುರು ನೋಡುತ್ತಿದ್ದರು, ಜೊತೆಗೆ ಅವಳ ಇನ್ನೊಬ್ಬ ತಮ್ಮನೂ ತನ್ನ ಸಂಸಾರದೊಂದಿಗೆ ಅವಳೊಡನೆ ಬಂದು ಇರುವುದಾಗಿ ಹೇಳತೊಡಗಿದನು. ವಿಕಲಾಂಗಳಾದ ಅವಳಿಗೆ ತನ್ನದಾದ ಜೀವನವೇ ಇಲ್ಲ, ಆದ್ದರಿಂದ ಅವಳು ತನ್ನ ವರಮಾನವೆಲ್ಲವನ್ನೂ ತನ್ನ ಮನೆಯವರ ಖರ್ಚಿಗೆ ಕೊಡಬಹುದು ಎಂಬುದು ಅವರ ಅಭಿಪ್ರಾಯ.

ಅದಕ್ಕೇ ಅವಳು ಬೇರೆ ಏನೂ ತೋಚದೆ ಹಾಸ್ಟೆಲ್ಲಿಗೆ ಹೋಗಿ ಇದ್ದರೆ ಅಲ್ಲಿ ಮನೆಯವರ ಕಾಟ ತಪ್ಪುತ್ತದೆ ಎಂದು ಯೋಚಿಸಿದಳು. ಅವಳು ತಾನು ಇನ್ನೂ ಹತ್ತು ವರ್ಷ ಬದುಕಬಹುದು ತನ್ನ ಕೊನೆಯ ದಿನಗಳಿಗಾಗಿ ಸ್ವಲ್ಪ ಹಣವನ್ನು ಕೂಡಿಡಲು ಯೋಚಿಸುತ್ತಿದ್ದೇನೆ ಎಂದು ನನಗೆ ಹೇಳಿದಾಗ ನನಗೆ ಬಹಳ ದುಃಖವಾಯಿತು. ಅವಳ 'ಪೆನ್‌ಷನ್' ಅವಳಿಗೆ ಜೀವನ ಸಾಗಿಸಲು ಸಾಕಾಗುತ್ತಿರಲಿಲ್ಲ.

* * *

ನಾನು ಪ್ರಮಿಳನನ್ನು ಹೇಗೆ ಮರೆಯಕ್ಕಾಗುತ್ತದೆ? ನಾನು ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ಓದುತ್ತಿದ್ದಾಗ ನನಗೆ ಪಾಠ ಹೇಳಿಕೊಡಲು ಬರುತ್ತಿದ್ದ ಮೇಷ್ಟರಿಗೆ ಅವಳು ಸೋದರ ಸೊಸೆ. ಅವಳಿಗೆ 'ವಿಲ್ಸನ್ಸ್ ಡಿಸೀಸ್' ಎಂಬ ಕಾಯಿಲೆ ಇತ್ತು. ಅವಳ ಮನೆಯವರು ಮುಂಬೈ ಯಿಂದ ಬೆಂಗಳೂರಿಗೆ ಬಂದಿದ್ದರು ಮತ್ತು ಅವಳನ್ನು ನೋಡಿಕೊಳ್ಳುವುದರಲ್ಲಿ ಬಹಳ ಕಷ್ಟಗಳನ್ನು ಅನುಭವಿಸಿದ್ದರು. ಅವಳ ಅಣ್ಣ ಚೆನ್ನಾಗಿ ಓದಿ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಸೈನ್ಸ್ ನಲ್ಲಿ ಕೆಲಸ ಮಾಡುತ್ತಿದ್ದನು. ಪ್ರಮಿಳಳಿಗೆ ಸದಾ ಔಷಧಿಯನ್ನು ತೆಗೆದುಕೊಳ್ಳಬೇಕಾಗಿತ್ತು ಮತ್ತು ಅವಳ ಕೈಗಳು ನಡುಗುತ್ತಿದ್ದರಿಂದ ಅವಳು ಯಾವ ಕೆಲಸವನ್ನೂ ಮಾಡಲಾಗುತ್ತಿರಲಿಲ್ಲ. ಅವಳ ನಡಿಗೆ ಸ್ಥಿರವಾಗಿರಲಿಲ್ಲ, ಅವಳು ಬಹಳ ಜಾಗ್ರತೆಯಿಂದ ನಡೆಯ ಬೇಕಾಗಿತ್ತು. ಅವಳ ತಂದೆಯು ಅವಳನ್ನು ಎ.ಪಿ.ಡಿ.ಗೆ ಕರೆದು ಕೊಂಡು ಬಂದರು. ಅವರು ಅವಳು ಯಾವುದಾದರೂ ಕೆಲಸದಲ್ಲಿ ತೊಡಗಿರಬೇಕು, ಹಣ ಮುಖ್ಯವಲ್ಲ ಎಂದು ಹೇಳಿದರು. ಎ.ಪಿ.ಡಿ ಬಹಳ ದೂರವಾಗಿತ್ತು, ಅವಳಿಗೆ ಅಲ್ಲಿಗೆ ಬಂದು ಹೋಗುವುದು ಕಷ್ಟವಾಗಿತ್ತು. ಅದಕ್ಕೇ ನಾನು ಅವಳಿಗೆ ನಮ್ಮ ಗರಾಜಿನಲ್ಲಿ ಒಂದು ಕೆಲಸ ಕೊಟ್ಟೆ ಆದರೆ ಅದು ನಾಜೂಕಿನ ಕೆಲಸವಾದ್ದರಿಂದ ಅವಳಿಗೆ ಅದನ್ನು ಮಾಡಲಾಗಲಿಲ್ಲ. ನಾನು ಅವಳ ನಿರಾಶಾದಾಯಕ ಯೋಚನೆಯು ಬದಲಾದರೆ ಅವಳಿಗೆ ಆ ಕೆಲಸವು ಸಾಧ್ಯವಾಗಬಹುದು ಎಂದು ನಂಬಿದ್ದೆ.

ಅದೃಷ್ಟವಶಾತ್ ಅವಳಿಗೆ ನನ್ನ ಯೋಚನೆ ಅರ್ಥವಾಯಿತು ಮತ್ತು ಅವಳು ನನ್ನ ಮಾತನ್ನು ಕೇಳಿದಳು. ಅವಳು ನಮ್ಮ ಶಾಲೆಯಲ್ಲಿ ಮಕ್ಕಳಿಗೆ ಹಿಂದಿ ಕಲಿಸಲು ಒಪ್ಪಿಕೊಂಡಳು. ಅವಳು 'ಪಾಸಿಟಿವ್' ಆಗಿ ಯೋಚಿಸತೊಡಗಿದಳು ಮತ್ತು ಹಿಂದಿಯ ಮೇಲಿನ ಪರೀಕ್ಷೆಗಳಲ್ಲಿ ಪ್ಯಾಸಾದಳು. ಆದರೆ ಅವಳ ಮನೆಯ ವಾತಾವರಣ ಅವಳ ಈ ಬೆಳವಣಿಗೆಗೆ ಸರಿಯಾಗಿರಲಿಲ್ಲ. ಒಂದುಸಲ ಅವಳು ಬಿದ್ದು ಕಾಲನ್ನು ಮುರಿದು ಕೊಂಡಳು. ಆರು ತಿಂಗಳು ಹಾಸಿಗೆಯಲ್ಲೇ ಇರಬೇಕಾಯಿತು. ಅವಳ ತಾಯಿಯು ಅವಳ ಆರೈಕೆಯನ್ನು ಮಾಡಿದರು, ಆದರೆ ಯಾವಾಗಲೂ ಅವಳ ಮೇಲೆ ರೇಗುತ್ತಿದ್ದರು. ಅವರಿಗೆ ಇವಳು ಎ.ಪಿ.ಡಿ. ಯಲ್ಲಿ ಕೆಲಸಕ್ಕೆ ಹೋಗುವುದು ಇಷ್ಟವಿರಲಿಲ್ಲ. ಇವರಿಬ್ಬರ ಮಧ್ಯದಲ್ಲಿ ನಾನು ಇಬ್ಬರಿಗೂ ಒಪ್ಪುವಂತಹ ಒಂದು ಸಮಾಧಾನವನ್ನು ಹುಡುಕ ಬೇಕಾಯಿತು. ನಾನು ಪ್ರಮಿಳಳಿಗೆ ಮಕ್ಕಳಿಗೆ ಪಾಠಹೇಳಿಕೊಡುವಂತೆ ಸಲಹೆ ಕೊಟ್ಟೆ ಇದರಿಂದ ಅವಳು ಮನೆಯನ್ನು ಬಿಡಬೇಕಾಗಿರಲಿಲ್ಲ ಜೊತೆಗೆ ಸ್ವಲ್ಪ ವರಮಾನವೂ ಸಿಗುತ್ತಿತ್ತು. ಈ ಸಲಹೆ ಕೆಲಸಮಾಡಿತು. ಅವಳಿಗೆ ಪಾಠಕ್ಕೆ ಬಹಳ ಮಕ್ಕಳು ಬಂದರು. ಅವಳು ಎ.ಪಿ.ಡಿ.ಯಲ್ಲಿ ಸಂಪಾದಿಸುತ್ತಿದ್ದ ಹಣಕ್ಕಿಂತ ಹೆಚ್ಚು ಸಂಪಾದಿಸತೊಡಗಿದಳು. ವರ್ಷಕ್ಕೊಮ್ಮೆ ಒಂದಷ್ಟು ಹಣವನ್ನು ದಾನವಾಗಿ

ಕೊಡುತ್ತಿದ್ದಳು. ಆದರೆ ಅವಳ ಅಮ್ಮನ ಗೊಣಗಾಟ ನಿಲ್ಲಲಿಲ್ಲ. ಈ ಗೊಣಗಾಟ ಪಾಠಕ್ಕೆ ಬರುವ ಮಕ್ಕಳಿಗೂ ತೊಂದರೆಯಾಗ ತೊಡಗಿತು. ಪ್ರತಿನಿತ್ಯ ಮನೆಯಲ್ಲಿ ವಾಗ್ವಾದ ಮತ್ತು ಜಗಳ ಆಗುತ್ತಿದ್ದವು. ಎಷ್ಟು ಜನಕ್ಕೆ ತಮ್ಮ ವಿಕಲಾಂಗತೆಯ ತೊಂದರೆಯೊಡನೆ ಈ ರೀತಿಯ ತೊಂದರೆಯನ್ನೂಸಹಿಸಿಕ್ಕೊಂಡು ಬದುಕಲಾಗುತ್ತದೆ?

* * *

ಜಿಲ್ ಮಾಡಿದ್ದನ್ನು ಯಾರೂ ಮಾಡಲಾಗುವುದಿಲ್ಲ. ಜಿಲ್ ಡಿಸೌಜಾಗೆ ಮಗುವಾಗಿದ್ದಾಗಲೇ ಪೋಲಿಯೋ ಆಯಿತು. ಅವಳ ವಿಕಲಾಂಗತೆಯು ತೀವ್ರವಾಗಿದ್ದರಿಂದ ಅವಳು ವ್ಹೀಲ್ ಚೇರಿನಲ್ಲೇ ಓಡಾಡುತ್ತಿದ್ದಳು. ಅವಳ ತಂದೆ ಅವಳಿಗೆ ಅನುಕೂಲವಾದ ಮನೆಯನ್ನು ಕಟ್ಟಿದರು ಮತ್ತು ಎಲ್ಲರೂ ಆ ಮನೆಯಲ್ಲೇ ಇದ್ದರು. ಅವರದು ಬಹಳ ಅನ್ಯೋನ್ಯವಾದ ಕುಟುಂಬ. ಅವಳ ತಾಯಿ ಅವಳನ್ನು ಚೆನ್ನಾಗಿ ನೋಡಿಕೊಂಡರು. ತಾಯಿಗೆ ವಯಸ್ಸಾದಂತೆ ಮನೆಯ ವ್ಯವಹಾರವೆಲ್ಲಾ ಜಿಲ್ಲಳ ಹೆಗಲಮೇಲೆ ಬಂತು. ಅವಳು ಬನಾರೆಸ್ ಹಿಂದೂ ಯೂನಿವರ್ಸಿಟಿಯಲ್ಲಿ ಹಿಂದಿಯಲ್ಲಿ ಎಂ.ಏ. ಪದವಿ ಪಡೆದಿದ್ದಳು ಮತ್ತು ಕೆಲವು ಮಕ್ಕಳಿಗೆ ಮನೆಯಲ್ಲೇ ಪಾಠ ಹೇಳಿಕೊಡುತ್ತಿದ್ದಳು. ಅವಳಿಗೆ 'ಸ್ವೆಟರ್' ಹಾಕುವುದು ಚೆನ್ನಾಗಿ ಬರುತ್ತಿತ್ತು. ಅವಳು ಒಂದು ನಿಟ್ಟಿಂಗ್ ಮಿಶೀನ್ ತೆಗೆದುಕೊಂಡಿದ್ದಳು ಮತ್ತು ಪರಿಚಯದವರಿಗೆ ಸ್ವೆಟರ್ ಹಾಕಿಕೊಡುತ್ತಿದ್ದಳು.

ಅವಳ ತಾಯಿಯು ದೈವಾದೀನಳಾದಾಗ ಅವಳ ಅಣ್ಣ ಅವಳ ಜೊತೆ ಇರಲು ಬೆಂಗಳೂರಿಗೆ ಬಂದನು. ಆದರೆ ಇದು ಅವಳಿಗೆ ಮುಜುಗರವಾಯಿತು. ಅವಳಿಗೆ ತಾನು ತನ್ನ ಅಣ್ಣನಿಗೆ ಮತ್ತು ಅವನ ಕುಟುಂಬಕ್ಕೆ ಹೊರೆಯಾಗಿರುವುದು ಇಷ್ಟವಿರಲಿಲ್ಲ. ಅವಳು ತನಗಾಗಿ ಇರಲು ಒಂದು ಜಾಗವನ್ನು ಹುಡುಕುತ್ತಿದ್ದಳು. ಕೊನೆಗೆ ರಾಜಾಜಿ ನಗರದಲ್ಲಿ ಒಂದು ಕಾನ್ವೆಂಟಿನಲ್ಲಿ ಅವಳಿಗೆ ಜಾಗ ಸಿಕ್ಕಿತು. ಅಲ್ಲಿ ಅವಳ ಸಹಾಯಕ್ಕೆ ಒಬ್ಬರಿದ್ದರು. ಅವಳು ಓದು, ಸಂಗೀತ ಮಕ್ಕಳೊಡನೆ ಮಾತುಕತೆ, ಇತ್ಯಾದಿಗಳೊಡನೆ ಸಂತೋಷವಾಗಿದ್ದಳು.

ಕೆಲವು ದಿನಗಳ ನಂತರ ಅವಳಿಗೆ ಮೈ ಸರಿಯಿರಲಿಲ್ಲ. ಅವಳು ಆ ಕಾನ್ವೆಂಟಿನ ಸಿಸ್ಟರ್‌ಗಳಿಗೆ ತನಗೆ ಯಾವ ಔಷಧಿಯೂ ಬೇಡ, ತಾನು ನಿಶ್ಚಿಂತೆಯಾಗಿ ಸಾಯಬೇಕು ಎಂದು ಹೇಳಿದಳು. ಇತರರನ್ನು ಅವಲಂಬಿಸಿ ಜೀವಿಸುವುದಕ್ಕಿಂತ ಸಾವೇ ಮೇಲು ಎಂದು ಅವಳು ಸಾಯಲು ನಿಶ್ಚಯಿಸಿದಳು. ಈ ರೀತಿಯ ನಿಶ್ಚಯ ತೆಗೆದುಕೊಳ್ಳಲು ಬಹಳ ಧೈರ್ಯ ಬೇಕು. ಇದು ಜೀವನ ಪರಾಧೀನವಾದರೆ ಮತ್ತು ನಂಬಿಕಸ್ಥರ ಸಹಾಯ

ಇಲ್ಲದಿದ್ದರೆ ಹೇಗೆ ಜೀವಿಸಲು ಇಚ್ಛೆಯೇ ಹೊರಟು ಹೋಗುತ್ತದೆ ಎನ್ನುವುದನ್ನು ತೋರಿಸುತ್ತದೆ. ಆದರೆ ಪ್ರಪಂಚದಲ್ಲಿ ಜಿಲ್ಲಳಂತೆ ಎಷ್ಟುಜನ ಇರುತ್ತಾರೆ?

ಎಲ್ಲಾ ಚೆನ್ನಾಗಿರುವ ಮಕ್ಕಳ ತಂದೆ ತಾಯಿಯರೇ, ಅವರ ಕಾಲದ ನಂತರ ಅವರ ಮಕ್ಕಳ ಗತಿ ಏನು ಎಂದು ಯೋಚಿಸುತ್ತಾರೆ. ಇನ್ನು ವಿಕಲಾಂಗರಾಗಿ ಮತ್ತೊಬ್ಬರ ಸಹಾಯ ಬೇಕಿರುವ ಮಕ್ಕಳು ಮತ್ತು ಒಬ್ಬಂಟಿಯಾಗಿರುವ ಹೆಂಗಸಿನ ಜೀವನದಲ್ಲಿ ಇದು ಒಂದು ದೊಡ್ಡ ಪ್ರಶ್ನೆ. ಅವರು ಓದಿ, ಕೆಲಸ ಮಾಡಿ ಹೊರಗಿನ ಪ್ರಪಂಚವನ್ನು ನೋಡಿದ್ದರೆ, ಸ್ನೇಹಿತರನ್ನು ಸಂಪಾದಿಸಿ ಹೇಗೋ ತಮ್ಮ ಜೀವನವನ್ನು ಸಾಗ ಬಹುದು. ನನಗೆ ಆಗಾಗ ನಮ್ಮ ಶಾಲೆಯಲ್ಲಿರುವ ಮತ್ತು ಕಮ್ಯೂನಿಟಿ ಸೆಂಟರಿನಲ್ಲಿರುವ ವಿಕಲಾಂಗ ಮಕ್ಕಳ ಯೋಚನೆಯು ಬರುತ್ತೆ. ಈ ಮಕ್ಕಳಿಗೆ ಹಲ್ಲುಜ್ಜಿಕೊಳ್ಳುವುದು, ತಲೆ ಬಾಚಿಕೊಳ್ಳುವುದು, ಸ್ನಾನ ಮಾಡಿಕೊಳ್ಳುವುದು, ಇತ್ಯಾದಿ ತಮ್ಮ ತಮ್ಮ ದೈನಂದಿನ ಕಾರ್ಯಗಳನ್ನು ಮಾಡಿಕೊಳ್ಳುವುದೇ ಕಷ್ಟ. ವಿಕಲಾಂಗರಿಗೆ ವಯಸ್ಸಾಗಿ ಅವರು ವೃದ್ಧರಾದಂತೆ ಅವರು ಇನ್ನೂ ಪರಾವಲಂಬಿಗಳಾಗುತ್ತಾರೆ. ಅವರಿಗೆ ಗೌರವದಿಂದ ಜೀವಿಸಲು ಮತ್ತು ಮರಣ ಹೊಂದಲು ಸ್ಥಳವೇ ಇಲ್ಲ.

* * *

ನಾನು ಬರೀ ಹೆಂಗಸರೊಡನೆಯೇ ಕೆಲಸ ಮಾಡಿದ್ದೇನೆಂದಲ್ಲ. ವಿಕಲಾಂಗ ಪುರುಷರೂ ತಮ್ಮ ವಿಕಲಾಂಗತೆಯನ್ನು ಮೀರಿ, ಬಹಳ ಧೈರ್ಯ ಮತ್ತು ಉತ್ಸಾಹದಿಂದ ಪ್ರಗತಿಯನ್ನು ಸಾಧಿಸಿರುವ ಕಥೆಗಳು ಇವೆ. ಜೀವನದಲ್ಲಿ ಸಾಧನೆ ಮಾಡಬೇಕು ಎಂಬ ಆಸೆಯೇ ಮುಖ್ಯ. ಅದು ವಿಕಲಾಂಗರನ್ನು ತಮ್ಮ ದೈಹಿಕ ಮಿತಿಯನ್ನು ಮೀರಿ ಸಾಧನೆಯ ಮತ್ತು ಸಾರ್ಥಕ ಜೀವನದ ಕಡೆಗೆ ಕರೆದುಕೊಂಡು ಹೋಗುತ್ತದೆ. ನನಗೆ ವಿಕಲಾಂಗರು ಮತ್ತು ಇತರರಲ್ಲಿ ಯಾವ ವ್ಯತ್ಯಾಸವೂ ಕಾಣುವುದಿಲ್ಲ. ಮಹಿಳೆಯು ತನ್ನ ಮನೆ ಮತ್ತು ಮಕ್ಕಳನ್ನು ಸಂಬಾಳಿಸಲು ಕಷ್ಟಪಟ್ಟರೆ ಪುರುಷನು ತನ್ನ ಉದ್ಯೋಗ ಮತ್ತು ಜೀವನವನ್ನು ಸಂಬಾಳಿಸುವುದಕ್ಕಾಗಿ ಕಷ್ಟಪಡಬಹುದು. ಆದರೆ, ಒಮ್ಮೆ ಜೀವನೋಪಾಯ ಮತ್ತು ಆಸರೆಯು ಸಿಕ್ಕಿದರೆ, ವಿಕಲಾಂಗತೆಯು ಮಾಯವಾಗುತ್ತದೆ.

ಬಹಳ ಹಿಂದೆ ಒಬ್ಬಳು ಒಬ್ಬ ಚಿಕ್ಕ ಹುಡುಗನೊಡನೆ ಎ.ಪಿ.ಡಿ.ಗೆ ಬಂದಳು. ಆ ಚಿಕ್ಕ ಹುಡುಗ ಅವಳ ಹಿಂದೆ ತೆವಳುತ್ತಾ ಬಂದ. ಅವಳು ನಮ್ಮ ಶಾಲೆಯಬಗ್ಗೆ ಕೇಳಿದ್ದಳು ಮತ್ತು ಅದನ್ನು ಬಹಳ ದಿನಗಳಿಂದ ಹುಡುಕುತ್ತಿದ್ದಳು. ಆ ಹುಡುಗ, ಮುರುಗೇಶ್ ಅವನ

ಹೆಸರು, ತಮಿಳು ಕನ್ನಡ ಎರಡರಲ್ಲೂ ಮಾತನಾಡಬಲ್ಲ. ಅವನು ತನಗೆ ಓದಲು ಬಹಳ ಆಸೆ, ತಾನು ನಡೆದು ಓದಬೇಕು ಎಂದ. ನನಗೆ ಆ ಹುಡುಗ ಬಹಳ ಇಷ್ಟವಾದ. ಅವನಿಗೆ ಓದಲು ಆಸಕ್ತಿ ಇರುವುದು ನನಗೆ ಹಿಡಿಸಿತು. ಅವನ ಕೈ ಕಾಲಿನ ಕೀಲುಗಳು ಜಡ್ಡು ಹಿಡಿದಿದ್ದವು. ನನಗೆ ಅದು ಸರಿಹೋಗಲು ಆಪರೇಷನ್ ಮಾಡಬೇಕಾಗುತ್ತದೆ ಎಂದು ಅನಿಸಿತ್ತು. ಅವನ ಮನೆಯವರ ಬಗ್ಗೆ ಕೇಳಿದಾಗ ಅವನು ಹೇಳಿದ ಕಥೆಭಯಂಕರವಾಗಿತ್ತು. ಅವನ ತಂದೆ ತಾಯಿ ದಿನಗೂಲಿ ಕೆಲಸಗಾರರು. ಅವರು ಶಿವಮೊಗ್ಗದ ಒಂದು ಕಾಡು ಪ್ರದೇಶದಲ್ಲಿ, ಒಂದು ಗುಡಿಸಿಲಿನಲ್ಲಿ ಇದ್ದರು. ಒಂದು ದಿವಸ ಮುರುಗೇಶನಿಗೆ ಜೋರಾದ ಜ್ವರ ಬಂದು ಮೈಯೆಲ್ಲಾ ನೋವಾಗ  ಶುರುವಾಯಿತು. ಆ ಹಳ್ಳಿಗಾಡಿನಲ್ಲಿ ಅವರು ಪೂಜೆ, ಮಂತ್ರ, ಮಾಟ, ಇತ್ಯಾದಿಗಳನ್ನು ಮಾಡಿಸಿದರು. ಆದರೆ ಅವು ಯಾವುದೂ ಕೆಲಸ ಮಾಡಲಿಲ್ಲ. ಇದ್ದ ಹಣವೆಲ್ಲಾ ಖರ್ಚಾಯಿತು. ಒಂದು ಸಂಜೆ ಅವನ ತಂದೆಯು ಕುಡಿದು ಮನೆಗೆ ಬಂದವನು, ಎಲ್ಲಾದಕ್ಕೂ ಮುರುಗೇಶನೇ ಕಾರಣ ಎಂದು ಹೇಳಿ, ಅವನನ್ನು ಚೆನ್ನಾಗಿ ಹೊಡೆದು ಮನೆಯಿಂದ ಹೊರಗೆ ಹಾಕಿದನು. ಅವನ ತಾಯಿ ಬಹಳ ಅತ್ತಳು. ಆದರೆ ಅವಳ ಗಂಡನನ್ನು ತಡೆಯಲಾಗಲಿಲ್ಲ.

ಆಗ ಮುರುಗೇಶನಿಗೆ ಎಂಟು ವಯಸ್ಸು. ಸ್ವಂತವಾಗಿ ಬದುಕಲು ನಿಶ್ಚಯಿಸಿದ ಅವನು ತೆವಳಿಕ್ಕೊಂಡು ಹೋದ. ದಾರಿಯಲ್ಲಿ ಯಾರೋ ಅವನನ್ನು ಸ್ವಲ್ಪ ದೂರ ತಮ್ಮ ಮೋಟರ್ ಸೈಕಲ್ಲಿನಲ್ಲಿ ಕರೆದುಕೊಂಡು ಹೋದರು. ಒಬ್ಬ ಕರುಣಾಳು ರಿಕ್ಷಾ ಡ್ರೈವರ್ ಅವನನ್ನು ರೈಲ್ವೇ ಸ್ಟೇಶನ್ನಿನಲ್ಲಿ ಬಿಟ್ಟ ಮತ್ತು ಅವನ ಜೇಬಿನಲ್ಲಿ ಸ್ವಲ್ಪ ಹಣವನ್ನು ಇಟ್ಟ.ಮುರುಗೇಶನಿಗೆ ತಾನು ಎಲ್ಲಿಗೆ ಹೋಗುತ್ತಿದ್ದೀನಿ ಎಂಬುದೂ ಗೊತ್ತಿರಲಿಲ್ಲ. ಕೊನೆಗೆ ಬೆಂಗಳೂರಿನ ಸಿಟಿ ಸ್ಟೇಷನ್ನಿಗೆ ಬಂದು ಸೇರಿದ. ಹೊರಗೆ ತೆವಳುತ್ತಾ ಬಂದಂತೆ ಒಂದಷ್ಟು 'ರಾಗ್ ಪಿಕರ್ಸ್' ಹುಡುಗರು ಸಿಕ್ಕಿದರು. ಅವರು ಇಲ್ಲಿ ಅವನು ಇದ್ದರೆ ಅಪಾಯ ಎಂದು ಹೇಳಿ ಅವನನ್ನು ತಮ್ಮ ಗುಡಿಸಲಿಗೆ ಕರೆದುಕೊಂಡು ಹೋದರು. ಅವನು ಅವರು ದಿನಾ ತರುತ್ತಿದ್ದ ಕಸವನ್ನು ವಿಂಗಡಿಸಿ, ಅವರಿಗೆ ಅಡಿಗೆ ಮಾಡಿ ಹಾಕುತ್ತಿದ್ದ.

ಕೆಲವು ದಿನಗಳ ನಂತರ ಅವನಿಗೆ ಅದೃಷ್ಟದ ಬಾಗಿಲು ತೆರೆಯಿತು. ಒಬ್ಬಳು ಹೆಂಗಸು ಬಹಳ ಸಾಮಾನಿನೊಡನೆ ಅವರ ಗುಡಿಸಿಲ ಮುಂದೆ ಬಂದವಳು, ತನ್ನ ಸಾಮಾನನ್ನು ಹೊರಲಾಗುತ್ತದೆಯೇ ಎಂದು ಮುರುಗೇಶನನ್ನು ಕೇಳಿದಳು. ಅವನು ತನಗೆ ನಡೆಯಲು ಆಗುವುದಿಲ್ಲ ಎಂದಾಗ ಅವಳು ಅವನನ್ನು ಅವನ ಕಥೆಯನ್ನು ಹೇಳಬೇಕೆಂದು ಕೇಳಿದಳು. ಅವನ ಕಥೆಯನ್ನು ಕೇಳಿ ಮರುಕಗೊಂಡ ಅವಳು ಮುರುಗೇಶ ಮತ್ತು ಇತರ ಮಕ್ಕಳನ್ನು

ತನ್ನ ಮನೆಗೆ ಕರೆದುಕೊಂಡು ಹೋಗಿ ಅಲ್ಲೇ ಇರ ಹೇಳಿದಳು. ಅವಳಿಗೆ ಮಕ್ಕಳಿರಲಿಲ್ಲ. ಅವಳು ಕೆಲವುಕಾಲ ಆ ಮಕ್ಕಳನ್ನು ನೋಡಿಕೊಂಡಳು. ನಂತರ ಅವರ ಸಹಾಯಕ್ಕಾಗಿ 'ಏ.ಪಿ.ಡಿ.' ಗೆ ಬಂದಳು.

ನಾನು ಅವಳಿಗೆ ಹುಡುಗನನ್ನು ಏ.ಪಿ.ಡಿ.ಯಲ್ಲಿ ಬಿಡಲಾಗುವುದಿಲ್ಲ, ಅವನ ಮನೆಯವರನ್ನು ಕಂಡು ಹಿಡಿದು ಅವನ ಆಪರೇಷನ್ನಿಗೆ ಒಪ್ಪಿಗೆ ಪಡೆಯಬೇಕು, ಎಂದೆ. ಒಂದು ವಾರದಲ್ಲಿ ಅವಳು ಮತ್ತೆ ಹಿಂತಿರುಗಿ ಬಂದಳು. ಅವಳ ಗಂಡನಿಗೆ ಈ ಹುಡುಗನನ್ನು ಮನೆಯಲ್ಲಿ ಇಟ್ಟುಕೊಳ್ಳುವುದು ಬೇಕಾಗಿರಲಿಲ್ಲ ಎಂದು ಹೇಳಿದಳು. ಮತ್ತೊಮ್ಮೆ ಈ ಸಮಸ್ಯೆಗೆ ಒಂದು ಉಪಾಯ ಸಿಕ್ಕಿತು. ಸುರೇಂದ್ರ ಕೌಲಗಿ ಎಂಬ ಗಾಂಧಿವಾದಿಯು ಮೇಲುಕೋಟೆಯಲ್ಲಿ ವಿಕಲಾಂಗ ಮಕ್ಕಳಿಗೆ ಒಂದು ಶಾಲೆಯನ್ನು ನಡೆಸುತ್ತಿದ್ದರು. ಅವರು ಅಂದು ಏ.ಪಿ.ಡಿ.ಗೆ ಬರುವವರಿದ್ದರು. ಅವರಿಗೆ ಈ ಹುಡುಗನ ವಿಷಯವನ್ನು ತಿಳಿಸಿದಾಗ ಅವರು ಅವನನ್ನು ತಮ್ಮ ಶಾಲೆಗೆ ಸೇರಿಸಿಕೊಳ್ಳುವುದಾಗಿ ಹೇಳಿದರು. ನಾನು ಅದಕ್ಕೆ ತಗಲುವ ಖರ್ಚನ್ನು ಹೊಂದಿಸಿದೆ. ನಮ್ಮಲ್ಲಿದ್ದ ಸಮಾಜ ಸೇವಕಿ ಮೇರಿ ಥಾಮಸ್ ಇದಕ್ಕೆ ಸಂಬಂಧ ಪಟ್ಟ ಎಲ್ಲಾ ಕೆಲಸಗಳ ಜವಾಬ್ದಾರಿಯನ್ನು ವಹಿಸಿಕ್ಕೊಂಡರು. ಓದು ಬರಹವೇ ತಿಳಿಯದ ಈ ಹುಡುಗ, ಮೂರು ತಿಂಗಳಲ್ಲಿ ಅಲ್ಲಿಂದ ನನಗೆ ತಾನು ಯಾವಾಗ ಬೆಂಗಳೂರಿಗೆ ಬಂದು ಆಪರೇಷನ್ ಮಾಡಿಸಿಕೊಳ್ಳ ಬಹುದು ಎಂದು ಒಂದು ಕಾರ್ಡ್ ಬರೆದ. ನನಗೆ ಆದ ಆಶ್ಚರ್ಯ ಮತ್ತು ಸಂತೋಷಕ್ಕೆ ಮಿತಿಯೇ ಇರಲಿಲ್ಲ. ನಾನು ಅವನಿಗೆ ಬೇಸುಗೆ ರಜದಲ್ಲಿ ಬಂದು ಆಪರೇಷನ್ ಮಾಡಿಸಿಕೊಳ್ಳಲು ಹೇಳಿದೆ. ಅವನು ಬಂದಾಗ ಅವನನ್ನು ನಮ್ಮ ಮನೆಯಲ್ಲೇ ಇರ ಹೇಳಿ, ಮಲ್ಲೇಶ್ವರದಲ್ಲಿರುವ ಡಾ. ಶ್ರೀನಿವಾಸನ್ ಅವರಿಗೆ ತೋರಿಸಿದೆ. ಅವರು ಆಪರೇಷನ್ ಮಾಡಲು ಒಪ್ಪಿಕ್ಕೊಂಡರು. ನಾನು ಮುರುಗೇಶನನ್ನು ಮತ್ತೆ ಶಿವಮೊಗ್ಗಕ್ಕೆ ಕಳುಹಿಸಿದೆ. ಅವನು ಹತ್ತು ದಿನಗಳು ಅಲ್ಲಿ ಹುಡುಕಿದರೂ ಅವನ ತಂದೆ ತಾಯಿ ಅವನಿಗೆ ಸಿಗಲಿಲ್ಲ. ನಾನು ಅವನಿಗೆ ಆಪರೇಷನ್ನನ್ನು ಮಾಡಿಸಲು ನಿರ್ಧರಿಸಿದೆ.ನನ್ನ ಸ್ನೇಹಿತಿ ಸಿಸ್ಟರ್ ನಿರ್ಮಲ ಅವನೊಡನೆ ಆಸ್ಪತ್ರೆಯಲ್ಲಿ ಇರಲು ಮುಂದೆಬಂದಳು. ಮುರುಗೇಶ್ ತನ್ನ ಜೀವ ಹೋದರೂ ಪರವಾಗಿಲ್ಲ ಆದರೆ ತಾನು ಈ ಆಪರೇಷನ್ನನ್ನು ಮಾಡಿಯೇ ಕೊಳ್ಳುತ್ತೇನೆ ಎಂಬ ಧೃಡನಿಶ್ಚಯ ಮಾಡಿಕೊಂಡನು.

ನಲವತ್ತೈದು ದಿನಗಳ ನಂತರ ಅವನನ್ನು ಆಸ್ಪತ್ರೆಯಿಂದ ಡಿಸ್ಚಾರ್ಜ್ ಮಾಡಿದರು. ಎರಡು ಕಾಲುಗಳೂ ಪ್ಲಾಸ್ಟರ್ ಹಾಕಿದ್ದರು. ನಾನು ಅವನನ್ನು ನಮ್ಮ ಮನೆಗೆ ಕರೆತರಲಾಗಲಿಲ್ಲ, ಯಾಕೆಂದರೆ ಅವನನ್ನು ನೋಡಿಕೊಳ್ಳಲು ನಮ್ಮ ಮನೆಯಲ್ಲಿ ಯಾರೂ ಇರಲಿಲ್ಲ. ಅವನನ್ನು

ಏ.ಪಿ.ಡಿ.ಯಲ್ಲಿ ಇರಲು ಹೇಳುವುದೊಂದೇ ದಾರಿ ಇತ್ತು. ಅಲ್ಲಿನ ಇಬ್ಬರು ಟ್ರೈನೀಗಳು ಅಲ್ಲಿಯೇ ಉಳಿದುಕೊಂಡು ಅವನಿಗೆ ಸಹಾಯವಾಗಿದ್ದರು. ಬೆಳಗಿನ ಹೊತ್ತಿನಲ್ಲಿ ಅವನಿಗೆ ಕ್ಲಾಸಿನಲ್ಲೇ ಒಂದು ಮಂಚವನ್ನು ಹಾಕಿ ಅವನು ಶಾಲೆಯನ್ನು ತಪ್ಪಿಸಿಕೊಳ್ಳದಂತೆ ಏರ್ಪಾಡು ಮಾಡಿತ್ತು. ಕೆಲವುದಿನಗಳ ನಂತರ ಅವನು ಕ್ಯಾಲಿಪರ್ ಮತ್ತು ಊರುಗೋಲಿನ ಸಹಾಯದಿಂದ ನಡೆಯ ತೊಡಗಿದ. ಒಂದೂವರೆ ವರ್ಷದಲ್ಲಿ ಮುರುಗೇಶ ಏಳನೇ ಕ್ಲಾಸಿನ ಪರೀಕ್ಷೆ ಪಾಸ್ ಮಾಡಿದ ಮತ್ತು ಯಾವ ಸಹಾಯವೂ ಇಲ್ಲದೆ ನಡೆಯತೊಡಗಿದ. ಅವನನ್ನು ಏ.ಪಿ.ಡಿ.ಯ ಸಮೀಪದಲ್ಲಿದ್ದ ಮಾರಿಯ ನಿಕೇತನ್ ಎಂಬ ಶಾಲೆಗೆ ಸೇರಿಸಿದೆವು.

ಅವನು ಹತ್ತನೇ ತರಗತಿಗೆ ಬರುವ ಹೊತ್ತಿಗೆ ಕಥೆಯು ಬದಲಾಗಿತ್ತು. ಒಂದು ದಿನ ಆ ಶಾಲೆಯ ಪ್ರಿನ್ಸಿಪಾಲ್ ನಮ್ಮನ್ನು ಕರೆದು ಇವನನ್ನು ಶಾಲೆಯ ಹಾಸ್ಟೆಲ್ಲಿನಲ್ಲಿ ಇನ್ನುಮುಂದೆ ಇಟ್ಟುಕೊಳ್ಳಲಾಗುವುದಿಲ್ಲ ಎಂದರು. ಅವನು ದೊಡ್ಡ ಗೂಂಡಾ ಆಗಿಬಿಟ್ಟಿದ್ದ, ಎಲ್ಲರಿಗೂ ತೊಂದರೆ ಕೊಡುತ್ತಿದ್ದ. ನಾನು ಅವನನ್ನು ನಮ್ಮ ಮನೆಗೆ ಮತ್ತೆ ಕರೆದುಕೊಂಡು ಹೋದೆ. ಅವನ ಕ್ಯಾಲಿಪರ್ ಮಾಯವಾಗಿತ್ತು. ಅವನು ಯಾವ ಸಹಾಯವೂ ಇಲ್ಲದೆ ನಡೆಯುತ್ತಿದ್ದ. ಅವನು ಕ್ರೈಸ್ತ ಮತವನ್ನು ಸೇರಿದ್ದ. ನಾನು ಅದರಲ್ಲಿ ಅವನಿಗೆ ಏನೋ ಸಮಾಧಾನ ಸಿಕ್ಕಿರಬಹುದು ಎಂದು ಸಂತೋಷ ಪಟ್ಟೆ. ಅವನ ಎಸ್.ಎಸ್.ಎಲ್.ಸಿ ಆದಮೇಲೆ ಮೇರಿ ಥಾಮಸ್ ಅವನನ್ನು ಒಂದು ವೊಕೇಶನಲ್ ಶಾಲೆಗೆ ಸೇರಿಸಿದಳು. ಅವನಿಗೆ ಬಟ್ಟೆಹೊಲಿಯುವುದನ್ನು ಕಲಿತು ತನ್ನದೇ ಆದ ದರ್ಜಿ ಅಂಗಡಿ ತೆಗೆಯ ಬೇಕೆಂದು ಆಸೆ ಇತ್ತು. ನಾನು ಮತ್ತೆ ಅವನಿಗೆ ತನ್ನ ಅಪ್ಪ ಅಮ್ಮಂದಿರನ್ನು ಹುಡುಕಲು ಹೇಳಿದೆ. ಈ ಸಲ ಅವನು ತನ್ನ ತಾತನನ್ನು ಕಂಡು ಹಿಡಿದು ಅವರ ಮೂಲಕ ತನ್ನ ತಂದೆ ತಾಯಿಯರನ್ನು ಕಂಡುಹಿಡಿದನು. ಕೊನೆಗೆ ಅವನ ಕುಟುಂಬದವರೆಲ್ಲರೂ ಒಂದಾದರು. ಅವನು ಒಂದುಸಲ ಅವನ ತಾಯಿಯನ್ನು ಏ.ಪಿ.ಡಿ.ಗೆ ಕರೆದುಕೊಂಡು ಬಂದನು. ನಾನು ಅವಳಿಗೆ "ಹೇಗೆ ನೀನು ನಿನ್ನ ಮಗುವನ್ನು ನಿನ್ನಿಂದ ದೂರ ಹೋಗಲು ಬಿಟ್ಟೆ. ಅವನ ಅದೃಷ್ಟ ಅವನು ಏ.ಪಿ.ಡಿ.ಗೆ ಬಂದನು. ಇಲ್ಲದಿದ್ದರೆ ಆ ಹುಡುಗನಿಗೆ ಯೇನಾದರೂ ಆಗಬಹುದಿತ್ತು" ಎಂದು ಹೇಳಿದೆ. ನಂತರ ಎಲ್ಲಾ ಇಳಿಮುಖವಾಯಿತು. ನನಗೆ ಅವನು ಬೀಡಿ ಸೇದುತ್ತಾನೆಂಬ ಅನುಮಾನ ಬಂದಿತು. ಅವನು ಹತ್ತಿರ ಬಂದಾಗ, ಪಕ್ಕದಲ್ಲಿ ಕುಳಿತಾಗ ಸಿಗರೇಟಿನ ವಾಸನೆ ಬರುತ್ತಿತ್ತು. ಅವನು ಕೆಲವು ಸಲ ಮೇರಿಥಾಮಸ್ ಮನೆಯಲ್ಲಿ ಇರುತ್ತಿದ್ದ. ಅವಳೂ ನನಗೆ ಇವನ ಬಳಿ ಸಿಗರೇಟು ಬೀಡಿಯ ತುಣಿಕುಗಳು ಕಂಡಿದ್ದಾಗಿ ಹೇಳಿದ್ದಳು. ಒಂದು ದಿನ ಅವನು ನಮ್ಮ ಮನೆಗೆ ಬಂದಾಗ ನಾನು ಅವನ ಜೇಬನ್ನು ಖಾಲಿಮಾಡಲು ಹೇಳಿದೆ. ಅದರಲ್ಲಿ ಸಿಗರೇಟಿನ ತುಂಡುಗಳೂ ಬೆಂಕಿ ಪೊಟ್ಟಣವೂ ಹೊರಬಂದವು.

ಅವನು ಎಲ್ಲವನ್ನೂ ಮರೆಮಾಚಿಸಿ ಏನೋ ಸಬೂಬು ಹೇಳಿದನು. ನನಗೆ ಬಹಳ ಕೋಪ ಬಂತು. ನಾನು ಇವನನ್ನು ಒಂಬತ್ತು ವರ್ಷಗಳು ಬೆಳೆಸಿದ್ದು ಅವನು ನನಗೇ ಸುಳ್ಳು ಹೇಳುವುದಕ್ಕಲ್ಲ. ಮುರುಗೇಶ ಈಗ ಬೆಳೆದು ದೊಡ್ಡವನಾಗಿದ್ದ. ನಾನು ಅವನಿಗೆ ನಮ್ಮ ಮನೆಯಲ್ಲಿರುವುದಾದರೆ ಅಲ್ಲಿನ ಸಂಪ್ರದಾಯಕ್ಕೆ ಸರಿಯಾಗಿರು ಇಲ್ಲದ್ದಿದ್ದರೆ ಬೇರೆ ವ್ಯವಸ್ಥೆ ಮಾಡಿಕೋ ಎಂದು ಹೇಳಿದೆ. ನನ್ನ ಮುಖಕ್ಕೇ ಹೊಡೆದಂತೆ ಸುಳ್ಳು ಹೇಳಿ ಮೋಸ ಮಾಡುವವನನ್ನು ನಾನು ನನ್ನ ಮನೆಯಲ್ಲಿಟ್ಟುಕೊಳ್ಳ ಬೇಕಾಗಿರಲಿಲ್ಲ. ಅವನು ಮಾರನೆಯ ದಿನ ಹೊರಟುಹೋದ. ಅವನಿಗೆ ಅವನ ತಂದೆ ತಾಯಿಯರ ಹಳ್ಳಿಗೆ ಹೋಗಬೇಕಿತ್ತು. ಅದಾದ ನಂತರ ಅವನ ಬಗ್ಗೆ ಸಮಾಚಾರವು ನನಗೆ ಇತರರಿಂದ ತಿಳಿಯುತ್ತಿತ್ತು.ಅವನು ಬೆಂಗಳೂರಿಗೆ ಹಿಂದಿರುಗಿ ಒಂದು ದೇವಸ್ಥಾನದಲ್ಲಿ ಮಾಲಿಯಾಗಿ ಕೆಲಸ ಮಾಡುತ್ತಿದ್ದ. ಅವನಿಗೆ ಕುಡಿಯುವ ಹವ್ಯಾಸವಾಗಿತ್ತು. ಅವನು ನನ್ನನ್ನು ನೋಡಲು ಬಂದ. ಕ್ಷಮೆಯಾಚನೆ ಮಾಡಿದ. ನಾನು ಅವನಿಗೆ ಅದೆಲ್ಲಾ ಮುಗಿದುಹೋಗಿದ್ದ ಕಥೆ ಎಂದೆ. ನನಗೆ ಮುಖ್ಯ ವಾದದ್ದು ಅವನು ಈಗ ವಿಕಲಾಂಗನಾಗಿರಲಿಲ್ಲ. ಸ್ವಂತವಾಗಿ ಸಂಪಾದಿಸಿ ಬಾಳನ್ನು ನಡೆಸುತ್ತಿದ್ದ. ಕೆಲವು ದಿನಗಳ ನಂತರ ಅವನಿಗೆ ಡ್ರೈವರ್ ಆಗಿ ಒಳ್ಳೆಯ ಕೆಲಸ ಸಿಕ್ಕಿತು, ಆತ ಸುಖವಾಗಿದ್ದಾನೆ ಎಂದು ತಿಳಿಯಿತು.

ಮುರುಗೇಶನಿಗೆ ಬೇಕಾದಷ್ಟು ಜನ ಸಹಾಯ ಮಾಡಿದರು. ಅವನು ನಾವು ತೋರಿಸಿದ ದಾರಿಯಲ್ಲಿನಡೆಯದೆ ಇರಬಹುದು. ಆದರೆ ಅವನಿಗೆ ಸ್ವಂತವಾಗಿ ತನ್ನ ಜೀವನದ ಬಗ್ಗೆ ನಿರ್ಧಾರಗಳನ್ನು ತೆಗೆದುಕೊಳ್ಳುವ ಸಾಮರ್ಥ್ಯವಿತ್ತು ಮತ್ತು ಯಾರ ಆಸರೆಯೂ ಇಲ್ಲದೆ ಸ್ವಂತವಾಗಿ ಬಾಳಬೇಕೆಂಬ ಆಸೆಯಿತ್ತು. ಇದೇ ಅವನಿಗೆ ಸಹಾಯಮಾಡಲು ನಮ್ಮೆಲ್ಲರನ್ನೂ ಪ್ರೇರೇಪಿಸಿತು.

* * *

ಇದು ನಾನು ಹೇಳಬೇಕೆಂದಿರುವ ಕೊನೆಯ ಕಥೆ. ಇದು ಶಂಕರ್ ಬಗ್ಗೆ. ನಾನು ಅವನನ್ನು ನೊಡಿದ್ದು ಅವನು ಎ.ಪಿ.ಡಿ. ಗೆ ಒಂದು ವ್ಹೀಲ್ ಚೇರ್ ಕೊಳ್ಳಲು ಬಂದಿದ್ದಾಗ. ಅವನಿಗೆ ಒಂದು ಅಪಘಾತದಲ್ಲಿ ಬೆನ್ನಿಗೆ ಏಟು ಬಿದ್ದು ಅವನು ವಿಕಲಾಂಗನಾಗಿದ್ದ. ಆರು ತಿಂಗಳು ಒಂದಾಸ್ಪತ್ರೆಯಿಂದ ಇನ್ನೊಂದಕ್ಕೆ ಅಲೆದ ಅವನಿಗೆ ಕೊನೆಗೆ ಅವನಿಗೆ ಮತ್ತ್ಯಾವ ವೈದ್ಯಕೀಯ ನೆರವೂ ಆಗುವುದಿಲ್ಲ ಎಂದು ಹೇಳಿದರು. ಅವನ ಕೈಯಲ್ಲಿದ್ದ ಹಣವೂ ಖಾಲಿಯಾಗಿತ್ತು. ಅವನ ಹೆಂಡತಿ ಮತ್ತು ಎರಡು ವರ್ಷದ ಮಗುವಿಗೆ ಇವನೇ ಅನ್ನದಾತ. ಅವನಿಗೆ ಇದ್ದ ಕೆಲಸವೂ ಹೊಯಿತು. ಅವನ ಸಹೊದರ ಸ್ವಲ್ಪಮಟ್ಟಿಗೆ ನೆರವಾದ. ಮಲ್ಲೇಶ್ವರದಲ್ಲಿ

ಒಂದು ಪುಟ್ಟ ಕೋಣೆಯಲ್ಲಿ ಇವನು ವಾಸವಾಗಿದ್ದನು. ದಿನವಿಡೀ ಹಾಸಿಗೆಯಲ್ಲಿ ಮಲಗಿರುತ್ತಿದ್ದ ಇವನಿಗೆ ಬೆನ್ನಿನ್ನಲ್ಲೆಲ್ಲಾ ಗಾಯಗಳಾದವು. ಕಾಲಿನಲ್ಲಿ ಗ್ಯಾಂಗರೀನ್ ಆಗಿ ಜೀವ ಉಳಿಸಲು ಕಾಲನ್ನು ಆಪರೇಷನ್ ಮೂಲಕ ತೆಗೆಯಬೇಕಾಯಿತು.

ಅವನಿಗೆ ಯಾವರೀತಿಯಲ್ಲಿ ನೆರವಾಗಬಹುದು ಎಂದು ತಿಳಿದುಕೊಳ್ಳಲು ನಾನು ಅವನ ಮನೆಗೆಹೋದೆ. ಅವನ ಹೆಂಡತಿ ಉಷಾ ಅವನನ್ನೂ ಮಗುವನ್ನೂ ಚೆನ್ನಾಗಿ ನೋಡಿಕೊಳ್ಳುತ್ತಿದ್ದಳು. ಅವರು ಹೊರಗೆ ಹೊಗಬೇಕಾದಾಗ ಅವಳು ಅವನನ್ನು ಎತ್ತಿ ರಿಕ್ಷಾದಲ್ಲಿ ಕೂರಿಸಿ, ಇಳಿಸಿ ಮಾಡಬೇಕಾಗಿತ್ತು. ನನಗೆ ಅವಳ ಬಗ್ಗೆ ಚಿಂತೆಯಾಗ ತೊಡಗಿತು. ಅವಳಿಗೆ ಸ್ವಲ್ಪವೂ ವಿರಾಮವಿಲ್ಲದ ಕೆಲಸ. ಅವನನ್ನು ಕ್ಷಣವೂ ಬಿಟ್ಟಿರಲಾಗುತ್ತಿರಲಿಲ್ಲ.ನಾನು ಅವರಿಗೆ ಏ.ಪಿ.ಡಿ. ಗೆ ಬನ್ನಿ, ನಿಮ್ಮ ಈ ಸಮಸ್ಯೆಗೆ ಯೇನಾದರೂ ಸಮಾಧಾನ ಹುಡುಕೋಣ ಎಂದು ಹೇಳಿ ಒಪ್ಪಿಸಿದೆ. ಅಂದಿನ ಕಾಲದಲ್ಲಿ ಈ ರೀತಿಯ ವಿಕಲಾಂಗರಿಗೆ ಹೆಚ್ಚಿನ ಸೌಕರ್ಯಗಳು ಇರಲಿಲ್ಲ. ಮುಖ್ಯವಾಗಿ ಉಷಳಿಗೆ ಸ್ವಲ್ಪ ವಿರಾಮವನ್ನು ಕಲ್ಪಿಸುವುದು ಮತ್ತು ಶಂಕರಿಗೆ ಯಾವುದಾದರೂ ಸೂಕ್ತ ಕೆಲಸದಲ್ಲಿ ತರಬೇತಿ ನೀಡುವುದೇ ಇದರ ಉದ್ದೇಶವೆಂದು ನಾನು ಅವರಿಗೆ ತಿಳಿಸಿದೆ. ಏ.ಪಿ.ಡಿ ಯಲ್ಲಿ ಶಂಕರನಿಗೆ ತನ್ನ ದೈನಂದಿನ ಜೀವನವನ್ನು ಸ್ವತಃ ನಿರ್ವಹಿಸುವಂತೆ ತರಬೇತಿ ಕೊಡಲು ಸಮರ್ಥರಿದ್ದರು. ಇದರಿಂದ ಶಂಕರನಿಗೆ ಮನೆಯಿಂದ ಹೊರಗೆ ಹೋಗುವ ಧೈರ್ಯ ಬಂದಿತು.

ಏ.ಪಿ.ಡಿ ಯಲ್ಲಿ ಆಗ ಅಕೌಂಟಂಟ್ ಕೆಲಸ ಖಾಲಿ ಇರಲಿಲ್ಲ. ನಾನು ನನ್ನ ಸ್ನೇಹಿತ ಪ್ರದೀಪ್ ಅವರಿಗೆ ಈ ವಿಷಯ ತಿಳಿಸಿದೆ. ಅವರು 'ಸಮೂಹ' ಎಂಬ ಒಂದು ಗ್ರಾಮೀಣ ಅಭಿವೃದ್ಧಿ ಸಂಸ್ಥೆಯನ್ನು ಸ್ಥಾಪಿಸಿದ್ದರು. ಅವರು ಅದರಲ್ಲಿ ಶಂಕರನಿಗೆ ಯಾವುದಾದರೂ ಸೂಕ್ತ ಕೆಲಸವನ್ನು ಕೊಡುವುದಾಗಿ ತಿಳಿಸಿದರು. ಆದರೆ ಅವರ ಆಫೀಸು ಮೊದಲನೆಯ ಮಾಡಿಯಲ್ಲಿತ್ತು. ಅಲ್ಲದೆ, ಶಂಕರನಿಗೆ ಹತ್ತಿರದಲ್ಲೇ ಇರಲು ಜಾಗವು ಬೇಕಿತ್ತು. ಪ್ರದೀಪ್ ಬೇಕಾದ ವ್ಯವಸ್ಥೆಗಳನ್ನೆಲ್ಲಾ ಮಾಡಿದರು. ಕೆಲವು ದಿನಗಳಲ್ಲಿ ಶಂಕರ್ 'ಸಮೂಹ'ದ ರಾಯಚೂರಿನ ಶಿಬಿರಕ್ಕೆಸಂಸಾರದೊಡನೆ ಹೋದ. ಅಲ್ಲಿ ಅವನಿಗೆ ಬೇಕಾದ ಸೌಕರ್ಯಗಳೆಲ್ಲಾ ಇದ್ದವು ಅವರು ಮುಂದಿನ ಐದಾರು ವರ್ಷಗಳು ಅಲ್ಲೇ ಇದ್ದರು.

ಇಷ್ಟರಲ್ಲಿ ಉಷಳಿಗೆ ಅಲ್ಲಿಯ ಜೀವನ ಸಾಕಾಗಿತ್ತು. ಅವಳು ಬೆಂಗಳೂರಿಗೆ ಹಿಂದಿರುಗಿ ಮಗಳನ್ನು ಓದಿಸಬೇಕೆಂದು ಇದ್ದಳು. ಆದರೆ, ಶಂಕರನಿಗೆ ಬೆಂಗಳೂರಿನಲ್ಲಿ ಕೆಲಸ ಸಿಗುವುದು ದೊಡ್ಡ ಸವಾಲಾಗಿತ್ತು. ಅವನಿಗೆ ಕೆಲಸ ಮಾಡುವ ಕ್ಷಮತೆ ಇದ್ದರೂ ಜನರ ಮನಸ್ಸಿನಲ್ಲಿ ವಿಕಲಾಂಗರ ಬಗ್ಗೆ ತಪ್ಪು ಕಲ್ಪನೆ ಇತ್ತು. ಕೊನೆಗೆ ಅವನಿಗೆ ನೆರವಾಗಲು ನನಗೆ ಕರೆ

ಬಂದಿತು. ಉಷಾ ಮಗಳೊಂದಿಗೆ ಬೆಂಗಳೂರಿಗೆ ಬಂದು ಮಗಳನ್ನು ಶಾಲೆಗೆ ಸೇರಿಸಿದಳು. ಶಂಕರ್ ಇನ್ನೂ ರಾಯಚೂರಿನಲ್ಲೇ ಕೆಲಸ ಮಾಡುತ್ತಿದ್ದ. ಎರಡು ವರ್ಷಗಳನಂತರ ಅವನು ಬೆಂಗಳೂರಿಗೆ ಬಂದ. 'ಸಮೂಹ' ಅವನಿಗೆ ಅವರದ್ದೇ ಆದ ಒಂದು ಪ್ರಾಜೆಕ್ಟಿನಲ್ಲಿ ಕೆಲಸ ಕೊಟ್ಟರು. ಅವನು ಇನ್ನೂ ಅಲ್ಲೇ ಕೆಲಸ ಮಾಡುತ್ತಿದ್ದಾನೆ. ಅವನು ಸ್ವಲ್ಪ ಹಣವನ್ನು ಕೂಡಿಟ್ಟಿದ್ದ, ಅದರಿಂದ ಅವನು ತನ್ನ ಚಿಕಿತ್ಸೆಗಾಗಿ ಮಾಡಿದ ಸಾಲವನ್ನು ತೀರಿಸಿ ಒಂದು ಮನೆಯನ್ನು ಕೊಂಡು ಕೊಂಡನು. ಈಗ ಅವನು ಒಂದು ಕೈಯಲ್ಲಿ ನಿಯಂತ್ರಣ ಮಾಡುವಂತಹ ಕಾರನ್ನು ಇಟ್ಟುಕೊಂಡಿದ್ದಾನೆ ಮತ್ತು ಅವನ ಸಂಸಾರ ಸ್ಥಿರವಾಗಿದೆ.

ಅವನು ಅನುಭವಿಸಿದ ನೋವು ಮತ್ತು ಮನೋಸಂಕಟ ಅವನನ್ನು ನಿರಂತರವಾಗಿ ಹಾಸಿಗೆ ಹಿಡಿಯುವಂತೆ ಮಾಡುವಂತದ್ದು. ಆದರೆ, ಶಂಕರನ ಮನೋಸ್ಥೈರ್ಯ ಅವನ ಜೀವನವನ್ನು ಮತ್ತೆ ಹಳಿಯಮೇಲೆ ತಂದಿತು. ಎ.ಪಿ.ಡಿ ಮತ್ತು 'ಸಮೂಹ' ಅವನಿಗೆ ಹೊರಗಿನಿಂದ ನೆರವು ನೀಡಿತು. ಇದು ಎಲ್ಲರಿಗೂ ಸಿಗುತ್ತದೆ. ಆದರೆ ವಿಕಲಾಂಗರಿಗೆ ಬೇಕಾದುದು ಮುಖ್ಯವಾಗಿ ಅವರ ಮನೋಸ್ಥೈರ್ಯ. ಅವರು ಒಂದು ಹೆಜ್ಜೆ ಮುಂದಿಟ್ಟರೆಮುಂದೆ ಸಾಗುವುದಕ್ಕಾಗುತ್ತದೆ. ಅನೇಕರು ಅವರ ವಿಧಿಯನ್ನು ಹಳಿಯುತ್ತಾ, ಅವರ ಮನೆಯವರು ಅವರಿಗೆ ಸುಖ ಸೌಕರ್ಯಗಳನ್ನು ಒದಗಿಸಬೇಕೆಂದು ಆಶಿಸುತ್ತಾರೆ, ಮತ್ತು ಕೊನೆಗೆ ನಿರಾಶರಾಗಿ ಖಿನ್ನರಾಗುತ್ತಾರೆ. ಅವರಿಗೆ ಬೇಕಾದುದು ಪರಿಸ್ಥಿತಿಯನ್ನು ಎದುರಿಸಲು ಬೇಕಾದ ಧೈರ್ಯ ಮತ್ತು ಸ್ಥೈರ್ಯ. ಇದು ಸಾಧ್ಯ. ನಾನು ಇದು ಸಾಧ್ಯವಾದದ್ದನ್ನು ನೋಡಿದ್ದೇನೆ.

* * *

# ನೋವು ಮತ್ತು Perseverance

ನನಗೆ ಸಂತೋಷವಾದ ಸಮಯದ ನೆನಪು ಎಷ್ಟಿದೆಯೋ ಅಷ್ಟೇ ನೋವುಕೊಟ್ಟ ಸಮಯದ ನೆನಪೂ ಇದೆ ಅನ್ನಿಸುತ್ತೆ. ದೈಹಿಕವೋ, ಮಾನಸಿಕವೋನೋವು ಹಸಿರಾಗಿಯೇ ಇರುತ್ತೆ ಮತ್ತು ಅದರಿಂದ ಆಗುವ ನಿರಾಸೆ ಅಷ್ಟೇ ದೊಡ್ಡದಾಗಿರುತ್ತೆ.

ನನಗೆ ನಾನು ೧೯೭೬ ರಲ್ಲಿ ಅನುಭವಿಸಿದ ತಡೆಯಲಾರದ ನೋವಿನ ನೆನಪು ಸ್ಪಷ್ಟವಾಗಿದೆ. ನನ್ನ ನರಗಳು ನನಗೆ ನರಕ ವೇದನೆ ಕೊಡುತ್ತಿದ್ದವು. ನನ್ನ ಕಿವಿ ನೋಯುತ್ತಿತ್ತು, ನನಗೆ ಸ್ವಲ್ಪವೂ ಶಬ್ದವನ್ನು ತಡೆಯಲಾಗುತ್ತಿರಲಿಲ್ಲ. ಯಾರಾದರೂ ಬಾಗಿಲನ್ನು ಜೋರಾಗಿ ಹಾಕಿದರೆ ನಾನು ಕಿರಿಚುತ್ತಿದ್ದೆ. ಯಾರಾದರೂ ನನ ಮಂಚವನ್ನು ಮುಟ್ಟಿದರೆ ನಾನು ಕೂಗಾಡುತ್ತಿದ್ದೆ. ನನಗೆ ಎಲ್ಲಾ ಶಬ್ದವೂ ಅತಿ ಜೋರಾಗಿ ಆಗುತ್ತಿರುವಂತೆ ತೋರುತ್ತಿತ್ತು. ನನಗೆ ಯಾರು ಮಾತಾಡುವುದೂ ಬೇಕಾಗಿರಲಿಲ್ಲ. ನನಗೆ ನಿದ್ದೆ ಬರುತ್ತಿರಲಿಲ್ಲ. ಬಾಯೊಳಗೆ ಹುಣ್ಣಾದಂತೆ ನೋವಾಗುತ್ತಿತ್ತು. ಕೊನೆಗೆ ನನ್ನ ಕಸಿನ್ ರಾಮದಾಸ್ ಬೆಂಗಳೂರಿನ ಉತ್ತಮ ವೈದ್ಯರಲ್ಲಿ ಒಬ್ಬರಾದ ಡಾ. ವಾರ್ಕಿ ಅವರನ್ನು ಕರೆತಂದರು. ಅವರು ನನ್ನನ್ನು ಪರೀಕ್ಷಿಸಿ ನನ್ನ ಬಾಯಿಹುಣ್ಣು ವಾಸಿಯಾಗಿ ಸರಿಹೋಗುತ್ತದೆ ಎಂದು ಹೇಳಿದರು. ನನಗೆ ಅಷ್ಟೇನೂ ನಂಬಿಕೆ ಬರಲಿಲ್ಲ, ಆದರೆ ಆ ರಾತ್ರಿ ನಾನು ಚೆನ್ನಾಗಿ ಮಲಗಿದೆ.

ನಾನು ಬಹಳ ದಿನಗಳು ಹಾಸಿಗೆಯಲ್ಲೇ ಕಳೆದೆ. ನನಗೆ ನುಂಗಲು ಕಷ್ಟವಾದ್ದರಿಂದ ಘನವಾದ ಆಹಾರ ಯಾವುದೂ ತಿನ್ನಲಾಗುತ್ತಿರಲಿಲ್ಲ. ನನ್ನ ಕಸಿನ್ ಕೇಸರಿ (ಚಿಲ್ಲು) ನನ್ನ ಅವಸ್ಥೆ ನೋಡಿ ನನ್ನನ್ನು ಒಬ್ಬ ಇ.ಎನ್.ಟಿ ತಜ್ಞರಿಗೆ ತೋರಿಸಿದನು. ಅವರು ನನ್ನ ಅನ್ನ ನಾಳವು infect ಆಗಿದೆ, ಅದ್ದರಿಂದ ನ್ನಗೆ ಮೂಗಿನ ಮೂಲಕ ಒಂದು ಕೊಳವೆಯನ್ನು ಹಾಕಿ ಅದರಿಂದ ಆಹಾರ ಕೊಡಬೇಕು ಎಂದರು. ನನಗೆ ನನ್ನ ಅಮ್ಮನಿಗೆ ತೊಂದರೆ ಕೊಡಲು ಇಷ್ಟವಿರಲಿಲ್ಲ. ಅದಕ್ಕೆ, ನನ್ನ ಸ್ನೇಹಿತೆ ನಿರ್ಮಲ ಬ್ಲೊಮ್ ಅಡಪ್ಪ ಮತ್ತು ನನ್ನ ಕೆಲವು ಕಸಿನ್ ಗಳು ಒಬ್ಬೊಬ್ಬರಾಗಿ ಸರದಿಯಮೇಲೆ ನನ್ನನ್ನು ರಾತ್ರಿ ನೋಡಿಕೊಂಡರು. ನನ್ನ ಅಕ್ಕ ಪ್ರಭಾ ಮುಂಬೈಯಿಂದ ಬಂದು ನನ್ನ ಜೊತೆ ಘಂಟೆ ಗಟ್ಟಲೆ ಕಳೆಯುತ್ತಿದ್ದಳು. ನನ್ನ ತೂಕ ಬಹಳ ಇಳಿದಿತ್ತು. ನನ್ನನ್ನು ಹಾಸಿಗೆಯಿಂದ ಎತ್ತಿ ಕುರ್ಚಿಯಮೇಲೆ ಕೂರಿಸಬೇಕಾಗುತ್ತಿತ್ತು. ನನ್ನ ಮುಖವೂ ಬದಲಾಗಿತ್ತು. ನನಗೆ ಸದಾಕಾಲ ಹಸಿವಾಗುತ್ತಿತ್ತು. ನಂತರದಿನಗಳಲ್ಲಿ ನಾನು ಆಫ್ರಿಕಾ ದೇಶದ ವಿವಿಧ ಭಾಗಗಳಲ್ಲಿ ಜನರು ಹಸಿವಿನಿಂದ

ಬಳಲುತ್ತಿರುವುದರ ಬಗ್ಗೆ ಓದಿದಾಗ ಮನಸ್ಸಿಗೆ ಬಹಳ ನೋವಾಗುತ್ತಿತ್ತು. ಹಸಿವು ಮನಸ್ಸಿಗೆ ಬಹಳ ನೋವನ್ನು ಕೊಡುತ್ತದೆ.

ನನಗೆ ನನ್ನ ಸುತ್ತ ಇದ್ದ ಜನರು ಮಾತನಾಡಿಕೊಳ್ಳುವುದು ಕೇಳಿಸುತ್ತಿತ್ತು.ಅವರು ನನ್ನ ಬಗ್ಗೆ ಮಾತನಾಡುತ್ತಾ ನನಗೆ ಹಲ್ಲಿನ ಚಿಕಿತ್ಸೆ ಮಾಡಿದಾಗ 'ಗ್ಯಾಂಗರೀನ್' ಅಗಿರಬೇಕು ಎಂದು ಕೊಂಡಿದ್ದರು. ಅದೊಂದು ದೊಡ್ಡ ಕಥೆ. ನನ್ನ ಮಾರೀಶಸ್‌ನ ಸ್ನೇಹಿತ ಬೆಂಗಳೂರಿನ ಡೆಂಟಲ್ ಕಾಲೇಜಿನಲ್ಲಿ ಓದುತ್ತಿದ್ದನು. ಅವನ ಕೋರಿಕೆಯ ಮೇರೆಗೆ ನಾನು ಅವನ ಕಾಲೇಜನ್ನು ನೋಡಲು ಹೋಗಿದ್ದೆ. ಆಗ ಅಲ್ಲಿದ್ದ ಡಾಕ್ಟರ್ ನನ್ನನ್ನು ಹಲ್ಲು ಪರೀಕ್ಷೆ ಮಾಡಿಸಿಕೊಳ್ಳಲು ಒತ್ತಾಯಿಸಿದರು. ಅವರ ಒತ್ತಾಯಕ್ಕೆ ಮಣಿದು ನಾನೂ ಒಪ್ಪಿಕ್ಕೊಂಡೆ. ಅವಳು ನನ್ನ ಹಲ್ಲುಗಳನ್ನು ಪರೀಕ್ಷಿಸಿ ನನ್ನ

ದವಡೆಯ ಹಲ್ಲನ್ನು (ವಿಸ್ಡಮ್ ಟೂಥ್) ತೆಗೆಸಿಕೊಳ್ಳಲು ಹೇಳಿದಳು. ನನಗೆ ಇದು ಅಷ್ಟುಅವಶ್ಯಕವೆಂದು ತೋಚದಿದ್ದರೂ, ಆಸ್ಪತ್ರೆಗೆ ಬಂದಿದ್ದರಿಂದ ಒಪ್ಪಿಕ್ಕೊಂಡೆ. ಆದರೆ ಇದು ದೊಡ್ಡ ರಾದ್ಧಾಂತವಾಯಿತು. ಅವಳು ಎರಡು ಸಲ ಸೂಜಿ ಮದ್ದು ಕೊಟ್ಟಿದ್ದರೂ ಅವಳಿಂದ ಆ ಹಲ್ಲನ್ನು ತೆಗೆಯಲಾಗಲಿಲ್ಲ. ಅಷ್ಟು ಹೊತ್ತಿಗೆ ದೊಡ್ಡ ಡಾಕ್ಟರ್ ಅಲ್ಲಿಗೆ ಬಂದರು. ಅಲ್ಲಿನಡೆದಿದ್ದನ್ನು ಕೇಳಿ, ನೋಡಿ ಅವರಿಗೆ ತಡೆಯಲಾರದ ಕೋಪ ಬಂತು. ಅವರು ಚಿಕ್ಕ ಡಾಕ್ಟರನ್ನು ಚೆನ್ನಾಗಿ ಬೈದರು. ನಾನು ಮನಸ್ಸಿನಲ್ಲಿ 'ಇದೇನಪ್ಪ ನನ್ನ ಹಣೆ ಬರಹ, ಇವರಿಗೆ ನಾನೇ ಸಿಕ್ಕಿದೆನೇ' ಅಂದು ಕೊಂಡೆ.

ಆರು ತಿಂಗಳ ಯಾತನೆಯ ನಂತರ ನಾನು ಬೊಂಬಾಯಿಗೆ ಹೋದೆ. ನಾನು ಬರೀ ನೀರಾಹಾರದಲ್ಲೇ ಜೀವಿಸಲು ಕಲಿತಿದ್ದೆ. ನನ್ನ ಅಕ್ಕ ನನ್ನ ಎಲ್ಲಾ ಊಟವನ್ನೂ ನೀರಾಗಿ ಮಾಡಿ ಚಮಚದಿಂದ ನನಗೆ ಕೊಡುತ್ತಿದ್ದಳು. ಕೆಲವು ತಿಂಗಳುಗಳು ಕಳೆದವು. ನಂತರ ನಾನು ಶ್ರೀಮತಿ ದತ್ ಎಂಬ ಹೋಮಿಯೋಪತಿ ವೈದ್ಯರಬಳಿ ಹೋದೆ. ಅವಳು ನನ್ನ ಕಾಯಿಲೆಯ ಬಗ್ಗೆ ಇಡೀ ವಿವರಗಳನ್ನು ಬರೆದುಕ್ಕೊಂಡು, ನನ್ನ ಬಾಯಲ್ಲಿ ಔಷಧವನ್ನು ಹಾಕಿದಳು. ಅವಳ ಪ್ರಕಾರ ೪ –೫ ತಿಂಗಳಲ್ಲಿ ನಾನು ಸರಿಹೋಗುತ್ತೇನೆ ಎಂದಳು. ನನಗೆ ಆ ನೋವಿನಿಂದ ಮುಕ್ತಿಸಿಕ್ಕಿದರೆ ಸಾಕಾಗಿತ್ತು. ನನ್ನ ತಲೆಯ ಹಿಂಬಾಗ, ಬೆನ್ನು ಮತ್ತು ಕತ್ತು ಬಹಳ ನೋಯುತ್ತಿತ್ತು. ಅವಳ ಔಷಧಿ ಮ್ಯಾಜಿಕ್ ನಂತೆ ಕೆಲಸ ಮಾಡಿತು. ಒಂದು ತಿಂಗಳಲ್ಲೇ ನನಗೆ ವಾಸಿಯಾಗುವ ಲಕ್ಷಣಗಳು ಕಂಡುಬಂದವು. ಗಾಯವಾದ ಸ್ಥಳಗಳಲ್ಲಿಒಂದು ತೆಳುವಾದ ಪದರ ಬೆಳೆದುಕೊಂಡಂತೆ ಅನಿಸುತ್ತಿತ್ತು. ನನ್ನ ವಸಡುಗಳು ಮತ್ತೆ ಬೆಳೆಯ ತೊಡಗಿದ್ದವು. ನನಗೆ ಕಡಲೆ ಬೀಜವನ್ನು ತಿನ್ನಬೇಕೆಂದು ಆಸೆಯಾಗುತ್ತಿತ್ತು. ಅದನ್ನು

ಯಾರಾದರೂ ಪುಡಿಮಾಡಿಕೊಟ್ಟರೆ, ನಾನು ತಿನ್ನಬಹುದಿತ್ತು. ಈಗಲೂ ನಾನು ಕಾರಿನಲ್ಲಿ ಹೋಗುತ್ತಿರುವಾಗ ದಾರಿಯಲ್ಲಿ ಕಡಲೆಕಾಯಿ ಮಾರುವವನನ್ನು ಕಂಡರೆ, ಮನಸ್ಸಿನಲ್ಲಿ ತಡೆಯಲಾರದ ಆಸೆ ಹುಟ್ಟುತ್ತದೆ.

ಈಗ ನನಗೆ ಅನ್ನಿಸುತ್ತದೆ. ಆ ಹಲ್ಲು ಕೀಳುವಾಗ ಯಾವುದೋ ರಕ್ತ ನಾಳಕ್ಕೋ, ಅಥವಾ ನರಕ್ಕೋ ಹಾನಿ ಉಂಟಾಗಿರಬೇಕು. ಆದರೆ, ಯಾರೂ ನನ್ನ ಸ್ಥಿತಿಯನ್ನು ಸರಿಯಾಗಿ ಕಂಡುಹಿಡಿಯಲಿಲ್ಲ ಅಥವಾ ಅದನ್ನು ಹೆಸರಿಸಲಿಲ್ಲ. ಅಷ್ಟು ಹೊತ್ತಿಗೆ ಬೆಂಗಳೂರಿನಲ್ಲಿ ಎಲ್ಲರಿಗೂ ಈ ವಿಕಲಾಂಗ ಹೆಂಗಸಿನ ವೈದ್ಯಕೀಯ ತೊಂದರೆಗಳ ಬಗ್ಗೆ ತಿಳಿದಿತ್ತು, ದಂತ ವೈದ್ಯರಿಗೂ ಕೂಡ. ನಮ್ಮ ತಂದೆ ನನ್ನನ್ನು ಎರಡು ಮೂರು ವೈದ್ಯರಿಗೆ ತೋರಿಸಿದರು. ಅವರೆಲ್ಲರಿಗೂ ನನ್ನ ಸಮಸ್ಯೆಯು ತಿಳಿದಿತ್ತು. ಪಾಪ ನನ್ನ ಮಾರಿಷಸ್‌ನ ಮಿತ್ರ, ಅವನಿಂದ ಏನೂ ಮಾಡಲಾಗಲಿಲ್ಲ. ಅವನು ಇದೆಲ್ಲವನ್ನೂ ಮೂಕ ಪ್ರೇಕ್ಷಕನಾಗಿ ನೋಡುತ್ತಿದ್ದ. ಕೆಲವು ದಿನಗಳ ನಂತರ ನನಗೆ ಗುಣವಾಯಿತು. ನಾನು ಅವನನ್ನು ದೂಷಿಸುವುದಿಲ್ಲ, ಮುಖ್ಯವಾಗಿ ನಾನು ಆ ಡ್ಯೂಟಿ ಡಾಕ್ಟರ್ ಸಲಹೆಯಂತೆ ಹಲ್ಲು ಕೀಳಿಸಲು ಒಪ್ಪಬಾರದಿತ್ತು. ನನ್ನ ಚರ್ಮ ಮತ್ತು ವಸಡುಗಳು ಮುಕ್ಕಾಲು ಪಾಲು ಗುಣವಾಗಿದ್ದರೂ, ಹಲ್ಲು ಸ್ವಲ್ಪ ಅಲುಗಾಡುತ್ತಿತ್ತು ಮತ್ತು ಬಹಳ ನೋವಾಗುತ್ತಿತ್ತು. ಆದರೆ ಒಂದು ವಿಧದಲ್ಲಿನಾನು ಅದೃಷ್ಟವಂತೆ ಎಂದೇ ಹೇಳಬೇಕು. ಏಕೆಂದರೆ ಇದು ನನ್ನ ಜೀವಕ್ಕೇ ಅಪಾಯ ಆಗಬಹುದಿತ್ತು, ಆದರೆ ಹಾಗೇನೂ ಆಗಲಿಲ್ಲ.

೧೯೬೭ ರ ವೇಳೆಗೆ, ನಾನು ವೆಂಕಿಯನ್ನು ಮದುವೆಯಾದ ಮೇಲೆ, ನನ್ನ ಜೀವನ ಹೊಸದೊಂದು ದಿಕ್ಕಿನಲ್ಲಿ ಚಲಿಸುತ್ತಿತ್ತು. ನಮ್ಮ ಮದುವೆಯಾದ ಕೆಲವೇ ದಿನಗಳಲ್ಲಿ ನಾನು ವೆಂಕಿ ಮತ್ತು ನಿರ್ಮಲ ಜೆಂಷೆಡ್ಪುರದಿಂದ ಕಲ್ಕತ್ತಾಗೆ ಹೊರಟೆವು. ಅಲ್ಲಿ ನಮ್ಮ ಸ್ನೇಹಿತರು ಒಂದು ಆರತಿ ಅಕ್ಷತೆಯನ್ನು ಏರ್ಪಡಿಸಿದ್ದರು. ಕಲ್ಕತ್ತಾದಲ್ಲಿ ಒಂದು ರಾತ್ರಿ ನಾವು ನನ್ನ ಚಿಕ್ಕ ವಯಸ್ಸಿನ ಗೆಳೆಯರ ಜೊತೆ ಇದ್ದೆವು. ಮರುದಿನ ಬೆಳಿಗ್ಗೆ ನಾವು ಬಾಗ್ಡೋಗ್ರಾಗೆ ವಿಮಾನದಲ್ಲಿ ಹೋದೆವು. ಅಲ್ಲಿ ಏರ್ಪೋರ್ಟಿನಲ್ಲಿ ಟ್ಯಾಕ್ಸಿಗೆ ಕಾಯುತ್ತಿದ್ದಾಗ ನಾನು ಒಬ್ಬರನ್ನು ನೋಡಿದೆ. ಅವರು ಬಹಳ ಪರಿಚಿತರಂತೆ ತೋರಿದರು. ಅವರ ಚಿತ್ರಗಳನ್ನು ಅನೇಕಸಲ ನೊಡಿದ್ದೆ ಮತ್ತು ನನಗೆ ಅವರನ್ನು ಸಂಧಿಸುವ ಆಸೆ ಇತ್ತು.ನಾನು ಅವರ ಬಳಿಹೋಗಿ 'ನೀವು ತೆನ್ಸಿಂಗ್ ನೋರ್ಗೇ ಯಾ? ಎಂದು ಕೇಳಿದೆ' – ಹೆಸರಾಂತ ಶರ್ಪಾ ಪರ್ವತ ಆರೋಹಿ ತೆನ್ಸಿಂಗ್, ಎಡ್ವರ್ಡ್ ಹಿಲ್ಲರಿ ಜೊತೆಯಲ್ಲಿ ಎವರೆಸ್ಟ್ ಶಿಖರವನ್ನು ಏರಿದವರು. ಅವರು ಹೌದು ಎಂದು ತಲೆಯಾಡಿಸಿದರು. ನಾನು ಅವರೊಂದಿಗೆ ಕೈ ಕುಲುಕಿದೆ ಮತ್ತು 'ನಿಮ್ಮನ್ನು

ನಾನು ದಾರ್ಜಿಲಿಂಗ್‌ನಲ್ಲಿ ಭೇಟಿ ಮಾಡಬಹುದು ಎಂದು ಆಶಿಸುತ್ತಿದ್ದೆ' ಎಂದು ಹೇಳಿದೆ. ಅವರು ನಮ್ಮನ್ನು ಆಹ್ವಾನಿಸಿದರು, ಆದರೆ ಜೋರಾಗಿ ಮಳೆ ಬಂದ ಕಾರಣ ನಾವು ಮತ್ತೆ ಭೇಟಿಯಾಗಲು ಆಗಲಿಲ್ಲ.

ದಾರ್ಜಿಲಿಂಗಿನಲ್ಲಿ ನಮ್ಮ ಸಮಯ ಬಹಳ ಸಂತಸವಾಗಿ ಕಳೆಯಿತು. ನಾನು ಹೋಟೆಲಿನ ಬುಕಿಂಗ್ ಮಾಡಿರಲಿಲ್ಲ. ವೆಂಕಿ ನಮ್ಮ ಜೊತೆ ಇದ್ದಿದ್ದರಿಂದ ಆ ವಿಷಯದಲ್ಲಿ ನನಗೇನೂ ಭಯವಿರಲಿಲ್ಲ, ಜೊತೆಗೆ ನಿರ್ಮಲಾ ಕೂಡ ಧೈರ್ಯಶಾಲಿ. ಆದರೆ, ಅಲ್ಲಿದ್ದ ಎಲ್ಲಾ ಹೋಟೇಲುಗಳೂ ಪೂರ್ತಿ ಬುಕ್ ಆಗಿದ್ದವು, ಜೊತೆಗೆ ಎಲ್ಲಾ ಹೋಟೇಲುಗಳಿಗೂ ೨೦ ಮೆಟ್ಟಿಲುಗಳು ಹತ್ತುವುದೋ ಇಳಿಯುವುದೋ ಇತ್ತು. ಕೊನೆಗೆ ನಮ್ಮ ಗೈಡ್ ಒಂದು ಸರಿಯಾದ ಸ್ಥಳವನ್ನು ಹುಡುಕಿದ. ಟ್ಯಾಕ್ಸಿಗಳಲ್ಲಿ ಪ್ರಯಾಣ ಮಾಡುತ್ತಾ, ನಿರ್ಮಲ ಮತ್ತು ವೆಂಕಿ ನನ್ನ ವ್ಹೀಲ್ ಚೇರನ್ನು ನೂಕುತ್ತಾ ಎಳೆಯುತ್ತಾ, ನಾವು ಆ ಹಿಲ್ ಸ್ಟೇಷನ್ನಿನ ಎಲ್ಲಾ ಸ್ಥಳಗಳಿಗೂ ಸುತ್ತಾಡಿದೆವು. ನಾನು ವೆಂಕಿಗೆ ನನಗೆ ಒಂದು 'ಬರ್ಡ್ ಆಫ್ ಪ್ಯಾರಡೈಸ್' ಗಿಡ ಬೇಕೆಂದು ಹೇಳಿದೆ. ನಾನು ಆ ಗಿಡವನ್ನು ಬೆಂಗಳೂರಿನಲ್ಲಿ ಎಲ್ಲೆಲ್ಲೂ ಹುಡಿಕಿದೆ. ಆದರೆ ಅದು ನನಗೆ ಸಿಕ್ಕಿರಲಿಲ್ಲ. ಒಂದು ದಿನ ಬೆಳಿಗ್ಗೆ, ವೆಂಕಿ ಮತ್ತು ನಿರ್ಮಲಾ, ಅಲ್ಲಿನ ಒಬ್ಬ ತಮಿಳು ಭಾಷೆ ತಿಳಿದಿರುವ ನೇಪಾಳಿ ಗೈಡಿನೊಂದಿಗೆ ಕುದುರೆಯ ಬೆನ್ನೇರಿ ಹೊರಟರು. ಅವರಿಬ್ಬರೂ ಇದಕ್ಕೆ ಮುಂಚೆ ಎಂದೂ ಕುದರೆಯನ್ನೇರಿರಲಿಲ್ಲ. ಆದ್ದರಿಂದ ಅವರು ಕುದುರಯನ್ನೇರುವುದನ್ನು ನೋಡುವುದೇ ಬಹಳ ತಮಾಷೆಯಾಗಿತ್ತು, ಅವರಿಬ್ಬರಿಗೂ ಹಿಂದಿರುಗಿ ಬಂದು ನನ್ನನ್ನು ನೋಡುವ ಖಾತ್ರಿ ಇರಲಿಲ್ಲ. ಅವರು ಹಿಂದಿರುಗಿ ಬಂದಾಗ ಅವರ ಬೆನ್ನು ಮತ್ತು ಹಿಂಭಾಗವು ನೋವಿಗೆ ಈಡಾಗಿ ಅವರ ಮನೋಸ್ಥಿತಿಯು ಕುಂದಿತ್ತು. ತಮ್ಮ ಈ ದುಸ್ಸಾಹಸದ ಬಗ್ಗೆ ಮನಸ್ಸಿನಲ್ಲೇ ಶಾಪ ಹಾಕಿಕೊಂಡರು. ಆದರೆ ಅವರು ತಮ್ಮ ಜೊತೆ ನನಗೆ ಒಂದು ಪುಟ್ಟ ಗಿಡವನ್ನು ತಂದರು.

ಅವರು ತಂದ 'ಬರ್ಡ್ ಆಫ್ ಪ್ಯಾರಡೈಸ್' ಇನ್ನೂ ನನ್ನ ತೋಟದಲ್ಲಿದೆ. ಅಂದಿನಿಂದ ಇಂದಿನ ವರೆಗೆ ಆ ಗಿಡದಿಂದ ಸುಮಾರು ೬೦ – ೭೦ ಗಿಡಗಳು ಬಂದಿವೆ. ಆ ರೀತಿ ನೋಡಿದರೆ, ವೆಂಕಿ ನನ್ನ ಜೀವನದಲ್ಲಿ ಶಾಶ್ವತವಾಗಿದ್ದಾನೆ. ನಮ್ಮ ಹಿಂದು ಸಂಪ್ರದಾಯದಲ್ಲಿ ಗಂಡು ಹೆಣ್ಣಿಗೆ ಕಟ್ಟುವ ತಾಳಿಗಿಂತ ಈ ಗಿಡಗಳು ಹೆಚ್ಚು ಐತಿಹ್ಯ ಹೊಂದಿವೆ ಎನ್ನಬಹುದು. ಯಾಕೆಂದರೆ ಅವು ನನಗೆ ನಾವು ಕಳೆದ ಸುಂದರ ಕ್ಷಣಗಳನ್ನು ಸದಾ ನೆನಪಿಸುತ್ತವೆ. ನನ್ನ ತೋಟದಲ್ಲಿ ಆ ರೀತಿಯ ಅನೇಕ ಸ್ನೇಹಿತರು ಕೊಟ್ಟಿರುವ ಗಿಡಗಳಿವೆ. ಇವು ನನ್ನ ಸವಿ ನೆನಪುಗಳನ್ನು ಸದಾ ಹಸಿರಾಗಿ ಇಟ್ಟಿವೆ.

ದಾರ್ಜಿಲಿಂಗ್ ನಲ್ಲಿ ೩ ದಿನಗಳನ್ನು ಕಳೆದು ನಾನು ಬೆಂಗಳೂರಿಗೆ ಹಿಂದಿರುಗಿದೆ, ವೆಂಕಿ ಜೆಮ್ಷೇಡ್‌ಪುರಕ್ಕೆ ಹಿಂದಿರುಗಿದ. ಎಲ್ಲರಿಗೂ ಬಹಳ ಸಂತೋಷ. ಎಲ್ಲರೂ ನನ್ನನ್ನು ಅಭಿನಂದಿಸಿದರು. ನನ್ನ ಕಸಿನ್ಸ್‌ಗಳಿಗೆಲ್ಲಾ ವೆಂಕಿಯ ಪರಿಚಯವಿತ್ತು. ಅವನು ಆಗಾಗ ನಮ್ಮ ಮನೆಗಳಿಗೆ ಮತ್ತು ನಮ್ಮ ಪಾರ್ಟಿಗಳಿಗೆ ಬರುತ್ತಿದ್ದ. ನಾನು ನನ್ನ ಸಹೋದರಿ ಕುಮ್ಮು ಜೊತೆಗೆ ಒಂದು ವಾರ ಹೈದರಾಬಾದಿನಲ್ಲಿ ಕಳೆದೆ. ನಾನು ಹಿಂದಿರುಗಿ ಬೆಂಗಳೂರಿಗೆ ಬರುವ ವೇಳೆಗೆ ಅಮ್ಮ ಬೊಂಬಾಯಿಂದ ಹಿಂದಿರುಗಿ ಬಂದಿದ್ದಳು. ಅವಳು ನನಗೆ ಸ್ವಾಗತ ಕೋರಿ ವೆಂಕಿ ಯಾವಾಗ ಬೆಂಗಳೂರಿನಲ್ಲಿ ನನ್ನ ಜೊತೆ ಇರಲು ಬರುತ್ತಾನೆ ಎಂದು ಕೇಳಿದಳು? ಅಮ್ಮನಿಗೆ ಏನೇ ಅನುಮಾನಗಳಿದ್ದರೂ ಅವಳು ಹಠವನ್ನೋ, ದ್ವೇಷವನ್ನೋ ಸಾಧಿಸಲಿಲ್ಲ.

ವೆಂಕಿಗೆ ಒಂದು ಕೆಲಸವನ್ನು ಹುಡುಕುವುದು ಅತಿ ಮುಖ್ಯವಾಯಿತು. ಅದೃಷ್ಟವಶಾತ್ ಏ.ಪಿ.ಡಿ ಗೆ ಇನ್ನೂ ಒಬ್ಬ ಆಡಳಿತ ಅಧಿಕಾರಿ ಬೇಕಾಗಿತ್ತು. ನನ್ನ ಮದುವೆಗೆ ಮುನ್ನ ನಾನು ಏ.ಪಿ.ಡಿ ಯ ಆಡಳಿತ ಮಂಡಳಿಗೆ ನನಗೆ ಅದರ ವರ್ಕ್ಷಾಪ್ ನಡೆಸುವುದರಲ್ಲಿ ಆಸಕ್ತಿ ಇಲ್ಲವೆಂದು ತಿಳಿಸಿದ್ದೆ. ಅಷ್ಟು ಹೊತ್ತಿಗೆ ಅದರ ಶಾಲೆಗೆ ಏಳು ವರ್ಷಗಳಾಗಿತ್ತು ಮತ್ತು ಅದು ವೇಗವಾಗಿ ಬೆಳೆಯುತ್ತಿತ್ತು. ದಿವಾನರ ಕಾಲಾನಂತರ ಅದನ್ನು ನನ್ನಿಂದ ಒಬ್ಬಳೇ ಸಂಭಾಳಿಸಲುಸಾಧ್ಯವಾಗುತ್ತಿರಲಿಲ್ಲ. ಶ್ರೀಧರ್ ಎಂಬ ಓರ್ವ ಯುವಕ ಮತ್ತು ನಾಯಿಡು ಇದ್ದರು, ಆದರೆ ಅವರೂ ಹೊಸಬರಾದ್ದರಿಂದ ಅವರುಗಳಿಗೆ ಸಾಕಷ್ಟು ಅನುಭವವಿರಲಿಲ್ಲ. ನಾನು ಮೂರು ಜನರನ್ನು – ಒಬ್ಬ ಲೆಕ್ಕಾಧಿಕಾರಿ, ಒಬ್ಬ ಮ್ಯಾನೇಜರ್ ಮತ್ತು ಒಬ್ಬ ಆಡಳಿತಾಧಿಕಾರಿ – ಕೆಲಸಕ್ಕೆ ಸೇರಿಕೊಳ್ಳಲು ತಗಳುವ ಖರ್ಚನ್ನು ಅಂದಾಜು ಮಾಡಿದ್ದೆ, ಇಷ್ಟು ಜನರಿದ್ದರೆ ನನ್ನ ಮೇಲಿರುವ ಕೆಲಸದ ಒತ್ತಡವು ಕಮ್ಮಿಯಾಗುತ್ತದೆ ಎಂದು. ಆಡಳಿತ ಮಂಡಲಿಯು ಈ ಕೆಲಸಗಾರರನ್ನು ಸೇರಿಸಿಕೊಳ್ಳಲು ಜಾಹೀರಾತು ನೀಡಿದ್ದಾಗ ವೆಂಕಿಯೂ ಅದಕ್ಕೆ ಅರ್ಜಿ ಹಾಕಿದ್ದನು. ಆಡಳಿತ ಮಂಡಲಿಯ ಸದಸ್ಯರಿಗೆ ವೆಂಕಿಯು ಒಪ್ಪಿಗೆಯಾಯಿತು, ಆದರೆ ಅವನ ದೃಷ್ಟಿ ಮಾಂದ್ಯದಬಗ್ಗೆ ಅನುಮಾನವಿತ್ತು. ಉಳಿದ ಎರಡು ಸ್ಥಾನಗಳಿಗೆ ನೇಮಕವು ಪೂರ್ತಿಯಾಗಿತ್ತು. ಈ ಕೆಲಸಕ್ಕೆ ಸೂಕ್ತವಾದವರು ಯಾರೂ ಸಿಕ್ಕಿಲ್ಲದಿದ್ದರಿಂದ ಇದಕ್ಕೆ ಯಾರೂ ನೇಮಕವಾಗಿರಲಿಲ್ಲ.

ನಾನು ಬೆಂಗಳೂರಿಗೆ ಹಿಂದಿರುಗಿ ಬಂದಾಗ ಮತ್ತೆ ಈ ವಿಷಯ ಹೊರಬಂದಿತು. ನಾನು ಆಡಳಿತ ಮಂಡಲಿಯವರಿಗೆ ಒಂದು ಮಾತನ್ನು ಸ್ಪಷ್ಟಮಾಡಿದೆ. ವೆಂಕಿಗೆ ಕೆಲಸ ಕೊಡುವುದು ಬಿಡುವುದು ಅವರಿಗೆ ಸೇರಿದ ನಿರ್ಧಾರ. ನನ್ನ ಮಟ್ಟಿಗೆ ನನ್ನ ವೈಯ್ಯಕ್ತಿಕ

ಜೀವನ ಮತ್ತು ಎ.ಪಿ.ಡಿ ಎರಡು ಬೇರೆ ಬೇರೆ ವಿಷಯಗಳು ಎಂದು. ಕೊನೆಗೆ ಅವರು ವೆಂಕಿಗೆ ಕೆಲಸವನ್ನು ಕೊಡುವುದಾಗಿ ನಿರ್ಧರಿಸಿದರು. ನಾಯಿಡು ವೆಂಕಿಗೆ ದೈನಂದಿನ ಕೆಲಸಗಳಲ್ಲಿ ಸಹಾಯ ಮಾಡುವುದಾಗಿತ್ತು. ಆಗಿನ ಕಾಲದಲ್ಲಿ ಕಂಪ್ಯೂಟರ್ ಇರಲಿಲ್ಲವಾದ್ದರಿಂದ ಎಲ್ಲವನ್ನು ಕೈಯಿಂದ ಬರೆಯಬೇಕಾಗುತ್ತಿತ್ತು. ನನಗೆ ಕೆಲಸದ ಒತ್ತಡ ಬಹಳ ಕಮ್ಮಿಯಾಯಿತು. ನಾನು ಶಾಲೆಯ ಬೆಳವಣಿಗೆಗೆ ಒತ್ತು ಕೊಡಲಾರಂಭಿಸಿದೆ.

ವೈವಾಹಿಕ ಜೀವನವು ನನಗೆ ಹೊಸದಾದ ಆನಂದಮಯ ಅನುಭವಗಳನ್ನು ಕೊಟ್ಟಿತು. ಇದರ ಜೊತೆಗೆ ಕೆಲವು ಅನಿರೀಕ್ಷಿತ ಸವಾಲುಗಳೂ ಎದುರಾದವು. ನಾನು ಅನೇಕ ವಿಷಯಗಳನ್ನು ವೆಂಕಿಯಿಂದ ಕಲಿತೆ. ಅವನ ಆಶಯಗಳು ಬಹಳ ಎತ್ತರದ್ದಾಗಿದ್ದವು. ಒಬ್ಬ ಜೀವನ ಸಂಗಾತಿಯ ಜೊತೆ ಬಾಳ್ವೆ ನಡೆಸುವುದರಲ್ಲಿ ಉಂಟಾದ ಮಾನಸಿಕ ಅಂಶವು ಬಹಳ ಮಹತ್ವದ್ದು. ತನ್ನ ಜೀವನದಲ್ಲಿ ಒಬ್ಬನಿರುವುದು ಹೆಣ್ಣಿಗೆ ಒಂದು ಅಪೂರ್ವವಾದ ಸಂತೋಷವನ್ನು ತರುತ್ತದೆ. ಬಹುಷಃ ಅವನೂ ತನಗೆ ಅವಳಿಂದ ಸಿಗುವ ಪ್ರೇಮ ಮತ್ತು ಆದರಗಳನ್ನುಕಂಡು ಸಂತೋಷಪಡಬಹುದು. ಹೆಣ್ಣು ಎಲ್ಲವೂ ತನ್ನ ನಿಯಂತ್ರಣದಲ್ಲಿರುವುದನ್ನು ಕಂಡು ಸಂತೋಷ ಪಡುತ್ತಾಳೆ. ಆದರೆ, ಈ ನಿಯಂತ್ರಣದ ಆಸೆ ಹೆಚ್ಚಾಗಿ ಅವಳು ಎಲ್ಲವನ್ನೂ ತನ್ನ ಸುಪರ್ದಿಯೊಳಗೆ ಇಟ್ಟುಕೊಳ್ಳಲು ಹೋದಾಗ, ಉಸಿರು ಕಟ್ಟಿದಂತಾಗುತ್ತದೆ.

ವೆಂಕಿಯು ಸ್ವಭಾವದಲ್ಲಿ ಎಲ್ಲವೂ ಅವನ ಅಧೀನವಾಗಿರಬೇಕು. ನಾನು ಸ್ವತಂತ್ರವಾಗಿ ಬಹಳಕಾಲ ಬದುಕಿದ್ದರಿಂದ ನನಗೆ ನನ್ನ ಸ್ವಾತಂತ್ರ್ಯ ಮುಖ್ಯವಾಗಿತ್ತು. ನನಗೆ ನನ್ನ ಪಾಡಿಗೆ ನಾನು ಓಡಾಡುವುದು ಅಭ್ಯಾಸವಾಗಿತ್ತು. ಅದ್ದರಿಂದ ನನಗೆ ರಿಕ್ಷಾದಲ್ಲಿ ಹೋಗುವುದಾಗಲಿ ಅಥವಾ ನನ್ನ ವ್ಹೀಲ್ ಚೇರನ್ನು ಎತ್ತಿ ಇಡುವುದಾಗಲಿ ಅಭ್ಯಾಸ ವಾಗಿತ್ತು. ನಾನು ಇತರರಿಂದ ಸಹಾಯ ಕೇಳಲು ಹಿಂಜರಿಯುತ್ತಿರಲಿಲ್ಲ. ಆದರೆ ವೆಂಕಿಗೆ ಇದು ಸರಿಹೋಗುತ್ತಿರಲಿಲ್ಲ. ಅವನಿಗೆ ಎಲ್ಲವನ್ನೂ ಅವನೇ ಮಾಡಿಕೊಳ್ಳಬೇಕು ಎಂದು ಅನಿಸುತ್ತಿತ್ತು. ಮೊದಲಿಗೆ ನಾನು 'ಅವನಿಗೆ ನನಗೆ ಸಹಾಯ ಮಾಡುವುದು ಇಷ್ಟವೇನೋ' ಎಂದು ಸುಮ್ಮನಿದ್ದೆ. ಅವನಿಗೆ ನನ್ನ ಸ್ನೇಹಿತರೂ ನನಗೆ ಸಹಾಯ ಮಾಡುವುದು ಹಿಡಿಸುತ್ತಿರಲಿಲ್ಲ. ಮದುವೆಯ ಹೊಸತಲ್ಲಿ, ಇದು ಬಹಳ ಹಿತಕರವಾಗಿಯೂ, ಸುಂದರವಾಗಿಯೂ ಕಂಡಿತು.

ಎ.ಪಿ.ಡಿ ಯ ಕ್ಯಾಂಪಸ್ಸಿನಲ್ಲಿ ನನಗೆ ನನ್ನದೇ ಆದ ಒಂದು ಸ್ಥಾನ ಮಾನವಿದ್ದಿತು. ನಾನು ಅಲ್ಲಿನ ಕೆಲಸದವರ ಪ್ರೀತಿ ಮತ್ತು ಗೌರವವನ್ನು ಸಂಪಾದಿಸಿದ್ದೆ. ವೆಂಕಿ ಇಲ್ಲಿಗೆ

ಹೊಸಬನಾದ್ದರಿಂದ ಅವನ ಪಾತ್ರವು ಸೀಮಿತವಾಗಿತ್ತು. ಬಹುಷಃ ಅದೇನಾದರೂ ಅವನ ಮನಸ್ಸಿನಮೇಲೆ ಪರಿಣಾಮ ಬೀರಿತೋ ಏನೋ ಗೊತ್ತಿಲ್ಲ. ಅವನು ನನಗೆ ಎ.ಪಿ.ಡಿ.ಯಲ್ಲಿ ಕೆಲಸ ಮಾಡುವ ಅವಶ್ಯಕತೆ ಇಲ್ಲ, ಅವನೇ ನನ್ನನ್ನು ನೋಡಿಕೊಳ್ಳುತ್ತೇನೆ ಎಂದನು. ಆದರೆ, ಎ.ಪಿ.ಡಿ. ಯು ನನ್ನ ಜೀವನದ ಪಾಲೂ ಆಗಿತ್ತು. ಬಹುಶಃ ಅವನಿಗೆ ಅದೊಂದೇ ನನ್ನ ಜೀವನದ ಪಾಲಾಗಿದೆ ಎಂದು ಅನ್ನಿಸಿರಬಹುದು. ನಾನು ಅವನಿಗೆ ಅಲ್ಲಿನ ಕೆಲಸಗಾರರೆಲ್ಲರೂ ನನ್ನನ್ನು ಅನೇಕ ವರ್ಷಗಳಿಂದ ಬಲ್ಲರು, ಆದ್ದರಿಂದ ನನ್ನ ನೆರವಿಗೆ ಓಡಿಬರುತ್ತಾರೆ ಎಂದು ಹೇಳಿದೆ. ಆವನು ತಾನೇ ಎಲ್ಲವನ್ನು ಎಷ್ಟು ಚೆನ್ನಾಗಿ ಸಂಭಾಳಿಸುತ್ತಿದ್ದನೆಂದರೆ ಎಷ್ಟೋ ಸಲ ಅವನಿಗೆ ದೃಷ್ಟಿ ಮಾಂಧ್ಯವಿದೆ ಎಂಬುದೇ ಮರೆತು ಹೋಗುತ್ತಿತ್ತು. ಇದು ಅವನ ಸಾಮರ್ಥ್ಯಕ್ಕೆ ಒಂದು ಅಭಿನಂದನೆ.

ಸಮಯ ಓಡಿತು, ವೆಂಕಿ ಕಷ್ಟಪಟ್ಟು ಕೆಲಸ ಮಾಡುವವ. ಅವನು ಆಫೀಸಿನಲ್ಲಿ ಎಲ್ಲವನ್ನೂ ಅಚ್ಚುಕಟ್ಟಾಗಿ ಮಾಡಿ ಎಲ್ಲಾ ಕಾರ್ಯಕಲಾಪಗಳನ್ನು ಸೂಕ್ಷ್ಮವಾಗಿ ನೋಡಿಕ್ಕೊಂಡು, ಅನೇಕ ಸಂಘ ಸಂಸ್ಥೆಗಳೊಡನೆ ಸಂಪರ್ಕವನ್ನು ಬೆಳೆಸಿದನು. ಅವನು ಎಲ್ಲರಿಂದ ಚೆನ್ನಾಗಿ ಕೆಲಸ ತೆಗೆಸುತ್ತಿದ್ದ ಮತ್ತು ನಿಯಮಗಳನ್ನು ಕಟ್ಟು ನಿಟ್ಟಾಗಿ ಪಾಲಿಸುತ್ತಿದ್ದನು. ವರ್ಕ್ ಷಾಪಿನಲ್ಲಿ ಒಂದು ಬಂಡಾಯ ಶುರುವಾಗುತ್ತಿತ್ತು. ಆ ಬಂಡಾಯಗಾರರಿಗೆ ವೆಂಕಿ ತಕ್ಕ ಪಾಠ ಕಲಿಸಿದ. ಅವರು ಕೆಲಸ ಮಾಡಲು ನಿರಾಕರಿಸಿದಾಗಲೂ ಅವನು ಸ್ವಲ್ಪವೂ ಜಗ್ಗಲಿಲ್ಲ. ಸಾಕಷ್ಟು ತಳಮಳ ಉಂಟಾಗುತ್ತಿತ್ತು. ಯೂನಿಯನ್ನಿನ ಮುಂದಾಳುಗಳು ಬಂದು ನನ್ನನ್ನು ಮಧ್ಯಸ್ಥಿಕೆ ವಹಿಸಲು ಕೋರುತ್ತಿದ್ದರು. ಆದರೆ ವೆಂಕಿ ಸನ್ನಿವೇಶವನ್ನು ಅವನದ್ದೇ ರೀತಿಯಲ್ಲಿ ನಿಭಾಯಿಸಲು ಇಷ್ಟಪಡುತ್ತಿದ್ದ. ನಾನು ಯೂನಿಯನ್ನಿನ ಸೆಕ್ರೆಟರಿ ಮತ್ತು ಪ್ರೆಸಿಡೆಂಟರಿಗೆ ಇದನ್ನ ಅವರುಗಳೇ ಸರಿಪಡಿಸಿಕೊಳ್ಳಬೇಕು ಎಂದು ಹೇಳಿದೆ. ವೆಂಕಿಯದು ಖಡಾ ಕಂಡಿತವಾದ ಮಾತು, ಅವನನ್ನು ವಾದದಲ್ಲಿ ಸೋಲಿಸುವುದು ಕಷ್ಟವಾಗಿತ್ತು. ಜನಗಳಿಗೆ ಅವನ ಬಗ್ಗೆ ಅವರದ್ದೇ ಆದ ಅಭಿಪ್ರಾಯಗಳಿದ್ದವು. ಕೆಲವರಿಗೆ ಅವನು ಹಿಡಿಸಿದರೆ ಇನ್ನು ಕೆಲವರಿಗೆ ಅವನು ಹಿಡಿಸುತ್ತಿರಲಿಲ್ಲ. ಅವನ ವ್ಯಕ್ತಿತ್ವ ಈ ರೀತಿಯ ಅತಿರೇಖದ ಅಭಿಪ್ರಾಯಗಳನ್ನು ಮೂಡಿಸುವುದಾಗಿತ್ತು.

ವೆಂಕಿ ನನ್ನ ಮತ್ತು ಅಮ್ಮನ ಜೊತೆ ನಮ್ಮ ಮಲ್ಲೇಶ್ವರದ ಮನೆಯಲ್ಲಿದ್ದ. ನಮ್ಮ ಅಮ್ಮ ನಾವು ನಮ್ಮ ತಂದೆಯು ಕಟ್ಟಿದ ಮನೆಯಲ್ಲಿ ಇರಬೇಕು ಎಂದು ಒತ್ತಾಯಿಸಿದ್ದಳು. ಕೆಲವು ದಿನಗಳಾದಮೇಲೆ ಅವನು ನಾವು ರಾಜಾಜಿನಗರದಲ್ಲಿದ್ದ ಅವನ ಮನೆಗೆ ಹೋಗೋಣ ಎಂದು ಹೇಳಲಾರಂಭಿಸಿದನು. ಆ ಮನೆಯು ಮೊದಲನೆಯ ಮಹಡಿಯಲ್ಲಿತ್ತು. ಕೆಳಗೆ

ಇದ್ದ ಮೂರು ಗ್ಯಾರೇಜುಗಳನ್ನು ಅಂಗಡಿಗಳಾಗಿ ಬಾಡಿಗೆಗೆ ಕೊಡಲಾಗಿತ್ತು. ನಾನು ಹೇಗೆ ಮಹಡಿಯನ್ನು ಹತ್ತಿಕ್ಕೊಂಡು ಹೋಗಲಿ? ಅವನು ಆ ಅಂಗಡಿಗಳನ್ನು ರೂಮಾಗಿ ಮಾಡುವುದಾಗಿ ಹೇಳಿದ. ನನಗೆ ನಮ್ಮ ಸುಖವಾದ ಮನೆ ಮತ್ತು ಅದರ ಸುಂದರ ತೋಟವನ್ನು ಬಿಟ್ಟು ಹೋಗುವ ಯೋಚನೆಯೇ ಊಹಿಸಲು ಸಾಧ್ಯವಿರಲಿಲ್ಲ. ಅಲ್ಲಿ ಕೆಲವು ಹೂ ಕುಂಡಗಳನ್ನು ಇಡಲು ಎರಡಡಿಯಷ್ಟೂ ಜಾಗವಿರಲಿಲ್ಲ. ಆದರೆ ವೆಂಕಿಗೆ ಅವರ ಮನೆಯ ಅನೇಕ ಸವಾಲುಗಳಿದ್ದವು. ಅವನ ಅಮ್ಮನಿಗೆ ಮೈ ಸರಿಯಿರಲಿಲ್ಲ. ರಕ್ತದಒತ್ತಡ ಹೆಚ್ಚಾಗಿ ಅನೇಕ ತೊಂದರೆಗಳಾಗಿದ್ದವು. ಇವೆಲ್ಲದರಿಂದ ತಪ್ಪಿಸಿಕೊಳ್ಳಲು ಅವನು ತನ್ನ ಮಿತ್ರರೊಂದಿಗೆ ಪಾರ್ಟಿಗಳಲ್ಲಿ ಮುಳುಗುತ್ತಿದ್ದ. ನಾನು ಪ್ರಯತ್ನ ಪಟ್ಟರೂ ನನಗೆ ಅವರ ಮನೆಯ ಜೀವನ ಶೈಲಿಗೆ ಹೊಂದಿಕೊಳ್ಳಲಾಗಲಿಲ್ಲ. ವೆಂಕಿಗೆ ಅವನ ಜೀವನ ಶೈಲಿಯಲ್ಲೇ ನಂಬಿಕೆ, ಅವನು ಅದರಲ್ಲಿ ಯಾವ ಬದಲಾವಣೆಯನ್ನೂ ಮಾಡಲು ಇಚ್ಛಿಸುತ್ತಿರಲಿಲ್ಲ.

ಅವರ ಅಮ್ಮನಿಗೂ ನಮ್ಮ ಮದುವೆಯು ಯಶಸ್ವಿಯಾಗುತ್ತದೆ ಎಂಬ ನಂಬಿಕೆ ಇರಲಿಲ್ಲ. ಕೆಲವು ಸಲ ಅವರು ನಮ್ಮ ಅಮ್ಮನ ಜೊತೆ ಅವರಲ್ಲಿದ್ದ ಈ ಅಪನಂಬಿಕೆಯನ್ನು ಹಂಚಿಕ್ಕೊಂಡದ್ದುಂಟು. ಆಗೆಲ್ಲಾ ನನ್ನ ಅಮ್ಮ ಬೇಜಾರು ಮಾಡಿಕೊಂಡು ನನ್ನ ಅಕ್ಕ ತಂಗಿಯರಿಗೆ ಫೋನ್ ಮಾಡಿ ಅಳುತ್ತಿದ್ದರು. ಆದರೆ ಅವರು ನನಗೆ ಒಂದು ದಿನವೂ ಈ ಬಗ್ಗೆ ಏನೂ ಹೇಳಲಿಲ್ಲ. ಎಷ್ಟು ಜನರಿಗೆ ಈ ರೀತಿಯಾದ ಅಮ್ಮ ಸಿಗುವ ಭಾಗ್ಯವಿದೆ? ಬಹಳ ಸಮಯದ ನಂತರ ನನ್ನ ಸಹೋದರಿಯರು ಈ ವಿಷಯವನ್ನು ನನಗೆ ತಿಳಿಸಿದರು. ಅವರು ಯಾವಾಗಲೂ 'ಹೇಮನ ವಿಧಿ' ಎಂದು ನೊಂದುಕೊಳ್ಳುತ್ತಿದ್ದರಂತೆ. ಆದರೆ, ಈ ವಿಷಯವೇನೇ ಇದ್ದರೂ, ನಮ್ಮ ಅತ್ತೆ ಒಳ್ಳೆಯ ಹೆಂಗಸು. ಅವರು ಜೀವನದಲ್ಲಿ ತಮ್ಮ ಮಕ್ಕಳಿಂದ ಬಹಳ ಕಷ್ಟಪಟ್ಟಿದ್ದರು. ಅವರದ್ದು ಬಹಳ ಧಾರಾಳ ಸ್ವಭಾವ. ನನಗೆಂದು ಅನೇಕ ಚಿನ್ನ ಮತ್ತು ವಜ್ರದ ಆಭರಣಗಳನ್ನು ತೆಗೆದಿಟ್ಟಿದ್ದರು. ಅವರ ಆಕ್ಷೇಪಣೆಗಳ ಬಗ್ಗೆ ನಾನು ಹೆಚ್ಚಿನ ಪ್ರಾಮುಖ್ಯತೆ ಕೊಡಲಿಲ್ಲ. ವೆಂಕಿಗೆ ಇಬ್ಬರು ಸಹೋದರರು. ಅವರಲ್ಲಿ ಗುರು ಎಂಬುವನೂ ಕುರುಡ. ಅವನೊಂದು ಫ್ಯಾಕ್ಟರಿಯಲ್ಲಿ ಕೆಲಸಮಾಡುತ್ತಿದ್ದ. ಅವನಿಗೆ ಒಂದು ಗಂಡು ಮಗುವಿತ್ತು. ಅದಕ್ಕೂ ಹುಟ್ಟುವಾಗಲೇ ದೃಷ್ಟಿ ಮಾಂಧ್ಯವಿತ್ತು. ಇನ್ನೊಬ್ಬ ಸಹೋದರ ಅವನ ಸಂಸಾರದೊಂದಿಗೆ ಬೇರೆಇದ್ದ. ಅವನಿಗೆ ಅವನದ್ದೇ ಆದ ಕಷ್ಟಗಳು ಕಾಡುತ್ತಿದ್ದವು. ವೆಂಕಿ ಆದಷ್ಟೂ ಸಹಾಯ ಮಾಡುತ್ತಿದ್ದ. ಗುರುವಿಗೆ ಬೆನ್ನಿನಲ್ಲಿ ತೊಂದರೆಯಾಗಿ ಅದಕ್ಕೆ ಆಪರೇಷನ್ ಮಾಡಬೇಕೆಂದು ತಿಳಿದಾಗ ನಾನು ಮತ್ತೊಬ್ಬ ಡಾಕ್ಟರರ ಸಲಹೆ ಪಡೆಯುವಂತೆ ಹೇಳಿದೆ. ಅವನು ನಮ್ಮ ಏ.ಪಿ.ಡಿ.ನ ಡಾ. ಶ್ರೀನಿವಾಸನ್ ಗೆ ತೋರಿಸಿದನು.

ನಂತರ ಅವನು ಮತ್ತೊಬ್ಬ ನ್ಯೂರೋಸರ್ಜನ್ನಿಗೆ ತೋರಿಸಿ ಅವರಿಂದ ಆಪರೇಷನ್ ಮಾಡಿಸಿಕೊಂಡನು. ಅದಾದ ಕೆಲವೇ ದಿನಗಳಲ್ಲಿ ಅವನಿಗೆ ಒಂದು ಅಪರೂಪದ ರಕ್ತದ ತೊಂದರೆ ಆಗಿ ಅವನು ಉಳಿಯಲಿಲ್ಲ. ಮಗನನ್ನು ಕಳೆದುಕೊಂಡ ನಮ್ಮ ಅತ್ತೆಯ ಸ್ವಾಸ್ಥ್ಯವು ಶೀಘ್ರ ಕ್ಷೀಣಿಸಲಾರಂಭಿಸಿತು. ಕೆಲವೇ ದಿನಗಳಲ್ಲಿ ಅವರೂ ತೀರಿಕೊಂಡರು. ಗುರುವಿನ ಹೆಂಡತಿಗೆ ಆಗ ಹತ್ತೊಂಬತ್ತೇ ವಯಸ್ಸು. ಅವಳು ಒಬ್ಬಳೇ ತನ್ನ ದೃಷ್ಟಿದೋಷವಿದ್ದ ಮಗುವನ್ನು ಬೆಳೆಸಬೇಕಾಯಿತು. ಕೆಲವು ಕಾಲ ನಾವೂ ಅವಳಿಗೆ ಯಾವುದಾದರೂ ಕೆಲಸ ಸಿಗುವಂತೆ ತರಬೇತಿ ಪಡೆಯಲು ನೆರವಾದೆವು. ನನಗೆ ಅವಳು ಮುಂದೆ ಮದುವೆಯಾಗಿ ತನ್ನ ಜೀವನ ನಡೆಸಬೇಕು ಎಂದು ಅನಿಸಿತ್ತು. ಆದರೆ ವೆಂಕಿಗೆ ಇದು ಸರಿದೋರಲಿಲ್ಲ. ಅವನಿಗೆ, ಆ ಮಗುವಿಗೋಸ್ಕರ ಅವಳು ಮತ್ತೆ ಮದುವೆಯಾಗಬಾರದು ಎಂದು ಅನಿಸಿತ್ತು.

ಸಂಬಂಧಗಳು ಬಹಳ ನಾಜೂಕಾದವು. ವೆಂಕಿ ನಮ್ಮ ಮನೆಗೆ ಚೆನ್ನಾಗಿ ಹೊಂದಿಕೊಂಡಿದ್ದ ಮತ್ತು ಎಷ್ಟೋ ವಿಧದಲ್ಲಿ ನಮ್ಮ ಅಮ್ಮನ ಮೆಚ್ಚುಗೆಯನ್ನೂಗಳಿಸಿದ್ದ. ಅವಳಿಗೆ ಅವನ ಅಚ್ಚುಕಟ್ಟಾದ ಸ್ವಭಾವವು ಬಹಳ ಹಿಡಿಸಿತ್ತು. ಅವರಿಬ್ಬರೂ ಅನೇಕಸಲ ಬಹಳಹೊತ್ತು ಹರಟುತ್ತಿದ್ದರು. ಆದರೆ ಗಂಡು ಮತ್ತು ಹೆಣ್ಣಿನ ಸಂಬಂಧ ಬಹಳ ಸೂಕ್ಷ್ಮವಾದದ್ದು. ಹೆಣ್ಣಿಗೆ ತನ್ನ ಗಂಡನ ಬಗ್ಗೆ ಅವನ ಮನೋಸ್ಥಿತಿಯ ಬಗ್ಗೆ ಬೇಗನೆ ಅರಿವಾಗುತ್ತದೆ. ನನಗೆ ವೆಂಕಿ ಎಲ್ಲೋ ಜಾರುತ್ತಿದ್ದಾನೆ ಎಂದು ಎನಿಸ ತೊಡಗಿತು. ನಾನು ಅವನನ್ನು ಪ್ರಶ್ನಿಸಿದೆ. ಆಗ ಅವನು ಕೆಲವು ವಿಷಯಗಳನ್ನು ಒಪ್ಪಿಕೊಂಡ. ಈ ವಿಷಯಗಳು ನನ್ನ ಊಹೆಗೂ ಮೀರಿದ್ದವು.

ನಾನು ನನಗೆ ಆಪ್ತರಾದ ನಾಯ್ಡು ಮತ್ತು ಇನ್ನೂ ಕೆಲವು ಮಿತ್ರರಲ್ಲಿ ಈ ವಿಷಯವನ್ನು ಹಂಚಿಕೊಂಡೆ ಮತ್ತು ಮುಂಬಯಲ್ಲಿರುವ ನನ್ನ ಅಕ್ಕ ಭಾವ ಅವರಿಗೂ ತಿಳಿಸಿದೆ. ಆದರೆ ವೆಂಕಿ ಬೇರೊಬ್ಬರ ಮಾತನ್ನು ಕೇಳುವಂತಹ ವ್ಯಕ್ತಿಯಾಗಿರಲಿಲ್ಲ. ಅವನಿಗೆ ವಯಸ್ಕರಾದ ನಾವು ನಮ್ಮ ಪ್ರಶ್ನೆಗಳನ್ನು ನಾವೇ ಶೀರಿಸಿಕೊಳ್ಳಬೇಕು. ಮತ್ತು ಇದು ಮತ್ಯಾರಿಗೂ ಸಂಬಂಧಪಟ್ಟಿದ್ದಲ್ಲ ಎಂಬ ಧೃಡವಾದ ನಂಬಿಕೆ ಇತ್ತು. ನನಗೆ, ನಾನು ಈ ಮನುಷ್ಯನನ್ನು ಪ್ರೀತಿಸಿ ಮದುವೆಯಾಗಿದ್ದರಿಂದ ಇದು ದೊಡ್ಡ ಸವಾಲಾಗಿತ್ತು.

ವೆಂಕಿಯು ಎ.ಪಿ.ಡಿ.ಯಲ್ಲಿ ಸಾಮಾಜಿಕ ಪುನರ್ವಸತಿಗೆ ಸಂಬಂಧಪಟ್ಟಂತೆ ಬಹಳ ಕೆಲಸ ಮಾಡಿದ್ದನು. ಈ ಕ್ಷೇತ್ರದಲ್ಲಿ ಹೊಸದಾಗಿ ಅನೇಕ ವಿಷಯಗಳು ಇತ್ತೀಚೆಗೆ ಬರುತ್ತಿದ್ದವು. ಅವನು ಇವಕ್ಕೆ ಸಂಬಂಧಪಟ್ಟ ಅನೇಕ ತರಬೇತಿ ಶಿಬಿರಗಳನ್ನು ಏರ್ಪಡಿಸಿದ್ದನು, ಇವಲ್ಲಿ ಒಂದು ೬ ತಿಂಗಳ ದೀರ್ಘ ಅವಧಿಯದಾಗಿತ್ತು. ನಮ್ಮ ಹಳೆಯ ಮಿತ್ರರಾದ ಮುರ್ರೇ

ಕಲ್ಪಾ ಎಂಬುವರು ನನಗೆ ಲಂಡನ್ನಿನಲ್ಲಿ ಒಂದು ಸಮಾಜ ಸ್ವಾಸ್ಥ್ಯಕ್ಕೆ ಸಂಬಂಧಪಟ್ಟ ಒಂದು ಕಾರ್ಯಕ್ರಮದ ಬಗ್ಗೆ ತಿಳಿಸಿದರು. ನನಗೆ ವೆಂಕಿ ಇದಕ್ಕೆ ಹೋದರೆ ಅವನು ಇಲ್ಲಿನ ವತಾವರಣ, ನಾನು ಮತ್ತು ಎ.ಪಿ. ಡಿ ಇತ್ಯಾದಿಗಳಿಂದ ದೂರವಿದ್ದು ತನ್ನ ಜೀವನದ ಬಗ್ಗೆ ಯೋಚಿಸಲು ಸಮಯ ಸಿಗುವುದೆಂದು ತೋರಿತು. ಬಹುಷಃ ಅವನ ಮೇಲೆ ನನಗಿದ್ದ ಪ್ರೀತಿಯು ನನ್ನ ಮನಸ್ಸಿನ ಯಾವುದೋ ಮೂಲೆಯಲ್ಲಿ ಇದರಿಂದ ಎಲ್ಲಾ ಸರಿಹೋಗಬಹುದೆಂಬ ಆಶಾಕಿರಣವನ್ನು ಬೆಳಗಿರಬೇಕು. ಈಗಲೂ ನನಗೆ ಈ ಬಗ್ಗೆ ಯೋಚಿಸಿದಾಗ, ನಾನು ಪ್ರತಿಕ್ರಿಯಿಸಿದ್ದುದು ಹೆಂಡತಿಯಾಗೋ, ಸ್ನೇಹಿತೆಯಾಗೊ ಅಥವಾ ನಿರ್ಲಿಪ್ತ ವ್ಯಕ್ತಿಯಾಗೊ ಎಂದು ತಿಳಿಯದಾಗಿದೆ. ನನಗೆ ಅವನ ಪರಿಚಯ ಚೆನ್ನಾಗಿ ಇದ್ದದ್ದರಿಂದ ಅವನ ಮನಸ್ಸಿನಲ್ಲಿ ಆಗುತ್ತಿದ್ದ ತಳಮಳದ ಅರಿವಿತ್ತು. ಅವನಿಗೆ ಅವನ ವಿಕಲಾಂಗತನದ ಬಗ್ಗೆ ಕೀಳರಿಮೆ ಇತ್ತು. ಆದರೆ ಜೊತೆಗೆ ಅವನಿಗೆ ತಾನು ಸ್ವಂತವಾಗಿ ಯಶಸ್ವಿಯಾಗಿ ಕಾರ್ಯನಿರ್ವಹಿಸುವ ಶಕ್ತಿಯನ್ನು ಹೊಂದಿದ್ದೇನೆ ಎಂಬುದೂ ತಿಳಿದಿತ್ತು. ಅವನು ಹೇಗೆ ತಾನೊಬ್ಬನೇ ಪ್ರಯಾಣ ಮಾಡುತ್ತಿದ್ದ, ಹೇಗೆ ಎಲ್ಲಾ ಕೆಲಸಗಳನ್ನು ವ್ಯವಸ್ಥಿತವಾಗಿ ಮಾಡುತ್ತಿದ್ದ, ಹೇಗೆ ಜನರಿಗೆ ಚೆನ್ನಾಗಿ ತರಬೇತಿ ಮಡುತ್ತಿದ್ದ, ಇತ್ಯಾದಿ ವಿಷಯಗಳು ಎಲ್ಲರಿಗೂ ಸೋಜಿಗದ ವಿಷಯವಾಗಿತ್ತು, ಈಗಲೂ ವಿಶ್ವಾದ್ಯಂತ ಅವನು ತರಬೇತಿ ಮಾಡುವುದರಲ್ಲಿ ಪ್ರವೀಣ ಎಂದು ಹೆಸರು ಗಳಿಸಿದ್ದಾನೆ. ಅವನ ಈ ಗುಣಗಳ ಬಗ್ಗೆ ನನಗೆ ಬಹಳ ಗೌರವವಿತ್ತು, ಅದಕ್ಕೇ ನಾನು ಅವನಿಗೆ ಈ ವಾತಾವರಣದಿಂದ ಬದಲಾವಣೆ ಸಿಕ್ಕಿದರೆ ಅವನು ತನ್ನ ಜೀವನದ ಮುಖ್ಯ ಗುರಿಯ ಬಗ್ಗೆ ಗಮನ ಕೊಡಬಹುದು ಮತ್ತು ತನ್ನ ಜೀವನವನ್ನು ಸರಿಮಾಡಿಕೊಳ್ಳಬಹುದು ಎಂದು ನಂಬಿದ್ದೆ. ಅದಕ್ಕೇ ನಾನು ಅವನನ್ನು ಲಂಡನ್ನಿಗೆ ಕಳುಹಿಸಲು ಅಷ್ಟು ಪ್ರಯತ್ನ ಪಟ್ಟೆ. ಎ.ಪಿ.ಡಿ ಯ ವಿಸ್ತೃತ ಸಂಬಂಧಗಳು ಈ ಕೆಲಸದಲ್ಲಿ ಬಹಳ ನೆರವಾದವು. ಲಂಡನ್ನಿನಲ್ಲಿ ಒಂದು ವರ್ಷದ ಕಾರ್ಯಕ್ರಮವಿತ್ತು. ವೆಂಕಿ ಲಂಡನ್ನಿಗೆ ಹೊರಟ.

ಅವನು ನನ್ನಜೊತೆಯಲ್ಲಿ ಒಳ್ಳೆಯ ಸಂಪರ್ಕವನ್ನಿಟ್ಟುಕೊಂಡಿದ್ದ. ವಾರಕ್ಕೆ ಎರಡು ಅಥವಾ ಮೂರುಸಲ ಕಾಗದ ಬರೆಯುತ್ತಿದ್ದ. ಯಾವಾಗಲಾದರೂ ಫೋನ್ ಕೂಡ ಮಾಡುತ್ತಿದ್ದ. ಹೊರ ದೇಶದಲ್ಲಿ ವಿಕಲಾಂಗನಾಗಿ, ಯಾರೂ ಸ್ನೇಹಿತರಿಲ್ಲದೆ, ಒಬ್ಬನೇ ಸಿಕ್ಕಿಹಾಕಿಕೊಳ್ಳುವುದು ಎಷ್ಟು ಕಷ್ಟ ಎಂದು ನನಗೆ ಗೊತ್ತಿತ್ತು. ಅದೂ, ವೆಂಕಿಯಂತೆ ಹೊರಗೆ ಸುತ್ತಾಡಿ ಎಲ್ಲವನ್ನೂ ಆನಂದಿಸುವ ಸ್ವಭಾವದವನಿಗೆ. ಅದಕ್ಕೇ ನಾನು ಅವನನ್ನು ನನ್ನ ಕೆಲವು ಸ್ನೇಹಿತರಿಗೆ ಪರಿಚಯಿಸಿದೆ. ಮೊದಲ ಕೆಲವು ದಿನ ಅವರು ವೆಂಕಿಯನ್ನು ಕರೆದು ಹೊರಗೆ ಸುತ್ತಿಸುತ್ತಿದ್ದರು. ನಂತರ ವೆಂಕಿ ತಾನೇ ತನ್ನ ಮಿತ್ರರನ್ನು ಮಾಡಿಕೊಂಡ.

ಅವನು ನನ್ನನ್ನು ಲಂಡನ್ನಿಗೆ ಬರಹೇಳುತ್ತಿದ್ದ. ನನ್ನ ಮಿತ್ರರೂ ನನ್ನನ್ನು ಅಲ್ಲಿಗೆ ಬರಹೇಳುತ್ತಿದ್ದರು. ಆದರೆ ನನಗೆ ಅಮೇರಿಕಕ್ಕೆ ಹೋಗುವ ಆಸೆ.ನಾನು ಅಲ್ಲಿಗೆ ಹೋಗೇ ಇರಲಿಲ್ಲ.ನಾನು ವೆಂಕಿಯನ್ನು ನನ್ನೊಡನೆ ಅಮೇರಿಕಕ್ಕೆ ಬರುವೆಯಾ ಎಂದು ಕೇಳಿದೆ. ಅವನೂ ಒಪ್ಪಿಕೊಂಡ. ಅವನಿಗೆ ಮೆಕ್ಸಿಕೋ ದಲ್ಲಿರುವ ಡೇವಿಡ್ ವೆರ್ನರ್ ಅವರ ಪ್ರಾಜೆಕ್ಟಿಗೆ ಹೋಗುವ ಆಸೆ ಇತ್ತು. ನಾನು ಎ.ಪಿ.ಡಿ. ಯ ಟ್ರಸ್ಟೀ ಮತ್ತು ನನ್ನ ಒಳ್ಳೆಯ ಗೆಳೆಯನಾದ ಕೃಷ್ಣಮೂರ್ತಿ (ಏಕೆ)ಯನ್ನು ತಮ್ಮ ಕೆಲಸದಿಂದ ಬಿಡುವು ತೆಗೆದುಕ್ಕೊಂಡು ನಮ್ಮೊಡನೆ ಅಮೇರಿಕಕ್ಕೆ ಬರುವಂತೆ ಹೇಳಿದೆ. ಅವರು ಭಾರತವನ್ನು ಬಿಟ್ಟು ಹೊರಗೇ ಹೋಗಿರಲಿಲ್ಲ. ವೆಂಕಿ ಮತ್ತು ಏಕೆ ಒಳ್ಳೆಯ ಮಿತ್ರರು. ಏಕೆಗೆ ಪೋಲಿಯೋ ಆಗಿತ್ತು ಆದರೆ ಅವರು ಊರುಗೋಲಿನೊಡನೆ ನಡೆಯುತ್ತಿದ್ದರು.ಎ.ಪಿ.ಡಿ.ಯ ಆಡಳಿತ ಮಂಡಳಿಯ ಸದಸ್ಯರಾಗಿ ಅವರು ನಮ್ಮ ಪ್ರಾಯೋಜಕರನ್ನೂ ಹಿತೈಷಿಗಳನ್ನೂ ಭೇಟಿಮಾಡಿದರೆ ಒಳ್ಳೆಯದು ಎಂದು ನನಗೆ ಅನ್ನಿಸಿತ್ತು ಮತ್ತು ನಾವೆಲ್ಲಾ ಒಟ್ಟಿಗೆ ಪ್ರಯಾಣ ಮಾಡುವುದು ಒಳಿತು ಎಂದೂ ಅನ್ನಿಸಿತ್ತು.

ಜೆಂಷೆಡ್‌ಪುರದಂತೆ ವೆಂಕಿಯು ಈಗಲೂ ಅದ್ಭುತವಾದ ತಯಾರಿಯನ್ನು ಮಾಡಿದ್ದನು. ನಾವು 'ಡಿಸೇಬಲ್ಡ್ ಲಿವಿಂಗ್ ಫೌಂಡೇಷನ್' ನಲ್ಲಿ ಒಂದು ತಿಂಗಳು ತಂಗುವ ಪ್ಲಾನ್ ಇತ್ತು. ಅದು ಬಹಳ ಸುಂದರವಾದ ಸ್ಥಳ. ನಮಗೆ ಯಾವ ಯೋಚನೆಯೂ ಇರಲಿಲ್ಲ. ವೆಂಕಿ ಅಲ್ಲಿನ ರೆಫ್ರಿಜಿರೇಟರ್ ತುಂಬಾ ಚಾಕಲೇಟುಗಳು ಮತ್ತು ಅಡಿಗೆಮನೆ ತುಂಬಾ ಎಲ್ಲಾ ವಿಧವಾದ ವಸ್ತುಗಳನ್ನೂ ತುಂಬಿಸಿಟ್ಟಿದ್ದನು. ಅವನು 'ಏಕೆ' ಯನ್ನು ಕರೆದು ಒಂದು ಕಪಾಟನ್ನು ತೆಗೆಯ ಹೇಳಿದನು. ಅವರು ಅದನ್ನು ತೆಗೆದಾಗ ಒಂದು ದೊಡ್ಡ ಚಾಕಲೇಟಿನ ಡಬ್ಬ ಅವರ ತಲೆಯ ಮೇಲೆ ಬಿದ್ದಿತು. ಇದು ವೆಂಕಿಯ ಹಾಸ್ಯ.

ಆ ಮನೆಯ ಬಾತ್ ರೂಮುಗಳು ಬಹಳ ಚೆನ್ನಾಗಿದ್ದವು. ನಾವು ಹೇಗೆ ಬೇಕೋ ಹಾಗೆ ಮಾಡಿಕೊಳ್ಳಬಹುದಾದ ಬಾತ್ ಟಬ್ ಗಳು, ಅವಕ್ಕೆ ಬಾಗಿಲು, ಬೇಕಾದ ಹಾಗೆ ಮಾಡಬಹುದಾದ ಆಸನ, ಕೈಯಲ್ಲಿ ಹಿಡಿದುಕೊಳ್ಳಬಹುದಾದ  ಶವರ್, ಇತ್ಯಾದಿ. ನನಗೆ ಬಾತ್ ರೂಮ್ ಅಂದರೆ ಹುಚ್ಚು. ನಾನು ಮನಸೋ ಇಚ್ಛೆ ಅವನ್ನು ಅನುಭವಿಸಿದೆ. ಮತ್ತೆ ಅಲ್ಲಿ ಒಂದು 'ಮೈಕ್ರೋವೇವ್ ಒವನ್' ಇತ್ತು. ನಾವ್ಯಾರೂ ಅದನ್ನು ಹೇಗೆ ಉಪಯೋಗಿಸಬೇಕೆಂಬ ಸೂಚನೆಯನ್ನು ಓದುವ ಗೋಜಿಗೆ ಹೋಗಲಿಲ್ಲ. ವೆಂಕಿಗೆ ಕಾಫಿ, ಟೀ ಮಾಡುವ ಕೆಲಸ ಒಪ್ಪಿಸಲಾಗಿತ್ತು. ಒಂದು ದಿವಸ ಇದ್ದಕಿದ್ದಂತೆ ನಮಗೆಲ್ಲ ಒಂದು ಸ್ಫೋಟದ ಶಬ್ದ ಕೇಳಿಸಿತು. ವೆಂಕಿಯು ಮಿಕ್ರೋವೇವಿನಲ್ಲಿ ಒಂದು ಮೊಟ್ಟೆಯನ್ನು

ಬೇಯಿಸಲು ಹಾಕಿದ್ದನು. ಅದು ಸಿಡಿದು ಒಳಗೆಲ್ಲಾ ಮೆತ್ತಿಕೊಂಡಿತ್ತು. ನಾವೇನೂ ಮಾಡುವಂತಿರಲಿಲ್ಲ. ಎಲ್ಲರೂ ನಗುತ್ತಾ ಕುಳಿತೆವು.

ನಾನು ಅವನಿಗೆ ನನ್ನ ಕಾರ್ಯಕ್ರಮವೇನೆಂದು ಮೊದಲೇ ತಿಳಿಸಿದ್ದೆ. ಅವನು ಅದರ ಪ್ರಕಾರ ನನ್ನ ಇಡೀ ಪ್ರಯಾಣವನ್ನು ಸರಿಯಾಗಿ ಪ್ಲಾನ್ ಮಾಡಿದ್ದನು. ಅದು ಒಂದರ ಮೇಲೆ ಒಂದು ಕಾರ್ಯಕ್ರಮವನ್ನು ಪ್ರತಿ ಘಂಟೆ, ನಿಮಿಷವೂ ವ್ಯರ್ಥವಾಗದಂತೆ ಹೆಣೆದಿದ್ದ ಪಟ್ಟಿಯಾಗಿತ್ತು. ನನಗೆ ನನ್ನ ಹಳೆಯ ಮಿತ್ರರನ್ನೆಲ್ಲಾ ನೋಡಬೇಕಿತ್ತು, ಜೊತೆಗೆ ನಮ್ಮ ಸಂಸ್ಥೆಗೆ ಹಣ ಸಂಗ್ರಹಿಸಲು ಇನ್ನಷ್ಟು ಹೊಸಬರೊಡನೆ ಸಂಪರ್ಕವನ್ನು ಬೆಳೆಸುವುದಿತ್ತು. ಎಲ್ಲವೂ ಗಡಿಯಾರದಂತೆ ಶಿಸ್ತುಬದ್ಧವಾಗಿ ನಡೆಯಿತು. ವೆಂಕಿಗೆ ದೃಷ್ಟಿ ದೋಷವಿರಬಹುದು, ಆದರೆ ಅವನು ಪ್ರವಾಸದಲ್ಲಿ ಬಹಳ ಉತ್ತಮ ಸಂಗಾತಿಯಾಗಿದ್ದ. ನಮ್ಮ ಜೋಡಿ ಬಹಳ ಚೆನ್ನಾಗಿತ್ತು. ಅವನು ಎಲ್ಲವನ್ನೂ ಸರಿಯಾಗಿ ಕೇಳಿಸಿಕ್ಕೊಂಡು, ಸೂಕ್ತವಾಗಿ ನಿರ್ವಹಿಸುತ್ತಿದ್ದನು. ಆದ್ದರಿಂದ ನನ್ನ ದಿನಚರಿಯು ಸರಿಯಾಗಿ ಕಳೆಯುತ್ತಿತ್ತು.

ಲಿವರ್ಪೂಲಿನಲ್ಲಿ ನಿಕ್ಕಿ ಎಂಬ ವಯಸ್ಸಾದ ಮಹಿಳೆ ಇದ್ದಳು. ಇವಳು ನಮ್ಮ ಶಾಲೆಯ ದೊಡ್ಡ ಪ್ರಾಯೋಜಕಿ. ಅವಳು ನಮ್ಮನ್ನು ಲಿವರ್ಪೂಲಿನಲ್ಲಿ ಅವಳೊಡನೆ ಇರಲು ಆಹ್ವಾನಿಸಿದ್ದಳು. ನಾವು ಮೂವರೂ ಅವಳ ಮನೆಗೆ ಹೋದಾಗ, ನಮ್ಮ ಎರಡು ದಿನಗಳ ಆತಿಥ್ಯಕ್ಕೆ ಅವಳು ೨೫ ಕಿಲೊ ಅಕ್ಕಿಯನ್ನು ಖರೀದಿಸಿದ್ದಳು ಎಂದು ತಿಳಿಯಿತು. ಪಾಪ, ಅವಳಿಗೆ ಏನೂ ತಿಳಿಯದು. ನಾವು ಶಾಖಾಹಾರಿಗಳು, ನಮಗೆ ಎಲ್ಲಿ ಏನು ಅಸೌಕರ್ಯವಾಗುವುದೋ ಎಂಬ ಆತಂಕ ಆ ಮುಗ್ಧ ಹೆಂಗಸಿಗೆ. ನಮ್ಮನ್ನ – ಒಬ್ಬ ದೃಷ್ಟಿ ಹೀನ, ಒಬ್ಬಳು ವ್ಹೀಲ್ ಚೇರಿನಲ್ಲಿರುವ ಹೆಂಗಸು ಮತ್ತು ಇನ್ನೊಬ್ಬ ಊರುಗೋಲಿನ ಸಹಾಯದಿಂದ ನಡೆಯುವವ – ನೋಡಿ ಅವಳಿಗೆ ಅಪಾರ ಆನಂದ. ನಮ್ಮನ್ನು ಚೆನ್ನಾಗಿ ನೋಡಿಕ್ಕೊಂಡಳು. ಅಂದು ಸಂಜೆ ವೆಂಕಿ ಮತ್ತು ವಿಕೆ ಅಲ್ಲಿನ 'ಪಬ್' ಗೆ ಹೋಗಿ ಸ್ವಲ್ಪ ಡ್ರಿಂಕ್ಸ್ ತೆಗೆದುಕೊಂಡರು.ಅವರು ಹಿಂದಿರುಗಿದಾಗ ವೆಂಕಿ ಸ್ವಲ್ಪ ಭಾವುಕನಾಗಿದ್ದ. ನನಗೆ ಅವನು ಸ್ವಲ್ಪ ಜಾಸ್ತಿ ಕುಡಿದಿದ್ದಾನೋ ಎನ್ನಿಸಿತು.ನಾನು ಕಾರಣ ಕೇಳಿದೆ. ಮೊದಲು ಅವನಿಗೆ ನನ್ನಲ್ಲಿ ಹೇಗೆ ಹೇಳುವುದು ಎಂದು ತಿಳಿಯಲಿಲ್ಲ. ನಾನು ಬಿಡದೇ ಮತ್ತೆ ಮತ್ತೆ ಕೇಳಿದಾಗ ಅವನು ಕೊನೆಗೆ ಹೇಳಿದ. ಇನ್ನು ಮುಂದೆ ಅವನು ನನ್ನೊಡನೆ ಬಾಳ್ವೆ ಮಾಡುವುದಿಲ್ಲಾ ಎಂದು.

ನನಗೆ 'ಸಿಡಿಲು' ಬಡಿದಂತಾಯಿತು. ಆ ರಾತ್ರಿ ನಾನು ಈ ವಿಷಯದ ಬಗ್ಗೆ ಮಾತಾಡಲು ಇಚ್ಛಿಸಲಿಲ್ಲ. ನನಗೆ ಕೋಪವೂ ಬಂದಿತ್ತು. ಇದನ್ನು ಹೇಳುವುದಕ್ಕೋಸ್ಕರ ನನ್ನನ್ನು ಲಂಡನ್ನಿಗೆ

ಬರಹೇಳಿದನೇ? ಇದನ್ನು ಕಾಗದದಲ್ಲೇ ಬರೆಯ ಬಹುದಾಗಿತಲ್ಲಾ; ಆಗ ನಾನು ಇಷ್ಟು ಹಣ ಖರ್ಚು ಮಾಡುವುದು ತಪ್ಪುತ್ತಿತ್ತು. ಅದು ನನ್ನ ತಂದೆ ನನಗೋಸ್ಕರ ಸೇರಿಸಿಟ್ಟಿದ್ದ ಹಣ. ಇವನು ನನ್ನನ್ನು ಅಷ್ಟೊಂದು ಬರಹೇಳಿದನಲ್ಲಾ ಎಂದು ನಾನು ಆ ಕೂಡಿಟ್ಟ ಹಣವನ್ನು ಲಂಡನ್ನಿಗೆ ಬಂದು ಇವನನ್ನು ನೋಡಲು ಉಪಯೋಗಿಸಿದೆ. ಅವನು ತಾನು ನನ್ನನ್ನು ಲಂಡನ್ನಿಗೆ ಬರಹೇಳಿದ್ದು ತಪ್ಪು ಎಂದು ಒಪ್ಪಿಕೊಂಡ. ಆದರೆ, ಅವನಿಗೆ ಇಂಡಿಯಾದಲ್ಲಿ ನನ್ನನ್ನು ಬಿಡುವುದು ಸಾಧ್ಯವಿಲ್ಲ ಎಂಬುದೂ ಗೊತ್ತಿತ್ತು. ಒಂದು ಕಾಗದ ಬರೆದರೆ ಸಾಕಿತ್ತು. ನನ್ನ ಮನಸ್ಸಿಗೆ ಬಹಳ ಬೇಜಾರಾಗಿತ್ತು.

ಮಾರನೆಯ ದಿನ ಬೆಳಿಗ್ಗೆ ನಿಕ್ಕಿ ಗೆ ಈ ವಿಷಯ ತಿಳಿದಾಗ ಅವಳಿಗೆ ಆದ ಆಘಾತಕ್ಕೆ ಅವಳಿಂದ ಮಾತೇ ಹೊರಡಲಿಲ್ಲ. ಅವಳಿಗೆ ಏನು ಹೇಳಬೇಕೆಂದು ತಿಳಿಯಲಿಲ್ಲ. ಅವಳು ವೆಂಕಿಯೊಡನೆ "ಅವಳು ನಿನಗೋಸ್ಕರ ಅಷ್ಟು ದೂರದಿಂದ ಬಂದಿರುವಾಗ ನೀನು ಈ ರೀತಿ ನಡೆದುಕೊಳ್ಳುವುದು ತೀರಾ ಅನ್ಯಾಯ" ಎಂದು ಹೇಳಿದ್ದು ನನ್ನ ಕಿವಿಗೆ ಬಿತ್ತು. ಮುಂದಿನ ಕೆಲವು ದಿನಗಳು ನಾವು ಯಾಂತ್ರಿಕವಾಗಿ ಒಬ್ಬರನ್ನೊಬ್ಬರು ಕಂಡಾಗ ನಕ್ಕು 'good morning', 'good evening' ಇತ್ಯಾದಿ ಮಾತುಗಳನ್ನಾಡುತ್ತಿದ್ದೆವು. ನನಗೆ ನನ್ನ ಪ್ರಯಾಣವನ್ನು ಮೊಟಕುಗೊಳಿಸಿ ಭಾರತಕ್ಕೆ ಹಿಂದಿರುಗುವ ಯೋಚನೆ ಅನೇಕಸಲ ಬಂತು. ಯಾಕೆ ನಾನು ಇದೆಲ್ಲವನ್ನೂ ಅನುಭವಿಸಬೇಕು ಎನ್ನಿಸುತ್ತಿತ್ತು. ಆದರೆ ನಾನು 'ವಿಕೆ'ಗೆ ಮಾತುಕೊಟ್ಟಿದ್ದೆ ಮತ್ತು ಅವರು ನನ್ನ ಮಾತಿಗೋಸ್ಕರ ಎಲ್ಲವನ್ನೂ ಬಿಟ್ಟು ನನ್ನ ಜೊತೆಗೆ ಈ ಪ್ರಯಾಣವನ್ನು ಬೆಳೆಸಿದ್ದರು. ಅದೂ ಅಲ್ಲದೆ ನಾವು ನಮ್ಮ ಪ್ರಾಯೋಜಕರೊಂದಿಗೆ ಅನೇಕ ಮೀಟಿಂಗ್‌ಗಳನ್ನು ಆಯೋಜಿಸಿದ್ದೆವು. ಆದ್ದರಿಂದ ನಾನು ಅಲ್ಲೇ ಉಳಿದುಕೊಂಡು ಆ ಮೀಟಿಂಗ್ ಗಳನ್ನು ಪೂರೈಸುವುದಾಗಿ ನಿಶ್ಚಯಿಸಿದೆ. ನಾವು ಅಲ್ಲಿಂದ ಅಮೇರಿಕಕ್ಕೆ ಹೋಗುವುದಿತ್ತು. ಆದರೆ ವೆಂಕಿಗೆ ನಮ್ಮೊಡನೆ ಅಮೇರಿಕಕ್ಕೆ ಬರುವುದರಲ್ಲಿ ಆಸಕ್ತಿ ಇರಲಿಲ್ಲ. ನನಗೋ, ವೆಂಕಿಯ ಸಹಾಯವಿಲ್ಲದೆ 'ವಿಕೆ' ಯನ್ನು ಸಂಭಾಳಿಸುವ ಧೈರ್ಯವಿರಲಿಲ್ಲ. ಕೊನೆಗೆ ವೆಂಕಿ ನಮ್ಮೊಡನೆ ಬರುವುದಕ್ಕೆ ಒಪ್ಪಿಕೊಂಡ.

ನನಗೆ ವೆಂಕಿ ತೆಗೆದುಕೊಂಡ ನಿರ್ಣಯದ ಗಂಭೀರತೆಯು ನಾವು ಫ್ರೋಮಿಗೆ ಹೋಗಿ ಕ್ರಿಸ್ ಅಂಡರ್ಹಿಲ್ – 'ಆಕ್ಷನ್ ಫಾರ್ ಡಿಸೆಬಿಲಿಟಿ ಅಂಡ್ ಡೆವೆಲಪ್ಮೆಂಟ್' (ಎ.ಡಿ.ಡಿ) ಸಂಸ್ಥೆಯ ಸ್ಥಾಪಕರು – ಅವರನ್ನು ಭೇಟಿ ಮಾಡಿದಾಗ ತಿಳಿಯಿತು. ನಾನು ಕ್ರಿಸ್ ಅವರೊಡನೆ ತೋಟಗಾರಿಕೆಯ ಬಗ್ಗೆ ಪತ್ರ ವ್ಯವಹಾರ ನಡೆಸಿದ್ದರೂ, ಅವರನ್ನು ಈ ಮೊದಲು ಭೇಟಿ ಮಾಡಿರಲಿಲ್ಲ. ಕ್ರಿಸ್ ನನ್ನನ್ನು ವೆಂಕಿಯು ಎ.ಪಿ.ಡಿಯನ್ನು ಬಿಟ್ಟ ಮೇಲೆ ಅವನನ್ನು

ಬೆಂಗಳೂರಿನಲ್ಲಿ ತಮ್ಮ ಸಂಸ್ಥೆಯಲ್ಲಿ ಕೆಲಸಕ್ಕೆ ಸೇರಿಸಿಕೊಳ್ಳಬಹುದೇ ಎಂದು ಪ್ರಶ್ನಿಸಿದರು. ಅವರಿಗೆ ನಾವು ಬೇರೆಯಾಗುತ್ತಿರುವುದು ಗೊತ್ತಿರಲಿಲ್ಲ ವೆಂದು ಕಾಣುತ್ತೆ. ನಾವು ಮೊದಲನೆಯ ಸಲ ಸಂಧಿಸುತ್ತಿದ್ದರಿಂದ, ನಾನು ಅದನ್ನು ಹೇಳಲು ಹೋಗಲಿಲ್ಲ. ನಂತರ ಕ್ರಿಸ್ ಗೆ ಈ ವಿಷಯ ತಿಳಿದು ನನಗೆ ಫೋನ್ ಮಾಡಿದರು. ನಾನು ಅವರಿಗೆ ಚಿಂತಿಸಬೇಡಿ, ಎ.ಪಿ.ಡಿ ವೆಂಕಿ, ಹೇಮಾ ಇವರುಗಳು ಇಲ್ಲದಿದ್ದರೂ ತನ್ನ ಕೆಲಸವನ್ನು ಮುಂದುವರಿಸಿಕ್ಕೊಂಡು ಹೋಗುತ್ತದೆ, ಅದನ್ನು ಅಷ್ಟು ಸಶಕ್ತವಾಗಿ ಕಟ್ಟಿದ್ದೇವೆ ಎಂದೆ.

ನಾನು ಎ.ಪಿ.ಡಿಯಲ್ಲಿ ಈ ವಿಷಯವನ್ನು ಯಾರಿಗಾದರೂ ತಿಳಿಸುವ ಮುಂಚೆ ವೆಂಕಿಯು ನಾಯ್ಡು ಅವರಿಗೆ ಫೋನ್ ಮಾಡಿ ತಾನು ಎ.ಪಿ.ಡಿಯ ಆಡಳಿತ ಮಂಡಳಿಯಿಂದ ನಿವೃತ್ತಿ ಹೊಂದುವುದಾಗಿ ಪತ್ರವನ್ನು ಕೊಡುತ್ತೇನೆ ಎಂದು ತಿಳಿಸಿದನು. ಜೊತೆಗೆ ಅವನು ನಾಯ್ಡು ಅವರನ್ನು ಎ.ಡಿ.ಡಿ ಗೆ ಸೇರಲು ಹೇಳಿದನು. ನಾಯ್ಡು ನನಗೆ ಎ.ಪಿ.ಡಿ ಯನ್ನು ಬಿಡುವುದಿಲ್ಲವೆಂದು ಮಾತು ಕೊಟ್ಟಿದ್ದರು. ಆದ್ದರಿಂದ ಅವರು ವಾರಾಂತ್ಯದಲ್ಲಿ, ತಮ್ಮ ಬಿಡುವು ಸಮಯದಲ್ಲಿ ವೆಂಕಿಗೆ ಸಹಾಯ ಮಾಡುವುದಾಗಿ ತಿಳಿಸಿದರು. ನಾನು ಈ ವಿಷಯವನ್ನು ಯಾರ ಜೊತೆಯೂ ಮಾತಾಡಲಿಲ್ಲ. ಅಮೇರಿಕಕ್ಕೆ ಸೇರಿದಮೇಲೆ ಲೀಲಾ ಆಂಟಿಯ ಜೊತೆಗೂ ಹೇಳಲಿಲ್ಲ.

ಈ ಮಧ್ಯೆ ನನ್ನ ಸ್ನೇಹಿತೆ ಮಾರ್ಗ್ರೆಟ್ ಬ್ಯಾಡ್ಲೀ ಒಂದು ಆಶ್ಚರ್ಯವನ್ನು ಮಾಡಿದಳು. ಅವಳು ಲಂಡನ್ನಿನಲ್ಲಿದ್ದಳು ಮತ್ತು ಆಗಾಗ ಬಂದು ನನ್ನನ್ನು ಹೊರಗೆ ಕರೆದು ಕೊಂಡು ಹೋಗುತ್ತಿದ್ದಳು. ನಾವು ಬಹಳ ನಿಕಟವಾಗಿದ್ದೆವು. ಒಂದು ದಿವಸ ವೆಂಕಿ ಅವಳಿಗೆ ನನ್ನನ್ನು ಕೈಯಿಂದ ನಿಯಂತ್ರಿಸ ಬಹುದಾದ ಕಾರ್ ಗಳನ್ನು ತೋರಿಸಲು ಕರೆದುಕೊಂಡು ಹೋಗುವುದಾಗಿ ಹೇಳಿದನು. ನನಗೆ ಚಿಕ್ಕವಳಾಗಿದ್ದಾಗ ಕಾರ್ ಡ್ರೈವ್ ಮಾಡಿ ಸ್ವತಂತ್ರವಾಗಿ, ನನ್ನ ವಿಕಲಾಂಗತನವನ್ನು ಮರೆತು ಓಡಾಡುವ ಆಸೆ ಇತ್ತು. ಆಗಿನ ಕಾಲದಲ್ಲಿ ವಿಕಲಾಂಗರಿಗಾಗಿ ಮಾರ್ಪಡಿಸಿದ ವಾಹನಗಳಿರಲಿಲ್ಲ. ನನ್ನ ಎಡಗೈ ಮತ್ತು ಎರಡು ಕಾಲುಗಳೂ ಸ್ವಾಧೀನ ಕಳೆದು ಕೊಂಡಿದ್ದರಿಂದ, ನನಗೆ ಬಲಗೈ ಒಂದನ್ನೇ ಉಪಯೋಗಿಸಲು ಆಗುತ್ತಿತ್ತು. ನಾನು ಇಂಗ್ಲೆಂಡಿನಲ್ಲಿ ಕೈಯಿಂದಲೇ ನಿಯಂತ್ರಿಸಬಹುದಾದ ಕಾರ್ ಗಳು ಸಿಗುತ್ತವೆ ಎಂದು ಕೇಳಿದ್ದೆ, ಅಲ್ಲದೆ ವಿಕಲಾಂಗರಿಗೆ ಬೇಕಾದಂತೆ ಸೂಕ್ತವಾಗಿ ಮಾಡಿರುವ ಕಾರ್ ಗಳನ್ನು ಕೊಳ್ಳಲು ಸ್ವೀಡನ್ ಬಹಳ ಒಳ್ಳೆಯ ಸ್ಥಳ ಎಂದೂ ಕೇಳಿದ್ದೆ. ನಾನು ಅನೇಕ ಸಂಸ್ಥೆಗಳೊಡನೆ ಪತ್ರ ವ್ಯವಹಾರ ಮಾಡಿದ್ದೆ, ಆದರೆ ಯಾವುದೂ ಆಯ್ಕೆ ಮಾಡಿರಲಿಲ್ಲ. ಅವರು ನಾನು ಸ್ವೀಡನ್ನಿಗೆ ಹೋದರೆ ಸಹಾಯ ಮಾಡುವುದಾಗಿ ಹೇಳಿದ್ದರು. ಆದರೆ, ಅಲ್ಲಿಗೆ ನನ್ನ

ಪ್ರಯಾಣ, ಕಾರಿನ ಖರೀದಿ, ಕಾರನ್ನು ಭಾರತಕ್ಕೆ ತಂದರೆ ಅದಕ್ಕೆ ತಗಳುವ ಇಂಪೋರ್ಟ್ ಡ್ಯೂಟಿ, ಇವೆಲ್ಲಾ ಸೇರಿ ಬಹಳ ಖರ್ಚಾಗುತ್ತಿತ್ತು. ನಮ್ಮ ತಂದೆಯು ಆಗತಾನೆ ನಿವೃತ್ತರಾಗಿದ್ದರಿಂದ, ಅವರನ್ನು ಹಣ ಕೇಳುವುದು ಸರಿಯಿಲ್ಲ ಎಂದು ನಾನು ಕಾರ್ ತೆಗೆದುಕೊಳ್ಳುವ ಯೋಚನೆಯನ್ನು ಬಿಟ್ಟು ಸುಮ್ಮನಾಗಿದ್ದೆ. ಈಗ, ನಾನು ನನ್ನ ಜೀವನದಲ್ಲಿ ಒಂದು ಪ್ರಪಾತದ ತುದಿಯಲ್ಲಿ ನಿಂತಂತೆ ಇರುವ ನನ್ನ ಸ್ಥಿತಿಯಲ್ಲಿ, ನನಗೆ ಕಾರ್ ಗಿಂತ ಮುಖ್ಯವಾದದ್ದು ಬೇರೆ ಇದ್ದವು. ಆದರೆ ಮಾರ್ಗ್ರೇಟಿಗೆ ಎಲ್ಲಿಲ್ಲದ ಕೋಲಾಹಲ, ಉತ್ಸಾಹ. ಅವಳು ನನ್ನನ್ನು ಕಾರ್ ಕೊಳ್ಳುವಂತೆ ಹೇಳುತ್ತಲೇ ಇದ್ದಳು. ನಾನು ಅವಳಿಗೆ 'ನನ್ನಲ್ಲಿ ಈಗ ಹಣವಿಲ್ಲ, ಬೆಂಗಳೂರಿನಲ್ಲಿ ಬೇಕಾದಷ್ಟು ರಿಕ್ಷಾಗಳಿವೆ, ಜೊತೆಗೆ ದಿವಾನರ ಮಾರಿಸ್ ಮೈನರ್ ಬೇರೆ ಇದೆ, ಇವೇ ನನಗೆ ಸಾಕು' ಎಂದು ಹೇಳಿದೆ.

ಆಗ ಮಾರ್ಗ್ರೇಟ್ ನನಗೆ ಒಂದು ಕಾರ್ ತೆಗೆದು ಕೊಡುವುದಾಗಿ ಹೇಳಿದಳು. ನನಗೆ ಏನು ಹೇಳಬೇಕೆಂದು ತಿಳಿಯಲಿಲ್ಲ. ನಾನು ಅವಳಿಗೆ 'ಅದೇನು ಆಟದ ಸಾಮಾನೇ, ನೀನು ಕೊಟ್ಟರೆ ನಾನು ಮನೆಗೆ ತೆಗೆದುಕೊಂಡು ಹೋಗುವುದಕ್ಕೆ? ಕಸ್ಟಂ ಡ್ಯೂಟಿ ಬಹಳ ಆಗುತ್ತೆ ಅದಲ್ಲದೆ ಬೇಕಾದಷ್ಟು ಪೇಪರ್ ವರ್ಕ್ ಬೇರೆ, ಎಂದು ಹೇಳಿ ಸ್ವಲ್ಪ ಇದನ್ನು ಮುಂದೂಡಿದೆ. ನಾನು ಅವಳಿಗೆ ಮೊದಲು ನಾನು ಇಂಪೋರ್ಟ್ ಪರ್ಮಿಟ್ ಗೆ ಅರ್ಜಿ ಹಾಕಿ ಅದು ನನಗೆ ಸಿಗಲಿ ಆಮೇಲೆ ನೀನು ನನಗೆ ಕಾರನ್ನು ಕೊಡುತ್ತೀಯಂತೆ ಎಂದು ಹೇಳಿದೆ. ಅವಳು 'ಏಕೆ' ಗೆ ನನಗೆ ಈ ವಿಷಯದಲ್ಲಿ ಸಹಾಯಮಾಡುವುದಾಗಿ ಮಾತು ಕೊಡಲು ಹೇಳಿದಳು. ನಾನು ಭಾರತಕ್ಕೆ ಹಿಂದಿರುಗಿದಮೇಲೂ ಅವಳು ಬಿಡದೆ ನನ್ನೊಡನೆ ಈ ವಿಷಯವನ್ನು ಪ್ರಸ್ತಾಪಿಸುತ್ತಲೇ ಇದ್ದಳು. ಅವಳಿಗೆ ನಾನು ಅವಳ ಪ್ರಸ್ತಾಪವನ್ನು ಒಪ್ಪುವುದಿಲ್ಲಾ ಎಂಬದು ತಿಳಿಯಲು ಸುಮಾರು ಎರಡೂವರೆ ವರ್ಷಗಳಾಯಿತು. ಕೊನೆಗೆ ಅವಳು ನನಗೆ ಒಂದು ಚೆಕ್ ಮೂಲಕ ಹಣ ಕಳುಹಿಸಿ, ನೀನು ಇಂಡಿಯಾದಲ್ಲೇ ನಿನಗೆ ಇಷ್ಟಬಂದ ಒಂದು ಕಾರ್ ತೆಗೆದುಕೋ ಎಂದು ಹೇಳಿದಳು. ಆಗ ನಾನು ಒಂದು ಅಂಬಾಸಡರ್ ಕಾರನ್ನು ತೆಗೆದುಕೊಂಡೆ. ಆಗ ಅದಕ್ಕೆ ಒಂದು ಲಕ್ಷಕ್ಕಿಂತ ಸ್ವಲ್ಪ ಹೆಚ್ಚಾಯಿತು. ಅದು ನನಗೆ ೧೮ ವರ್ಷಗಳಕಾಲ ಬಾಳಿಕೆ ಬಂದಿತು. ಕಾರ್ ನನಗೆ ಒಂದು ಬಹಳ ದೊಡ್ಡ ಸೌಕರ್ಯವಾಯಿತು. ಅದೂ ಆಗ ನಾನು ಚಿಂತಾಮಣಿಯಲ್ಲಿ ಒಂದು ಗ್ರಾಮೀಣ ಶಿಬಿರವನ್ನು ಸ್ಥಾಪಿಸುತ್ತಿದ್ದೆ. ಪ್ರತಿ ವಾರ ನನಗೆ ಅಲ್ಲಿಗೆ ಹೋಗಬೇಕಾಗಿತ್ತು. ನನ್ನ ಜೀವನದಲ್ಲಿ ಏನೇ ಆಗಲಿ ಹೋಗಲಿ, ಆಶ್ಚರ್ಯಗಳು ಆಗುತ್ತಲೇ ಇದ್ದವು. ಎಷ್ಟೇ ಕತ್ತಲು ಇದ್ದರೂ, ಮಿನುಗುವ ತಾರೆಗಳು ಕಂಡು ಬರುತ್ತಲಿದ್ದವು.

ಅಮೇರಿಕದಲ್ಲಿ ನಾನು ಪೆನ್ಸಿಲ್ವೇನಿಯಾದ ಲಂಕಾಸ್ಟರ್‌ನಲ್ಲಿ ಲೀಲಾ ಆಂಟಿಯನ್ನು ನೋಡಿ ಅವರೊಡನೆ ಕೆಲವು ದಿನಗಳು ತಂಗಲು ಹೋದೆ. ಅವರ ಮನೆಯಲ್ಲಿ ನನ್ನ ವೀಲ್ ಚೇರ್ ಅಲ್ಲಿನ ಚಿಕ್ಕ ಟಾಯ್ಲೆಟ್ ಬಾಗಿಲೊಳಗೆ ಹೋಗುತ್ತಿತ್ತು, ಆದರೆ ಆ ಎತ್ತರ ಕಮ್ಮಿ ಇದ್ದ ಕಮೋಡಿನಿಂದ ಮತ್ತೆ ವೀಲ್ ಚೇರಿನಮೇಲೆ ಏರಲು ನನಗೆ ಆಗುತ್ತಿರಲಿಲ್ಲ. ಪಾಪ, ನನ್ನ ಅಳಿಯ ಚಂದ್ರು ನನ್ನನ್ನು ಎತ್ತಬೇಕಾಗುತ್ತಿತ್ತು. ಇದು ಅವನಿಗೆ ಬಹಳ ಕಷ್ಟವಾಗುತ್ತಿತ್ತು. ಅವನಿಗೆ ಇದು ವಿಕಲಾಂಗತೆಯ ಬಗ್ಗೆ ಒಂದು ಮುಖ್ಯ ಪಾಠ ಕಲಿತಂತಾಯಿತು. ವೆಂಕಿ ಬರುವ ವರೆಗೆ ನಾವು ಹೀಗೆಯೇ ಸಂಭಾಳಿಸಬೇಕಾಯಿತು. ವೆಂಕಿಗೆ ನನ್ನನ್ನು ಈ ರೀತಿಯ ಸಂದರ್ಭಗಳಲ್ಲಿ ಹೇಗೆ ಸಂಭಾಳಿಸಬೇಕು ಎಂಬುದು ತಿಳಿದಿತ್ತು. ಆ ಮನೆಯಲ್ಲಿ ಮೇಲಿನ ಮಹಡಿಗಳಲ್ಲಿ ದೊಡ್ಡದಾದ ಬಾತ್‌ರೂಂ ಗಳಿದ್ದವು. ನಾನು ಲೀಲಾ ಆಂಟಿಗೆ ಅದೇನೂ ಪರವಾಗಿಲ್ಲ, ನನಗೆ ಇಂಗ್ಲೆಂಡಿನಲ್ಲಿ ಸ್ಪಾಂಜ್ ಬಾತ್ ತೆಗೆದುಕೊಂಡು ಅಭ್ಯಾಸವಾಗಿದೆ ಎಂದು ಹೇಳಿ ಸಮಾಧಾನ ಮಾಡಿದೆ. ಆದರೆ ಅವರು ಒಪ್ಪಬೇಕಲ್ಲ. ಅವರು ಈ ಸಮಸ್ಯೆಗೆ ಒಂದು ಉಪಾಯವನ್ನು ಹುಡುಕುವುದರಲ್ಲಿ ನಿರತರಾಗಿದ್ದರು. ಅವರು ನನ್ನನ್ನು ರಾತ್ರಿ ಹೊತ್ತಿನಲ್ಲಿ ಬಾಲ್ಕನಿಯಲ್ಲಿ ಸ್ನಾನಮಾಡುವಂತೆ ಹೇಳಿದರು. ನಾನು ನಿರಾಕರಿಸಿದೆ. ನಂತರ ಅವರು ನನ್ನನ್ನು ಅವರು ಕೆಲಸ ಮಾಡುತ್ತಿದ್ದ ಯುನಿವರ್ಸಿಟಿಯಮಹಿಳೆಯರ ಬಾತ್ ರೂಂ ಉಪಯೋಗಿಸುವಂತೆ ಹೇಳಿದರು. ಅದು ವಿಕಲಾಂಗರಿಗೆ ಎಷ್ಟು ಸೌಕರ್ಯಕರವಾಗಿರುತ್ತೆ ಎಂಬುದು ಅವರಿಗೂ ಗೊತ್ತಿರಲಿಲ್ಲ. ನಾವು ವೆಂಕಿಯನ್ನು ಯುನಿವರ್ಸಿಟಿಯ ಮೈದಾನದಲ್ಲಿ ಬಿಟ್ಟು ಆ ಕಟ್ಟಡದ ಒಳಗೆ ಹೋದೆವು. ಅಲ್ಲಿ ಒಂದು ಎತ್ತರದ ಕಟ್ಟೆಯಿತ್ತು, ಅದರ ಮೇಲೆ ಕುಳಿತುಕೊಂಡು ನಾನು ಶವರ್ ಮಾಡಿಕೊಳ್ಳಬಹುದಿತ್ತು. ಆದರೆ ವೀಲ್ ಚೇರ್‌ನಿಂದ ಕಟ್ಟೆ ಹತ್ತುವುದು ಆಗದ ಕೆಲಸವಾಯಿತು, ಯಾಕೆಂದರೆ ಆ ಕಟ್ಟೆ ಬಹಳ ಎತ್ತರವಿತ್ತು. ಲೀಲಾ ಆಂಟಿ ನನಗೆ ಸಹಾಯ ಮಾಡುವುದಾಗಿ ಹೇಳಿದರು, ಆದರೆ ನಾನೇ ಬೇಡವೆಂದೆ, ಯಾಕೆಂದರೆ ಅವರು ಎಂದೂ ಆ ರೀತಿಯ ಕೆಲಸ ಮಾಡಿರಲಿಲ್ಲ. ಅವರೂ ಬಿದ್ದು ನನ್ನನ್ನೂ ಬೀಳಿಸಬಹುದೆಂಬ ಭಯವು ನನಗಿತ್ತು. ನಾನು 'ಸ್ನಾನ ಏನೂ ಆ ರೀತಿ ಮುಖ್ಯವಲ್ಲ, ಪರವಾಗಿಲ್ಲ ಸಾಧ್ಯವಾಗದಿದ್ದರೆ ಸ್ನಾನ ಮಾಡದೇನೆ ಇರಬಹುದು' ಎಂದೆ.

ಲೀಲಾ ಆಂಟಿ ನನ್ನನ್ನು ಸ್ನಾನ ಮಾಡುವಂತೆ ಒತ್ತಾಯಿಸಿದರು. ನಾನು ಅವರನ್ನು ವೆಂಕಿ ನನಗೆ ಸಹಾಯ ಮಾಡಬಹುದೇ ಎಂದು ಕೇಳಿದೆ. ಅದು ಹೆಂಗಸರ ಬಾತ್ ರೂಂ. ಪುರುಷರು ಅಲ್ಲಿಗೆ ಬರುವಂತಿಲ್ಲ ಎಂದರು. ನನಗೆ ನಗು ಬಂದಿತು. ನಾನು ವೆಂಕಿಗೆ ಕಣ್ಣು ಕಾಣಿಸುವುದಿಲ್ಲ. ಅದೂ ಅಲ್ಲದೆ ಈ ಹೊತ್ತಿನಲ್ಲಿ ಅಲ್ಲಿ ಬೇರಾರೂ ಇಲ್ಲ. ನೀವು ಅಲ್ಲಿನ

ಅಧಿಕಾರಿಗಳನ್ನು ಕೇಳಿಕೊಳ್ಳಿ ಎಂದೆ. ಕೊನೆಗೆ ಅವರು ಒಪ್ಪಿಕೊಂಡರು. ವೆಂಕಿ ನನ್ನನ್ನು ಆ ಕಟ್ಟೆಯ ಮೇಲೆ ಎತ್ತಿ ಕೂರಿಸಿದನು. ನಾನು ನನ್ನ ಕೂದಲನ್ನು ಶ್ಯಾಂಪೂ ಮಾಡಿಕೊಂಡೆ. ನಾನು ಶ್ಯಾಂಪೂ ಹಾಕಿಕೊಂಡ ನಂತರ ನೀರು ನಿಂತು ಹೋಯಿತು. ನಾನು ಅಮೇರಿಕದ ದೊಡ್ಡ ಯೂನಿವರ್ಸಿಟಿಯಲ್ಲಿ ಮಹಿಳೆಯರ ಬಾತ್ ರೂಂ ನಲ್ಲಿ ಶ್ಯಾಂಪೂ ಹಾಕಿಕೊಂಡು ನೀರಿಲ್ಲದೆ ಒದ್ದಾಡುತ್ತಿದ್ದೆ. ಲೀಲಾ ಆಂಟಿ ದೊಡ್ಡ ಟರ್ಕಿಶ್ ಟವೆಲ್ಲುಗಳನ್ನು ತಂದಿದ್ದರು. ಅವರು ಅವುಗಳನ್ನು ಪಕ್ಕದ ಬಾತ್ ರೂಂ ನಲ್ಲಿ ನೀರಿನಲ್ಲಿ ಅದ್ದಿ ಒಂದೊಂದಾಗಿ ವೆಂಕಿಗೆ ಕೊಟ್ಟರು. ಅವನು ಅವನ್ನು ನನ್ನ ತಲೆಯ ಮೇಲೆ ಹಿಂಡಿದನು, ನಾನು ನನ್ನ ಸ್ನಾನವನ್ನು ಮುಗಿಸಲಾಯಿತು. ಪಾಪ ಲೀಲಾ ಆಂಟಿಗೆ ಬಹಳ ಸಂಕೋಚವಾಯಿತು, ಆದರೆ ಅವರು ಈ ಸಂದಿಗ್ಧವನ್ನು ಇಷ್ಟು ಚೆನ್ನಾಗಿ ನಿಭಾಯಿಸಿದರು. ನಮ್ಮೆಲ್ಲರಿಗೂ ಇದು ಒಂದು ಒಳ್ಳೆಯ ಪಾಠ ಕಲಿತಂತಾಯಿತು. ನಾವು ಒಂದು ಕಷ್ಟಕರ ಸನ್ನಿವೇಶದಲ್ಲಿ ಸಿಕ್ಕಿಹಾಕಿಕೊಂಡರೆ ಏನು ಮಾಡಬೇಕು? ಇಬ್ಬರು ಸಹಾಯ ಮಾಡುವಂತ ಸಜ್ಜನರೂ ಮತ್ತು ಕೆಲವು ಟರ್ಕಿಶ್ ಟವೆಲ್ಲುಗಳೂ ಜೊತೆಗಿದ್ದರೆ ಸಾಕು.

ನಮಗೆ ಅಮೇರಿಕಾದ ವಿವಿಧ ಪ್ರಾಂತಯಗಳಿಗೆ ಹೋಗಿ ಸುತ್ತಾಡಬೇಕೆಂದು ಆಸೆ ಇತ್ತು, ಆದರೆ ನಮ್ಮ ಹತ್ತಿರ ಒಂದು ಕಾರನ್ನು ಬಾಡಿಗೆಗೆ ತೆಗೆದುಕೊಳ್ಳುವಷ್ಟು ಹಣವಿರಲಿಲ್ಲ.ಆದ್ದರಿಂದ ನಾವು 'ಗ್ರೇ ಹೌಂಡ್' ಬಸ್ಸಿನಲ್ಲಿ ಪ್ರಯಾಣ ಮಾಡಲು ನಿರ್ಧರಿಸಿದೆವು. ಲೀಲಾ ಆಂಟಿಗೆ ಇದು ಹುಚ್ಚುತನ ಎಂದು ಅನಿಸಿತ್ತು, ಆದರೆ ನಾವುನಮ್ಮ ನಿರ್ಧಾರವನ್ನು ಬದಲಿಸಲಿಲ್ಲ. ನಾವು ವಾಷಿಂಗ್ಟನ್ ಡಿ ಸಿ, ನ್ಯೂಯಾರ್ಕ್ ಮತ್ತು ನಯಾಗರಾ ಜಲಪಾತಕ್ಕೆ ಹೋದೆವು. ಎಲ್ಲೆಲ್ಲೂ ನಮ್ಮ ಸಂಬಂಧೀಕರು ಮತ್ತು ಮಿತ್ರರೊಡನೆ ತಂಗುತ್ತಿದ್ದೆವು. ಬಸ್ಸಿನ ಪ್ರಯಾಣ ಬಹಳ ಕಷ್ಟಕರವಾಗಿತ್ತು, ಅಲ್ಲಿ ಬಸ್ಸಿನ ಮೇಲೆ ದೊಡ್ಡದಾಗಿ 'ಗ್ರೇಹೌಂಡ್ ಬಸ್ಸಿನಲ್ಲಿ ಅಮೇರಿಕದ ಯಾವುದೇ ಸ್ಥಳಕ್ಕೆ ಹೋಗುವುದು ಎಷ್ಟು ಸುಲಭ' ಎಂದು ಹಾಕಿತ್ತು. ಬಸ್ಸಿನ ನಿಲ್ದಾಣಗಳು ಮತ್ತು ಒಂದರಿಂದ ಮತ್ತೊಂದಕ್ಕೆ ಬದಲಾಯಿಸುವುದು ಬಹಳ ಸೌಕರ್ಯವಾಗೇ ಇದ್ದಿತು. ಆದರೆ, ನಮಗೆ ಎಲ್ಲೂ ಯಾವ ಸಹಾಯವೂ ಸಿಗಲಿಲ್ಲ. ನಾವು ಬಸ್ಸನ್ನು ಹತ್ತಲು ಮತ್ತು ನನಗೆ ಒಂದು ಸೌಕರ್ಯವಾದ ಸೀಟನ್ನು ಕೊಡಲು ಪ್ರತಿಸಲವೂ ಬೇಡುತ್ತಿದ್ದೆವು. ಆದರೆ, ಡ್ರೈವರ್ ಕೊನೆಯಲ್ಲಿ ಬಸ್ ಹತ್ತುತ್ತಿದ್ದನು ಮತ್ತು ಅವನು ನನಗೆಂದು ಕೊಡುತ್ತಿದ್ದ ಜಾಗ ಸ್ವಲ್ಪವೂ ಆರಾಮವಾಗಿರುತ್ತಿರಲಿಲ್ಲ. ವೆಂಕಿಗೂ ಡ್ರೈವರ್ ಗಳಿಗೂ ವಾಗ್ವಾದವಾಗುತ್ತಿತ್ತು, ಅಮೇರಿಕದ ಜನ ಸ್ನೇಹಪರರಾಗಿದ್ದರು ನಿಜ, ಆದರೆ ಅವರು ಸಹಾಯ ಮಾಡಲು ಮುಂದೆ ಬರುತ್ತಿರಲಿಲ್ಲ. ಅಲ್ಲಿನ ಬಗ್ಗೆ ನಾವು ಎಷ್ಟೋ ವಿಷಯ ಕೇಳಿದ್ದೆವು, ಆದರೆ ವಿಕಲಾಂಗರಿಗಾಗಿ ಅಲ್ಲಿದ್ದದ್ದು ಒಂದೇ, ಅದು ವೀಲ್

ಚೇರ್ ಹೋಗಬಹುದಾದ ಇಳಿಜಾರುಗಳು. ಹೋಟಲಿನ ರೂಮುಗಳಲ್ಲಿ ಬಾತ್ ರೂಮ್ ಎಷ್ಟು ಚಿಕ್ಕದಿತ್ತೆಂದರೆ ಅದರಲ್ಲಿ ವೀಲ್ ಚೇರ್ ಒಳಗೆ ಹೋಗುತ್ತಿರಲಿಲ್ಲ. ಬಾತ್ ಟಬ್‌ಗಳನ್ನು ಉಪಯೋಗಿಸಲು ಬಹಳ ಕಷ್ಟವಾಗುತ್ತಿತ್ತು. ವೆಂಕಿ ನನ್ನನ್ನು ಎತ್ತಿ ಸಹಾಯ ಮಾಡಬೇಕಾಗುತ್ತಿತ್ತು. ಒಂದೊಂದು ಸಲ ನನಗೆ ಯಾಕೆ ನಾನು ಇಷ್ಟು ಖರ್ಚುಮಾಡಿಕ್ಕೊಂಡು, ಎಲ್ಲರಿಗೂ ತೊಂದರೆ ಕೊಟ್ಟುಕೊಂಡು ಇಲ್ಲಿಗೆ ಬಂದಿದ್ದೇನೆ ಅನ್ನಿಸುತ್ತಿತ್ತು. ಅದೂ, ನನ್ನ ಮತ್ತು ವೆಂಕಿಯ ಸಂಬಂಧ ಈ ಸ್ಥಿತಿಯಲ್ಲಿರುವಾಗ ನನಗೆ ಬಹಳ ದುಃಖವಾಗುತ್ತಿತ್ತು. ವೆಂಕಿ ಮೌನವಾಗಿ ಬಿಟ್ಟಿದ್ದ. ಮಾತೇ ಇಲ್ಲ, ಊಟ, ಸಿಗರೇಟು ಸೇದುವುದು, ಕುಡಿತ ಎಲ್ಲದರಲ್ಲೂ ಒಂಟಿಯಾಗಿ ಇರುತ್ತಿದ್ದ.

ನಾವು ನಯಾಗರ ಜಲಪಾತದಲ್ಲಿ ಎರಡು ದಿನ ಕಳೆಯಬೇಕೆಂದು ಇದ್ದೆವು. ಅವರು ನಾವು ನೋಡುವುದೆಲ್ಲವನ್ನೂ ವಿವರಿಸುವಂತಃ ಆಡಿಯೋ ಗೈಡ್ ನಮಗೆ ಕೊಟ್ಟಿದ್ದರು. ಈ ಪ್ರಪಂಚವು ನೋಡಲು ಒಂದು ಸುಂದರ ಅನುಭವ. ಬರೀ ಕೇಳುವುದರಿಂದ ಆ ಅನುಭವವು ಸಿಗುವುದಿಲ್ಲ. ದೃಷ್ಟಿ ಮಾಂಧ್ಯವಿರುವವರು ಬೇರೆಯಾದ ಒಂದು ಜಗತ್ತಿನಲ್ಲಿ ಇರುತ್ತಾರೆ. ಅದರಲ್ಲಿ ಅವರು ಯಾವುದಕ್ಕೆ ಗಮನ ಕೊಡಬೇಕು ಯಾವುದಕ್ಕೆ ಬೇಡ ಎಂದು ಆರಿಸಿಕೊಳ್ಳಬೇಕು. ಆಗ ನನ್ನ ಬಳಿ ಒಂದು ಎಲೆಕ್ಟ್ರಿಕ್ ವೀಲ್ ಚೇರ್ ಇರಲಿಲ್ಲ, ಮತ್ತು ವೆಂಕಿಗೂ ನನ್ನ ಚೇರನ್ನು ತಳ್ಳಿ ತಳ್ಳಿ ಸಾಕಾಗಿತ್ತು. ಆದ್ದರಿಂದ ನಾವು ನಯಾಗರಾ ನಲ್ಲಿ ಒಂದು ದಿವಸವಾದ ನಂತರ ನ್ಯೂ ಯಾರ್ಕಿಗೆ ವಾಪಸ್ಸಾದೆವು.

ನ್ಯೂಯಾರ್ಕಿನಲ್ಲಿ ನಾನು ವೆಂಕಿ ಒಂದು ಸಂಜೆ ಚೈನೀಸ್ ಊಟವನ್ನು ಹುಡುಕುತ್ತಾ ಹೋದೆವು. ವೆಂಕಿಗೆ ಹೋಟೆಲಿನಲ್ಲಿ ಊಟಮಾಡುವ ಮನಸ್ಸಿರಲಿಲ್ಲ. ನನಗೆ ರೂಮಿನಲ್ಲಿ ಒಬ್ಬಳೇ ಇರಲು ಮನಸ್ಸಿರಲಿಲ್ಲ.ನಮ್ಮ ರೂಮು ಎರಡನೆಯ ಮಹಡಿಯಲ್ಲಿ ಇತ್ತು. ಅಕಸ್ಮಾತ್ ಏನಾದರೂ ಬೆಂಕಿಯ ಅನಾಹುತವಾದರೆ ಅಲ್ಲಿಂದ ಹೊರಗೆ ಬರಲು ಯಾವ ದಾರಿಯೂ ಇರಲಿಲ್ಲ. ಅಲ್ಲಿಯೇ ನನ್ನ ಕೊನೆಯಾಗುತ್ತಿತ್ತು. ಸುತ್ತಮುತ್ತ ಎಲ್ಲವೂ ಉರಿಯುವಂತಹ ವಸ್ತುಗಳು. ಅದರ ಜೊತೆಗೆ ಒಬ್ಬ ದೃಷ್ಟಿಹೀನನು ಒಬ್ಬನೇ ನ್ಯೂ ಯಾರ್ಕಿನ ದಟ್ಟ ಸಂಚಾರವಿರುವ ರಸ್ತೆಯಲ್ಲಿ ಓಡಾಡುವುದನ್ನು ಯೋಚಿಸಿಕೊಂಡರೆ ಭಯವಾಗುತ್ತಿತ್ತು. ಹೋಟಲಿನ ರಿಸೆಪ್ಷನಿನಲ್ಲಿದ್ದ ಹೆಂಗಸು ನಮಗೆ ಒಂದು ಹೋಟಲಿಗೆ ದಾರಿ ಹೇಳಿದಳು. ಅದು ನಾವು ಇದ್ದ ಜಾಗದಿಂದ ನಾಲ್ಕು ಕಟ್ಟಡಗಳ ಆಚೆ ಇತ್ತು. ನ್ಯೂ ಯಾರ್ಕಿನಲ್ಲಿ ನಡೆಯುವ ಕ್ರೈಂ ಬಗ್ಗೆ ಕೇಳಿದ್ದ ನಾನು ನನ್ನ ಪಸ್ಪೋರ್ಟ್ ಮತ್ತು ಹಣವನ್ನು ವೀಲ್ಚೇರಿನ ಸೀಟಿನಮೇಲೆ ಇಟ್ಟು ಅದರಮೇಲೆ ನಾನು ಕುಳಿತುಕೊಂಡೆ. ನಾನೇ ನಮಗೆ

ಮಾರ್ಗದರ್ಶಿಯಾದೆ. ವೆಂಕಿ ನಾನು ಹೇಳಿದಂತೆ ಕೇಳುತ್ತಿದ್ದ, ಬೇಗ ಹೋಗು, ಮೆಲ್ಲಗೆ ಹೋಗು, ನಿಲ್ಲು, ಇತ್ಯಾದಿ. ನಮ್ಮ ಅಕ್ಕಪಕ್ಕದಲ್ಲಿದ್ದ ಬೇರೆ ಯಾರಿಗೂ ಇದರ ಪರಿವೆಯೇ ಇರಲಿಲ್ಲ.

ನನಗೆ ಜನ ಸಂದಣಿ ಇರುವ ರಸ್ತೆಗಳಲ್ಲಿ ಓಡಾಡುವುದು ಬಹಳ ಇಷ್ಟ, ಅಲ್ಲಿ ನಾನು ಅವರ ಜೀವನ ಮತ್ತು ಚೈತನ್ಯವನ್ನು ಕಾಣಲು ಇಚ್ಛಿಸುತ್ತೇನೆ. ವೆಂಕಿ ನನ್ನನ್ನು ಲಂಡನ್ನಿನಲ್ಲಿ ಆಕ್ಸ್‌ಫರ್ಡ್ ಸ್ಟ್ರೀಟ್ ಗೆ ಕರೆದು ಕೊಂಡು ಹೋಗುತ್ತಿದ್ದ. ಅಲ್ಲಿ ನಾವು ಘಂಟೆಗಟ್ಟಲೆ ಅಂಗಡಿಗಳಲ್ಲಿ ಏರ್ಪಡಿಸಿರುವ ಡಿಸ್ಪ್ಲೇಗಳನ್ನು ನೋಡುತ್ತಾ ಸಮಯ ಕಳೆಯುತ್ತಿದ್ದೆವು. ಅಂದು ನಾವು 'ಬಿಗ್ ಅಪ್ಪಲ್' ಎಂಬ ಚೈನೀಸ್ ಹೋಟಲಿನಲ್ಲಿ ರಾತ್ರಿ ೨ ಘಂಟೆಯ ತನಕ ಕುಳಿತಿದ್ದೆವು. ನನಗೆ ಅಷ್ಟು ಹೊತ್ತಿನಲ್ಲಿ ವಾಪಸ್ ನಡೆಯಲು ಬಹಳ ಭಯವಾಗಿತ್ತು, ಆದರೆ ಆ ಹೊತ್ತಿನಲ್ಲಿ ಯಾವ ಟಾಕ್ಸಿಯೂ ನಿಲ್ಲಿಸುತ್ತಿರಲಿಲ್ಲ. ನನಗಂತೂ ನಾವು ಅಲ್ಲಿಯೇ ಫುಟ್ ಪಾತಿನಲ್ಲಿ ರಾತ್ರಿ ಮಲಗಬೇಕಾಗುತ್ತದೆ ಅನ್ನಿಸುತ್ತಿತ್ತು. ಕೊನೆಗೆ ನಾವು ಬಂದ ದಾರಿಯಲ್ಲಿ ವಾಪಸ್ ನಡೆದು, ಕತ್ತಲಾದ ರಸ್ತೆ, ಅಪರಿಚಿತ, ಹೆದರಿಕೆ ಹುಟ್ಟಿಸುವ ಜನರನ್ನು ಮತ್ತು ರಸ್ತೆಯಲ್ಲಿ ರಾತ್ರಿಯನ್ನು ಕಳೆದು ಬೆಳಗಾಗಲು ಕಾಯುತ್ತಿರುವರನ್ನೂ ದಾಟಿಕೊಂಡು, ನಮ್ಮ ಜಾಗಕ್ಕೆ ಹಿಂದಿರುಗಿದೆವು.

ನಮ್ಮ ಅಮೇರಿಕದ ಪ್ರವಾಸದ ನಂತರ ನಾವು ಬೇರೆ ಬೇರೆ ಕಡೆಗೆ ಹೋದೆವು. ನಾನು ಭಾರತಕ್ಕೆ ಹಿಂದಿರುಗಿದೆ, ವೆಂಕಿ ಡೇವಿಡ್ ವರ್ನರ್ ಅವರ 'ಪ್ರೋಜಿಮೋ' (Program of Rehabilitation Organized by Disabled Youth of Western Mexico) ನೋಡಲು ಮೆಕ್ಸಿಕೋ ಗೆ ಹೋದ ಮತ್ತು ಏಕೇ ಸ್ವಿಟ್ಸರ್ಲಂಡಿಗೆ ಮತ್ತ್ಯಾವುದೋ ಕೆಲಸದಿಂದ ಹೋದರು. ನನಗೆ ಇನ್ನು ಮುಂದೆ ನಾನು ವೆಂಕಿಯ ಜೊತೆಯಲ್ಲಿ ಇರುವುದಿಲ್ಲ, ಇದೇ ನಾವು ಒಟ್ಟಿಗೆ ಇದ್ದಿದ್ದರ ಕೊನೆ ಎಂದು ಮನಸ್ಸಿನಲ್ಲಿ ಅನ್ನಿಸಿತ್ತು. ಲುಫ್ಥಾನ್ಸಾ ಅವರ ಪ್ಲೇನಿನಲ್ಲಿ ಬೆಂಗಳೂರಿಗೆ ಪ್ರಯಾಣ ಬಹಳ ಕಷ್ಟಕರವಾಗಿತ್ತು. ನಮ್ಮಂತ ವಿಕಲಾಂಗರಿಗೆ ಬಹಳ ಹೊತ್ತಿನ ಪ್ರಯಾಣ ಕಷ್ಟಕರವಾಗುತ್ತದೆ. ನಾನು ಒಂದು ದಿವಸ ಮೊದಲಿನಿಂದಲೇ ಏನನ್ನೂ ತಿನ್ನುವುದು ಮತ್ತು ಕುಡಿಯುವುದನ್ನು ನಿಲ್ಲಿಸಿದ್ದೆ, ಯಾಕೆಂದರೆ ಆ ಸ್ಟೀವರ್ಡ್ಗಳು ನನ್ನನ್ನು ಆ ಪುಟ್ಟ ಟಾಯ್ಲೆಟ್ಗೆ ಕರೆದುಕೊಂಡು ಹೋಗುವುದನ್ನು ತಪ್ಪಿಸಲು. ಕೆಲವು ಸಖಿಯರಂತೂ ನನ್ನನ್ನು ನೋಡಿದರೆ ಎಲ್ಲಿ ಅವರಿಂದ ಸಹಾಯ ಬೇಡುವೆನೋ ಎಂಬ ಹೆದರಿಕೆಯಿಂದ ಕಂಗಾಲಾಗುತ್ತಿದ್ದರು. ಅವರುಗಳು ತಮ್ಮತಮ್ಮಲ್ಲಿ ಮಾತನಾಡಿಕೊಳ್ಳುತ್ತಾ,

ಯಾರ ಪಾಲಿಗೆ ಈ ವಿಕಲಾಂಗಳನ್ನು ನೋಡಿಕೊಳ್ಳಬೇಕಾಗುತ್ತೋ ಅವರಿಗೆ ದೇವರ ಕೃಪೆ ಇರಲಿ ಎಂದು ಹೇಳಿಕೊಳ್ಳುತ್ತಿದ್ದದ್ದು ನನ್ನ ಕಿವಿಗೆ ಬಿದ್ದಿತು.

ಬೆಂಗಳೂರಿನಲ್ಲಿ ಎಲ್ಲರೂ ವೆಂಕಿಯು ಬರುತ್ತಾನೆಂದು ಕಾಯುತ್ತಿದ್ದರು. ನಾನು ಪ್ರಭಳಿಗೆ ಮುಂದಾಗುವ ವಿಷಯವನ್ನು ತಿಳಿಸಿದೆ. ವೆಂಕಿ ಬೆಂಗಳೂರಿಗೆ ಬಂದ ನಂತರ ಶಿಲ್ಪನ್ ಹೋಟಲಿನಲ್ಲಿ ಉಳಿದುಕ್ಕೊಂಡು ನನಗೆ ಫೋನ್ ಮಾಡಿದ. ಅವನಿಗೆ ತಾನು ಬೆಂಗಳೂರಿಗೆ ಬಂದಿರುವ ವಿಷಯವು ಬೇರೆಯವರಿಂದ  ನನಗೆ ತಿಳಿಯುವುದು ಇಷ್ಟವಿರಲಿಲ್ಲ.ಆದರೆ ಅವನಿಗೆ ಮನೆಗೆ ಬರುವುದೂ ಇಷ್ಟವಿರಲಿಲ್ಲ. ನಂತರ ಅವನು ಅಜಂತಾ ಹೋಟಲಿಗೆ ಹೋದ. ನಾನು ಅವನಿಗೆ ಮನೆಗೆ ಬರಲು ಹೇಳಿದೆ. ನಾನು ಮದುವೆಗೆ ಒಪ್ಪುವುದಕ್ಕೆ ಮುಂಚೆ ಏಳು ವರ್ಷಗಳು ಕಾದಿದ್ದೆ. ಅವನು ಬಲವಂತ ಮಾಡದಿದ್ದರೆ ಪ್ರಾಯಷಃ ನಾನು ಹಾಗೆಯೇ ಜೀವನವನ್ನು ಕಳೆಯುತ್ತಿದ್ದೆ. ಅವನು 'ಅದೊಂದು ತಪ್ಪಾಯಿತು, ಎಲ್ಲರೂ ತಪ್ಪು ಮಾಡುತ್ತಾರೆ' ಎಂದು ಮಾತ್ರ ಹೇಳಿದ.  ಒಂದು ದಿನ ನಾನು ಅವನಿದ್ದ ಹೋಟಲಿಗೆ ಹೋದೆ. ಅಲ್ಲಿ ನಮ್ಮಿಬ್ಬರ ಮಧ್ಯೆ unpleasant scene ಆಯಿತು. ನಾನು ಅಲ್ಲೇ ತಕ್ಷಣ ನಮ್ಮಿಬ್ಬರ ಸಂಬಂಧ ಇನ್ನು ಮುಗಿಯಿತು ಎಂದು ನಿಶ್ಚಯಿಸಿದೆ.

ವೆಂಕಿ ನನ್ನನ್ನು ರಿಕ್ಷಾಹತ್ತಿಸಲು ಬರುತ್ತೇನೆಂದ, ಆದ್ರೆ ನಾನು ಏನೂ ಬೇಕಿಲ್ಲ ವೆಂದು ಹೇಳಿ ನನ್ನ ಪಾಡಿಗೆ ಹೊರಟೆ. ಆದರೆ ನನಗೆ ಮನೆಗೆ ಹೋಗಲು ಮನಸ್ಸಾಗಲಿಲ್ಲ. ಅಲ್ಲಿ ನಮ್ಮ ಅಮ್ಮನ ಮುಂದೆ ಕಣ್ಣೀರು ಹಾಕಲು ನನಗೆ ಮನಸ್ಸಿರಲಿಲ್ಲ. ಆದಕ್ಕೇ ನಾನು ಏ.ಪಿ.ಡಿ ಗೆ ಹೋದೆ. ಅಂದು ಭಾನುವಾರವಾದ್ದರಿಂದ ಗೇಟು ಮುಚ್ಚಿ ಬೀಗ ಹಾಕಿತ್ತು. ನಾನು ವಾಚ್ ಮ್ಯಾನಿಗೆ ಬೀಗವನ್ನು ತೆಗೆದು ನನ್ನನ್ನು ಒಳಗೆ ಬಿಡಲು ಹೇಳಿದೆ. ರಿಕ್ಷಾ ಡ್ರೈವರ್ ಗೆ ನಾನು ಯಾಕೆ ರಜದ ದಿನದಂದು ಇಲ್ಲಿಗೆ ಬಂದಿದ್ದೀನಿ ಎಂದು ಆಶ್ಚರ್ಯ. ನನ್ನನ್ನು ನೋಡಿ ಅವನಿಗೆ ಏನೋ ಸರಿಯಿಲ್ಲ ಎಂಬ ಗುಮಾನಿ. ನನ್ನನ್ನು ಏನು ತೊಂದರೆ, ಯಾಕೆ ಗಾಬರಿಯಾಗಿದ್ದೀರ ಎಂದು ಕೇಳಿದ. ನಾನು ಅವನಿಗೆ ನಮ್ಮ ಪತಿ ಪತ್ನಿ ಸಂಬಂಧವು ಈಗತಾನೆ ಮುಕ್ತಾಯಗೊಂಡಿತು ಎಂದು ಹೇಳಿದೆ. ಆದಕ್ಕೆ ಅವನು ಇಲ್ಲಿಗ್ಯಾಕೆ ಬಂದಿದ್ದೀರ, ಇದು ಯಾವ ಸ್ಥಳ, ನಿಮಗೆ ಮನೆ ಇಲ್ಲವೇ? ಎಂದು ಕೇಳಿದ. ನಾನು ಅವನಿಗೆ 'ಇದುವೇ ನನ್ನ ಸಾಮ್ರಾಜ್ಯ' ಎಂದುಹೇಳಿದೆ.

ನನ್ನನ್ನು ಬಿಡದೇ ಪ್ರಶ್ನಿಸುತ್ತಿದ್ದ ರಿಕ್ಷಾ ಡ್ರೈವರನ್ನು ಕಳುಹಿಸಿ ನಾನು ಸ್ವಲ್ಪ ಸಮಯ ಏ.ಪಿ.ಡಿಯಲ್ಲೇ ಕಳೆದೆ. ನಂತರ ನಾನು ಐವಿ ಮನೆಗೆ ಹೋಗಿ ಅವಳೊಡನೆ ಸ್ವಲ್ಪ ಹೊತ್ತು ಮಾತನಾಡಿ ನಂತರ ಮನೆಗೆ ಹೋದೆ. ಈ ಮಧ್ಯೆ ನಾಯ್ಡು ಅವರು ತಮ್ಮ ಹೊಸ 'ಬಾಸ್'

ಕಾಣಲು ಅಜಂತಾ ಹೋಟಲಿಗೆ ಹೋದರು. ಅಲ್ಲಿ ವೆಂಕಿ ಬಾಗಿಲನ್ನು ತೆರೆದಾಗ ಅವರಿಗೆ ದೊಡ್ಡ ಆಘಾತವಾಯಿತು. ಅವನು ನಾಯ್ಡು ಅವರೊಂದಿಗೆ 'ಎಲ್ಲಾ ಮುಗಿದುಹೋಯಿತು, ಅವಳು ಸತ್ತು ಹೋದಳು' ಎಂದು ಹೇಳಿದ. ಏನೂ ಅರ್ಥವಾಗದ ನಾಯ್ಡು 'ಯಾರು ಸತ್ತು ಹೋದರು?' ಎಂದು ಕೇಳಿದರು. 'ಹೇಮಾ ಸತ್ತು ಹೋದಳು' ಎಂದು ಹೇಳಿ ವೆಂಕಿ ಅವರಿಗೆ ಕಥೆಯನ್ನು ಪೂರ್ತಿಯಾಗಿ ಹೇಳಿದನು. ನಾನು ಕೋಪಿಸಿಕೊಂಡು ವೆಂಕಿಯ ಹೋಟಲಿನಿಂದ ಹೊರಟುಹೋದ ಮೇಲೆ, ಅವನು ತನ್ನ ಸ್ನೇಹಿತನೊಬ್ಬನ ಕೈಯಿಂದ ನಮ್ಮ ಮನೆಗೆ ಫೋನು ಮಾಡಿಸಿದನಂತೆ. ಅವನಿಗೆ ನನ್ನ ಅಮ್ಮ ಅವನ ಧ್ವನಿಯನು ಗುರುತಿಸುವುದು ಬೇಕಿರಲಿಲ್ಲ. ಆ ಸ್ನೇಹಿತನು ಎರಡು ಸಲ ಫೋನು ಮಾಡಿದ್ದನಂತೆ. ಎರಡು ಸಲವೂ ಅಮ್ಮ ನಾನು ಇನ್ನೂ ಮನೆಗೆ ಬಂದಿಲ್ಲ ಎಂದು ಹೇಳಿದರಂತೆ. ವೆಂಕಿ ನಾನು ಆತ್ಮ ಹತ್ಯೆ ಮಾಡಿಕೊಂಡಿರಬೇಕು ಎಂದು ಕೊಂಡನಂತೆ. ನಾಯ್ಡು ಈ ಮಾತನ್ನು ಕೇಳಿ ಅವಾಕ್ಕಾದರು. ಅವರು ವೆಂಕಿಯನ್ನು ತಮ್ಮೊಡನೆ ಒಂದು ರಿಕ್ಷಾದಲ್ಲಿ ಕರೆದುಕೊಂಡು ನನ್ನನ್ನು ಬೆಂಗಳೂರೆಲ್ಲಾ ಹುಡುಕಲು ಪ್ರಯತ್ನಿಸಿದರು. ಕೊನೆಗೆ ಐವಿಯನ್ನು ಕೇಳಿದಾಗ ಅವಳು ನಾನು ಆಗತಾನೆ ಅವಳ ಮನೆಯಿಂದ ಹೊರಟೆ ಎಂದು ಹೇಳಿದಳಂತೆ.

ನಾನು ನಂತರ ವೆಂಕಿಯನ್ನು 'ಯಾಕೆ ನಿನಗೆ ನಾನು ಸಾಯುತ್ತೇನೆ ಎಂಬ ಯೋಚನೆ ಬಂದಿತು?' 'ನಾನು ಎಂದೂ ಸಾಯುವುದಿಲ್ಲ, ಚಿರಕಾಲ ಬದುಕಿರುವೆ. ನಾನು ಅಂತಹ ಪೆದ್ದಳಲ್ಲ' ಎಂದು ಹೇಳಿದೆ. ನಾನು ಅಮೇರಿಕದಿಂದ ಹಿಂದಿರುಗುವಾಗ ಅವನು ನ್ಯೂಯಾರ್ಕಿನಲ್ಲಿ ಏರ್ಪೋರ್ಟಿಗೆ ಬಂದಿದ್ದ. ನಮ್ಮ ವೀಲ್ ಚೇರನ್ನು ಪ್ಲೇನಿನ ಒಳಗಿನತನಕ ನೂಕಿಕೊಂಡು ಬಂದಿದ್ದ. ಆಗಿನ ಕಾಲದಲ್ಲಿ ಸೆಕ್ಯೂರಿಟಿ ಎಲ್ಲಾ ಇರಲಿಲ್ಲ, ಇನ್ನೂ ನಾಗರೀಕತೆ ಅನ್ನೋದು ಇತ್ತು. ನನ್ನ ಎರಡು ತಿಂಗಳ ಪ್ರವಾಸದ ನಂತರ ನನ್ನ ಆಗಮನವನ್ನು ಸ್ವಾಗತಿಸಲು ಇಡೀ ಎ.ಪಿ.ಡೀ.ಯೇ ಬಂದಿತ್ತು. ನೂರಾರು ಜನರು ಬಂದಿದ್ದರು. ಆಗ ನನಗೆ ಅರಿವಾಯಿತು, ನನಗೆ ಅಷ್ಟು ಜನರು ಬಂದಿದ್ದರೂ ಒಬ್ಬ ವ್ಯಕ್ತಿಯು ಇಲ್ಲದ್ದಿರುವುದು ಮನಸ್ಸಿಗೆ ಎಷ್ಟು ನೋವನ್ನು ಉಂಟು ಮಾಡಿದೆ ಎಂಬುದು. ಎ.ಪಿ.ಡಿಯಲ್ಲಿ ಎಂದಿನಂತೆ ನನ್ನ ಕಾರ್ಯಗಳು ಪ್ರಾರಂಭವಾದ ಮೇಲೆ ನನ್ನ ಮನಸ್ಸು ಎಷ್ಟೋ ಸಮಾಧಾನಗೊಂಡಿತು.

ಮೊದಲಿಗೆ ನನ್ನ ಅಮ್ಮ ನನ್ನೊಡನೆ ಏನೂ ಹೇಳಲಿಲ್ಲ. ಎರಡು ತಿಂಗಳು ಅವಳು ನನ್ನನ್ನು ಸುಮ್ಮನೆ ನೋಡುತ್ತಿದ್ದಳು. ನಾನು ನನ್ನ ಮನೋಭಾವನೆಗಳನ್ನು ಮುಚ್ಚಿಟ್ಟುಕೊಂಡಿದ್ದೆ, ಯಾಕೆಂದರೆ ಅವಳಿಗೆ ನಮ್ಮ ನಡುವೆ ನಡೆದ ವಿಷಯಗಳು ಗೊತ್ತಿರಲಿಲ್ಲ. ಒಂದು ದಿನ ಅವಳು ನನ್ನನ್ನು 'ವೆಂಕಿ ಯಾವಾಗ ಬರುತ್ತಾನೆ?' ಎಂದು ಕೇಳಿದಳು. ನಾನು ಅವಳಿಗೆ

'ವೆಂಕಿ ಇನ್ನು ಮುಂದೆ ನಮ್ಮೊಡನೆ ಇರುವುದಿಲ್ಲ' ಎಂದೆ. ಅವಳು ಯಾಕೆ ಎಂದು ಕೇಳಿದಳು. ಅದಕ್ಕೆ ನಾನು 'ಅದು ಅವನ ನಿರ್ಣಯ' ಎಂದೆ. ಅವಳು 'ಓಹ್' ಎಂದಷ್ಟೇ ಹೇಳಿದಳು. ಅದಾದ ನಂತರ ಅವಳು ವೆಂಕಿಯ ಬಗ್ಗೆ ನನ್ನನ್ನು ಏನೂ ಕೇಳಲಿಲ್ಲ. ಅವನಿಗೆ ಫೋನೂ ಮಾಡಲಿಲ್ಲ ನನ್ನನ್ನು ಏನೂ ಕೇಳಲೂ ಇಲ್ಲ. ನನ್ನ ಅಮ್ಮ ಆಶ್ಚರ್ಯವಾಗುವಂತಹ ಹೆಂಗಸು.

ನನ್ನ ಮಟ್ಟಿಗೆ, ನಾನು ಪ್ರೀತಿಸಿ, ಮದುವೆ ಮಾಡಿಕೊಂಡ ಮತ್ತು ನನ್ನ ಜೀವನವನ್ನು ಅವನಿಗಾಗಿ ಮುಡಿಪಿಟ್ಟ ಮನುಷ್ಯನು ನನ್ನ ಮನದಲ್ಲಿ ಸಜೀವವಾಗಿ ನೆಲೆಸಿದ್ದಾನೆ; ಆದರೆ ನನ್ನಿಂದ ಅಗಲಿದ ಮನುಷ್ಯನೇ ಬೇರೆ. ಅವನು ನಾನು ಮದುವೆಯಾದವನಲ್ಲ. ನನ್ನಿಂದ ಅಗಲಿದ ಮನುಷ್ಯನು ಒಂದು ವಿಧದಲ್ಲಿ ಮೃತನೆಂದೇ ಹೇಳಬಹುದು. ಆದರೆ ಇದನ್ನು ಅರಿಯಲು ನನಗೆ ಬಹಳ ಸಮಯ ಹಿಡಿಯಿತು. ಒಂದು ಸಂಬಂಧವನ್ನು ಬೆಳೆಸಲು ಎಷ್ಟು ಸಮಯ ಮತ್ತು ಸಾಧನೆಬೇಕು. ಹಠಾತ್ತಾಗಿ ಒಂದು ದಿನ ಎಲ್ಲವೂ ಮುಗಿದು ಹೋಗುತ್ತದೆ. ಇಷ್ಟಾದರೂ ನಾನು ಮದುವೆಯೇ ಬೇಡ ಎಂದು ಹೇಳುವುದಿಲ್ಲ. ಎಲ್ಲರಿಗೂ ಈ ಅನುಭವ ಬೇಕು. ನಾನು ಇದನ್ನು ಹೇಳಿದರೆ ಎಲ್ಲರೂ 'ಇವಳು ಹಳ್ಳದಲ್ಲಿ ಬಿದ್ದು ಇತರರನ್ನೂ ಹಳ್ಳದಲ್ಲಿ ಬೀಳಲು ಹೇಳುತ್ತಿದ್ದಾಳೆ' ಎನ್ನುತ್ತಾರೆ. ಮದುವೆಯು ಖಂಡಿತ ಹಳ್ಳವಲ್ಲ. ಮದುವೆಯಲ್ಲಿ ಎಷ್ಟೊಂದು ಒಳ್ಳೆಯ ವಿಷಯಗಳಿವೆ, ಅದರಲ್ಲೂ ಇಬ್ಬರಲ್ಲೂ ಹೊಂದಾಣಿಕೆ ಇದ್ದು ಅವರ ಆಶಯಗಳು ಈಡೇರಿದರೆ. ನಾನು ಎಷ್ಟೋ ಮಂದಿ ಹೆಂಗಸರು ಮದುವೆಯಾದ ನಂತರ ವಿಕಲಾಂಗರಾಗಿರುವರನ್ನು ಸಂಧಿಸಿದ್ದೀನಿ. ಅವರ ಕಷ್ಟಗಳು ಮತ್ತು ಸಂಬಂಧ ಒಡೆದು ಹೋಗುವುದನ್ನು ಕೇಳಿದ್ದೀನಿ. ಅನೇಕ ಗಂಡಂದಿರು ಈ ರೀತಿಯ ಸನ್ನಿವೇಶಗಳಲ್ಲಿ ಎಲ್ಲವನ್ನು ಬಿಟ್ಟು ಸುಮ್ಮನೆ ಹೊರಟುಹೋಗುತ್ತಾರೆ. ಆದರೆ, ಕೆಲವರುತಮ್ಮ ಹೆಂಡತಿಯನ್ನು ಬಹಳ ಕಾಳಜಿಯಿಂದ ನೋಡಿಕೊಂಡು ಜೊತೆಯಲ್ಲೇ ಇರುತ್ತಾರೆ. ಆದರೆ ಇದು ಅಷ್ಟು ಸುಲಭವಲ್ಲ. ನಮ್ಮ ಸಮಾಜದಲ್ಲಿ ಗಂಡನು ವಿಕಲಾಂಗನಾದರೆ ಹೆಂಡತಿಯು 'ಪತಿವ್ರತೆ'ಯಾಗಿ, ಅವನೊಡನೆಯೇ ಕೊನೆಯವರೆಗೂ ಇದ್ದು ಅವನ ಸೇವೆ ಮಾಡಬೇಕೆಂದು ಅಪೇಕ್ಷಿಸುತ್ತದೆ. ಆದರೆ ಇದೇ ರೀತಿ ಹೆಂಡತಿಯು ವಿಕಲಾಂಗಳಾದರೆ, ಗಂಡನು ಅವಳನ್ನು ನೋಡಿಕೊಂಡು ಅವಳ ಸೇವೆ ಮಾಡಬೇಕೆಂದು ಅಪೇಕ್ಷಿಸುವುದಿಲ್ಲ.

ನನ್ನ ಜೀವನದಲ್ಲಿ ನಡೆದ ಈ ದುಃಖಕರ ಘಟನೆಗಳನ್ನು ಜ್ಞಾಪಿಸಿಕೊಂಡರೆ, ಮನಸ್ಸಿಗೆ ಬಹಳ ನೋವಾಗಿ ನಾನು ಅಳ ತೊಡಗುತ್ತೇನೆ. ಜನರು ನನಗೆ 'ನೀನು ಧೈರ್ಯವಾದ ಹೆಂಗಸು, ಈರೀತಿ ಅಳಬಾರದು' ಎಂದೆಲ್ಲಾ ಹೇಳುತ್ತಾರೆ. ನಾನು ಅವರಿಗೆ ನೀವು

ಹೇಳುವುದು ತಪ್ಪು. ಹಳೆಯ ನೆನಪುಗಳು ಜೀವನದಲ್ಲಿ ಬಹಳ ಮುಖ್ಯ. ಭಾವನೆಗಳೂ ಮುಖ್ಯ. ಕೆಲವರು ಮತ್ತೊಂದು ಸಲ ಮದುವೆಯಾಗುವುದಿಲ್ಲಾ ಅಥವಾ ಸಂಬಂಧವನ್ನೇ ಬೆಳೆಸುವುದಿಲ್ಲಾ ಎನ್ನುತ್ತಾರೆ. ಶುದ್ಧ ಮೂರ್ಖರು. ನಮ್ಮ ಜೀವನದಲ್ಲಿ ಯಾವಾಗಲೋ, ಯಾರೋ ಒಬ್ಬರು ಬರಬಹುದು ಮತ್ತು ಅವರೊಡನೆ ನಾವು ಸಹಬಾಳ್ವೆಯನ್ನು ನಡೆಸಲು ನಿಶ್ಚಯಿಸಬಹುದು. ನನಗೆ ಆರೀತಿ ಆದರೆ ನಾನೂ ಬಹುಶಃ ಒಪ್ಪಿಕೊಳ್ಳ ಬಹುದು. ತೆರೆದ ಮನಸ್ಸಿನಿಂದ ಜೀವನವನ್ನು ನಡೆಸಬೇಕು. ಹಳೆಯದನ್ನೇ ನೆನೆಸಿಕೊಂಡು ಮೆಲುಕು ಹಾಕ ಬಾರದು.

* * *

# ಏ.ಪಿ.ಡಿ ಯೊಡನೆ ಬೆಳೆಯುತ್ತಾ. . .

ಭಾರತದಲ್ಲಿ ಒಂದು ಹಳೆಯ ಕಥೆ ಇದೆ. ಒಬ್ಬ ಸನ್ಯಾಸಿ ಜಗತ್ತನ್ನು ತ್ಯಜಿಸಿ ಕಾಡಿಗೆ ಹೋಗಿ ತಪಸ್ಸು ಮಾಡುತ್ತಿದ್ದರಂತೆ. ಅಲ್ಲಿ ಇಲಿಗಳು ಅವರ ಏಕೈಕ ಆಸ್ತಿಯಾದ ಲಂಗೋಟಿಯನ್ನು ಕಚ್ಚಿ ಅದರಲ್ಲಿ ರಂಧ್ರಗಳನ್ನು ಮಾಡಿದವಂತೆ. ಆಗ ಅವರು ಆ ಇಲಿಯನ್ನು ದೂರವಿಡಲು ಒಂದು ಬೆಕ್ಕನ್ನು ತಂದರಂತೆ. ಬೆಕ್ಕಿಗೆ ಹಾಲು ನೀಡಲು ಒಂದು ಹಸುವು ಬೇಕಾಯಿತು, ಅದು ಬಂತು. ಹಸುವನ್ನು ನೋಡಿಕೊಳ್ಳಲು ಒಬ್ಬಳು ಹೆಂಗಸು ಬೇಕಾಯಿತು, ಅವಳು ಬಂದಳು. ಅವಳಿಗೊಬ್ಬ ದಿಕ್ಕು ಬೇಕು ಎಂದು ಕೊನೆಗೆ ಸನ್ಯಾಸಿಯೇ ಅವಳನ್ನು ಮದುವೆಯಾದರಂತೆ. ಇದಕ್ಕೆ 'ಸನ್ಯಾಸಿಯ ಸಂಸಾರ' ಎಂದು ಹೇಳುವುದು. ಒಂದರಿಂದ ಮತ್ತೊಂದು ಅವಶ್ಯಕತೆಗಳು ಬರುತ್ತಾ ಹೋಗುತ್ತವೆ. ನಾನು ಈ ಕಥೆಯನ್ನು ಆಗಾಗ ಏ.ಪಿ.ಡಿ ಯ ಬೆಳವಣಿಗೆಯ ಸಂಬಂಧದಲ್ಲಿ ಹೇಳುತ್ತೇನೆ. ನಾವು ಯಾವುದೋ ಒಂದು ಸಮಸ್ಯೆಯನ್ನು ಸುಧಾರಿಸಲೊ ಅಥವಾ ಪ್ರಾಜಕ್ಟಿಗಾಗಿಯೋಒಂದು ಕೆಲಸವನ್ನು ಪ್ರಾರಂಭಿಸುತ್ತೇವೆ. ಅದು ಸುಲಭ ಮತ್ತು ಸಾಧಾರಣವಾದದ್ದು ಎಂದು ನಮಗೆ ಅನ್ನಿಸುತ್ತದೆ. ಆದರೆ ಅದು ಬಹು ಬೇಗ ಅದರ ಮುಖ್ಯ ಧ್ಯೇಯದಿಂದ ಸರಿದು, ಅದಕ್ಕೆ ಏನೇನೋ ಸೇರಿಕ್ಕೊಂಡು, ಬೃಹದಾಕಾರ ಹೊಂದುತ್ತದೆ.ನಮ್ಮ ತಂದೆಯ ಪುಟ್ಟ ಗ್ಯಾರೇಜಿನಿಂದ ಪ್ರಾರಂಭ ಗೊಂಡ ಏ.ಪಿ.ಡಿ. ದಾಪುಗಾಲು ಹಾಕಿಕೊಂಡು  ಟ್ರೈನಿಂಗ್, ಶಿಕ್ಷಣ ಇತ್ಯಾದಿ ಕ್ಷೇತ್ರಗಳಲ್ಲಿ ಬೆಳೆಯ ತೊಡಗಿತು. ಅದರ ಕಾರ್ಯಾಗಾರ ಮತ್ತು 'ಶ್ರದ್ಧಾಂಜಲಿ ಇಂಟಿಗ್ರೇಟೆಡ್ ಸ್ಕೂಲ್' ವಿಕಲಾಂಗ ಮಕ್ಕಳು ಮತ್ತು ಯುವಕರಿಗೆ ತರಬೇತಿ ನೀಡುವುದರಲ್ಲಿ ಯಶಸ್ವಿಯಾಗಿತ್ತು. ಈ ಶಾಲೆಯು ದಿವಾನರ ಯೋಚನೆ. ನನ್ನ ಅನುಭವದಿಂದ ನಾವು ಸ್ಪಂದಿಸುತ್ತಿದ್ದ ಕೆಳ ವರ್ಗದ ಕುಟುಂಬಗಳಲ್ಲಿ ಮಕ್ಕಳ ಸ್ವಾಸ್ಥ್ಯ ಮತ್ತು ಓದಿಗೆ ಹೆಚ್ಚಿನ ಪ್ರಾಮುಖ್ಯತೆ ಇರಲಿಲ್ಲ. ಅವುಗಳಲ್ಲಿ ತಂದೆ ತಾಯಿಯರು ಬಹಳ ಬಡವರಾದ್ದರಿಂದ ಸ್ವಾಸ್ಥ್ಯದ ಬಗ್ಗೆ ಅವರಲ್ಲಿ ಯಾವ ಸೌಲಭ್ಯವೂ ಇರಲಿಲ್ಲ. ಅವರು ದಿನಗೂಲಿಯ ಕೆಲಸಗಾರರಾಗಿದ್ದರು. ಅದೂ ಅಲ್ಲದೆ ಆ ಸಮಯದಲ್ಲಿ ವಿಕಲಾಂಗರನ್ನು ಸೇರಿಸಿಕೊಳ್ಳುವಂತ ಶಾಲೆಗಳು ಕೆಲವೇ ಇದ್ದವು. ಆದ್ದರಿಂದ, ಈ ವರ್ಗದವರಿಗೆ ಶಾಲಾ ಸೌಕರ್ಯವನ್ನು ಒದಗಿಸಬೇಕು ಎಂಬ ನಮ್ಮ ಧ್ಯೇಯವು ಸರಿಯಾಗಿಯೇ ಇದ್ದಿತು. ಆದರೆ, ಇತರ ವಿಕಲಾಂಗರಲ್ಲದ ಮಕ್ಕಳೂ, ವಿಕಲಾಂಗ ಮಕ್ಕಳೂ ಒಂದೇ ಶಾಲೆಯಲ್ಲಿ ಓದಬೇಕು ಎಂದು ನನಗೆ ಅನ್ನಿಸುತ್ತಿತ್ತು. ಆದರೆ ನಾವು

ವಿಕಲಾಂಗ ಮಕ್ಕಳಿಗೆ ನಮ್ಮ ಗಮನವನ್ನು ನೀಡಲು ಶಾಲೆಯ ಸಂಖ್ಯೆಯನ್ನು ಮಿತಿಯಲ್ಲಿರಿಸಬೇಕಿತ್ತು.

ನನಗೆ ನಮ್ಮ ಶಾಲೆಯಲ್ಲಿ ೭ ನೆಯ ತರಗತಿಗಿಂತ ಮೇಲಿನ ತರಗತಿಗಳನ್ನು ನಡೆಸುವುದು ಬೇಕಿರಲಿಲ್ಲ. ಯಾಕೆಂದರೆ, ನಮ್ಮ ಶಾಲೆಯ ಮಕ್ಕಳು ಆದಷ್ಟು ಬೇಗ ಮಿಕ್ಕಿದ ಮಕ್ಕಳ ಜೊತೆ ಬೆರೆತು ಬೆಳೆಯುವಂತಾಗಬೇಕು ಎಂಬುದೇ ನನ್ನ ಆಸೆಯಾಗಿತ್ತು. ಅವರನ್ನು ನಾವು ದೈಹಿಕವಾಗಿ ಸ್ವಾವಲಂಬಿಗಳನ್ನಾಗಿ ಮಾಡಿ, ಅವರಿಗೆ ಮೂಲಭೂತವಾದ ವಿದ್ಯಾಭ್ಯಾಸವನ್ನು ಕಲಿಸಿದರೆ, ಮುಂದಕ್ಕೆ ಅವರುಗಳು ಮಿಕ್ಕ ಮಕ್ಕಳಜೊತೆ ಶಾಲೆಗೆ ಹೋಗಲು ತಯಾರಾಗುತ್ತಾರೆ. ಇದು ನಮ್ಮ ಮುಖ್ಯ ಜವಾಬ್ದಾರಿಯಾಗಿತ್ತು. ನಾವು ಇತರ ಶಾಲೆಗಳೊಡನೆ ಸೇರಿ ಅವರು ಈ ರೀತಿಯ ವಿಕಲಾಂಗ ಮಕ್ಕಳಿಗೆ ಬೇಕಾದ ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವಂತೆ ಮಾಡಬೇಕಿತ್ತು. ಸಮಯವು ಕಳೆದಂತೆ ಎಲ್ಲವೂ ಸುಧಾರಿಸುವ ಭರವಸೆಯು ನಮಗಿತ್ತು. ಆದ್ದರಿಂದ ನಾವು ನಮ್ಮ ಶಾಲೆಯಲ್ಲಿ ೭ ನೆಯ ತರಗತಿಯ ವರೆಗೇ ನಡೆಸುವುದು ಸರಿ ಎಂದು ನನಗೆ ಅನ್ನಿಸುತ್ತಿತ್ತು.

ಆ ದಿನಗಳಲ್ಲಿ ಭಾರತದಲ್ಲಿ ಪೋಲಿಯೋ ಬಹಳ ಪ್ರಚಲಿತವಾಗಿತ್ತು. ಅನೇಕ ಮಕ್ಕಳು ಚಲನೆಗೆ ಸಂಬಂದಿತ ವಿಕಲಾಂಗತೆಯಿಂದ ಬಾಧಿಸಲ್ಪಟ್ಟಿದ್ದರು. ೫೦ರ ದಶಕದಲ್ಲಿ ಪೋಲಿಯೋ ವಾಕ್ಸೀನ್ ಬಂದಮೇಲೂ, ಸರ್ಕಾರಕ್ಕೆ ದೊಡ್ಡ ಪ್ರಮಾಣದಲ್ಲಿ ಪೋಲಿಯೋ ಲಸಿಕೆಯನ್ನು ಪ್ರಚುರ ಗೊಳಿಸಲು ಸಮಯ ಹಿಡಿಯಿತು. ಆದರೆ, ನಾವು ನೋಡಿರುವಂತೆ, ಈ ಕಾರ್ಯಕ್ರಮವು ಬಹಳ ಯಶಸ್ವಿಯಾಗಿ, ಭಾರತವು ಪೋಲಿಯೋ ಮುಕ್ತ ರಾಷ್ಟ್ರವೆಂದು ಘೋಷಿಸಲಾಯಿತು. ಈ ರೀತಿಯ ಯಶಸ್ಸಿಗೆ ರಾಷ್ಟ್ರಮಟ್ಟದಲ್ಲಿ ನೆರವು ಮತ್ತು ಪ್ರೋತ್ಸಾಹ ಬೇಕಾಗುತ್ತದೆ. ನಮ್ಮ ದೇಶದಲ್ಲಿ ಮಾತ್ರವಲ್ಲ, ನಮ್ಮ ನೆರೆ ರಾಷ್ಟ್ರಗಳೂ ಈ ವಿಷಯಕ್ಕೆ ಪ್ರಾಮುಖ್ಯತೆ ಕೊಟ್ಟು, ಪೋಲಿಯೋ ಅಲ್ಲಿಂದ ನಮ್ಮ ದೇಶಕ್ಕೆ ಮತ್ತೊಮ್ಮೆ ಬರದಂತೆ ಕಾಪಾಡಲು ಸಹಕರಿಸಬೇಕಾಗುತ್ತದೆ. ಆದರೆ, ೭೦ ಮತ್ತು ೮೦ರ ದಶಕಗಳಲ್ಲಿ ಪರಿಸ್ಥಿತಿಯು ಅಷ್ಟು ಆಶಾದಾಯಕವಾಗಿರಲಿಲ್ಲ. ನಾವು ಶಾಲೆಯನ್ನು ಪ್ರಾರಂಭಿಸಿದಾಗ, ವಿಕಲಾಂಗ ಮಕ್ಕಳಿಗೆ ವೈದ್ಯಕೀಯ ನೆರವನ್ನು ಒದಗಿಸುವುದೇ ನಮಗೆ ಮುಖ್ಯ ಧ್ಯೇಯವಾಗಿತ್ತು. ಅವರಿಗೆ ಶಸ್ತ್ರ ಚಿಕಿತ್ಸೆ ಬೇಕಾಗಿದೆ ಎಂದಾಗ ನಾವು ಸಂತ ಮಾರ್ತಾ ಆಸ್ಪತ್ರೆಯ ನೆರವು ಕೋರುತ್ತಿದ್ದೆವು. ಆದರೆ ನಮ್ಮ ಸಂಸ್ಥೆಯಲ್ಲೇ ಒಬ್ಬ ವೈದ್ಯರಿಲ್ಲದಿರುವುದು ನಮಗೆ ಅನೇಕಸಲ ಆತಂಕವನ್ನು ಉಂಟುಮಾಡುತ್ತಿತ್ತು. ಶಸ್ತ್ರ ಚಿಕಿತ್ಸೆಯ ನಂತರ ಆ ಮಕ್ಕಳಿಗೆ ಬೇಕಾದ ನೆರವಿಗೆ ಒಂದು ದಾರಿಯನ್ನು ಹುಡುಕಬೇಕಾಗಿತ್ತು. ಯಾಕೆಂದರೆ, ಸಂತ ಮಾರ್ತಾ

ಆಸ್ಪತ್ರೆಯಲ್ಲಿ ಬಹಳ ರೋಗಿಗಳು ಬರುತ್ತಿದ್ದರಿಂದ ಅಲ್ಲಿ ನಮ್ಮ ಮಕ್ಕಳಿಗೆ ಬೇಕಾದ ಸಾಧನಗಳನ್ನು ಪೂರೈಸಲು ಬಹಳ ಸಮಯ ಹಿಡಿಯುತ್ತಿತ್ತು. ನಮ್ಮದೇ ಆದ ಈ ಸಾಧನಗಳನ್ನು ಒದಗಿಸುವ ಸಂಸ್ಥೆ ಇಲ್ಲದಿದ್ದರೆ ಈ ಮಕ್ಕಳ ಸ್ಥಿತಿಯು ಹದಗೆಡುವ ಸಂಭವವಿತ್ತು. ಆ ರೀತಿ ಆದರೆ, ಅವರ ಸುಧಾರಣೆಯನ್ನು ಮೊದಲಿಂದ ಪ್ರಾರಂಭಿಸಬೇಕಾಗುತ್ತಿತ್ತು.

ನಮಗೆ ಏನು ಮಾಡುವುದು ಎಂದು ತಿಳಿಯಲಿಲ್ಲ. ನಾವು ಊರಲ್ಲೆಲ್ಲಾ ವಿಕಲಾಂಗರಿಗೆ ಬೇಕಾದ ಸಲಕರಣೆಗಳನ್ನು ಮಾಡುವರಿಗಾಗಿ ಹುಡುಕಿದೆವು. ಆದರೆ ಯಾರೂ ಸಿಗಲಿಲ್ಲ. ಕೊನೆಗೆ ಇವನ್ನು ನಾವೇ ಎ.ಪಿ.ಡಿ ಯಲ್ಲಿತಯಾರಿಸಲು ಆಗುತ್ತದೆಯೇ ಎಂಬುದನ್ನೂ ಯೋಚಿಸಿದೆವು. ನಾನು ವೆಲ್ಲೂರಿನಬಳಿ ಇರುವ ಕರಿಗಿರಿ ಎಂಬ ಊರಿನಲ್ಲಿ ಇರುವ ಒಂದು ಕಾರ್ಯಾಗಾರವನ್ನು ನೋಡಲು ಹೋದೆ. ಅಲ್ಲಿ ನನಗೆ ಡಾ. ಅರ್ನ್ಸ್ಟ್ ಫ್ರಿಟ್ಸ್ ಅವರ ಪರಿಚಯ ವಾಯಿತು. ಅವರು ಸ್ವಿಸ್ ತಂದೆ ತಾಯಿಯರಿಗೆ ಹುಟ್ಟಿ ಭಾರತದಲ್ಲಿ ಓದಿದವರು. ಬಹಳ ಖ್ಯಾತ ಸರ್ಜನ್ ಆಗಿದ್ದರು ಮತ್ತು ಕುಷ್ಠರೋಗದ ಕ್ಷೇತ್ರದಲ್ಲಿ ಬಹಳ ಕೆಲಸ ಮಾಡುತ್ತಿದ್ದರು. ಅವರನ್ನು ನಾನು ನಮಗೆ ಒಬ್ಬ ತಂತ್ರಜ್ಞನನ್ನು ಪರಿಚಯಿಸಲು ಕೇಳಿಕೊಂಡಾಗ ಅವರು ನನಗೆ ಸಾಮ್ಯುಯಲ್ ಎಂಬ ಯುವಕನನ್ನು ಪರಿಚಯಿಸಿದರು. ನಾನು ಸಾಮ್ಯುಯಲ್ ಅನ್ನು, ಎ.ಪಿ.ಡಿ ಗೆ ಕರೆದುಕೊಂಡು ಬಂದು, ಅವನಿಗೆ ತರಬೇತಿ ಕೊಟ್ಟು, ಅವನಿಂದ ವಿಕಲಾಂಗರ ಸಲಕರಣೆಗಳನ್ನು ತಯಾರಿಸಲು ಯೋಚಿಸಿದ್ದೆ. ಅವನು ಈ ಸಲಕರಣೆಗಳನ್ನು ತಯಾರಿಸಲು ಕಲಿತುಕೊಳ್ಳುವನೆಂದು ನಂಬಿದ್ದೆ. ಅವನನ್ನು ಎ.ಪಿ.ಡಿ. ಗೆ ಕರೆತರುವುದು ಸುಮಾರು ಒಂದು ವರ್ಷ ಹಿಡಿಯಿತು. ಅವನು ಪ್ರತಿ ವಾರ ನನ್ನನ್ನು ಎ.ಪಿ.ಡಿ ಗೆ ಯಾವಾಗ ಬರಲಿ ಎಂದು ಕೇಳುತ್ತಿದ್ದ. ನಾನು ಅವನ ಸಂಬಳ ಇತ್ಯಾದಿಗೆ ಹಣವನ್ನು ಹೊಂದಿಸಬೇಕಾಗಿತ್ತು. ನಾವು ಅವನಿಗೆ ಕೊಡುವುದಾಗಿ ಹೇಳಿದ ಸಂಬಳ ಬಹಳ ಕಡಿಮೆಯಾಗಿತ್ತು. ಆದರೂ ನಾವು ಖಾಯಂ ಆದ ಕೆಲಸ ಕೊಡುವುದಾಗಿದ್ದರಿಂದ ಅವನು ಕಡಿಮೆ ಸಂಬಳಕ್ಕೇ ಬರಲು ಒಪ್ಪಿಕೊಂಡ. ನಲವತ್ತು ವರ್ಷಗಳ ಹಿಂದೆ ಅನೇಕರು ಕಡಿಮೆ ಸಂಬಳಕ್ಕೇ ಒಪ್ಪಿ ಕೆಲಸಕ್ಕೆ ಬರುತ್ತಿದ್ದರು. ಇದು ಅಂದಿನ ಹಣದ ಒತ್ತಡದಿಂದಲೋ ಅಥವಾ ಕೆಲಸದ ಬಗ್ಗೆ ಇದ್ದ ಶ್ರದ್ಧೆಯಿಂದಲೋ, ತಿಳಿಯದು.

ಸಾಮ್ಯುಯಲ್ ತಯಾರಿಸಿದ ಮೊದಲನೆಯ 'ಕ್ಯಾಲಿಪರ್' ನೋಡಿ ನಾನು ಅವಾಕ್ಕಾದೆ. ಅವನಿಗೆ ಅದನ್ನು ಹೇಗೆ ಮಾಡಬೇಕು ಎಂಬ ಪರಿಕಲ್ಪನೆಯೇ ಇರಲಿಲ್ಲ. ನಾನು ಅವನಿಗೆ ಮಾರ್ಗದರ್ಶಿಯಾದೆ. ಅವನಿಗೆ ಪ್ರತಿಯೊಂದು ಭಾಗವನ್ನೂ ಹೇಗೆ ಮಾಡಬೇಕು ಎಂದು ಹೇಳಿ, ಅವನು ಮಾಡಿದ ನಮೂನೆಗಳನ್ನು ಪರಿಶೀಲಿಸಿ, ಅವನ್ನು ಅವನ ಕೈಯಲ್ಲಿ

ಸರಿಮಾಡಿಸುತ್ತಿದ್ದೆ, ಇವಲ್ಲದೆ 'ಕ್ಯಾಲಿಪರ್'ನಲ್ಲಿ ಚರ್ಮವನ್ನು ಉಪಯೋಗಿಸಿ ಮಾಡಿದ ಭಾಗವಿತ್ತು. ಆ ದಿನಗಳಲ್ಲಿ ಮಕ್ಕಳಿಗೆ ದೃಢವಾದ shoe ಗಳಿಗೆ ಸೇರಿದ ಕ್ಯಾಲಿಪರ್ ಹಾಕುತ್ತಿದ್ದರು. ಸಾಮ್ಯುಯಲ್ ತನಗೆ ಚರ್ಮದ ಕೆಲಸ ಮತ್ತು shoe ಮಾಡುವುದು ಗೊತ್ತಿಲ್ಲ ಎಂದ. ಆದ್ದರಿಂದ ನಾವು ಅಲ್ಲಿದ್ದ ಚಮ್ಮಾರರನ್ನು ಕರೆದು ಅವರಿಂದ ಈ ಕೆಲಸ ಮಾಡಿಸಿದೆವು. ಕೆಲವು ದಿನಗಳ ನಂತರ ಸಾಮ್ಯುಯಲ್‌ಗೆ ಸಹಾಯ ಮಾಡಲು ಒಬ್ಬ ಹುಡುಗನನ್ನು ಕೆಲಸಕ್ಕೆ ಸೇರಿಸಿಕೊಂಡೆವು. ಈ ವಿಕಲಾಂಗರ ಸಲಕರಣೆಗಳನ್ನು ತಯಾರಿಸುವ ಈ ಕ್ಷೇತ್ರದಲ್ಲಿ ಆದಷ್ಟು ವಿಕಲಾಂಗರಿಗೆ ಕೆಲಸ ಮಾಡುವ ಅವಕಾಶವನ್ನು ಕಲ್ಪಿಸುವುದೇ ನಮ್ಮ ಧ್ಯೇಯವಾಗಿದ್ದಿತು. ಆ ಹುಡುಗನೂ ಸಾಮ್ಯುಯಲ್ ಜೊತೆಗೆ ಹೊಂದಿಕ್ಕೊಂಡು ಚೆನ್ನಾಗಿ ಕೆಲಸ ಮಾಡ ತೊಡಗಿದ. ಆವನು ಸಾಮ್ಯುಯಲ್ ಏನು ಹೇಳಿದರೂ ಮಾಡುತ್ತಿದ್ದ, ಆದರೆ ನನಗೆ ಅವನ ಕಾರೀಗರಿ ಅಷ್ಟು ಸಮಾಧಾನಕರವಾಗಿರಲಿಲ್ಲ. ನಾನು ಅವರಿಬ್ಬರನ್ನೂ ಮುಂಬೈಯಲ್ಲಿ ಡಾ. ಸಂತ್ ಅವರ ಪುನರ್ವಸತಿ ಕೇಂದ್ರಕ್ಕೆ ತರಬೇತಿಗೆಂದು ೬ ತಿಂಗಳಿಗೆ ಕಳುಹಿಸಿದೆ. ಆದರೆ ಆ ಹುಡುಗನ ತಂದೆ ತಾಯಿ, ಅವನಿಗೆ ಕೆಲಸ ಸಿಕ್ಕಿದ್ದಕ್ಕೆ ಬಹಳ ಸಂತೋಷ ಪಟ್ಟವರು, ಅವನು ತೊಗಲಿನಲ್ಲಿ ಕೆಲಸ ಮಾಡುವುದಕ್ಕೆ ಆಕ್ಷೇಪಣೆ ಮಾಡಿದರು. ಅವರು ಜಾತಿಯಲ್ಲಿ ಕುಂಬಾರರು, ಅವರು ಚರ್ಮದೊಂದಿಗೆ ಕೆಲಸ ಮಾಡಬಾರದು, ಆದ್ದರಿಂದ ಅವರ ಮಗ ಚರ್ಮದ ಕೆಲಸ ಮಾಡ ಬಾರದು, ಅದು ಬೇರೆ ಜಾತಿಯವರ ಕೆಲಸ ಎಂದರು. ನಾನು ಅವರಿಗೆ ಕೆಲಸವು ಯಾವುದೇ ಆಗಲಿ ಅದನ್ನು ಶ್ರದ್ಧೆಯಿಂದ ಮಾಡುವುದರಲ್ಲಿ ಗೌರವವಿದೆ ಎಂದು ಹೇಳಿನೋಡಿದೆ. ಆದರೆ ಯಾವ ಪ್ರಯೋಜನವೂ ಆಗಲಿಲ್ಲ. ಕೊನೆಗೆ ನಾನು 'ನಿಮ್ಮ ಮಗ ಚಪ್ಪಲಿ ಹೊಲಿಯುವುದಿಲ್ಲ, ಅವನು ತೊಗಲಿನ ವಸ್ತುಗಳನ್ನು ತಯಾರಿಸುವ ತಂತ್ರಜ್ಞ ನಾಗಲು ತರಬೇತಿ ಪಡೆಯುತ್ತಿದ್ದಾನೆ' ಎಂದು ಹೇಳಿದೆ. ಈ ಉಪಾಯವು ಕೆಲಸ ಮಾಡಿತು. ಅಲ್ಲಿನ ತರಬೇತಿ ಅವರಿಬ್ಬರಿಗೂ ಒಳ್ಳೆಯ ಸಲಕರಣೆಗಳನ್ನು ತಯಾರಿಸುವುದರಲ್ಲಿ ನೈಪುಣ್ಯತೆಯನ್ನು ಕೊಟ್ಟಿತು. ಆ ಹುಡುಗನು ಒಳ್ಳೆಯ ಸಾಧನಗಳನ್ನು ತಯಾರಿಸುತ್ತಿದ್ದ ಮತ್ತು ನಮ್ಮ ಸಂಸ್ಥೆಯಲ್ಲಿ ಆರೇಳು ವರ್ಷಗಳು ಕೆಲಸ ಮಾಡಿದ. ನಾವು ನಮ್ಮಲ್ಲಿದ್ದ ವಿಕಲಾಂಗ ಮಕ್ಕಳಿಗೆ ಸಲಕರಣೆಗಳನ್ನು ಒದಗಿಸಲು ಆಗುತ್ತಿತ್ತು. ಇದು ನಮ್ಮ ಶಾಲೆಯ ಕಾರ್ಯಕ್ರಮಕ್ಕೆ ದೊಡ್ಡ ಸಹಾಯವಾಯಿತು.

ನಾನು ಸಾಮ್ಯೂಯಲ್‌ಗೆ ಅವರ ಕೆಲಸದ unit ಸ್ವಾವಲಂಬಿಯಾಗಬೇಕು. ನಾನು ಅವನಿಗೆ ಅವನು ತಯಾರು ಮಾಡುವ ಸಾಧನಗಳಿಗೆ ಆರ್ಡರ್ ಕೊಡಿಸಬಹುದು, ಆದರೆ ಅವನು ಆ ಸಾಧನಗಳ ಗುಣ ಮಟ್ಟ ಮತ್ತು ಸಮಯದಲ್ಲಿ ಕೊಡುವುದನ್ನು ಕಾಪಾಡಿಕೊಳ್ಳಬೇಕು ಎಂದು ಹೇಳಿದೆ. ನನ್ನ ಗಮನವು 'ಕ್ಯಾಲಿಪರ್' ಬೇಕಾದ ಪ್ರತಿಯೊಂದು ವಿಕಲಾಂಗ

ವಿದ್ಯಾರ್ಥಿಗೂ, ಅದಕ್ಕೆ ಬೇಕಾದ ಹಣವನ್ನು ದೇಣಿಗೆಯ ಮೂಲಕ ಒದಗಿಸುವುದರ ಕಡೆಗಿತ್ತು. ಶಾಲೆಯ ವರ್ಷದ ಪ್ರಾರಂಭದಲ್ಲಿ ನಾವು ಯಾರಿಗೆ ಶಸ್ತ್ರ ಚಿಕಿತ್ಸೆ ಬೇಕಾಗುತ್ತದೆ ಮತ್ತು ಯಾರಿಗೆ 'ಕ್ಯಾಲಿಪರ್'ಗಳು ಬೇಕಾಗುತ್ತದೆ ಎಂದು ಕಂಡುಹಿಡಿದು ಅದಕ್ಕೆ ಬೇಕಾದ ಖರ್ಚಿನ ಅಂದಾಜನ್ನು ಮಾಡುತ್ತಿದ್ದೆವು.ನಂತರ ನಾನು ಆ ಹಣವನ್ನು ಕೊಡುವ ದಾನಿಗಳನ್ನು ಹುಡುಕಿ ಅವರಿಂದ ಹಣವನ್ನು ಸಂಗ್ರಹಿಸುತ್ತಿದ್ದೆ. ನಾವೇನೂ ಬಹಳ ಹಣ ಸಂಗ್ರಹಿಸುತ್ತಿರಲಿಲ್ಲ, ಆದರೆ ನಮ್ಮ ಖರ್ಚಿಗೆ ಬೇಕಾದದ್ದು ಆಗುತ್ತಿತ್ತು.

೧೯೮೩ – ೮೪ ರ ವೇಳೆಗೆ ನಾವು ನಮ್ಮ ಶಾಲೆಯಲ್ಲಿ ಎಷ್ಟು ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳುವ ಸಾಮರ್ಥ್ಯವಿದೆಯೋ ಅದನ್ನು ತಲಪಿದ್ದೀವಿ ಎಂದು ನಮಗೆ ತಿಳಿಯಿತು. ನಮ್ಮಲ್ಲಿ ೨೦೦ ವಿದ್ಯಾರ್ಥಿಗಳಿಗಿಂತ ಹೆಚ್ಚು ಜನರನ್ನು ಸೇರಿಸಿಕೊಳ್ಳುವ ಸಾಮರ್ಥ್ಯ ಇರಲಿಲ್ಲ. ಆದರೆ ನಮಗೆ ಇನ್ನೂ ಹೆಚ್ಚು ಹೆಚ್ಚುಜನರಿಂದ ಶಾಲೆಗೆ ಸೇರಲು ಅರ್ಜಿಗಳು ಬರುತ್ತಿದ್ದವು. ದೂರದಿಂದ ಬರುವ ವಿದ್ಯಾರ್ಥಿಗಳನ್ನು ಕರೆತರಲು ವಾಹನ ಸೌಕರ್ಯವನ್ನು ಒದಗಿಸುವುದು ನಮಗೆ ದೊಡ್ಡ ಸವಾಲಾಗಿತ್ತು. ನಮಗೆ ವಾಹನಗಳ ಅವಶ್ಯಕತೆ ಇತ್ತು. ಟಾಟಾ ಸಂಸ್ಥೆಯವರು ಮೊದಲಿಗೆ ನಮಗೆ ಒಂದು busನ chasisನಮಗೆ ಕೊಟ್ಟರು ಮತ್ತು ಟಿ.ವಿ.ಎಸ್ ಕಂಪನಿಯವರು ಅದರಮೇಲೆ ಒಂದು ಛಣಾನ ಹಂದರವನ್ನು ಕಟ್ಟಿಕೊಟ್ಟರು. ಆದರೆ ಈ bus ಎಷ್ಟು ಎತ್ತರವಿತ್ತೆಂದರೆ, ಮಕ್ಕಳನ್ನು ಅದರಲ್ಲಿ ಹತ್ತಿಸಲು ಇಬ್ಬರು ಮಕ್ಕಳನ್ನು ಹಿಡಿದು ಎತ್ತಬೇಕಾಗುತ್ತಿತ್ತು. ಬಹು ಬೇಗನೆ ನಮಗೆ ಮತ್ತೊಂದು busನ ಅವಶ್ಯಕತೆ ತೋರಿತು. ಭಾರತ್ ಎಲೆಕ್ಟ್ರಾನಿಕ್ಸ್ ಸಂಸ್ಥೆಯವರು ನಮ್ಮ ನೆರವಿಗೆ ಬಂದರು. ಎಲ್ಲಾ ಸುಗಮವಾಗಿಯೂ, ವೇಗವಾಗಿಯೂ ಬೆಳೆಯುತ್ತಿದ್ದವು. ನಾನು ಅತ್ಯಂತ ವಿಕಲಾಂಗರಿಗೆ ಮಾತ್ರ ನಮ್ಮ ಛಣಾನ ಸೇವೆಯು ಸೀಮಿತವಾಗಿರಬೇಕು ಎಂದೆ. ಉಳಿದವರಿಗೆ ನಾವು ವೈದ್ಯಕೀಯ ನೆರವು ನೀಡಿ ಅವರುಗಳು ಗುಣವಾದ ಬಳಿಕ ಎಲ್ಲರಂತೆ ಇತರ ಶಾಲೆಗೆ ಸೇರಬಹುದು ಎಂದೆವು. ಈ ರೀತಿ, ವಿಕಲಾಂಗ ಮಕ್ಕಳು ವೈದ್ಯಕೀಯ ಸಹಾಯ ಪಡೆದು ಎಲ್ಲರಂತೆ ಸಾಮಾನ್ಯ ಶಾಲೆಗಳಲ್ಲಿ ಓದಲು ಬೇಕಾದ ಅಂಕುರಾರ್ಪಣೆಯು ಮಾಡಲಾಗಿತ್ತು. ನನಗೆ ಈ ರೀತಿ ಎಲ್ಲಾ ಮಕ್ಕಳನ್ನೂ ವಿ.ಪಿ.ಡಿ ಗೆ ಸೇರಿಸಿಕೊಳ್ಳುವ ಬದಲು ನಾವು ಆ ವಿಕಲಾಂಗ ಮಕ್ಕಳಿರುವ ಎಡೆಗೆ ಹೋಗಿ ಅವರಿಗೆ ನೆರವು ನೀಡಬೇಕು ಎನ್ನುವುದು ಸರಿತೋರಿತು. ನಾವು ಆ ಮಕ್ಕಳ ಮನೆಗಳಿಗೆ ಹೋಗಿ, ಅವರ ತಂದೆ ತಾಯಿಯರನ್ನು ಆ ಮಕ್ಕಳಿಗೆ ಶಸ್ತ್ರ ಚಿಕಿತ್ಸೆ ಮಾಡಿಸಿ, ಬೇಕಾದ ಸಲಕರಣೆಗಳನ್ನು ಉಪಯೋಗಿಸಲು ಕಲಿಸಿ, ಜನ ಸಾಮಾನ್ಯರ ಶಾಲೆಗೆ ಸೇರಿಸುವಂತೆ ಪ್ರೇರೇಪಿಸಬೇಕಾಗಿತ್ತು. ಆದರೆ, ಈ ಶಾಲೆಗಳಲ್ಲಿ ಬೇರೆಯಾದ ಸಮಸ್ಯೆಗಳಿದ್ದವು. ಅವುಗಳಲ್ಲಿ ವಿಕಲಾಂಗರಿಗೆ ಬೇಕಾದ ಸೌಕರ್ಯಗಳಿರಲಿಲ್ಲ,

ಮತ್ತು ಅವರು ವಿಕಲಾಂಗ ಮಕ್ಕಳನ್ನು ಕಾಯಿಲೆ ಬಂದವರಂತೆ ಕಾಣುತ್ತಿದ್ದರು. ಅವರನ್ನು ತಮ್ಮ ಶಾಲೆಗೆ ಸೇರಿಸಿಕೊಳ್ಳಲು ಅವರು ಉತ್ಸುಕರಾಗಿರಲಿಲ್ಲ.

ಆದರೆ, ನನಗೆ ಇದನ್ನು ಪರೀಕ್ಷೆ ಮಾಡಿನೋಡಬೇಕು ಅನ್ನಿಸುತ್ತಿತ್ತು. ನಾವು ಇದಕ್ಕಾಗಿ ಒಬ್ಬ ಹುಡುಗಿಯನ್ನು ಆಯ್ಕೆ ಮಾಡಿದೆವು. ಅವಳು ನಮ್ಮ ಏ.ಪಿ.ಡಿ ಗೆ ತನ್ನ ತಾಯಿ ಮತ್ತೊಬ್ಬ ಹೆಂಗಸಿನ ಸಹಾಯದೊಂದಿಗೆ ಬಂದಳು. ಅವಳ ಮನೆಯವರು crutches (ಊರುಗೋಲು) ಬಗ್ಗೆ ಕೇಳಿರಲಿಲ್ಲ, ಅದರ ಉಪಯೋಗದ ಬಗ್ಗೆ ಗೊತ್ತಿರಲೂ ಇಲ್ಲ. ಈಗಲೂ, ಹಳ್ಳಿಗಳಲ್ಲಿ ಮತ್ತು ಪುಟ್ಟ ಊರುಗಳಲ್ಲಿ, ಜನರಿಗೆ ವಿಕಲಾಂಗರಿಗೆ ಓಡಾಡಲು ನೆರವಾಗುವ ಸುಲಭವಾದ ಸಾಧನಗಳಿವೆ ಎಂಬುದು ಗೊತ್ತಿಲ್ಲ.ಆ ಹುಡುಗಿಯನ್ನು ನೋಡಿದ ತಕ್ಷಣ ನಾನು ಅವಳಿಗೆ ಒಂದು ಜೊತೆ crutches (ಊರುಗೋಲು) ಕೊಟ್ಟೆ. ಅವಳು ಅದರ ಸಹಾಯದಿಂದ ಕುಂಟುತ್ತಾ ಚಲಿಸಲಾರಂಭಿಸಿದಳು. ಅವಳ ಜೊತೆಯಲ್ಲಿ ಬಂದಿದ್ದ ಮಹಿಳೆಯರಿಗೆ ಆಶ್ಚರ್ಯ. ನನಗೆ ಆ ಹುಡುಗಿಯ ತಾಯಿಗೆ ಅವಳ ಮಗಳು ಸ್ವಲ್ಪ ಸಹಾಯದೊಂದಿಗೆ ಓಡಾಡ ಬಹುದು ಎಂದು ಮನದಟ್ಟು ಮಾಡಲು ಸುಮಾರು ಆರು ತಿಂಗಳುಗಳು ಹಿಡಿದಿರಬೇಕು. ಶಸ್ತ್ರ ಚಿಕಿತ್ಸೆಯಿಂದ ಅವಳ ಕಾಲಿನ ವಿಕಲತೆಯನ್ನು ಸರಿಪಡಿಸ ಬಹುದು; ನಂತರ ಅವಳು crutches (ಊರುಗೋಲು) ಇಲ್ಲದೆಯೇ ನಡೆಯಲು ಸಾಧ್ಯವಾಗುತ್ತದೆ. ಎಂದು. ನಾನು ಅವಳ ಮನೆಗೆ ಆಗಾಗ ಹೋಗಿ ಅವಳ ಮನೆಯವರಿಗೆ ಈ ವಿಷಯವನ್ನು ತಿಳಿಹೇಳುವಂತಹ ಒಬ್ಬ ಸ್ವಯಂಸೇವಕರು ಬೇಕಿತ್ತು. ನಮ್ಮ ಶಾಲೆಯ ಓರ್ವ ಉಪಾಧ್ಯಾಯಿನಿಯು ಈ ಕೆಲಸನ್ನು ಮಾಡುವುದಾಗಿ ಮುಂದೆಬಂದರು. ನಾವು ಈ ವಿಷಯವನ್ನು ಬಿಡದೆ ಮುಂದುವರಿಸಿದೆವು. ಒಂದು ವರ್ಷದಲ್ಲಿ ಆ ಹುಡುಗಿಯು 'ಕ್ಯಾಲಿಪರ್ಸ್' ಸಹಾಯದಿಂದ ನಡೆಯ ತೊಡಗಿದಳು. ಈ ರೀತಿ ನಮ್ಮ ವಿಕಲಾಂಗ ಮಕ್ಕಳ ಮನೆಗೇ ಹೋಗಿ ಅವರಿಗೆ ಬೇಕಾದ ಸಹಾಯವನ್ನು ನೀಡುವ ಪ್ರಯತ್ನವು ಸಫಲವಾಯಿತು.

ನಾವು ಏ.ಪಿ.ಡಿ ಯಿಂದ ದೂರದಲ್ಲಿರುವ ಒಂದು ಸ್ಥಳವನ್ನು ಗುರುತಿಸಿ, ಅದನ್ನು ನೋಡಿಕೊಳ್ಳಲು ಒಬ್ಬ ಸಮಾಜ ಸೇವಕಿಯನ್ನು ಗುರುತಿಸಬೇಕೆಂದು ಯೋಚಿಸಿದೆವು. ಸಾಕಷ್ಟು ಹುಡುಕಾಟದ ನಂತರ ಈ ಕಾರ್ಯಕ್ಕೆ ನಾವು 'ಆಸ್ಟಿನ್ ಟೌನ್' ನಲ್ಲಿರುವ ನೀಲಸಂದ್ರವನ್ನು ಆರಿಸಿಕೊಂಡೆವು. ಇದು ನಮ್ಮ ಏ.ಪಿ.ಡಿ ಯಿಂದ ಸುಮರು ೨೦ ಕಿ.ಮೀ.ದೂರದಲ್ಲಿತ್ತು, ಅಲ್ಲಿನ ಮಕ್ಕಳು ನಮ್ಮ ಏ.ಪಿ.ಡಿ ಗೆ ಪ್ರತಿ ದಿನ ಬರುವುದಕ್ಕಾಗುತ್ತಿರಲಿಲ್ಲ. ಅಲ್ಲಿ ಒಬ್ಬ ಹುಡುಗನಿದ್ದ, ಅವನು ನಮ್ಮ ಶಾಲೆಯನ್ನು ಪ್ರಾರಂಭಿಸಿದಾಗ ಎಸ್.ಐ.ಎಸ್ ಗೆ

ಬರುತ್ತಿದ್ದ, ಅವನನ್ನು ನಾನು ಕರೆದುಕೊಂಡು ಬರುತ್ತಿದ್ದೆ. ಅವನಿಗೆ ಹುಟ್ಟಿನಿಂದಲೇ ಒಂದು ಕೈ ಮತ್ತು ಒಂದು ಕಾಲು ಇರಲಿಲ್ಲ. ಆದರೆ ಅವನು ಬಲು ಜಾಣ ಮತ್ತು ಬಲು ತುಂಟ. ನನಗೆ ಈ ಹುಡುಗ ಬಲು ಇಷ್ಟವಾದ. ನಾನು ಅವನಿಗೆ ಬೇಕಾದ ಸಲಕರಣೆಯನ್ನು ತೆಗೆದುಕೊಡಬೇಕೆಂದಿದ್ದೆ. ಆದರೆ ಅವನ ತಂದೆ ತಾಯಿ ಇದಕ್ಕೆ ಸಹಕರಿಸಲಿಲ್ಲ. ಅವರು ಅವನನ್ನು ತಮ್ಮೊಡನೆ ಕರೆದುಕೊಂಡು ಹೊರಟು ಹೋದರು. ನಂತರ ನನಗೆ ಅವನೊಡನೆಯ ಸಂಪರ್ಕವು ಕಡಿದು ಹೋಯಿತು. ಈಗ ಈ ಬಡಾವಣೆಯಲ್ಲಿ ನಾವು ಕೆಲಸ ಪ್ರಾರಂಭಿಸಿದ್ದರಿಂದ, ನನಗೆ ಮತ್ತೊಮ್ಮೆ ಈ ಹುಡುಗನನ್ನು ಹುಡುಕಿ ಕಂಡು ಹಿಡಿಯಬೇಕು ಅನ್ನಿಸಿತು. ನಮ್ಮ ವರ್ಕ್‌ಷಾಪಿನ ಕೆಲವು ಟ್ರೈನೀ ಗಳಜೊತೆ ನಾನು ಮತ್ತು ನಾಯ್ಡು ಒಂದು ವಾರಾಂತ್ಯದಲ್ಲಿ ಅಲ್ಲಿಗೆ ಹೋದೆವು. ನಾವು ಅಲ್ಲಿ ಮನೆ ಮನೆಗೆ ಹೋಗಿ ಬಾಗಿಲು ತಟ್ಟಿ, ನಮ್ಮ ವಿಸಿಟಿಂಗ್ ಕಾರ್ಡ್ ಕೊಟ್ಟು ನಿಮ್ಮ ಮನೆಯಲ್ಲಿ ಯಾರಾದರೂ ವಿಕಲಾಂಗ ಮಕ್ಕಳಿದ್ದಾರೆಯೇ? ಎಂದು ಕೇಳಿ ಇನ್ನೂ ಹಲವು ಪ್ರಶ್ನೆಗಳನ್ನು ಕೇಳುತ್ತಿದ್ದರು. ಜನರಿಗೆ ಹೆದರಿಕೆ. ಅವರಿಗೆ ಯಾವ ಮಾಹಿತಿಯನ್ನೂ ಕೊಡುವುದಕ್ಕೆ ಇಷ್ಟವಿರಲಿಲ್ಲ. ಅವರಿಗೆ ಬಹುಶಃ ಅವರ ಮಕ್ಕಳನ್ನು ಕರೆದುಕೊಂಡು ಹೋಗಿಬಿಡುತ್ತಾರೆ ಎಂಬ ಭಯವಿದ್ದಿರಬೇಕು. ನಮ್ಮ ತಂಡದವರು ಅಲ್ಲಿ ವೀಲ್ ಚೇರಿನಲ್ಲಿ ಕುಳಿತಿರುವ ಹೆಂಗಸೊಡನೆ ಮಾತನಾಡಿರಿ ಎಂದು ನನ್ನನ್ನು ತೋರಿಸಿದರು. ನಿಧಾನವಾಗಿ ಆಗ ಅವರುಗಳು ಹೊರಗೆ ಬಂದು ನನ್ನೊಡನೆ ಮಾತನಾಡಿದರು ಮತ್ತು ತಮ್ಮ ಮಕ್ಕಳನ್ನು ಕರೆದು ತಂದರು. ನಾನು ಅವರೊಡನೆ ಸಹಜವಾಗಿ ಮಾತನಾಡಿದೆ. ಜೊತೆಗೆ ಆ ಮಕ್ಕಳನ್ನು ನೋಡಿ ಅವರ ಸಮಸ್ಯೆಗಳು ಎಷ್ಟು ಗಂಭೀರವಾದದ್ದು ಎಂದು ಅಂದಾಜು ಮಾಡಿದೆ.

ಅಲ್ಲಿ ಸುಮಾರು ನೂರು ವಿಕಲಾಂಗ ಮಕ್ಕಳಿದ್ದಾರೆಂದು ತಿಳಿಯಿತು. ಒಂದು ವಾರದನಂತರ ನಾನು ಮತ್ತೆ ಆ ಮಕ್ಕಳನ್ನು ನೋಡಬೇಕೆಂದು ಯೋಚಿಸಿದೆ. ಅಲ್ಲಿನ ಒಂದು ಚರ್ಚಿನವರು ನಮಗೆ ಅವರ ಉದ್ಯಾನದಲ್ಲಿ ಆ ಮಕ್ಕಳನ್ನು ಸಂದಿಸುವ ಅವಕಾಶವನ್ನು ಮಾಡಿಕೊಟ್ಟರು. ಒಂದು ದೊಡ್ಡ ಗುಂಪೇ ನಮ್ಮನ್ನು ಕಾಣಲು ಬಂದಿತು. ಆ ಜಾಗವು ಮಹಮದ್ದೀಯರು ಹೆಚ್ಚು ಸಂಖ್ಯೆಯಲ್ಲಿದ್ದ ಸ್ಥಳ. ರಸ್ತೆಯಲ್ಲಿ ಹೋಗುವವರೆಲ್ಲಾ ಕುತೂಹಲದಿಂದ ನಿಂತು ಚರ್ಚಿನಲ್ಲಿ ಏನಾಗುತ್ತಿದೆ ಎಂದು ನೋಡಲಾರಂಭಿಸಿದರು. ಕೆಲವರು ಯಾರೋ ಕಾಯಿಲೆಯನ್ನು ವಾಸಿಮಾಡುವವರು ಬಂದಿದ್ದಾರಂತೆ ಎಂದು ಪಿಸುಗುಟ್ಟಲಾರಂಭಿಸಿದರು. ನಾವು ಅಲ್ಲಿ ಕೆಲಸಮಾಡಲು ನೇಮಿಸಿದ್ದ ಸಮಾಜ ಸೇವಕಿ ಜಾಯ್ಸ್, ನಾಯ್ಡು ಮತ್ತು ನಾನು ಆ ಮಕ್ಕಳು ಮತ್ತು ಅವರ ತಂದೆ ತಾಯಂದಿಯರೊಂದಿಗೆ ಮಾತನಾಡಿದೆವು. ನಾನು ನನ್ನ ಅನುಭವದ ಆಧಾರದ ಮೇಲೆ ಅವರ ಸಮಸ್ಯೆ ಏನು

ಮತ್ತು ಅದಕ್ಕೆ ಏನು ಮಾಡಬೇಕು ಎಂಬುದನ್ನು ನಿರ್ಧರಿಸಿದೆ. ಬಹಳ ಮಕ್ಕಳಿಗೆ ಸ್ವಲ್ಪ ಸಹಾಯದಿಂದಲೇ ಓಡಾಡುವಂತೆ ಮಾಡಬಹುದಿತ್ತು.

ನಮ್ಮ ದೂರ ಸಂಪರ್ಕದ (out reach) ಕಾರ್ಯಕ್ರಮ ವಿಸ್ತರಿಸಲಾಯಿತು. ೧೯೮೧ರಲ್ಲಿ ಬೆಂಗಳೂರಿನಿಂದ ನೂರು ಕಿ.ಮೀ.ದೂರದಲ್ಲಿರುವ ಕೆ.ಜಿ.ಎಫ್ ನಲ್ಲಿ (ಕೋಲಾರದ ಚಿನ್ನದ ಗಣಿಪ್ರದೇಶ) ನಡೆಸಿದ ಒಂದು ಸಮೀಕ್ಷೆಯಪ್ರಕಾರ ಅಲ್ಲಿ ಆರು ನೂರಕ್ಕೂ ಹೆಚ್ಚಿನ ವಿಕಲಾಂಗರು ಇದ್ದಾರೆ ಎಂದು ತಿಳಿಯಿತು. ಸಮೀಕ್ಷೆಯಲ್ಲಿ ಅವರುಗಳ ವಯಸ್ಸು, ಯಾವವಿಧವಾದ ವಿಕಲತೆ, ಇತ್ಯಾದಿಯ ವಿವರಗಳನ್ನು ಕಲೆಹಾಕಲಾಗಿತ್ತು. ಅವರು ನನ್ನನ್ನು ಸಹಾಯಕೋರಿ ಬಂದರು. ನಾನು ಅವರಿಗೆ ಅಲ್ಲಿನ ಮಕ್ಕಳೊಂದಿಗೆ ನಾನು ಕೆಲಸ ಮಾಡುತ್ತೇನೆ, ಆದರೆ ಅಲ್ಲಿನ ಯುವಕರು ಕೂಡ ಸ್ವಲ್ಪ ಜವಾಬ್ದಾರಿಯನ್ನು ನನ್ನೊಡನೆ ಹಂಚಿಕ್ಕೊಂಡು ಕೆಲಸಮಾಡಬೇಕು ಎಂದೆ. ನಾನು ಸಿಂಧಿ ಆಸ್ಪತ್ರೆಯ ಖ್ಯಾತ ವೈದ್ಯರಾದ ಡಾ. ಶ್ರೀನಿವಾಸನ್ ಅವರನ್ನು ಕರೆದುಕೊಂಡು ಹೋದೆ. ಅವರು ಬಹಳ ಸರಳ ಸ್ವಭಾವದವರು, ಸಹೃದಯಿ ಮತ್ತು ತೋಟಗಾರಿಕೆಯಲ್ಲಿ ಆಸಕ್ತರು.ಅವರು ಎಲ್ಲಾ ಮಕ್ಕಳನ್ನೂ ಪರೀಕ್ಷಿಸಿ, ಅವರಿಗೆ ಬೇಕಾದ ಔಷಧವನ್ನು ಬರೆದುಕೊಟ್ಟು, ಯಾರಿಗೆ ಶಸ್ತ್ರಚಿಕಿತ್ಸೆಯ ಅವಶ್ಯಕತೆ ಇದೆಯೋ ಅವರನ್ನು ಸಿಂಧಿ ಆಸ್ಪತ್ರೆಗೆ ಕರೆತಂದರೆ, ಅಲ್ಲಿ ಆಪರೇಷನ್ ಮಾಡುವುದಾಗಿ ತಿಳಿಸಿದರು. ಸಿಂಧಿ ಆಸ್ಪತ್ರೆಯು ಈ ಆಪರೇಷನ್ನಿಗೆ ಬೇಕಾದ ಹಣವನ್ನು ದಾನಿಗಳಿಂದ ಸಂಗ್ರಹಿಸಿತು. ಅಲ್ಲಿನ ಆಡಳಿತಗಾರರಾದ ಡಾ. ದಿಸಾವಾಲಾ ಈ ನಿಟ್ಟಿನಲ್ಲಿ ನಮಗೆ ಬಹಳ ನೆರವಾದರು.ಈ ಮಕ್ಕಳ ಬಗ್ಗೆ  ಅವರಿಗಿದ್ದ ಕಾಳಜಿ ನಮ್ಮ ಯಶಸ್ಸಿಗೆ ಕಾರಣವಾಯಿತು.ನಾವು ಕೆ.ಜಿ.ಎಫ್‌ನ ಯುವಕರ ತಂಡದಿಂದ ಒಂದು ಯುವತಿಯನ್ನು ನೇಮಕ ಮಾಡಿದೆವು. ಅವಳು ಶಸ್ತ್ರಚಿಕಿತ್ಸೆ ಮಾಡಿಕೊಳ್ಳಲು ಒಪ್ಪಿಕೊಂಡ ಮಕ್ಕಳ ಮನೆಯವರನ್ನು ಆಸ್ಪತ್ರೆಗೆ ಕರೆದುಕೊಂಡು ಬರುತ್ತಿದ್ದಳು. ಅಲ್ಲಿನ ಚಿಕಿತ್ಸೆಯ ನಂತರ ಅವರನ್ನು ಎ.ಪಿ.ಡಿ ಗೆ ಕರೆತಂದು 'ಕ್ಯಾಲಿಪರ್ಸ್' ಹಾಕಿಸುತ್ತಿದ್ದಳು. ಸಾಮ್ಯುಯಲ್ ಮಾಡುತ್ತಿದ್ದ ಕ್ಯಾಲಿಪರ್‌ಗಳಿಗೆ ಈಗ ಬೇಡಿಕೆ ಹೆಚ್ಚಾಯಿತು.

ನೀಲಸಂದ್ರದಲ್ಲಿ ನಾವು ಕೈಗೊಂಡ ಪ್ರಾಜೆಕ್ಟ್ ಯಶಸ್ವಿಯಾಯಿತು. ಜಾಯ್ಸ್ ಮನೆ ಮನೆಗೆ ಹೋಗಿ ಆ ವಿಕಲಾಂಗ ಮಕ್ಕಳ ತಂದೆ ತಾಯಿಯರೊಡನೆ ಮಾತನಾಡುತ್ತಿದ್ದಳು. ಅವರೆಲ್ಲಾ ನಮ್ಮ ಪ್ರಾಜೆಕ್ಟಿನಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದರು.  ನಾನು ತಿಂಗಳಿಗೆ ಒಮ್ಮೆ ಆ ತಂದೆ ತಾಯಂದಿಯರನ್ನು ಸಂಧಿಸಿ ಇಡೀ ದಿನವನ್ನು ಅವರೊಂದಿಗೆ ಕಳೆದು ಅವರ ಸುಖ ದುಃಖಗಳ ಬಗ್ಗೆ ಚರ್ಚಿಸುತ್ತಿದ್ದೆ. ಕೆಲವುದಿನಗಳ ನಂತರ ನಾವು ಮತ್ತೊಂದು

ಸ್ಥಳದಲ್ಲಿ – ಶ್ರೀ ರಾಮಪುರದಲ್ಲಿ – ಈ ರೀತಿಯ ಕೆಲಸವನ್ನು ಪ್ರಾರಂಭಿಸಿದೆವು. ಅದೊಂದು ಕಾರ್ಮಿಕರಿರುವ ಸ್ಥಳ. ಇಲ್ಲಿ ರಾಜಕೀಯ ಒತ್ತಡಗಳ ಕಾರಣ ಕೆಲಸಮಾಡುವುದು ಕಷ್ಟಕರವಾಗಿತ್ತು. ನಮ್ಮ ಶಾಲೆಯಲ್ಲಿ ಕೆಲವು ವರ್ಷಗಳಿಂದ ಕೆಲಸಮಾಡುತ್ತಿರುವ ಮೇರಿ ಥಾಮಸ್‌ಅನ್ನು ಇಲ್ಲಿನ ಸಮಾಜ ಕಾರ್ಯಕರ್ತೆಯಾಗಿ ನಾವು ನೇಮಿಸಿದೆವು. ನಾವು ಕೆಲಸ ಮಾಡಲು ಆಯ್ದುಕೊಂಡ ಕೊಳಚೆ ಪ್ರದೇಶವು ಬಹಳ ಬಡತನದಿಂದ ಕೂಡಿದ್ದೂ ಮತ್ತು ಕೊಳುಕಾಗಿಯೂ ಇತ್ತು. ನಮ್ಮ ಕೆಲಸಕ್ಕೆ ಬಹಳ ವಿರೋಧವಿತ್ತು. ಅವರಿಗೆ ನಾವು ಯಾವ ರಾಜಕೀಯ ಪಕ್ಷಕ್ಕೆ ಸೇರಿದವರು ಎಂದು ತಿಳಿಯಬೇಕಿತ್ತು. ನಾವು ಅವರಿಗೆ ನಮ್ಮ ಗುರಿ ಕೇವಲ ವಿಕಲಾಂಗರಿಗೆ ಸಹಾಯ ಮಾಡುವುದು ಮಾತ್ರ, ನಮಗೆ ಒಂದು ಚಿಕ್ಕ ಕೋಣೆಯನ್ನು ಕೊಟ್ಟರೆ ಸಾಕು ಎಂದು ಹೇಳಿದೆವು. ಮುನಿಸಿಪಾಟಿಯವರು ನಮಗೆ ಒಂದು ಕೋಣೆಯನ್ನು ಕೊಟ್ಟರು, ಆದರೆ ನಾವು ಯಾವಾಗಲೂ ಅದರ ಕಿಟಕಿಗಳನ್ನು ಮುಚ್ಚಿಡಬೇಕಾಗಿತ್ತು, ಯಾಕೆಂದರೆ ಸುತ್ತಮುತ್ತಲಲ್ಲಿ ಅಷ್ಟು ದುರ್ವಾಸನೆ ಬರುತ್ತಿತ್ತು. ಈಗಲೂ ಆ ದುರ್ವಾಸನೆ ಜ್ಞಾಪಕ ಬರುತ್ತದೆ. ನಾನು ವಾರದಲ್ಲಿ ಎರಡು ದಿವಸ ಅಲ್ಲಿಗೆ ಹೋಗುತ್ತಿದ್ದೆ, ನನ್ನ ವೀಲ್ ಚೇರಿಗೆ ಬದಲು ಹಾರಿಹೋಗಲು ನನ್ನಲ್ಲಿ ರೆಕ್ಕೆಗಳಿಲ್ಲವಲ್ಲಾ ಅನ್ನಿಸುತ್ತಿತ್ತು. ನಾನು ಜಾರ್ಜ್‌ಗೆ ಹುಷಾರಾಗಿ ಡ್ರೈವ್ ಮಾಡಲು ಹೇಳುತ್ತಿದ್ದೆ. ಮನೆಗೆ ಬಂದ ಮೇಲೆ ಜಾರ್ಜ್ ಪೈಪಿನಿಂದ ನೀರನ್ನು ಬಿಟ್ಟು ಕಾರಿನ ಚಕ್ರಗಳನ್ನು ತೊಳೆಯುತ್ತಿದ್ದ.

ಈ ತೊಂದರೆಗಳು ಏನೇ ಇದ್ದರೂ, ಅಲ್ಲಿನ ಕೆಲಸವು ಬಹಳ ಸ್ವಾರಸ್ಯವಾಗಿತ್ತು. ನೀಲಸಂದ್ರದಲ್ಲಿ ಮಕ್ಕಳ ತಂದೆ ತಾಯಿಗಳು ಆಸೆ ಮತ್ತು ಆಸಕ್ತಿಯಿಂದ ನಮ್ಮೊಡನೆ ಸಹಕರಿಸುತ್ತಿದ್ದರು, ಆದರೆ ಇಲ್ಲಿ ಅವರು ನಾವೇ ಎಲ್ಲವನ್ನೂ ಮಾಡಬೇಕೆಂದು ಎದುರುನೋಡುತ್ತಿದ್ದರು. ಮೇರಿ ಥಾಮಸ್‌ಳ ಕಾರ್ಯವೈಖರಿ ಮತ್ತು ಅವಳು ಆ ಮಕ್ಕಳ ಕುಟುಂಬದವರೊಡನೆ ವ್ಯವಹರಿಸುತ್ತಿದ್ದದ್ದನ್ನು ನಾನು ಬಹಳ ಮೆಚ್ಚುತ್ತೇನೆ. ದಿನಗಳು ಕಳೆದಂತೆ ಅವರಿಗೆ ನಾವು ಅವರ ಮಕ್ಕಳ ಒಳಿತಿಗಾಗಿ ಕೆಲಸ ಮಾಡುತಿದ್ದೇವೆ ಎಂಬ ಅರಿವು ಮೂಡಿತು. ಆ ಮಕ್ಕಳಿಗೆ ಸೂಕ್ತ ಚಿಕಿತ್ಸೆ ಮತ್ತು ಬೇಕಾದ ಉಪಕರಣಗಳು ನಮ್ಮ ಸಂಸ್ಥೆಯಿಂದ ದೊರಕಿತು. ಆದರೆ ನಾವು ಇದಕ್ಕಾಗಿ ಬಹಳ ಅವರ ಹಿಂದೆ ಬೀಳಬೇಕಾಯಿತು. ಅನೇಕ ಮಕ್ಕಳಿಗೆ ನಾವು ಉಪಕರಣಗಳನ್ನು ಕೊಟ್ಟರೂ ಅವರಿಗೆ ಅದನ್ನು ಯಾವಾಗಲೂ ಉಪಯೋಗಿಸುವುದರ ಬಗ್ಗೆ ಕಾಳಜಿ ಇರಲಿಲ್ಲ. ಅದನ್ನು ಸರಿಯಾಗಿ ಕಾಪಾಡಿಕೊಳ್ಳುವುದಾಗಲಿ ಅಥವಾ ತೊಂದರೆ ಇದ್ದರೆ ಸರಿಪಡಿಸಿಕೊಳ್ಳುವುದಾಗಲಿ ದೊಡ್ಡ ಸಮಸ್ಯೆಯಾಗಿತ್ತು. ನಮಗೆ ಇವೆಲ್ಲ ಸಮಸ್ಯೆಗಳನ್ನೂ ನಿರಂತರವಾಗಿ ಎದುರಿಸಬೇಕಾಗಿತ್ತು.

ಶಾಲೆಗಳೂ ಸಮಸ್ಯೆಯನ್ನು ಒಡ್ಡಿದವು. ನಮ್ಮ ಶಿಕ್ಷಣ ಪದ್ಧತಿಯಲ್ಲಿ ಮಗುವಿಗೆ ಮತ್ತು ಅದರ ತಂದೆ ತಾಯಿಗಳಿಗೆ ಹೋಮ್ ವರ್ಕ್, ನಾಳಿನ ಪಾಠಕ್ಕೆ ತಯಾರಿ, ಪರೀಕ್ಷೆ, ಇತ್ಯಾದಿ ಅನೇಕ ಒತ್ತಡಗಳು ಇವೆ. ದೈನಂದಿನ ಜೀವನಕ್ಕೇ ಕಷ್ಟಪಡುತ್ತಿರುವ ದಂಪತಿಗಳಿಗೆ ಇವೆಲ್ಲವನ್ನು ಸಂಭಾಳಿಸುವುದು ಬಹಳ ಕಷ್ಟ. ಆದ್ದರಿಂದ ಸಮಾಜ ಕಾರ್ಯಕರ್ತೆಯು ಈ ಕುಟುಂಬಗಳನ್ನು ಮತ್ತು ಶಾಲೆಯನ್ನೂ ಒಂದು ಸೇರಿಸುವ ಕೊಂಡಿಯಾಗಿ ಕೆಲಸಮಾಡಬೇಕಾಗುತ್ತದೆ.ನಾವು ಅಲ್ಲಿನ ಮಕ್ಕಳು ಓದಿನಲ್ಲಿ ಹಿಂದಿದ್ದರು ಎಂಬುದನ್ನು ಗಮನಿಸಿ, ಅವರಿಗೆ ಶಾಲೆಯನಂತರ ಪಾಠಹೇಳಿಕೊಡುವಂತಹ ಕೆಲವು ಕೆಲವು ಟೀಚರ್ ಗಳನ್ನು ನೇಮಿಸಿದೆವು. ಅವರು ನಮ್ಮ ಆಫೀಸಿನಲ್ಲಿ ಕುಳಿತು ಮಕ್ಕಳಿಗೆ ಹೋಮ್ ವರ್ಕ್ ಮಾಡಿಸುತ್ತಿದ್ದರು.

ಸಮಾಜ ಕಾರ್ಯಕರ್ತೆಯು ಅಲ್ಲಿನ ಸುತ್ತಮುತ್ತದ ಶಾಲಿಗಳೊಂದಿಗೆ ಮಾತನಾಡಿ, ಅಲ್ಲಿನ ವಿಕಲಾಂಗ ಮಕ್ಕಳನ್ನು ಶಾಲೆಗೆ ಸೇರಿಸಿಕೊಳ್ಳುವಂತೆ ಮಾಡುವುದಾಗಿತ್ತು.ಶಾಲೆಗಳು ಕೂಡಲೇ ಒಪ್ಪಿಕೊಳ್ಳುತ್ತಿರಲಿಲ್ಲ. ಆದರೆ ನಿಧಾನವಾಗಿ ಒಬ್ಬರು ಒಪ್ಪಿಕೊಂಡ ನಂತರ ಇತರರೂ ಒಪ್ಪಿಕೊಳ್ಳಲಾರಂಭಿಸಿದರು. ನಾವು ಈ ಶಾಲೆಗಳಲ್ಲಿ ವಿಕಲಾಂಗ ಮಕ್ಕಳಿಗೆ ಮೇಲೆ ಹತ್ತಲು ಸೌಕರ್ಯವಾಗುವಂತೆ ಮೆಟ್ಟಲಿನ ಪಕ್ಕದಲ್ಲಿ ಇಳಿಜಾರುಗಳನ್ನೂ, ಅವುಗಳಲ್ಲಿ ಹಿಡಿದುಕೊಳ್ಳಲು ಕಂಬಿಗಳನ್ನೂ ಹಾಕಬೇಕಾಯಿತು. ಅಲ್ಲದೆ, ಈ ಮಕ್ಕಳಿಗೆ ಅನುಕೂಲವಾದ ಟಾಯ್ಲೆಟ್ ಗಳನ್ನೂ ಕಲ್ಪಿಸಬೇಕಾಯಿತು. ಇದು ಬಹಳ ಪ್ರಯಾಸದ ಕೆಲಸವಾಯಿತು. ಅತಿಯಾದ ವಿಕಲಾಂಗತೆಇದ್ದ ಮಕ್ಕಳನ್ನು ಮಾತ್ರ ವಿ.ಪಿ.ಡಿ ಗೆ ಸೇರಿಸಿಕೊಳ್ಳುತ್ತಿದ್ದೆವು, ಏಕೆಂದರೆ ಅವರಿಗೆ ದೀರ್ಘವಾದ ಚಿಕಿತ್ಸೆ ಬೇಕಾಗುತ್ತಿತ್ತು. ಈ ಮಕ್ಕಳು ತಡವಾಗಿ ಶಾಲೆಗೆ ಸೇರುತ್ತಿದ್ದರು, ಆದರೆಅವರಲ್ಲಿ ಅನೇಕರು ೧೦ ನೆಯ ತರಗತಿಯ ತನಕ ಓದಿ ನಂತರ ಕೆಲಸಕ್ಕೆ ಸೇರಿದರು ಎಂಬುದು ಬಹಳ ಸಂತಸದ ಸಂಗತಿ. ಕೆಲವರು ನರ್ಸ್ ಕೆಲಸದ ತರಬೇತಿ ಪಡೆದರೆ ಕೆಲವರು ಎಲೆಕ್ಟ್ರಿಕ್ ಉಪಕರಣಗಳನ್ನು ಜೋಡಿಸುವ ಕೆಲಸವನ್ನು ಕಲಿತರು, ಇನ್ನೂ ಕೆಲವರು ಹೆಚ್ಚಿನ ಓದನ್ನು ಮುಂದುವರಿಸಿದರು. ನನಗೆ ಕೆಲವರು ದತ್ತಿ ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿರುವುದೂ ಗೊತ್ತು. ಮುಖ್ಯವಾಗಿ ಎಲ್ಲರೂ ತಮ್ಮ ತಮ್ಮ ಪ್ರಯತ್ನದಿಂದ ಮತ್ತು ಸಾಧಿಸಬೇಕೆಂಬ ಛಲದಿಂದ ಬೆಳೆದು ನಿಂತರು.ಆದರೆ ವಿಕಲಾಂಗರ ಕ್ಷೇತ್ರದಲ್ಲಿ ಸೇವೆಮಾಡಲು ಯಾರೂ ಮುಂದೆಬರಲಿಲ್ಲ ಎಂಬುದೇ ನನಗೆ ಸ್ವಲ್ಪ ಯೋಚನೆ. ಯಾಕೆಂದರೆ, ವಿಕಲಾಂಗರು ತಮ್ಮಂತವರಿಗೆ ನೆರವಾಗದಿದ್ದರೆಬೇರೆ ಯಾರು ಅವರಿಗೆ ನೆರವಾಗುತ್ತಾರೆ?

ನಮ್ಮ ದೂರ ಸಂಪರ್ಕದ (out reach)ಕಾರ್ಯಕ್ರಮ ಬೆಳೆದು ದೊಡ್ಡದಾದಂತೆ ಅವರಿಗೆ ಬೇಕಾದ ಸಲಕರಣೆಗಳಿಗೆ ಬೇಡಿಕೆಯೂ ಹೆಚ್ಚ ತೊಡಗಿತು. ಇದು ನನಗೆ ಸ್ವಲ್ಪ ಯೋಚನೆ ಆಯಿತು. ನಮ್ಮಲ್ಲಿ ಹೆಚ್ಚು ಜನ ಇವನ್ನು ತಯಾರಿಸುವುದರಲ್ಲಿ ತರಬೇತಿ ಉಳ್ಳವರು ಇರಲಿಲ್ಲ, ಮತ್ತು ಅದಕ್ಕೆ ಬೇಕಾದ ಸ್ಥಳವೂ ಇರಲಿಲ್ಲ. ನಮ್ಮ ಏ.ಪಿ.ಡಿ ಕಂಪೌಂಡಿನಲ್ಲೆ ಇದಕ್ಕೆ ಬೇಕಾದ ಒಂದು ಕಟ್ಟಡವನ್ನು ನಿರ್ಮಿಸಲು ನಾವು ಯೋಚಿಸುತ್ತಿದ್ದೆವು. ನಮ್ಮ ಸಂಸ್ಥೆಗೆ ಬಹಳ ನೆರವಾಗಿರುವ ಕ್ರಿಸ್ ಅಂಡರ್ಹಿಲ್ ಅವರ 'ಆಕ್ಷನ್ ಫಾರ್ ಡಿಸಬಿಲಿಟಿ ಅಂಡ್ ಡೆವೆಲಪ್ಮೆಂಟ್' (ಏ.ಡಿ.ಡಿ) ಸಂಸ್ಥೆಯಿಂದ ಕೆವಿನ್ ಮೌಲ್ ಎಂಬುವರನ್ನು ಈ ವಿಷಯದ ಬಗ್ಗೆ ಅವಲೋಕನ ನಡೆಸಲು ಕಳುಹಿಸಿದರು. ಸಾಮ್ಯುಯಲ್ ಒಂದು ಪುಟ್ಟ ಕೋಣೆಯಲ್ಲಿ ಈ ಸಲಕರಣೆಗಳನ್ನು ತಯಾರಿಸುತ್ತಿದ್ದ, ಅವನಿಗೆ ಇನ್ನೂ ದೊಡ್ಡದಾದ ಸ್ಥಳ ಬೇಕಿತ್ತು. ನಾನು ಮತ್ತು ನಾಯ್ಡು ಈ ಕೆಲಸಕ್ಕೆ ಬೇಕಾದ ಸ್ಥಳದ ಅಂದಾಜು ಮಾಡಿ ಈಗ ಇರುವ ಹೊಸ ಕಟ್ಟಡವನ್ನು ಕಟ್ಟಲು ಪ್ರಾರಂಭಿಸಿದೆವು. ಇದಕ್ಕೆ ಎರಡು ಲಕ್ಷರೂಪಾಯಿಗಳು ತಗುಲುವುದೆಂದು ನಾವು ಅಂದಾಜು ಮಾಡಿದೆವು. ಏ.ಡಿ.ಡಿ ಯ ಪೀಟರ್ ಮಕ್ಫಡ್ಯಾನ್ ಇದಕ್ಕೆ ಬೇಕಾದ ಹಣವನ್ನು ದೇಣಿಗೆಗಳ ಮೂಲಕ ಎತ್ತಿದರು. ಕೆವಿನ್ ಮೊದಲಬಾರಿ ಬಂದಾಗ ನಮ್ಮ ಮನೆಯಲ್ಲೇ ಕೆಲವು ದಿನ ಉಳಿದುಕೊಂಡರು. ನಂತರ ಅವರಿಗೆ ನಮ್ಮ ನೀಲಸಂದ್ರದ ಸಮಾಜ ಸೇವಕಿ ಜಾಯ್ಸ್ ಪರಿಚಯವಾಯಿತು. ಅವರು ಎರಡನೆಯ ಸಲ ಬಂದಾಗ ಅವರದ್ದೇ ಆದ ಸ್ಥಳವನ್ನು ಏರ್ಪಡಿಸಿಕ್ಕೊಂಡರು. ಅವರಿಗೂ ಜಾಯ್ಸಿಗೂ ಪ್ರೇಮ ಪ್ರಸಂಗ ಶುರುವಾಗಿತ್ತು. ನಾನು ಕೆವಿನ್ನನ್ನು 'ನಕ್ಷತ್ರಿಕ' ಎಂದು ಹಾಸ್ಯ ಮಾಡುತ್ತಿದ್ದೆ. ನಳ ಮಹಾರಾಜನ ಕಥೆಯಲ್ಲಿ ಹೇಗೆ ನಕ್ಷತ್ರಿಕನು ಹಣದ ವಸೂಲಿಗಾಗಿ ಅವನನ್ನು ಬಿಡದೆ ಬೆನ್ನಹತ್ತಿದ್ದನೋ, ಹಾಗೆ ಕೆವಿನ್ ಕೂಡ ನನ್ನನ್ನು ಬಿಡದೆ ಪೀಡಿಸಿ ಕೆಲಸ ಮಾಡಿಸುತ್ತಿದ್ದನು. ಕೆಲಸದವರು ನಿಧಾನವಾಗಿ ಕೆಲಸ ಮಾಡುತ್ತಿದ್ದರು, ಆದರೆ ಕೆವಿನ್ ಬಿಡದೆ ಅವರ ಹಿಂದೆ ಬಿದ್ದು ಕೆಲಸವನ್ನು ಮಾಡಿಸುತ್ತಿದ್ದ. ಈಗಲೂ ಕೆವಿನ್ ನನಗೆ ಬರೆಯುವ ಪತ್ರಗಳನ್ನು 'ನಕ್ಷತ್ರಿಕ' ಎಂದೇ ಸಹಿ ಮಾಡಿ ಕಳುಹಿಸುತ್ತಾನೆ. ಕೆವಿನ್ ಮತ್ತು ಜಾಯ್ಸ್ ಮದುವೆಯಾಗಿ ಇಂಗ್ಲಂಡಿನಲ್ಲಿದ್ದಾರೆ. ಇದನ್ನು 'ನಾನು ಹೇಗೆ ನನ್ನ ಅತ್ಯುತ್ತಮ ಸಮಾಜ ಸೇವಕಿಯನ್ನು ಕಳೆದು ಕೊಂಡೆ' ಎಂದೂ ಕರೆಯಬಹುದು.

ನನಗೆ ಸಾಮ್ಯುಯಲ್ಲಿನ ಅನುಭವವನ್ನು ನಾವು ಉಪಯೋಗಿಸಿಕೊಂಡು, ಇತರ ವಿಕಲಾಂಗ ಮಕ್ಕಳಿಗೆ ತರಬೇತಿ ಕೊಟ್ಟು, ಈ ಸಲಕರಣೆಗಳನ್ನು ತಯಾರಿಸುವುದನ್ನೇ ಅವರಿಗೆ ಒಂದು ವೃತ್ತಿಯಾಗಿ ಕಲಿಸಬಹುದು ಎಂದು ಕೊಂಡಿದ್ದೆ. ಈ ರೀತಿ ನಾವು ಅನೇಕ ತಂತ್ರಜ್ಞರನ್ನು ತಯಾರಿಸಿ ವಿಕಲಾಂಗರಿಗೆ ನೆರವಾಗ ಬಹುದು ಎಂದಿದ್ದೆ. ಆದ್ದರಿಂದ

ನಾವು ಒಂದು ತರಬೇತಿ ಕೇಂದ್ರವನ್ನು ಪ್ರಾರಂಭಿಸಿದೆವು. ಪ್ರತಿವರ್ಷ, ಈ ಸಂಸ್ಥೆಯು ಹತ್ತು ಹನ್ನೆರಡು ಯುವಕರನ್ನು ತರಬೇತಿ ಮಾಡುತಿತ್ತು. ಕ್ರಮೇಣ ಈ ಸಂಸ್ಥೆಯು ಬಹಳ ಜನಪ್ರಿಯ ವಾಯಿತು. ದಕ್ಷಿಣ ಭಾರತದಲ್ಲಿ ಈ ರೀತಿ ತರಬೇತಿ ಪಡೆದ ತಂತ್ರಜ್ಞರಿಗೆ ಬಹಳ ಬೇಡಿಕೆ ಇತ್ತು. Qualified professional ಗಳು ಹಳ್ಳಿಗಾಡಿನಲ್ಲಿ ಮತ್ತು ಚಿಕ್ಕ ಊರುಗಳಲ್ಲಿ ಕೆಲಸಕ್ಕೆ ಹೋಗುತ್ತಿರಲಿಲ್ಲ. ಅಲ್ಲದೆ ಅವರು ಸ್ಥಿರವಾಗಿ ಕೆಲಸದಲ್ಲಿ ನಿಲ್ಲುತ್ತಿರಲೂ ಇಲ್ಲ. ಆದರೆ, ಈ ವಿಕಲಾಂಗ ಯುವಕರು ದೂರದ ಹಳ್ಳಿಗಾಡಿನಲ್ಲಿ ಕೆಲಸ ಮಾಡುತ್ತಿದ್ದರು ಮತ್ತು ಬಹಳ ದೀರ್ಘವಾಗಿ ಕೆಲಸದಲ್ಲಿ ಉಳಿಯುತ್ತಿದ್ದರು. ಇದು ಈ ಯುವಕರಿಗೆ ಸ್ವಾವಲಂಬಿಯಾಗಿ ಬೆಳೆಯುವುದಕ್ಕೆ ಒಂದು ದಾರಿ ಆಯಿತು. ಅಲ್ಲದೆ ಅಲ್ಲಿನ ಸಂಘ ಸಂಸ್ಥೆಗಳಿಗೆ ಕೂಡ ನೆರವಾಯಿತು. ಇದರಲ್ಲಿ ಮಹಿಳೆಯರ ಪಾತ್ರವೂ ಮುಖ್ಯ, ಯಾಕೆಂದರೆ ಅನೇಕ ಮಹಿಳಾ ವಿಕಲಾಂಗರು ಮಹಿಳೆಯರಿಂದ ಅವರ ಅಂಗಗಳ ಅಳತೆ ತೆಗೆಸಿಕೊಳ್ಳಲು ಇಷ್ಟಪಡುತ್ತಿದ್ದರು. ನಾನು ಈ ವರೆಗೆ ಸುಮಾರು ನಾನ್ನೂರು ಯುವಕ ಯುವತಿಯರಿಗೆ ಈ ರೀತಿಯ ತರಬೇತಿಯನ್ನು ಕೊಡಿಸಿದ್ದೇನೆ. ಇವರಲ್ಲಿ ಶೇ. ೬೦ ರಷ್ಟು ಮಂದಿ ಇನ್ನೂ 'ಆರ್ಥೋಟಿಕ್' ಕೆಲಸದಲ್ಲೇ ನಿರತರಾಗಿದ್ದಾರೆ. ನಾವು ಈ ಚಟುವಟಿಕೆಯನ್ನು ಇತರ ಪ್ರದೇಶಗಳಿಗೂ ವಿಸ್ತರಿಸಿದೆವು, ಮುಖ್ಯವಾಗಿ ದಕ್ಷಿಣ ಭಾರತದಲ್ಲಿ ತಮಿಳು ನಾಡು ಮತ್ತು ಆಂಧ್ರ ಪ್ರದೇಶ; ಇತರ ದೇಶಗಳಲ್ಲಿ ರವಾಂಡ, ಉಗಾಂಡ, ನೇಪಾಳ, ಶ್ರೀಲಂಕ, ಇತ್ಯಾದಿ.

ಈ ಸಮಯದಲ್ಲಿ ಕ್ರಿಸ್ ಅಂಡರ್ಹಿಲ್ ನಮ್ಮ ಚಟುವಟಿಕೆಗಳನ್ನು ವಿಸ್ತರಿಸುವ ಒಂದು ಬೃಹತ್ ಯೋಜನೆಯನ್ನು ಮುಂದಿಟ್ಟರು. ಆದರೆ ನನಗೆ ನಾವು ಅದನ್ನು ಕೈಗೊಳ್ಳಬೇಕಾ ಎಂಬುದರ ಬಗ್ಗೆ ಸಂಶಯವಿತ್ತು. ಅದು ಎ.ಪಿ.ಡಿ ಗೆ ಬಹಳ ದೊಡ್ಡ ಯೋಜನೆಯಾಗಿದ್ದು, ನಮ್ಮ ಸಲಕರಣೆಗಳನ್ನು ತಯಾರಿಸುವ ಕಾರ್ಯಾಗಾರದ ಅನುಭವವೇ ನನ್ನನ್ನು ಹಿಂದೇಟು ಹಾಕುವಂತೆ ಮಾಡಿತು. ಕ್ರಿಸ್ ಯೋಜನೆಯ ಪ್ರಕಾರ ನಾವು ದೇಶದ ಪ್ರತಿಯೊಂದು ಮೂಲೆಗೂ ಹೋಗಿ ಅಲ್ಲಿ ವಿಕಲಾಂಗರಿಗೆ ಬೇಕಾದ ಸೌಲಭ್ಯಗಳನ್ನು ಏರ್ಪಡಿಸುವುದಾಗಿತ್ತು. ಕೆವಿನ್ ಈ ಯೋಜನೆಯ ಮುಖ್ಯಸ್ಥರಾದರು.ಅವರು ದೇಶಾದ್ಯಂತ ತಿರುಗಾಡಿ, ಅಲ್ಲಿನ NGOಗಳನ್ನು ಭೇಟಿಮಾಡಿ ಅವರ ಕಾರ್ಯ ಚಟುವಟಿಕೆಗಳ ಬಗ್ಗೆ ಮಾಹಿತಿ ಕಲೆಹಾಕಿದರು. ನನಗೆ ಈ ಮಟ್ಟದಲ್ಲಿ ಕೆಲಸ ಕೈಗೊಳ್ಳುವುದು ಸರಿದೋರಲಿಲ್ಲ. ಎ.ಪಿ.ಡಿ ಗಾಗಲಿ ಅಥವಾ ಯಾವುದೇ ಒಂದು ಸಂಸ್ಥೆಗಾಗಲಿ ಇಷ್ಟು ದೊಡ್ಡ ಪ್ರಮಾಣದಲ್ಲಿ ಕೆಲಸ ಮಾಡುವುದು ಸಾಧ್ಯವಿರಲಿಲ್ಲ ಎಂದು ನನಗೆ ತೋರಿತು. ಕೊನೆಗೆ ಈ ಧ್ಯೇಯಗಳನ್ನು ಇಟ್ಟುಕೊಂಡುಒಂದು ಸಂಸ್ಥೆಯನ್ನು ಪ್ರಾರಂಭಿಸಿದೆವು. ಕೆವಿನ್ ಈ ಸಂಸ್ಥೆಯ ಮುಖ್ಯಸ್ಥರಾಗಿ ಚಾಪಲ್ ಖಿಸ್ನಬಿಸ್ ಎಂಬುವರನ್ನು ಆಯ್ಕೆ ಮಾಡಿದರು. ನಾವು ಅವರಿಗೆ ಎ.ಪಿ.ಡಿ ಯಲ್ಲಿ ಅವರ ಚಟುವಟಿಕೆಗಳನ್ನು

ಪ್ರಾರಂಭಿಸಲು ಜಾಗವನ್ನು ಕೊಟ್ಟೆವು. ಖಿಸ್ಸಬಿಸ್ 'ಆರ್ಥೋಟಿಕ್' ಕ್ಷೇತ್ರದಲ್ಲಿ ಪರಿಚಿತ ಹೆಸರಾಗಿದ್ದರು, ಜೊತೆಗೆ ನುರಿತ ವ್ಯಾಪಾರಸ್ತರು. ನಾಲ್ಕು ವರ್ಷಗಳಲ್ಲಿ ಅವರು ದೊಡ್ಡದಾಗಿ ಬೆಳೆದು ತಮ್ಮದೇ ಆದ ಕಟ್ಟಡವನ್ನು ಹೊಂದಿದ್ದರು. ಇಂದು Mobility India ಒಂದು ಬೃಹತ್ ಸಂಸ್ಥೆಯಾಗಿ ಬೆಳೆದು ಅನೇಕ ವಿಕಲಾಂಗರಿಗೆ ಸಹಾಯ ಮಾಡುತ್ತಿದೆ.

ನಮ್ಮ ಶಾಲೆಗೆ ಓರ್ವ Physiotherapistನ ಅಗತ್ಯವಿದೆ ಎಂದು ನಮಗೆ ತಿಳಿದಿದ್ದರೂ, ಅವರ ಸೇವೆಯನ್ನು ನಮ್ಮ ಇತರ ಸೇವೆಗಳೊಂದಿಗೆ ಹೇಗೆ ಮತ್ತು ಎಲ್ಲಿ ಹೊಂದಿಸುವುದು ಎಂದು ತಿಳಿಯಲಿಲ್ಲ. ಆ ದಿನಗಳಲ್ಲಿ Physiotherapistಗಳು ಸಿಗುವುದೂ ಕಷ್ಟವಿತ್ತು. ಸಂತ ಮಾರ್ಥಾಸ್ ಆಸ್ಪತ್ರೆಯಲ್ಲಿದ್ದ ಒಬ್ಬನೇ ಒಬ್ಬನಿಗೆ ನಮ್ಮಲ್ಲಿ ಕೆಲಸ ಮಾಡಲು ಸಮಯವೇ ಇರಲಿಲ್ಲ. ನಾವು ನಮ್ಮ ಮಕ್ಕಳನ್ನು ಪ್ರತಿಸಲ ಅಲ್ಲಿಗೆ ಕಳುಹಿಸುವುದು ಸಾಧ್ಯವಿರಲಿಲ್ಲ. ನಮ್ಮ ಮಕ್ಕಳಿಗೆ ಬೇಕಾದ ಶುಶ್ರೂಷೆ ಅಷ್ಟೇನೂ ವಿಶೇಷವಾದದ್ದಾಗಿರಲಿಲ್ಲ. ಸಾಧಾರಣ ವಾದ ಶುಶ್ರೂಷೆ ಕೊಡುವುದರಲ್ಲಿ ನಾವು ಕೆಲವರಿಗೆ ತರಬೇತಿ ನೀಡಿದರೆ ಅವರು ಈ ಕೆಲಸವನ್ನು ಮಾಡಬಹುದು ಎಂದು ನನಗೆ ತೋರಿತು. ನಮ್ಮ ಶಾಲೆಯಿಂದ ಹೊರಬಂದಿರುವ ಕೆಲವು ಯುವಕರಿಗೆ ಈ ತರಬೇತಿ ನೀಡ ಬಹುದು ಎಂದು ನಾ ಯೋಚಿಸಿದೆ, ಯಾಕೆಂದರೆ ಸ್ವಲ್ಪ ತರಬೇತಿಯಿಂದ ನನ್ನ ಅಮ್ಮ ನನಗೆ ಈ ರೀತಿಯ ಶುಶ್ರೂಷೆ ನೀಡಿದ್ದನ್ನು ನಾನು ನೋಡಿದ್ದೆ.

ಎ.ಪಿ.ಡಿಯಲ್ಲಿ ಎಲ್ಲವೂ ತಾನಾಗಿಯೇ ಆಗುತ್ತಿತ್ತು. ೧೯೮೭ ರಲ್ಲಿ ನಾನು ಇಂಗ್ಲೆಂಡಿಗೆ ಹೋಗಿದ್ದಾಗ ಫಿಲಿಪ್ಪಾ ಯಂಗ್ ಅನ್ನುವವಳನ್ನು ಸಂಧಿಸಿದ್ದೆ. ಅವಳು 'ಆಕ್ಷನ್ ಹೆಲ್ತ್' ಅನ್ನುವ ಸಂಸ್ಥೆಯನ್ನು ನಡೆಸುತ್ತಿದ್ದಳು. ಅವಳು ಬೇರೆ ಬೇರೆ ದೇಶಗಳಿಗೆ ವೈದ್ಯರು, ನರ್ಸ್‌ಗಳು, ಥೆರಾಪಿಸ್ಟ್‌ಗಳು ಮತ್ತು ಸಹಾಯಕರನ್ನು ಕಳುಹಿಸಿ ಕೊಡುತ್ತಿದ್ದಳು. ಇದು ನನಗೆ ಆಸಕ್ತಿ ಮೂಡಿಸಿತು. ನಾನು ಅವಳಿಗೆ ನಮ್ಮಲ್ಲಿ ಕೆಲಸ ಮಾಡುವವರಿಗೆ ತರಬೇತಿ ಕೊಡುವಂತಹವರು ಯಾರನ್ನಾದರೂ ಕಳುಹಿಸುವಂತೆ ಕೇಳಿದೆ. ಅವಳಿಗೆ ಈ ಯೋಚನೆ ಹಿಡಿಸಿದರೂ ಅವಳು ಈ ರೀತಿಯ ಸೇವೆ ಮಾಡುವವರನ್ನು ಹುಡುಕುವುದು ಕಷ್ಟ, ಅದಕ್ಕೆ ಸಾಕಷ್ಟು ಸಮಯ ಬೇಕು ಎಂದಳು. ನಮಗೂ ಸಮಯ ಬೇಕಿತ್ತು, ತರಬೇತಿ ನೀಡಲು ಒಂದು ಜಾಗ ಬೇಕಿತ್ತು. ನಮ್ಮ ಶಾಲೆಯಿಂದ ಪಾಸಾದ ಹುಡುಗಿಯರಲ್ಲಿ ನಾವು ಆಯ್ಕೆ ಮಾಡಬೇಕಿತ್ತು. ಅವರಲ್ಲಿ ಹೆಚ್ಚು ಜನಕ್ಕೆ ಮುಂದೆ ಓದುವ ಆಸೆ ಇತ್ತು. ಈ ಕಾರಣದಿಂದ ನಾವು ನಮ್ಮ ಹುಡುಕಾಟ ವನ್ನು ವಿಕಲಾಂಗರಿಗೇ ಸೀಮಿತಗೊಳಿಸದೆ ಇತರರಿಗೂ ವಿಸ್ತರಿಸಿದೆವು. ೧೯೮೮ ರಲ್ಲಿ ನಾವು ಈ ಕಾರ್ಯಕ್ರಮವನ್ನು ಪ್ರಾರಂಭಿಸಿದೆವು. ಮೊದಲಿಗೆ

ಬಂದ ಟ್ರೈನರ್ ಲಿಜ್ ಹೊಯ್ಲೆ. ಪ್ರತಿ ಹೊಸ ಕಾರ್ಯದಂತೆ, ಇದರಲ್ಲೂ ಅನೇಕ ತೊಂದರೆಗಳು ಬಂದವು. ಬಹಳ ಜನ ತರಬೇತಿಯನ್ನು ಮುಂದುವರಿಸಲಿಲ್ಲ. ಹೆಚ್ಚು ಜನರಿಗೆ ಈ ವಿಷಯದ ಬಗ್ಗೆ ಅರಿವಿಲ್ಲದ್ದರಿಂದ ನಾವು ಅವರಿಗೆ ಮೊದಲಿಂದ ಎಲ್ಲವನ್ನೂ ಕಲಿಸಬೇಕಾಯಿತು. ಅವರಿಗೆ Physiotherapy ಎಂದರೆ ಏನು ಎಂಬುದೇ ಗೊತ್ತಿರಲಿಲ್ಲ.

ಐವಿಯ ಮಿತ್ರ ಫ್ಲಿಲೋಮಿನಾ ಅಮಲೋರ್ಪಾವ ಮಾರಿ ಎಂಬುವಳನ್ನು ನಮ್ಮಲಿಗೆ ತರಬೇತಿ ಕೊಡುವುದಕ್ಕಾಗಿ ಕಳುಹಿಸಿದಳು. ಅವಳಿಗೆ ನೀನು ಒಂದು ಪುಣ್ಯದ ಕೆಲಸ ಮಾಡುತ್ತೀಯ ಎಂದು ಮಾತ್ರ ಫ್ಲಿಲೋಮಿನಾ ಹೇಳಿದ್ದಳು. ಅಮಲೋರ್ಪಾವಗೆ ಫಿಸಿಯೋಥೆರಾಪಿ ಬಗ್ಗೆ ಏನೇನೂ ಗೊತ್ತಿರಲಿಲ್ಲ. ಅವಳು ಅದೇನೋ ಅಂಗ ಸಾಧನೆಗೆ ಸಂಬಂಧಪಟ್ಟಿದ್ದಿರಬಹುದೆಂದಿದ್ದಳು. ಅವಳಿಗೆ ಮಕ್ಕಳೆಂದರೆ ಬಹಳ ಇಷ್ಟ. ಆವಳು ಈ ಕೆಲಸವನ್ನು ಬಹಳ ಆಸೆಯಿಂದ ಎದುರು ನೋಡುತ್ತಿದ್ದಳು.ಅವಳು ಕೆಲಸಕ್ಕೆ ಸೇರಿದ ಮೊದಲದಿನ ಮಳೆಯಲ್ಲಿ ಚೆನ್ನಾಗಿ ನೆನೆದು ಬಂದಳು. ಅಲ್ಲಿ ಮಕ್ಕಳು ಚಾಪೆಯ ಮೇಲೆ ಮಲಗಿರುವುದು, ಅವರ ಹರಿದ ಜೋಡುಗಳು, ತೂತುಗಳಿರುವ ವಾಸನೆಯಿಂದ ಕೂಡಿದ ಕಾಲುಚೀಲಗಳು, ಇವೆಲ್ಲಾ ಅವಳಲ್ಲಿದ್ದ ಉತ್ಸಾಹವೆಲ್ಲಾ ಮಾಯವಾಯಿತು. ಆದರೆ, ಬಹು ಬೇಗ ಅವಳಿಗೆ ತಾನು ಕಾಲೇಜಿನಲ್ಲಿ ಕಲಿತದ್ದೆಲ್ಲಾ ಏನೂ ಪ್ರಯೋಜನವಿಲ್ಲ, ಜೀವನ ಎಂಬ ಕಾಲೇಜಿನಲ್ಲಿ ಕಲಿಯ ಬೇಕಾದದ್ದು ಬಹಳ ಇವೆ ಎಂಬುದರ ಅರಿವಾಯಿತು.ಸಾವಿರಾರು ಕಿಲೋ ಮೀಟರ್ ದೂರದಿಂದ ಬಂದಿದ್ದ ಈ ಸಮಾಜ ಸೇವಕಿಗೆ ತಾನು ಕಾಲೇಜಿನಲ್ಲಿ ವಿಕಲಾಂಗತೆಯ ಬಗ್ಗೆ ಓದಿದ್ದು, ಇಲ್ಲಿನ ವಿಕಲಾಂಗರ ಪ್ರಪಂಚದ ಸವಾಲುಗಳನ್ನು ಎದುರಿಸಲು ಎಷ್ಟು ಅಸಮರ್ಥ ಎಂಬುದು ತಿಳಿಯಿತು.

ಸಮಯವು ಕಳೆದಂತೆ ಅಮಲಾ ನಮ್ಮ ಚಟುವಟಿಕೆಗಳಿಗೆ ಸ್ಥಿರವಾದ ಒಂದು ಕಂಬದಂತೆ ನೆರವಾದಳು. ವಿಷಯವನ್ನು ಚೆನ್ನಾಗಿ ಕಲಿತ ಅವಳು ಇಂದು ಎ.ಪಿ.ಡಿ ಯಲ್ಲಿ ಆ ಇಲಾಖೆಗೆ ಮುಖ್ಯಸ್ಥೆಯಾಗಿದ್ದಾಳೆ. ಅವಳಿಗೆ ಬಂದ ಹೊಸತಿನಲ್ಲಿ ಇಂಗ್ಲೀಷಿನಲ್ಲಿ ಒಂದು ಪದವೂ ಗೊತ್ತಿರಲಿಲ್ಲ. ನಾನು ಅವಳನ್ನು ಸಂತ್ ಮಾರ್ಥಾ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಅಲ್ಲಿನ Chief Physiotherapistಭೇಟಿ ಮಾಡಿಸಿದಾಗ ಅವರು 'ಈ ರೀತಿ ಇಂಗ್ಲೀಷ್ ಬರದ ಹುಡುಗಿಯರು ಬಹಳ ದಿನ ಕೆಲಸದಲ್ಲಿ ಉಳಿಯುವುದಿಲ್ಲ' ಎಂದು ಹೇಳಿದ್ದು ಕೇಳಿ ಅವಳಿಗೆ ಆಶ್ಚರ್ಯ ಉಂಟು ಮಾಡಿತು. ಅವಳಿಗೆ ನಾನು ಆ ಕೊಠಡಿಯಲ್ಲಿ ಆ ಡಾಕ್ಟರ್ ಹೆಸರಿನ ನಂತರ ಬರೆದಿದ್ದ ಪದವಿಗಳನ್ನು ತೋರಿಸಿ, ಅವಳೂ ಆ ರೀತಿ ಓದಿ ಪದವೀಧರಳಾಗಬೇಕೆಂಬುದೇ ನನ್ನ ಇಚ್ಛೆ ಎಂದು ಹೇಳಿದೆ. ಅವಳು ಬಹಳ ಹೆದರಿಕೊಂಡಳು.

ಇಂದು, ಆ ದಿನ ಡಾಕ್ಟರ್ ಅವಳಿಗೆ ಕೊಟ್ಟ Anatomy ಪುಸ್ತಕವೇ ಅವಳ Bible ಆಗಿದೆ. ನಮ್ಮಲ್ಲಿ ತರಬೇತಿ ಪಡೆದ ಅನೇಕ ಟ್ರೈನೀಗಳು ಇಂದು ಆಸ್ಪತ್ರೆಗಳಲ್ಲಿ ಕೆಲಸಮಾಡುತ್ತಿದ್ದಾರೆ. ನಾವು ಅವರಿಗೆ Physiotherapy ಎಂದರೆ ಅವರಲ್ಲಿದ್ದ ತಪ್ಪು ಕಲ್ಪನೆಗಳನ್ನು ಹೋಗಿಸಿ ಅವರೂ ಅದನ್ನು ಕಲಿಯಬಹುದು ಎಂಬುದನ್ನು ನಂಬಿಸಿದ್ದೇವೆ. ಎ.ಪಿ.ಡಿ ಯಲ್ಲಿ ನಾವು ಅವರಿಗೆ ಮಿಕ್ಕ ಪಠ್ಯ ಕ್ರಮಗಳಲ್ಲಿ ಕಲಿಸುವುದಕ್ಕಿಂತ ಹೆಚ್ಚಾಗಿ ಕಲಿಸಿ, ಅವರು ಎಲ್ಲಾ ವಿಧವಾದ ವಿಕಲಾಂಗತೆಯನ್ನೂ ಚಿಕಿತ್ಸೆ ಮಾಡುವುದಕ್ಕೆ ತರಬೇತಿ ನೀಡಿದ್ದೇವೆ. ಇದು ಅವರಿಗೆ ಒಂದು ದೊಡ್ಡ ಲಾಭವಾಯಿತು. ನಾವು ನಮ್ಮ ದೂರ ಸಂಪರ್ಕದ (out reach) ಕಾರ್ಯದಲ್ಲಿ ಚಿಕಿತ್ಸೆಯ ಅಂಗವನ್ನೂ ಸೇರಿಸಿದೆವು. ವೈದ್ಯರು ವಿಕಲಾಂಗ ಮಕ್ಕಳ ಮನೆಗಳಿಗೆ ಭೇಟಿ ಕೊಟ್ಟು ಅವರ ಸಲಕರಣೆಗಳನ್ನು ಹೇಗೆ ತೊಡಿಸಬೇಕು ಎಂಬುದನ್ನು ಅವರ ತಂದೆ ತಾಯಿಗಳಿಗೆ ಹೇಳಿಕೊಡುತ್ತಿದ್ದರು. ತಂದೆ ತಾಯಿಗಳ ತಿಳುವಳಿಕೆ ಹೆಚ್ಚಿದಂಗೆ ಇಡೀ ಸಮುದಾಯಕ್ಕೇ ಈ ತಿಳುವಳಿಕೆಯು ಹರಡಿ ಎಲ್ಲರೂ ವಿಕಲಾಂಗ ಮಕ್ಕಳ ನೆರವಿನ ಜವಾಬ್ದಾರಿಯನ್ನು ತೆಗೆದುಕೊಳ್ಳಲಾರಂಭಿಸಿದರು. ಕ್ರಮೇಣ ಇದು ಅಕ್ಕ ಪಕ್ಕದ ರಾಜ್ಯಗಳಿಗೂ ಹರಡಿತು ಮತ್ತು ಇದರ ಗುಣವನ್ನು ನಾವು ಕಾಣ ತೊಡಗಿದೆವು.

ಎಲ್ಲರಿಗೂ trained professionalsಗಳು ಈ ಕೆಲಸವನ್ನು ಮಾಡಬೇಕು ಎಂಬ ಆಸೆ ಇರುತ್ತದೆ. ಆದರೆ, ಈ ರೀತಿ ವಿಕಲಾಂಗರೊಡನೆ ಕೆಲಸ ಮಾಡಲು ಬೇಕಾದ ಮನೋಸ್ಥಿತಿಯೇ ಬೇರೆ. Trained professionalsಗಳು ಈ ರೀತಿಯ ಹಿನ್ನೆಲೆಯಲ್ಲಿ ಕೆಲಸ ಮಾಡಲು ಹಿಂಜರಿಯುತ್ತಾರೆ. ನಾವು ಪ್ರತಿಯೊಂದು ಮಗುವನ್ನೂ ಆಸ್ಪತ್ರೆಗೆ ಕರೆದುಕೊಂಡು ಹೋಗಲಾಗುವುದಿಲ್ಲ. ಅನೇಕರಿಗೆ ಅವರಿರುವ ಸ್ಥಳದಲ್ಲೇ ನೆರವು ನೀಡಬೇಕಾಗುತ್ತದೆ. ಫಿಸಿಯೋಥೆರಾಪಿ ಮತ್ತು ಆರ್ಥೋಟಿಕ್ ಸೇವೆಗಳು ಒಂದಕ್ಕೊಂದು ಪೂರಕವಾಗಿ ವಿಕಲಾಂಗರ ಸೇವೆಯಲ್ಲಿ ಆಧಾರ ಸ್ಥಂಭವಾಗಿವೆ.

೧೯೮೪ – ೮೫ ರ ವೇಳೆಗೆ ನಮ್ಮ ಸಂಸ್ಥೆ ಮತ್ತು ಅದರ ದೂರ ಸಂಪರ್ಕದ (out reach) ಕಾರ್ಯಕ್ರಮವು ಚೆನ್ನಾಗಿ ಬೇರೂರಿಕೊಂಡಿದ್ದವು. ಈಗ ನಾವು ಈ ಸೇವೆಗಳನ್ನು ಗ್ರಾಮ ಪ್ರದೇಶಗಳಿಗೆ ವಿಸ್ತರಿಸಬೇಕಿತ್ತು. ನಾವು ಕೋಲಾರ ಜಿಲ್ಲೆಯಲ್ಲಿ ಒಂದು ಸಾಮೂಹಿಕ ಪುನಃಶ್ಚೇತನ ಕಾರ್ಯಕ್ರಮವನ್ನು ಏರ್ಪಡಿಸಿದ್ದೆವು. ನಮ್ಮ ಯುವ ಟ್ರೈನೀಗಳು ೧೦ ಗ್ರಾಮಗಳಿಗೆ ಹೋಗಿ ಅಲ್ಲಿನ ವಿಕಲಾಂಗರು ಮತ್ತು ಅವರಿಗೆ ನಾವು ಯಾವ ವಿಧದಲ್ಲಿ ನೆರವಾಗ ಬಹುದು ಎಂಬುದನ್ನು ಸಮೀಕ್ಷೆ ನಡೆಸಿದ್ದರು. ಅವರ ವರದಿಯ ಪ್ರಕಾರ ವಿಕಲಾಂಗತೆಯನ್ನು ಉಂಟು ಮಾಡುವ ಕಾರಣಗಳನ್ನು ತಡೆಗಟ್ಟುವುದು ಮುಖ್ಯವೆಂದು

ತಿಳಿಯಿತು. ಆ ಸಮಯದಲ್ಲಿ ಶ್ರೀ. ಅರಸ್ ನಮ್ಮ ಕಾರ್ಯದರ್ಶಿಗಳಾಗಿದ್ದರು. ಅವರು ಬಹಳ ಕ್ರಿಯಾಶೀಲ ವ್ಯಕ್ತಿಯಾಗಿದ್ದರು. ಅವರು ನಮಗೆ ಹೊಸ ಮಾಹಿತಿಯನ್ನು ಕೊಡುವುದು ಮತ್ತು ಜನ ಸಂಪರ್ಕವನ್ನು ಬೆಳೆಸುವುದರಲ್ಲಿ ನಿರತರಾಗಿರುತ್ತಿದ್ದರು. ಎ.ಪಿ.ಡಿಯ ಅತಿ ಹಳೆಯ ಸದಸ್ಯರಾದ ಇವರು ಸ್ವತಃ ವಿಕಲಾಂಗರಾಗಿದ್ದರು. ನಮ್ಮ ಸಂಸ್ಥೆಗೆ ಬಹಳ ಸೇವೆ ಮಾಡಿರುವ ಇವರನ್ನು ಕಂಡರೆ ಎಲ್ಲರಿಗೂ ಅಪಾರ ಗೌರವವಿತ್ತು. ನಿವೃತ್ತರಾದ ಮೇಲೂ ಇವರು ಎ.ಪಿ.ಡಿ ಗೆ ಸಹಾಯ ಮಾಡುತ್ತಲೇ ಇದ್ದರು. ೨೦೧೧ ರಲ್ಲಿ ಇವರು ನಮ್ಮಿಂದ ಅಗಲಿದರು. ಅಲ್ಲಿಯವರೆಗೆ ಇವರ ಸಹಾಯ ಎ.ಪಿ.ಡಿ ಗೆ ದೊರೆಯುತ್ತಲೇ ಇತ್ತು. ಅರಸ್ ಅವರು ಕರ್ನಾಟಕ ಸರ್ಕಾರದ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದ್ದರು. ಸಂತು ರಾಮಸ್ವಾಮಿಯರು ಕರ್ನಾಟಕ ಸರ್ಕಾರಕ್ಕೆ ಬರೆದ ಪತ್ರವನ್ನು ನೋಡಿದ ಅರಸ್ ಅವರಿಗೆ ಅದರ ಮಹತ್ವವು ತಿಳಿಯಿತು ಮತ್ತು ಎ.ಪಿ.ಡಿ ಯ ಚಟುವಟಿಕೆಗಳಿಗೆ ಒಂದು ಹೊಸ ದಿಶೆ ತೆರೆಯಿತು.

ಸಂತು ರಾಮಸ್ವಾಮಿ ಒಬ್ಬ ಬ್ರಹ್ಮಚಾರಿ, ಕೋಲಾರ ಜಿಲ್ಲೆಯ ಕಂಟಂಪಲ್ಲಿ ಎಂಬ ಸ್ಥಳದಲ್ಲಿ ಒಂದು ದೊಡ್ಡ ಜಮೀನಿನಲ್ಲಿ ಇದ್ದ ಒಂದು ಹಳೆಯ ಶಿಥಿಲವಾದ ಮನೆಯಲ್ಲಿ ವಾಸಿಸುತ್ತಿದ್ದನು. ಇವನು ಯುವಕರಿಗೆ ತನ್ನ ಮನೆಯಲ್ಲಿ ಉಳಿದುಕೊಳ್ಳಲು ಸ್ಥಳ ಕೊಟ್ಟು, ಅವರು ವಿದ್ಯಾಭ್ಯಾಸ ಮುಗಿಸಲು ನೆರವಾಗುತ್ತಿದ್ದನು. ಅವನು ಬೇಂಗಳೂರಿಗೆ ಸ್ಥಳಾಂತರಿಸಿದಾಗ ಅವನ ಈ ಮನೆಯನ್ನು ಸರ್ಕಾರಕ್ಕೆ ಕೊಟ್ಟು ಅದನ್ನು ವಿದ್ಯಾಭ್ಯಾಸಕ್ಕೆ ಸಂಬಂಧಪಟ್ಟ ಉಪಯೋಗಕ್ಕೆ ಮಾತ್ರ ಮೀಸಲು ಎಂದು ತಿಳಿಸಿದ್ದನು. ಸರ್ಕಾರ ಏನೂ ಮಾಡದಿದ್ದರಿಂದ ಅವನು ಈಗ ಸರ್ಕಾರಕ್ಕೆ ಆ ಜಾಗವನ್ನು ತನಗೆ ಹಿಂದಿರುಗಿಸಿ ಅಥವಾ ಅದನ್ನು ಉಪಯೋಗಿಸಲು ತಕ್ಕ ಧರ್ಮ ಸಂಸ್ಥೆಗೆ ನೀಡಿ ಎಂದು ಬರೆದಿದ್ದನು. ಆ ಕಟ್ಟಡವು ಶಿಥಿಲವಾಗಿ ಜಮೀನಿನಲ್ಲಿ ಕಾಡಿನಂತೆ ಗಿಡಗಳು ಬೆಳೆದಿದ್ದವು. ನಮಗೆ ಎರಡೂ ಹಿಡಿಸಿದವು. ಈ ಸ್ಥಳವನ್ನು ಸರ್ಕಾರದಿಂದ ಪಡೆಯಲು ಬೇಕಾದ ಕಾಗದ ಪತ್ರ ವ್ಯವಹಾರಗಳಲ್ಲಿ ಸುಮಾರು ಒಂದು ವರ್ಷ ಹಿಡಿಯಿತು. ೧೯೮೭ ರಲ್ಲಿ ನಾವು ಗಲ್ಗಿ ಎನ್ನುವರನ್ನು ಇಲ್ಲಿನ ಕೆಲಸಕ್ಕೆ ನೇಮಿಸಿದೆವು. 'ಆನಂದ ಆಶ್ರಮ' ತಯಾರಾಗ ತೊಡಗಿತು.

ಈ ವೇಳೆಗೆ UNICEF ನಿಂದ ಒಬ್ಬಳು ನನ್ನನ್ನು ಭೇಟಿಯಾಗಲು ಬಂದಳು. ಅವರಿಗೆ ಗ್ರಾಮೀಣ ಪ್ರದೇಶಗಳಲ್ಲಿ ೩ ವರ್ಷಗಳ ಕಾಯಿಲೆಗಳ ನಿರೋಧ ಕಾರ್ಯಕ್ರಮ ಮಾಡುವ ಸಂಸ್ಥೆಗಳಿಗೆ ಧನಸಹಾಯ ನೀಡುವ ಯೋಜನೆ ಇತ್ತು. ನಾವು ಕೆಲವು ಯುವತಿಯರನ್ನು ಕೆಲಸಕ್ಕೆ ಸೇರಿಸಿಕೊಂಡು, ಈ ರೀತಿಯ ಗ್ರಾಮೀಣ ಪ್ರದೇಶಗಳಲ್ಲಿ ೫

ವರ್ಷಕ್ಕಿಂತ ಚಿಕ್ಕ ಮಕ್ಕಳಿಗೆ ಕಾಯಿಲೆ ಬರದಂತೆ ದೇವಿ ಹಾಕಿಸಿರುವ ಮಾಹಿತಿಯನ್ನು ಕಲೆಹಾಕಿದೆವು. ಮೊದಲಿಗೆ ನಾವು ೧೦ ಹಳ್ಳಿಗಳಿಗೆ ಹೋಗಿ ಅಲ್ಲಿನ ಮಾಹಿತಿಯನ್ನು ಸಂಗ್ರಹಿಸಿದೆವು. ಅಲ್ಲಿ ಯಾರೂ ದೇವಿ ಹಾಕಿಸುವುದರ ಬಗ್ಗೆ ಆಸಕ್ತಿಯನ್ನು ತೋರಿಸಸಿರಲಿಲ್ಲ. ಈ ಮಾಹಿತ್ರಿಯನ್ನು ಗಲ್ಲಿಯವರು ಸ್ವತಃ ಸಂಗ್ರಹಿಸಿ ಚೆನ್ನಾಗಿ ದಾಖಲಿಸಿದ್ದರು. ನಾವು ಪ್ರಾಥಮಿಕ ಸ್ವಾಸ್ಥ್ಯ ಕೇಂದ್ರಗಳಿಂದ ಅಲ್ಲಿನ ಸ್ವಾಸ್ಥ್ಯ ಸೇವಕರನ್ನು ಈ ಹಳ್ಳಿಗಳಿಗೆ ಕರೆದುಕೊಂಡು ಹೋಗಿ ಅಲ್ಲಿನ ಮಕ್ಕಳಿಗೆಲ್ಲಾ ದೇವಿ ಹಾಕಿಸಿದೆವು. ಮೂರು ವರ್ಷಗಳಲ್ಲಿ ಸುತ್ತಮುತ್ತಲಿನ ಎಲ್ಲಾ ಹಳ್ಳಿಗಲ್ಲೂ ಮಕ್ಕಳಿಗೆ ದೇವಿ ಹಾಕಿಸಿ ಆಗಿತ್ತು. ನಾವು ಈ ಕೆಲಸಗಳ ಜೊತೆ ಜೊತೆಗೆ ಕಂಟಂಪಲ್ಲಿಯ ಸ್ಥಳದ ನವೀಕರಣದ ಕೆಲಸವನ್ನೂ ಮಾಡುತ್ತಿದ್ದೆವು. ಅಲ್ಲಿನ ಕಟ್ಟಡ ಮತ್ತು ಸುತ್ತುಮುತ್ತನ್ನು ಸರಿಪಡಿಸಿಯಾಗಿತ್ತು.

UNICEFನ ಪ್ರಾಜೆಕ್ಟ್ ಪ್ರಾರಂಭವಾದ ನಂತರ ನಾವು ಮಕ್ಕಳನ್ನು ನೋಡಿಕೊಳ್ಳುವುದು, ಅವುಗಳ ಕಲಿಕೆ ಮತ್ತು ಅವುಗಳಿಗೆ ವೈದ್ಯಕೀಯ ನೆರವು ನೀಡುವಂತ ಒಂದು 'ಅಂಗನವಾಡಿ' ಯನ್ನು ಪ್ರಾರಂಭಿಸಿದೆವು. ಇದರೊಂದಿಗೆ ನಮ್ಮ ಕೆಲಸವು ಹೆಚ್ಚಿ ವಿಸ್ತೃತಗೊಂಡಿತು. ಚಿಂತಾಮಣಿ ಮತ್ತು ಶ್ರೀನಿವಾಸಪುರ ತಾಲೂಕುಗಳಲ್ಲಿ ನಾವು ೨೬೨ ಹಳ್ಳಿಗಳಲ್ಲಿ ನಮ್ಮ ಕೆಲಸ ನಡೆಯುತ್ತಿತ್ತು. ನಾವು ೨೦೦೦ಕ್ಕೂ ಹೆಚ್ಚು ಮಕ್ಕಳಿಗೆ ವೈದ್ಯಕೀಯ ನೆರವು ನೀಡಿ, ತರಬೇತಿ ಕೊಟ್ಟು, ಶಾಲೆಗೆ ಹೋಗುವಂತೆ ಮಾಡಿದ್ದೆವು. ಕ್ರಮೇಣ ಬೆನ್ನು ಹುರಿಗೆ ಏಟುಬಿದ್ದವರ ಚಿಕಿತ್ಸೆ, ಮಾನಸಿಕ ಸಮಸ್ಯೆಗಳು, ಕಿವಿಡು ಇತ್ಯಾದಿಗಳನ್ನೂ ನಮ್ಮಸೇವೆಯಲ್ಲಿ ಸೇರಿಸಿಕೊಂಡೆವು.

ನನಗೆ ಈ ಮಕ್ಕಳಿಗೆ ೧೦ನೇ ತರಗತಿಯ ಪರೀಕ್ಷೆಗೆ ಬೇಕಾದ ತರಬೇತಿಯನ್ನು ಕೊಡಿಸಬೇಕು ಎಂಬ ಆಸೆ ಇತ್ತು. ಈ ತರಬೇತಿಯಿಂದ ಅನೇಕ ಮಕ್ಕಳು ಪ್ರಯೋಜನ ಪಡೆದು, ಓದನ್ನು ಮುಂದುವರಿಸಿದರು. ಇನ್ನೂ ಅನೇಕರು ಈ ತರಬೇತಿಯನಂತರ ಕೆಲಸಕ್ಕೆ ಸೇರಿಕೊಂಡರು. ಅನೇಕರು ಬೆಂಗಳೂರಿಗೆ ಬಂದು ಎ.ಪಿ.ಡಿ ಯಲ್ಲಿ ಕಸಬಿಗೆ ಸಂಬಂಧಪಟ್ಟ ತರಬೇತಿಯನ್ನು ಪಡೆಯಲು ಸೇರಿಕೊಂಡರು. ನಾವು ಅಲ್ಲಿ ಮಹಿಳೆಯರಿಗೆ ಹೊಲಿಗೆಯನ್ನು ಹೇಳಿಕೊಡುತ್ತಿದ್ದೆವು. ಇದರಿಂದ ಅವರು ಮುಂದಕ್ಕೆ ಸ್ವಯಂ ಸಂಪಾದನೆ ಮಾಡಲು ಸಾಧ್ಯವಾಗುತ್ತಿತ್ತು. ಈ ಅನುಭವವು ಎ.ಪಿ.ಡಿ.ಗೆ ಇದೇ ರೀತಿ ಇತರ ಗ್ರಾಮೀಣ ಭಾಗಗಳಲ್ಲಿಯೂ ಸೇವೆಗಳನ್ನು ಕೈಗೊಳ್ಳುವ ಭರವಸೆಯನ್ನು ನೀಡಿತು.

ನನ್ನನ್ನು ಬಹಳ ಜನ ನನಗೆ ಈ ಎಲ್ಲಾ ಚಟುವಟಿಕೆಗಳನ್ನು ಮಾಡಬೇಕೆಂದು ಎ.ಪಿ.ಡಿಯನ್ನು ಮತ್ತು ಶ್ರದ್ಧಾಂಜಲಿ ಶಾಲೆಯನ್ನು ಪ್ರಾರಂಭಿಸುವುದಕ್ಕೆ ಮುಂಚೆಯೇ ತೋಚಿತ್ತೇ ಎಂದು ಕೇಳುತ್ತಾರೆ? ನನಗೆ ಒಂದು ರೀತಿ ಅಸ್ಪಷ್ಟವಾಗಿ ಏನು ಬೇಕಾಗಬಹುದು ಎಂಬ

ಯೋಚನೆ ಇತ್ತು, ಆದರೆ ಅದು ಇದೇ ರೀತಿ, ಒಂದೇ ಸಂಸ್ಥೆಯಲ್ಲಿ ಆಗುತ್ತದೆ ಎಂದು ತಿಳಿದಿರಲಿಲ್ಲ. ಅವೆಲ್ಲಾ ಒಂದೊಂದಾಗಿ, ತಾನಾಗಿ ತೆರೆದುಕೊಂಡಾಗ, ನಾವು ನಮ್ಮ ಅನುಭವದ ಜೊತೆಗೆ ನಮ್ಮ ಯೋಚನೆಗಳನ್ನು ಜೋಡಿಸಿ, ಅವುಗಳನ್ನು ಒಂದಾಗಿ ಹೆಣೆದು ವಿಕಲಾಂಗರಿಗೆ ಒಂದು ಸಮಗ್ರವಾದ ಪರಿಹಾರಒದಗಿಸುವ ಸಂಸ್ಥೆಯಾಗಿ ಬೆಳೆದೆವು. ಇದಕ್ಕೆ ಬಹಳ ಧೈರ್ಯವೂ, ಸ್ಥೈರ್ಯವೂ ಬೇಕಾಯಿತು. ಆರಂಭದಲ್ಲಿ ಅನೇಕ  ಭಯಗಳು, ಸಂಶಯಗಳು, ವಿಘ್ನಗಳು ಎದುರಾದವು. ಇವನ್ನೆಲ್ಲಾ ಎದುರಿಸಿದಮೇಲೆ ಎಲ್ಲವೂ ಯಶಸ್ವಿಯಾಯಿತು.

ನನಗೆ ಎ.ಪಿ.ಡಿ ಒಂದು ದೊಡ್ಡ jigsaw puzzleನಂತೆ. ಎಲ್ಲಾ ಚೂರುಗಳನ್ನೂ ಸರಿಯಾಗಿ ಜೋಡಿಸಿದರೆ ಅವು ಒಂದು ಸುಂದರ ಚಿತ್ರವನ್ನು ಉಂಟು ಮಾಡುತ್ತವೆ. ಈ ಜೋಡಿಸುವ ಕೆಲಸವು ಇನ್ನೂ ಆಗುತ್ತಿದೆ. ಜೊತೆ ಜೊತೆಗೆ puzzleಕೂಡ ಬೆಳೆಯುತ್ತಿದೆ. ಇನ್ನೂ ಹೆಚ್ಚಿನ ಚೂರುಗಳು ಸೇರಿಕೊಳ್ಳುತ್ತಿವೆ. ಇವುಗಳಿಂದ ಯಾವರೀತಿಯ ಚಿತ್ರವು ಹೊರಬರುತ್ತದೆ ಎಂಬುದು ಅಲ್ಲಿನ ಜನರ ಮೇಲೆ ಆಧರಿಸಿದೆ. ಎಲ್ಲಕ್ಕಿಂತ ಮುಖ್ಯವಾಗಿ ನಾವು ಯೋಚಿಸಿರುವಂತೆ ಎಲ್ಲವೂ ನಡೆಯುತ್ತದೆ ಎಂಬ ನಂಬಿಕೆ ನಮಗೆ ಇರಬೇಕು.

ನಾನು ನಮ್ಮ ಸಂಸ್ಥೆಯ ಜೊತೆ ಬಹಳ ವರ್ಷಗಳ ಸಂಪರ್ಕ ಹೊಂದಿದ್ದರಿಂದ ಅದರಲ್ಲಿ ಜರುಗಿದ ಅನೇಕ ಒಳ್ಳೆಯ ಕೆಲಸಗಳು ನನ್ನಿಂದ ಎಂದು ಅನೇಕರು ಭಾವಿಸುತ್ತಾರೆ. ಆದರೆ ಇದು ಸರಿಯಲ್ಲ. ಮೊದಲಿನಿಂದ ಅನೇಕರು ನನಗೆ ಮತ್ತು ನಮ್ಮ ಕಾರ್ಯಕ್ಕೆ ನೆರವಾಗಿದ್ದಾರೆ. ಇವರು ಎಲ್ಲರ ಕಣ್ಣಿಗೂ ಬಿದ್ದಿಲ್ಲ. ಕೆಲವರು ಇಂದು ನಮ್ಮೊಡನೆ ಇದ್ದಾರೆ, ಕೆಲವರು ನಮ್ಮನ್ನು ಬಿಟ್ಟು ಅಗಲಿದ್ದಾರೆ. ನಾನು ಅವರೆಲ್ಲರ ಹೆಸರುಗಳನ್ನು ಇಲ್ಲಿ ಪ್ರಸ್ತಾಪಿಸಲಾಗುವುದಿಲ್ಲ, ಯಾಕೆಂದರೆ ಅವರ ಸಂಖ್ಯೆ ಅಷ್ಟು ದೊಡ್ಡದು. ನಾನು ಕೈಗೊಂಡ ಪ್ರತಿಯೊಂದು ಕಾರ್ಯದಲ್ಲೂ ಇವರೆಲ್ಲರ ತನ್ಮಯತೆ ಮತ್ತು ಕಾರ್ಯನಿಷ್ಠೆ ನನ್ನ ಯಶಸ್ಸಿಗೆ ಕಾರಣವಾಗಿ ನನ್ನ ಕನಸುಗಳನ್ನು ನನಸಾಗಿಸಿತು. ನಕ್ಷತ್ರಗಳಂತೆ ಉಜ್ವಲವಾದ ಅವರೆಲ್ಲಾ ಸೇರಿ ಒಂದು ಒಳ್ಳೆಯ team workನಿಂದ ಕೆಲಸ ಮಾಡಿದರು. ವಿಷಾದದ ಸಂಗತಿ ಎಂದರೆ ಇಂದು ನನಗೆ ಕೆಲವರ ಹೆಸರುಗಳು ಅಥವಾ ಮುಖಗಳು ಜ್ಞಾಪಕಕ್ಕೆ ಬರದೆ ಇರಬಹುದು.  ನಮ್ಮ ಸಂಸ್ಥೆಯ ಎಲ್ಲಾ ಸಾಧನೆಗಳ ಹಿಂದೆ ಇವರುಗಳ ಸದ್ದಿಲ್ಲದ ದುಡಿಮೆಯೇ ಕಾರಣವಾಗಿರುತ್ತದೆ.

ನಾನು ನಮ್ಮ ಶಾಲೆಯ ಬೋಧಕರಿಗೆ ಹೆಚ್ಚಿನ ಗೌರವವನ್ನು ಸಲ್ಲಿಸುತ್ತೇನೆ. ನಮ್ಮ ಮೊದಲನೆಯ ಬೋಧಕಿ ಶ್ರೀಮತಿ ಮಾಥ್ಯೂ. ಅವರು ನಮ್ಮ ಸಂಸ್ಥೆಯಿಂದ ಬೀಳ್ಕೊಂಡ ಮೇಲೆ ನನಗೆ ಅವರ ಸಂಪರ್ಕವೇ ಇರಲಿಲ್ಲ. ಮುವತ್ತೈದು ವರ್ಷಗಳನಂತರ ಒಂದು

ದಿನ, ನಾನು ನಮ್ಮ ಆವರಣದಲ್ಲಿರುವ ಸಪೋಟಾ ಮರದಡಿ ಕುಳಿತಿರುವಾಗ ಇವಳು ನನ್ನನ್ನು ಬಂದು ಭೇಟಿ ಮಾಡಿದಳು. ನಾವು ಬಹಳಹೊತ್ತು ಹಳೆಯ ದಿನಗಳನ್ನು ಮೆಲಕು ಹಾಕುತ್ತಾ ಕಳೆದೆವು. ನಮ್ಮ ಶಾಲೆಯ ಬೋಧಕರು ನಮಗೆ ಅಲ್ಲಿ ಕೆಲಸ ಮಾಡುವರಿಗಿಂತ ನಮ್ಮ ಆಪ್ತ ಮಿತ್ರರಂತೆ ಆಗಿದ್ದರು. ನಮ್ಮ ಸಮಾಜ ಸೇವಕರು ಕೊಳಚೆ ಪ್ರದೇಶಗಳಲ್ಲಿ ಕೆಲಸಮಾಡಿ ಮಧ್ಯಾಹ್ನದ ವೇಳೆಗೆ ದಣಿದು ಬರುತ್ತಿದ್ದರು. ನಾವೆಲ್ಲರೂ ಊಟದ ಬಿಡುವಿನಲ್ಲಿ ಒಟ್ಟಿಗೆ ಕುಳಿತು ಅವರ ಕಥೆಗಳನ್ನು ಕೇಳುತ್ತಿದ್ದೆವು. ಈ ಸಮಾಜ ಸೇವಕರಲ್ಲಿ ಕೆಲವರು ಇಂದಿಗೂ ನನ್ನೊಡನೆ ಸಂಪರ್ಕದಲ್ಲಿದ್ದಾರೆ. ನಮ್ಮ ದೂರ ಸಂಪರ್ಕದ ಯೋಜನೆಯಲ್ಲಿ ಕೆಲಸ ಮಾಡಿದ ಅನೇಕರು ತಮ್ಮ ತಮ್ಮ ಕ್ಷೇತ್ರಗಳಲ್ಲಿ ಆ ಕೆಲಸವನ್ನು ಮುಂದುವರಿಸುತ್ತಿದ್ದಾರೆ. ನಾವು ಇಂದು ಸಂಧಿಸಿದಾಗ ಅವರುಗಳು ನಾನು ಅಂದು ಎಷ್ಟು ಖಡಕ್ ಆಗಿದ್ದೆ, ಅವರೆಲ್ಲಾ ನನ್ನ ಕಂಡು ಎಷ್ಟು ಹೆದರುತ್ತಿದ್ದರು, ಹೇಗೆ ನನ್ನನ್ನು ಒಪ್ಪಿಸುವುದು ಬಹಳ ಕಷ್ಟ ಅನಿಸುತ್ತಿತ್ತು ಎಂಬುದನ್ನು ಜ್ಞಾಪಿಸಿಕೊಳ್ಳುತ್ತಾರೆ.

ಅಮಲಾ ಮತ್ತು ಸಾಮ್ಯುಯೆಲ್ ಇವರುಗಳು Physiotherapy ಮತ್ತು orthotics ಕ್ಷೇತ್ರದ experts. ಇವರುಗಳು ಪುಟ್ಟ ವಿಶ್ವ ಕೋಶದಂತೆ ಎಲ್ಲಾ ವಿಷಯನ್ನೂ ತಿಳಿದುಕೊಂಡಿದ್ದರು. ಇವರಿಗೆ ಏ.ಪಿ.ಡಿ ಇಂದ ಹೊರಬಂದ ಎಲ್ಲಾ ಮಕ್ಕಳ ಬಗ್ಗೆಯೂ ಜ್ಞಾಪಕವಿದೆ. ಇವರೇನಾದರೂ ಪುಸ್ತಕ ಬರೆದರೆ ಅದರಲ್ಲಿ ಬಹಳ ಸ್ವಾರಸ್ಯಕರವಾದ ಕಥೆಗಳಿರುತ್ತವೆ.

* * *

# ನಿರ್ಣಯಗಳು ಮತ್ತು ಬಹುಮಾನಗಳು

ಇಷ್ಟು ವರ್ಷಗಳು ಕಳೆದ ಮೇಲೆ ನನಗೆ ಯಾವ ವಿಧವಾದ ಅಸಮಾಧಾನವಾಗಲಿ, ಅಸಂತೋಷವಾಗಲಿ ಇಲ್ಲ. ನನ್ನ ಜೀವನದ ಈ ಹಂತದಲ್ಲಿ ನನಗೆ ಸರಿ ತಪ್ಪುಗಳ ಗೊಡವೆ ಇಲ್ಲ ಮತ್ತು ನಾನು ಮತ್ತೊಬ್ಬರ ಬಗ್ಗೆ ಸರಿ ತಪ್ಪು ಎಂಬ ತೀರ್ಪು ಕೊಡಲು ಹೋಗುವುದು ಇಲ್ಲ. ಜೀವನದಲ್ಲಿ ಘಟನೆಗಳು ತಾನಾಗಿ ಜರಗುತ್ತವೆ, ಅವುಗಳಬಗ್ಗೆ ನಮಗೆ ನಿಯಂತ್ರಣವಿರುವುದಿಲ್ಲ ಮತ್ತು ಅವು ಯಾಕೆ ಹಾಗೆ ಆಗುತ್ತವೆ ಎಂಬ ಅರಿವೂ ಇರುವುದಿಲ್ಲ. ವ್ಯಕ್ತಿಗಳೊಡನೆ ಮತ್ತು ಸಂಸ್ಥೆಗಳೊಡನೆ ಸಂಬಂಧಗಳು ಆಳವಾಗಿ ಬೆಳೆಯುತ್ತವೆ, ಗೊಂದಲಮಯವಾಗುತ್ತವೆ, ಭಾವನೆಗಳು ಶಕ್ತಿಶಾಲಿಯಾಗುತ್ತವೆ. ಈ ನೋವು ನಲಿವಿನ ಜಾಲದಿಂದ ಹೊರಗೆ ಬಂದು ನೋಡಿದರೆ, ನಾವೇ ನಮ್ಮ ಜೀವನದ ಪ್ರೇಕ್ಷಕರಾಗಿ, ಒಂದು ಸಿನೆಮಾ ನೋಡಿದಂತೆ, ಒಂದು ಬೇರೆಯೇ ದೃಷ್ಯವನ್ನು ನೋಡುತ್ತೇವೆ. ಈ ರೀತಿಯ, ನಮ್ಮನ್ನು ಬೇರ್ಪಡಿಸುವ ಸುರಂಗದಿಂದ ನಾವು ನಮ್ಮ ಜೀವನದಲ್ಲಿ ನಡೆದ ಘಟನೆಗಳು ಮತ್ತು ನಮ್ಮ ಭಾವನೆಗಳನ್ನು ಅವಲೋಕಿಸಿದರೆ, ಅವು ಯಥಾರ್ಥವಾಗಿ ಏನು ಎಂಬುದು ನಮಗೆ ಸ್ಪಷ್ಟವಾಗುತ್ತದೆ. ಅನೇಕಸಲ ಈ ರೀತಿ ನಾವು ಹಿಂದಿರುಗಿ ನೋಡಿದಾಗನಾವು ಭಾವುಕತೆಯಿಂದ ಎಷ್ಟು ಬುದ್ಧಿಹೀನರಾಗಿ ವರ್ತಿಸಿದೆವು, ಹೇಗೆ ವ್ಯಾಮೋಹಕ್ಕೆ ಬಲಿಯಾದೆವು ಎಂದು ತಿಳಿಯುತ್ತದೆ. ಆದರೆ, ಈ ರೀತಿಯ ಸಂತಾಪ ನಮ್ಮ ಜೀವನದಲ್ಲಿ ನಡೆದ ಅನೇಕ ಒಳ್ಳೆಯ ಘಟನೆಗಳನ್ನು ಕಿರಿದಾಗಿಸಿದಂತಾಗುತ್ತದೆ.

ಇಂದಿಗೂ ನಾನು ವೆಂಕಿಯನ್ನು ನನ್ನ ಜೀವನದಲ್ಲಿಬಂದ ಒಬ್ಬ ಮುಖ್ಯ ಗಂಡಸಿನಂತೆ ಭಾವಿಸುತ್ತೇನೆ. ನನ್ನ ತಂದೆ ತಾಯಿ, ನನ್ನ ಅಣ್ಣತಮ್ಮಂದಿರು, ಅಕ್ಕ ತಂಗಿಯರುಗಳಂತೆ ಅವನೂ ನನ್ನ ಜೀವನದಲ್ಲಿ ಒಂದು ಮುಖ್ಯ ಪಾತ್ರವನ್ನು ನಿಭಾಯಿಸಿದ್ದಾನೆ. ನಾನು ಹಿಂದೆ ನಡೆದ ಘಟನೆಗಳನ್ನು ಜ್ಞಾಪಿಸಿಕೊಂಡರೆ, ಅವೆಲ್ಲವೂ ನಿಜವಾಗಿಯೇ ತೋರುತ್ತವೆ. ನಮ್ಮ ಮದುವೆ, ನಾವು ಪಟ್ಟ ಸಂತೋಷ, ಅನುಭವಿಸಿದ ಕಷ್ಟಗಳು, ಅವನು ನನ್ನಿಂದ ಬೇರೆಯಾದದ್ದು, ಅವನು ನನ್ನ ಮನಸ್ಸಿನಲ್ಲಿ ಚಿರವಾಗಿ ಉಳಿದಿರುವುದು, ಎಲ್ಲವೂ ನಿಜವೇ. ನನಗೆ ನಮ್ಮ ಹಿಂದೂ ಸಿದ್ಧಾಂತ ದಲ್ಲಿ ಹೇಳುವ 'ಮಾಯೆ' ಎಂಬುದು ಅರ್ಥವಾಗುವುದಿಲ್ಲ. ನನಗೆ ನೋವು, ನಲಿವು ಎರಡೂ ಅನುಭವವಾಗುತ್ತದೆ ಎಂದರೆ ಅದು ಹೇಗೆ 'ಮಾಯೆ'? ನಾನು ಗಾಂಧಿಜಿ ಅವರ ಮೊಮ್ಮಗ ರಾಮಚಂದ್ರ ಗಾಂಧಿಯವರೊಡನೆ ಮಾತನಾಡಿದೆ.ಅವರು ದ್ವೈತ ಮತ್ತು ಅದ್ವೈತ ಸಿದ್ಧಾಂತಗಳಬಗ್ಗೆ ಉಪನ್ಯಾಸ ಕೊಡಲು ಬಂದಿದ್ದರು. ಅವರೊಡನೆ

ನಾನು ನನಗೆ 'ಮಾಯೆ'ಯ ಬಗ್ಗೆ ಇದ್ದ ಗೊಂದಲವನ್ನು ತಿಳಿಸಿದೆ. ಅವರು ನನಗೆ "ನಿಜವಲ್ಲದ್ದು ಯಾವುದೂ ಇಲ್ಲ, ಎಲ್ಲವೂ ನಿಜ. ನಿಜವು ಸ್ಥಿರವಾಗಿರುತ್ತದೆ, ನಿಜವಲ್ಲದ್ದು ಬದಲಾಗುತ್ತಿರುತ್ತದೆ" ಎಂದರು. ನಾನು ಆಗಿಹೋಗಿರುವ ಘಟನೆಗಳ ಬಗ್ಗೆ ಮಾತನಾಡಿದಾಗ ನನ್ನಲ್ಲಿ ಹಳೆಯ ಭಾವನೆಗಳು ಮತ್ತೆ ಬರುತ್ತವೆ. ನಾನು ನನಗೆ ಮೊದಲು ಪೋಲಿಯೋ ಆದ ದಿನಗಳ ಬಗ್ಗೆ ಮಾತನಾಡಿದಾಗ, ನನಗೆ ಆ ದಿನಗಳಲ್ಲಿ ಅನುಭವಿಸಿದ ನೋವಿನ ಅನುಭವ ವಾಗುತ್ತದೆ. ನೋವು 'ಮಾಯೆ' ಅಲ್ಲವಲ್ಲ.

ಗುರುತಿಸುವುದು ಏನೂ ದೊಡ್ಡ ಪ್ರಶಸ್ತಿ ಅಲ್ಲ. ನಮ್ಮಲ್ಲಿ ಕೆಲವರಿಗೆ ಪ್ರಶಸ್ತಿ, ಪುರಸ್ಕಾರಗಳ ಬಗ್ಗೆ ಬಹಳ ಆಸಕ್ತಿ ಇದ್ದರೂ, ನನ್ನ ಮಟ್ಟಿಗೆ ಅವುಗಳಲ್ಲಿ ಆಸಕ್ತಿ ಇರಲಿಲ್ಲ. ಈ ಪ್ರಶಸ್ತಿ ಪುರಸ್ಕಾರಗಳು ಏನೂ ಮಾಡುವುದಿಲ್ಲ ಎಂದು ನನಗೆ ಅನಿಸುತ್ತಿತ್ತು. ಒಬ್ಬರಿಗೆ ಒಂದು ಪುರಸ್ಕಾರ ದೊರೆತರೆ, ಅವರಿಂದ ಇನ್ನೂ ಹೆಚ್ಚಿನ ನಿರೀಕ್ಷೆ ಉಂಟಾಗಿ, ಅವರು ಇನ್ನೂ ಹೆಚ್ಚಿನ ಕ್ಷಮತೆಯನ್ನು ತೋರಿಸಬೇಕಾಗುತ್ತದೆ, ಎಂದು. ೧೯೮೮ ರಲ್ಲಿ ನಾಯ್ಡು, ಥಾಮಸ್ ಮತ್ತು ಇನ್ನೂ ಕೆಲವರು ಸೇರಿ, ನನಗೆ ತಿಳಿಯದಂತೆ, ನನ್ನ ಹೆಸರನ್ನು ರಾಷ್ಟ್ರೀಯ ವಿಕಲಾಂಗರ ಕ್ಷೇಮಕ್ಕಾಗಿ ಕೊಡುವ ಪುರಸ್ಕಾರಕ್ಕೆ ಪ್ರಸ್ತಾಪಿಸಿದರು. ನನಗೆ ಈ ವಿಷಯ ತಿಳಿದಾಗ ನಾನು ಬಹಳ ಕೋಪಿಸಿಕೊಂಡೆ. ನನಗೆ ನನ್ನಲ್ಲಿ ಆ ಪುರಸ್ಕಾರಕ್ಕೆ ಬೇಕಾದ ಪದವಿಗಳು, ಮತ್ತು ಸಾಧನೆಗಳು ಇಲ್ಲವೆನ್ನಿಸಿತ್ತು. ಅವರುಗಳು ತಾವು ಮಾಡಬೇಕಾದ ಕೆಲಸವನ್ನು ಮಾಡಿದ್ದೇವೆ, ಇನ್ನು ನೀವು ದಿಲ್ಲಿಗೆ ಹೋಗಿ ರಾಷ್ಟ್ರಪತಿಯ ಕೈಯಿಂದ ಪುರಸ್ಕಾರವನ್ನು ಸ್ವೀಕರಿಸಬೇಕು ಎಂದರು.

ನನಗೆ ಬೇರೊಂದು ಚಿಂತೆಯೂ ಕಾಡುತ್ತಿತ್ತು. ಇವೆಲ್ಲಾ ನಾನೊಬ್ಬಳೇ ಮಾಡಿದ ಸಾಧನೆಯಲ್ಲ. ನನ್ನೊಡನೆ ಅನೇಕರು ಕೆಲಸ ಮಾಡಿದ್ದರು. ಕೆಲವರು ಸದ್ದಿಲ್ಲದೆ, ಕೆಲವರು ಎಲೆಮರೆಯ ಕಾಯಿನಂತೆ. ಅವರ ಪಾಡೇನು? ನಾನು ಈ ಸಂಸ್ಥೆಯಲ್ಲಿ ಬಹಳ ಕಾಲದಿಂದ ಕೆಲಸ ಮಾಡಿದ್ದೇನೆಂಬ ಮಾತ್ರಕ್ಕೆ ನಾನು ಅವರೆಲ್ಲರನ್ನೂ ಬದಿಗೊತ್ತಿ ಪ್ರಶಸ್ತಿಯನ್ನು ಸ್ವೀಕರಿಸಲೆ? ಸ್ವತಃ ನಾಯ್ಡು ಬಹಳ ಕೆಲಸ ಮಾಡಿದ್ದರು. ಆಂಧ್ರಪ್ರದೇಶದ ಚಿತ್ತೂರಿನಿಂದ ಪಧವೀದರರಾಗಿ ಬಂದು ಎ.ಪಿ.ಡಿ ಸೇರಿದ ಅವರು ಕೂಡ ಚಿಕ್ಕ ವಯಸ್ಸಿನಲ್ಲಿ ಪೋಲಿಯೋವಿನಿಂದ ನರಳಿದ್ದರು. ದಿವಾನರ ಅಗಲಿಕೆಯ ನಂತರ ನಾನು ಅವರೊಡನೆ ನಿಕಟವಾಗಿ ಕೆಲಸ ಮಾಡ ತೊಡಗಿದೆ. ಕ್ರಮೇಣ ನಾವು ಮಿತ್ರರಾದೆವು. ಅವರು ಬಹಳ ಶಿಸ್ತಿನ ಮನುಷ್ಯ. ಯಾವಾಗಲೂ ಸಮಯಕ್ಕೆ ಸರಿಯಾಗಿ ಬರುತ್ತಿದ್ದರು. ಅವರಿಗೆ ವಹಿಸಿದ ಕೆಲಸವನ್ನು ನಿಷ್ಠೆಯಿಂದ ಮಾಡುತ್ತಿದ್ದರು ಮತ್ತು ಅದನ್ನು ಕೂಡಲೆ ವರದಿ ಮಾಡುತ್ತಿದ್ದರು. ಅನೇಕ

ವಿಷಯದಲ್ಲಿ ಅವರು ನನಗೆ ಸೂಕ್ತವಾದ ಸಲಹೆಯನ್ನು ನೀಡುತ್ತಿದ್ದರು. ಅವರು ಮೂಲತಃ ಬಹಳ ಪ್ರಾಮಾಣಿಕರು ಮತ್ತು ಆಕ್ಕರೆಯಿಂದ ಕೆಲಸ ಮಾಡುತ್ತಿದ್ದರು. ಆಕಸ್ಮಾತ್ ಯಾರಿಂದಾದರೂ ತಪ್ಪಾಗಿದ್ದರೆ, ಅವರು ಕೂಡಲೇ ಅವರೊಡನೆ ಆ ವಿಷಯವನ್ನು ನೇರವಾಗಿ ಪ್ರಸ್ತಾಪಿಸಿ ವಿಷಯವನ್ನು ಸರಿಪಡಿಸುತ್ತಿದ್ದರು.

ಅವರಿಗೆ ನಮ್ಮ ಎಲ್ಲರ ಸ್ವಭಾವಗಳು, ಹಿನ್ನೆಲೆ ತಿಳಿದಿತ್ತು ಮತ್ತು ಅವರು ಎಲ್ಲರನ್ನೂ ಚೆನ್ನಾಗಿ ಅರ್ಥಮಾಡಿಕೊಳ್ಳುತ್ತಿದ್ದರು. ನನಗೆ ಒಂದು ಸಂದರ್ಭವು ಚೆನ್ನಾಗಿ ನೆನಪಿದೆ. ಆಂಧ್ರದಿಂದ ಬಂದ ಒಬ್ಬ ಹುಡುಗ ನಮ್ಮ ವರ್ಕ್‌ಶಾಪ್ ನಲ್ಲಿ ಕೆಲಸಕ್ಕೆ ಸೇರಿದ್ದ. ಅವನಿ ೧೦ ನೇ ಕ್ಲಾಸಿನವರೆಗೆ ಓದಿ ಕೆಲವು ಮಕ್ಕಳಿಗೆ ಪಾಠ ಹೇಳಿಕೊಡುತ್ತಿದ್ದ. ನಮ್ಮಲ್ಲಿ ಕೆಲಸಕ್ಕೆ ಸೇರಿದಮೇಲೆ ಅವನು ನಮ್ಮ ಲಿಂಗರಾಜಪುರದಲ್ಲಿ ಕೆಲಸ ಮಾಡಲು ಆಸೆಪಟ್ಟ, ಆದರೆ ನಾನು ಮತ್ತುನಾಯ್ಡು ಅದಕ್ಕೆ ಒಪ್ಪಲಿಲ್ಲ. ಅಲ್ಲಿನ ವತಾವರಣದಲ್ಲಿ ಅವನು ಕುಡಿಯುವುದನ್ನು ಕಲಿಯಬಹುದು ಎಂಬ ಭಯ ನಮಗಿತ್ತು.ನಾಯ್ಡು ಅವನ ಮೇಲೆ ಒಂದು ಕಣ್ಣಿಟ್ಟಿದ್ದರು. ಆದರೂ ಅವನು ಕೆಲವು ದಿನಗಳಲ್ಲಿ ಕುಡಿಯಲಾರಂಭಿಸಿದ. ಅವನ ಗಳಿಕೆಯೆಲ್ಲಾ ಕುಡಿತಕ್ಕೆ ಖರ್ಚಾಗಿ ಅವನ ಸಂಸಾರವನ್ನು ನಿರ್ಲಕ್ಷಿಸ ತೊಡಗಿದ. ಆ ಸಮಯದಲ್ಲಿ ನಾಯ್ಡು ಅವನ ಬಗ್ಗೆ ಕಾಳಜಿ ವಹಿಸಿ ಅವನನ್ನು ಸರಿಮಾಡಲು ಬಹಳ ಶ್ರಮಿಸಿದರು.

ನಾಯ್ಡು ಅವರ ಬಗ್ಗೆ ನನಗೆ ಬೇಜಾರಾಗುತ್ತಿದ್ದ ವಿಷಯವೆಂದರೆ ಅವರು, ಅವರಿಗೆ ಸ್ವಲ್ಪ ಕುಂಟು ಇದ್ದದ್ದರಿಂದ, ಚಪ್ಪಲಿಯನ್ನೋ, ಜೋಡುಗಳನ್ನೋ ಹಾಕಿಕೊಳ್ಳುತ್ತಲಿರಲಿಲ್ಲ. ಬರೀ ಕಾಲಿನಲ್ಲೇ ಅವರು ಓಡಾಡುತ್ತಿದ್ದರು. ನಮ್ಮಲ್ಲಿ orthotics ಕೇಂದ್ರ ಪ್ರಾರಂಭವಾದಾಗ ನಾನು ಅವರಿಗೆ ಜೋಡುಗಳನ್ನು ಮಾಡಿಸಿದೆ. ಆದರೆ ಅವರು ಅವನ್ನು ಉಪಯೋಗಿಸಲು ಪ್ರಯತ್ನವೇ ಪಡಲಿಲ್ಲ. ಒಂದು ವಿಧದಲ್ಲಿ ಅವರು ಒಬ್ಬ ಸರಳವಾದ ಹಳ್ಳಿಗ ಎನ್ನಬಹುದು. ಕೊನೆಗೆ ನಾವು ಇಂಗ್ಲೆಂಡಿಗೆ ಹೋದಾಗ ಬಲವಂತವಾಗಿ ಅವರು ಜೋಡುಗಳನ್ನು ಹಾಕಿಕೊಳ್ಳಬೇಕಾಯಿತು. ಅಲ್ಲಿಂದ ಹಿಂದಿರುಗಿದ ನಂತರವೂ ಅನೇಕ ಸಲ ಅವರು ಬರಿಗಾಲಿನಲ್ಲಿ ಬರುತ್ತಿದ್ದರು. ಕೇಳಿದರೆ ಹೊತ್ತಾಗಿಹೋಗಿತ್ತು, ಜೋಡುಗಳನ್ನು ಹಾಕಿಕೊಳ್ಳಲು ಸಮಯವಿರಲಿಲ್ಲ ಎನ್ನುತ್ತಿದ್ದರು.

ಎ.ಪಿ.ಡಿ ಯಲ್ಲಿ ನಾನು ಅವರಿಗೆ ನಮ್ಮ ಕೆಲಸಗಳಲ್ಲಿ ಹೊಸದಾದ ಸುಧಾರಣೆಗಳನ್ನು ಮಾಡುವ ಜವಾಬ್ದಾರಿಯನ್ನು ಕೊಟ್ಟೆ, ಅವರು ತಮ್ಮ ಕೆಲಸದಲ್ಲಿಯೇ ಮುಳುಗಿ ಹೋಗುತ್ತಿದ್ದರು. ನಾವು ನಮ್ಮ ವರ್ಕ್ ಶಾಪಿನಲ್ಲಿ ಉಪಯೋಗಿಸುವ ಎಲ್ಲಾ ವಸ್ತುಗಳನ್ನೂ codify ಮಾಡ ತೊಡಗಿದಾಗ ನಾಯ್ಡು ಅವರು ಈ ಬೃಹತ್ ಕೆಲಸದ ಮುಂದಾಳಾಗಿ

ನಮ್ಮ ಆಡಿಟರ್, ಸಲಹೆಗಾರರು, ಇತ್ಯಾದಿ ಎಲ್ಲರೊಡನೆ ಸೇರಿ ಈ ಕೆಲಸವನ್ನು ಯಶಸ್ವಿಯಾಗಿ ನೆರವೇರಿಸಿದರು. ಅವರಿಗೆ ಸೂಕ್ಷ್ಮವಾದ ವಿವರಗಳ ಬಗ್ಗೆ ಎಚ್ಚರವಿತ್ತು ಮತ್ತು ಅವರು ಬಹಳ ಎಚ್ಚರಿಕೆಯಿಂದ ಕೆಲಸ ಮಾಡುತ್ತಿದ್ದರು.ಅವರು ನಮ್ಮ ಕೆಲಸಗಳಲ್ಲಿ ಒಂದು ಶಿಸ್ತು ಮತ್ತು ಕ್ರಮವನ್ನು ತಂದರು. ಅವರಿಗೆ ಕೆಲಸ ಮಾಡುವವರ ಕಷ್ಟ ಸುಖಗಳ ಪರಿಚಯವಿತ್ತು. ಅವರು ಅವರಿಗೆ ಕೆಲಸಮಾಡುವಾಗ ಬರುವ ಕಷ್ಟಗಳನ್ನು ಹೇಗೆ ಎದುರಿಸಬೇಕು ಎಂದು ಕಲಿಸಿಕೊಡುತ್ತಿದ್ದರು. ನಾವು ಜೀವನ ಬೀಮಾ ನಗರದ ಕೇಂದ್ರವನ್ನು ಪ್ರಾರಂಭಿಸಿದಾಗ ಅವರು ತಾವಾಗಿಯೇ ಅಲ್ಲಿ ತೋಟಗಾರಿಕೆಯನ್ನು ಮಾಡಲು ಮುಂದಾದರು. ಅವರು ಒಬ್ಬ ಹುಟ್ಟಾ ಮುಂದಾಳು. ಅವರ ಜ್ಞಾಪಕಶಕ್ತಿಯು ಆಶ್ಚರ್ಯ ಜನಕವಾಗಿತ್ತು. ಅವರಿಗೆ ಹೆಸರುಗಳು ಮತ್ತು ಹಳೆಯ ಆಗುಹೋಗುಗಳು ಚೆನ್ನಾಗಿ ಜ್ಞಾಪಕವಿರುತ್ತಿತ್ತು. ಅವರು ೨೨ ವರ್ಷಗಳ ಕಾಲ ಏ.ಪಿ.ಡಿಯಲ್ಲಿ ಸೇವೆ ಸಲ್ಲಿಸಿದರು. ಅವರು ನಮ್ಮ ಸಂಸ್ಥೆಯನ್ನು ಬಿಟ್ಟಾಗ ಅದರ ನಿರ್ದೇಶಕರಾಗಿದ್ದರು ಮತ್ತು ದಿಲ್ಲಿಯಲ್ಲಿ CAPART (Council for Advancement of People's Action and Rural Technology) ಸಂಸ್ಥೆಯನ್ನು ಸೇರಿಕೊಂಡರು. ಅವರಿಗೆ policy ಗೆ ಸಂಬಂಧ ಪಟ್ಟ ವಿಷಯಗಳ ಬಗ್ಗೆ ಒಳ್ಳೆಯ ಜ್ಞಾನವಿದ್ದಿತು ಮತ್ತು ಸರ್ಕಾರವು ಕೆಲಸಮಾಡುವರೀತಿಯನ್ನು ಚೆನ್ನಾಗಿ ಅರಿತಿದ್ದರು.ಆದ್ದರಿಂದ ಅವರಿಗೆ ಸರ್ಕಾರದಿಂದ ಅನುದಾನ, ಧನಸಹಾಯ ಇತ್ಯಾದಿಗಳಿಗೆ ಅರ್ಜಿ ಹಾಕುವುದರ ಬಗ್ಗೆ ಒಳ್ಳೆಯ ತಿಳುವಳಿಕೆ ಇದ್ದಿತು. ಕ್ರೈಸ್ಟ್ ಅಂಡರ್ಹಿಲ್ ಅವರು ಬೆಂಗಳೂರಿನಲ್ಲಿ 'ಬೇಸಿಕ್ ನೀಡ್ಸ್' ಎಂಬ ಪ್ರಾಜೆಕ್ಟನ್ನು ಪ್ರಾರಂಭಿಸಿದಾಗ, ಅವರು ನಾಯ್ಡು ಅವರಿಗೆ ಅಲ್ಲಿ ಕೆಲಸ ಕೊಟ್ಟರು. ನಾಯ್ಡು ಅವರಿಗೆ ಮಾನಸಿಕ ರೋಗಿಗಳೊಡನೆ ಕೆಲಸ ಮಾಡುವುದರಲ್ಲಿ ಬಹಳ ಆಸ್ಥೆ ಇದ್ದಿತು. ಅವರು ಗ್ರಾಮೀಣ ಪ್ರದೇಶಗಳಲ್ಲಿ ನಡೆಯುತ್ತಿದ್ದ ಕೆಲಸಗಳಲ್ಲಿ ಬಹಳ ಸುಧಾರಣೆಗಳನ್ನು ತಂದಿದ್ದರು.

ಪ್ರಾಯಶಃ ನಾಯ್ಡು ಅವರ ಜೀವನದಲ್ಲಿ ಬಹಳ ದುರದೃಷ್ಟಕರವಾದದ್ದು ಎಂದರೆ ಅವರ ಸ್ವಾಸ್ಥ್ಯ. ಅವರಿಗೆ ಚಿಕ್ಕ ವಯಸ್ಸಿನಲ್ಲೇ 'epilepsy' ಬಂದಿತು. ಅದರ ಚಿಕಿತ್ಸೆಗೆ ಅವರು ಜೀವನವಿಡೀ ಔಷಧಿಯನ್ನು ತೆಗೆದುಕೊಳ್ಳುತ್ತಿದ್ದರು. ಆದರೆ ಅವರಿಗೆ ತನ್ನ ಸ್ವಾಸ್ಥ್ಯದ ಬಗ್ಗೆ ಯಾವ ಚಿಂತೆಯೂ ಇರಲಿಲ್ಲ, ಅವರು ಅದರ ಬಗ್ಗೆ ಹೇಳಿಕೊಳ್ಳುತ್ತಲೂ ಇರಲಿಲ್ಲ. ಯಾವಾಗಲೂ ಕೆಲಸಕ್ಕೆ ತಯಾರಾಗಿರುತ್ತಿದ್ದರು. ಅನೇಕರಿಗೆ ಅವರಿಗೆ ಈ ರೀತಿಯಾದ ತೊಂದರೆ ಇದೆ ಎಂದೂ ತಿಳಿದಿರಲಿಲ್ಲ. ಅವರಿಗೆ ಚರ್ಮದ ತೊಂದರೆಯೂ ಇತ್ತು. ಜೊತೆಗೆ ಮೂತ್ರ ಪಿಂಡದ ತೊಂದರೆಯೂ ಇತ್ತು. ಅವರು ಹಾಗೆಯೇ ೫ ವರ್ಷಗಳ ಕಾಲ ಡಯಾಲಿಸಿಸ್ ಇಲ್ಲದೇ ಇದ್ದರು. ಅವರಿಗೆ ಯಾರೂ ತಿಳಿಯ ಹೇಳಲು ಸಾಧ್ಯವಿರಲಿಲ್ಲ.

ನಾಯ್ಡು ಮಾರ್ಚ್ ೨೦೧೧ ರಲ್ಲಿ ನಮ್ಮಿಂದ ಅಗಲಿದರು. ಕೊನೆಯ ಗಳಿಗೆಯ ವರೆಗೆ ಅವರು ಶಾಂತರೂ, ಸಂಯಮಶೀಲರೂ ಆಗಿದ್ದರು. ಅವರ ಅಗಲಿಕೆಯಿಂದ ವಿಕಲಾಂಗ ಸಮೂಹಕ್ಕೇ ಒಂದು ದೊಡ್ಡ ಆಘಾತ ವಾಯಿತು. ನನ್ನ ಪಾಲಿಗಂತೂ ಅದು ಒಬ್ಬ ಒಳ್ಳೆಯ ಮಿತ್ರ, ಹಿತೈಷಿ ಮತ್ತು ಮಾರ್ಗದರ್ಶಿಯನ್ನು ಕಳೆದುಕೊಂಡಂತಾಯಿತು.

ಇನ್ನು ಪುರಸ್ಕಾರದ ವಿಷಯಕ್ಕೆ ಹಿಂತಿರುಗೋಣ. ನಾನು ನನ್ನ ಅಮ್ಮ ಮತ್ತು ಸಹೋದರಿಯರೊಡನೆ ದಿಲ್ಲಿಗೆ ಹೋದೆ. ವಿಕೆ ಮತ್ತು ಕ್ರಿಸ್ ಅಂಡರ್ಹಿಲ್ ಇಬ್ಬರೂ ಬೇರೆ ಯಾವುದೊ ಕೆಲಸದ ಮೇರೆಗೆ ದಿಲ್ಲಿಯಲ್ಲಿದ್ದರು. ಆ ದಿನಗಳಲ್ಲಿ ವಿಮಾನದಲ್ಲಿ ಚಲಿಸುವಂತ ಕುರ್ಚಿಗಳಿರಲಿಲ್ಲ.ಆದ್ದರಿಂದ ನಾನು ಇಳಿಯಲು ಸಹಾಯಕ್ಕಾಗಿ ಕಾಯುತ್ತಿದ್ದೆ. ಅಲ್ಲಿನ ಸಮಾಜ ಸೇವಕಿ ಸಹಾಯಕ್ಕೆ ಜನರಿಗಾಗಿ ಕಾಯುತ್ತಿದ್ದಳು. ಕೊನೆಗೆ ವಿಮಾನದ ಆರು ಜನ ಮಹಿಳಾ ಸಖಿಯರು ಸೇರಿ ನನ್ನನ್ನು ಎತ್ತಿ ಕುರ್ಚಿಯಲ್ಲಿ ಕೂರಿಸಲು ಮುಂದಾದರು. ನಾನು ಈ ತೆಳ್ಳಗೆ, ನಾಜೂಕಾದಯುವತಿಯರಿಂದ ಇದು ಸಾಧ್ಯವೇ ಎಂದು ಯೋಚಿಸುತ್ತಿದ್ದೆ. ಆದರೆ ಅವರು ನನ್ನನ್ನು ನಿರಾಯಾಸವಾಗಿ ಹೆಬ್ಬಾವಿನಂತೆ ಮೇಲೆತ್ತಿ ಬಾಗಿಲಿಗೆ ತಂದು ಸಹಾಯಕ್ಕಾಗಿ ಕೂಗಿಕೊಂಡರು. ಆದರೆ, ಅವರ ಕೂಗಿಗೆ ಯಾರೂ ಬರಲಿಲ್ಲ. ಕೆಳಗೆ ಒಂದು ಟ್ರಕ್ಕಿನ ಮೇಲೆ ಕೆಲವರು ನಿಂತಿದ್ದರು. ಅವರಿಗೂ ವಿಮಾನದ ಬಾಗಿಲಿಗೂ ಸುಮಾರು ಎಂಟು ಅಡಿಗಳ ಅಂತರವಿರಬಹುದು. ಅವರು ನನ್ನನ್ನು ಕೆಳಗೆ ಇಳಿಸಿದರೆ ತಾವು ಹಿಡಿದುಕೊಳ್ಳುವುದಾಗಿ ಹೇಳಿದರು. ನನಗೆ ಇದು ಯಾಕೋ ಶುದ್ಧ ಹುಚ್ಚುತನ ಅನಿಸಿತು. ನಾನು ಅವರಿಗೆ ನಾನು ಪುರಸ್ಕಾರವನ್ನು ತೆಗೆದುಕೊಳ್ಳಲು ಬಂದಿದ್ದೇನೆ, ನನಗೆ ನನ ತಲೆ ಎರಡಾಗುವುದು ಬೇಕಿಲ್ಲ ಎಂದು ಹೇಳಿದೆ. ನನ್ನ ಕಿರುಚಾಟದ ಮಧ್ಯೆ ಅವರು ನನ್ನನ್ನು ಹಿಡಿದುಕೊಂಡರು ಮತ್ತು ಮತ್ತೊಮ್ಮೆ ಅದೇ ರೀತಿ ಆ ಟ್ರಕ್ಕಿನಿಂದ ಮತ್ತೆ ಕೆಳಗೆ ಇಳಿಸಿದರು. ನನಗೆ, ಆ ಸಮಾರಂಭಕ್ಕೆ ಬರುವ ಯಾರಾದರೂ ಪತ್ರಕಾರರು ಅಲ್ಲಿದ್ದಿದ್ದರೆ ಈ ಪ್ರಸಂಗದ ಬಗ್ಗೆ ಬರೆಯಬಹುದು ಎಂದು ಅನಿಸಿತ್ತು.

ದಿಲ್ಲಿಯಲ್ಲಿ ಏರ್ಪಡಿಸಿದ್ದ ಸಿದ್ಧತೆಗಳು ಇನ್ನೂ ಆಶ್ಚರ್ಯಜನಕವಾಗಿದ್ದವು. ೨೦೦ಕ್ಕೂ ಹೆಚ್ಚು ವಿಕಲಾಂಗರು ಭಾಗವಹಿಸುವಂತ ಈ ಕಾರ್ಯಕ್ರಮಕ್ಕೆ, ಅವರು ಉಳಿದುಕೊಳ್ಳಲು ಯಾತ್ರಿ ನಿವಾಸ್ ಹೋಟಲಿನಲ್ಲಿ ಏರ್ಪಾಡು ಮಾಡಲಾಗಿತ್ತು, ಅಲ್ಲಿನ ಮುಖ್ಯ ದ್ವಾರಕ್ಕೆ ಸಾಕಷ್ಟು ಮೆಟ್ಟಿಲುಗಳಿದ್ದವು. ರೂಮುಗಳ ಮತ್ತು ಬಾತ್ ರೂಮುಗಳ ಬಾಗಿಲುಗಳು ಚಿಕ್ಕದಾಗಿದ್ದು ವೀಲ್ ಚೇರ್ ಒಳಗೆ ಹೋಗುತ್ತಿರಲಿಲ್ಲ. ಕೆಲವರು ವೀಲ್ ಚೇರ್

ಇಟ್ಟುಕೊಂಡಿದ್ದರು ಮತ್ತು ಕೆಲವರು ತೆವಳಿಕೊಂಡು ಹೋಗುತ್ತಿದ್ದರು. ನನ್ನ ಸಹೋದರಿಯರು ಮೊದಲು ಹೋಗಿ ಆ ಸ್ಥಳವನ್ನು ಪರೀಕ್ಷಿಸಿಕೊಂಡು ಬಂದು ಇದು ಸರಿಹೋಗುವುದಿಲ್ಲ ಎಂದು ಹೇಳಿದ ಮೇಲೆ ನಾವು ಅಲ್ಲಿಂದ ವೈ.ಎಂ.ಸಿ.ಎ. ಗೆ ಹೋದೆವು. ಈ ರೀತಿಯ ಧೋರಣೆ ನನಗೆ ಸರಿಹೋಗಲಿಲ್ಲ. ಪ್ರಾಯಶಃ ಇದು ತಿಳಿಗೇಡಿತನವೂ ಇರಬಹುದು. ನಮಗೆ ರಿಹರ್ಸಲ್ ಇದ್ದವು. ರಾಷ್ಟ್ರಪತಿ ಎದುರು ಯಾವ ತಪ್ಪೂ ಇಲ್ಲದೆ ಎಲ್ಲವೂ ಸರಿಯಾಗಿ ನಡೆಯಬೇಕು ಎಂದು ನಮ್ಮ ಹೆಸರು ಕರೆದಾಗ ನಾವು ವೇದಿಕೆಯ ಮೇಲೆ ಹೋಗುವುದನ್ನು ಅಭ್ಯಾಸ ಮಾಡಿಸಿದರು. ಈ ತರಬೇತಿಯನ್ನು ನೋಡಿಕೊಳ್ಳುತ್ತಿರುವ ಹೆಂಗಸು ನಮ್ಮೆಲ್ಲರನ್ನೂ ಕುರ್ಚಿಯ ಮೇಲೆ ಕೂರಬೇಕೆಂದು ಹೇಳಿದಳು. ನಾನು ಆಗುವುದಿಲ್ಲವೆಂದು ಪ್ರತಿಭಟಿಸಿದೆ. ಕುರ್ಚಿಯಲ್ಲಿ ಕೂರಲು ನನ್ನನ್ನು ಒಬ್ಬರು ಎತ್ತಿ ಕೂರಿಸಬೇಕು. ನನ್ನ ವೀಲ್ ಚೇರಿನಲ್ಲೆ ಕೂರುವುದಾದರೆ ಸೌಕರ್ಯ ಎಂದೆ. ಅವಳಿಗೆ ವಿಕಲಾಂಗರಬಗ್ಗೆ ತಿಳಿದಿರಲಿಲ್ಲ. ವರ್ಥ್ ಟ್ರಸ್ಟಿನ ಮಾನೇಜರ್ ಬೋಸ್ ಕ್ರೂಜ್ – ಅವರೂ ಪುರಸ್ಕಾರವನ್ನು ಪಡೆಯಲು ಬಂದಿದ್ದರು – ನನ್ನನ್ನು ಎತ್ತಿ ಕೂರಿಸುವುದಾಗಿ ಹೇಳಿದರು. ನನಗೆ ಬಹಳ ಕೋಪ ಬಂತು. ನಾನು ಅವಳಿಗೆ ನನ್ನ ಪುರಸ್ಕಾರವನ್ನು ಕಳುಹಿಸಿ ನಾನು ಹಿಂದಿರುಗಿ ಹೋಗುತ್ತೇನೆ ಎಂದೆ. ಅವಳು ಯಾವುದಕ್ಕೂ ಜಗ್ಗಲಿಲ್ಲ. ಎಲ್ಲರೂ ರಾಷ್ಟ್ರಗೀತೆ ಹಾಡುವಾಗ ಎದ್ದು ನಿಲ್ಲಬೇಕು ಎಂದಳು. ನನಗೆ ಇಷ್ಟವಿದ್ದರೂ ನನ್ನಿಂದ ಅದು ಸಾಧ್ಯವಿರಲಿಲ್ಲ. ನನ್ನ ಮಂಡಿಗಳು ನನ್ನ ಭಾರವನ್ನು ತಾಳುತ್ತಿರಲಿಲ್ಲ. ಆದರೆ ಅವಳು ಒಪ್ಪಲಿಲ್ಲ. ಪಕ್ಕದಲ್ಲಿ ಇಬ್ಬರು ನಿಂತು ಹಿಡಿದು ಕೊಳ್ಳಬಹುದು ಎಂದು ಯೋಚಿಸಿದ್ದಳು. ಯಾಕೋ, ನಾನು ಹೇಳಿದ್ದು ಅವಳಿಗೆ ತಾಕಲೇ ಇಲ್ಲ.

ವಿಕೆ ನನ್ನನ್ನು ಎಂದಿನಂತೆ ಶಾಂತಗೊಳಿಸಲು ಬಹಳ ಪ್ರಯತ್ನಿಸಿದರು. ಆ ಹೆಂಗಸಿಗೆ ನಾವು ಕೋರಿದ್ದ ಧನ ಸಹಾಯವನ್ನು ಮಂಜೂರು ಮಾಡುವ ಅಧಿಕಾರವಿತ್ತು. ನನಗೆ ಅವಳ ಮಾತಿಗೆ ಮಣಿಯುವ ಮನೋಭಾವವಿರಲಿಲ್ಲ. ನಾನು ಅಂದಿನ ಸಮಾರಂಭದಂದು ಆ ಸಭೆಗೆ ಹೋದಾಗ ಅವಳು ಯಾಕೆ ಹಾಗೆ ಹೇಳಿದಳು ಎಂಬುದು ನನಗೆ ತಿಳಿಯಿತು. ಆ ಸಭೆಯಲ್ಲಿ ಎಲ್ಲಾ ಆಸನಗಳೂ ನೆಲಕ್ಕೆ ಭದ್ರವಾಗಿ ಸೇರಿಸಲ್ಪಟ್ಟಿದ್ದವು. ಅಲ್ಲಿ ವ್ಹೀಲ್ ಚೇರಿಗೆ ಸ್ಥಳವೇ ಇರಲಿಲ್ಲ. ರಾಷ್ಟ್ರಪತಿ ಭವನದಲ್ಲಿ ಹೊರಗಡೆ ದೊಡ್ಡದಾದ ಹುಲ್ಲಿನ ಹಾಸು ಇತ್ತು. ಇವರು ಈ ಸಮಾರಂಭವನ್ನು ಅಲ್ಲಿ ಏರ್ಪಡಿಸಿದ್ದರೆ ವಿಕಲಾಂಗರಿಗೆ ಅನುಕೂಲವಗಿರುತ್ತಿತ್ತು. ನಾನು ಅಲ್ಲಿನ ಒಂದು ಕುರ್ಚಿಯಮೇಲೆ ಕುಳಿತುಕೊಳ್ಳಲು ಪ್ರಯತ್ನಿಸಿದೆ, ಆದರೆ ಅಷ್ಟರಲ್ಲಿ ಅಲ್ಲಿನ ಕಾವಲು ಪಡೆಯವನು ನನ್ನನ್ನು ನನ್ನ ವ್ಹೀಲ್ ಚೇರಿನಲ್ಲೇ ಕುಳಿತುಕೊಳ್ಳಲು ಹೇಳಿದನು ಮತ್ತು ಒಂದು ಮೂಲೆಯಲ್ಲಿಇರಲು ಹೇಳಿ

ನನ್ನನ್ನು ಕರೆದಾಗ ತಾನು ಬಂದು ನನ್ನ ವ್ಹೀಲ್ ಚೇರನ್ನು ತಳ್ಳಿ ವೇದಿಕೆಗೆ ಕರೆದುಕೊಂಡು ಹೋಗುವುದಾಗಿ ಹೇಳಿದನು. ಅಲ್ಲಿ ಬಂದಿದ್ದ ಅತಿಥಿಗಳಲ್ಲಿ ದೃಷ್ಟಿಮಾಂಧ್ಯವಿರುವವರೂ ಕಷ್ಟಪಡುತ್ತಿರುವುದು ನನ್ನ ಕಣ್ಣಿಗೆ ಬಿದ್ದಿತು.

ಪುರಸ್ಕಾರದ ವಿತರಣೆಯ ನಂತರ ನಮ್ಮನ್ನು ಮತ್ತೊಂದು ಕೋಣೆಗೆ ಕರೆದೊಯ್ಯಲಾಯಿತು. ಅಲ್ಲಿ ನಮಗೆ ಉಪಹಾರ ಮತ್ತು ಚಹಾದ ಏರ್ಪಾಡು ಮಾಡಿದ್ದರು. ಅಲ್ಲಿ ನಾವುವಿಕೆ ಮತ್ತು ಕ್ರಿಸ್ ಅವರನ್ನು ಕಂಡೆವು. ನಾನು ಆಶ್ಚರ್ಯದಿಂದ 'ನೀವು ಹೇಗೆ ಒಳಗೆ ಬಂದಿರಿ' ಎಂದು ಕೇಳಿದೆ. ಅದಕ್ಕೆ ಅವರು 'ಯಾರೋ ತಿಳಿದವರು ಸಿಕ್ಕಿದರು, ಅವರೊಡನೆಒಳಗೆ ಬಂದೆವು'ಎಂದರು.

ದಿಲ್ಲಿಯಲ್ಲಿ ನಾವು ಚೆನ್ನಾಗಿ ಸಮಯವನ್ನು ಕಳೆದೆವು. ವಿಕಿ, ಕ್ರಿಸ್ ಮತ್ತು ನಾನು ರಾತ್ರಿ ಬಹಳ ಹೊತ್ತಿನವರೆಗೆ ನಮ್ಮ ವರ್ಕ್ ಷಾಪಿನ ಬಗ್ಗೆ ಹರಟುತ್ತಾ ಕಳೆದೆವು. ಈ ಪುರಸ್ಕಾರವು ಈಗ ನನ್ನ ಕಪಾಟಿನಲ್ಲಿ ಇದೆ. ೧೯೮೮ ರಿಂದ ಇಂದಿಗೆ ನಮ್ಮ ನಾಡು ಬಹಳವೇ ಪ್ರಗತಿ ಮಾಡಿದೆ. ಆದರೆ ವಿಕಲಾಂಗರಿಗೆ ಬೇಕಾದ ಸೌಕರ್ಯ ಮತ್ತು ಅವರ ಬಗ್ಗೆ ಬೇಕಾದ ಸಂವೇದನೆಯ ಕ್ಷೇತ್ರದಲ್ಲಿ ಇನ್ನೂ ಬಹಳ ಬೇಕಾಗಿದೆ. ಕ್ರಿಸ್ ಇನ್ನೂ ವಿಕಿಯನ್ನು ಜ್ಞಾಪಿಸಿಕೊಳ್ಳುತ್ತಾಳೆ. ನನಗಂತೂ ಅವರನ್ನು ಮರೆಯಲು ಸಾಧ್ಯವೇ ಇಲ್ಲ.

ಕೆಲವು ವರ್ಷಗಳ ನಂತರ ೧೯೭೭ ರಲ್ಲಿ ನನಗೆ ಒಬ್ಬರು ಫ್ಹೋನ್ ಮಾಡಿ ನನ್ನ ಬಯೋಡಾಟ ಕೇಳಿದರು. ಅವರ ಧ್ವನಿಯು ಗಾಂಧಿವಾದಿಯಂತೆ ಇದ್ದಿತು ಮತ್ತು ಅವರು ಅದು ಯಾಕೆ ಬೇಕು ಎಂಬುದನ್ನು ಹೇಳ ಬಯಸಲಿಲ್ಲ. ನನ್ನ ಬಗ್ಗೆ ನಾನು ಹೇಳಿಕೊಳ್ಳುವಂತಹುದು ಏನೂ ಇಲ್ಲವೆಂದೆ. ಆಗ ಅವರು ಇದು ರಾಜ್ಯ ಮಟ್ಟದ ಪುರಸ್ಕಾರಕ್ಕೆ ಎಂದರು. ನಾನು ಅವರಿಗೆ ನನಗೆ ಆಗಲೇ ಒಂದು ಪುರಸ್ಕಾರಸಂದಿದೆ, ಮತ್ತೊಂದು ಅವಶ್ಯಕವಿಲ್ಲ ಎಂದೆ. ಅವರು ಅದನ್ನು ನಿರ್ಧರಿಸುವುದು ನೀವಲ್ಲ ಎಂದರು. ನಾನು ಅವರಿಗೆ ಇನ್ನೂ ಅನೇಕ ಅರ್ಹ ವ್ಯಕ್ತಿಗಳಿದ್ದಾರೆ ಎಂದಾಗ ಅವರು ಫ್ಹೋನನ್ನು ಕೆಳಗಿಟ್ಟರು. ನನಗೆ ಈ ಪುರಸ್ಕಾರಗಳಬಗ್ಗೆ ಯಾವ ಕುತೂಹಲವೂ ಇರಲಿಲ್ಲ.

ಪ್ರತಿವರ್ಷವೂ ನವೆಂಬರ್ ತಿಂಗಳಲ್ಲಿ ನಮ್ಮ ರಾಜ್ಯದಲ್ಲಿ ಕರ್ನಾಟಕ ರಾಜ್ಯ ಸ್ಥಾಪನೆಯಾದ ದಿನದ ನೆನೆಪಿನಲ್ಲಿ 'ರಾಜ್ಯೋತ್ಸವ' ಪುರಸ್ಕಾರವನ್ನು ನೀಡುತ್ತಾರೆ. ಆಗ ವೀರಪ್ಪ ಮೊಯ್ಲಿಯವರು ಮುಖ್ಯ ಮಂತ್ರಿಯಾಗಿದ್ದರು. ಅವರು ನನಗೆ ಒಳ್ಳೆಯ ಮಿತ್ರರೂ ಆಗಿದ್ದರಿಂದ ನಾನು ಹೋಗಲು ಒಪ್ಪಿದೆ. ಎ.ಪಿ.ಡಿ ಯಲ್ಲಿ ಎಲ್ಲರೂ ಈ ಪುರಸ್ಕಾರವು ಸಂಸ್ಥೆಗೆ ಮುಖ್ಯವಾಗುತ್ತದೆ

ಆದ್ದರಿಂದ ನಾನು ಅದನ್ನು ಸ್ವೀಕರಿಸಬೇಕು ಎಂದರು. ನನಗೆ ರಾಜ್ಯದ ಸಮಾಜ ಸೇವೆಯ ಪುರಸ್ಕಾರ – ಒಂದು ಚಿನ್ನದ ನಾಣ್ಯ – ಸಿಕ್ಕಿತು. ಇದರಿಂದ ಎ.ಪಿ.ಡಿ. ಗೆ ಏನು ಸಹಾಯವಾಯಿತು ಎಂಬುದನ್ನು ನಾನರಿಯೆ. ಈ ಪುರಸ್ಕಾರವನ್ನು ನಾನು ಎಲ್ಲಿಡುವುದು? ನನ್ನ ವ್ಹೀಲ್ಚೇರಿನ ಮೇಲೆ? ನನ್ನ visiting cardನ ಮೇಲೇ? ನಮ್ಮ ಮುಖ್ಯ ಗುರಿಯೇ ಇನ್ನೂ ಉಳಿದಿದೆ. ನಮ್ಮಲ್ಲಿ ಸರ್ಕಾರದ ನೌಕರರಿಗೆ ಇನ್ನೂ ವಿಕಲಾಂಗರ ಸಮಸ್ಯೆಗಳು ಮತ್ತು ಕಷ್ಟಗಳ ಬಗ್ಗೆ ಅರಿವೇ ಇಲ್ಲ.

೧೯೮೦ ಕೊನೆಗೆ ಎ.ಪಿ.ಡಿ. ಕಾರ್ಮಿಕರ ಸಂಘರ್ಷದಲ್ಲಿ ಸಿಕ್ಕಿ ಕೊಂಡಿತು. ನಾನು ಈ ಸಂಸ್ಥೆಯನ್ನು ಮುಚ್ಚಿಬಿಡಬೇಕೆಂದು ಇದ್ದೆ. ಅದು ಬಹಳ ದೊಡ್ಡದಾಗಿ ಬೆಳೆದು ಒಂದು ಬಿಳಿಯ ಆನೆಯಾಗಿತ್ತು. ಅದರಲ್ಲಿ ನಾವು ಎದುರುನೋಡಿದ ಫಲ ಸಿಗುತ್ತಿರಲಿಲ್ಲ. ನಮ್ಮ ಖರ್ಚನ್ನು ಪೂರಯಿಸಲು ಬೇಕಾದ ಹಣ ಸಂಗ್ರಹಿಸುವುದು ಕಷ್ಟವಾಗುತ್ತಿತ್ತು ಮತ್ತು ನಾವು ಬೇರೆ ಸಂಸ್ಥೆಗಳಲ್ಲಿ ಕೂಡಿಟ್ಟ ಹಣವೂ ಇದರ ಖರ್ಚಿಗೆ ಉಪಯೋಗಿಸಬೇಕಾಗುತ್ತಿತ್ತು. ಇದು ನನ್ನ ಮನಸ್ಸಿಗೆ ಬಹಳ ನೋವು ಉಂಟುಮಾಡುತ್ತಿತ್ತು. ನಮ್ಮ ಆಡಳಿತ ಮಂಡಳಿಯು ಸಂಸ್ಥೆಯನ್ನು ಮುಚ್ಚಲು ತಯಾರಿರಲಿಲ್ಲ. ಅವರೆಲ್ಲಾ ಉದ್ಯೋಗಪತಿಗಳಾದ್ದರಿಂದ ಸ್ವಲ್ಪ ಹಣ ಹಾಕಿದರೆ ಸರಿಹೋಗುತ್ತದೆ ಎಂದು ಅಭಿಪ್ರಾಯ ಪಡುತ್ತಿದ್ದರು.

ನನಗೆ ಅವರು ಮುಳುಗುತ್ತಿರುವರು ಹುಲ್ಲುಕಡ್ಡಿಯನ್ನು ಹಿಡಿದುಕೊಂಡಂತೆ ಆಡುತಿದ್ದಾರೆ ಎಂದನಿಸಿತು. ನಾನು ಎ.ಪಿ.ಡಿಯನ್ನು ಅದು ಪ್ರಾರಂಭವಾದಾಗಿನಿಂದ ನೋಡಿದ್ದೆ. ಮೊದಲು ನಾನೂ

ಬಹಳ ಉತ್ಸಾಹಿಯಾಗಿದ್ದರೂ, ನಿಧಾನವಾಗಿ ನನಗೆ ಈ ರೀತಿಯಾದ ಒಂದು ಉದ್ಯೋಗವನ್ನು ನಡೆಸುವ ಕ್ಷಮತೆ ಇಲ್ಲಾ ಎಂಬುದು ಅರಿವಾಯಿತು. ಒಮ್ಮೆ ನಾನು ಎ.ಪಿ.ಡಿ ಯನ್ನು ಎರಡು ಭಾಗ ಮಾಡಿ, ಮಿಕ್ಕ ಸಂಸ್ಥೆಗಳನ್ನು ಹೊಸದೊಂದು ಹೆಸರಿನಲ್ಲಿ ನಡೆಸುವುದು ಎಂದು ಯೋಚಿಸಿದ್ದೆ. ವರ್ಕ್‌ಷಾಪ್‌ನಲ್ಲಾಗುವ ನಷ್ಟವು ನಿಂತು ಅದು ಸರಿ ಹೋಗುತ್ತದೆ ಅಂತ ನಾನು ಬಹಳಷ್ಟು ಹಣ ಹೊಂದಿಸಿ ಪ್ರಯತ್ನಿಸಿದೆ, ಆದರೆ ಅದರಲ್ಲಿ ಯಾವ ಬದಲಾವಣೆಯೂ ಕಾಣಲಿಲ್ಲ.

ಕೊನೆಗೆ, ೧೯೯೩ ರಲ್ಲಿ ನಮ್ಮ ಆಡಳಿತ ಮಂಡಳಿಗೆ ಸ್ವಲ್ಪ ಬುದ್ಧಿ ಬಂದು ವರ್ಕ್‌ಷಾಪನ್ನು ಮುಚ್ಚಲು ನಿರ್ಧರಿಸಿದರು. ಇದು ನಮ್ಮೆಲ್ಲರಿಗೂ ಬಹಳ ಕಷ್ಟಕರವಾದ ಕೆಲಸ ವಾಗಿತ್ತು, ಅದೂ ನನ್ನಂತವರಿಗೆ ಈ ಮುಚ್ಚುವುದಕ್ಕೆ ಸಂಬಂಧಪಟ್ಟ ಎಲ್ಲಾ ಕೆಲಸದ ಜವಾಬ್ದಾರಿ

ಹೊತ್ತವರಿಗೆ. ನಮ್ಮ ವಕೀಲರುಗಳ ಹದ್ದಿನ ದೃಷ್ಟಿಯೊಳಗೆ ನಾವು ಬೇಕಾದ ಕ್ರಮಗಳನ್ನೆಲ್ಲಾ ಪೂರೈಸಿ ಕಾರ್ಮಿಕರೆಲ್ಲರಿಗೂ ಅವರಿಗೆ ಸಿಗಬೇಕಾದ ಹಣವನ್ನು ವಿತರಿಸಿದೆವು. ಇದೆಲ್ಲಾ ಮುಗಿಸಲು ಒಂದು ವರ್ಷವಿಡೀ ಹಿಡಿಯಿತು. ಕಾರ್ಮಿಕರಲ್ಲಿ ಸುಮಾರು ನೂರು ಜನರು voluntary retirement package ಆಯ್ದುಕೊಂಡರು. ಅವರೆಲ್ಲರಿಗೂ ಹೊರಗೆ ಒಳ್ಳೆಯ ಉದ್ಯೋಗಾವಕಾಶ ಸಿಕ್ಕಿರಬೇಕು. ಅವರಿಗೆ ನಮ್ಮಿಂದ ದೊರೆತ ಹಣದ ಬಗ್ಗೆ ಸಮಾಧಾನವಿತ್ತು. ಆದರೆ ನಮಗೆ, ಆ ವರ್ಕ್ ಷಾಪ್ ನಡೆಸುತ್ತಿದ್ದವರಿಗೆ, ಆ ಸಂಸ್ಥೆಯ ಮತ್ತು ಅಲ್ಲಿದ್ದ ಪ್ರತಿಯೊಂದು ಯಂತ್ರದ ಚರಿತ್ರೆಯನ್ನು ತಿಳಿದವರಿಗೆ ಇದು ಬಹಳ ಕಷ್ಟಕರವಾಗಿತ್ತು. ಆದರೆ ಇದು ಭಾವುಕರಾಗುವ ಸಮಯವಾಗಿರಲಿಲ್ಲ. ನಾನು ನನ್ನ ಭಾವನೆಗಳನ್ನು ಪಕ್ಕಕ್ಕೆ ಒತ್ತಿ, "ಆಮೇಲೆ ಇದೆಲ್ಲಾ ಮುಗಿದಾಗ ಚಿಂತಿಸೋಣ"ಎಂದು ಕೊಂಡೆ.

ನಾನು ಆ ಕಾರ್ಮಿಕರಿಗೆ ಅವರು ನಮ್ಮ ವರ್ಕ್‌ಷಾಪಿನಿಂದ ಹೊರಗೆ ಹೋದ ಮೇಲೆ, ಹೊರಗಿನ ಪ್ರಪಂಚದಲ್ಲಿ ಇನ್ನೂ ಚೆನ್ನಾಗಿ ಬಾಳ ಬಹುದು ಎಂದು ತಿಳಿ ಹೇಳ ಬೇಕಾಗಿತ್ತು. ಇದನ್ನು ಮಾಡಲು ಎಲ್ಲಾ ವಿಧವಾದ ನಾಟಕ, ಮಾತು ಇತ್ಯಾದಿ ಬೇಕಾಗುತ್ತಿತ್ತು. ಅನೇಕ ಕಾರ್ಮಿಕರು ಆಮೇಲೆ ಬಂದು ಕಣ್ಣೀರು ಸುರಿಸಿ, ಅಂದು ತಾವು ಒರಟಾಗಿ ನಡೆದುಕೊಂಡದ್ದಕ್ಕೆ ಕ್ಷಮೆಯಾಚಿಸಿದರು. ನಾನು ಅವರಿಗೆ 'ಆ ಸಮಯದಲ್ಲಿ ಅವರಿಗೆ ಯಾವುದು ಸರಿಯೆಂದು ತೋರಿತೋ ಆರೀತಿ ನಡೆದು ಕೊಂಡಿದ್ದೀರ, ಈಗ ನಿಮ್ಮ ಮುಂದಿನ ಜೀವನಕ್ಕೆ ಬೇಕಾದಹಾಗೆ ನಡೆದುಕೊಳ್ಳಿ' ಎಂದು ಹೇಳಿದೆ. ನಾನು ಆಡಳಿತ ಮಾಡಳಿಯು ನನಗೆ ವಹಿಸಿದ್ದ ಕೆಲಸವನ್ನು ಪೂರ್ತಿ ಮಾಡಿದೆ. ನನಗೆ ಇದನ್ನು ಮಾಡುವುದರಲ್ಲಿ ಅವರ ಪೂರ್ಣ ನೆರವು ಇದ್ದಿತು. ನಾಯ್ಡು ಮತ್ತು ಇತರ ಕೆಲವರು ನನಗೆ ಈ ಕೆಲಸದಲ್ಲಿ ಬಹಳ ಸಹಾಯ ಮಾಡಿದರು.

ಈಗ ನಮ್ಮ ವರ್ಕ್‌ಷಾಪ್ ಪಾಳು ಬಿದ್ದಹಾಗೆ ಕಾಣಿಸುತ್ತಿತ್ತು. ಯಂತ್ರಗಳು ಉಪಯೋಗವಿಲ್ಲದೆ ಧೂಳು ಮತ್ತು ಜೇಡರ ಬಲೆಗಳಿಂದ ತುಂಬಿಕೊಂಡಿದ್ದವು. ನಾವು ಅವನ್ನು ಎಲ್ಲಾ legal procedures ಮುಗಿಸುವ ತನಕ ಮುಟ್ಟುವಂತಿರಲಿಲ್ಲ. ಇದೆಲ್ಲಾ ಮುಗಿಸಿ ಬ್ಯಾಂಕಿಗೆ ಕಟ್ಟಬೇಕಾದ ಹಣವನ್ನು ಕಟ್ಟಿದನಂತರ ನಾವು ಈ ಯಂತ್ರಗಳನ್ನು ಮಾರಿದೆವು. ಶಿವಶಂಕರ್ ಮತ್ತು ಅರಸ್ ಅವರುಗಳು ಈ ಕೆಲಸವನ್ನು ಪೂರೈಸಿದರು.

ನಮಗೆ ನಮ್ಮ ಮುಂದಿರುವ ಅವಕಾಶಗಳೇನು, ನಾವು ಯಾವ ದಿಕ್ಕಿನಲ್ಲಿ ಪಯಣಿಸಬೇಕು ಎಂಬುದನ್ನು ಕಂಡುಕೊಳ್ಳಬೇಕಾಗಿತ್ತು. ಹೊರ ದೇಶದಲಿದ್ದ ನಮ್ಮ ಹಿತೈಷಿ, ಕ್ರಿಸ್ ಹಿಲ್ ಎಂಬುವರು ನಮಗೆ ಒಂದು ಉತ್ತಮ ಸಲಹೆಯನ್ನೂ ಅದಕ್ಕೆ ಬೇಕಾದ ಧನಸಹಾಯವನ್ನು

ಕೊಡಲು ಮುಂದಾದರು. ಅವರು ನಮಗೆ ಘೂರಿಕ್ ಫೈನಾನ್ಷಿಯಲ್ ಸರ್ವಿಸಸ್ ಎಂಬ ಇನ್ಶೂರಂಸ್ ಕಂಪನಿಯನ್ನು ನಮಗೆ ಪರಿಚಯಿಸಿದರು. ಅದರ ಒಂದು ಯುವ ಮತ್ತು ಸಕ್ಷಮ ಗುಂಪು ನಮ್ಮ ಏ.ಪಿ.ಡಿ ಗೆ ಒಂದು strategic plan ತಯಾರಿಸಿ ಕೊಟ್ಟರು. ಇದಾದ ೬ ವಾರಗಳೊಳಗೆ ನೀಲ್ ರಾಬಿನ್ಸನ್ ಮತ್ತು ನನ್ನ ಕಸಿನ್ ರಾಮದಾಸ್ ಸೇರಿಕ್ಕೊಂಡು ಈ strategic planನ್ನು ಕಾರ್ಯರೂಪಕ್ಕೆ ತರುವಂತ ಒಂದು ನೀಲ ನಕ್ಷೆಯನ್ನು ತಯಾರಿಸಿಕೊಟ್ಟರು.

ಆ ಬದಲಾವಣೆಯ ಸಮಯದಲ್ಲಿ ಆದ ಅಗು ಹೋಗುಗಳ ಬಗ್ಗೆ ಜೇನ್ ಸ್ಪಾರ್ಟರ್ಟ್‌ವೃಥ್ ಅವಳ "Challenging Disability: Forty years of an Indian NGO" (ವಿಕಲಾಂಗತೆಯ ಸವಾಲು: ಭಾರತೀಯ ಒಂದು ಸೇವಾ ಸಂಸ್ಥೆಯ ನಲವತ್ತು ವರ್ಷಗಳು) ಎಂಬ ೨೦೦೧ ರಲ್ಲಿ ಪ್ರಕಾಶಿತ ಪುಸ್ತಕದಲ್ಲಿ ಬಹಳ ಸುಂದರವಾಗಿ ವರ್ಣಿಸಲ್ಪಟ್ಟಿದೆ. ಜೇನ್ ಒರ್ವ VSO Volunteer. ಅವಳಿಗೆ ಏ.ಪಿ.ಡಿ ಬಗ್ಗೆ ಅಪಾರ ಪ್ರೇಮ ಬೆಳೆಯಿತು. ಅಲ್ಲಿ ಎರಡು ವರ್ಷ ಕೆಲಸ ಮಾಡಿದನಂತರ ಅವಳು ಆ ಸಂಸ್ಥೆಯು ಬೆಳೆದು ಬಂದ ದಾರಿಯ ಬಗ್ಗೆ ಒಂದು ಪುಸ್ತಕವನ್ನು ಬರೆಯಲು ಒಪ್ಪಿಕೊಂಡಳು. ಒಂದು ಸಂಸ್ಥೆಯು ಬೆಳೆದು ಬಂದ ಬಗ್ಗೆ, ಹೇಗೆ ಒಂದು ಸದುದ್ಧೇಶವು ನಮ್ಮಲ್ಲಿ ಅಂಕುರಗೊಂಡು, ಬೆಳೆದು, ಏಳು ಬೀಳು ಗಳನ್ನು ಅನುಭವಿಸಿ ಒಂದು ಸಂಸ್ಥೆಯಾಗಿ ಅನೇಕರಿಗೆ ನೆರವಾಗುತ್ತದೆ ಎಂಬುದನ್ನು ದಾಖಲಿಸುವುದು ಮುಖ್ಯ ಎಂದು ನನಗೆ ಅನ್ನಿಸುತ್ತದೆ. ಈ ನಿಟ್ಟಿನಲ್ಲಿ ಜೇನಳ ಪುಸ್ತಕ ನಮ್ಮ ಸಂಸ್ಥೆಯ ಚಟುವಟಿಕೆಗಳ ಒಂದು ಉತ್ತಮ ದಾಖಲೆ. ನಮಗೆ ಅವಳು ಸಿಕ್ಕಿದ್ದು ನಮ್ಮ ಅದೃಷ್ಟವೆನ್ನಬೇಕು. ಒಂದು ಸಂಸ್ಥೆಯ ಜೀವನದಲ್ಲಿಯೂ ಮನುಷ್ಯನ ಜೀವನದಂತೆ ಅನೇಕ ಹಂತಗಳಿರುತ್ತವೆ. ಅದಕ್ಕೂ ಮನುಷ್ಯನಂತೆ ಬೆಳವಣಿಗೆಯ, ಕಷ್ಟದ ಸಮಯಗಳಿರುತ್ತವೆ. ಆ ಸಂಸ್ಥೆಗೆ ಸಂಬಂಧಪಟ್ಟ ಕೆಲಸಗಾರರು, ಆಡಳಿತ ವರ್ಗದವರು ಇತ್ಯಾದಿ ಎಲ್ಲರೂ ಕಷ್ಟಕರವಾದ ಅಥವಾ ಸಂತೋಷವಾದ ಸಮಯಗಳನ್ನು ಅನುಭವಿಸುತ್ತಾರೆ. ಜೇನ್ ಏ.ಪಿ.ಡಿ ಗೆ ನಮ್ಮ ಕೆಲಸದವರಿಗೆ ತರಬೇತಿ ಕೊಡಲು ಮತ್ತು ನಮಗೆ ಒಂದು ಆಡಳಿತ ಸಂಹಿತೆಯನ್ನು ತಯಾರಿ ಮಾಡಿ ಕೊಡಲು ಬಂದಿದ್ದಳು. ಈ ಸಂಹಿತೆಯನ್ನು ಅವಳು ಎಷ್ಟು ಕೂಲಂಕಷವಾಗಿ ತಯಾರಿಸಿದ್ದಳು ಎಂದರೆ ಅದು ಇಂದಿಗೂ ನಮ್ಮ ಸಂಸ್ಥೆಯ ಭಗವದ್ಗೀತೆ. ನಾನು ಅವಳಷ್ಟು ಸಮಯ ಮತ್ತು ಸಹಿಯಾದ ಪದ್ಧತಿಗಳಿಗೆ ಬದ್ಧರಾದ ವ್ಯಕ್ತಿ ಮತ್ತೊಬ್ಬರನ್ನು ಕಂಡಿಲ್ಲ. ಅವಳು ಗಡಿಯಾರದಂತೆ ಕೆಲಸ ಮಾಡುತ್ತಿದ್ದಳು.

ಅವಳು ಅಪಾರವಾದ ಆಡಳಿತ ಕೌಶಲ ಮತ್ತು ಧೈರ್ಯವನ್ನು ಹೊಂದಿದ್ದಳು. ಅವಳು ನಮ್ಮ ಕಾರ್ಮಿಕರ ವಾಸಕ್ಕೆಂದು ಏರ್ಪಡಿಸಿದ್ದ ಪ್ರತಿಯೊಂದು ಮಾದರಿಯಾದ ಮನೆಗಳಲ್ಲಿಯೂ ವಾಸವಿದ್ದಳು, ಆದರೆ ಎಂದೂ ಅಸಮಾನದಿಂದ ಕುಂದು ಕೊರತೆ ಹೇಳಲಿಲ್ಲ. ಅವಳಿಗೆ ಜನರೊಂದಿಗೆ ಇರುವುದು ಬಹಳ ಪ್ರಿಯವಾಗಿತ್ತು. ನಮ್ಮ ಭಾರತೀಯ ಊಟ ಅವಳಿಗೆ ಬಹಳ ಹಿಡಿಸುತ್ತಿತ್ತು ಮತ್ತು ಅವಳು ಕರ್ನಾಟಕದ ಅನೇಕ ಪ್ರೇಕ್ಷಣೀಯ ಸ್ಥಳಗಳನ್ನು ನೋಡಿದ್ದಳು. ಅವಳು ನಮ್ಮೊಡನೆ ಇದ್ದಾಗಲೇ ನಾವು ನಮ್ಮ ಸಂಸ್ಥೆಯ ಹೆಸರನ್ನು "ಅಸೋಸಿಯೇಷನ್ ಆಫ್ ಪೀಪಲ್ ವಿತ್ ಡಿಸಬಿಲಿಟೀಸ್"ಎಂದು ಬದಲಾಯಿಸಿದೆವು. ಅವಳು ಹಿಂದಿರುಗಿ ಅವಳ ದೇಶಕ್ಕೆ ಹೋದಾಗ ಅವಳಿಗೆ ಒ.ಬಿ.ಇ – 'ಆರ್ಡರ್ ಆಫ್ ಬ್ರಿಟಿಷ್ ಎಂಪೈರ್' ಬಿರುದು ಕೊಟ್ಟು ಸನ್ಮಾನಿಸಿದರು.

ನನಗೆ ವೈಯಕ್ತಿಕವಾಗಿ ತೊಂದರೆ ಆಯಿತು. ನಮ್ಮ ಸಂಸ್ಥೆಯ ಟ್ರಸ್ಟಿ ಒಬ್ಬರು ನಾನು ಬೇಕೆಂದು ಹಣಕಾಸಿನ ವಿಷಯದಲ್ಲಿ ಅವ್ಯವಹಾರ ನಡೆಸಿದ್ದೀನಿ ಎಂದು ಆರೋಪ ಮಾಡಿದರು. ನಾವು ನಮ್ಮ ವರ್ಕ್‌ಷಾಪನ್ನು ಮುಚ್ಚಿದ ಮೇಲೆ ಕೆಲಸಗಾರರಿಗೆ ಕೊಡಬೇಕಾದ ಹಣವನೆಲ್ಲಾ ಹಂಚಿದ್ದೆವು, ಆದರೆ ಬ್ಯಾಂಕಿಗೆ ಕೊಡಬೇಕಾದ ಸಾಲವನ್ನು ಇನ್ನೂ ಪಾವತಿಸದಿದ್ದರಿಂದ ಬ್ಯಾಂಕ್ ನಮ್ಮ ವರ್ಕ್ ಷಾಪನ್ನು ಮುಚ್ಚಿದ್ದರು. ಕೆಲವು ದಿನಗಳು ಕಳೆದ ನಂತರ ನಾವು ಬ್ಯಾಂಕಿನವರಿಗೆ ನಮ್ಮ ವರ್ಕ್ ಷಾಪನ್ನು ಸ್ವಚ್ಛ ಪಡಿಸಲು ತೆಗೆಯುವಂತೆ ಅನುಮತಿ ಕೋರಿದೆವು. ಅವರು ಅದನ್ನು ತೆಗೆದಾಗ ಅಲ್ಲಿಟ್ಟಿದ್ದ ಬೆಲೆ ಬಾಳುವ ವಸ್ತುಗಳು ಕಳುವಾಗಿರುವುದು ಅರಿವಾಯಿತು. ಯಾರೋ ಕಳ್ಳ ಚಾವಣಿಯ ಮೂಲಕ ಒಳಗೆ ನುಗ್ಗಿ ಆ ವಸ್ತುಗಳನ್ನು ಕದ್ದಿದ್ದನು. ನಾವು ಪೋಲೀಸರಿಗೆ ದೂರು ಕೊಟ್ಟೆವು. ಈ ಕಳ್ಳತನದಲ್ಲಿ ನನ್ನದೂ ಪಾತ್ರವಿರಬೇಕು ಎಂಬ ಗುಮಾನಿ ಕೆಲವರಿಗಿತ್ತು. ಅವರಿಗೆ ನನ್ನ ವೈಯಕ್ತಿಕ ಖಾತೆಯನ್ನು ತನಿಕೆ ಮಾಡಬೇಕು ಎನ್ನುವ ಆಗ್ರಹ. ಕೊನೆಗೆ ನಾನು, ಈರೀತಿ ನನಗೆ ಮಾನ ಹಾನಿ ಮಾಡಿದರೆ ನಾನು ಅವರಮೇಲೆ ಮಾನನಷ್ಟ ಮೊಕದ್ದಮೆ ಹಾಕಿ ಕೋರ್ಟಿಗೆ ಎಳೆಯಬೇಕಾಗುವುದೆಂದು ನಿರ್ಧರಿಸಿದೆ. ಇದು ನನ್ನ ನೈತಿಕತೆ ಮತ್ತು ಸ್ವಾಭಿಮಾನದ ವಿಷಯ ಎಂದು ನನಗೆ ಅನ್ನಿಸಿತು. ನಮ್ಮ ಆಡಳಿತ ಮಂಡಳಿಯ ಅಧ್ಯಕ್ಷರು ಒಬ್ಬ ಆಡಳಿತಾಧಿಕಾರಿಯನ್ನು ನೇಮಿಸಿದರು. ಅವನು ಆಡಳಿತಕ್ಕಿಂತ ಹೆಚ್ಚಾಗಿ ಗೂಢಚಾರನಂತೆ ನನ್ನಚಲನ ವಲನಗಳ ಬಗ್ಗೆ ಗಮನವಿಡುತ್ತಿದ್ದನು. ಕೊನೆಗೆ ಮಂಡಳಿಗೆ ಅದರ ಅಧ್ಯಕ್ಷರು ಮತ್ತು ಕಾರ್ಯದರ್ಶಿ ಈ ರೀತಿ ಆಡಳಿತಾಧಿಕಾರಿಯನ್ನು ನೇಮಿಸಿರುವುದು ಕಾನೂನು ಬಾಹಿರ ಎಂದು ತಿಳಿದು ಮಂಡಳಿಯ ಸಭೆಯಲ್ಲಿ ಸ್ಫೋಟವಾಯಿತು. ಅವನನ್ನು ಕೆಲಸದಿಂದ ವಜಾ ಮಾಡಿದರು.

ನಾನು ನನ್ನ ಇಡೀ ಜೀವನವನ್ನೇ ಈ ಸಂಸ್ಥೆಗೋಸ್ಕರ ಅರೆದಿದ್ದೆ. ನನಗೆ ಒಂದು ಕ್ಷಣಕ್ಕೂ ಈ ರೀತಿ ನನ್ನ ನೈತಿಕತೆಯ ಬಗ್ಗೆ ಅಪನಂಬಿಕೆ ಬರಬಹುದೆಂಬ ಯೋಚನೆಯೂ ಹೊಳೆದಿರಲಿಲ್ಲ. ಎಲ್ಲವನ್ನೂ ಬಿಟ್ಟು ಹೊರಟು ಹೋಗಲೇ ಎಂಬ ಯೋಚನೆ ನನ್ನನ್ನು ಆವರಿಸಿತು. ಆದರೆ ನಾನು ಎ.ಪಿ.ಡಿ ಯನ್ನು ಅದರ ಚಟುವಟಿಕೆಗಳ ಬಗ್ಗೆ ತಿಳಿವಳಿಕೆಯೇ ಇಲ್ಲದವರಿಗೆ ಹೇಗೆ ಒಪ್ಪಿಸಲಿ? ಅದು ಸಾಧ್ಯವೇ ಇರಲಿಲ್ಲ. ನಾನು ಹೋರಾಡಲು ಸಿದ್ಧಳಾದೆ. ಅದೂ ಅಲ್ಲದೆ, ಮಿಕ್ಕ ಟ್ರಸ್ಟೀ ಗಳಿಗೆ ನನ್ನ ಮೇಲೆ ಅಪಾರ ನಂಬಿಕೆ. ಅವರು ನನ್ನನ್ನು ಸಂಸ್ಥೆಯಲ್ಲಿದ್ದು ಕೆಲಸವನ್ನು ಮುಂದುವರಿಸಲು ಒತ್ತಾಯಿಸುತ್ತಿದ್ದರು. ನಾನು ಅವರಿಗೆ ಸಂಸ್ಥೆಯ ಲೆಕ್ಕ ಪತ್ರಗಳನ್ನು ಪರಿಶೀಲಿಸಿ ಏನಾದರೂ ಹಣದ ದುರುಪಯೋಗವಾಗಿದ್ದರೆ ಕಂಡು ಹಿಡಿಯಲು ಹೇಳಿದೆ. ಇದೆಲ್ಲಾ ಕೆಲವು ದಿನಗಳು ನಡೆದವು. ಅಧ್ಯಕ್ಷರು ಮನಸ್ಸಿಲ್ಲದೆ ಟ್ರಸ್ಟೀ ಪದವಿಗೆ ರಾಜಿನಾಮೆ ಕೊಟ್ಟರು. ಅದಾದ ನಂತರ ಘಟನೆಗಳಲ್ಲಿ ಒಂದು ಹೊಸ ತಿರುವು ಬಂದಿತು. ಸಂಸ್ಥೆಯ ಸರ್ವಸದಸ್ಯರ ಸಭೆಗೆ ಒಂದು ವಾರ ಮುಂಚೆ ಇಬ್ಬರು ಆಡಳಿತ ಮಂಡಳಿಯ ಸದಸ್ಯರು ಬಂದು ನನ್ನನ್ನು ಸಂಸ್ಥೆಯನ್ನು ನಡೆಸುವ ಜವಾಬ್ದಾರಿಯನ್ನು ತೆಗೆದುಕೊಳ್ಳಲು ಕೋರಿದರು. ಈ ಜಗಳಗಳ ಮಧ್ಯೆ ನನಗೆ ಸಂಸ್ಥೆಯ ಭವಿಷ್ಯದ ಬಗ್ಗೆ ಯೋಚನೆಯಾಗಿತ್ತು. ಆದ್ದರಿಂದ ನಾನು ಅವರ ಕೋರಿಕೆಗೆ ಒಪ್ಪಿಕೊಂಡೆ. ಎ.ಪಿ.ಡಿಯನ್ನು ನಡೆಸುವ ದೊಡ್ಡ ಜವಾಬ್ದಾರಿ ನನ್ನ ಹೆಗಲಿನ ಮೇಲೆ ಬಿತ್ತು.

ಈ ಗಲಾಟೆಗಳ ಮಧ್ಯದಲ್ಲಿ, ಅಕ್ಟೋಬರ್ ೧೯೯೩ ರಲ್ಲಿ, ನನಗೆ 'ಆಕ್ಷನ್ ಏಡ್' ನಿಂದ ಇಂಡೋನೇಶಿಯಾಗೆ ಬರಲು ಆಹ್ವಾನ ಬಂದಿತು. ವೆಂಕಿಯ ಜೊತೆ ಆ ಅಮೇರಿಕಾದ ಪ್ರಯಾಣದ ನಂತರ ನನಗೆ ಯಾವ ಪ್ರಯಾಣದಲ್ಲೂ ಆಸಕ್ತಿ ಇರಲಿಲ್ಲ. ಆದರೆ, ನನಗೆ ನನ್ನ ಪಾಸ್ಪೋರ್ಟನ್ನು ನವೀಕರಿಸಬೇಕಾಗಿತ್ತು. ಆದ್ದರಿಂದ ನಾನು ಉತ್ಸಾಹವಿಲ್ಲದಿದ್ದರೂ ಫೋಟೋ ತೆಗೆಸಿಕೊಳ್ಳಲು ನಾಯ್ಡು ಅವರೊಡನೆ ಹೋದೆ. ನಾವು ಒಂದು 'ಒಂದು ನಿಮಿಷದಲ್ಲಿ ಫೋಟೋ' ಎನ್ನುವ ಅಂಗಡಿಯ ಬಳಿ ನಿಂತೆವು. ಆ ಅಂಗಡಿಯು ಬಹಳ ಚಿಕ್ಕದಾಗಿತ್ತು, ನನ್ನ ವ್ಹೀಲ್ ಚೇರಿಗೆ ಒಳಗೆ ಹೋಗಲು ಸಾಧ್ಯವಿರಲಿಲ್ಲ. ನಾವು ಇನ್ನೇನು ಹೊರಡಬೇಕು ಎನ್ನುವಷ್ಟರಲ್ಲಿ ಒಬ್ಬ ಕರಿಯ ಕೋಟುಧಾರಿ, ದೇಶಾವರಿ ನಗೆಯೊಡನೆ ನಮಗೆ ಎದುರಾದ. ನಾಯ್ಡುವಿಗೆ ಅವನ ಪರಿಚಯವಿದ್ದಂಗಿತ್ತು, ಅವರಿಬ್ಬರೂ ರಸ್ತೆಯ ನಡುವಿನಲ್ಲೇ ಅವರಿಬ್ಬರ ಪುನರ್ಮಿಲನವನ್ನು ಸಂಭ್ರಮಿಸುತ್ತಿದ್ದರು. ನಾನು ಕಾಯುತ್ತಿದ್ದೆ. ಆಗ ಡಾನಿ – ಅದು ಆ ಮನುಷ್ಯನ ಹೆಸರು – ನನ್ನನ್ನು ನೋಡಿ ನೀವು ವಿದೇಶ ಪ್ರಯಾಣ ಮಾಡುತ್ತೀರ ಎಂದನು. ನಾನು ಹೌದು, ಅದಕ್ಕೇ ಫೋಟೋ ತೆಗೆಸಿಕೊಳ್ಳಲು

ಬಂದಿದ್ದೀನಿ ಎಂದೆ. ಅವನು ಮುಖವನ್ನು ನೋಡಿ ಭವಿಷ್ಯವನ್ನು ಹೇಳುವವನಂತೆ. ಅವನು ನನಗೆ ನಾನು ಇನ್ನೂ ಅನೇಕ ಕಡೆ ಪ್ರಯಾಣಿಸುತ್ತೇನೆ, ಮತ್ತು ರಾಜ್ಯ ಸರ್ಕಾರವು ನನ್ನನ್ನು ಗೌರವಿಸುತ್ತದೆ ಎಂದನು. ನಾನು ಅವನಿಗೆ ನನಗೆ ಒಂದು ಪ್ರಯಾಣವೇ ಸಾಕು, ಮತ್ತು ನನಗೆ ಬೇಕಾದ ಗೌರವವೆಲ್ಲಾ ಸಿಕ್ಕಿದೆ ಎಂದೆ.

ಅವನು ಮತ್ತೊಮ್ಮೆ ನನ್ನನ್ನು ದಿಟ್ಟಿಸಿ ನೋಡಿ, ನನ್ನ ಮದುವೆಯು ಮುರಿದು ಬಿದ್ದಿದೆ, ನಾನು ಮದುವೆಯೇ ಮಾಡಿಕೊಳ್ಳಬಾರದಿತ್ತು, ನನಗೆ ಮದುವೆಯ ಯೋಗವೇ ಇಲ್ಲ, ನಾನು ಗಂಡಾಗಿ ಹುಟ್ಟಬೇಕಿತ್ತು ಎಂದು ಹೇಳಿದ. ಈಗ ನನ್ನ ಕೋಪ ಮಿತಿ ಮೀರಿತು. ನಾನು ಅವನಿಗೆ 'ನನಗೆ ಹೆಂಗಸಾಗಿರುವುದು ಇಷ್ಟ, ನಾನು ಮತ್ತೊಂದು ಜನ್ಮದಲ್ಲಿಯೂ ಹೆಂಗಸಾಗಿ ಹುಟ್ಟಲು ಇಚ್ಚಿಸುತ್ತೇನೆ' ಎಂದೆ. ಡಾನಿ ಅಷ್ಟಕ್ಕೇ ನಿಲ್ಲಿಸಲಿಲ್ಲ. ಅವನು ನಾನು ನಂಬಿರುವರೇ ನನ್ನ ವಿರುದ್ಧ ಕೆಲಸ ಮಾಡುತ್ತಿದ್ದಾರೆ, ಆದರೆ ಡಿಸೆಂಬರ್ ೫ ರ ನಂತರ ನಾನೇ ಸಂಸ್ಥೆಯ ಮುಖ್ಯಸ್ಥಳಾಗಿ ಕೆಲಸ ಮಾಡುತ್ತೇನೆ. ಅನೇಕರು ನನ್ನ ನೆರವಿಗೆ ಬಂದು ನಮ್ಮ ಸಂಸ್ಥೆಯ ಹಣಕಾಸಿನ ಸ್ಥಿತಿಯು ಭದ್ರವಾಗುತ್ತದೆ, ನಾನು ೮೮ ವರ್ಷಗಳು ಬದುಕಿರುತ್ತೇನೆ, ಎಂದ. ನನಗೆ ಅಷ್ಟು ದಿನಗಳು ಬದುಕಿರುವ ಆಸೆ ಇರಲಿಲ್ಲ, ಆದರೆ ನಾಯ್ಡು ಈ ಮಾತನ್ನು ಕೇಳಿ ಬಹಳ ಸಂತೋಷಪಟ್ಟರು. ನನಗೆ ಈ ರೀತಿಯ ಭವಿಷ್ಯ ವಾಣಿಗಳಲ್ಲಿ ಅಷ್ಟು ನಂಬಿಕೆ ಇರಲಿಲ್ಲ. ನಾನು ಅವನನ್ನು ನಾಯ್ಡುವಿಗೆ ಯಾವಾಗ ಮದುವೆ ಆಗುತ್ತದೆ ಎಂಬುದನ್ನು ತಿಳಿಸಲು ಹೇಳಿದೆ. ಅದಕ್ಕೆ ಅವನು ಆ ರೀತಿಯ ಸೂಚನೆಗಳೇ ಇಲ್ಲ ಎಂದನು. ನಾಯ್ಡು ಅವರು ಇದನ್ನು ಕೇಳಿ ಬಹಳ ಖುಷಿ ಪಟ್ಟರು ಮತ್ತು ಅವನ ಮಾತು ನಿಜವಾದರೆ, ಅವನಿಗೆ ಏನು ಕೇಳಿದರೂ ಕೊಡುವುದಾಗಿ ತಿಳಿಸಿದರು.

ನಾನು ಸಂಸ್ಥೆಯ ಅಧ್ಯಕ್ಷೆಯಾದ ನಂತರ ನನಗೆ ಈ ವಿಷಯ ನೆನಪಾಯಿತು. ನಾನು ನನ್ನ ಡ್ರೈವರ್ ಜಾರ್ಜ್ ಅನ್ನು ನನ್ನನು ಎಮ್.ಜಿ. ರಸ್ತೆಗೆ ಕರೆದು ಕೊಂಡು ಹೋಗಲು ಹೇಳಿದೆ. ನನಗೆ ಆ ಡಾನಿಯನ್ನು ನೋಡಬೇಕಿತ್ತು. ನಾಯ್ಡು ಮತ್ತು ನಾನು ಅವನನ್ನು ನೋಡಲು ಬಹಳ ಪ್ರಯತ್ನ ಪಟ್ಟೆವು, ಆದರೆ ಅವನು ಎಲ್ಲೂ ಸಿಗಲಿಲ್ಲ. ನಂತರ ಅವನು ತೀರಿಕೊಂಡ ಎಂದು ತಿಳಿಯಿತು. ನನಗೆ ಒಂದು ರೀತಿಯ ಪಾಪ ಪ್ರಜ್ಞೆ, ನಾನು ಅವನಿಗೆ ಋಣಿಯಾಗಿದ್ದೆ ಎಂದೆನಿಸಿತು. ನಾವು ನಮ್ಮ ಋಣಗಳನ್ನು ಈ ಜೀವನಾವಧಿಯಲ್ಲೇ ತೀರಿಸಬೇಕು, ಅವನ್ನು ಮುಂದಕ್ಕೊಯ್ಯಬಾರದು ಎನ್ನುವುದು ನನ್ನ ದೃಢ ನಂಬಿಕೆ. ಅದಕ್ಕೇ ನಾನು ಏ.ಪಿ.ಡಿ ಯ ಒಬ್ಬ ಕೆಲಸದವನ ಹತ್ತಿರ ಇನ್ಫಂಟ್ ಜೀಸಸ್ ಚರ್ಚಿನ ಹುಂಡಿಯಲ್ಲಿ ಹಾಕುವಂತೆ ಸ್ವಲ್ಪ ಹಣವನ್ನು ಕಳುಹಿಸಿದೆ. ಡಾನಿ ಹೇಳಿದ್ದ ಎಲ್ಲಾ ಮಾತುಗಳೂ

ನಿಜವಾಗಿದ್ದವು. ನಾಯ್ಡು ನಂತರ ನನಗೆ ಅವರಿಗೆ ಡಾನಿಯ ಪರಿಚಯ ಹೇಗಾಯಿತು ಎಂದು ತಿಳಿಸಿದರು. ಒಮ್ಮೆ ಅವರು ಒಬ್ಬ British volunteer ಅನ್ನು ಹಣವನ್ನು ಬದಲಾಯಿಸಲು Thomas Cook Office ಗೆ ಕರೆದುಕೊಂಡು ಹೊಗಿದ್ದರಂತೆ. ಆಗ ಅಲ್ಲಿ ಆ ಹುಡುಗನನ್ನು ನೋಡಿದ ಡಾನಿ ಅವನಿಗೆ ಅವನ girl friend ಬಿಟ್ಟಿರುವುದ ಬಗ್ಗೆ ಹೇಳಿದನಂತೆ. ಆ ಹುಡುಗನಿಗೆ ಎಲ್ಲಿಲ್ಲದ ಆಶ್ಚರ್ಯ. ಹೇಗೆ ಏನೂ ಪರಿಚಯವಿಲ್ಲದ ಈ ಮನುಷ್ಯನಿಗೆ ಈ ವಿವರಗಳೆಲ್ಲಾ ಗೊತ್ತು ಎನ್ನುವ ಆಶ್ಚರ್ಯ. ಡಾನಿಗೆ ಒಬ್ಬರ ಮುಖ ನೋಡಿ ಅವರ ಜೀವನದಲ್ಲಿ ನಡೆಯುವ ಘಟನೆಗಳನ್ನು ಹೇಳುವ ವಿದ್ಯೆ ಗೊತ್ತಿತ್ತು.

* * *

# ಹೊಸ ದಿಶೆಗಳು

ಎ.ಪಿ.ಡಿ ಯ ಅಧ್ಯಕ್ಷೆಯಾಗಿ ನನಗೆ ಎರಡು ಮುಖ್ಯ ಕೆಲಸಗಳಿದ್ದವು. ಅಲ್ಲಿನ ಹಣಕಾಸಿನ ಆಡಳಿತಕ್ಕೆ ಒಂದು ಸೂಕ್ತ ಪದ್ಧತಿಯನ್ನು ಅಳವಡಿಸಿ, ಹೊರಗಿನವರೊಡನೆ ಸಂಪರ್ಕ ಮತ್ತು ಹಣ ಸಂಗ್ರಹಕ್ಕೆ ಒಂದು ವಿಭಾಗವನ್ನು ಏರ್ಪಡಿಸುವುದಾಗಿತ್ತು. ಎ.ಪಿ.ಡಿ ನಡೆಸುತ್ತಿರುವ ಕಾರ್ಯಕ್ರಮಗಳ ಬಗ್ಗೆ ಜನರಲ್ಲಿ ಒಂದು ಸದ್ಭಾವನೆಯನ್ನು ಮೂಡಿಸುವುದೇ ಈ ವಿಭಾಗದ ಮುಖ್ಯ ಧ್ಯೇಯವಾಗಿತ್ತು. ಅಷ್ಟರಲ್ಲಿ ನಾನು ಇಂಡೋನೇಶಿಯಾಗೆ ಹೋಗಬೇಕಾಯಿತು. 'ಆಕ್ಷನ್ ಏಡ್'ನ ಮಾಯಾ ಥಾಮಸ್ ನನ್ನನ್ನು ಬೀಜಿಂಗ್ ನಲ್ಲಿ ನಡೆಯುವ ಸಂಯುಕ್ತ ರಾಷ್ಟ್ರಗಳ ಮಹಿಳಾ ಸಮ್ಮೇಳನದಲ್ಲೂ ಭಾಗವಹಿಸಲು ಒತ್ತಾಯಿಸಿದಳು. ನಾನು ಪೂರ್ವದಲ್ಲಿರುವ ಈದೇಶಗಳಿಗೆ ಹಿಂದೆಂದೂ ಹೋಗಿರಲಿಲ್ಲ. ಆದ್ದರಿಂದ ಅಲ್ಲಿನ ಸೌಕರ್ಯಗಳ ಬಗ್ಗೆ ಆತಂಕವಿತ್ತು, ನನ್ನಲ್ಲಿ ಅನೇಕ ಪ್ರಶ್ನೆಗಳಿದ್ದವು. ಆದರೆ ಅಲ್ಲಿ ವಿಕಲಾಂಗರಿಗೆ ಬೇಕಾದ ಎಲ್ಲ ಸೌಕರ್ಯಗಳು ಇವೆ ಎಂದು ನನಗೆ ಹೇಳಿದರು.

ನನ್ನ ಪ್ರಯಾಣದ ಆರಂಭವು ಅಷ್ಟು ಹಿತಕರವಾಗಿರಲಿಲ್ಲ. ಏರ್ ಇಂಡಿಯಾ ಅವರ ಜಕಾರ್ತಾಗೆ ಹೋಗುವ ವಿಮಾನದಲ್ಲಿ ಯಾರೂ ನನಗೆ ಸಹಾಯ ಮಾಡಲು ಸಿದ್ಧರಿರಲಿಲ್ಲ. ನಾನು ನನಗೆ ಒಂದು aisle chair ಬೇಕು ಎಂದು ಕೇಳಿದೆ, ಆದರೆ ಅವರು ಅದು ತಮ್ಮಲ್ಲಿಲ್ಲ, ನನ್ನನ್ನು ಎತ್ತಿ ಕೂರಿಸುವುದಾಗಿ ಹೇಳಿದರು. ನನಗೆ ನಾನೇನು ಸಾಮಾನೇ ಎತ್ತಿಕೊಂಡು ಹೋಗಲು ಎನ್ನಿಸಿತು. ಈ ರೀತಿ ವಿಕಲಾಂಗರಿಗೆ ಸೌಕರ್ಯಗಳೇ ಇಲ್ಲದೆ ಹೇಗೆ ನೀವು ಈ ಸಂಸ್ಥೆಯನ್ನು ನಡೆಸುತ್ತೀರಿ ಎಂದು ನಾನು ಅವರೊಡನೆ ಜಗಳವಾಡಿದೆ. ಕೊನೆಗೆ ವಿಮಾನದ ಪೈಲೆಟ್ ಕುದ್ದಾಗಿ ಬಂದು ನನ್ನಲ್ಲಿ ಕ್ಷಮೆ ಕೋರಿದರು. ನಾನು ಈ ರೀತಿಯ ನಿರ್ಲಕ್ಷ್ಯವನ್ನು ಕಳೆದ ೫೦ ವರ್ಷಗಳಿಂದ ಸಹಿಸುತ್ತಾ ಬಂದಿದ್ದೆ, ಆದರೆ ಅಂದು ನನ್ನೊಳಗೆ ಏನೋ ಒಂದು ಸ್ಫೋಟವಾಯಿತು. ಇಬ್ಬರು ನನ್ನನ್ನು ಎತ್ತಿಕೊಂಡು ಹೋಗಿ ನನ್ನ ಆಸನದಲ್ಲಿ ಕುಳ್ಳಿರಿಸಲು ಪ್ರಯತ್ನ ಪಡುತ್ತಿದ್ದರು. ನನ್ನ ಆಸನವು ಎಲ್ಲೋ ಮಧ್ಯದಲ್ಲಿದ್ದರಿಂದ, ಅವರು ನನ್ನನ್ನು ಆಗಾಗ ಕೆಳಗೆ ಇಳಿಸಿ ದಣಿವಾರಿಸಿಕೊಳ್ಳುತ್ತಿದ್ದರು. ಈ ಮಧ್ಯೆ ನಾನು ಅಕ್ಕಪಕ್ಕದಲ್ಲಿದ್ದ, ಈ ತಮಾಷೆಯನ್ನು ನೋಡುತ್ತಿದ್ದ ಪ್ರಯಾಣಿಕರೊಡನೆ ಹರಟುತ್ತಿದ್ದೆ, ಜೋರಾಗಿ 'ನೋಡಿ ನನ್ನನು ಸಾಮಾನಿನಂತೆ ಹೊತ್ತುಕೊಂಡು ಹೋಗುತ್ತಿದ್ದಾರೆ. ವ್ಯತ್ಯಾಸವೇನೆಂದರೆ ಈ ಭಾರವಾದ ಸಾಮಾನಿಗೆ ಧ್ವನಿಯಿದೆ. ನನ್ನ ಜೀವನ ಎಡೀ ಈ ರೀತಿ ಅನುಭವಿಸುತ್ತಿದ್ದೀನಿ' ಎಂದು ಹೇಳುತ್ತಿದ್ದೆ. ಮಿಕ್ಕವರನ್ನು ಮರ್ಯಾದೆಯೊಡನೆ

ಅವರವರ ಆಸನಕ್ಕೆ ಕರೆದುಕೊಂಡು ಹೋಗುತ್ತಿದ್ದರೆ, ನನಗೆ ಯಾಕೆ ಮೊದಲಿನ ಸಾಲಿನಲ್ಲಿ ಜಾಗ ಕೊಡಲಿಲ್ಲ? ಹಾಗೆ ಮಾಡಿದ್ದರೆ ನನ್ನನ್ನು ಈ ರೀತಿ ಎತ್ತಿಕ್ಕೊಂಡು ಹೋಗುವುದು ತಪ್ಪುತ್ತಿತ್ತಲ್ಲವೇ? ಹಾಗೆ ಮಾಡುವುದೇ ಜಾಣತನವಾಗಿತ್ತು ಅಲ್ಲವೇ? ಇತರ ಪ್ರಯಾಣಿಕರಲ್ಲಿ, ಮೊದಲಿನ ಸಾಲಿನಲ್ಲಿ ಕೂತಿದ್ದ ಪ್ರಯಾಣಿಕರು ಯಾರಾದರೂ ತಮ್ಮ ಜಾಗವನ್ನು ನನಗೆ ಬಿಟ್ಟುಕೊಟ್ಟಿದ್ದರೆ ಇದೆಲ್ಲಾ ತಪ್ಪುತ್ತಿತ್ತು ಅಲ್ಲವೇ? ಆದರೆ ಈ ಯೋಚನೆ ಯಾರಿಗೂ ಬರಲಿಲ್ಲ, ಅಲ್ಲದೆ ಅವರು ಯಾರಿಗೂ ಇದು ಬೇಕಾಗಿರಲಿಲ್ಲ.

ವಿಮಾನದ ಚಾಲಕವರ್ಗದವರಿಗೆ ನನ್ನ ಕೂಗಾಟ ಹೆದರಿಕೆ ಉಂಟು ಮಾಡಿತು. ಸ್ವಲ್ಪಹೊತ್ತಿಗೆ ಓರ್ವ ಸುಂದರವಾಗಿ ಅಲಂಕಾರ ಮಾಡಿಕೊಂಡಿರುವ ಯುವತಿಯು ನನ್ನಲ್ಲಿಗೆ ಬಂದು 'ನಿಮಗೆ ದಣಿವಾಗಿರಬೇಕು, ಕುಡಿಯಲು ಸ್ವಲ್ಪ ನೀರು ಕೊಡಲೆ?' ಎಂದು ಕೇಳಿದಳು. ನಾನು ಅವಳಿಗೆ, 'ನನ್ನನ್ನು ಹೊತ್ತು ತಂದ ಗಂಡಸರಿಗೆ ಆ ನೀರನ್ನು ಕೊಡಿ'ಎಂದೆ. ಅವಳು "ನಿಮಗೆ ಹೇಗೆ ಅನ್ನಿಸುತ್ತಿದೆ ಎಂಬುದು ನನಗೆ ಅರ್ಥವಾಗುತ್ತದೆ" ಎಂದಳು. ನನಗೆ ಬಹಳ ಕೋಪ ಬಂತು. ನಾನು ಅವಳಿಗೆ 'ಅರ್ಥವಾಗಿದ್ದರೆ ನೀವು ನನಗೆ ಮುಂದಿನ ಸಾಲಿನಲ್ಲಿ ಜಾಗ ಕೊಡುತ್ತಿದ್ದಿರಿ'ಎಂದೆ. ಅವಳು ಉತ್ತರಿಸಲಿಲ್ಲ, ಸದ್ದಿಲ್ಲದೆ ಜಾಗ ಖಾಲಿ ಮಾಡಿದಳು. ಸ್ವಲ್ಪ ಹೊತ್ತಿಗೆ ಮತ್ತೊಬ್ಬಳು ಬಂದು ನನಗೆ ಕುಡಿಯಲು ಏನಾದರೂ ಬೇಕೆ ಎಂದು ಕೇಳಿದಳು. ಆಗ ನನಗೆ ಇವರಿಗೆ ವಿಕಲಾಂಗರ ಸಮಸ್ಯೆಗಳ ಬಗ್ಗೆ ಏನೂ ಗೊತ್ತಿಲ್ಲ ಎಂಬುದು ಅರ್ಥವಾಯಿತು. ನಾನು ಅವಳಿಗೆ 'ನಾನು ಪ್ರಯಾಣ ಮಾಡುತ್ತಿರುವುದರಿಂದ, ಕಳೆದ ಎಂಟು ಘಂಟೆಗಳಿಂದ ಏನೂ ಕುಡಿದಿಲ್ಲ. ಏನಾದರೂ ಕುಡಿದರೆ ಶೌಚಾಲಯಕ್ಕೆ ಹೋಗಬೇಕಾಗಬಹುದು. ಆಗ ನೀವು ಬಂದು ನನ್ನನ್ನು ಎತ್ತಿಕೊಂಡು ಹೋಗುತ್ತೀರಾ? ಶೌಚಾಲಯವು ವಿಕಲಾಂಗರು ಉಪಯೋಗಿಸುವಂತಿದೆಯೇ? ಎಂದು ಕೇಳಿದೆ. ಅವಳ ಕಣ್ಣುಗಳಲ್ಲಿ ನೀರು ತುಂಬಿಕೊಂಡಿತು. ನಾನು ಅವಳಿಗೆ 'ಅಳಬೇಕಾದವಳು, ಸಂಕಟ ಪಡುವ ನಾನು' ಎಂದೆ. ಅವಳಿಗೆ ನನ್ನನ್ನು ಕಂಡು ಕನಿಕರ, ಆದರೆ ನನಗೆ ಅವಳ ಕನಿಕರ ಬೇಕಿರಲಿಲ್ಲ. ವಿಕಲಾಂಗರು ತಮ್ಮ ಧ್ವನಿಯನ್ನು ಮರೆತಿದ್ದರು, ಅಥವಾ ಅದನ್ನು ಸರಿಯಾದ ಜಾಗದಲ್ಲಿ ಉಪಯೋಗಿಸುತ್ತಿರಲಿಲ್ಲ. ನಾನು ವಿಕಲಾಂಗರನ್ನು ಜನರು ಮನುಷ್ಯರಂತೆ ಕಾಣಲಿ, ವಸ್ತುಗಳ ಮೂಟೆಗಳಂತಲ್ಲಎಂಬುದನ್ನು ಹೇಳಲು ಪ್ರಯತ್ನಿಸಿದೆ. ನಮಗೆ ಸ್ವಾತಂತ್ರ ಬಂದು ಅರ್ಧ ಶತಮಾನವಾಗಿದ್ದರೂ ನಾವು ನಿಂತಲ್ಲೇ ನಿಂತಿದ್ದೀವಿ, ಇತರ ದೇಶಗಳು ನಮಗಿಂತ ಬಹಳ ಮುಂದೆ ಹೋಗಿವೆ.

ಪ್ರಯಾಣ ಶುರುವಾಗಿ ಅರ್ಧಘಂಟೆಯ ನಂತರ ಕ್ಯಾಬಿನ್ ಕ್ರೂವಿನ ಮುಖ್ಯಸ್ಥರು ಬಂದರು ಮತ್ತು ನನಗೆ ಆದ ಅಸೌಕರ್ಯಕ್ಕೆ ಕ್ಷಮೆ ಕೇಳಿದರು. ನಾನು ಅವರಿಗೆ 'ನೀವು ಕೂಡ ನಿಮ್ಮ ಮೇಲಿನ ಅಧಿಕಾರಿಗಳಿಗೆ ವಿಕಲಾಂಗರಿಗೆ ಬೇಕಾದ ಸೌಕರ್ಯಗಳನ್ನು ವಿಮಾನದಲ್ಲಿ ಒದಗಿಸುವುದ ಬಗ್ಗೆ ತಿಳಿಸಿಲ್ಲ ಮತ್ತು ಆಗ್ರಹ ಪಡಿಸಿಲ್ಲ' ಎಂದೆ. ನನ್ನ ಹತ್ತಿರ ಕುಳಿತಿದ್ದ ಒರ್ವ ಫ್ರೆಂಚ್ ನಾಗರೀಕರು ನಾನು ಕ್ರೂವಿನ ಮುಖ್ಯಸ್ಥರಿಗೆ ಈ ವಿಷಯವನ್ನು ಹೇಳಿದ್ದು ಸರಿಎಂದರು. ನನಗೆ ಈ ವಿಷಯವನ್ನು ಎಲ್ಲರ ಎದುರಿಗೂ ಬಹಿರಂಗವಾಗಿ ಹೇಳಿದ್ದು ಸಮಾಧಾನ ಮತ್ತು ಸಂತೋಷವನ್ನು ತಂದಿತು. ಇದನ್ನು ಮಾಡಲು ನನಗೆ ಐವತ್ತು ವರ್ಷಗಳು ಹಿಡಿಯಿತು. ನಾನು ಹಿಂತಿರುಗಿದ ನಂತರ ಏರ್ ಇಂಡಿಯಾದ ಜಂಟಿ ಚೇರ್ಮನ್ ಆಗಿದ್ದ ರೂಸಿ ಮೋಡಿ ಅವರಿಗೆ ನಾಲ್ಕು ಪುಟಗಳ ಪತ್ರವನ್ನು ಬರೆದು ಹೇಗೆ ಏರ್ ಇಂಡಿಯಾ ತನ್ನಲ್ಲಿ ಪ್ರಯಾಣಿಸುವ ನನ್ನಂತಹ ವಿಕಲಾಂಗರಿಗೆ ಪ್ರಯಾಣವನ್ನು ಸುಖಕರ ಅನುಭವ ವಾಗಿ ಮಾಡಬಹುದು ಎಂದು ತಿಳಿಸಿದೆ. ನಾನು ಈ ಪತ್ರಕ್ಕೆ ಜವಾಬು ಬರುತ್ತೆಂದು ಎದುರು ನೋಡಲಿಲ್ಲ, ಅದಕ್ಕೆ ಜವಾಬು ಬರಲೂ ಇಲ್ಲ. ಆದರೆ ನನಗೆ ನಾನು ಮಾಡಿದ್ದು ಸರಿ ಎಂಬ ಸಮಾಧಾನವಿತ್ತು.

ನನಗಾದ ಕಿರಿ ಕಿರಿ ಮುಂದುವರೆಯಿತು. ಜಕಾರ್ತಾ ಏರ್ಪೋರ್ಟಿನಲ್ಲಿ ಒಬ್ಬ ಟಾಕ್ಸಿ ಡ್ರೈವರ್ ಕೈಯಲ್ಲಿ ಒಂದು ಫಲಕವನ್ನು ಹಿಡಿದುಕೊಂಡು ನನಗಾಗಿ ಕಾಯುತ್ತಿದ್ದನು. ಅವನು ನನ್ನನ್ನು ಹೋಟಲಿಗೆ ಕರೆದುಕೊಂಡು ಹೋದನು. ಅಲ್ಲಿ ಒಬ್ಬ ಪುಟ್ಟ ಹುಡುಗ ನನ್ನ ಸಾಮಾನನ್ನು ರೂಮಿಗೆ ತಂದು ಇಟ್ಟನು. ಅವನು ಓಡಿ ಹೋಗುವುದರೊಳಗೆ ನಾನು ಅವನನ್ನು ಹಿಡಿದು ನಿಲ್ಲಿಸಿದೆ. ಅವನಿಗೆ ಚೂರು ಪಾರು ಇಂಗ್ಲಿಷ್ ಬರುತ್ತಿತ್ತು. ನನಗೆ ಅವನ ಸಹಾಯವುಬೇಕಿತ್ತು. ನನ್ನ ವ್ಹೀಲ್ ಚೇರಿಗೆ ಬ್ರೇಕ್ ಇರಲಿಲ್ಲ. ಆದ್ದರಿಂದ ನಾನು ಬಾತ್ರೂಮ್‌ಗೆ ಹೋಗುವಾಗ ಅಥವಾ ಮಲಗಬೇಕಾದಾಗ ಅದನ್ನೊಬ್ಬರು ಹಿಡಿದುಕೊಳ್ಳ ಬೇಕಾಗುತ್ತಿತ್ತು. ಅವನು ಬೆಳಗಿನ ಪಾಳಿಯಲ್ಲಿ ಬರುವ ಒಬ್ಬರನ್ನು ನನ್ನ ಸಹಾಯಕ್ಕೆ ಕಳುಹಿಸುವುದಾಗಿ ತಿಳಿಸಿದ. ಅವನಿಗೋಸ್ಕರ ನಾನು ಬಾಗಿಲನ್ನು ತೆರೆದಿಡಬೇಕಾಯಿತು. ಇದು ನನಗೆ ಸ್ವಲ್ಪ ಆತಂಕ ಉಂಟುಮಾಡಿತು. ಬೆಳಿಗ್ಗೆ ಅವನು ಬಂದ. ಆದರೆ 'ಸೋಲೋ'ವಿಗೆ ಹೊಗಲು ಬೇಕಾದ ಟಿಕೆಟ್ ನನ್ನ ಬಳಿ ಇರಲಿಲ್ಲ. ಅದನ್ನು ಏರ್ ಪೋರ್ಟಿನಲ್ಲಿ ನನಗೆ ತಲಪಿಸುತ್ತಾರೆ ಎಂದು ಹೇಳಿದರು. ಆದರೆ ಯಾರೂ ಬರದಿದ್ದ ಕಾರಣ ನಾನೇ ಟಿಕೆಟ್ಟನ್ನು ತೆಗೆದುಕೊಂಡು ವಿಮಾನವನ್ನು ಹತ್ತಿದೆ. ಆಗ ಒಬ್ಬ ಓಡಿಬಂದು ನನ್ನ ಟಿಕೆಟ್ಟನ್ನು ಬೆಂಗಳೂರಿಗೆ ಕಳುಹಿಸಿದ್ದಾರೆ ಎಂದು ಹೇಳಿದ. ಎಂತಹ ಗೊಂದಲ.

ಆದರೆ ನಾನು ಸೋಲೋ ಸೇರಿದನಂತರ ಎಲ್ಲವೂ ಬದಲಾಯಿತು. ಅಲ್ಲಿ ಒಬ್ಬ ಯಶಸ್ವೀ ವೈದ್ಯರು ಒಂದು ಸುಸಜ್ಜಿತ ಕೇಂದ್ರವನ್ನು ಸ್ಥಾಪಿಸಿದ್ದರು. ಅಲ್ಲಿಗೆ ವಿಕಲಾಂಗರ ಗುಂಪೇ ವಿಶ್ವದ ಎಲ್ಲಾ ಕಡೆಯಿಂದಲೂ ಬಂದು ಸೇರಿತ್ತು. ಅದೊಂದು ಬೇರೆಯ ಪ್ರಪಂಚ. ಅಲ್ಲಿ ನಾವು ಎರಡು ವಾರಗಳನ್ನು ಬಹಳ ಆನಂದದೊಡನೆ ಕಳೆದೆವು. ನಾನು ಅನೇಕರನ್ನು ಸಂಧಿಸಿದೆ ಮತ್ತು ಅನೇಕರು ನನಗೆ ಮಿತ್ರರಾದರು. ಈಗಲೂ ಅವರಲ್ಲಿ ಅನೇಕರು ನನಗೆ ಬೇರೆ ಬೇರೆ ಕಾರ್ಯಕ್ರಮಗಳಲ್ಲಿ ಸಿಗುತ್ತಾರೆ. ನನಗೆ ಒಬ್ಬಳೇ ಪ್ರಯಾಣ ಮಾಡುವುದು ಒಂದು ಸವಾಲಾಗಿತ್ತು, ಆದರೆ ಅದು ಅನೇಕ ವಿಷಯಗಳ ಬಗ್ಗೆ ನನ್ನ ಕಣ್ಣು ತೆರೆಸಿತು. ನಾನು ಈ ಅನುಭವಗಳನ್ನು ಕಥೆಗಳಂತೆ ಜ್ಞಾಪಕವಿಟ್ಟುಕೊಂಡು ಮುಂದಿನ ಪೀಳಿಗೆಗೆ ತಿಳಿಸಲು ಇಚ್ಛಿಸುತ್ತೇನೆ. ಆಗ ಅವರಿಗೆ ಜನರು ಹೇಗೆ ಕಷ್ಟಪಟ್ಟರು ಎಂದು ತಿಳಿಯುತ್ತದೆ. ವಿಕಲಾಂಗರಿಗೆ ಸೇವೆ ಮಾಡುವ ಕೆಲಸವು ಬಹಳ ಕಷ್ಟವಾದದ್ದು. ಅದಕ್ಕೆ ಶ್ರದ್ಧೆಯಿಂದ ಕೆಲಸಮಾಡುವವರು ಬೇಕು. ದಿನೇ ದಿನೇ ಎಲ್ಲವೂ ಬದಲಾಗುತ್ತಿವೆ. ಇಂದು ಪ್ರಯಾಣ ಬಹಳ ಸುಖಕರವಾಗಿದೆ, ಆದರೆ ನಾವು ಗ್ರಾಮ ಪ್ರದೇಶಕ್ಕೋ ಚಿಕ್ಕ ಊರಿಗೋ ಹೋದರೆಆಗ ನಮಗೆ ಈ ಹೋರಾಟ ಇನ್ನೂ ಮುಗಿದಿಲ್ಲ ಎಂಬ ಅರಿವಾಗುತ್ತದೆ.

ಎಷ್ಟು ಜನರಿಗೆ ನಿಜವಾಗಿ ವಿಕಲಾಂಗರ ಬೇಡಿಕೆಗಳ ಬಗ್ಗೆ ಸಂವೇದನೆ ಇದೆ? ನನ್ನ ಮಟ್ಟಿಗೆ ಟಿ.ಪ್ರದೀಪ್ ಮತ್ತು ಶ್ರೀಮತಿ ಈಶ್ವರ್ಯಯ್ಯ ಅವರುಗಳು ವಿಶೇಷವಾದ ವ್ಯಕ್ತಿಗಳು. ಅವರು ವಿಕಲಾಂಗರಲ್ಲದಿದ್ದರೂ, ವಿಕಲಾಂಗರಬಗ್ಗೆ ಬಹಳ ಸೂಕ್ಷ್ಮವಾದ ಸಂವೇದನೆ ಮತ್ತು ಅನುಕಂಪ ಉಳ್ಳವರು. ನಾನು ಎ.ಪಿ.ಡಿ ಯ 'ಆಕ್ಷನ್ ಏಡ್' ಗೆ ಕೆಲಸಮಾಡುತ್ತಿದ್ದಾಗ ಪ್ರದೀಪ್ ಅವರ ಪರಿಚಯವಾಯಿತು. ಎ.ಪಿ.ಡಿ ಅವರು ಕೆಲಸದ ಕ್ಷೇತ್ರದಲ್ಲಿ ಬರುತ್ತಿತ್ತು ಮತ್ತು ಅವರು ಆಗಾಗ ಅಲ್ಲಿಗೆ ಬರುತ್ತಿದ್ದರು. ನಾವು ಒಳ್ಳೆಯ ಸ್ನೇಹಿತರಾದೆವು. ಕೆಲವು ಸಮಯದ ನಂತರ ಅವರು ಸ್ವಂತವಾಗಿ ಕೆಲಸ ಮಾಡಲು ನಿರ್ಧರಿಸಿ ರಾಯಚೂರಿನಲ್ಲಿ 'ಸಮೂಹ' ಎಂಬ ಸಂಸ್ಥೆಯನ್ನು ಪ್ರಾರಂಭಿಸಿದರು. ವಿದ್ಯೆ, ಸ್ವಾಸ್ಥ್ಯ, ವಿಕಲಾಂಗರಿಗೆ ನೆರವು, ಪ್ರಗತಿ ಇತ್ಯಾದಿ ಅನೇಕ ವಿಷಯಗಳಲ್ಲಿ ಹಿಂದುಳಿದಿದ್ದ ಕಾರಣ ರಾಯಚೂರನ್ನು ಆರಿಸಲಾಗಿತ್ತು. ಅವರ ಆಮಂತ್ರಣದ ಮೇರೆಗೆ ನಾನು ಆ ಸಂಸ್ಥೆಯ ಆಡಳಿತ ಮಂಡಳಿಯ ಸದಸ್ಯಳಾದೆ ಮತ್ತು ಅವರ ವಿಕಲಾಂಗರ ನೆರವಿನ ಕಾರ್ಯಕ್ರಮಗಳನ್ನು ಪ್ರಾರಂಭಿಸಿದೆ.

ನಮ್ಮಿಬ್ಬರಲ್ಲೂ 'ಸಮೂಹ'ದ ಶೌಚಾಲಯಗಳ ಬಗ್ಗೆ ಒಂದು ಹಾಸ್ಯದ ಮಾತಿತ್ತು. ಅಲ್ಲಿನ ಕಮೋಡ್ ಗೆ ನಾನು 'ಸಿಂಹಾಸನ' ಎಂದು ಹಾಸ್ಯ ಮಾಡುತ್ತಿದೆ. ನಾನು ಮೊದಲನೆಯ ಬಾರಿ ಅಲ್ಲಿಗೆ ಹೋದಾಗ, ನನಗಾಗಿ ಒಂದು ಶೌಚಾಲಯವನ್ನು ನಿರ್ಮಿಸಿದರು. ಅದು

ಬಹಳ ಚಿಕ್ಕದಾಗಿಯೂ, ಎತ್ತರ ಕಮ್ಮಿಯಾಗಿಯೂ ಇದ್ದಿತು. ಒಂದು ಸಲ ಅದರ ಮೇಲೆ ಕುಳಿತ ನಂತರ ನನಗೆ ಏಳುವುದೇ ಕಷ್ಟವಾಗಿ ಇತರರ ನೆರವು ಕೋರಬೇಕಾಯಿತು. ಅದನ್ನು ಸರಿಪಡಿಸಿದಾಗ ಸುತ್ತಲೂ ಕೊಳವೆಗಳು ಇದ್ದವು. ನನ್ನ ಕಾಲು ಒಮ್ಮೆ ಒಂದು ಕೊಳವೆಯಲ್ಲಿ ಸಿಕ್ಕಿಹಾಕಿಕೊಂಡು ಗಾಯವಾಯಿತು. ನಾನು ಬೆಂಗಳೂರಿಗೆ ಹಿಂದಿರುಗಿದ ನಂತರ ಆ ಶೌಚಾಲಯದ ಎಲ್ಲಾ ಸಲಕರಣೆಗಳೂ ಕುಸಿದು ಚರಂಡಿಯಲ್ಲಿ ಬಿದ್ದಿತೆಂದು ಕೇಳಿದೆ. ಸದ್ಯ, ನಾನು ಅದನ್ನು ಬಳಸುತ್ತಿದ್ದಾಗ ಏನೂ ಆಗಲಿಲ್ಲವಲ್ಲ, ನನ್ನ ಪುಣ್ಯ.

ಇದಾದ ಬಹಳ ಕಾಲ ನನಗೆ 'ಸಮೂಹ'ಕ್ಕೆ ಹೋಗುವ ಅವಕಾಶ ಬರಲಿಲ್ಲ. ಇತ್ತೀಚೆಗೆ ನನ್ನನ್ನು ಕುಷ್ಟಗಿಯಲ್ಲಿ Hiv / aids ಪೀಡಿತರಿಗೆ ಒಂದು ಗೃಹವನ್ನು ಉದ್ಘಾಟಿಸಲು ಕರೆದಿದ್ದರು. ಅಲ್ಲಿ ನಾನು ಹೊದಾಗ ಕೆಲಸಗಾರರು ಶೌಚಾಲಯದಲ್ಲಿ ಇನ್ನೂ ಕೆಲಸ ಮಾಡುತ್ತಿದ್ದರು. ಅಲ್ಲಿ ಒಂದು ಇಳಿಜಾರನ್ನು ಕಟ್ಟಿದ್ದರು, ಆದರೆ ಆದು ಬಹಳ ಎತ್ತರವಾಗಿದ್ದು ವ್ಹೀಲ್ ಚೇರನ್ನು ಹತ್ತಲು ಇತರರ ನೆರವು ಬೇಕಾಗುತ್ತಿತ್ತು. ಇಂದು ಈ ಘಟನೆಗಳನ್ನು ಜ್ಞಾಪಿಸಿಕೊಂಡರೆ ನಗುವು ಬರುತ್ತದೆ. ಆದರೆ ವಿಕಲಾಂಗರ ಬೇಡಿಕೆಗಳಬಗ್ಗೆ ಸರಿಯಾದ ತಿಳುವಳಿಕೆ ಇಲ್ಲದಿರುವುದರಿಂದ ಈ ರೀತಿಯ ಆಭಾಸಗಳು ಆಗುತ್ತವೆ.

ಈ ಕಾರ್ಯಕ್ರಮದಲ್ಲಿ, ನಾರಾಯಣ ಸ್ವಾಮಿ, ಅಮೇರಿಕದಿಂದ ಲೀ ಎಂಬ physiotherapist ಮತ್ತು ನಾನು, ಮೂವರೂ ಸೇರಿ ರಾಯಚೂರಿನಲ್ಲಿ ವಿಕಲಾಂಗರ ಸೇವೆಯ ಕೆಲಸವನ್ನು ಆರಂಭಿಸಿದೆವು. ನಾವು ಮೊದಲಿಗೆ ಯಾರು ಯಾರಿಗೆ ವಿಕಲಾಂಗತೆ ಇದೆ ಎಂಬುದನ್ನು ನಿರ್ಧರಿಸಿದೆವು. ಇದರಲ್ಲಿ ಪೂನಾ ದಿಂದ ಬಂದಿದ್ದ ಮೂಳೆಯ ತಜ್ಞ, ನನ್ನ ಕಸಿನ್ ಕರ್ನಲ್ ಚಾರ್‌ಎಲ್ಲರನ್ನೂ ಪರಿಶೀಲಿಸಿದರು. ಕೆಲವು ಕ್ಯಾಂಪ್ ಗಳಲ್ಲಿ ನಾನ್ನೂರಕ್ಕೂ ಹೆಚ್ಚು ಜನ ಬಂದು ಸೇರುತ್ತಿದ್ದರು. 'ಸಮೂಹ' ಎ.ಪಿ.ಡಿಯಂತೆ ಎಲ್ಲರಿಗೂ ಶಸ್ತ್ರಚಿಕಿತ್ಸೆ ಮತ್ತು ಸಲಕರಣೆಗಳ ಸೌಲಭ್ಯವನ್ನು ಕಲ್ಪಿಸಿತ್ತು. ಈ ನಿಟ್ಟಿನಲ್ಲಿ ಎ.ಪಿ.ಡಿ ನೆರವು ನೀಡಲು ಮುಂದಾಯಿತು. ನಾವು ರಾಯಚೂರನಿಂದ ಕೆಲವರನ್ನು ಬೆಂಗಳೂರಿಗೆ ಕರೆತಂದೆವು. ಅವರು ನೆಲೆಸಲು ನಮ್ಮ ಮಿತ್ರರಾದ ಮಧು ಸಿಂಘಲ್ ಅವರ ಮನೆಯವರು ಮಡಿವಾಳದಲ್ಲಿರುವ ತಮ್ಮ ಮನೆಯಲ್ಲಿ ಜಾಗ ಕೊಟ್ಟರು. ಅಲ್ಲಿಂದ ಅವರನ್ನು ಏ.ಪಿ.ಡಿ ಗೆ ಕರೆತಂದು ಅವರಿಗೆ ಬೇಕಾದ ಚಿಕಿತ್ಸೆ, ಸಲಕರಣೆ ಇತ್ಯಾದಿಯನ್ನು ಕೊಡಲಾಯಿತು.

ನಾರಾಯಣಸ್ವಾಮಿ ಇಂದು ಸಮೂಹದ ನಿರ್ದೇಶಕರಾಗಿದ್ದಾರೆ. ಅವರು ಒಬ್ಬ ನಿಷ್ಕಪಟ ಮತ್ತು ನಿರಾಡಂಬರ ವ್ಯಕ್ತಿ. ಅವರಿಗೆ ವಿಕಲಾಂಗರ ಕಷ್ಟಗಳ ಬಗ್ಗೆ ಒಂದು ಒಳದೃಷ್ಟಿಯೂ ಮತ್ತು ಅಪಾರ ಅನುಭವವೂ ಇದೆ. ಅವರು ಮುಖ್ಯವಾಗಿ ಸಮಸ್ಯೆಗೆ ಪರಿಹಾರ

ಕಂಡುಹಿಡಿಯುವುದರಲ್ಲಿ ನಿಪುಣರು. ಅವರು ಜನರಲ್ಲಿ ಮಾತನಾಡಿದರೆ ಜನರಿಗೆ ಅವರ ತೊಂದರೆಗಳೆಲ್ಲಾ ನಿವಾರಣೆ ಆದಂತೆ ಭಾಸವಾಗುತ್ತದೆ. ನಾವು ಅವರೊಡನೆ ಸೇರಿಕ್ಕೊಂಡು ಸಮೂಹದಲ್ಲಿ ವಿಕಲಾಂಗರಿಗೆ 'ಸಾಮರ್ಥ್ಯ' ಎಂಬ ಯೋಜನೆಯೊಂದನ್ನು ಪ್ರಾರಂಭಿಸಿದೆವು. ಅವರಿಗೆ ಹೊಸ ಹೊಸ ಸನ್ನಿವೇಶಗಳು ಎದುರಾದಾಗ ಅದಕ್ಕೆ ತಕ್ಕಂತೆ ತಮ್ಮನ್ನು ಮಾರ್ಪಡಿಸಿಕೊಳ್ಳುವ ಸಾಮರ್ಥ್ಯವಿದೆ. ಗಂಭೀರವಾಗಿರುವ ನಾರಾಯಣ ಸ್ವಾಮಿಯವರು ಹೇಗೆ ನಾವೆಲ್ಲರೂ ಸೇರಿದಾಗ ನಕ್ಕು ಹಾಸ್ಯದಲ್ಲಿ ತೊಡಗುತ್ತಿದ್ದರು ಎಂದು ಸಮೂಹದ ಕಾರ್ಮಿಕರು ಯಾವಾಗಲೂ ಜ್ಞಾಪಿಸಿಕೊಳ್ಳುತ್ತಿದ್ದರು.

ಪ್ರದೀಪ್ ಮತ್ತು ನಾನು ಅವನ ಜೀಪಿನಲ್ಲಿ ಬಹಳ ಪ್ರಯಾಣ ಮಾಡಿದ್ದೇವೆ. ಇವಲ್ಲಿ ಅತ್ಯಂತ ಸ್ಮರಣೀಯವಾದದ್ದು ಎಂದರೆ ನಾವು ೧೯೯೩ ರ ಭೂಕಂಪದ ನಂತರ, ಮಹಾರಾಷ್ಟ್ರದಲ್ಲಿ ಲಾತೂರಿಗೆ ಹೋದದ್ದು. ಸಮೂಹ ಅಲ್ಲಿ ಒಂದು ಸರ್ವೇಕ್ಷಣೆ ನಡೆಸಲು ಒಂದು ತಂಡವನ್ನು ಕಳುಹಿಸಿತ್ತು. ನಾನು ಮತ್ತು ಪ್ರದೀಪ್ ಅದರೊಂದಿಗೆ ನಾಲ್ಕು ದಿನಗಳ ಕಾಲ ಭೂಕಂಪದಿಂದ ಬಳಲಿದ ಎಲ್ಲಾ ಪ್ರದೇಶಕ್ಕೂ ಹೋಗಿ ಸಂತ್ರಸ್ತರನ್ನು ಸಂಧಿಸಿದೆವು. ಇದಾದ ನಂತರ ೬ ತಿಂಗಳ ಕಾಲ ಸಮೂಹವು ಆ ತಂಡವನ್ನು ಅಲ್ಲೇ ನಿಂತು ಸಂತ್ರಸ್ತರಿಗೆ ನೆರವು ನೀಡುವಂತೆ ಏರ್ಪಡಿಸಿತ್ತು. ನನಗೆ ಅಲ್ಲಿ ಬಲವಾಗಿ ಏಟುಬಿದ್ದು ವಿಕಲಾಂಗನಾಗಿದ್ದ ಒಬ್ಬನ ನೆನಪು ಈಗಲೂ ಬರುತ್ತದೆ. ಸಮೂಹದ ತಂಡವು ಅತ್ಯುತ್ತಮವಾಗಿ ಅಲ್ಲಿ ಕೆಲಸ ಮಾಡಿತು. ವಿಕಲಾಂಗರ ಸೇವೆಗೆ ವಿಕಲಾಂಗರನ್ನೇ ಸೇರಿಸಿಕೊಂಡರೆ ಅವರಿಗೆ ವಿಕಲಾಂಗರ ಅಗತ್ಯಗಳ ಬಗ್ಗೆ ಹೆಚ್ಚಿನ ಅರಿವಿರುವುದರಿಂದ ಅವರು ಉತ್ತಮ ಸೇವೆಯನ್ನು ನೀಡಬಲ್ಲರು ಎಂಬುದು ಪ್ರದೀಪ್ ಅವರ ನಂಬಿಕೆ.

ನಾವು ಶ್ರೀಮತಿ ಈಶ್ವರ್ಯಯ್ಯ ಅವರನ್ನು ನಮ್ಮದೇವತೆ ಎಂದು ಹೇಳುತ್ತಿದ್ದೆವು. ಅವರು ಅದಕ್ಕೆ ಸರಿಯಾಗಿಯೇ ಇದ್ದರು. ಅವರ ಮಧುರವಾದ ಧ್ವನಿ ಈಗಲೂ ನನ್ನ ಕಿವಿಯಲ್ಲಿ ಕೇಳುತ್ತದೆ ಮತ್ತು ಅವರ ಮಂದ ನಗೆ ಮತ್ತು ಹಾಸ್ಯ ಪ್ರಜ್ಞೆ ನಮ್ಮೆಲ್ಲರಿಗೂ ಸಂತೋಷ ಕೊಡುತ್ತದೆ. ನಾವಿಬ್ಬರೂ ಸೇರಿಕೊಂಡು ದಿವಾನ್ ಅವರನ್ನು ಕೀಟಲೆ ಮಾಡುತ್ತಿದ್ದೆವು. ಅವರಿಗೆ ಸಮಸ್ಯೆಗಳಿಗೆ ಸಮಾಧಾನವನ್ನು ಹುಡುಕುವ ಅಸಾಧಾರಣ ಶಕ್ತಿಯು ಇದ್ದಿತು. ದಿವಾನರನ್ನು ರೆಡ್ ಕ್ರಾಸ್ ಬಿಟ್ಟು ಎ.ಪಿ.ಡಿ ಗೆ ಸೇರುವಂತೆ ಹೇಳಿದವರು ಶ್ರೀಮತಿ ಈಶ್ವರ್ಯಯ್ಯ ಅವರೇ. ಇದು ಅವರ ಜೀವನದ ದಿಕ್ಕನ್ನೇ ಬದಲಿಸಿತು. ನಾವು ಆಗಾಗ ಫೋನಿನಲ್ಲಿ ಜೀವನದ ಅನೇಕ ವಿಷಯಗಳ ಬಗ್ಗೆ ಮಾತಾಡುತ್ತಿದ್ದೆವು. ಅವರೂ ತಮ್ಮ ಕಷ್ಟ ಸುಖಗಳನ್ನು ನನ್ನೊಡನೆ ಹಂಚಿಕೊಳ್ಳುತ್ತಿದ್ದರು. ನನಗೆ ವಿಷ್ಣೋಸಲ ಈ ರೀತಿಯ ಒಳ್ಳೆಯ

ಹೆಂಗಸಿಗೆ ಯಾಕೆ ಜೀವನದಲ್ಲಿ ಇಷ್ಟು ಪರೀಕ್ಷೆ ಎಂದು ಅನಿಸುತ್ತಿತ್ತು. ಅವರ ಮಕ್ಕಳು ಅವರಿಂದ ದೂರವಾಗಿದ್ದರು. ಆದರೆ ಅವರು ಒಂದು ಆಧಾರ ಸ್ತಂಭದಂತೆ. ಅವರು ಎ.ಪಿ.ಡಿಯನ್ನು ಪ್ರಾರಂಭಿಸಿದವರ ಮುಂಚೂಣಿಯಲ್ಲಿದ್ದರು. ಅವರ ಜೀವನದ ಧ್ಯೇಯವೇ ಇತರರ ಜೀವನದಲ್ಲಿ ಬದಲಾವಣೆಯನ್ನು ತರುವುದಾಗಿತ್ತು. ಅಂತಹವರನ್ನು ಪಡೆಯಲು ಎ.ಪಿ.ಡಿ ಪುಣ್ಯಪಡೆದಿತ್ತು.

ಇಂಡೋನೇಶಿಯಾಗೆ ಹೋಗಿಬಂದ ನಂತರ ನಾನು ಥೈಲಾಂಡಿಗೆ ಹೋದೆ. ಇದು ಕೂಡ ಮುಂಬರುವ UN International Conference for Women ಗೆ ಮುಂಭಾವಿಯಾಗಿ ಏರ್ಪಡಿಸಲಾಗಿತ್ತು. ಭಾರತದಿಂದ ಅನೇಕ ಮಹಿಳೆಯರು ಬಂದಿದ್ದರು ಮತ್ತು ಅದೊಂದು ವಿಶೇಷ ಅನುಭವವಾಗಿತ್ತು.ಈ ರೀತಿಯ ಸಮಾವೇಶಗಳು ಹೇಗೆ ಪ್ರಯೋಜನ? ಹೇಗೆ ನಾವು ನಮ್ಮ ನಮ್ಮ ಪ್ರಾಂತ್ಯಗಳಿಗೆ ಹಿಂದಿರುಗಿದ ಮೇಲೆ ಇಲ್ಲಿ ಚರ್ಚಿಸಿದ ವಿಷಯಗಳನ್ನು ಅನುಷ್ಠಾನಕ್ಕೆ ತರುತ್ತೇವೆ? ಹೇಗೆ ಇವು ಸಂತ್ರಸ್ತರ ಜೀವನವನ್ನು ಮುಟ್ಟುತ್ತವೆ? ನನ್ನಲ್ಲಿ ಇಷ್ಟೆಲ್ಲಾ ಮಾಡುವ ಕ್ಷಮತೆ ಇದೆಯೆ? ಒಂದು ಹಂತದ ವರೆಗೆ ನಾನು ಮಾಡಬಲ್ಲೆ, ಆದರೆ ರಾಷ್ಟ್ರ ಮಟ್ಟದಲ್ಲಿ ಅಥವಾ ಅಂತರಾಷ್ಟ್ರ ಮಟ್ಟದಲ್ಲಿ ಮಾಡುವುದು ನನ್ನಿಂದ ಆಗುವುದೆ? ಈ ಕೆಲಸವೇನೋ ಬಹಳ ಮುಖ್ಯವಾದದ್ದು, ಆದರೆ ನನ್ನ ಕ್ಷಮತೆಗೆ ಮೀರಿದ್ದು, ನನಗೆ ಈ ರೀತಿಯ ಸಭೆಗೆ, ಚರ್ಚೆಗೆ ಮನಸ್ಸಾಗುತ್ತಿರಲಿಲ್ಲ. ವೆಂಕಿ, ನಾಯ್ಡು ಅವರಾದರೆ ಈ ರೀತಿಯ ಕೆಲಸದಲ್ಲಿ ನಿಪುಣರಾಗಿದ್ದರು. ಆದರೆ ಎ.ಪಿ.ಡಿಯ ಪರವಾಗಿ ನಾನು ಈ ಸಭೆಯಲ್ಲಿ ಭಾಗವಹಿಸಿದೆ.

ಜಕಾರ್ತಾ ದಲ್ಲಿನ ಹೋಟೆಲಿನ ಅನುಭವದ ನಂತರ, ನನಗೆ ಥೈಲಾಂಡಿನ ಹೋಟೆಲಿನ ಬಗ್ಗೆ ಆತಂಕವಿದ್ದಿತು. ಆದರೆ ಏರ್ಪಾಡುಗಳೆಲ್ಲಾ ಗಟಿ ಮಾಡಿದ್ದರಿಂದ ತೊಂದರೆ ಏನೂ ಆಗಲಿಲ್ಲ. ಅವರು ನನಗೆ ಹೋಟೆಲಿನಲ್ಲಿ ಒಬ್ಬರ ಜೊತೆಯನ್ನು ಏರ್ಪಡಿಸಿದ್ದರು. ಆದರೆ ಭಾಷೆ ಒಂದು ಸಮಸ್ಯೆ ಆಯಿತು. ಅಲ್ಲಿನ ಸ್ನಾನಗೃಹದಲ್ಲಿ ನೆಲ ಇಳಿಜಾರಿದ್ದರಿಂದ ನನ್ನ ವ್ಹೀಲ್ ಚೇರ್ ನಿಲ್ಲದೆ ಮುಂದೆ ಹೋಗುತ್ತಿತ್ತು. ಇದರಿಂದ ನನಗೆ ವ್ಹೀಲ್ ಚೇರಿನಿಂದ ಕಮೋಡಿಗೆ ಸ್ಥಳಾಂತರಿಸುವುದು ಕಷ್ಟವಾಗಿ ನಾನು reception ನಿಂದ ಸಹಾಯ ಕೋರಬೇಕಾಯಿತು. ಅವರು ಸಹಾಯಕ್ಕೆ ಇಬ್ಬರು ಹುಡುಗಿಯರನ್ನು ಕಳುಹಿಸಿದರು, ಆದರೆ ಭಾಷೆಯ ಸಮಸ್ಯೆಯಿಂದ ಅವರೊಡನೆ ಮಾತನಾಡುವುದು ಕಷ್ಟವಾಯಿತು. ಸಂಜ್ಞೆಯ ಮೂಲಕವೂ ತಿಳಿಸಲಾಗಲಿಲ್ಲ. ಕೊನೆಗೆ ಅವರು ಏನೂ ಮಾಡಲಾಗದೆ ಹೊರಟು ಹೋದರು. ನಾನು UN volunteers ಫೋನ್ ಮಾಡಿ ನನಗೆ ಈ ರೀತಿ ಸಹಾಯವಿಲ್ಲದೆ ಇರುವುದು

ಆಗುತ್ತಿಲ್ಲ ಎಂದೆ. ಅದೃಷ್ಟವಶಾತ್ ನಾನು ಆ ಹೋಟೆಲಿನ ಲಾಬಿಗೆ ಬಂದಾಗ ಅಲ್ಲಿ ನನಗೆ ಫ್ರಾನ್ಸೀನ್ ಸಿಕ್ಕಿದ್ದಳು. ಅವಳನ್ನು ನಾನು ಇಂಡೋನೇಶಿಯಾದಲ್ಲಿ ಭೇಟಿಯಾಗಿದ್ದೆ. ಅವಳು ವಿಕಲಾಂಗಿಯಾಗಿದ್ದರೂ ಅವಳಿಗೆ ನಡೆಯಲಾಗುತ್ತಿತ್ತು. ಅವಳು ತನ್ನ ರೂಮನ್ನು ಬದಲಾಯಿಸಿ ನನ್ನೊಡನೆ ಇರಲು ಬಂದಳು. ಮುಂದಿನ ಹತ್ತು ದಿನಗಳು ತೊಂದರೆ ಇಲ್ಲದೆ ಕಳೆದವು. ನಾವು ಥೈ ಊಟವನ್ನು ಸವಿದೆವು. ನನ್ನ ಮಟ್ಟಿಗೆ ಅದು ಸ್ವಲ್ಪ ಹೆಚ್ಚು ಖಾರವಾಗಿತ್ತು. ಅವರಿಗೆ ನಾನು ಸಸ್ಯಹಾರಿ ಎಂಬುದನ್ನು ಆಗಾಗ ಜ್ಞಾಪಿಸ ಬೇಕಾಗುತ್ತಿತ್ತು. ನಾವು ಊರು ಸುತ್ತಿ ಅನೇಕ ಸ್ಥಳಗಳನ್ನು ನೋಡಿದೆವು. ಮೆಟ್ಟಲುಗಳಿದ್ದ ಸ್ಥಳಗಳಿಗೆ ಹೋಗಲಾಗಲಿಲ್ಲ.

ಕೆಲವು ವಾರಗಳ ನಂತರ ಚೀನಾದಲ್ಲಿ ದೊಡ್ಡ ಮಹೋತ್ಸವದ ಸಮಯವಾಗಿತ್ತು. ಚೀನಾ ಬಹಳ ವಿಭಿನ್ನವಾದ ದೇಶ. ಸ್ವೀಡನ್ನಿನ ಶಿಯಾ ಎಂಬ ಸಂಸ್ಥೆಯು ನನ್ನ ಮತ್ತು ನನ್ನೊಡನೆ ಸಹಾಯಕ್ಕೆ ಬಂದಿದ್ದವರ ಪ್ರಯಾಣದ ಖರ್ಚನ್ನು ವಹಿಸಿಕೊಂಡಿತ್ತು ಮತ್ತು ಎಲ್ಲಾ ಏರ್ಪಾಡನ್ನು ಮಾಡಿತ್ತು. ನಾನು ನನ್ನ ಸಹೋದರಿ ಕುಮ್ಮುವನ್ನು ನನ್ನೊಡನೆ ಬರ ಹೇಳಿದ್ದೆ.ಅವಳು ನನ್ನೊಡನೆ ಹಿಂದೆಂದೂ ಬಂದಿರಲಿಲ್ಲ. ಆದ್ದರಿಂದ ಅವಳು ಈ ಪ್ರಯಾಣಕ್ಕೆ ಬಹಳ ಕಾತುರಳಾಗಿದ್ದಳು. ಪ್ರಯಾಣದ ತಯಾರಿಗಳು ಒಂದು ವರ್ಷದ ಮುಂಚಿಂದ ಆಗುತ್ತಿದ್ದರೂ, ಅವಳ ವಿಸಾ ಸಿಗುವುದರಲ್ಲಿ ಬಹಳ ವಿಳಂಬವಾಗಿ ನಾವು ಹೊರಡುವುದಕ್ಕೆ ಮೂರು ಘಂಟೆಗಳ ಮುಂಚೆ ಅವಳ ಕೈ ತಲಪಿತು. ಅಂದು ಶನಿವಾರವಾಗಿತ್ತು ಆದರೆ ನನ್ನ ಕಸಿನ್ ಆ ಕೂರಿಯರ್ ಆಫೀಸನ್ನು ತೆಗೆದಿಟ್ಟು ವಿಸಾ ಪಾರ್ಸೆಲ್ ಬರುವವರೆಗೂ ಕಾಯುವಂತೆ ಏರ್ಪಾಡು ಮಾಡಿದ್ದ. ನಾನು ಮತ್ತು ಕುಮ್ಮು ಏರ್ಪೋರ್ಟ್‌ನಲ್ಲಿ ಕಾಯುತ್ತಿದ್ದೆವು. ವಿಸಾ ಸಿಗುತ್ತದೋ ಇಲ್ಲವೋ ಎಂಬ ಆತಂಕ. ಚೀನಾಗೆ ಮಾಡಿದ ಫೋನ್ ಕರೆಗಳ ಲೆಕ್ಕವೇ ಇರಲಿಲ್ಲ. ಅಲ್ಲಿ ನಮ್ಮೊಡನೆ ಇಂಗ್ಲೀಷಿನಲ್ಲಿ ಮಾತನಾಡುವವರು ಸಿಗುವುದೇ ಕಷ್ಟವಾಗಿತ್ತು.

ವಿಶ್ವದಾದ್ಯಂತ ಮೂವತ್ತು ಸಾವಿರ ಹೆಂಗಸರು, ಅವರಲ್ಲಿ ಸುಮಾರು ಏಳು ಸಾವಿರ ವಿಕಲಾಂಗರು, ಈ ಸಮಾವೇಶಕ್ಕೆ ಬಂದಿದ್ದರು. ಸಮಾವೇಶವು ಬಹಳ ಅಚ್ಚುಕಟ್ಟಾಗಿ ಏರ್ಪಡಿಸಿದ್ದರು. ಅಲ್ಲಿಗೆ ಹೋಗುವ ರಸ್ತೆಯು ಸಂತೆಯಂತೆ ಜನರಿಂದ ಕಿಕ್ಕಿರಿದಿತ್ತು. ಸಮಾವೇಶ ನಡೆಯುವ ಸ್ಥಳವು ಬೀಜಿಂಗ್ ನಿಂದ ೪೦ ಕಿ ಮೀ ದೂರವಿತ್ತು. ಅಷ್ಟೊಂದು ಜನವಿವಿಧ ವಿಕಲಾಂಗತೆಯಿಂದ ಬಾಧಿಸುತ್ತಿದ್ದವರನ್ನು ಭೇಟಿಮಾಡುವುದು ಒಂದು ಅಪೂರ್ವ ಅನುಭವವಾಗಿತ್ತು. ಥಾಯ್‌ಲಾಂಡಿನಲ್ಲಿ ಸೇರಿದ್ದ ಗುಂಪಿಗೆ, ಮತ್ತಿತರ ಗುಂಪುಗಳಂತೆ, ಒಂದು ಮಹತ್ವದ ಸಂದೇಶವುಳ್ಳ ಬ್ಯಾನರ್ ಮಾಡುವ ಕೆಲಸವನ್ನು ಒಪ್ಪಿಸಿದ್ದರು.ಎಲ್ಲಾ

ಗುಂಪುಗಳ ಬ್ಯಾನರ್ ಗಳನ್ನು ಸೇರಿಸಿ ಹೊಲಿದು ಒಂದು ದೊಡ್ಡ ಒಂದೂವರೆ ಕಿಲೋಮೀಟರ್ ಉದ್ದದ ಬ್ಯಾನರ್ ಆಗಿ ಮಾಡಿ ಅದನ್ನು ಅಲ್ಲಿನ great wall ನ ಮೇಲೆ ಹಾಕಲಾಯಿತು. ಆ ಸಮಾವೇಶದಲ್ಲಿನ ಉಪನ್ಯಾಸಕಾರರಲ್ಲಿ ನಾನೂಒಬ್ಬಳಾಗಿದ್ದೆ. ನನಗೆ ಭಾರತದಲ್ಲಿರುವ ಮಹಿಳಾ ವಿಕಲಾಂಗನೆಯರು ಎದುರಿಸುತ್ತಿರುವ ಕಷ್ಟಗಳಬಗ್ಗೆ ಮಾತನಾಡಬೇಕಿತ್ತು. ಈ ಮಾತುಗಳು ಒಂದು ವಿಶಾಲವಾದ ದೃಷ್ಟಿಕೋನದಿಂದ ಹೇಳಲಾಗಿದ್ದವು. ಇವನ್ನು ಹೇಗೆ ನಾವು ನಮ್ಮ ದೈನಂದಿನ ಜೀವನದಲ್ಲಿ ಎದುರಿಸುವ ಸಮಸ್ಯೆಗಳಿಗೆ ಅಳವಡಿಸಿಕೊಳ್ಳುವುದು ಎಂಬುದೇ ನನ್ನಚಿಂತೆಯಾಗಿತ್ತು. ಅದು ಒಂದು ಬೃಹತ್ ಕೆಲಸ.

ಭಾರತದಲ್ಲಿ ದೇಶಾದ್ಯಂತ ಪುಟ್ಟ ಪುಟ್ಟ ಗುಂಪುಗಳಲ್ಲಿ ಈ ಕೆಲಸಗಳು ನಡೆಯುತ್ತಿವೆ. ನೋಡಲು ನಾವು ಹಿಂದುಳಿದಂತೆ ಕಂಡರೂ, ವಿಕಲಾಂಗರಿಗೆ ನೆರವಾಗುವ ವಿಷಯದಲ್ಲಿ ನಾವು ಸಾಕಷ್ಟು ಪ್ರಗತಿಯನ್ನು ಸಾಧಿಸಿದ್ದೇವೆ. ಆದರೆ ಇದಕ್ಕೆ ಮೂಲ ಮಂತ್ರವಾಗಿ ಯಾವುದೇ ಒಂದು ಉಪಾಯವು ನಮ್ಮಲಿಲ್ಲ. ಏಕೆಂದರೆ ಇದು ವೈವಿಧ್ಯಮಯವಾಗಿದ್ದು, ಇದರ ವ್ಯಾಪ್ತಿ ಬಹುದೊಡ್ಡದಾಗಿದೆ. ಇದರ ಬಗ್ಗೆ ಸಾಕಷ್ಟು ಚರ್ಚೆಗಳಾಗಿವೆ. ಸಂಸ್ಥೆಗಳ ಕಾರ್ಯವೈಖರಿ ಯಶಸ್ವಿಯೋ ಅಥವಾ ನಮ್ಮ ಸಾಂಪ್ರದಾಯಿಕ ಪದ್ಧತಿಗಳು ಯಶಸ್ವಿಯೋ ಎಂದು. ನನ್ನ ಮಟ್ಟಿಗೆ, ಒಂದು ಸಂಸ್ಥೆ ಎಂದರೆ ನಾಲ್ಕು ಗೋಡೆಗಳಿರುವ ಆವರಣವಲ್ಲ. ನಾನು ಒಂದು ಸಮುದಾಯದಲ್ಲಿದ್ದರೆ, ಅಲ್ಲಿನ ಎಲ್ಲಾ ಸೌಲಭ್ಯಗಳನ್ನೂ ಉಪಯೋಗಿಸಿಕೊಂಡು, ಬೇಕಾದ ಸೌಲಭ್ಯಗಳನ್ನು ಸೃಷ್ಟಿಸಿಕೊಳ್ಳುತ್ತೇನೆ. ನಾನೇ ಒಂದು ಸಂಸ್ಥೆಯಾಗುತ್ತೇನೆ. ನಮಗೆ ಎರಡೂ ಬೇಕು. ಸಂಸ್ಥೆಯು ಜನರ ಕಣ್ಣಿಗೆ ಬೀಳುತ್ತದೆ ಮತ್ತು ಅವರನ್ನು ಆ ಕಾರ್ಯದಲ್ಲಿ ಭಾಗಿಯಾಗಲು ಪ್ರೇರಿಸುತ್ತದೆ. ಆದ್ದರಿಂದ ಅದು ಮುಖ್ಯ. ಅಲ್ಲದೆ, ಸಂಸ್ಥೆಗಳು ಒಂದು ಪ್ರಯೋಗಶಾಲೆಯಂತೆ. ಅಲ್ಲಿ ನಾವು ಹೊಸ ಹೊಸ ಚಿಂತನೆಗಳನ್ನು ಪ್ರಯೋಗಿಸಿ ಅದರ ಒಳಿತು ಕೆಡಕು ಗಳನ್ನು ಪರಿಶೀಲಿಸ ಬಹುದು, ನಂತರ ಅವು ಯಶಸ್ವಿಯಾದಲ್ಲಿ ಅವನ್ನು ಸಮುದಾಯದ ಉಪಯೋಗಕ್ಕೆ ಸೂಕ್ತವಾಗುವಂತೆ ಸರಿಪಡಿಸ ಬಹುದು. ಸಮುದಾಯದಲ್ಲಿ ಕೆಲಸ ಮಾಡುವುದೇ ಹೆಚ್ಚು ಹೆಚ್ಚು ಜನರಲ್ಲಿ ಇರುವ ವೈವಿಧ್ಯಮಯ ಸಮಸ್ಯೆಗಳನ್ನು ಪರಿಹರಿಸಲು ಸೂಕ್ತವಾದದ್ದು ಎಂದು ನನ್ನ ಅನುಭವ ತಿಳಿಸುತ್ತದೆ.

ನಾನು ಡೇವಿಡ್ ವರ್ನರ್ ನಿಂದ ಬಹಳ ಪ್ರೇರಿತಳಾಗಿದ್ದೇನೆ. ಅವನು ವಿಕಲಾಂಗರ ಜಗತ್ತಿನಲ್ಲಿ ಗಾಂಧಿಯಂತೆ. ಅವನು ಮೆಕ್ಸಿಕೋದಲ್ಲಿ ವಿಕಲಾಂಗರಿಗಾಗಿ ಬಹಳ ಕೆಲಸ

ಮಾಡಿದ್ದಾನೆ. ಅವನು ಮೆಕ್ಸಿಕೋವಿನ ಹಳ್ಳಿಗಾಡುಗಳಲ್ಲಿ ಅನೇಕ ಕಾಯಿಲೆಗಳಿಂದ ನರಳುತ್ತಿದ್ದ ವಿಕಲಾಂಗರಿಗೆ ಸ್ವಾಸ್ಥ್ಯ ಸುಧಾರಿಸುವ ಕಾರ್ಯಕ್ರಮಗಳನ್ನು ನಡೆಸಿದ್ದಾನೆ. ಅಲ್ಲಿನ ಜನರ ಪರಿಸ್ಥಿತಿ ನಮ್ಮ ಹಳ್ಳಿಗಾಡುಗಳಂತೆಯೇ. ಸ್ವಚ್ಚತೆಯ ಕೊರತೆ, ಕಲುಷಿತ ಕುಡಿಯುವ ನೀರು, ಇತ್ಯಾದಿ. ಡೇವಿಡ್ ಅವರುಗಳಿಗೆ ಈ ಸಮಸ್ಯೆಗಳಿಗೆ ಸುಲಭವಾದ ಉಪಾಯವನ್ನು ಕಲಿಸಿ ಕೊಟ್ಟನು. ನಿರುದ್ಯೋಗಿಗಳಾಗಿದ್ದ ವಿಕಲಾಂಗರು ನಂತರ ಈ ರೀತಿಯ ಸ್ವಾಸ್ಥ್ಯ ಕೇಂದ್ರಗಳನ್ನು ನಡೆಸ ತೊಡಗಿದರು. ಇವನು ಪ್ರಾರಂಭಿಸಿದ PROJIMO ವಿಶ್ವಾದ್ಯಂತ ಖ್ಯಾತಿ ಪಡೆಯಿತು. ಇದರಲ್ಲಿ ಹೇಗೆ ಒಂದು ಸಮುದಾಯವನ್ನು ತನ್ನಸಮಸ್ಯೆಗಳನ್ನು ಎದುರಿಸಲು ಸಶಕ್ತಗೊಳಿಸುವುದು ಎಂಬುದನ್ನು ಬಹಳ ಸುಂದರವಾಗಿ ನಿರೂಪಿಸಿದ್ದಾರೆ. ನನಗೆ ಡೇವಿಡ್ ಜೊತೆ ಕೆಲಸ ಮಾಡುವ ಅವಕಾಶದೊರಕಲಿಲ್ಲವಲ್ಲ ಎಂದು ನನಗೆ ಅನೇಕ ಸಲ ಅನ್ನಿಸುತ್ತದೆ. ನಾನು ಮೆಕ್ಸಿಕೋದ ವೀಸಾ ಪಡೆಯಲಿಲ್ಲ ವಾದ್ದರಿಂದ ನಾನು ಅಲ್ಲಿಗೆ ಹೋಗಲಾಗಲಿಲ್ಲ. ಆದರೆ, ಡೇವಿಡ್ ಭಾರತಕ್ಕೆ ಬಂದಿದ್ದರು ಮತ್ತು ನಮ್ಮ ಮನೆಯಲ್ಲಿ ಇದ್ದರು. ಅವರು ಬರೆದಿರುವ ಎರಡು ಪುಸ್ತಕಗಳನ್ನು ಸುಮಾರು ಎಲ್ಲಾ ವಿಕಲಾಂಗರೂ ಓದಿರುತ್ತಾರೆ. ಅವು ನಮಗೆ ಬೈಬಲ್ ನಂತೆ.

ಒಂದು ವೇಳೆ, ನನಗೆ ಸಮಯದಲ್ಲಿ ಹಿಂದಿರುಗಿ ಮತ್ತೊಮ್ಮೆ ನನ್ನ ಜೀವನವನ್ನು ಮರುಜೀವಿಸುವಂತಿದ್ದರೆ, ನನಗೆ ಏನು ಮಾಡಬೇಕು ಎಂದು ಈಗ ಗೊತ್ತು. ಬೇರೆ ಬೇರೆ ದೇಶಗಳಲ್ಲಿ ಅಷ್ಟೊಂದು ಜನರೊಡನೆ ಬೆರತು ಅವರ ಕಾರ್ಯ ಶೈಲಿಯನ್ನು ತಿಳಿದುಕೊಳ್ಳುವುದು. ಜೀವನದಲ್ಲಿ ಯಾವುದೂ ಅಸಂಭವವಲ್ಲ. ಸಾಧಿಸಬೇಕೆಂಬ ಛಲವನ್ನು ಬೆಳೆಸಿಕೊಳ್ಳುವುದೇ ಕಠಿಣವಾದದ್ದು. ಆ ಛಲವಿದ್ದರೆ, ಏನನ್ನು ಬೇಕಾದರೂ ಸಾಧಿಸ ಬಹುದು. ನಾನು ಅಮೇರಿಕದಲ್ಲಿ ಒಂದು ಸಮಾವೇಶಕ್ಕೆ ಹೋಗಿದ್ದೆ. ಅಲ್ಲಿ ಆ ಅಮೇರಿಕದ ಮಹಿಳೆಯರು ತಮಗೆ ಒದಗದಿದ್ದ ಸೌಲಭ್ಯಗಳ ಬಗ್ಗೆ ಬಹಳ ಜೋರಾಗಿ ಧ್ವನಿ ಎತ್ತಿ ಹೋರಾಡಿದರು. ವಿಕಲಾಂಗರ ಜೀವನದಲ್ಲಿ ಆಗುತ್ತಿರುವ ಬದಲಾವಣೆಗಳಬಗ್ಗೆ ನನಗೆ ನಂತರ ಅರ್ಥವಾಯಿತು. ಯಾವ ದೇಶದಲ್ಲಿ ವಿಕಲಾಂಗರೇ ತಮ್ಮ ಸೌಲಭ್ಯಗಳ ಬಗ್ಗೆ ಧ್ವನಿ ಎತ್ತುತ್ತಾರೋ ಅಲ್ಲಿ ಬದಲಾವಣೆಗಳು ಬೇಗ ಆಗುತ್ತವೆ. ಇಲ್ಲದಿದ್ದರೆ, ಅವರ ಬೇಕು ಬೇಡ ಇತರರಿಗೆ ಹೇಗೆ ತಿಳಿಯಬೇಕು?

ಬೀಜಿಂಗ್ ವಿಮಾನ್ ನಿಲ್ದಾಣಕ್ಕೆ ಸೇರಿದಾಗ ನಮ್ಮ ಪೆಟ್ಟಿಗೆಗಳು ಅಲ್ಲಿಗೆ ತಲುಪಿಲ್ಲವೆಂದು ತಿಳಿಯಿತು. ದಾರಿಯಲ್ಲಿ ಎಲ್ಲೋ ಉಳಿದುಕೊಂಡಿದ್ದವು. ಅದೃಷ್ಟವಶಾತ್ ನನ್ನ ವ್ಹೀಲ್ ಚೇರ್ ಬಂದಿತ್ತು. ಇಂಗ್ಲೀಷ್ ಭಾಷೆಯೇ ಬರದ ಚೀನೀಯರು ನನಗೆ ಬಸ್‌ನಲ್ಲಿ ಮತ್ತು

ಹೋಟೇಲಿನಲ್ಲಿ ಸಹಾಯ ಮಾಡಿದರು. ನಾನು ಒಂದು ಅಂಶವನ್ನು ಗಮನಿಸಿದೆ. ಅಲ್ಲಿನ ಸ್ವಯಂ ಸೇವಕರಿಗೆ ವಿಕಲಾಂಗರನ್ನು ಎತ್ತಿಕೊಳ್ಳುವ ತರಬೇತಿ ಇರಲಿಲ್ಲ. ಇಂಗ್ಲೆಂಡ್, ಜರ್ಮನಿ ದೇಶಗಳಲ್ಲಿ ಸ್ವಯಂ ಸೇವಕರಿಗೆ ವಿಕಲಾಂಗರನ್ನು ಎತ್ತಿ ಕೂರಿಸುವುದರಲ್ಲಿ ವಿಶೇಷಪರಿಣಿತಿ ಇದೆ. ಇದಕ್ಕೆ ಅವರಿಗೆ ತರಬೇತಿ ನೀಡಿರುತ್ತಾರೆ. ಅಲ್ಲಿ ಅವರು ನನಗೆ ನಿಂತು ಕೊಳ್ಳಲಾಗುತ್ತದೆಯೇ, ಅಥವಾ ನನ್ನ ಬುಜವನ್ನು ಹಿಡಿದುಕೊಂಡರೆ ನಾನು ನಿಲ್ಲಬಲ್ಲೆನೇ ಎಂಬುದನ್ನು ಪರೀಕ್ಷಿಸಿದರು. ನಂತರ ನನ್ನ ವ್ಹೀಲ್ ಚೇರನ್ನು ಸರಿಯಾದ ಸ್ಥಳದಲ್ಲಿ ಇಟ್ಟು, ನನ್ನ ಕಾಲು ಮತ್ತು ಮಂಡಿಗಳನ್ನು ಹಿಡಿದುಕ್ಕೊಂಡು, ಕಂಕುಳಿಗೆ ಕೈ ಕೊಟ್ಟು ಎತ್ತಿದರು. ಈ ಸಹಾಯಕರೂ ಹುಶಾರಾಗಿರಬೇಕು, ಇಲ್ಲದಿದ್ದರೆ ಅವರಿಗೆ ಎತ್ತುವಾಗ ಸೊಂಟ ಹಿಡಿದುಕೊಳ್ಳಬಹುದು. ನಾನು ಅನೇಕ ವರ್ಷಗಳ ಅನುಭವದಿಂದ ಹೇಗೆ ಅವರಿಗೆ ಈ ಕೆಲಸವನ್ನು ಸುಲಭವಾಗಿಸಬಹುದು ಎಂಬುದನ್ನು ಕಲಿತಿದ್ದೇನೆ. ನಮ್ಮಂತ ಮೊದಲೇ ಬೆನ್ನು ಹುರಿ ಗಟ್ಟಿ ಇಲ್ಲದಂತಹವರಿಗೆ, ಸರಿಯಾಗಿ ಎತ್ತಿಕೊಳ್ಳದಿದ್ದರೆ ಬಹಳ ನೋವು ಆಗುತ್ತದೆ. ಚಿಕ್ಕವರಾಗಿದ್ದಾಗ ನೋವು ತಡೆದು ಕೊಳ್ಳುವ ಶಕ್ತಿ ಇದ್ದಿತು. ವಯಸ್ಸಾಗುತ್ತಾ ಶಕ್ತಿಯು ಕಮ್ಮಿಯಾಗಿ ಕೀಲುಗಳೂ ಶಕ್ತಿಯನ್ನು ಕಳೆದುಕೊಂಡಿವೆ. ನಾನು ನಮ್ಮ ಎ.ಪಿ.ಡಿಯಲ್ಲಿ ಕೆಲಸ ಮಾಡುವವರಿಗೆ ವಿಕಲಾಂಗರನ್ನು ಹೇಗೆ ಎತ್ತಿಕೊಳ್ಳಬೇಕು ಎಂಬುದನ್ನು ಕಲಿತು ಕೊಳ್ಳಲು ಹೇಳುತ್ತೇನೆ. ಇದು ಬಹಳ ಮುಖ್ಯ, ಅದರಲ್ಲೂ ವ್ಹೀಲ್ ಚೇರಿನಿಂದ ಹಾಸಿಗೆಗೆ, ಅಥವಾ ಹಾಸಿಗೆಯಿಂದ ವ್ಹೀಲ್ ಚೇರಿಗೆ ಬದಲಾಯಿಸಬೇಕಾದಾಗ. ಗ್ರಂತಾಲಯಗಳಲ್ಲಿ ಇವನ್ನು ಹೇಗೆ ಮಾಡಬೇಕು ಎಂಬುದನ್ನು ಸಚಿತ್ರವಾಗಿ ವರ್ಣಿಸಿರುವ ಪುಸ್ತಕಗಳಿವೆ. ಇವುಗಳಿಂದ ಸೂಕ್ತ ತರಬೇತಿ ನೀಡ ಬಹುದು. ಈಗಂತೂ ಅನೇಕ ಸಲಕರಣೆಗಳು ಸಿಗುತ್ತವೆ. ಅವನ್ನು ಕೊಂಡು ಕೆಲಸ ಮಾಡುವವರಿಗೆ ಸೂಕ್ತ ತರಬೇತಿ ನೀಡಿದರೆ ಸಾಕು.

ಚೀನಾದಲ್ಲಿ ನಮ್ಮ ಮೊದಲನೆಯ ದಿನದಂದು ನಾವು ಸಸ್ಯಾಹಾರಿ ಊಟವನ್ನು ಹುಡುಕಿಕೊಂಡು ಒಂದು ಹೋಟಲಿಗೆ ಹೋದೆವು. ಅಲ್ಲಿನ ಸುಂದರ ಮಹಿಳೆಯರನ್ನು ನೋಡಿ ಸಂತೋಷವಾಯಿತು.

ಮೆನು ಎಲ್ಲಾ ಅಲ್ಲಿನ ಭಾಷೆಯಲ್ಲಿತ್ತು. ಅದರಲ್ಲಿ ಎಲ್ಲದರಲ್ಲೂ ಮೀನು, ಮಾಂಸ ಇದ್ದಹಾಗಿತ್ತು. ಅಲ್ಲಿನ ವೈಟರ್‌ಗಳಿಗೆ ನಾವು 'ವೆಜಿಟೇರಿಯನ್' ಅಂದರೆ ಏನನ್ನು ಕೇಳುತಿದ್ದೇವೆ ಎಂದು ಅರ್ಥವಾಗಲಿಲ್ಲ. ಕೊನೆಗೆ ಮೆನುವಿನಲ್ಲಿ 'Tomato Soup' ಎಂದು ಇಂಗ್ಲೀಷಿನ ಒಂದೆರಡು ಪದಗಳಿರುವುದು ಕಂಡಿತು. ನಾವು ಅದನ್ನೇ ಬಹಳ ಖುಷಿಯಾಗಿ ಆರ್ಡರ್ ಮಾಡಿದೆವು. ಆದರೆ ಅವನು ತಂದದ್ದು ಒಂದು ದೊಡ್ಡ ಬಟ್ಟಲಿನಲ್ಲಿ ಕುದಿಯುವ ಬಿಸಿನೀರಿನಲ್ಲಿ

ಕೆಲವು ಟೊಮ್ಯಾಟೋ ಹೋಳುಗಳು. ನಮಗೆ ತಡೆಯಲಾರದಷ್ಟು ನಗು ಬಂದಿತು. ನಾವೇನೋ ಬಹಳ ಆಕರ್ಷಕವಾದ ಟೊಮ್ಯಾಟೋ ಸೂಪ್ ತಂದು ಕೊಡುತ್ತಾನೆಂದು ನೋಡುತ್ತಿದ್ದೆವು. ಅಲ್ಲಿನ ವೈಟರ್‌ಗಳು ನಮ್ಮನ್ನೇ ನೋಡುತ್ತಿದ್ದರು. ನಾವು ಮತ್ತೊಮ್ಮೆ ಆ ಹೋಟಲಿಗೆ ಹೋಗುವುದು ಬೇಡವೆಂದು ನಿಶ್ಚಯಿಸಿದೆವು.

ನಾವು ಮೊದಲಿನ ಎರಡು ದಿನಗಳಲ್ಲಿ ನಾವು ಉಟ್ಟಿದ್ದ ಬಟ್ಟೆಗಳೊಂದಿಗೇ ಕಳೆದೆವು. ಅವನ್ನೇ ರಾತ್ರಿ ಒಗೆದು ಮತ್ತೆ ಮರುದಿನ ಉಡುವುದು. ಮೂರನೆಯ ದಿನದ ಹೊತ್ತಿಗೆ ನನ್ನ ಅಕ್ಕನ ಸೀರೆಯು ಅಲ್ಲಲ್ಲಿ ಹರಿಯುವಂತಾಗಿತ್ತು. ನಾವು ಚೀನಿಯರ ಉಡುಪನ್ನೇ ತೆಗೆದು ಕೊಳ್ಳಬೇಕಾಗಬಹುದು ಎಂದು ಯೋಚಿಸುತ್ತಿದ್ದೆವು. ಅಷ್ಟರಲ್ಲಿ ನಮ್ಮ ಪೆಟ್ಟಿಗೆಗಳು ಬಂದವು. ಆದರೆ ನಮ್ಮ ಅದೃಷ್ಟವು ಬದಲಾಗಲಿಲ್ಲ. ನಾವು ಮುಂಬೈಗೆ ಹಿಂದಿರುಗಿದಾಗ ನನ್ನ ವ್ಹೀಲ್ ಚೇರನ್ನು ಏರ್ಲೈನಿನವರು ಕಳೆದು ಹಾಕಿದರು. ಅದು ನಾನು ಇಂಗ್ಲೆಂಡಿನಲ್ಲಿ ಕೊಂಡುಕೊಂಡದ್ದು. ಬಹಳ ಹಗುರವಾಗಿ, ಚೆನ್ನಾಗಿತ್ತು. ಸ್ವೀಡಿಶ್ ಸಂಸ್ಥೆ 'ಶಿಯಾ' ನವರಿಗೆ ಇದು ತಿಳಿದಾಗ ಅವರು ನನಗೆ ಹೊಸ ವ್ಹೀಲ್ ಚೇರ್ ಕಳುಹಿಸಿ ಕೊಟ್ಟರು. ಅದನ್ನು ಇಂದಿಗೂ ನಾನು ಹೊರಗೆ ಹೋದಾಗ ಉಪಯೋಗಿಸುತ್ತೇನೆ.

ಸಂಯುಕ್ತ ರಾಷ್ಟ್ರಗಳ ಸಾಮಾವೇಶದಲ್ಲಿ ಅನೇಕ ಕೊರತೆಗಳೂ ಇದ್ದವು.ದೃಷ್ಟಿ ಮಾಂದ್ಯವಿದ್ದ ಸದಸ್ಯರಿಗೆ ಸಮಾವೇಶದ ಕೋಣೆಗಳನ್ನು ತಲಪುವುದೇ ಕಷ್ಟವಾಯಿತು. ಅವರು ಇದಕ್ಕೆ ಪ್ರತಿಭಟಿಸಿದರು. ಮುಂದಿನ ಎರಡು ದಿನಗಳು ನಮ್ಮನ್ನು ಸಮಾವೇಶಕ್ಕೆ ಕರೆದುಕೊಂಡು ಹೋಗುವ ಬಸ್ ಗಳು ಹೋಟಲಿಗೆ ಬರಲೇ ಇಲ್ಲ. ಇದು ನಾವು ಪ್ರತಿಭಟಿಸಿದ್ದಕ್ಕೆ ಕೊಟ್ಟ ಶಿಕ್ಷೆಯೋ, ಏನೆಂದು ತಿಳಿಯಲಿಲ್ಲ.ಅವರು ನಮ್ಮನ್ನು ಪೂರ್ತಿಯಾಗಿ ನಿರ್ಲಕ್ಷಿಸಿದರು. ನಾವು ಫೋನ್ ಮಾಡಿದರೆ ಯಾರೋ ತೆಗೆದುಕೊಳ್ಳುತ್ತಿರಲಿಲ್ಲ. ನಾವು ಎರಡು ಪೂರ್ತಿ ದಿನಗಳು ಹೀಗೆಯೇ ಏನೂ ಮಾಡದೆ ಹೋಟಲಿನಲ್ಲಿ ಕೂತಿದ್ದೆವು. ನಂತರ ಬಸ್ ಬಂದಿತು. ಆಗ ನಾವು ಅವರೊಂದಿಗೆ ಮಾತನಾಡಲು ಪ್ರಯತ್ನಿಸಿದೆವು, ಆದರೆ ಅವರಿಂದ ಮೌನವಲ್ಲದೆ ಮತ್ಯಾವ ಉತ್ತರವೂ ಬರಲಿಲ್ಲ. ಅವರ ನಡತೆ ನಮಲ್ಲಿ ಆಶ್ಚರ್ಯ ಮೂಡಿಸಿತು. ಇನ್ನೂ ಕೆಲವು ದಿನಗಳಿದ್ದಿದ್ದರಿಂದ ನಾವು over react ಮಾಡದೆ ಹುಷಾರಾಗಿ ಇದ್ದೆವು. ನಮಗೆ ಮನುಷ್ಯರೊಡನೆ ಒಡನಾಡುವುದರಲ್ಲಿ ಇದು ಒಂದು ಒಳ್ಳೆಯ ಪಾಠವಾಯಿತು.

ಅಲ್ಲಿನ ಕಾರ್ಯಕ್ರಮದ ಅಂಗವಾಗಿ ನಮ್ಮನ್ನು ಊರುಸುತ್ತಲು ಕರೆದುಕೊಂಡು ಹೋದರು. ಅಲ್ಲಿನ Forbidden city ಎಂಬ ಸ್ಥಳವು ಬಹಳ ಸುಂದರವಾಗಿದೆ. ದೊಡ್ಡ ದೊಡ್ಡ ಪಗೋಡಗಳು, ವಿಶಾಲವಾದ ಪ್ರಾಕಾರಗಳು, ಪ್ರಾಣಿಗಳ ವಿಗ್ರಹಗಳು ಇದ್ದವು.

ಅನೇಕ ಸ್ವಯಂ ಸೇವಕರು ಬಂದಿದ್ದರು. ಅವರಲ್ಲಿ ಇಬ್ಬರು ನನ್ನ ವ್ಹೀಲ್ ಚೇರನ್ನು ತಳ್ಳುವ ಜವಾಬ್ದಾರಿಯನ್ನು ತೆಗೆದು ಕೊಂಡಿದ್ದರು. ಅಲ್ಲಿ ಅನೇಕ ಭಾಗ ಗಳಿದ್ದವು, ಆದರೆ ಮೊದಲಿನ ಭಾಗವನ್ನು ನೋಡಿದ ನಂತರ ನಾನು ಬಸ್‌ಗೆ ಹಿಂತಿರುಗಲು ಇಚ್ಚಿಸಿದೆ. ಆದರೆ ಬಸ್ ಅಲ್ಲಿಂದ ಹೊರಟು ಮತ್ತೊಂದೆಡೆಯಲ್ಲಿ ನಮಗೋಸ್ಕರ ಕಾಯುತ್ತಿತ್ತು. ನಮಗೆ ಅಲ್ಲಿನ ಎಲ್ಲ ಭಾಗಗಳನ್ನು ನೋಡದೆ ಬೇರೆ ದಾರಿ ಇರಲಿಲ್ಲ. ದಕ್ಷಿಣ ಅಮೇರಿಕದಿಂದ ಬಂದಿದ್ದ ಮರಿಯಾ ಎಂಬುವಳು ನನ್ನನ್ನು ಎಲ್ಲಾ ಭಾಗಗಳಿಗೂ ಹೋಗಲು ಹುರಿದುಂಬಿಸಿದಳು. ಅಲ್ಲಿ ಅನೇಕ ಸ್ಥಳಗಳಲ್ಲಿ ಎತ್ತರದ ಕಟ್ಟೆಗಳಿದ್ದವು. ಅವನ್ನು ದಾಟಲು ದೃಢವಾದ ದೇಹ ಉಳ್ಳವರಿಗೂ ಕಷ್ಟವಾಗುತಿತ್ತು. ಮರಿಯಾಳಿಗೂ ಸಹಾಯ ಬೇಕಾಯಿತು. ನನ್ನನ್ನು ಇತರ ಯಾತ್ರಿಗಳು ಸಹಾಯಮಾಡಿ ಎತ್ತಿದರು.

ನಾವು ಆ ಬೇಸಿಗೆಯ ಅರಮನೆಯನ್ನು ತಲಪಿದಾಗ ಒಂದು ಚಿಕ್ಕ ಮಾರ್ಗದಿಂದ ಒಳಗೆ ಹೋಗಬೇಕಾಗಿತ್ತು. ನನಗೆ ಮತ್ತು ಕುಮ್ಮುವಿಗೆ ಇದೇನೂ ಬಹಳ ರುಚಿಸಲಿಲ್ಲ. ನಾವು ಆ ಬಗ್ಗೆ ಮಾತನಾಡಿಕೊಳ್ಳುತಿದ್ದೆವು. ಹಠಾತ್ತನೆ ಒಂದು ತಿರುವು ಬಂದಿತು ಮತ್ತು ಎದುರಿಗೆ ದೊಡ್ಡ ಅತಿ ಸುಂದರ ಸರೋವರ. ಅದರಲ್ಲಿ ಯಾತ್ರಿಗಳು ದೋಣಿಯಲ್ಲಿ ಪರ್ಯಟಿಸಬಹುದಿತ್ತು. ಸುತ್ತಲೂ ಸುಂದರವಾದ ಉದ್ಯಾನ. ನೂರಾರು ವರ್ಷಗಳಾಗಿರುವ ಮರಗಳು. ಅಲ್ಲಲ್ಲಿ ಸೂಚನೆಯ ಹಲಗೆಗಳು ಅವರ ಭಾಷೆಯಲ್ಲಿಇದ್ದುದರಿಂದ ನಮಗೆ ಓದಲಾಗಲಿಲ್ಲ. ಮರದಲ್ಲಿ ಕಟ್ಟಿರುವ ಅರಮನೆಯು ಬಹಳ ಸುಂದರವಾಗಿತ್ತು. ಕುಮ್ಮು ನೋಡಲು ಮೇಲೆ ಹೋದಳು. ನನಗೆ ಮೆಟ್ಟಲು ಹತ್ತುವುದು ಕಷ್ಟವಾದ್ದರಿಂದ ನಾನು ಹೋಗಲಿಲ್ಲ. ಅವರು ಈ ಅರಮನೆಯು ಸುಟ್ಟುಹೋಗಿತ್ತೆಂದೂ ಅದನ್ನು ಮೊದಲಿನಹಾಗೆಯೇ ಸರಿಪಡಿಸಿದರೆಂದೂ ಹೇಳಿದರು. ಹಿಂದೆ ಸೂರ್ಯ ಮುಳುಗುತಿತ್ತು. ಮುಳುಗುತ್ತಿರುವ ಸೂರ್ಯನ ಹೊಂಬೆಳಕು ಮತ್ತು ಇತಿಹಾಸಮಯವಾದ ಅರಮನೆ ಎರಡೂ ಸೇರಿ ನೋಡುಗರಿಗೆ ಒಂದು ಅಪೂರ್ವ ಅನುಭವ ತಂದಿತು.

Forbidden city ಆನಂದಿಸಿದರೂ ನನಗೆ ಚೀನಾ ದೇಶದ ಪ್ರವಾಸ ಅಲ್ಲಿನ Great Wall ನೋಡದೆ ಅಪೂರ್ಣ ಎನ್ನಿಸಿತು. ಕೊನೆಗೆ ನಾವು ಕೆಲವರು ಸೇರಿಕೊಂಡು ಒಂದು ಕಾರಿನಲ್ಲಿ ಅಲ್ಲಿಗೆ ಹೊರಟೆವು. ನಾನು ಹಿಂದುಳಿದು ಕುಮ್ಮುವನ್ನು ಹೋಗಲು ಹೇಳಿದೆ. ಅವಳು ಮತ್ತು 'ಶಿಯಾ' ದ ಒಬ್ಬಳು ಅದಕ್ಕೆ ಒಪ್ಪಲಿಲ್ಲ. ಅವರು ಕೆಲವು ದೃಢ ಕಾಯರಾದ ಹುಡುಗರನ್ನುನನ್ನನ್ನು ಮೇಲೆ ಎತ್ತಿ ಕೊಂಡು ಬರಲು ಒಪ್ಪಿಸಿದರು. ಚೀನಾದಲ್ಲಂತೂ ಸಹಾಯ ಮಾಡಲು ತಯಾರಾಗಿರುವವರಿಗೆ ಕೊರತೆಯೇ ಇರಲಿಲ್ಲ. ನಾನು ಅವರಿಗೆ

ಏನು ಬೇಕು ಎಂದು ಹೇಳ ಬೇಕಾಗಿತ್ತು.ನಾನು ಸಂಜ್ಞೆಗಳ ಮೂಲಕ ಅವರಿಗೆ ನನ್ನ ವ್ಹೀಲ್ ಚೇರನ್ನು ಮೆಟ್ಟಲು ಗಳಲ್ಲಿ ಹೇಗೆ ಹತ್ತಿಸಬೇಕು ಮತ್ತು ಇಳಿಸ ಬೇಕು ಎಂಬುದನ್ನು ತೋರಿಸಿದೆ. ಮೇಲೆ ಸೇರಿದ ಬಳಿಕ ಮತ್ತೊಂದು ಸಮಸ್ಯೆ ಎದುರಾಯಿತು. ಅದು ಕೇಬಲ್ ಕಾರಿನೊಳಗೆ ಹತ್ತುವುದು. ಕೇಬಲ್ ಕಾರ್ ಹೆಚ್ಚು ಸಮಯ ನಿಲ್ಲುವುದಿಲ್ಲವಾದ್ದರಿಂದ ನಾನು ಆ ಹುಡುಗರಿಗೆ ನಾಲ್ಕು ಎಣ್ಣಿಸಿ ಒಳಗೆ ಧುಮುಕಲು ಹೇಳಿದೆ. ನಾನು ಹತ್ತಿದನಂತರ ಕುಮ್ಮು ಮತ್ತೆ ಆ ಹೆಂಗಸೂ ಬಂದರು. ಮೇಲಿನಿಂದ ತೋರಿಬಂದ ಚಿತ್ರವು ಅಧ್ಬುತವಾಗಿತ್ತು.

ಚೀನಾ ನನಗೆ ಒಂದು puzzle ಆಗಿತ್ತು. ಅದರ ಸಿರಿವಂತ ಸಂಸ್ಕೃತಿಯನ್ನು ತಿಳಿಯಲು ಅಲ್ಲಿಯೇ ಹುಟ್ಟಿರಬೇಕು ಇಲ್ಲಾ, ಅನೇಕ ವರ್ಷಗಳು ಅಲ್ಲಿಯೇ ಜೀವಿಸಿರಬೇಕು.ನಮ್ಮ ದೇಶದಂತೆ ಅಲ್ಲಿಯೂ ಅನೇಕ ಭಾಷೆಗಳಿವೆ. ಜೊತೆಗೆ ಅನೇಕ ಪಂಗಡಗಳು, ಸಂಪ್ರದಾಯಗಳು, ಅಡುಗೆಯ ವಿಧಾನಗಳು ಇವೆ.ಭಾಷೆಯು ಬರದಿದ್ದರೆ ಬಹಳ ದೊಡ್ಡ ತೊಡಕು. ಅಂಗಡಿಗಳಲ್ಲಿ ವ್ಯಾಪಾರ ಮಾಡಲು ಆಗುವುದಿಲ್ಲ. ಅನೇಕ ದಿನಗಳು ಬರೀ ಬ್ರೆಡ್ ಮತ್ತು ಚೀಸ್ ತಿನ್ನುತ್ತಾ ಕಳೆದ ನಮಗೆ ನಮ್ಮ ಭಾರತೀಯ ಊಟವನ್ನು ಕಾಣುತ್ತೇವಾ ಎಂಬಂತೆ ಆಗಿತ್ತು. ನಾವು ಬೊಂಬಾಯಿಗೆ ಹಿಂದಿರುಗಿದಾಗ ನಾನು ನನ್ನ ಅಕ್ಕ ಪ್ರಭಳಿಗೆ ಫೋನ್ ಮಾಡಿ ದೊಡ್ಡ ಊಟದ ಲಿಸ್ಟನ್ನೇ ಕೊಟ್ಟೆ. ನನಗೆ ಮತ್ತು ಕುಮ್ಮುವಿಗೆ ಬಹಳ ಹಸಿವಾಗಿತ್ತು.

* * *

# ಹೊಸ ದಿಗಂತಗಳು

ವರ್ಕ್‌ಶಾಪನ್ನು ಮುಚ್ಚಿದನಂತರ ಎ.ಪಿ.ಡಿಯನ್ನು ಪುನರ್ರಚಿಸಲಾಯಿತು. ನನಗೆ ಅದರ ಸಂಪರ್ಕ ಮತ್ತು ಹಣ ಸಂಗ್ರಹಿಸುವ ವಿಭಾಗದ ಕೆಲಸವನ್ನು ಒಪ್ಪಿಸಲಾಯಿತು. ನಾನು ಚಿಕ್ಕವಯಸ್ಸಿನಿಂದಲೇ, ಎ.ಪಿ.ಡಿ ಶುರುವಾಗುವುದಕ್ಕೂ ಮೊದಲಿನಿಂದ, ಹಣಕಾಸು ಸಂಗ್ರಹಿಸುವ ಕೆಲಸದಲ್ಲಿ ತೊಡಗಿದ್ದೆ. ನನಗೆ ಈ ಕೆಲಸದಲ್ಲಿ ಪ್ರೇರೇಪಿಸಿದ್ದು ನನ್ನ ದೀ ಅತ್ತೆ, ಅವರು ಅನೇಕ ಯೋಜನೆಗಳಿಗೆ ಹಣ ಸಂಗ್ರಹಿಸುತ್ತಿದ್ದರು.

ನನಗೆ ಯೋಜನೆಗಳಿಗಾಗಿ ಜನರಲ್ಲಿ ಹಣ ಕೇಳುವುದರಲ್ಲಿ ಸಂಕೋಚವಿರಲಿಲ್ಲ. ನಾನು ಈ ನಿಟ್ಟಿನಲ್ಲಿ ಅನೇಕ ಕರಕುಶಲ ವಸ್ತುಗಳನ್ನು ಮಾರಿದ್ದೆ. ನನ್ನ ತಂದೆಯವರೂ ಹಣ ಸಂಗ್ರಹಿಸುವುದರಲ್ಲಿ ದಕ್ಷರಿದ್ದರು ಮತ್ತು ಜನರೊಂದಿಗೆ ಚೆನ್ನಾಗಿ ಮಾತನಾಡುತಿದ್ದರು.

ಎ.ಪಿ.ಡಿ ಯಲ್ಲಿ ನಾನು ಹಣ ಸಂಗ್ರಹಿಸಲು ಬೇಕಾದಷ್ಟು ಕೆಲಸ ಮಾಡಿದ್ದೆ, ಆದರೆ, ಈಗ ನಮ್ಮ ಆಡಳಿತ ಮಂಡಳಿಯವರು ಇದಕ್ಕೋಸ್ಕರ ಒಂದು ವಿಭಾಗವನ್ನು ಸ್ಥಾಪಿಸಲು ಕೋರಿದರು.ನನಗೆ ಇದನ್ನು ಹೇಗೆ ಮಾಡಬೇಕೆಂದು ತೋಚಲಿಲ್ಲ. ನಾನು ನನ್ನ ಬ್ರಿಟಿಷ್ ಮಿತ್ರರಾದ ಮುರ್ರೇ ಕಲ್ಲಾ ಅವರ ಸಹಾಯ ಕೋರಿದೆ. ಮುರ್ರೇ ಅವರು ಎಲ್ಲಾ ಸಂಸ್ಥೆಗಳೂ ತಮಗೆ ಬೇಕಾದ ಹಣವನ್ನು ತಮ್ಮ ಸುತ್ತುಮುತ್ತಿನಲ್ಲೇ ಶೇಖರಿಸಬೇಕು ಎಂಬ ಅಭಿಪ್ರಾಯ ಉಳ್ಳವರಾಗಿದ್ದರು. ಇದು ನನಗೂ ಸರಿ ಎಂದು ತೋರಿತು. ನಾನು ನಮ್ಮ ದೇಶದಲ್ಲಿ ಹಣ ಸಂಗ್ರಹಿಸುವ ಪ್ರಯತ್ನ ಮಾಡಿದ್ದೆ, ಮತ್ತೆ ನನಗೆ ಅದರಲ್ಲಿ ಯಶಸ್ವಿಯಾಗುವ ಭರವಸೆ ಇತ್ತು, ಆದ್ದರಿಂದ ನಾನು ಮುರ್ರೇ ಅವರ ಸಹಾಯದಿಂದ ಒಂದು ಪುಟ್ಟ ತಂಡವನ್ನು ತಯಾರು ಮಾಡಿ ಅವರುಗಳು ನಮಗೆ ದೇಣಿಗೆ ನೀಡಬಹುದಾದ ದಾನಿಗಳನ್ನುಸಂಪರ್ಕಿಸುವಂತೆ ಮಾಡಿದೆ. ಇದು ಸುಲಭದ ಕೆಲಸವೇನಿರಲಿಲ್ಲ. ನಾವು ನಮ್ಮ ಸಂಸ್ಥೆಯಲ್ಲಿ ನಮಗಿರುವ ಸೌಲಭ್ಯಗಳ ಪಟ್ಟಿಯನ್ನು ತಯಾರು ಮಾಡಬೇಕಾಯಿತು, ಮತ್ತು ನಮಗೆ ತಿಳಿದಿರುವ ದಾನಿಗಳ ಪಟ್ಟಿಯನ್ನೂ ಕೈಯಿಂದ ತಯಾರಿಸಬೇಕಾಯಿತು. ನಾನು ನಾಯ್ಡು ಮತ್ತು ಇನ್ನೂ ಕೆಲವರೊಡನೆ ಕೆಲಸ ಮಾಡಿ ಎಲ್ಲಾ ಮಾಹಿತಿಯನ್ನೂ ಸಂಗ್ರಹಿಸಿದೆ. ಇದನ್ನು ಮಾಡಲು ನಮಗೆ ಸುಮಾರು ಒಂದು ವರ್ಷಕಾಲ ಹಿಡಿಯಿತು. ನಮ್ಮೆಲ್ಲರಿಗೂ ಇದೊಂದು ಹೊಸ ಅನುಭವ. ನಾವೆಲ್ಲ ಬಹಳ ದುಡಿದೆವು. ನಮ್ಮಲ್ಲಿ ಹಣದ ಕೊರತೆ ಇದ್ದುದ್ದರಿಂದ ನಾವು ಹೆಚ್ಚು ಜನರಿರುವ ದೊಡ್ಡ ತಂಡವನ್ನು

ರಚಿಸಲಾಗಲಿಲ್ಲ.ನಾವು ಒಬ್ಬರು ವ್ಯವಸ್ಥಾಪಕರು ಬೇಕೆಂದು  ಜಾಹಿರಾತು ಕೊಟ್ಟೆವು. ಮಾರನೆಯದಿನ ಜಾಹಿರಾತು ಕಂಪನಿಯಾದ ಒಗಿಲ್ವಿ ಮತ್ತು ಮ್ಯಾಥರ್ ನಿಂದ ಒಬ್ಬರು ನನ್ನನ್ನು ಸಂಪರ್ಕಿಸಿದರು. ಅವರು ತಮ್ಮ ಕಂಪೆನಿಯು ನಮ್ಮ ಹಣ ಸಂಗ್ರಹಿಸುವ ವಿಭಾಗವನ್ನು ನಡೆಸಿ ನಮಗೆ ಒಂದು ವರ್ಷ ಪುಕ್ಕಟ್ಟೆಯಾಗಿ ಕೆಲಸ ಮಾಡಿ ಹಣ ಸಂಗ್ರಹಿಸಿಕೊಡುವುದಾಗಿ ತಿಳಿಸಿದರು. ಇದು ನಮಗೆ ಒಳ್ಳೆಯ ಕೊಡುಗೆಯಾಗಿ ತೋರಿತು. ಆದರೆ ಅವರು ನಮ್ಮ ಸಂಸ್ಥೆಯಲ್ಲಿ ಕೆಲಸ ಮಾಡಿದರೆ ಎಷ್ಟು ಸಫಲರಾಗುತ್ತಾರೆ ಎಂಬ ಅಳುಕು ನನಗಿತ್ತು. ಅದೂ ಅಲ್ಲದೆ, ಎಲ್ಲಾ ಆಡಳಿತವನ್ನೂ ಅವರಿಗೆ ಒಪ್ಪಿಸಲು ನಾನು ಸಿದ್ಧವಿರಲಿಲ್ಲ. ನನಗೆ ವಿ.ಪಿ.ಡಿ ಆ ವಿಭಾಗಕ್ಕೆ ಬೇಕಾದ ತಯಾರಿಯನ್ನು ಮಾಡಿ ಅದರ ಕಾಲಿನ ಮೇಲೆ ನಿಂತುಕೊಳ್ಳಬೇಕು ಎಂದೆನಿಸಿತು. ಮೂರು ವರ್ಷಗಳ ನಂತರ ನಾವು ಅವರನ್ನು ಮತ್ತೆ ಸಂಪರ್ಕಿಸಿದೆವು. ಅಷ್ಟು ಹೊತ್ತಿಗೆ ಅವರಲ್ಲಿ ಅನೇಕ ಬದಲಾವಣೆಗಳಾಗಿ ಹೊಸಮುಖಗಳು ಇದ್ದವು. ಅವರು ನಮ್ಮ ಕೋರಿಕೆಗೆ ಒಪ್ಪಿ ನಮಗೆ ಸಹಾಯ ಮಾಡಲು ಮುಂದಾದರು. ಅವರು ಬಹಳ ಕಾಲ ನಮಗೆ ಭಿತ್ತಿ ಪತ್ರಗಳು, ಕೈ ಚೀಟಿಗಳು, ವಾರ್ಷಿಕ ವರದಿಗಳು, ಮತ್ತು ವಿಷೇಶ ಕಾರ್ಯಕ್ರಮಗಳ ವರದಿಗಳು ಇತ್ಯಾದಿಗಳನ್ನು ಮಾಡಿಕೊಟ್ಟು ನೆರವಾದರು. ಈಗಲೂ, ಅವರು ನಮ್ಮ ಸಂಸ್ಥೆಯ ಕೆಲಸ ಮಾಡದಿದ್ದರೂ, ನಾವು ಅವರನ್ನು ಕೇಳಿದಾಗ ನಮ್ಮ ನೆರವಿಗೆ ಸದಾ ಸಿದ್ಧವಾಗಿದ್ದಾರೆ.

ನನಗೆ ಮತ್ತೆ ಬೀಜಿಂಗಿನಲ್ಲಿ ಸಂಧಿಸಿದ್ದ ಡೆಲಿಗೇಟುಗಳನ್ನು ಸಂಧಿಸುವ ಅವಕಾಶವು ಒದಗಿತು. ಸಂಯುಕ್ತ ರಾಷ್ಟ್ರವು ವಾಷಿಂಗ್ಟನಿನಲ್ಲಿ ಬಿಜಿಂಗಿನಲ್ಲಿ ನಡೆದ ಸಮಾವೇಶದ ಉತ್ತರಾರ್ಧವಾಗಿ ಒಂದು ಸಮವೇಶವನ್ನು ಏರ್ಪಡಿಸಿತ್ತು. ನಾನು ವಿ.ಪಿ.ಡಿ ಯ ಶೋಭಾ ರಾಜ್ ಜೊತೆಯಲ್ಲಿ ಈ ಸಮಾವೇಶಕ್ಕೆ ಹೋದೆ. ಅವರೆಲ್ಲರನ್ನೂ ಮತ್ತೊಮ್ಮೆ ಸಂಧಿಸಲು ಸಿಕ್ಕಿದ ಅವಕಾಶ ಬಹಳ ಚೆನ್ನಾಗಿತ್ತು. ನಾನು ಹಿಂದೆ ಅಮೇರಿಕಕ್ಕೆ ಹೋದಾಗ, ವಿಕಲಾಂಗರಿಗೆ ಬೇಕಾದ ಸೇವೆಗಳಬಗ್ಗೆ ಅಲ್ಲಿನ ಜನರಿಗೆ ಹೆಚ್ಚಿನ ಅರಿವು ಇರಲಿಲ್ಲ ಎಂಬುದನ್ನು ಗಮನಿಸಿದ್ದೆ. ವಿಕಲಾಂಗರಿಗೆ ಬೇಕಾದ ಸೌಲಭ್ಯಗಳು ಅಲ್ಲಿಇಲ್ಲದ್ದಿದ್ದುದು ನನಗೆ ನಿರಾಸೆಯನ್ನು ತಂದಿತು. ಆದರೆ, ೧೯೯೮ ರ ವೇಳೆಗೆ ಅನೇಕ ಬದಲಾವಣೆಗಳು ಆಗಿದ್ದವು. ಅವರು ವಿಕಲಾಂಗರ ಬಗ್ಗೆ ಕಾನೂನಿನಲ್ಲಿ ಬದಲಾವಣೆಗಳನ್ನು ತಂದು ಅವನ್ನು ಯಶಸ್ವಿಯಾಗಿ ಕಾರ್ಯಗತ ಮಾಡಿದ್ದರು. ಅನೇಕ ವಿಕಲಾಂಗರ ಸ್ವಯಂ ಸಹಾಯದ ಸಂಸ್ಥೆಗಳು ಸಕ್ರಿಯವಾಗಿ ಕೆಲಸ ಮಾಡುತಿದ್ದವು. ವಿಯಟ್ನಾಮಿನ ಯುದ್ಧದ ನಂತರ ಅಮೇರಿಕಕ್ಕೆ  ಯುದ್ಧದಿಂದ ವಿಕಲಾಂಗರಾಗಿ ಹಿಂದಿರುಗಿದ ಯುವಕರ ಬೇಕು ಬೇಡಗಳ ಅರಿವಾಯಿತು. ಯೂರೋಪ್ ಮತ್ತು ಇಂಗ್ಲೆಂಡ್‌ನಲ್ಲಿ ಎರಡು ಮಹಾಯುದ್ಧಗಳ ನಂತರ ಈ ಅರಿವು ಹೆಚ್ಚಿತ್ತು.

ನಮ್ಮ ಭಾರತದಲ್ಲೂ ವಿಕಲಾಂಗರ ಬಗ್ಗೆ ಒಳ್ಳೆಯ ನೀತಿಗಳೆ ಇವೆ. ಆದರೆ, ಅದರ ಪಾಲನೆಯಲ್ಲೇ ಬರುವುದು ತೊಂದರೆ. ಈ ನೀತಿಗಳ ಪಾಲನೆಗೆ ವಿಕಲಾಂಗರೇ ಹೊಡೆದಾಡಬೇಕು. ಬಡತನ, ಅನಕ್ಷರತೆ, ಅಧಿಕಾರಿಗಳ ಉದಾಸೀನತೆ ಇವೆಲ್ಲಾ ಸೇರಿ ವಿಕಲಾಂಗರಿಗೆ ಸಿಗಬೇಕಾದ ಸೌಲಭ್ಯಗಳು ಸಿಗದಂತಾಗುತ್ತವೆ. ಅನೇಕ ವಿಕಲಾಂಗರಿಗೆ ನಿಯಮಗಳ ಪ್ರಕಾರ ಅವರಿಗೆ ಸಿಗಬೇಕಾದ ಹಕ್ಕುಗಳೇನು ಎಂಬುದೂ ಗೊತ್ತಿರುವುದಿಲ್ಲ. ಅವರಿಗೆ ಅದರ ಅರಿವನ್ನು ಮೂಡಿಸಬೇಕಾಗಿರುವುದು ಅತ್ಯಗತ್ಯ. ಈಗ ಅನೇಕ ಸಂಸ್ಥೆಗಳು ಈ ದಿಶೆಯಲ್ಲಿ ಕೆಲಸ ಮಾಡುತ್ತಿರುವುದರಿಂದ ಬದಲಾವಣೆಗಳನ್ನು ಕಾಣುತಿದ್ದೇವೆ. ಶ್ರದ್ಧೆಯುಳ್ಳವರು ಈ ಕ್ಷೇತ್ರದಲ್ಲಿ ಕೆಲಸ ಮಾಡಿದರೆ, ಇನ್ನೂ ಐದು ಅಥವಾ ಹತ್ತು ವರ್ಷಗಳಲ್ಲಿ ಬದಲಾವಣೆಗಳು ಬರಬಹುದು.

ಸಮಾವೇಶವನ್ನು ವಾಷಿಂಗ್ಟನ್ನಿನ ಹತ್ತಿರದಲ್ಲಿರುವ ಬೆತೆಸ್ಡಾ ಎಂಬಲ್ಲಿ ಏರ್ಪಡಿಸಿದ್ದರು. ವಿಶ್ವಾದ್ಯಂತ ಸಮಾವೇಶಕ್ಕೆ ಜನರು ಬಂದಿದ್ದರಿಂದ, ನಮ್ಮನ್ನು ನಮ್ಮ ಹೋಟಲಿನಿಂದ ಬಸ್ ಗಳಲ್ಲಿ ಸಮಾವೇಶಕ್ಕೆ ಕರೆದೊಯ್ದರು. ಬಸ್ಸಿನಲ್ಲಿ ನಾವು ಪಯಣಿಸುತ್ತಿದ್ದಾಗ ಒಬ್ಬಳ ಸ್ಥಿತಿಯು ಆತಂಕ ಉಂಟುಮಾಡಿತು. ಅವಳು ಉಪಯೋಗಿಸುತ್ತಿದ್ದ ಉಸಿರಾಡುವ ಯಂತ್ರವು ಸರಿಯಾಗಿ ಕೆಲಸಮಾಡದೆ ಅವಳಿಗೆ ಉಸಿರಾಡುವುದು ತೊಂದರೆಯಾಯಿತು. ಅವರು ಆ ಸಂಧಿಗ್ಧ ಪರಿಸ್ಥಿತಿಯನ್ನು ಎದುರಿಸಿದ ರೀತಿ ನನಗೆ ಬಹಳ ಹಿಡಿಸಿತು. ಬಸ್ಸಿನ ಡ್ರೈವರ್ ಹೋಟೆಲಿಗೆ ಫೋನ್ ಮಾಡಿ ಅವಳಿಗೆ ಒಂದು ರೂಮನ್ನೂ ಮತ್ತು ಸಹಾಯಕ್ಕೆ ಒಬ್ಬ ಪ್ಯಾರಮೆಡಿಕ್ ಅನ್ನೂ ಏರ್ಪಾಡು ಮಾಡುವಂತೆ ಹೇಳಿದ. ನಾವು ಹೋಟೆಲ್ ತಲುಪುವಷ್ಟರಲ್ಲಿ ನಮ್ಮೊಡನೆ ಇದ್ದ ಒಬ್ಬಳು ಬ್ರಿಟಿಷ್ ಮಹಿಳೆ ಅವಳೊಡನೆ ಮಾತನಾಡುತ್ತಾ ಅವಳನ್ನು ಹುರಿದುಂಬಿಸುತ್ತಿದ್ದಳು. ಆ ಹೆಂಗಸಿಗೋ ಉಸಿರುಕಟ್ಟಿದಂತಾಗಿ, ನಮಗೆಲ್ಲಾ ಬಹಳ ಆತಂಕ ವಾಯಿತು. ನಾವು ಹೋಟೆಲ್ ಸೇರುವಷ್ಟರಲ್ಲಿ ಎಲ್ಲವೂ ಸಿದ್ಧವಾಗಿದ್ದು, ಅವಳಿಗೆ ಬೇಕಾದ ಔಷಧಿ ಉಪಚಾರವು ದೊರೆಯಿತು. ಅವರು ಈ ಪರಿಸ್ಥಿತಿಯನ್ನು ಎದುರಿಸಿದ್ದು ನನಗೆ ಒಂದು ಒಳ್ಳೆಯ ಪಾಠವಾಯಿತು.

ನಾವು ಹೋಟೆಲಿನ front desk ಗೆ ಹೋದಾಗ, ಅವರು ನನಗೆ ಮತ್ತು ಶೋಭಾಗೆ ಬೇರೆ ಹೋಟೆಲಿನಲ್ಲಿ room book ಮಾಡಿದ್ದಾರೆ ಎಂದು ತಿಳಿಯಿತು. ಅವರ ಲಿಸ್ಟಿನಲ್ಲಿ ನಮ್ಮ ಹೆಸರುಗಳೇ ಇರಲಿಲ್ಲ. ನಾನು ನಮ್ಮ invitation ನಲ್ಲಿ ಅವರ ಹೋಟೆಲಿನ ಹೆಸರಿರುವುದನ್ನು ತೋರಿಸಿದೆ. ನನಗೆ, ಅಷ್ಟು ದೂರದ ಪ್ರಯಾಣದ ನಂತರ ಮತ್ತೆ ಬೇರೊಂದು ಹೋಟೆಲಿಗೆ ಹೋಗುವುದು ಬೇಕಾಗಿರಲಿಲ್ಲ. ಆದರೆ ಅವರು ನಮಗೆ ಅಲ್ಲಿ

ಜಾಗ ಕೊಡಲು ಸಿದ್ಧವಿರಲಿಲ್ಲ. ನಾನು ಆ ಹೆಂಗಸಿಗೆ ಅವಳು ರೂಮು ಕೊಡದಿದ್ದರೆ ಅಲ್ಲಿಯೇ ಲಾಬಿಯಲ್ಲಿ ಮಲಗುವುದಾಗಿ ಹೇಳಿದೆ. ಆದರೆ ಅದು ಅಮೇರಿಕಾ. ನಾವು ಅರ್ಧ ಘಂಟೆ ಕಾಯುತ್ತಾ ಕುಳಿತೆವು. ಆಗ ನನಗೆ ಹೊಳೆಯಿತು, ನನ್ನ ಸ್ನೇಹಿತೆ, ಕೆನಡಾದ ಫ್ರಾನ್ಸೀನ್ ಕೂಡ ಈ ಸಮಾವೇಶಕ್ಕೆ ಬಂದಿರುತ್ತಾಳೆ ಎಂಬುದು. ನಾನು ಅವಳ ಎಲ್ಲಿದ್ದಾಳೆ ಎಂಬುದನ್ನು ತಿಳಿಸಹೇಳಿದೆ. ಫ್ರಾನ್ಸೀನ್ ಕೂಡಲೆ ಈ ಸಮಸ್ಯೆಗೆ ಸಮಾಧಾನ ಹೇಳಿದಳು. ಅವಳು ಮತ್ತು ಅವಳ ತಾಯಿ ಒಂದು ರೂಮಿನಲ್ಲಿದ್ದರು. ಆ ರೂಮಿನಲ್ಲಿ ಎರಡು ದೊಡ್ಡ ಮಂಚಗಳಿದ್ದರಿಂದ ಅವಳು ನಮ್ಮನ್ನು ಅವಳ ರೂಮಿನಲ್ಲಿ ಬಂದು ಇರಹೇಳಿದಳು.

ನಾವು ನಾಲ್ಕೂ ಜನ ಆರೂಮಿನಲ್ಲಿ ಎರಡು ದಿನ ಇದ್ದೆವು. ಆ ಮಂಚದ ಮೇಲೇರುವುದು, ಇಳಿಯುವುದೂ ಒಂದು ದೊಡ್ಡ ಪ್ರಯಾಸ. ವಿಕಲಾಂಗರಿಗೆ ಸಹಾಯ ಮಾಡಲು ಜನರಿಗೆ ತಾವು ಏನಾದರೂ ಮಾಡಬೇಕು ಎಂಬ ಅನಿಸಿಕೆಯೇ ಮುಖ್ಯ. ಅನೇಕರಿಗೆ ತಾವು ಎಲ್ಲಿ ನೋವುಂಟು ಮಾಡುತ್ತೇವೋ ಎಂಬ ಭಯ ಬೇರೆ. ನಾನು ಹೇಗೋ ಸಂಭಾಳಿಸಿದೆ. ಆ ಹಾಸಿಗೆಯ ಮೇಲೆ ಹೊದೆಸಿದ ಬಟ್ಟೆಯು ಜಾರುವಂತದ್ದು. ನಾನು ಎಲ್ಲಿ ಜಾರಿ ಬಿದ್ದುಬಿಡುವೆನೋ ಎಂದು ನನ್ನ ಗೆಳತಿಗೆ ಭಯ. ಜಾರದಂತೆ ಕೈಯನ್ನು ಒದ್ದೆ ಮಾಡಿಕೊಂಡು ನನಗೆ ಸಹಾಯ ಮಾಡುತ್ತಿದ್ದರು. ಎಲ್ಲಾ ಸಮಸ್ಯೆಗೂ ಸರಿಯಾದ ಪರಿಹಾರವನ್ನು ನಾವು ಕಂಡುಕೊಳ್ಳಬಹುದು.

ಸಮಾವೇಶವು ಚೆನ್ನಾಗಿತ್ತು. ಭಾಷಣಕಾರರು ಹೇಳಿದನ್ನು ಭಾಷಾಂತರಿಗಳು ಚಿನ್ಹೆಗಳ ಮೂಲಕ ಸದಸ್ಯರಿಗೆ ತೋರಿಸಿದರು. ಅಲ್ಲದೆ ಸ್ಪಾನಿಶ್ ಮತ್ತು ಫ್ರೆಂಚ್ ಭಾಷೆಗಳಿಗೆ ತರ್ಜುಮೆ ಮಾಡಿದರು. ಮಾಧ್ಯಮದ ಪ್ರತಿನಿಧಿಗಳು ಸಮಾವೇಶದಲ್ಲೇ ವಿಕಲಾಂಗತೆಯ ಬಗ್ಗೆ ಸೂಕ್ತ ಮಾಹಿತಿಯನ್ನು ಪಡೆಯುವಂತೆ ಏರ್ಪಾಡು ಮಾಡಿದ್ದರು. ಎಲ್ಲಾ ತಯಾರಿಯೂ ಬಹಳ ವಿಜ್ರಂಭಣೆಯಿಂದ ಮಾಡಲ್ಪಟ್ಟಿದ್ದವು. ಅಮೇರಿಕದಿಂದ ಬಂದಿದ್ದ ವಿಕಲಾಂಗ ಹೆಂಗಸರು ಸುಸಂಘಟಿತರು ಮತ್ತು ತಮ್ಮ ಬೇಕು ಬೇಡಗಳ ಬಗ್ಗೆ ಏಕ ಮತ ಉಳ್ಳವರಾಗಿದ್ದರು. ಅಲ್ಲಿನ ವಿದ್ಯಾ ಇಲಾಖೆಯು ಅವರಿಗೆ ಇತರ ವಿಕಲಾಂಗರೊಡನೆ ಅಂತರ್ಜಾಲದಲ್ಲಿ ಸಂಪರ್ಕವನ್ನು ಬೆಳೆಸಲು ಪ್ರೋತ್ಸಾಹ ನೀಡಿದ್ದರು. ಆದ್ದರಿಂದ ಇದು ಅವರ ಸಂಯುಕ್ತ ಪ್ರಯತ್ನ ವಾಗಿತ್ತು. ಅವರಲ್ಲಿ ಕೆಲವರು ಅನೇಕ ವರ್ಷಗಳಿಂದ ವಿಕಲಾಂಗರಾಗಿದ್ದು, ಉಸಿರಾಡುವ ಯಂತ್ರದ ನೆರವನ್ನು ಕೋರುತ್ತಿದ್ದವರು ಇದ್ದರು. ಆದರೆ, ಸಂವಾದಗಳಲ್ಲಿ ಅವರು ಮುಂಚೂಣಿಯಲ್ಲಿ ಇದ್ದರು. ಸಮಾವೇಶದಲ್ಲಿ ಅನೇಕ ಕುತೂಹಲಮಯವಾದ ಸಂವಾದಗಳು, ನಾಟಕಗಳು ಮತ್ತು ಉಪನ್ಯಾಸಗಳು ಇದ್ದವು. ಆಫ್ರಿಕಾ ದೇಶದ ತಂಡವು,

ಅವರ ವರ್ಣರಂಜಿತ ಉಡುಪುಗಳು ಮತ್ತು ರುಮಾಲುಗಳಿಂದ ಎಲ್ಲರ ಮನಸ್ಸನ್ನು ಸೂರೆಗೊಂಡವು. ಅವರು ಹೇಳಿದ ಕೆಲವು ಕಥೆಗಳು ಕೇಳುಗರ ಮನಸ್ಸನ್ನು ಕಲಕಿತು. ಅಷ್ಟು ಕಷ್ಟಪಟ್ಟಿದ್ದರೂ ಅವರು ಆ ಕಥೆಯನ್ನು ನಗುನಗುತ್ತಾ ಹೇಳಿದರು ಮತ್ತು ಎಲ್ಲರೊಡನೆ ಉತ್ಸಾಹದಿಂದ ಕಲೆತರು.

ನನ್ನ ಮನಸ್ಸನ್ನು ಬಹಳ ಮುಟ್ಟಿದ್ದು ಓರ್ವ ಯುವತಿಯ ಭಾಷಣ. ಅವಳ ಕಿರಿದಾದ ಕೂದಲು ಮತ್ತು ಉದ್ದದ ನಿಲುವಂಗಿಯೊಡನೆ ಅವಳು ನನಗೆ ಬೌದ್ಧ ಸನ್ಯಾಸಿನಿಯಂತೆ ಕಂಡಳು. ಆದರೆ ಅವಳು ಸನ್ಯಾಸಿನಿಯಾಗಿರಲಿಲ್ಲ, ಅವಳು ಓರ್ವ ಕಲಾವಿದೆ. ಅವಳು ಹುಟ್ಟಿದಾಗಲೇ ಅವಳಿಗೆ ಎರಡೂ ತೋಳುಗಳಿರಲಿಲ್ಲ. ಅವಳು ತನ್ನ ಕಾಲಿನಿಂದ ಚಿತ್ರವನ್ನು ಬಿಡಿಸುತ್ತಿದ್ದಳು. ಅವಳು ಬಹಳ ಸಶಕ್ತ ಮಹಿಳೆ. ಸಮಾವೇಶದುದ್ದಕ್ಕೂ ಸಕ್ರಿಯವಾಗಿ ಭಾಗವಹಿಸುತ್ತಿದ್ದಳು. ಅಂದು ರಾತ್ರಿ, ಅವಳ ಭಾಷಣವನ್ನು ಕೇಳಿದ ಬಳಿಕ ನಾನು ರಾತ್ರಿಯೆಲ್ಲಾ ಅಳುತ್ತಾ ಕೂತಿದ್ದೆ. ಶೋಭಾ ಯಾಕೆ ಅವಳ ಭಾಷಣವು ನನ್ನನ್ನು ಇಷ್ಟು ಕೆದಕಿತು ಎಂದು ಯೋಚಿಸುತ್ತಿದ್ದಳು. ಅವಳು ನನ್ನಷ್ಟು ಭಾವುಕಳಲ್ಲ. ಆದರೆ ಆ ಹೆಂಗಸು ತನ್ನ ಚಹದ ಕಪ್ಪನ್ನು ಕಾಲಿನಿಂದ ಹಿಡಿದುಕೊಂಡು ಕುಡಿಯುವುದು, ಅವಳ ಸುಂದರ ಕವನಗಳು ಮತ್ತು ಅವಳು ಬಿಡಿಸಿರುವ ಸುಂದರ ಚಿತ್ರಗಳು ಎಲ್ಲರ ಮನಸ್ಸನ್ನು ಕಲಕಿತು ಮತ್ತು ಮನುಷ್ಯನ ಸಾಮರ್ಥ್ಯದ ಬಗ್ಗೆ ಅಭಿಮಾನವನ್ನೂ ಮೂಡಿಸಿತು.

ಅವಳು ಒಂದು ಚಿಕ್ಕ ಹಳ್ಳಿಯಿಂದ ಬಂದವಳು. ಅಲ್ಲಿಯ ಜನಕ್ಕೆ ವಿಕಲಾಂಗತೆಗೆ ನೀಡಬೇಕಾದ ಸೇವೆ ಮತ್ತು ಸೌಲಭ್ಯಗಳ ಬಗ್ಗೆ ಹೆಚ್ಚಿನ ತಿಳುವಳಿಕೆ ಇರಲಿಲ್ಲ. ಅವಳ ತಂದೆ ತಾಯಿಯರಿಗೆ ವಿಕಲಾಂಗ ಮಗುವನ್ನು ನೋಡಿ ದೊಡ್ಡ ಆಘಾತ ಮತ್ತು ಅಸಹಾಯಕತೆ. ಅವಳು ಚಿಕ್ಕವಳಾಗಿದ್ದಾಗ ಅವಳ ಅಜ್ಜಿಯು ಸುಂದರ ಫ್ರಾಕ್ ಹಾಕಿ ಸಿಂಗರಿಸುತ್ತಿದ್ದರು. ಅವಳು ದೊಡ್ಡವಳಾದಂತೆ ಅಜ್ಜಿಯು ಕ್ರಮೇಣ ನಿನ್ನ ಕೈ ಸರಿಹೊಗುತ್ತದೆ ಎಂದು ಹೇಳುತ್ತಿದ್ದರು. ಶಾಲೆಯಲ್ಲಿ ಇತರ ಮಕ್ಕಳು ಅವಳಿಗೆ ಪಾಠವನ್ನು ಬರೆದುಕೊಡುತ್ತಿದ್ದರು. ಮನೆಯಲ್ಲಿ ಇತರರು ಮಿಕ್ಕವರು ಅವಳ ಊಟ, ಬಟ್ಟೆ, ಸ್ನಾನ ಇತ್ಯಾದಿ ಎಲ್ಲಾ ಕೆಲಸಗಳನ್ನು ಮಾಡುತ್ತಿದ್ದರು.

ಅವಳು ತನ್ನ ಹೆಚ್ಚು ಸಮಯವನ್ನು ತನ್ನ ಸ್ನೇಹಿತೆಯೊಡನೆ ಕಳೆಯುತ್ತಿದ್ದಳು. ಇಬ್ಬರೂ ತಮ್ಮ ತಮ್ಮ ರಹಸ್ಯಗಳನ್ನು ಹಂಚಿಕೊಳ್ಳುತ್ತಿದ್ದರು. ಅವಳಿಗೆ ಈ ಗೆಳೆತಿಯಿಂದ ಅತ್ಯುತ್ತಮ ಸಲಹೆ ದೊರಕಿತು. ಅವಳು ಇವಳಿಗೆ ಕಾಲಿಗೆ ಜೋಡನ್ನು ಹಾಕುವದನ್ನು ಬಿಟ್ಟು ಬರೀ ಕಾಲನ್ನು ಉಪಯೋಗಿಸಲು ಹೇಳಿದಳು. ಅವಳ ಮನೆಯವರು ಕಲಿಸಿರುವ ಅಭ್ಯಾಸಗಳನ್ನು ಬಿಟ್ಟು, ತನ್ನ ಕಾಲುಗಳನ್ನು ಉಪಯೋಗಿಸಲು ಹೇಳಿದಳು. ಮೊದಲಿಗೆ ಮನೆಯವರಿಗೆಲ್ಲಾ

ಇದರಿಂದ ಅಸಾಮಾಧಾನವಾಯಿತು. ಅವರಿಗೆ ಅವಳು ಬರಿಗಾಲಿನಲ್ಲಿ ನಡೆಯುವುದು ಇಷ್ಟವಿರಲಿಲ್ಲ. ಆದರೆ ಅವಳು ಅದನ್ನೆಲ್ಲಾ ಲೆಕ್ಕಿಸದೆ ತನ್ನ ಜೀವನವನ್ನು ತಾನೇ ಸಂಭಾಳಿಸಲು ಪ್ರಾರಂಭಿಸಿದಳು.

ಅವಳು ಆಗ ತನ್ನ ದೇಶದಲ್ಲಿದ್ದ ಉದ್ವಿಗ್ನ ಸ್ಥಿತಿಗತಿಯನ್ನು ಬಣ್ಣಿಸಿದಳು. ಅವಳ ಹಳ್ಳಿಯಲ್ಲಿ ತೊಂದರೆ ಶುರುವಾದಾಗ ಎಲ್ಲರೂ ತಮ್ಮ ತಮ್ಮ ಜೀವವನ್ನು ಕಾಪಾಡಿಕೊಳ್ಳಲು ಓಡಿ ಹೋದರು. ಈ ರೀತಿಯ ಒಂದು ಸಂದರ್ಭದಲ್ಲಿ ಇವಳು ಸಿಕ್ಕಿಬಿದ್ದು ಒರ್ವ ಸೈನಿಕನಿಂದ ದುರುಪಯೋಗಕ್ಕೆ ಗುರಿಯಾದಳು. ಅವಳಿಗೆ ಎರಡೂ ಕೈಗಳಿಲ್ಲವೆಂದು ತಿಳಿದಾಗ ಅವನು ತೋರಿದ ಅನಾದರ ಮತ್ತು ಜಿಗುಪ್ಸೆಯನ್ನು ಅವಳು ಹೇಳಿಕೊಂಡಾಗ ನನಗೆ ಬಹಳ ನೋವಾಯಿತು. ನಾನು ಒಬ್ಬಳೇ ಒಂದು ಮೂಲೆಯಲ್ಲಿ ಕುಳಿತು ಪುನಃ ಪುನಃ ಅದರ ಬಗ್ಗೆಯೇ ಯೋಚಿಸುತ್ತಿದ್ದೆ. ಅವಳು ಬೆಳೆದು ದೊಡ್ಡವಳಾದಹಾಗೆ ಅವಳಿಗೆ ಪ್ರೇಮ ಮತ್ತು ಬಾಳ ಸಂಗಾತಿಯ ಅವಶ್ಯಕತೆಯು ತೋರಿತು. ಆದರೆ, ಕೈಗಳೇ ಇಲ್ಲದ ಅವಳಿಗೆ ಇದು ಒಂದು ಮರೀಚಿಕೆಯಂತಾಗಿತ್ತು. ಅವಳ ಮಾತಿನಲ್ಲೇ ಹೇಳುವುದಾದರೆ 'ನನಗೆ ನಾನು ದೀಪದ ಕಂಬದಂತೆ ಅನಿಸುತ್ತದೆ. ಕೈಗಳಿಲ್ಲದೆ, ಪ್ರೀತಿಸಿದವನನ್ನು ಮುಟ್ಟಿ ಹಿಡಿದುಕೊಳ್ಳಲಾಗದೆ ಎಂತಹ ಪ್ರೀತಿ ಸಾಧ್ಯ?' ಅವಳ ಮನಸ್ಸಿನಾಳದಲ್ಲಿ ಆಗಿರುವ ನೋವು ಮತ್ತು ಭಾವನೆಗಳನ್ನು ನಮಗೆ ಊಗಿಸಲೂ ಸಾಧ್ಯವಿಲ್ಲ. ನಾನು ಅವಳಿಗೆ ಅವಳ ಮಾತುಗಳು ನನ್ನ ಮನಸ್ಸಿನಮೇಲೆ ಬೀರಿದ ಪಾರಿಣಾಮವನ್ನು ಹೇಳಿದೆ ಮತ್ತು ಅವಳನ್ನು ಭಾರತಕ್ಕೆ ಬರುವಂತೆ ಆಮಂತ್ರಿಸಿದೆ.

ಮತ್ತೊಬ್ಬ ಆಕರ್ಷಕ ಮಹಿಳೆ ನನಗೆ ಬೆಟ್ಟಿಯಾದದ್ದು, ಫ್ಲಾರೆಂಸ್‌ವೀನರ್ ಅಥವಾ ಚಿಕ್ ವೀನರ್. ಇವಳು ತನ್ನ ವ್ಹೀಲ್ ಚೇರ್ ಉಪಯೋಗಿಸುವ ಸಹೋದರಿಯ ಜೊತೆಯಲ್ಲಿ ಬಂದಿದ್ದಳು. ಇವಳು ತಾನು ಬರೆದಿದ್ದ 'ನೋ ಅಪೊಲೊಜೀಸ್' ಎಂಬ ಪುಸ್ತಕವನ್ನು ನನಗೆ ಕೊಟ್ಟಳು. ಅದರಲ್ಲಿ "ನನ್ನ ಹೊಸ ಸಹೋದರಿ ಹೇಮನಿಗೆ, ನಾನು ನನ್ನ ದೇಹವನ್ನು ಕಾಪಾಡಿಕೊಳ್ಳದಿದ್ದರೆ – ನಾನು ಎಲ್ಲಿ ಜೀವಿಸಲು ಸಾಧ್ಯ" ಎಂದು ಬರೆದಿದ್ದಳು. ನಾವು ದೀರ್ಘವಾಗಿ ಮದುವೆ, ಸಂಬಂಧಗಳು ಇತ್ಯಾದಿ ಬಹಳಷ್ಟು ಮಾತನಾಡಿದೆವು. ನಾನು ಅವಳಿಗೆ ವಿಕಲಾಂಗ ವ್ಯಕ್ತಿಯೂ ಮೊದಲಿಗೆ ಮನುಜ, ನಂತರ ವಿಕಲಾಂಗ. ಆದ್ದರಿಂದ ಯಾವ ವ್ಯತ್ಯಾಸವೂ ಇಲ್ಲ. ಸಂಬಂಧಗಳು ಸರಿಹೊಂದಿ ಬೆಳೆಯುತ್ತವೆ ಇಲ್ಲಾ ಬೆಳೆಯುವುದಿಲ್ಲ. ಚಿಕ್ ರೂಸ್ವೆಲ್ಟ್ ಫೌಂಡೇಷನ್ನಿನಲ್ಲಿ ಕೆಲಸಮಾಡುತ್ತಿದ್ದಳು ಆದ್ದರಿಂದ ನನಗೆ post polio syndrome ಬಗ್ಗೆ ಬಹಳ ಮಾಹಿತಿಯನ್ನು ನೀಡಿದಳು.

ಚಿಕ್ಕವಯಸ್ಸಿನಿಂದಲೇ ಪೋಲಿಯೋ ಪೀಡಿತರು ದೊಡ್ಡವರಾದಾಗ, ಅವರ ದೇಹವು ಶಕ್ತಿಗುಂದಿ ಅವರಿಗೆ ಅನೇಕ ತೊಂದರೆಗಳು ಉಂಟಾಗುತ್ತವೆ. ಅವಳು ನನ್ನನ್ನು, ಈ ವಿಷಯದಲ್ಲಿ ತಜ್ಞರಾದ ಒಬ್ಬ ವೈದ್ಯರನ್ನು ಕಾಣಲು ಹೇಳಿದಳು. ಈ ರೀತಿಯ ತೊಂದರೆ ಇರುವವರಿಗೆ ಸಹಾಯ ಮಾಡಲು ಸುಸಜ್ಜಿತ ಆಂಬ್ಯುಲೆನ್ಸ್‌ಗಳಿವೆ. ಅವು ಕರೆದ ಐದು ನಿಮಿಷಗಳಲ್ಲಿ ಮನೆಯಮುಂದೆ ಹಾಜರಾಗುತ್ತವೆ ಎಂದೂ ತಿಳಿಸಿದಳು. ಇದನ್ನು ಕೇಳಿ ಬಹಳ ಸಂತೋಷವಾಯಿತು, ಆದರೆ, ನಮ್ಮ ಊರಿನಲ್ಲಿ ಈ ರೀತಿಯ ಸೌಲಭ್ಯವೆಲ್ಲಿ? ನಮ್ಮ ನಾಡಿನಲ್ಲಿರುವ ಸ್ಥಿತಿಗತಿಗಳಿಗೆ ಒಗ್ಗಿಕೊಂಡು ನಾವಿರಬೇಕೆಂದು ನಾನು ಸುಮ್ಮನಾದೆ.

ಆ ಪ್ರಯಾಣ ಪೂರ್ತಿ ನನಗೆ ಮತ್ತು ಶೋಭಳಿಗೆ ಒಂದು ಪಾಠವಾಗಿತ್ತು. ಅಲ್ಲಿನ ಸೌಲಭ್ಯಗಳು ಮತ್ತು ಮಾಧ್ಯಮದ ಗಮನ ನಮಗೆ ಆಶ್ಚರ್ಯವನ್ನು ಉಂಟು ಮಾಡಿತು. ಅಲ್ಲಿನ organizers ಎಲ್ಲವನ್ನೂ ವ್ಯವಸ್ಥಿತವಾಗಿ ಏರ್ಪಡಿಸಿದ್ದರು. ನನಗೆ ಕೈಯ್ಯಿಂದ ತಳ್ಳುವ ವ್ಹೀಲ್ ಚೇರ್ನಿಂದ ಬಹಳ ಸುಸ್ತಾಗಿ, ನಾನು ವಿದ್ಯುತ್ ಚಾಲಿತ ವ್ಹೀಲ್ ಚೇರ್‌ಬೇಕೆಂದು ಕೇಳಿದಾಗ, ಅವರು ಕೂಡಲೇ ಅದನ್ನು ನನಗೆ ಒದಗಿಸಿದರು. ಆ ರೀತಿಯ ಬೃಹತ್ ಸಮಾವೇಶಗಳನ್ನು ಏರ್ಪಡಿಸಿದಾಗ, ಈ ರೀತಿಯ ಮುಂದಾಲೋಚನೆಯು ಬೇಕಾಗುತ್ತದೆ.

ಕೆಲವು ತಿಂಗಳುಗಳ ನಂತರ ಮತ್ತೊಂದು ಸಮಾವೇಶವಿತ್ತು. ಅದು ಸ್ವೀಡನ್ ನಲ್ಲಿ. ಮತ್ತೆ ನನಗೆ ಏಷಿಯನ್ ಸಮಾವೇಶದ ನನ್ನ ಮಿತ್ರರನ್ನು ಸಂಧಿಸುವ ಅವಕಾಶ ದೊರೆಯಿತು. ಇದೊಂದು ದೊಡ್ಡ ಕುಟುಂಬದ ಪುನರ್ಮಿಲನದಂತಿತ್ತು. ನಾವು ನಮ್ಮ ನಮ್ಮ ಅನುಭವಗಳನ್ನು ಹಂಚಿಕೊಂಡೆವು ಮತ್ತು ಅರ್ಥಪೂರ್ಣ ಚರ್ಚೆಗಳಾದವು. ಸ್ವೀಡನ್ ಬಹಳ ಸುಂದರ ದೇಶ. ಅಂದವಾದ ರಸ್ತೆಗಳು ಮತ್ತು ಸ್ವಚ್ಛವಾದ ಕಟ್ಟಡಗಳು ನನಗೆ ಬಹಳ ಹಿಡಿಸಿದವು. ಅಲ್ಲಿನ ಬಾಗಿಲುಗಳು ನನಗೆ automatic doors ಎಷ್ಟು ಅಭ್ಯಾಸವಾಗಿ ಬಿಟ್ಟವೆಂದರೆ, ಹಿಂದಿರುಗಿ ಬರುವಾಗ ಭಾರತದ ಏರ್ ಪೋರ್ಟ್‌ನಲ್ಲಿ ನಾನು ಬಾಗಿಲ ಮುಂದೆ ಅದು ತೆರೆದುಕೊಳ್ಳಲೆಂದು ಕಾಯುತ್ತಿದ್ದೆ. ಅವು ತೆಗೆದುಕೊಳ್ಳಲಿಲ್ಲ. ಹತ್ತು ದಿನಗಳಲ್ಲಿ ಒಬ್ಬರ ಮನೋಸ್ಥಿತಿಯಲ್ಲಿ ಎಷ್ಟು ವ್ಯತ್ಯಾಸ?

ಸ್ಟಾಕ್ ಹೋಮ್ ಒಂದು ವಿಕಲಾಂಗರ ಹಿತೈಷಿಯಾದ ನಗರ. ಅಲ್ಲಿನ ಟಾಕ್ಸಿಗಳಲ್ಲಿ ವಿಕಲಾಂಗರಿಗೆ ನೆರವಾಗುವಂತಹ rampಗಳಿವೆ. ಅಲ್ಲಿನ bath tub ಕೂಡ ವಿಕಲಾಂಗ ಸ್ನೇಹಿಯಾಗಿದ್ದು ನಾನೇ ಯಾರ ನೆರವೂ ಇಲ್ಲದೆ ಉಪಯೋಗಿಸಬಹುದಾಗಿತ್ತು. ನಾವು ಅಲ್ಲಿನ ಒಂದು ಪಬ್ ಗೆ ಹೋದೆವು. ಅದೊಂದು ಹಳೆಯ ಬಂಗಲೆ. ಹೊರಾಂಗಣದಲ್ಲಿ

ಒಂದು ಬಾರ್ ಮತ್ತು ಡಾನ್ಸ್‌ಗೆ ಜಾಗ ಮಾಡಿದ್ದರು. ಅಲ್ಲಿನ ಅಡುಗೆಯ ಮನೆ ಮತ್ತು ಎಲ್ಲವನ್ನೂ ಅಂಧರೇ ನೋಡಿಕೊಳ್ಳುತ್ತಿದ್ದರು. ನಮಗೆ ಬಹಳ ಆಶ್ಚರ್ಯವಾಯಿತು. ನಮ್ಮನು ಇನ್ನೂ ಅನೇಕ ಸ್ಥಳಗಳಿಗೆ ಕರೆದುಕೊಂಡು ಹೋದರು.ಈ ಎಲ್ಲಾ ಸ್ಥಳಗಳಲ್ಲೂ ವಿಕಲಾಂಗರೇ ಕೆಲಸಮಾಡುತಿದ್ದರು. ಇವರ ಪ್ರಗತಿಯನ್ನು ನೋಡಿ ನಮಗೆ ಆಶ್ಚರ್ಯವಾಯಿತು.

ಅಲ್ಲಿಯ ಹೋಟೆಲುಗಳಲ್ಲಿ ಅನೇಕ ರೂಮುಗಳು ಒಂದು ದೊಡ್ಡ ವೈದ್ಯಕೀಯ ಸಮಾವೇಶಕ್ಕಾಗಿ ಕಾದಿರಿಸಲಾಗಿದ್ದರಿಂದ ನಮ್ಮನ್ನು ಬೇರೆ ಬೇರೆ ಹೋಟಲುಗಳಿಗೆ ಕಳುಹಿಸಿದರು. ಒಂದು ಹೋಟಲಂತೂ ಸ್ಟಾಕ್‌ಹೋಮಿಗೆ ೪೦ ಮೈಲಿ ದೂರದಲ್ಲಿದ್ದಿತು. ಅಲ್ಲಿನ ರೈಲು ಗಾಡಿಗಳು ಬಹಳ ವಿಕಲಾಂಗರ ಸ್ನೇಹಿಯಾಗಿದ್ದವು. ಅವುಗಳಲ್ಲಿ ಅಗಲವಾದ ವ್ಹೀಲ್‌ಚೇರ್‌ಗಳು ಹೋಗಲು ಅನುಕೂಲವಾದ ಜಾರುಬಂಡೆಗಳಿರುವ ದಾರಿಗಳಿದ್ದವು. ಮತ್ತು ಟಾಯ್ಲೆಟ್ಟುಗಳಿಗೆ ವ್ಹೀಲ್ಚೇರಿನೊಡನೆ ಹೋಗುವಂತಿತ್ತು. ನಾವು ಒಂದು ರಾತ್ರಿ ನಮ್ಮ ಸ್ನೇಹಿತೆ ನಿರ್ಮಲ ಬ್ಲೂಮ್ ಅಡಪ ಅವರ ಮನೆಯಲ್ಲಿ ಕಳೆದೆವು. ನಾವು ಅವರ ಮನೆಯನ್ನು ತಲಪಿದಾಗ ಅಲ್ಲಿ ಒಳಗೆ ಹೋಗಲು ದೊಡ್ಡ ಮೆಟ್ಟಲುಗಳ ಸಾಲು ಇದ್ದಿತು. ಅವರು ಅದನ್ನು ಏರಲು ಒಂದು ಇಳಿಜಾರನ್ನು ಏರ್ಪಡಿಸಿದ್ದರು.ಆದರೆ ಅದರಮೇಲೆ ನನ ವ್ಹೀಲ್ ಚೇರನ್ನು ಕೊಂಡೊಯ್ಯುವುದು ಕಷ್ಟವಾದ್ದರಿಂದ ಕೆಲವರು ನನ್ನನ್ನು ನನ್ನ ವ್ಹೀಲ್ಚೇರಿನೊಡನೆ ಎತ್ತಿಕೊಂಡು ಒಳಗೆ ಕೊಂಡುಹೋದರು.ಅವಳ ಮನೆಯಲ್ಲಿ ನಮಗೆ ಭಾರತೀಯ ಊಟವು ದೊರೆಯಿತು ಮತ್ತು ಅವಳು ನಮ್ಮನ್ನು ಗೊತೆನ್ಬರ್ಗ್ ಊರು ತೋರಿಸಿದಳು. ನಾವು ಸ್ಟಾಕ್‌ಹೋಮಿಗೆ ಸೇರಿದಮೇಲೆ ಮತ್ತೊಮ್ಮೆ ನಮ್ಮನ್ನು ಬೇರೊಂದು ಹೋಟಲಿಗೆ ಹೋಗ ಹೇಳಿದರು. ಇದುಒಂದು ದೂರದ ಊರಿನಲ್ಲಿತ್ತು ಮತ್ತು ಸುತ್ತಲೂ ಕತ್ತಲು ಮತ್ತು ಚಳಿ ಆವರಿಸಿತ್ತು. ರಾತ್ರಿ ಹೊತ್ತಾದ್ದರಿಂದ ಎಲ್ಲವೂ ಮುಚ್ಚಿತ್ತು. ಕೌಂಟರಿನಲ್ಲಿದ್ದ ಮನುಷ್ಯನೂ ಕಾಣೆಯಾದ. ನಮ್ಮ ಜೊತೆಯಲ್ಲಿ ಬಂದಿದ್ದ ಬಸವರಾಜುವಿಗೂ ಇದೇ ಸಮಯದಲ್ಲಿ ಮೈ ಸರಿಯಿರಲಿಲ್ಲ. ಬಹುಶಃ ಅಷ್ಟು ದೂರ ಪ್ರಯಾಣ ಮಾಡಿದ್ದರಿಂದಲೋ ಏನೋ. ನನಗೆ ಬಹಳ ಗಾಬರಿಯಾಯಿತು. ನಾನು ಒಬ್ಬಳೇ. ಯಾರ ಸಹಾಯವೂ ಇಲ್ಲದೆ ಏನು ಮಾಡುವುದು ಎಂದು ಯೋಚಿಸುತ್ತಿದ್ದೆ ಅಷ್ಟರಲ್ಲಿ ಅವನು ಸ್ವಲ್ಪ ಸುಧಾರಿಸಿಕೊಂಡ. ದೇವರ ದಯದಿಂದ, ಮಾರನೆಯ ದಿನ ಬೆಳಗ್ಗಿನಹೊತ್ತಿಗೆ ಅವನು ಸರಿಯಾದ.

ನಾವು ಭಾರತಕ್ಕೆ ಹಿಂದಿರುಗುವ ಹೊತ್ತಿಗೆ ನಮಗೆ ಮತ್ತೊಂದು ಆಮಂತ್ರಣ ಬಂದಿತ್ತು, ನನು ಫ್ರಾಂಸಿನಿಂದ. ಆದರೆ ಅಷ್ಟು ಹೊತ್ತಿಗೆ ನನಗೆ ಈ ಸುತ್ತಾಟ ಸಾಕಾಗಿತ್ತು. ನನ್ನ

ಪ್ರಯಾಣಗಳೆಲ್ಲಾ ಬಹಳ ಕುತೂಹಲಕಾರಿಯಾಗಿದ್ದವು ಮತ್ತು ಅವುಗಳಿಂದ ನಾನು ಸಾಕಷ್ಟು ಕಲಿತಿದ್ದೆ. ಆದರೆ ಈಗ ನನಗೆ ಸ್ವಲ್ಪ ಬಿಡುವು ಮತ್ತುಶಾಂತಿ ಬೇಕಾಗಿತ್ತು. ಜೀವನದಲ್ಲಿ ಪ್ರತಿಯೊಂದಕ್ಕೂ ಒಂದು ಅಂತ್ಯವಿದೆ. ನಾನು ಏ.ಪಿ.ಡಿಯಲ್ಲಿ ಕೆಲಸಮಾಡಿದ್ದು ಬಹಳ ಸಂತೋಷದ ಅನುಭವ. ಆದರೆ ನಾನು ಅದರಲ್ಲೇ ಮುಳುಗಿ ಹೋಗಿದ್ದೆ, ಅದರಿಂದ ನಾನು ಹೊರ ಬರಬೇಕಿತ್ತು. ನನ್ನನ್ನು ಅಧ್ಯಕ್ಷೆಯಾಗಿ ನೇಮಿಸುವುದರ ಮುಂಚೆನಡೆದ ಕೆಲವು ಘಟನೆಗಳು ನನ್ನನ್ನು ಇನ್ನೂ ಕಾಡುತ್ತಿದ್ದವು. ನನ್ನನ್ನು ಏ.ಪಿ.ಡಿ ಯಿಂದ ಹೊರಗೆ ಹಾಕಿದ್ದರೆ ನಾನು ಬಹುಷಃ ಜೀವಂತವಾಗಿ ಉಳಿಯುತ್ತಿರಲಿಲ್ಲವೇನೊ. ನಾನು ಕಳೆದ ಆರು ವರ್ಷಗಳಲ್ಲಿ, ನನಗೆ ನಾನೇ ಒಪ್ಪಿಸಿಕೊಂಡಿದ್ದ ಕೆಲಸವನ್ನು ಮಾಡಿ ಮುಗಿಸಿದ್ದೆ. ಅಲ್ಲಿನ ಹಣಕಾಸಿನ ವ್ಯವಸ್ಥೆಯನ್ನು ಸ್ವಚ್ಚಗೊಳಿಸಿದ್ದೆ, ಮತ್ತು ಅದಕ್ಕೆ ಬೇಕಾದ ಆಡಳಿತ ಕ್ರಮಗಳನ್ನು ಚಾಲನೆಗೆ ತಂದಿದ್ದೆ. ನಾನು ಮಾಡಿದ್ದೆಲ್ಲಾ ದೂರದೃಷ್ಟಿಯಿಂದ ಬೇಕಾದ ಬದಲಾವಣೆಗಳು. ಈಗ ನಾನು ಈ ಸಂಸ್ಥೆಯಿಂದ ದೂರವಾಗಲು ತಯಾರಾಗಿದ್ದೆ.

ನಾನು ಎಲ್ಲರಿಗೂ ಆಗಾಗ ಹೇಳುತಿದ್ದೆ "ನಾನು ಏ.ಪಿ.ಡಿಯ ಸ್ಥಿರ ಆಸ್ತಿಯಲ್ಲ' ಎಂದು. ನನಗೆ ನನ್ನ ಇಷ್ಟದಂತೆ ಆಯ್ಕೆಗಳನ್ನು ಮಾಡಬೇಕಾಗಿತ್ತು. ನಾಮು ನಮ್ಮ ಟ್ರಸ್ಟೀ ಮಹೇಂದ್ರ ಅವರನ್ನು ನಮ್ಮ ಸಾರ್ವಜನಿಕ ಸಭೆಯ ಸಮಯದಲ್ಲಿ ಸಂಧಿಸಿ ನಾನು ನನ್ನ ಅಧ್ಯಕ್ಷ ಸ್ಥಾನದಿಂದ ನಿವೃತ್ತಿಹೊಂದಬೇಕೆಂದು ಇರುವೆ ಎಂದು ತಿಳಿಸಿದೆ.ಅವರು ನನ್ನ ಮಾತನ್ನು ತಾಳ್ಮೆಯಿಂದ ಕೇಳಿ "ನೀನು ಈ ಸಂಸ್ಥೆಯನ್ನು ಬೆಳೆಸಿದ್ದೀಯ, ನೀನಿಲ್ಲದೆ ಇದು ಹೇಗೆ ಮುಂದೆ ನಡೆಯುತ್ತದೆ"? ಎಂದರು. ನನಗೆ ಏ.ಪಿ.ಡಿ ಬೆಳೆಯುವುದರಲ್ಲಿ ನನ್ನೊಬ್ಬಳದ್ದೇ ಅಲ್ಲ, ಇನ್ನೂ ಅನೇಕರ ಕೊಡುಗೆ ಇದೆ ಎನ್ನುವುದು ಸ್ಪಷ್ಟವಾಗಿತ್ತು. ನಾವು ಬೆಳೆಯುತ್ತಾ, ಬೆಳೆಯುತ್ತಾ ಅನೇಕ ಸಮಸ್ಯೆಗಳನ್ನು ಎದುರಿಸಿದ್ದೆವು. ಎಷ್ಟೋ ಕಷ್ಟಗಳು ಎದುರಾಗಿದ್ದವು ಮತ್ತು ಅವನ್ನು ಗೆದ್ದು ಬಂದಿದ್ದೆವು. ಆದ್ದರಿಂದ ನನಗೆ ನಮ್ಮ ಸಂಸ್ಥೆಯಲ್ಲಿರುವ ಸದಸ್ಯರ ಬಗ್ಗೆ ವಿಶ್ವಾಸವೂ ಭರವಸೆಯೂ ಇತ್ತು. ನನಗೆ ಪ್ರತಿಯೊಂದು ನಿರ್ಧಾರಕ್ಕೂ ಸದಸ್ಯರು ನನ್ನನ್ನು ಎದಿರು ನೋಡುವುದು ಸರಿಎನಿಸಲಿಲ್ಲ.ನನಗೆ ಮೀಟಿಂಗ್‌ಗಳಲ್ಲಿ ಭಾಗವಹಿಸುವುದು ಬೇಕಾಗಿರಲಿಲ್ಲ. ನನಗೆ ಟ್ರಸ್ಟೀ ಪದವಿಯಿಂದ ಬಿಡುಗಡೆ ಬೇಕಿತ್ತು.

ಟ್ರಸ್ಟಿಗಳಿಗೆ ಯಾರನ್ನು ನನ್ನ ಬದಲಿಗೆ ಟ್ರಸ್ಟಿಯಾಗಿ ತೆಗೆದುಕೊಳ್ಳುವುದು ಎಂಬ ಗೊಂದಲ. ಮಹಿಂದ್ರ ಅವರು ಮಧ್ಯೆ ಪ್ರವೇಶಿಸಿ ಆಡಳಿತ ಮಂಡಳಿಯು ನನ್ನ ವಿಜ್ಞಾಪನೆಯನ್ನು ಮನ್ನಿಸಿ ನನ್ನನ್ನು ನಿವೃತ್ತಿ ಹೊಂದಲು ಅನುಮತಿ ನೀಡಬೇಕು ಎಂದರು. ಆಡಳಿತ ಮಂಡಳಿಯು ಒಪ್ಪಿಗೆ ಸೂಚಿಸಿತು ಮತ್ತು ಎಲ್ಲಾ ಸುಸೂತ್ರವಾಗಿ ಜರಗಿತು. ಕೆಲವರು

'ನೀವೇನೋ ನಿವೃತ್ತಿ ಹೊಂದಿದಿರಿ, ಆದರೆ ನಾವು ಸಿಕ್ಕಿಹಾಕಿಕೊಂಡಿದ್ದೀವಿ' ಎಂದರು. ನಾನು ಅವರಿಗೆ 'ಹಾಗೇನೂ ಇಲ್ಲ. ನೀವು ಯಾವಾಗ ಕರೆದರೂ ನಾನು ನಿಮಗೆ ಸಹಾಯ ಮಾಡಲು ಸಿದ್ಧ. ನನ್ನಕೈಯಲ್ಲಾದದ್ದನ್ನು ನಾನು ಮಾಡುವೆ. ನೀವು ಪ್ರಾರಂಭ ಮಾಡಿರುವ ತೋಟಗಾರಿಕೆಯನ್ನು ನಾನು ಮುಂದುವರಿಸುತ್ತೇನೆ' ಎಂದೆ.

* * *

# ಭರವಸೆಯ ಉದ್ಯಾನ

ನನ್ನ ಜೀವನದ ಪಯಣದ ಬಗ್ಗೆ ಒಂದು ಒಂದು ಸಲ ಹಿಂದಿರುಗಿ ನೋಡಿದಾಗ, ನನಗೆ ನನ್ನ ಜೀವನದಲ್ಲಿ ಬಂದು ಹೋದ ಎಲ್ಲರ ಜ್ಞಾಪಕ ಬರುತ್ತದೆ. ಅದರಲ್ಲಿ ಕೆಲವರು ನನ್ನ ಜೀವನದಲ್ಲಿ ಕ್ಷಣಿಕವಾಗಿ ಬಂದು ಹೋದವರ ನೆನಪು ಸ್ವಲ್ಪ ಮಂಕಾಗಿರಬಹುದು. ಆದರೆಇತರರು ನನ್ನ ಜೀವನದಲ್ಲಿ ಮುಖ್ಯ ಪಾತ್ರ ವಹಿಸಿದ್ದಾರೆ, ಮತ್ತು ನನ್ನ ಜೀವನದಲ್ಲಿ ಬದಲಾವಣೆ ತಂದು ನನಗೆ ಮಿತ್ರರು, ಹಿತೈಷಿಗಳು ಮತ್ತು ಆದರ್ಶಪ್ರಾಯರಾಗಿದ್ದಾರೆ. ಈ ರೀತಿಯ ಮಿತ್ರರಲ್ಲಿ ಕ್ರಿಸ್ ಅಂಡರ್ಹಿಲ್ ಒಬ್ಬರು.

ನನಗೆ ತೋಟಗಾರಿಕೆ ಎಂದರೆ ಬಹಳ ಇಷ್ಟ. ನಾನು ಅದರಲ್ಲಿ ತೊಡಗಿಸಿಕೊಂಡನಂತರ ಅದು ವಿಕಲಾಂಗರಿಗೆ ಎಷ್ಟು ಸುಂದರವಾದ ವೃತ್ತಿ ಎಂಬುದು ತಿಳಿಯಿತು. ಆದರೆ ಚೆನ್ನೈಯಲ್ಲಿ ನಮ್ಮ ತೋಟಗಾರನಾಗಿದ್ದ ವೇಲು ಅಲ್ಲಿನ ಹುಡುಗಿಯರನ್ನು ತೋಟದೊಳಗೆ ಬಿಡುತ್ತಲೇ ಇರಲಿಲ್ಲ. ಯಾಕೆಂಬುದು ಅವನಿಗೇ ಗೊತ್ತು, ಅವನು ಯಾವಾಗಲೂ ಸಿಡುಕು ಸ್ವಭಾವದ ಮುದುಕನಾಗಿದ್ದ. ತೆಳ್ಳಗಿದ್ದ ಅವನ ಕಾಲುಗಳು ಮೇಲೆ ಕಟ್ಟಿದ್ದ ಲುಂಗಿಯಿಂದ ಕಡ್ಡಿಗಳಂತೆ ಹೊರಚಾಚುತಿದ್ದವು. ಅವನು ಬಳ್ಳಿಗಳಿಗೆ ಚಪ್ಪರ ಕಟ್ಟುತಿದ್ದ. ಅವು ನನ್ನ ಮಲಗುವ ಕೋಣೆಯ ಕಿಟಕಿಯ ಹೊರಗಿದ್ದವು. ಕಿಟಕಿಯನ್ನು ತೆಗೆಯಲಾಗುತ್ತಿರಲಿಲ್ಲ. ಅವನು ನಮ್ಮ ನಾಯಿ 'ರಿಕಿ'ಯನ್ನು ಕರೆದುಕೊಂಡು ಹೋಗುತ್ತಿದ್ದ, ಅದಕ್ಕೆ ಕಟ್ಟಿದ್ದ ಪಟ್ಟಿಯು ಎರಡು ಮೀಟರಿನಷ್ಟು ಉದ್ದವಿರುತ್ತಿತ್ತು, ಅದು 'ರಿಕಿ'ಯೊಡನೆ ಇತರ ನಾಯಿಗಳು ಜಗಳಕ್ಕೆ ಬಂದರೆ ತನ್ನನ್ನು ತಾನು ಕಾಪಾಡಿಕೊಳ್ಳುವುದಕ್ಕೆ ಎಂದು ಅವನು ಹೇಳುತಿದ್ದ. ಕೆಲವು ಸಂಜೆ ನಾವು ವೇಲುವನ್ನು ನಮ್ಮ ಗರಾಜಿನಲ್ಲಿ ವಿಚಿತ್ರವಾದ ಪೂಜಾ ಕ್ರಮಗಳನ್ನು ಮಾಡುತ್ತಿರುವುದನ್ನು ನೋಡಲಾಗುತ್ತಿತ್ತು. ಇದು ಅವನು ನಮ್ಮ ಅಕ್ಕಪಕ್ಕದವರ ಮನೆಯ ಕೆಲಸದವರಿಗೆ ಆದ ಕಾಯಿಲೆಯನ್ನು ಗುಣಪಡಿಸುವರೀತಿಯಾಗಿತ್ತು. ಆದರೆ ಅವನು ತನ್ನ ಮಂತ್ರಗಳಿಗೆ ಅಷ್ಟು ಶಕ್ತಿ ಇಲ್ಲ, ಇದ್ದಿದ್ದರೆ ಅವನ ಎಲ್ಲಾ ಮುಂದಿನ ಹಲ್ಲುಗಳೂ ಬಿದ್ದಿರುವುದನ್ನು ತಡೆಯಬಹುದಾಗಿತ್ತು ಎಂದು ಅವನೇ ಎಷ್ಟೋ ಸಲ ಹೇಳಿಕೊಳ್ಳುತಿದ್ದ.

ಒಮ್ಮೆ ನಾವು ಬೆಂಗಳೂರಿಗೆ ಬಂದಮೇಲೆ – ಅಲ್ಲಿ ಎಲ್ಲವನ್ನೂ ಬೆಳೆಯ ಬಹುದಾಗಿತ್ತು – ನಾನು ನಮ್ಮ ಮಾಲಿ ಚೆನ್ನಪ್ಪನೊಡನೆ ಎಷ್ಟೋಸಲ ಕೆಲಸಮಾಡುತ್ತಿದ್ದೆ. ನಾನು ಅವನಿಂದ ಎಷ್ಟೊ ವಿಷಯಗಳನ್ನು ಕಲಿತೆ. ಅವನಿಗೂ ನನಗೆ ಕಲಿಸಲು ಇಷ್ಟ. ನಾವು ಎಷ್ಟೊ

ಘಂಟೆಗಳು ಸಂತೋಷದಿಂದ ಅವನೊಡನೆ ಬೆಂಗಳೂರಿನ ಹಿತಕರವಾದ ಬಿಸಿಲಿನಲ್ಲಿ ಕೆಲಸ ಮಾಡಿ, ತೋಟಗಾರಿಕೆಯ ಬಗ್ಗೆ ಕಲಿತಿದ್ದೇನೆ. ಅವನು ಒಳ್ಳೆಯ ಮನುಷ್ಯ. ಯಾವಾಗಲೂ ತಮಾಷೆಯಾಗಿ ಮಾತಾಡುತ್ತಿದ್ದ. ಚೆನ್ನಪ್ಪ ಒಬ್ಬ ಅನುಭವಿ ತೋಟಗಾರ, ಬ್ರಿಟೀಷರ ಕೈಕೆಳಗೆ ಪಳಗಿದವ. ಬ್ರಿಟೀಷ್ ಸಾಹೇಬರು ನೆಲಸಿದ್ದ ರೆಸಿಡೆಂಸಿಯಲ್ಲಿ ತೋಟಗಾರನಾಗಿ ಕೆಲಸ ಮಾಡಿದ್ದ. ಇಂದು ಈ ಬಂಗಲೆಯು ರಾಜ ಭವನವಾಗಿದೆ, ಮತ್ತು ಕರ್ನಾಟಕ ರಾಜ್ಯದ ರಾಜ್ಯಪಾಲರ ಮನೆಯಾಗಿದೆ. ಅವನಿಗೆ ಅನೇಕ ವಾರ್ಷಿಕ ಗಿಡಗಳ ಹೆಸರುಗಳು ಗೊತ್ತಿದ್ದವು. ಅವನ್ನು ನಮ್ಮ ಮಲ್ಲೇಶ್ವರದ ಮನೆಯಲ್ಲಿ ಬೆಳೆಸುತ್ತಿದ್ದ. ಅಲ್ಲಿ ಸುಮಾರು ಒಂದು ಎಕ್ಕರೆಯಷ್ಟು ಜಾಗವಿತ್ತು. ಚೆನ್ನಪ್ಪ ಅದನ್ನು ಸುಂದರ ಉದ್ಯಾನವಾಗಿ ಮಾಡಿದ್ದ. ಬೆಳಗ್ಗೆ ಒಕ್ಕೆ ಬಂದರೆ ಸಂಜೆಯವರೆಗೆ ಕೆಲಸಮಾಡುತ್ತಿದ್ದ. ಅವನಿಗೆ ತನ್ನ ಕೆಲಸದ ಬಗ್ಗೆ ಬಹಳ ಹೆಮ್ಮೆ. ನಮ್ಮ ತಂದೆ ನನ್ನ ಮನೆಯನ್ನು ಕಟ್ಟಿಸಿದಾಗ ಚೆನ್ನಪ್ಪ ವಿಧವಿಧವಾದ ಹೂಗಿಡಗಳ ಬೀಜವನ್ನು ತಂದು ಅಲ್ಲಿ ತೋಟವನ್ನು ಮಾಡಿದ. ನನ್ನ ಕ್ಯಾಲಿಪರ್ ಜೊತೆಗೆ ನಾನು ಚಲಿಸುವುದು ಬಹಳ ನಿಧಾನವಾಗುತಿತ್ತು. ಎಷ್ಟೋಸಲ ಅವನು ನನ್ನ ವ್ಹೀಲ್ ಚೇರನ್ನು ತಳ್ಳಿಕೊಂಡು ಅಕ್ಕ ಪಕ್ಕದಲ್ಲಿದ್ದ ನನ್ನ ಮಿತ್ರರ ಮನೆಗಳಿಗೆ ಕರೆದುಕೊಂಡು ಹೋಗುತಿದ್ದ,ಅಲ್ಲಿ ಏನಾದರೂ ಆಕರ್ಷಕ ಗಿಡಗಳಿದ್ದರೆ ಅವನ್ನು ಯಾರಿಗೂ ತಿಳಿಯದಂತೆ ಕದ್ದು ತರುತ್ತಿದ್ದ. ಚೆನಪ್ಪನ ಏಳು ಮಕ್ಕಳೂ ನಮ್ಮ ಕಾಂಪೌಂಡಿನಲ್ಲೇ ಬೆಳೆದವು ಮತ್ತು ನನ್ನ ಚಿಕ್ಕಪನ ಮೈಸೂರು ಎಲೆಕ್ಟ್ರಿಕಲ್ ಇಂಡಸ್ಟ್ರೀಸ್ ನಲ್ಲಿಯೇ ಅವರಿಗೆ ಕೆಲಸವು ಸಿಕ್ಕಿತು.ಚೆನ್ನಪ್ಪನಿಗೆ ವಯಸ್ಸಾಗುತ್ತಾ ಬಂತು. ಹೆಚ್ಚಾಗಿ ಕೆಲಸಮಾಡಲಾಗಲಿಲ್ಲ, ಆದರೆ ಅವನು ಕೊನೆಯವರೆಗೂ ನಮ್ಮಮನೆಯಲ್ಲೇ ಇದ್ದನು. ಅವನು ಇಲ್ಲವಾದಾಗ ನಾನು ಒಬ್ಬ ಒಳ್ಳೆಯ ಮಿತ್ರನನ್ನೂ ಮತ್ತು ಮರ ಗಿಡಗಳ ಪ್ರೇಮಿಯನ್ನೂ ಕಳೆದುಕೊಂಡೆ.

ಒಂದು ಸಲ ನಾವು ಮದ್ರಾಸಿಗೆ ಹೋಗುತಿದ್ದೆವು. ಅವನುನನ್ನನ್ನು ವ್ಯಾನಿಗೆ ಹತ್ತಲು ಸಹಾಯ ಮಾಡಿದ್ದು ನನಗೆ ಚೆನ್ನಾಗಿ ನೆನಪಿದೆ. ಅವನು beach ಅನ್ನು ಯಾವತ್ತೂ ನೋಡಿರಲಿಲ್ಲ,ನಾನು ಅವನನ್ನು ನಮ್ಮಜೊತೆ ಬರಹೇಳಿದೆ. ಅವನು ಭುಜದ ಮೇಲೆ ಒಂದು ಟವೆಲ್ ಹೊದ್ದುಕೊಂಡಿದ್ದ, ಹಲ್ಲುಕೂಡ ಉಜ್ಜಿರಲಾರ. ಹಾಗೆಯೇ ಅವನು ನಮ್ಮೊಡನೆ ಹೊರಟ. ನಾವು ಮರೀನ ಬೀಚಿಗೆ ಹೋದೆವು. ಆ ವಿಶಾಲವಾದ ಸಮುದ್ರವನ್ನು ನೋಡಿ ಅವನಿಗೆ ಮಹದಾಶ್ಚರ್ಯ. ಕ್ಷಿತಿಜದ ಆಚೆ ಏನಿದೆ ಎಂದು ಕೇಳಿದ? ನಾನು ಹೇಳಿದ್ದು ಅವನಿಗೆ ಅರ್ಥವಾಗಲಿಲ್ಲ. ಸಮುದ್ರದ ನೀರಿನ ರುಚಿಯನ್ನು ನೋಡಲು ಒಂದು ಬೊಗಸೆನೀರನ್ನು ಬಾಯಿಗೆ ಹಾಕಿಕೊಂಡ. ಮುಖವು ವಿಕಾರವಾಗಿ ತಿರುಚಿಕೊಂಡಿತು. ಮತ್ತೊಮ್ಮೆ ಚೆನ್ನಪ್ಪ ಒಂದು ಪುಟ್ಟ ಕುರಿಮರಿಯನ್ನು ನಮ್ಮ ಮನೆಗೆ ತಂದ. ಅದನ್ನು

ಅವನು ಹುಲ್ಲಿರುವ ಕಡೆಕಟ್ಟುತಿದ್ದ. ಅದು ದಿನವಿಡೀ ಹುಲ್ಲು ಮೇಯುತಿತ್ತು. ಅದು ನಾಯಿಯಂತೆ ಬಹಳ ಸ್ನೇಹಿಯಾಗಿತ್ತು. ನಾವು ತೋಟದಲ್ಲಿ ಕುಳಿತರೆ ಅದೂ ಪಕ್ಕದಲ್ಲಿ ಕುಳಿತು ಚಿನ್ನಪ್ಪನ ತೊಡೆಯ ಮೇಲೆ ತಲೆಯನ್ನಿಟ್ಟುಕೊಳ್ಳುತಿತ್ತು. ನನಗೆ ಅದು ಬಹಳ ಹಿಡಿಸಿತು. ಚೆನ್ನಾಗಿ ಬೆಳೆದಿದ್ದ ಈ ಕುರಿಮರಿಯು ಒಂದು ದಿನ ಇದ್ದಕ್ಕಿದ್ದಂಗೆ ಮಾಯವಾಯಿತು. ಚಿನ್ನಪ್ಪನನ್ನು ಕೇಳಿದರೆ ಅವನು ಅದನ್ನು ಯಾವುದೋ ಪೂಜೆಗೆ ಬಲಿಕೊಟ್ಟದ್ದಾಗಿ ಹೇಳಿದನು. ನನಗೆ ಬಹಳ ಕೋಪವು ಬಂದಿತು. ಹೇಗೆ ಅವನು ತಾನು ಬೆಳೆಸಿದ ಮರಿಯನ್ನು ಬಲಿಕೊಟ್ಟು ಅದನ್ನು ತಿನ್ನಬಹುದು ಎಂದು. ನಾನು ಅವನನ್ನು ಈ ವಿಷಯದಲ್ಲಿ ಎಂದೂ ಕ್ಷಮಿಸುವುದಿಲ್ಲ.

೧೯೮೪–೮೫ ರಲ್ಲಿ, ನಾವು ಎ.ಪಿ.ಡಿಯಲ್ಲಿ ತೋಟಗಾರಿಕೆಯನ್ನು ಪ್ರಾರಂಭಿಸುವುದಕ್ಕೆ ಮುಂಚೆ, ನಾವು ಒಂದು ಯೋಚನೆಯನ್ನು ಪರೀಕ್ಷೆಗೆ ಒಳಪಡಿಸಿದ್ದೆವು. ನಾಯಿಡು ಅವರು ನನಗೆ ಹತ್ತು ಹದಿನೈದು ಜನ ತೋಟಗಾರಿಕೆಯಲ್ಲಿ ಆಸಕ್ತರಾದವರ ಒಂದು ಅನೌಪಚಾರಿಕ ಗುಂಪನ್ನುಸೇರಿಸುವುದರಲ್ಲಿ ಸಹಾಯ ಮಾಡಿದ್ದರು. ನಾವು ಲಾಲ್‌ಭಾಗಿನ ತೋಟಗಾರಿಕೆಯ ತಜ್ಞರನ್ನು ಸಂಧಿಸಿ ನಮಗೆ ತೋಟಗಾರಿಕೆಯ ಬಗ್ಗೆ ಒಂದು ತರಬೇತಿ ಶಿಬಿರವನ್ನು ನಡೆಸುವಂತೆ ಕೇಳಿಕೊಂಡೆವು. ಆಗ ಲಾಲ್‌ಭಾಗಿನಲ್ಲಿ mushroom ಬೆಳೆಸುವುದನ್ನು ಪ್ರೋತ್ಸಾಹಿಸುತ್ತಿದ್ದರು. ನನಗೆ ಈ mushroom ಬೆಳೆಸುವುದು ಸುಲಭವೆನ್ನಿಸಿತು, ಅದೂ ಅಲ್ಲದೆ ನಮ್ಮ ಮನೆಯಲ್ಲಿ ಸಾಕಷ್ಟು ಜಾಗವೂ ಇದ್ದಿತು.ಅಲ್ಲಿ ಹರಡಿದ್ದ ನಿರುಪಯೋಗಿ ವಸ್ತುಗಳನ್ನು ತೆಗೆದು ಬೇರೆ ಕಡೆಇರಿಸಿ ನಾನು ತೋಟಗಾರಿಕೆಗೆ ಸ್ಥಳವನ್ನು ಮಾಡಿದೆ. ನನ್ನಲ್ಲಿದ್ದ ಅಲ್ಪಸ್ವಲ್ಪ ಹಣದಲ್ಲಿ ನಾನು ಛಟುಟಜಡಿ  ಮತ್ತು ಇತರ ಸಲಕರಣೆಗಳನ್ನು ಕೊಂಡುಕೊಂಡೆ. ನಮ್ಮಲ್ಲಿ ಹೆಗ್ಗಣಗಳ ಕಾಟ ಜಾಸ್ತಿಯಾಗಿತ್ತು. ಅದರ ಬಗ್ಗೆ ನಾವೇನೂ ಮಾಡಲಾಗುತ್ತಿರಲಿಲ್ಲ. ಆಗ mushroom ಗಳು ಅಷ್ಟೇನೂ popular ಆಗಿರಲಿಲ್ಲ. ಕೆಲವು ದೊಡ್ಡ ಹೋಟೇಲುಗಳು ಪ್ರತಿದಿನ ೫ ಕಿಲೋವಿನಷ್ಟು mushroom ತೆಗೆದುಕೊಳ್ಳಲು ಮುಂದೆಬಂದರು, ಆದರೆ ಅದನ್ನು ನಾವು ಪ್ರತಿದಿನ ಬೆಳಿಗ್ಗೆ ೧೦ಕ್ಕೆ ಮುಂಚೆ ಅವರಿಗೆ ತಲಪಿಸಬೇಕಾಗಿತ್ತು. ನಾವು ಈ ಮಟ್ಟಕ್ಕೆ ಬರಲು ನಮಗೆ ಮೂರು ತಿಂಗಳ ಸಮಯ ಬೇಕಾಯಿತು. ನಮ್ಮಲ್ಲಿ ಮಾರಾಟವಾಗದೆ ಉಳಿದ mushroom ಅನ್ನು ನಾವು ಒಣಗಿಸಿ ಇಡುತ್ತಿದ್ದೆವು. ಅವು ನಮಗೆ ಹೆಚ್ಚು ಹಣ ತರುತ್ತಿದ್ದವು. ನಾವು ನಮ್ಮ ಸರಕನ್ನು "ಶಕ್ತಿ ಪ್ರಾಡಕ್ಟ್ಸ್"ಎಂಬ ಹೆಸರಿನಡಿ ಮಾರಾಟ ಮಾಡುತ್ತಿದ್ದೆವು. ಆದರೆ ಜನರು ನಮ್ಮನ್ನು mushroom ತಿನ್ನಬಹುದೇ? ಎಂದು ಪ್ರಶ್ನಿಸುತ್ತಿದ್ದರು. ಅವರ ಮನಸ್ಸಿನಲ್ಲಿ ಅವು ವಿಷಪೂರಿತವಿರಬಹುದು ಎನ್ನುವ ಸಂಶಯವಿತ್ತು. ಒಂದು ಸಲ ಯಾರೋ ವೆಂಕಿಯನ್ನು

ಫೋನಿನಲ್ಲಿ ಶಕ್ತಿ ಪ್ರಾಡಕ್ಟ್ಸ್ ಆಫೀಸ್ ಎಲ್ಲಿದೆ ಎಂದು ಕೇಳಿದಾಗ ಅವನಿಗೆ ಗಾಬರಿ. ಯಾರಾದರೂ ನಮ್ಮ mushroom ತಿಂದು ಕಾಯಿಲೆ ಬಿದ್ದಿರಬಹುದು ಎಂದು. ಆದರೆ ಫೋನು ಮಾಡಿದಾತ ಮತ್ತಷ್ಟು mushroom ಬೇಕೆಂದು order ಮಾಡಲು ಆಫೀಸ್ ಎಲ್ಲಿದೆ ಎಂದು ಕೇಳಿದ್ದರು.

ಈ ಸಮಯದಲ್ಲಿ ನಾನು ಕ್ರಿಸ್ ಅಂಡರ್ಹಿಲ್ ಅವರ "ವಿಕಲಾಂಗರಿಗೆ ಯು.ಕೆ. ಯಲ್ಲಿ ತೋಟಗಾರಿಕೆ" ಎಂಬ ಅಂಕಣವನ್ನು ಆಕ್ಷ್ಯಾಮ್ ಪತ್ರಿಕೆಯಲ್ಲಿ ಓದುತ್ತಿದ್ದೆ. ಆ ಅಂಕಣವು ನನ್ನಮೇಲೆ ಎಷ್ಟು ಪ್ರಭಾವ ಬೀರಿತೆಂದರೆ ನಾನು ಕೂಡಲೇ ಅವರಿಗೆ ಪತ್ರ ಬರೆದೆ. ಇದು ನಮ್ಮ ಮೈತ್ರಿಗೆ ನಾಂದಿಯಾಯಿತು. ನಾನು ೧೯೮೬ ರಲ್ಲಿ ಅವರನ್ನು ಯು.ಕೆ.ಯಲ್ಲಿ ಭೇಟಿಯಾಗುವ ವೇಳೆಗೆ ನಾನು ಎ.ಪಿ.ಡಿಯಲ್ಲಿ ಒಂದು ತೋಟಗಾರಿಕೆಯ ತರಬೇತಿ ಕೇಂದ್ರವನ್ನು ಸ್ಥಾಪಿಸಬೇಕೆಂದು ನಿರ್ಧರಿಸಿದ್ದೆ. ನನಗೆ ಯಾವಾಗಲೂ ದೈವ ಸಂಯೋಗದ ಬಗ್ಗೆ ಅಚ್ಚರಿ. ವಿಶ್ವದಯಾವುದೋ ಮೂಲೆಯಲ್ಲಿರುವವರು ಹೇಗೆ ವೇಳೆ ಬಂದಾಗ ಸಂಪರ್ಕಕ್ಕೆ ಬರುತ್ತಾರೆ, ಎಂದು. ಕ್ರಿಸ್ ಕುಟುಂಬದವರು ನನಗೆ ಅನೇಕ ವರ್ಷಗಳಿಂದ ಪರಿಚಯ. ಅವರು ಎ.ಪಿ.ಡಿ ಗೆ ಭೇಟಿ ಕೊಟ್ಟಿದ್ದಾರೆ. ಕ್ರಿಸ್ ನಮಗೆ ಬಹಳ ಉಪಯುಕ್ತವಾದ ಸಲಹೆಗಳನ್ನಿತ್ತರು. ನಾವು ಕೂಡ ಅವರಿಗೆ ಅನೇಕರೀತಿಯಲ್ಲಿ ನೆರವಾದೆವು.

ನಾನು ಪ್ರತಿ ದಿನ ಬೆಳಿಗ್ಗೆ ೮ ಘಂಟೆಗೆ ಎ.ಪಿ.ಡಿ.ಗೆ ಬರುತ್ತಿದ್ದೆ. ಅಲ್ಲಿ ಕೆಲವು ವಿಕಲಾಂಗ ಹುಡುಗರು ನಮ್ಮೊಡನೆ ಕೆಲಸ ಮಾಡುತ್ತಿದ್ದರು.ಅವರು ದಿನವೂ mushroom ಗಳನ್ನು ಕೊಯ್ಲುಮಾಡಿ ಶೇಖರಿಸುತ್ತಿದ್ದರು. mushroom ಯಾವಾಗಲೂ ನಾವು ಎಣ್ಣಿಸಿದ ಹಾಗೆ ಬೆಳೆಯುತ್ತಿರಲಿಲ್ಲ. ಎಷ್ಟೋ ಸಲ ನಾವು ಒಪ್ಪಿಕೊಂಡಷ್ಟು ಹೊಟೇಲುಗಳಿಗೆ mushroom ಕೊಡಲಾಗದೆ, ನಾವು ಹೊರಗಿನಿಂದ ಕೊಂಡುಕೊಳ್ಳಬೇಕಾಗುತ್ತಿತ್ತು. ನಾವು ತರಕಾರಿಗಳನ್ನು ಬೆಳೆಯಲೂ ಪ್ರಯತ್ನಿಸಿದೆವು. ಆದರೆ ನಮ್ಮ ಹುಡುಗರಿಗೆ ತೋಟಗಾರಿಕೆಗಿಂತ ವರ್ಕ್ ಷಾಪ್ ನಲ್ಲಿ ಕೆಲಸ ಮಾಡುವುದರಲ್ಲಿ ಹೆಚ್ಚಿನ ಆಸಕ್ತಿ, ಅವರಿಗೆ ತೋಟದಲ್ಲಿ ಕಷ್ಟ ಪಟ್ಟು ಕೆಲಸ ಮಾಡುವುದರಲ್ಲಿ ಆಸಕ್ತಿ ಇರಲಿಲ್ಲ. ನಾವು ಈ ರೀತಿ ಒಂದೂವರೆ ವರ್ಷ ಕೆಲಸ ಮಾಡಿದೆವು. ನಂತರ ನಾವು ಜೀವನ ಬೀಮಾ ನಗರಿಗೆ ಸ್ಥಳಾಂತರಿಸಿದೆವು. ಅಲ್ಲಿ ನಾವು ನಮ್ಮ ಮೊದಲನೆಯ nursery ಯನ್ನು ೧೯೮೭ ರಲ್ಲಿ ಪ್ರಾರಂಭಿಸಿದೆವು. ಸ್ವಲ್ಪ ಹಣವನ್ನು ಕೂಡಿಸಿ ಒಂದು bore well ಅಗೆಸಿ, ಒಂದು ಶೆಡ್ ಕಟ್ಟಿಸಿದೆವು. ಈ ಕೆಲಸದಲ್ಲಿ ನನ್ನ ಸ್ನೇಹಿತೆ ಸುಮಲತಾ ಬಹಳ ನೆರವಾದಳು.

ಸುಮಲತಾ ಬಹಳ ಮೃದು ಮತ್ತು ಸಂಕೋಚದ ಸ್ವಭಾವದವಳು. ನನಗೆ ಅವಳು ಪರಿಚಯವಾದದ್ದು ನಲವತ್ತು ವರ್ಷಗಳ ಹಿಂದೆ. ಅವಳು ನಮ್ಮ ಶಾಲೆಯ ಬಸ್ಸನ್ನು ಆಟೋ ರಿಕ್ಷಾದಲ್ಲಿ ಹಿಂಬಾಲಿಸಿಕೊಂಡು ನಮ್ಮ ಶಾಲೆಗೆ ಬಂದಳು. ಅವಳಿಗೆ ನಮ್ಮ ಸಂಸ್ಥೆಗೆ ಹೇಗಾದರೂ ನೆರವಾಗ ಬೇಕೆಂಬ ಆಸೆ. ಅವಳು ಗಣಿತ ಶಾಸ್ತ್ರದಲ್ಲಿ ಪದವಿಯನ್ನು ಪಡೆದಿದ್ದಳು, ಆದ್ದರಿಂದ ನಾನು ಅವಳಿಗೆ ಗಣಿತವನ್ನು ಕಲಿಸುವ ಉಪನ್ಯಾಸಕಿಯಾಗಿ ಕೆಲಸ ಕೊಟ್ಟೆ, ಆದರೆ ಅವಳು ಕಾಲೇಜಿನಲ್ಲಿ ಓದಿದ ಗಣಿತವು ಮರೆತು ಹೋಗಿದೆ ಎಂದು ಹೇಳಿ ಬೇರೆ ಬೇರೆ ಕೆಲಸಗಳನ್ನು ಮಾಡತೊಡಗಿದಳು. ಕೆಲವು ವರ್ಷಗಳು ಕಳೆದವು. ನಾನು ಅವಳು ಮರದಲ್ಲಿ ಸುಂದರವಾದ ಕೆತ್ತನೆಯ ಕೆಲಸವನ್ನು ಮಾಡುತ್ತಾಳೆ ಎಂಬುದನ್ನು ಅರಿತೆ. ಅವಳು ನಮ್ಮ ಸಂಸ್ಥೆಗೆ ಸುಂದರವಾದ ಮೂರ್ತಿಗಳನ್ನೂ greeting cards ಗಳನ್ನೂ ಮಾಡಿಕೊಟ್ಟಳು, ನಾವು ಅವನ್ನು ಮಾರಿ ಸಂಸ್ಥೆಗೆ ಹಣವನ್ನು ಶೇಖರಿಸಿದೆವು. ನಂತರ ಅವಳು ತಂಜಾವೂರಿನ ಶೈಲಿಯ ಚಿತ್ರಗಳನ್ನು ಬಿಡಿಸುವುದನ್ನು ಕಲಿತುಕೊಂಡಳು ಮತ್ತು ಅವಳು ರಚಿಸಿದ ಕಲಾಕೃತಿಗಳನ್ನು ನಮ್ಮ ಸಂಸ್ಥೆಗೆಕೊಟ್ಟಳು. ನಾವು ಅವನ್ನು ಮಾರಿ ಹಣವನ್ನು ಶೇಖರಿಸಿದೆವು. ಅವಳು ರಚಿಸಿದ ಕಲಾಕೃತಿಗಳು ಉತ್ತಮ ಗುಣಮಟ್ಟದ್ದಾಗಿದ್ದವು.

ನಾನು ನನ್ನ ಸ್ವಪ್ನಲೋಕದಲ್ಲೇ ಮುಳುಗಿರುತ್ತಿದ್ದೆ. ಆದರೆ ಸುಮಾಲತಾ ಹಾಗಲ್ಲ. ಅವಳು ಕಾರ್ಯಪರಳು. ಕಾರ್ಯದಲ್ಲೇ ಮುಳುಗಿರುತ್ತಿದ್ದಳು. ಕೈಗೆ ತೆಗೆದುಕೊಂಡ ಕೆಲಸವು ಮುಗಿಯುವ ತನಕ ಅವಳು ಬಿಡುತ್ತಿರಲಿಲ್ಲ. ಅವಳಿಗೆ ವಿಶಾಲವಾದ ಜನ ಸಂಪರ್ಕವಿತ್ತು. ಆದ್ದರಿಂದ ಅವಳು ಕೈಗೊಂಡ ಕೆಲಸವನ್ನು ಬಹಳ ಸುಲಭವಾಗಿ ಸಾಧಿಸುತ್ತಿದ್ದಳು. ಅವಳಿಗೆ ಅಪಾರವಾದ ಶ್ರದ್ಧೆಯಿತ್ತು, ಯಾವ ಕಾರ್ಯವೂ ಅವಳನ್ನು ಧೃತಿಗೆಡಿಸುತ್ತಿರಲಿಲ್ಲ, ಯಾವಾಗಲೂ ಶಾಂತವಾಗಿರುತ್ತಿದ್ದಳು. ವಿ.ಪಿ.ಡಿ ಅವಳಿಗೆ ಯಾವಾಗಲೂ ಋಣಿಯಾಗಿರುತ್ತದೆ. ಆ ರೀತಿಯ ಶ್ರದ್ಧಾಳು ಸಿಗುವುದು ಬಹಳ ಅಪರೂಪ. ನಮ್ಮ ಜೀವನ ಬೀಮಾ ನಗರದ nursery ಗೆ ಅವಳು ತನ್ನ ತಂಜಾವೂರು ಚಿತ್ರಗಳ ಮಾರಾಟದ ಮೂಲಕ ೧.೫ ಲಕ್ಷ ರೂ ಗಳನ್ನು ಶೇಖರಿಸಿ ಕೊಟ್ಟಳು. ಇದು ನಮಗೆ ಮತ್ತೆರಡು ಕೊಠಡಿಗಳನ್ನು ಕಟ್ಟಿ ನಮ್ಮ ಚಟುವಟಿಕೆಗಳನ್ನು ವಿಸ್ತರಿಸಲು ಸಹಾಯವಾಯಿತು.

ನಮ್ಮ ಜೀವನ ಬೀಮಾ ನಗರದ ತೋಟದಲ್ಲಿ ಸಿದ್ದಲಿಂಗಯ್ಯ ಮಾಲಿಯಾಗಿ ಕೆಲಸ ಮಾಡುತ್ತಿದ್ದ, ಅವನನ್ನು ಯಾರೋ ಶಿಫಾರಸು ಮಾಡಿದ್ದರು. ನನಗೆ ತಿಳಿಯಿತು, ಎಷ್ಟೋ ಜನರು ತೋಟದಲ್ಲಿ ಕೆಲಸ ಮಾಡುವವರನ್ನು ಮಾಲಿ ಎಂದು ಹೇಳಿ ಬೇರೆಯವರಲ್ಲಿ ಕೆಲಸಕ್ಕೆ ಕಳುಹಿಸುತ್ತಾರೆ. ಸಿದ್ದಲಿಂಗಯ್ಯನೂ ಇದೇ ರೀತಿ. ಅವನಿಗೆ ತೋಟಗಾರಿಕೆಯ

ಬಗ್ಗೆ ಏನೂ ಗೊತ್ತಿರಲಿಲ್ಲ, ಆದರೆ ಅವನು ಚೆನ್ನಾಗಿ ಮಣ್ಣನ್ನು ಅಗೆಯುತ್ತಿದ್ದ. ನಾನು ಅವನಿಗೆ ಕ್ರಮೇಣ ತೋಟಗಾರಿಕೆಯ ಇತರ ವಿಷಯಗಳನ್ನು ಕಲಿಸಬಹುದು ಎಂದಿದ್ದೆ. ಅವನು ಇನ್ನೂ ಚಿಕ್ಕವನಿದ್ದ, ಅವನಿಗೆ ಐದು ಮಕ್ಕಳಿದ್ದರು. ದೊಡ್ಡ ಮಗುವಿಗೆ ಹನ್ನೆರಡು ವಯಸ್ಸು. ಅವನ ಸಂಸಾರವು ಬಹಳ ಕಷ್ಟದಲ್ಲಿತ್ತು. ಅವನು ದೂರದಲ್ಲಿದ್ದ. ನಾವು ಅವನಿಗೆ ಒಂದು ಸೈಕಲ್ಲನ್ನು ತೆಗೆದು ಕೊಟ್ಟೆವು. ಅವನು ಅದರಲ್ಲಿ ಕೆಲಸಕ್ಕೆ ಬರುತ್ತಿದ್ದ. ಮೊದಲಿನ ಕೆಲವು ವರ್ಷಗಳಲ್ಲಿ ನಾನು ಅವನೊಡನೆ ಬಹಳ ಸಮಯವನ್ನು ಲಿಂಗರಾಜಪುರದ ಮತ್ತು ಜೀವನ ಬೀಮಾ ನಗರದ ತೋಟಗಳಲ್ಲಿ ಕಳೆದಿದ್ದೇನೆ. ಕೆಲವು ದಿನಗಳ ನಂತರ ನಾವು ಅವನಿಗೆ ಇರಲು ತೋಟದಲ್ಲೇ ಒಂದು ಪುಟ್ಟ ರೂಮನ್ನು ಕೊಟ್ಟೆವು. ಅವನ ಮಕ್ಕಳು ಅಲ್ಲಿನ ಸರ್ಕಾರಿ ಶಾಲೆಗೆ ಹೋಗಲು ಪ್ರಾರಂಭಿಸಿದರು. ಸಿದ್ದಲಿಂಗಯ್ಯನ ದೊಡ್ಡಗುಣವೆಂದರೆ ಅವನು ಹೊಸ ಮಾದರಿಯನ್ನು ಪ್ರಯತ್ನಿಸಲು ತಯಾರಾಗಿದ್ದ. ಈ ಗುಣವೇ ಅವನಿಗೆ ಜೀವನದಲ್ಲಿ ಮುನ್ನೇರಲು ನೆರವಾಯಿತು. ಅವನು ಸುತ್ತ ಮುತ್ತಿನಲ್ಲಿ ಎಲ್ಲರಿಗೂ ಬೇಕಾದವನಾದ. ಎಲ್ಲರೂ ಅವನ ಸಲಹೆ ಕೇಳುತಿದ್ದರು. ಅವನು ತನ್ನ ಮಕ್ಕಳನ್ನು ಓದಿಸಿದ ಮತ್ತು ಒಂದು ಮನೆಯನ್ನು ಕಟ್ಟಿಸಿದ. ಸ್ಥಿರವಾದ ಕೆಲಸ ಮತ್ತು ಒಂದು ಸಂಸ್ಥೆಯ ಮಾರ್ಗದರ್ಶನದಿಂದ ಅವನು ತನ್ನ ಜೀವನವನ್ನು ಯಶಸ್ವಿಯಾಗಿ ಬದಲಾಯಿಸಿಕೊಂಡ.

ನಂತರ ಒಬ್ಬ ಸುಂದರ ಯುವಕ – ಗಣೇಶ್ ಹೆಗ್ಗಡೆ – ನಮ್ಮ ಸಂಸ್ಥೆಯನ್ನು ಸೇರಿಕೊಂಡ. ಈಗ ಅವನು ಎ.ಪಿ.ಡಿಯನ್ನು ಸೇರಿ ಇಪ್ಪತ್ತು ವರ್ಷಗಳಾಗಿವೆ. ಅವನು ತೋಟಗಾರಿಕೆಯನ್ನು ಓದಿದ್ದಾನೆ ಮತ್ತು ಗಿಡಗಳ ವಿಷಯ ಚೆನ್ನಾಗಿ ತಿಳಿದುಕೊಂಡಿದ್ದಾನೆ. ಮುಖ್ಯವಾಗಿ ಅವನು ಜನರನ್ನು ನಮ್ಮ ಕಾರ್ಯಕ್ರಮಗಳ ಕಡೆಗೆ ಎಳೆಯುವುದರಲ್ಲಿ ಮತ್ತು ನಮ್ಮ ಗ್ರಾಹಕರೊಡನೆ ಒಳ್ಳೆಯ ಸಂಪರ್ಕ ಮತ್ತು ಸಂಬಂಧವನ್ನು ಬೆಳೆಸುವುದರಲ್ಲಿ ನಿಪುಣ. ಈಗ ಅವನು ವಿವಿಧ ವಿಕಲಾಂಗತೆಗಳಿಗೆ ಸೃಜನಾತ್ಮಕವಾದ ಯೋಜನೆಗಳನ್ನು ಒಳಗೊಂಡ ತರಬೇತಿ ಶಿಬಿರಗಳನ್ನು ನಡೆಸುವುದರ ಬಗ್ಗೆ ಹೆಚ್ಚು ಗಮನ ಕೊಡುತ್ತಿದ್ದಾನೆ. ಸಿದ್ದಲಿಂಗಯ್ಯ, ಗಣೇಶ್ ಮತ್ತು ಇತರ ಕಾರ್ಮಿಕರು ನಮ್ಮ ಪ್ರಾರಂಭಿಕ ದಿನಗಳಲ್ಲಿ ಎದುರಾದ ಸಮಸ್ಯೆಗಳನ್ನೂ, ಅದಕ್ಕೆ ಸಂಬಂಧಿಸಿದ ಕಥೆಗಳನ್ನೂ ಜ್ಞಾಪಿಸಿಕೊಳ್ಳುತ್ತಾರೆ. ಅವರ ಜೀವನದಲ್ಲಿ ಅನೇಕ ಬದಲಾವಣೆಗಳಾಗಿವೆ. ಇಂದು ಎಲ್ಲರೂಸ್ಥಿರವಾದ ಕೆಲಸದಲ್ಲಿದ್ದಾರೆ. ಅವರ ಆರ್ಥಿಕ ಸ್ಥಿತಿ ಸುಧಾರಿಸಿದೆ. ಕೆಲವರು ಅಜ್ಜ ಅಜ್ಜಿಯರಾಗಿದ್ದಾರೆ. ಅನೇಕರು, ವಯಸ್ಸಾಗಿದ್ದರೂ ನನ್ನನ್ನು ನೋಡಲು ಬರುತ್ತಾರೆ. ಅವರಿಗೆ ನಮ್ಮ ಕೆಲಸಗಳಲ್ಲಿ ಭಾಗಿಯಾಗುವುದರಲ್ಲಿ ಉತ್ಸಾಹ.

ನಾನು ಏ.ಪಿ.ಡಿಯಲ್ಲಿ ಟ್ರಸ್ಟಿ ಪದವಿಯಿಂದ ನಿವೃತ್ತಳಾಗಿದ್ದರೂ, ನನಗೆ ಅದರ ತೋಟಗಾರಿಕೆಯಲ್ಲಿ ಕೆಲಸ ಮಾಡಲು ಆಸೆ ಇತ್ತು. ನನಗೆ ಯಾವ ಪದವಿಯೂ ಬೇಕಿರಲಿಲ್ಲ. ೨೦೦೧ ರಲ್ಲಿ, ಹದಿನೆಂಟು ವರ್ಷಗಳ ಸತತ ಪ್ರಯತ್ನದ ನಂತರ ನಾವು ಮತ್ತೊಂದು ಜಮೀನನ್ನು ಕೊಂಡುಕೊಂಡೆವು. ಸರ್ಕಾರವು ನಮಗೆ ಕ್ಯಾಲಸನಹಳ್ಳಿ ಎಂಬ ಸ್ಥಳದಲ್ಲಿ ೫ ಎಕ್ಕರೆ ಜಮೀನನ್ನು ಕೊಡುವುದಾಗಿ ತಿಳಿಸಿತು.ಆದರೆ ನಾವು ಅದನ್ನು ನಮ್ಮ ಸುಪರ್ದಿಗೆ ತೆಗೆದುಕೊಳ್ಳಲಾಗಲಿಲ್ಲ. ಅಲ್ಲಿನ ನೇತಾಗಳಿಗೂ ಮತ್ತು ರೈತರಿಗೂ ನಾವು ಆ ಜಮೀನನ್ನು ಸುಪರ್ದಿಗೆ ತೆಗೆದುಕೊಳ್ಳುವುದು ಬೇಕಾಗಿರಲಿಲ್ಲ. ಈ ಪ್ರಸ್ತಾವವು ಸರ್ಕಾರದಿಂದ ಅಲ್ಲಿನ ಜನರಿಗೆ ಮತ್ತು ಅವರಿಂದ ಸರ್ಕಾರಕ್ಕೆ ಎಂದು ಎಷ್ಟೊಸಲ ಪ್ರದಕ್ಷಿಣೆ ಮಾಡಿತು. ಅಲ್ಲಿನ ರೈತರು ಇದನ್ನು ಕೋರ್ಟಿನ ಕಟ್ಟೆ ಹತ್ತಿಸಿದರು. ನ್ಯಾಯಾಲಯವು ಈ ಜಮೀನು ಏ.ಪಿ.ಡಿ.ಗೆ ಸೇರಿದ್ದೆಂದೂ, ಸರ್ಕಾರವು ಅದನ್ನು ನಮಗೆ ೩೦ ವರ್ಷ ಗುತ್ತಿಗೆಗೆ ನೀಡಿದೆಯೆಂದೂ ಹೇಳಿತು. ಆದರೂ ಸಮಸ್ಯೆಯು ಹಾಗೆಯೇ ಉಳಿಯಿತು. ಕೊನೆಗೆ ಸರ್ಕಾರವೇ ನಮಗೆ ಮತ್ತೊಂದು ಜಮೀನನ್ನು ಇದಕ್ಕೆ ಬದಲಾಗಿ ನೀಡಿತು. ಅನಂದಾಶ್ರಮದಲ್ಲಿ ಕೆಲಸಮಾಡಿದ್ದ ಗಲ್ಗಿಯವರು ಈ ಜಮೀನನ್ನು ನಾವು ಸುಪರ್ದಿಗೆ ತೆಗೆದುಕೊಳ್ಳುವುದರಲ್ಲಿ ಬಹಳ ನೆರವಾದರು. ಇದು ಬಹಳ ಕಷ್ಟವಾದ ಕೆಲಸ ವಾಗಿತ್ತು ಮತ್ತು ಅದಕ್ಕೆ ಬಹಳ ಸಹನೆಯೂ ಬೇಕಿತ್ತು. ಇದರಲ್ಲಿ ನೆರವಾದ ಗಲ್ಗಿಯವರಿಗೆ ನಾನು ಬಹಳ ಋಣಿಯಾಗಿದ್ದೇನೆ.

ಮುಂದಿನ ಆರು ತಿಂಗಳು ನಾನು ಮತ್ತ್ಯಾವುದೋ ಕೆಲಸದಲ್ಲಿ ಮುಳುಗಿದ್ದೆ. ನಾನು ನನ್ನ ಅನೇಕ ಜವಾಬ್ದಾರಿಗಳನ್ನು ಮುಕ್ತಾಯಗೊಳಿಸಬೇಕಾಗಿತ್ತು. ಕೊನೆಗೆ ನಾನು ಆರು ತಿಂಗಳ ನಂತರ ಆ ಜಮೀನಿನ ಬಳಿ ಹೋದೆ. ಅಲ್ಲಿ ನೋಡಿದ ನೋಟ ನನ್ನನ್ನು ಅವಾಕ್ಕಾಗಿಸಿತು. ಅದೊಂದು ಹಳ್ಳ ಕೊಳ್ಳಗಳಿಂದ ತುಂಬಿದ್ದ ಬಂಜರು ನೆಲ. ಅಲ್ಲಿನ ಇಟ್ಟಿಗೆ ಮಾಡುವವರು ನೆಲದ ಮೇಲ್ಭಾಗದ ಮಣ್ಣನ್ನು ಅಗೆದು ಉಪಯೋಗಿಸಿದ್ದರಿಂದ ಹಳ್ಳಗಳಾಗಿದ್ದವು. ಸುಮಾರು ೨೦ ಅಡಿಗಳಷ್ಟು ಮೇಲ್ಭಾಗದ ಮಣ್ಣು ಇರಲಿಲ್ಲ. ಅಲ್ಲಿ ತೋಟಗಾರಿಕೆ ಹೇಗೆ ಮಾಡುವುದು ಎಂದು ನನಗೆ ತಿಳಿಯಲಿಲ್ಲ. ನಾವು ಮೊದಲಿನಿಂದ ಪ್ರಾರಂಭಿಸಿದೆವು. ಪ್ರತಿದಿನವೂ ಸ್ವಲ್ಪ ಸ್ವಲ್ಪ ಕೆಲಸವಾಗುತ್ತಿತ್ತು. ಮೊದಲಿಗೆ ಜಮೀನಿನ ಸುತ್ತಲೂ ಒಂದು ಕಲ್ಲು ಗೋಡೆಯನ್ನು ಕಟ್ಟಿಸಿದೆವು. ಹಳ್ಳಗಳನ್ನು ಮುಚ್ಚಿ ನೆಲವನ್ನು ಸಮಗೊಳಿಸಿದೆವು. ಆದರೆ ಅದು ಬಹಳ ದೊಡ್ಡ ಜಾಗವಾದ್ದರಿಂದ ಕೆಲವು ಹಳ್ಳಗಳನ್ನು ಬಿಡಬೇಕಾಯಿತು. ಮೊದಲಿಗೆ ನಮಗೆ ಈ ಸ್ಥಳದಲ್ಲಿ ಉತ್ತಮ ತೋಟಗಾರಿಕೆ ಮಾಡುವುದು ಹೇಗೆ ಎಂಬುದನ್ನು ತಿಳಿದುಕೊಳ್ಳಬೇಕಾಗಿತ್ತು, ಗಲ್ಗಿಯವರ ಸಂಬಂಧಿ, ಅರವಿಂದ್ ಎಂಬುವರು ಈ ವಿಷಯದಲ್ಲಿ

ಸಾಕಷ್ಟು ಅನುಭವಿಯಾಗಿದ್ದರು. ಅವರು ನಮ್ಮಲ್ಲಿ ನಡೆಯುತ್ತಿರುವ ಕೆಲಸವನ್ನು ಉಸ್ತುವಾರಿ ಮಾಡಿ ನಮಗೆ ಸಹಾಯ ಮಾಡಲು ಒಪ್ಪಿಕೊಂಡರು.

ನಾವು ನೀರಿಗಾಗಿ ಹುಡುಕುತ್ತಿದ್ದೆವು. ನೀರನ್ನು ಖರೀದಿಸಿ drumಗಳಲ್ಲಿ ಶೇಖರಿಸಿ ಇಡುತಿದ್ದೆವು. ನಾವು ಮೊದಲಿಗೆ ಕೆಲವು ಗಿಡಗಳನ್ನು ನೆಟ್ಟೆವು. ಬಾಬು ಮತ್ತು ರಾಜು ಎಂಬ ಇಬ್ಬರು ಹುಡುಗರು ಜೀವನ ಬೀಮಾ ನಗರದ ತೋಟದಲ್ಲಿ ತರಬೇತಿ ಪಡೆದಿದ್ದರು. ಅವರನ್ನು ನಾವು ಇಲ್ಲಿಗೆ ವರ್ಗ ಮಾಡಿದೆವು. ಅವರು ಹತ್ತಿರದಲ್ಲೇ ಇರುವ ಗುಬ್ಬಿ ಗ್ರಾಮದಲ್ಲಿ ವಾಸಮಾಡುತಿದ್ದರು, ಮತ್ತು ಅವರ ಬೇಕು ಬೇಡಗಳನ್ನು ಅರವಿಂದ ಅವರು ನೋಡಿಕೊಳ್ಳುತಿದ್ದರು. ಆ ಇಬ್ಬರು ಹುಡುಗರೂ ಆ ಬಂಜರು ಭೂಮಿಯಲ್ಲಿ ಹೆಣಗಾಡಿ, ಅಲ್ಲೊಂದು ತೋಟವನ್ನು ಮಾಡಿದ್ದು ಶ್ಲಾಘನೀಯ. ಅಲ್ಲಿ ನಾಗರ ಹಾವುಗಳೂ, ಚೇಳುಗಳೂ ಇದ್ದವು. ನಾನು ಆ ಮಕ್ಕಳಿಗೆ ಏನೂ ಆಗದಿರಲಿ ಎಂದು ಸದಾ ಪ್ರಾರ್ಥಿಸುತ್ತಿದ್ದೆ. ಈಗಲೂ ಅಲ್ಲಿ ಅನೇಕ ವಿಧವಾದ ಹಾವುಗಳು ಕಾಣಿಸಿಕೊಳ್ಳುತ್ತವೆ. ನಂತರ ಜಿಲ್ ಮೆಕ್ಜೆನ್ನಿಮೀಂಬುವಳು ಬಂದಳು. ಅವಳಿಗೆ ವಿಕಲಾಂಗರ ತೋಟಗಾರಿಕೆಯಲ್ಲಿ ಬಹಳ ಅನುಭವ. ನಾವು ನಮ್ಮ ಮೊದಲ ಆಶ್ರಯವನ್ನು ಕಟ್ಟಿದೆವು. ಇದು ನಮ್ಮ ಬಹಳ ದಿನಗಳ ಕನಸಾಗಿತ್ತು. ನಾನು ಅವಳೊಂದಿಗೆ ನಮ್ಮ ಕನಸನ್ನು ವಿಸ್ತಾರವಾಗಿ ಚರ್ಚೆಮಾಡಿ, ಅದಕ್ಕೆ ಬೇಕಾದ ನೀಲಿನಕ್ಷೆಯನ್ನು ತಯಾರಿಸಿದೆ.

ಆದರೆ ಎಲ್ಲವೂ ನಾವು ಊಹಿಸಿದಷ್ಟು ಸುಲಭವಾಗಿರಲಿಲ್ಲ. ದಕ್ಷಿಣ ಬೆಂಗಳೂರಿನಿಂದ ಒಬ್ಬ water divinerನ್ನು ಕಂಡು ಹಿಡಿದೆವು. ಆ ಹೆಂಗಸು ಬಹಳ ಚೆನ್ನಾಗಿ ನೀರಿನ ಮೂಲವನ್ನುಕಂಡು ಹಿಡಿಯುತ್ತಾಳೆ ಎಂದು ಹೇಳಿದರು. ನಾವು ಅವಳು ತೋರಿಸಿದ ಸ್ಥಳಗಳಲ್ಲೆಲ್ಲಾ ಕೊಳವೆ ಬಾವಿಯನ್ನು ಅಗೆಸಿದೆವು. ಆದರೆ ಅವುಗಳಲ್ಲಿ ಬಂದ ನೀರು ಸಾಕಾಗುತ್ತಿರಲಿಲ್ಲ. ನನಗೆ ನಮ್ಮ ಈ ಯೋಜನೆ ಕಾರ್ಯಗತವಾಗುವುದರ ಬಗ್ಗೆ ಯೋಚನೆಯು ಶುರುವಾಯಿತು. ಒಂದೆಡೆ ನೀರು ಮತ್ತು ಹಣದ ಕೊರತೆ. ಜೊತೆಗೆ, ನಾವು ಈ ಯೋಜನೆಯನ್ನು ನೋಡಿಕೊಳ್ಳುವುದಕ್ಕೆ ಬೇಕಾದ ವ್ಯಕ್ತಿಯನ್ನು ಇನ್ನೂ ಹುಡುಕಿರಲಿಲ್ಲ. ನನ್ನ ಡ್ರೈವರ್ ಜಾರ್ಜ್ ಪ್ರತಿದಿನವೂ ನನ್ನನ್ನು ಆ ಕೆಲಸ ನಡೆಯುತ್ತಿದ್ದ ಸೈಟಿಗೆ ಕರೆದುಕೊಂಡು ಹೋಗುತ್ತಿದ್ದ. ನಾನು ಕಾರಿನಲ್ಲಿ ಕೂತು ಏನು ಮಾಡಬೇಕು ಎಂದು ಯೋಚಿಸುತ್ತಿದ್ದೆ. ನನಗೆ ಮೊದಲಿಗೆ ಚಿಕ್ಕ ಪ್ರಮಾಣದಲ್ಲಿ ಪ್ರಾರಂಭಿಸಬೇಕು ಎನ್ನಿಸಿತು. ರಾಮಪ್ಪ ಎಂಬ ಒಬ್ಬನನ್ನು ಅಲ್ಲಿನ ಕಾವಲುಗಾರನಾಗಿ ನೇಮಿಸಿದೆವು. ಅವನನ್ನು ನಾನು ಮರೆಯಲಾಗುವುದಿಲ್ಲ. ಬಹಳ ಧೈರ್ಯಸ್ಥ. ಅಲ್ಲಿನ ತೆರೆದ ಆಶ್ರಯದಲ್ಲಿ ಅವನು ತನ್ನ

ಹೆಂಡತಿ ಮಕ್ಕಳೊಂದಿಗೆ ವಾಸ ಮಾಡತೊಡಗಿದನು. ಬಹಳ ಕಷ್ಟ ಪಟ್ಟು ಕೆಲಸ ಮಾಡುತ್ತಿದ್ದ, ಹಾವುಗಳು ಅವನ ಹತ್ತಿರ ಬರುವುದಿಲ್ಲ ಎನ್ನುತಿದ್ದ. ಅವನ ಬಗ್ಗೆ ಒಂದು ಪುಸ್ತಕವನ್ನೇ ಬರೆಯಬಹುದು.

ಕೆಲವು ದಿನಗಳಲ್ಲಿ ನಮಗೆ ತೋಟಗಾರಿಕೆಯ ಬಗ್ಗೆ ಓದಿ ಪದವಿ ಹೊಂದಿರುವ ಒಬ್ಬ ತರುಣಿಯು ಸಿಕ್ಕಿದಳು. ಅವಳಿಗೆ ಅಲ್ಲಿನ ವಿಶಾಲ ವಾದ ಮೈದಾನ ಮತ್ತು ಅಲ್ಲಿಗೆ ಬಸ್ಸಿನಲ್ಲಿ ಹೋಗುವುದು ಬೇಕಾಗಿರಲಿಲ್ಲ. ಆದ್ದರಿಂದ ಯಾವುದಾದರೂ ನೆಪವನ್ನು ಹುಡುಕಿ ಎ.ಪಿ.ಡಿ ಆಫೀಸಿನಲ್ಲಿ ಕಂಪ್ಯೂಟರ್ ಮುಂದೆ ಕುಳಿತು ಕೆಲಸ ಮಾಡುತಿದ್ದಳು. ಒಂದು ದಿನ ನಾನು ಅವಳನ್ನು ನನ್ನ ಕಾರಿನಲ್ಲಿ ಕರೆದು ಕೊಂಡು ಹೋದೆ. ನಾವು ಹೋಗುತ್ತಾ ಮಾತನಾಡುತಿದ್ದೆವು. ಇದ್ದಕಿದ್ದಂತೆ ಅವಳು ಹೆದರಿಕೊಂಡು ಚೀರಿದಳು ಮತ್ತು ಕಾಲಿನತ್ತ ತೋರಿಸುತ್ತಿದ್ದಳು. ಜಾರ್ಜ್ ಹೆದರಿಕೊಂಡು ಕಾರನ್ನು ನಿಲ್ಲಿಸಿದ. ನನ್ನ ಮನಸ್ಸಿನಲ್ಲಿ ಹಾವು ಬಂದು ಕಾರಿನಲ್ಲಿ ಸೇರಿಕೊಂಡಿದೆಯೇ, ಎಂಬ ಯೋಚನೆ. ಜಾರ್ಜ್ ಬಂದು ಅವಳ ಬ್ಯಾಗನ್ನು ತೆಗೆದ. ಅದರ ಮೇಲೆ ಒಂದು ದೊಡ್ಡ ಹಸಿರು ಬಣ್ಣದ ಹಲ್ಲಿ. ಅವಳು ಅವಳ ಬ್ಯಾಗನ್ನು ಹುಲ್ಲಿನಮೇಲೆ ಸ್ವಲ್ಪ ಹೊತ್ತು ಬಿಟ್ಟಿರಬೇಕು, ಆಗ ಆ ಹಲ್ಲಿ ಆ ಬ್ಯಾಗಿನೊಂದಿಗೆ ಬಂದಿದೆ. ಇಂದಿಗೂ ನನಗೆ ಆ ಜಮೀನಿನಲ್ಲಿ ಓಡಾಡುವುದೆಂದರೆ ಮನಸ್ಸು ನೆಮ್ಮದಿಯಾಗಿರುವುದಿಲ್ಲ. ಯಾವಾಗ ಯಾವ ಹಾವೋ ಹಲ್ಲಿಯೋ ಎದುರಿಗೆ ಬರುವುದೋ ಎಂಬುದೇ ಭಯ. ಅಲ್ಲಿ ಕಟ್ಟಡದ ಕೆಲಸ ನಡೆಯುತ್ತಿದ್ದಾಗ ಕೆಲಸಗಾರರು ಹಾವನ್ನು ಕಂಡರೆ ಕೊಲ್ಲುತಿದ್ದರು. ನಮಗೆ ಸ್ವಲ್ಪ ನೆಮ್ಮದಿ, ಇನ್ನು ಹಾವುಗಳು ಬರುವುದಿಲ್ಲ ಎಂದು. ಆದರೆ ಮನಸ್ಸಿನಲ್ಲಿ ಪಾಪ ಪ್ರಜ್ಞೆ ಕೂಡ, ಯಾಕೆಂದರೆ ನಾವು ಆ ಪ್ರಾಣಿಗಳ ನೆಲೆಯನ್ನು ಆಕ್ರಮಿಸಿಕೊಂಡು ಅವಕ್ಕೆ ಪ್ರಾಣಹಾನಿಯ ಕಾರಣವಾಗಿದ್ದೇವೆ ಎಂದು. ಈಗ ನಮ್ಮ ತೋಟಗಾರರಿಗೆ ಹೇಗೆ ನಾವಿಬ್ಬರೂ ಸಹಬಾಳ್ವೆಯನ್ನು ನಡೆಸಬಹುದು ಎಂಬುದು ತಿಳಿದಿದೆ. ಆದ್ದರಿಂದ ಅವುಗಳನ್ನು ಕೊಲ್ಲುವುದಿಲ್ಲ.

ಕೊನೆಗೆ ನಾವು ಅಲ್ಲಿನ ಕೆಲಸದ ಮೊದಲನೆಯ ಹಂತವನ್ನು ಮುಗಿಸಿದೆವು. ಮಳೆಗಾಲದಲ್ಲಿ ಅಲ್ಲಿನ ಓಡಾಡುವ ಹಾದಿಯಲ್ಲಿ ನೀರಿನಿಂದಾಗಿ ಕೊಚ್ಚೆಯಾಗುತ್ತಿದ್ದರಿಂದ ನಾವು ಅವನ್ನು ಸಿಮೆಂಟು ಹಾಕಿ ಸರಿಪಡಿಸಿದೆವು. ಗಿಡ ಮರಗಳನ್ನು ನೆಟ್ಟು, ಗಿಡಗಳನ್ನು ಬಿಸಿಲಿನಿಂದ ಕಾಪಾಡಲು ಚಪ್ಪರಗಳನ್ನು ಕಟ್ಟಿಸಿದೆವು. ನಾವು ಅಲ್ಲಿ ಒಂದು ಪುಟ್ಟ ಕೋಣೆ ಮತ್ತು ಅದಕ್ಕೆ ಒಂದು ಪುಟ್ಟ ಅಡುಗೆಯ ಮನೆಯನ್ನೂ, ಟಾಯ್ಲೆಟ್ಟನ್ನೂ ಕಟ್ಟಿಸಿದೆವು. ನಮ್ಮಲ್ಲಿ ಕೆಲಸ ಮಾಡುತ್ತಿದ್ದವರಿಗೆ ಮನೆಯಿಂದ ಊಟವನ್ನು ತರುವುದು ಕಷ್ಟವಾಗುತ್ತಿತ್ತು. ಆದ್ದರಿಂದ

ನಾವು ಇಲ್ಲಿ ಅಡುಗೆ ಮಾಡಲು ಪ್ರಾರಂಭಿಸಿದೆವು. ಇದು ಬಹಳ ಆಕರ್ಷಕ ಮತ್ತು ಕುತೂಹಲಕಾರಿಯಾಗಿತ್ತು.

ಎ.ಪಿ.ಡಿಯ ಬೇರೆ ಬೇರೆ ಕಾರ್ಯಕ್ರಮಗಳಿಗೆ ನಾವು ಚಂದಾಎತ್ತಿ ಹಣವನ್ನು ಶೇಖರಿಸುತ್ತಿದ್ದೆವು. ಅನೇಕ ಉದಾರಿ ದಾನಿಗಳು ತೆರೆದ ಮನಸ್ಸಿನಿಂದ ದೇಣಿಗೆಯನ್ನು ಕೊಡುತಿದ್ದರು. ನಾವು ಅಲ್ಲಿ ೪೦ಜನ ಕೆಲಸಗಾರರು ಅಥವಾ ತರಬೇತಿ ಪಡೆಯುವವರು ತಂಗಲು ಸಾಧ್ಯವಾಗುವಂತೆ ಒಂದು dormitory ಯನ್ನು ಕಟ್ಟಿದೆವು. ಇದು ಉಪಯುಕ್ತವಾಗಿರಬೇಕು ಜೊತೆಗೆ ಅಂದ ಚಂದವಾಗಿಯೂ ಇರಬೇಕು ಎಂಬುದು ನಮ್ಮ ಆಶಯವಾಗಿತ್ತು. ಅದೃಷ್ಟವಶಾತ್ ನಮಗೆ ಕೇರಳದ ಒಬ್ಬರು ಸಿಕ್ಕಿದರು. ಅವರು ಅಲ್ಲಿನ ದೇಸಿ ಶೈಲಿಯಲ್ಲಿ ಇದರ ವಿನ್ಯಾಸವನ್ನು ಮಾಡಿದರು. ಗಾಳಿ ಬೆಳಕು ಚೆನ್ನಾಗಿ ಬರುವಂತೆ ವಿನ್ಯಾಸ ಮಾಡಿದ್ದರು. ಇದನ್ನು ಕಟ್ಟಲು ಸುಮಾರು ಒಂದೂವರೆ ವರ್ಷಗಳು ಹಿಡಿಯಿತು. Dormitory ನಮಗೆ ಬಹಳ ಮುಖ್ಯವಾಗಿತ್ತು, ಏಕೆಂದರೆ ನಮ್ಮಲ್ಲಿ ತರಬೇತಿಗೆ ಬರುವವರು ಆ ಹಳ್ಳಿಗಾಡಿನಲ್ಲಿಯೇ ತಂಗಬೇಕಾಗಿತ್ತು. ಅವರು ಬೇರೆ ಸ್ಥಳಗಳಲ್ಲಿ ತಂಗಿದರೆ ಅವರು ಸಂಜೆ ೬ರ ನಂತರ ಏನು ಮಾಡುತ್ತಾರೆ ಎಂಬುದು ನಮಗೆ ತಿಳಿಯುತ್ತಿರಲಿಲ್ಲ. ಅದೂ ಅಲ್ಲದೆ ಆ ಸ್ಥಳದ ಸುತ್ತ ಮುತ್ತ ಬಹಳ ಭಿಡುಟಜ ನಡೆಯುತ್ತಿತ್ತು.

ನಾವು ಹತ್ತು ತಿಂಗಳಿನ ತರಬೇತಿ ಕಾರ್ಯಕ್ರಮವನ್ನು ಮಾಡಲು ಯೋಚಿಸಿದೆವು. ತೋಟವನ್ನು ಬೇರೆ ಬೇರೆ ಭಾಗಗಳಾಗಿ ವಿಂಗಡಿಸಿ, ಪ್ರತಿಯೊಂದು ಭಾಗಕ್ಕೂ ಇಬ್ಬರು ಕೆಲಸಗಾರರನ್ನೂ ಮತ್ತು ಅವರಿಗೆ ಸಹಾಯ ಮಾಡಲು ಕೆಲವರು trainee ಗಳನ್ನೂ ನೇಮಿಸಿದೆವು. ಇದರಿಂದ ಅವರಿಗೆ ಅನುಭವವು ದೊರಕುವಂತೆ ಆಗುತ್ತದೆ. trainee ಗಳನ್ನು ಬೇರೆ ಬೇರೆ ಭಾಗಗಳಿಗೆ ವರ್ಗಾಯಿಸುವುದರಿಂದ ಅವರಿಗೆ ತೋಟಗಾರಿಕೆಯಬಗ್ಗೆ ಒಂದು ಸಮಗ್ರ ಅನುಭವ ಸಿಗುತ್ತದೆ. ಈ trainee ಗಳೂ ಮತ್ತು ನಮ್ಮ ಕೆಲಸಗಾರರೂ ಅಲ್ಲೇ ತಂಗಿರುತ್ತಿದ್ದರಿಂದ ಅವರು ಸರದಿಯ ಪ್ರಕಾರ ಅಲ್ಲಿನ ಅಡಿಗೆ, ಇತರ ಕೆಲಸಗಳನ್ನು ಹಂಚಿಕೊಂಡು ಮಾಡುತಿದ್ದರು. ಗಂಡು ಹುಡುಗರು ಸಾಮಾನ್ಯವಾಗಿ ಅಡಿಗೆ, ಗುಡಿಸಿ ಸಾರಿಸುವುದು, ಬಟ್ಟೆ ಒಗೆಯುವುದು ಇತ್ಯಾದಿ ಕೆಲಸಗಳನ್ನು ಮಾಡುವುದಿಲ್ಲ. ಇವೆಲ್ಲಾ ಹೆಂಗಸರ ಕೆಲಸಗಳು ಎಂಬ ಭಾವನೆ ಅನೇಕರಲ್ಲಿದೆ. ಆದರೆ, ಈ ತರಬೇತಿಯ ನಂತರ ಈ ಹುಡುಗರಲ್ಲಿ ಒಂದು ಬದಲಾವಣೆಯನ್ನು ಕಾಣಬಹುದಿತ್ತು. ಅವರಿಗೆ ತಮ್ಮ ತಮ್ಮ ಮನೆಗಳಲ್ಲಿಅಮ್ಮಂದಿರು ಮತ್ತು ಅಕ್ಕ ತಂಗಿಯರು ಮಾಡುವ ಕೆಲಸದ ಬಗ್ಗೆ ಗೌರವ

ಹೆಚ್ಚಿತು ಮತ್ತು ಅವರು ತಾವೂ ಈ ಕೆಲಸಗಳಲ್ಲಿ ಅವರಿಗೆ ಸಹಾಯ ಮಾಡಲು ಮುಂದಾದರು. ಅವರುಗಳು ಸ್ವಾಸ್ಥ್ಯದ ಬಗ್ಗೆ ಮಾತನಾಡುವುದನ್ನು ಕೇಳಿದರೆ ಆಶ್ಚರ್ಯವಾಗುತಿತ್ತು.

ಕಕ್ಕಸನ್ನು ತೊಳೆಯುವುದು ಎಂದರೆ ನಮ್ಮ ಕೆಲಸದವರಿಗೂ ಮುಜುಗರವಾಗುತಿತ್ತು. ನನಗೆ ಮಹಾತ್ಮ ಗಾಂಧಿಯ ನೆನಪಾಯಿತು. ದಕ್ಷಿಣ ಆಫ್ರಿಕಾದಿಂದ ಹಿಂದಿರುಗಿದ ಮೇಲೆ ಗಾಂಧಿಗೆ ಅನೇಕ ಹಿರಿಯ ನೇತಾರರೊಂದಿಗೆ ಒಡನಾಟವಿತ್ತು. ಅವರ ಸಭೆಗಳು ಸುಂದರವಾದ ಉದ್ಯಾನದಲ್ಲಿರಲಿ ಅಥವಾ ದೊಡ್ಡ ದೊಡ್ಡ ಮಹಲುಗಳಲ್ಲಿರಲಿ, ಗಾಂಧಿಯವರು ಯಾವ ರೀತಿಯ ಹಿಂಜರಿಕೆಯೂ ಇಲ್ಲದೆ ಸ್ವತಃ ಕಕ್ಕಸನ್ನು ತೊಳೆಯುತ್ತಿದ್ದರು. ಅವರಿಗೆ ಕಕ್ಕಸನ್ನು ತೊಳೆಯುತ್ತಿದ್ದ ಜನರನ್ನು ಸಮಾಜದಲ್ಲಿ ಬೇರೆಯಾಗಿರಿಸುವುದು ಸರಿದೋರಲಿಲ್ಲ. ಆದರೆ, ನಮ್ಮಲ್ಲಿ ಈ ರೀತಿಯಾದ ಭಾವನೆಗಳು ಕಳೆದ ೭೦, ೮೦ ವರ್ಷಗಳಲ್ಲಿ ಬದಲಾಗಿಯೇ ಇಲ್ಲ. ಸಾಮಾಜಿಕ ಪ್ರಜ್ಞೆ ಮತ್ತು ಸ್ವಾಸ್ಥ್ಯ ಪ್ರಜ್ಞೆ ಇಂದಿಗೂ ನಮ್ಮಲ್ಲಿ ದೊಡ್ಡ ಸಮಸ್ಯೆಯಾಗಿಯೇ ಉಳಿದಿದೆ. ವಿಕಲಾಂಗರಿಗೆ ಇದು ಇನ್ನೂ ದೊಡ್ಡ ಸಮಸ್ಯೆಯಾಗಿದೆ.

ಕೆಲವು ದಿನಗಳ ನಂತರ ಯಶೋಧರಾ ಪಾಟೀಲ್ ಎಂಬ ಯುವತಿಯನ್ನು ನಾವು ಕೆಲಸಕ್ಕೆ ನೇಮಿಸಿದೆವು. ಅವಳು ಆರು ವರ್ಷಗಳ ಕಾಲ ನನ್ನೊಡನೆಯೇ, ನಮ್ಮ ಮನೆಯಲ್ಲೇ ಇದ್ದಳು. ಅವಳು ಜೊತೆಯಲ್ಲಿರುವುದು ನನಗೆ ನಮ್ಮ ತೋಟದಲ್ಲಿ ಅನೇಕ ಕೆಲಸಗಳನ್ನು ಕೈಗೊಳ್ಳಲು ಸಹಾಯವಾಯಿತು. ಈಗ ಅವಳು ಬೇರೆಯಾಗಿ ಇದ್ದಾಳೆ. ನಾವು ನಮ್ಮ campus ನಲ್ಲಿ ಹೊಸ ಹೊಸ ಚಟುವಟಿಕೆಗಳನ್ನು ನಡೆಸುತ್ತಿದ್ದೇವೆ. ನಾವು learning difficulties ಮತ್ತು mentally challenged ಯುವಕರಿಗೆ ತೋಟಗಾರಿಕೆ ಮತ್ತು ಬೇರೆ ಸೂಕ್ತ ಜೀವನೋಪಾಯ ಕಲಿಸಲು ಪ್ರಯತ್ನಿಸುತ್ತಿದ್ದೇವೆ. ಆದರೆ ಮೊದಲಿಗೆ ನಾವು ಹೊರ ಜಗತ್ತಿಗೆ, ವಿಕಲಾಂಗರ ಬೇಡಿಕೆಗಳನ್ನು ಪರಿಗಣಿಸುವ ಸೂಕ್ಷ್ಮತೆಯನ್ನು ಅವರಲ್ಲಿ ಬೆಳೆಸಬೇಕು. ಎ.ಪಿ.ಡಿಯಿಂದ ಹೊರಬಂದವರಲ್ಲಿ ಒಬ್ಬರು ಈ ನಮ್ಮ ಕನಸನ್ನು ನನಸಾಗಿಸುವರೆಂದು ನಾನು ಆಶಿಸುತ್ತೇನೆ.

ನಾನು ಕ್ಯಾಲಸನಹಳ್ಳಿಯಲ್ಲಿ ಹನ್ನೆರಡು ವರ್ಷಗಳು ಕೆಲಸ ಮಾಡಿದೆ. ನಂತರ ನನ್ನ ಜವಾಬ್ದಾರಿಗಳನೆಲ್ಲಾ ಒಂದೊಂದಾಗಿ ಇತರರಿಗೆ ಒಪ್ಪಿಸಿದೆ. ನನಗೆ ಆ ಜಾಗ ಮತ್ತು ಅಲ್ಲಿನ ಕೆಲಸಗಾರರು ಮತ್ತು ಟ್ರೈನಿಗಳು ಬಹಳ ಪ್ರಿಯವಾದವರು. ಅಲ್ಲಿನ ಬೆಳವಣಿಗೆ ನನ್ನನ್ನು ಯಾವಾಗಲೂ ಆಶ್ಚರ್ಯಗೊಳಿಸುತ್ತಿತ್ತು. ಅಲ್ಲಿನ ಸುಮಾರಾದ ಮಣ್ಣಿನಲ್ಲೂ ಮರಗಳು ಒಳ್ಳೆಯ ಹಣ್ಣುಗಳನ್ನು ಕೊಟ್ಟವು. ಈಗ ನಾನು ಅಲ್ಲಿಗೆ ಹೋದಾಗಲೆಲ್ಲಾ ಅಲ್ಲಿನ ಪ್ರತಿಯೊಂದು

ಸ್ಥಳದಲ್ಲಿಯೂ ನಾವು ಮಾಡಿದ ಕೆಲಸಗಳು ಜ್ಞಾಪಕಕ್ಕೆ ಬರುತ್ತವೆ. ಈ ಸ್ಥಳವು ಬೆಳೆಯುತ್ತಿದ್ದಾಗ ನಾನು ಅದರ ಮುಖಿವಾಗಿದ್ದೆ, ನಾನು ಅಲ್ಲಿನ ಕೆಲಸಗಳಿಗೆ ಯಾವ ಯಶಸ್ಸನ್ನೂ ನನ್ನದಾಗಿ ಹೇಳಿಕೊಳ್ಳಲಿಲ್ಲ. ಅಲ್ಲಿನ ನಮ್ಮ ವಿಕಲಾಂಗ ಯುವ ಕೆಲಸಗಾರರು ಇಂದಿಗೂ ಬಹಳ ಶ್ರದ್ಧೆಯಿಂದ ಕೆಲಸ ಮಾಡುತಿದ್ದಾರೆ. ನನಗೆ ಅವರ ಬಗ್ಗೆ ಬಹಳ ಹೆಮ್ಮೆಯಿದೆ.ನಮ್ಮ ಆಡಳಿತ ಮಂಡಳಿಯು ನಮ್ಮ ಪ್ರಯತ್ನಗಳಿಗೆ ಬಹಳ ಪ್ರೋತ್ಸಾಹವನ್ನು ಕೊಟ್ಟು ನಮ್ಮಜೊತೆ ಪ್ರತಿ ಹೆಜ್ಜೆಯಲ್ಲೂ ಕಂಭದಂತೆ ಧೃಡವಾಗಿ ನಿಂತರು. ಅಲ್ಲಿ ಇನ್ನೂ ಮಾಡಬೇಕಾದ ಕೆಲಸಗಳು ಬಹಳ ಇವೆ.

ಈಗ ನಾವು ಅಲ್ಲಿ ಯುವಕರನ್ನು ಐದು ವರ್ಷಗಳ ತರಬೇತಿ ಕೊಟ್ಟು ತೋಟಗಾರಿಕೆಯಲ್ಲಿ ತಯಾರಿ ಮಾಡುತಿದ್ದೇವೆ. ಅವರು ಈ ಅವಧಿ ದಾಟಿದ ನಂತರ ಹೊರ ಜಗತ್ತಿನಲ್ಲಿ ತೋಟಗಾರರಾಗಿ ಕೆಲಸಮಾಡಿ ತಮ್ಮ ಜೀವನೋಪಾಯವನ್ನು ಮಾಡಿಕೊಳ್ಳಬಹುದು. ಆದರೆ ಇಂದು ಈ ರೀತಿಯ ತರಬೇತಿಯು ಯುವಕರನ್ನು ಆಕರ್ಷಿಸುತಿಲ್ಲ. ಅವರಿಗೆ ಯಾವುದರಲ್ಲಿಯೂ ಆಸಕ್ತಿ ಇಲ್ಲ. ಸುಮ್ಮನೆ ಮನೆಯಲ್ಲಿ ಕುಳಿತು ಯಾವುದಾದರೂ ಸಹಾಯ ನಿಧಿಯಿಂದ ಹಣವನ್ನು ತೆಗೆದುಕೊಂಡರೆ ಸಾಕು. ಪ್ರಾಯಶಃ ಹೆಚ್ಚು ಹೆಚ್ಚು ಯುವಕರು ಶಾಲೆಗೆ ಹೋಗಿ ಹತ್ತನೇ ತರಗತಿ ಅಥವಾ ಪಿ.ಯೂ.ಸಿ ಪಾಸ್ ಮಾಡಿರುವುದರಿಂದ ಅವರಿಗೆ ಇತರ ಕ್ಷೇತ್ರಗಳ ಬಗ್ಗೆಯೂ ಆಸಕ್ತಿ ಇರಬಹುದು. ಆದರೆ ನನಗೆ ಈ ತೋಟಗಾರಿಕೆಯ ಪ್ರಪಂಚದಲ್ಲಿ ಮುಗಿಲೆತ್ತರದ ಅವಕಾಶಗಳು ಇವೆ ಎಂದು ನಂಬಿಕೆ. ವಿಕಲಾಂಗತೆಯ ಆಧಾರದ ಮೇಲೆ ಇನ್ನೂ ಹೆಚ್ಚಿನ ವಿಶೇಷವಾದ ತರಬೇತಿಯನ್ನು ಇವರಿಗೆ ನಾವು ಕೊಡಬೇಕಾಗುತ್ತದೆ. ಬಹುಷಃ ಈ ರೀತಿಯ ತರಬೇತಿಯ ಬಗ್ಗೆ ಯೋಚಿಸಿ ಅದರ ರೂಪರೇಷೆಯನ್ನು ತಯಾರಿಸಲು ಒಂದು ವಿಶ್ವವಿದ್ಯಾಲಯವು ಸಂಶೋಧನೆ ನಡೆಸಬೇಕಾಗುತ್ತದೆಯೇನೋ.

ಮಹಿಳೆಯರನ್ನು ಈ ನಿಟ್ಟಿನಲ್ಲಿ ಮುಂಚೂಣಿಗೆ ತರಲು ಏ.ಪಿ.ಡಿ ಈ ತರಬೇತಿಯಲ್ಲಿ ಅಡಿಗೆಮಾಡುವ ಕಲೆಯನ್ನೂ ಸೇರಿಸಲು ಪ್ರಯತ್ನಿಸಿತ್ತು. ಇದು ಯಶಸ್ವಿಯಾದರೆ ಅನೇಕ ವಿಕಲಾಂಗ ಮಹಿಳೆಯರಿಗೆ ನೆರವಾಗುತ್ತದೆ. ನನಗೆ ಮಹಿಳೆಯರಿಗೆ ಸ್ವಾಭಾವಿಕವಾಗಿ ಇರುವ ಪ್ರೀತಿ, ವಾತ್ಸಲ್ಯ ಮತ್ತು ಅಕ್ಕರೆ ಅವರಿಗೆ ತೋಟಗಾರಿಕೆ ಮೂಲಕ ಹೊರಭಬಂದು ನೆರವಾಗುತ್ತದೆ ಎಂಬ ನಂಬಿಕೆ ಇತ್ತು. ನಾವು ಮಹಿಳೆಯರಿಗಾಗಿ ಜೀವನ ಬೀಮಾ ನಗರದಲ್ಲಿ ಪ್ರಾರಂಭಿಸಿದ ತೋಟ ಗಾರಿಕೆ ಪೂರ್ಣ ಪ್ರಮಾಣದಲ್ಲಿ ಕೆಲಸ ಮಾಡಲು ಎರಡು ವರ್ಷಗಳು ಹಿಡಿಸಿದವು. ಅಲ್ಲಿ ನಾವು ಒಂದು dormitory, ಒಂದು diningroom,

ಒಂದು ಅಡಿಗೆಯ ಮನೆ ಯನ್ನು ಕಲ್ಪಿಸಿದ್ದೆವು. ವೃತ್ತಿ ಪರ ಅಡುಗೆಯವರು ಬಂದು ಈ ಮಹಿಳೆಯರಿಗೆ ಅಡುಗೆಯನ್ನು ಕಲಿಸುತ್ತಿದ್ದರು. ನಾವು ಈ ಮಹಿಳೆಯರನ್ನು ಇಲ್ಲಿ ಉತ್ತಮ ತರಬೇತಿ ನೀಡುವುದಾಗಿ ಹೇಳಿ ಕರೆತಂದಿದ್ದೆವು. ಅವರಿಗೆ ಹೊಸ ಹೊಸ ವೃತ್ತಿಗಳಲ್ಲಿ ತರಬೇತಿ ಕೊಟ್ಟು, ಅವರನ್ನು ಸ್ವಾವಲಂಬಿಗಳನ್ನಾಗಿ ಮಾಡುವುದು ಮತ್ತು ಅವರಲ್ಲಿ ಆತ್ಮವಿಶಾಸವನ್ನು ಹೆಚ್ಚಿಸುವುದೂ ನಮ್ಮ ಧ್ಯೇಯವಾಗಿತ್ತು.

ಕೆಲವು ವರ್ಷಗಳಹಿಂದೆ ಮಾರಿಷಸ್ ನಿಂದ ಬಂದ ಪಾಲ್ ಡ್ರಾಪರ್ ಎಂಬ ಒಬ್ಬ ಇಂಗ್ಲೀಷ್ ನವನು ನಮ್ಮನ್ನು ಕಾಣಲು ಎ.ಪಿ.ಡಿ ಗೆ ಬಂದನು. ಅವನು ವಿಕಲಾಂಗರಿಗೆ ಜೀವನೋಪಾಯ ಕಲ್ಪಿಸುವುದರ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿದ್ದನು. ಅವನು ಹಲವು ವರ್ಷಗಳಹಿಂದೆ ಒಬ್ಬ ಜೇನು ಪಾಲಕನನ್ನು ಭೇಟಿಯಾಗಿದ್ದನೆಂದು ಹೇಳಿದನು. ಜೇನು ಪಾಲಕನೂ ವೈನ್ ಟೇಸ್ಟರ್ ನಂತೆ. ಅವನ ಕೆಲಸವು ಜೇನನ್ನು ಸವಿ ನೋಡಿ ಅದರ ಮೌಲ್ಯವನ್ನು ಕಟ್ಟುವುದು. ಪಾಲ್ ಆ ಜೇನು ಪಾಲಕನನ್ನು ಮಾರಿಷಸ್‌ಗೆ ಮರಳಿ ಬಂದು ಇತರರಿಗೆ ಈ ವಿದ್ಯೆಯನ್ನು ಕಲಿಸುವಂತೆ ಕೇಳಿಕೊಂಡನು. ಇದನ್ನು ವಿಕಲಾಂಗರಿಗೆ ಸೂಕ್ತವಾಗುವಂತೆ ಅವನು ಕಳೆದ ಹತ್ತು ವರ್ಷಗಳಿಂದ ಶ್ರಮ ವಹಿಸಿ ಬೆಳೆಸಿದ್ದನು. ಈ ವಿಕಲಾಂಗರ ಗುಂಪು ಬೆಳೆಸಿದ ಜೇನು ಲಂಡನ್ನಿನಲ್ಲಿ ಏರ್ಪಡಿಸಿದ್ದ ಅಂತರಾಷ್ಟ್ರೀಯ ಸ್ಪರ್ಧೆಯಲ್ಲಿ ಬೆಳ್ಳಿಯ ಬಹುಮಾನವನ್ನು ಪಡೆಯಿತು. ಇದರಿಂದ ಆ ಕಾರ್ಮಿಕರಿಗೆ ಅತ್ಯಲ್ಪ ಹೂಡಿಕೆಯಲ್ಲಿ ಹೆಚ್ಚಾದ ಆದಾಯ ಸಿಗುವಂತಾಯಿತು. ನನಗೆ ಇದನ್ನು ನಮ್ಮ ಕೇಂದ್ರದಲ್ಲಿ ಪ್ರಯೋಗ ಮಾಡಿ ನೋಡಬೇಕೆಂದು ಅನಿಸಿತು. ಪಾಲ್ ಕೆಲವು ಮರದ ಡಬ್ಬಗಳನ್ನು ತರಸಿ ಅವನ್ನು ನಮ್ಮ ಕಾಂಪೌಂಡಿನಲ್ಲಿ ಅನೇಕ ಸ್ಥಳಗಳಲ್ಲಿ ಇರಿಸಿದನು. ಬೆಳಗಾಗಿ ಎದ್ದು ನಾವುನಮ್ಮ ಮನೆಯಲ್ಲಿ ದೀಪವನ್ನು ಹಚ್ಚಿದರೆ ಜೇನು ನೊಣಗಳು ಮನೆಯೊಳಗೆ ಸೇರಿಕೊಳ್ಳುತಿದ್ದವು. ನಮ್ಮ ಅಮ್ಮನನ್ನು ಎಷ್ಟೊಸಲ ಅವು ಕಚ್ಚಿಯೂ ಇದ್ದವು. ಅವನು ನನಗೆ ಜೇನು ಹುಳುಗಳನ್ನು ಸಾಕುವುದನ್ನು ಕಲಿಸಬೇಕೆಂದಿದ್ದ. ನನಗೆ ನಮ್ಮ ಜೀವನಬಿಮಾ ನಗರದ ತೋಟದಲ್ಲಿ ಜೇನುಗಳನ್ನು ಸಾಕಬೇಕು ಎಂದಿತ್ತು. ಅದಕ್ಕೋಸ್ಕರ ಮರದ ಪೆಟ್ಟಿಗೆಗಳನ್ನೂ ಮಾಡಿಸಿ, ಸಿದ್ದಲಿಂಗನನ್ನೂ ತರಬೇತಿಗೆ ಕಳುಹಿಸಿದ್ದೆ. ಆದರೆ ಜೇನು ಬೆಳೆಸಲು ಬಹಳ ದೊಡ್ಡದಾದ ಸಂಕಲ್ಪ ಬೇಕು. ಬಹುಷಃ ನಾವು ಇದನ್ನು ಕ್ಯಾಲಸನಹಳ್ಳಿಯಲ್ಲಿ ಪ್ರಯತ್ನಿಸ ಬಹುದೇನೊ. ವಿಕಲಾಂಗರ ಸೇವೆಗೆ ಮೀಸಲಾಗಿರುವ ಸಂಸ್ಥೆಯುತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳಲು ನಿರಂತರವಾಗಿ ಹೊಸ ಹೊಸ ದಾರಿಗಳನ್ನು ಹುಡುಕಿ, ಪ್ರಯತ್ನಿಸುತ್ತಿರಬೇಕು. ಅದಕ್ಕೆ ಒಂದು ವಿಶಾಲವಾದ ದೃಷ್ಟಿ, ಬೇಸರವಿಲ್ಲದೆ ಕೆಲಸ ಮಾಡುವ ಶ್ರದ್ಧೆ ಇರುವ ಕಾರ್ಯಕರ್ತರುಬೇಕು.

# ಒಳಗಿನ ಪಯಣ

೯೦ರ ದಶಕದ ಪೂರ್ವಾರ್ಧದಲ್ಲಿ ನಾನು ಎ.ಪಿ.ಡಿ ಯ ಹೊಸದಾದ ವರ್ಕ್‌ಷಾಪ್ ಪ್ರಾರಂಭಿಸಿ ಅದರ ತಾಪತ್ರಯಗಳೊಡನೆ ನನ್ನಮೇಲೆ ಹೊರಸಿದ ಅಪವಾದಗಳಜೊತೆ ಹೆಣಗಾಡುತಿದ್ದಾಗ, ಒಂದು ಹೆಜ್ಜೆ ಹಿಂದಕ್ಕೆ ಹೋಗಿ ನಿಜ ಪರಿಸ್ಥಿತಿ ಏನು ಎಂದು ನೋಡಿದೆ. ಆಗ ನನಗೆ ನಾನು ನನ್ನ ಚಟುವಟಿಕೆಗಳಿಗೆ ಸ್ವಲ್ಪ ವಿರಾಮ ಕೊಟ್ಟು ನಾನು ಮಾಡುತ್ತಿರುವುದನ್ನು ಸ್ವಲ್ಪ ದೂರದಿಂದ ನೋಡಬೇಕು ಎನಿಸಿತು. ಕೆಲವರು ನನಗೆ ಎಲ್ಲಾ ಉತ್ತಮ ವಸ್ತುಗಳೂ ಸಿಕ್ಕಿವೆ, ನಾನು ಎಲ್ಲಾ ಹಣವನ್ನೂ ಉಪಯೋಗಿಸಿಕೊಂಡು ಸಂಸ್ಥೆಯನ್ನು ನನ್ನದಾಗಿಸಿಕೊಳ್ಳಲು ಪ್ರಯತ್ನಿಸುತ್ತಿದ್ದೇನೆ ಎನ್ನುತ್ತಿದ್ದರು. ಇದು ನಿಜವೇ? ನಾನು ಅಂತಃ ವ್ಯಕ್ತಿಯೇ? ಎಂದು ನನ್ನನ್ನು ನಾನೇ ಪ್ರಶ್ನಿಸಿಕೊಳ್ಳಬೇಕಾದ ಸಮಯವು ಬಂದಿತ್ತು.

ಕಳೆದ ಒಂದು ದಶಕದಲ್ಲಿ ನಾನು ಬಹಳ ಆತ್ಮಾವಲೋಕನವನ್ನು ಮಾಡಿದ್ದೇನೆ. ಎ.ಪಿ.ಡಿ ಯೊಡನೆ ನನ್ನ ಸಂಬಂಧ ಅನೇಕ ವರ್ಷಗಳದ್ದು. ಕೆಲವರಿಗೆ ನಾನು ಸರ್ವಾಧಿಕಾರಿಯಾಗಿ ತೋರಿರ ಬಹುದು. ಆದರೆ ನಾನು ಆ ರೀತಿ ಇಲ್ಲ. ನಾನು ವಿಷಯಗಳನ್ನು ಖಚಿತವಾಗಿಯೂ ಕಡ್ಡಾಯವಾಗಿಯೂ ಹೇಳುತ್ತೇನೆ. ಅದರಲ್ಲಿ ಯಾವ ಮುಚ್ಚು ಮರೆಯೂ ಇಲ್ಲ. ಆದರೆ ನಾನು ಸ್ವಭಾವತಃ ಬಹಳ ಸಂಕೋಚದವಳು. ನಾನು ಇತರರನ್ನು ಮುಂದೆ ಬಿಟ್ಟು, ಹಿನ್ನೆಲೆಯಲ್ಲಿ ಉಳಿಯಲು ಇಷ್ಟ ಪಡುತ್ತೇನೆ. ನನ್ನನ್ನು ಇತರ ಮ್ಯಾನೇಜರ್‌ಗಳು ಮತ್ತು ಆಡಳಿತ ಮಂಡಳಿಯ ಸದಸ್ಯರೊಡನೆ ಮುಂದೆ ದೂಡಿದಾಗ ನಾನು ಬಹಳ ಹಿಂಜರಿಕೆಯೊಡನೆಯೇ ಹೋದೆ. ನನಗೆ ನನ್ನನ್ನು ಎ.ಪಿ.ಡಿ ಇಂದ ಬೇರ್ಪಡಿಸಿ ಆತ್ಮಾವಲೋಕನ ಮಾಡಿಕೊಳ್ಳಬೇಕಾದ ಆವಶ್ಯಕತೆ ಇತ್ತು. ಈ ಗಲಾಟೆಗಳೆಲ್ಲಾ ನಡೆದಾಗ ನನಗೆ ಸಂಸ್ಥೆಯನ್ನು ಅನರ್ಹರ ಕೈಗೆ ಒಪ್ಪಿಸುವುದು ಸರಿದೊರಲಿಲ್ಲ. ವಿಕಲಾಂಗರ ಬಗ್ಗೆ ಏನೂ ತಿಳಿಯದ ಮತ್ತು ಸಂಸ್ಥೆಯ ಮೌಲ್ಯಗಳನ್ನು ಅರಿಯದ ಜನರ ಕೈಗೆ ಸಂಸ್ಥೆಯು ಹೋದರೆ, ಅದನ್ನು ಬೆಳೆಸುವುದ ಬದಲು ಅದಕ್ಕೆ ಹಾನಿಯೇ ಅಗುವುದು ಎಂಬ ನಂಬಿಕೆ ನನಗಿತ್ತು. ಅವರು ಸಂಸ್ಥೆಯ ಹಣವನ್ನು ಪೋಲು ಮಾಡದೆ ಉಪಯೋಗಿಸುವರೆಂದು ಖಾತ್ರಿ ಪಡಿಸಿಕೊಳ್ಳಬೇಕಿತ್ತು.

ನನಗೆ ಸರಿಯಾದ ಸಮಯ ಬಂದಾಗ ಎಲ್ಲವೂ ಸರಿಹೋಗುವುದು ಎಂಬ ನಂಬಿಕೆ ಇತ್ತು. ಆದರೆ, ಆ ಸಮಯವನ್ನು ಗುರುತಿಸಿ, ಸೂಕ್ತ ವ್ಯಕ್ತಿಗೆ ಜವಾಬ್ದಾರಿಗಳನ್ನು ಒಪ್ಪಿಸಿ

ನಾನು ನಿವೃತ್ತಳಾಗಬೇಕು. ಆರೇಳು ವರ್ಷಗಳು ಆ ಸಂಸ್ಥೆಯ ಅಧ್ಯಕ್ಷಳಾಗಿದ್ದ ಬಳಿಕ ನನಗೆ ಸಂಸ್ಥೆಯು ಚೆನ್ನಾಗಿ ನಡೆಯುತ್ತಿದೆ ಎಂಬುದು ಖಾತ್ರಿಯಾಗಿತ್ತು. ಅದರ ಆರ್ಥಿಕ ವ್ಯವಸ್ಥೆ ಸರಿಯಾಗಿತ್ತು, ಆಡಳಿತ ಮಂಡಳಿಯು ಒಳ್ಳೆಯ ಮತ್ತು ಸತ್ಯವಂತ ಯುವ ಸದಸ್ಯರಿಂದ ಕೂಡಿತ್ತು. ಇದು ನಾನು ಸಂಸ್ಥೆಯಿಂದ ಬಿಡಿಸಿಕೊಂಡು ದೂರವಾಗಲು ಸರಿಯಾದ ಸಮಯವಾಗಿತ್ತು. ಎಲ್ಲವೂ ಸರಿಯಾಗಿರುವ ಈ ಸಮಯದಲ್ಲಿ ನಾನು ನಿರ್ಣಯ ತೆಗೆದುಕೊಳ್ಳದಿದ್ದರೆ ನಂತರ ಆ ನಿರ್ಣಯ ತೆಗೆದುಕೊಳ್ಳಲಾಗುತ್ತಿರಲಿಲ್ಲ.

ಈಗ ಒಮ್ಮೆ ಹಿಂದಿರುಗಿ ನೋಡಿದಾಗ ನಾನು ಅನೇಕ ವಿಧದಲ್ಲಿ ಭಾಗ್ಯಶಾಲಿ ಎನಿಸುತ್ತದೆ. ನನ್ನ ಮನೆಯಲ್ಲಿ ನನ್ನ ತಂದೆ ತಾಯಿ ನನಗೆ ಬೇಕಾದ ಶಾರೀರಿಕ ಮತ್ತು ಮಾನಸಿಕ ಬೆಂಬಲವನ್ನು ಕೊಟ್ಟು ನಾನು ಯಶಸ್ವಿಯಾಗಲು ಒಂದು ವೇದಿಕೆಯನ್ನು ಕಲ್ಪಿಸಿ ಕೊಟ್ಟರು. ನನ್ನ ತಂದೆಯವರು ನನ್ನ ಜೀವನವು ಸುಖಕರವಾಗಿರಲು ಬೇಕಾದ ಧನವನ್ನು ಒದಗಿಸಿ, ಎಲ್ಲಾ ಸೌಕರ್ಯಗಳನ್ನೂ ಒದಗಿಸಿದರು. ನನಗೆ ಹದಿಮೂರೋ ಹದಿನಾಲ್ಕೋ ವಯಸ್ಸಿರಬಹುದು. ಅವರು ನನಗೆ ಬ್ಯಾಂಕಿನಲ್ಲಿ ಒಂದು ಖಾತೆಯನ್ನು ತೆರೆದು ನಾನೇ ಆ ಖಾತೆಯನ್ನು ಉಪಯೋಗಿಸಲು ಕಲಿತುಕೊಳ್ಳಬೇಕು ಎಂದು ಹೇಳಿ, ಹಣವನ್ನು ಸಂಭಾಳಿಸುವುದನ್ನು ಕಲಿಸಿಕೊಟ್ಟರು. ಅದಲ್ಲದೆ ಹಣವನ್ನು invest ಮಾಡುವುದು ಮತ್ತು financial statement ತಯಾರಿ ಮಾಡುವುದನ್ನೂ ಕಲಿಸಿಕೊಟ್ಟರು. ಅವರ ಕೊನೆಯ ಕಾಲದ ಹೊತ್ತಿಗೆ ನಾನು ಪೂರಾ ಸ್ವತಂತ್ರಳಾಗಿದ್ದೆ. ಅವರು ತನ್ನ ಆಸ್ತಿಗಳನ್ನು ಇತರರಿಗೆ ವರ್ಗಾಯಿಸಿ ಅದಕ್ಕೆ ಸಂಬಂಧಪಟ್ಟ ಕಾಗದ ದಾಖಲೆಗಳನ್ನು ಅಚ್ಚುಕಟ್ಟಾಗಿ ಜೋಡಿಸಿಟ್ಟಿದ್ದರು. ಅವರು ಎಲ್ಲವನ್ನೂ ವ್ಯವಸ್ಥಿತವಾಗಿ ಮಾಡುವ ಅಭ್ಯಾಸ ಉಳ್ಳವರು. ಅವರಿಗೆ ನಾವು ಬೆಂಗಳೂರಿನ ಮೂಲದವರಾದ್ದರಿಂದ ಬೆಂಗಳೂರು ನಮಗೆ ಸರಿಯಾದ ಸ್ಥಳ ಎಂಬ ಭಾವನೆ ಇತ್ತು. ಅದಕ್ಕೋಸ್ಕರ ಅವರು ತಮ್ಮ ಅಣ್ಣತಮ್ಮಂದಿರು ಇರುವ ಕಾಂಪೌಂಡಿನಲ್ಲೇ ನಮ್ಮ ಮನೆಯೂ ಇರಬೇಕು ಎಂದು ಯೋಚಿಸಿದ್ದರು. ನಮ್ಮ ಅಕ್ಕತಂಗಿಯರಿಗೆ ಮದುವೆಯಾಗಿ ಅವರು ಬೇರೆ ಮನೆಗೆ ಹೋದಮೇಲೆ, ನನಗೆ ಅವರ ಅಣ್ಣತಮ್ಮಂದಿರಮಕ್ಕಳೇ ನನ್ನ ಜೊತೆಯಾಗುವರು ಎನ್ನುವ ಮುಂದಾಲೋಚನೆ ಅವರಿಗಿತ್ತು. ಅವರದ್ದೇ ಆದ ಒಂದು ಮೌನ ರೀತಿಯಲ್ಲಿ ಅವರು ತಮ್ಮ ಕುಟುಂಬವನ್ನು ಮುಂದೆ ಸಾಗಿಸಿದರು. ಕುಟುಂಬದವರೆಲ್ಲರೂ ಒಂದೇ ಕಾಂಪೌಂಡಿನಲ್ಲಿ ಇರುವುದು ಬಹಳ ಸಮಾಧಾನಕರ. ನಮ್ಮ ಮನೆಗಳ ನಡುವೆ ತೋಟವಿತ್ತು. ನನಗೆ ಮೈ ಸರಿಯಿಲ್ಲವೆಂದರೆ ನೆರವಿಗೆ ಯಾರಾದರೂ ಬರುತಿದ್ದರು. ಇದು ಬಹಳ ದೊಡ್ಡ ಸುಖದ ವಿಷಯವಾಗಿತ್ತು. ನಾವು ನಮ್ಮ ನಮ್ಮ ಪಾಡಿಗೆ ಇದ್ದೆವು. ಎಷ್ಟೋ ಸಲ ದಿನಗಟ್ಟಳೆ ನಾವು ಒಬ್ಬರನ್ನೊಬ್ಬರು ನೋಡುತ್ತಿರಲಿಲ್ಲ.

ಆದರೆ ಯಾರಿಗಾದರೂ ಸಂಕಟ ಬಂದಾಗ ನೆರವಿಗೆ ಜನರಿದ್ದರು. ಇದರ ಮಹತ್ವವನ್ನು ನಮ್ಮ ತಂದೆ ಬಹಳ ಹಿಂದೆಯೇ ಅರಿತುಕೊಂಡಿದ್ದರು.

ಕೆಲವು ವರ್ಷಗಳ ಹಿಂದೆ ನನಗೆ ನನ್ನ ಆರ್ಥಿಕ ಸ್ಥಿತಿಯ ಬಗ್ಗೆ ಚಿಂತೆ ಉಂಟಾಯಿತು. ಬ್ಯಾಂಕಿನಲ್ಲಿ ಬಡ್ಡಿದರಗಳು ಕುಸಿದು ನನ್ನ ವರಮಾನವು ಕಮ್ಮಿಯಾಗ ತೊಡಗಿತು. ನನಗೆ ನನ್ನ ಖರ್ಚುಗಳನ್ನು ತೂಗಿಸುವುದೇ ಕಷ್ಟವಾಯಿತು. ನನಗೆ ಯಾವ ಐಷಾರಾಮಿವಸ್ತುವೂ ಬೇಕಾಗಿರಲಿಲ್ಲ. ಆದರೂ, ಖರ್ಚುಗಳು ಹೆಚ್ಚುತಿದ್ದು ಮನೆಯನ್ನು ಮತ್ತು ನನ್ನ ಜೀವನಶೈಲಿಯನ್ನು ಕಾಪಾಡಿಕೊಳ್ಳುವುದು ಕಷ್ಟವಾಯಿತು. ನಾನು ಏ.ಪಿ.ಡಿ ಇಂದ ಎಂದೂ ಹಣವನ್ನು ಎದಿರುನೋಡಿರಲಿಲ್ಲ. ನನ್ನ ಆದಾಯವು ನನ್ನ ಹೆಸರಿನಲ್ಲಿ ನಮ್ಮತಂದೆಯು ಹೂಡಿದ ಹಣದಿಂದ ಬರುತಿತ್ತು. ನನ್ನ ಕಸಿನ್‌ಗಳು ಅನೇಕರು ದೊಡ್ಡ ದೊಡ್ಡ ಕೆಲಸಗಳಲ್ಲಿದ್ದು ಸಂಪಾದಿಸುತ್ತಿದ್ದರೂ, ನನಗೆ ಕೆಲಸ ಮಾಡಿ ಸಂಪಾದಿಸಬೇಕೆಂಬ ಆಸೆ ಇರಲಿಲ್ಲ. ನನಗೆ ನನ್ನ ಹತ್ತಿರವಿಲ್ಲದಿದ್ದ ವಸ್ತುವಿನ ಬಗ್ಗೆ ಯಾವ ದುಃಖವೂ ಇರಲಿಲ್ಲ. ಕೈಯಲ್ಲಿ ಹಣವಿದ್ದಾಗ ನಾನು ಬೇಕಾದುದ್ದನ್ನು ಕೊಂಡುಕೊಳ್ಳುತಿದ್ದೆ, ಅದು ಬೀದಿಯಲ್ಲಿ ಮಾರುವ ಕಡಲೇಕಾಯಿಯಾಗಿರಬಹುದು ಅಥವಾ ಗಿಡವಾಗಿರಬಹುದು ಅಥವಾ ಮಡಕೆಯೋ, ಕುಂಡವೋ ಆಗಿರಬಹುದು.

ನನಗೆ ನಾನು ನನ್ನ ಮನೆಯನ್ನು ಕೊಟ್ಟು ಯಾವುದಾದರೂ ವಯಸ್ಸಾದವರಿಗಿರುವ ಆಶ್ರಯದಲ್ಲಿ ಹೋಗಿರುವುದು ಸರಿಯೇ? ಎಂಬ ಯೋಚನೆ ಬಂತು. ಬಹುಷಃ ಮುಂದೊಂದು ದಿನ ಹಾಗೆ ಮಾಡುವುದು ಸರಿ ಇರಬಹುದು. ನನಗೆ ನನ್ನ ಅಕ್ಕ ತಂಗಿಯರೊಡನೆ ಇರುವುದು ಸರಿದೋರಲಿಲ್ಲ. ನಾನು ಮುಂಬೈಯಲ್ಲೋ, ಹೈದರಾಬಾದಿನಲ್ಲೊ ಏನು ಮಾಡುವೆ? ಇಲ್ಲಾದರೆ ನನಗೆ ಬಹಳ ಕೆಲಸಗಳಿದ್ದವು. ನನ್ನನ್ನು busyಯಾಗಿ ಇಡುತ್ತಿದ್ದವು. ನನಗೆ ಮನೆಯಲ್ಲೇ ಕೂಡಿ ಹಾಕಿದಂತಃಜೀವನವನ್ನು ಯೋಚಿಸಿಕೊಳ್ಳಲೂ ಸಾಧ್ಯವಿಲ್ಲ. ನಾನು ನನ್ನ ಬಾಳನ್ನು ಬೆಂಗಳೂರಿನಲ್ಲಿ ಕಟ್ಟಿಕೊಂಡಿದ್ದೆ. ಮುಂದೇನಾಗುವುದೋ ಕಾದು ನೋಡಬೇಕು.

ನನಗೆ ದೇವರ ದಯದಿಂದ ಒಳ್ಳೆಯ ಮಿತ್ರರು ಇದ್ದಾರೆ. ನಾನು ನನ್ನ ಕಷ್ಟಗಳನ್ನು ಅವರೊಡನೆ ಹಂಚಿಕೊಂಡಾಗ ಅವರು "ನೀನೇನು ಯೋಚನೆ ಮಾಡ ಬೇಡ, ನಾವು ಎಲ್ಲವನ್ನೂ ನೋಡಿಕೊಳ್ಳುತ್ತೇವೆ" ಎನ್ನುತ್ತಾರೆ. ಸಮೂಹ ಸಂಸ್ಥೆಯನ್ನು ನಡೆಸುವ ಪ್ರದೀಪ್ ಬಹಳ ಸಹಾಯ ಮಾಡುತ್ತಾರೆ. ಅವರೊಡನೆ "ನನಗೆ ಕೆಲಸ ಮಾಡಲೋ, ಅಥವಾ ಯಾವುದಾದರೂ project ನೋಡಿಕೊಳ್ಳಲೋ ಆಗುವುದಿಲ್ಲ, ಬಹಳ ವಯಸ್ಸಾಗಿದೆ"

ಎಂದಾಗ ಅವರು 'ನೀನು ಹಿಂದೆ ಮಾಡಿದ ಕೆಲಸಕ್ಕೆ ನಾನು ಇಂದು ನಿನಗೆ ಸಂಭಾವನೆಯನ್ನು ಕೊಡುತ್ತೇನೆ' ಎಂದರು. ಇದು ಒಂದು ಹೊಸ ರೀತಿ. ಇದನ್ನು ನಾನು ಈ ರೀತಿ ಒಂದು ಸಂಸ್ಥೆಗಾಗಿ ತಮ್ಮ ಜೀವನವನೆಲ್ಲಾ ಸವೆಸಿದವರಿಗೆ ತಿಳಿಸಬೇಕು. ನನಗೆ ಜೀವನಕ್ಕೆ ಬೇಕಾದ ಅತ್ಯವಶಕತೆಗಳನ್ನು ಮಾತ್ರ ಕೊಟ್ಟರೆ ಸಾಕು ಎಂದು ನಾನು ಅವರಿಗೆ ತಿಳಿಸಿದೆ. ಆದರೆ ಅವರು ಅದನ್ನು ನಿರ್ಧರಿಸಬೇಕಾದದು ನಾನಲ್ಲ ಎಂದರು. ಸಮೂಹ ಸಂಸ್ಥೆಯಿಂದ ನನಗೆ ದೊರಕಿದನೆರವು ದೊಡ್ಡ ವರದಾನವಾಗಿತ್ತು. ನನಗೆ ಮೊದಲಿಂದಲೂ ಇತರರಿಗೆ ಸಹಾಯ ಮಾಡಿ ಅಭ್ಯಾಸ. ಆದ್ದರಿಂದ ಮತ್ತೊಬ್ಬರಿಂದ ಸಹಾಯ ಪಡೆಯುವುದು ಬಹಳ ಕಷ್ಟಕರವಾದ ಕೆಲಸ. ನನಗೆ ಹೇಗೆ ನಾನು ಇವರ ನೆರವನ್ನು ಹಿಂದಿರುಗಿಸಬಲ್ಲೆ ಎಂಬ ಯೋಚನೆ ಕಾಡುತ್ತದೆ. ಈ ರೀತಿಯ ಕಷ್ಟಗಳು ಬಂದಾಗ ಅವನ್ನು ಶಾಂತ ಚಿತ್ತದಿಂದ ಒಪ್ಪಿಕೊಂಡು, ನಮಗೆ ನೀಡಿದ ನೆರವನ್ನು ದೈನ್ಯತೆಯಿಂದ ಮತ್ತು ಕೃತಜ್ಞತೆಯಿಂದ ಸ್ವೀಕರಿಸಲು ಭಗವದ್ ಅನುಗ್ರಹವೂ ಆಶೀರ್ವಾದವೂ ಬೇಕು. ಅದು ನನ್ನಲ್ಲಿ ಇದೆಯೇ ಎಂಬುದು ಗೊತ್ತಿಲ್ಲ. ಬಹುಷಃ ಕೊಡಲು ಸಿದ್ದರಾದವರು ಸ್ವೀಕರಿಸಲು ಸಿದ್ದರಾಗಿಲ್ಲದಿದ್ದರೆ ಅದು ಸರಿಯಲ್ಲವೇನೋ.

ನಾನು ಎ.ಪಿ.ಡಿ ಯ ಆಡಳಿತ ಮಂಡಳಿಯವರ ಜೊತೆಯಲ್ಲಿ ಮಾತನಾಡಿದೆ. ಅವರಿಗೆ ಆಘಾತವಾಯಿತು, ಆದರೆ ಅವರು ನನಗೆ ನಾನು ಕ್ಯಾಲಸನಹಳ್ಳಿಯಲ್ಲಿ ಮಾಡಿದ ಕೆಲಸಕ್ಕೆ ಸಂಭಾವನೆ ನೀಡಲು ಸಂತೋಷದಿಂದ ಒಪ್ಪಿಕೊಂಡರು. ಅವರು ನನಗೆ ಸಂಭಾವನೆ ಕೊಡಲು ಮೊದಲಿನಿಂದ ಇಚ್ಚಿಸಿದ್ದರೆಂದೂ, ಆದರೆ ಆ ವಿಷಯವನ್ನು ನನ್ನೊಡನೆ ಹೇಗೆ ಪ್ರಸ್ತಾಪಿಸುವುದು ಎಂದು ತಿಳಿಯದೆ ಪೇಚಾಡುತ್ತಿದ್ದರು ಎಂದೂ ಹೇಳಿದರು.

ಈ ನನ್ನ ಅಂತರ್ಯ ಪಯಣ ಬಹಳ ಕಷ್ಟಕರವಾಗಿತ್ತು. ನಾನು ಹುಟ್ಟಿದ್ದಾಗಿನಿಂದ ಇಂದಿನ ವರೆಗೆ ನಡೆದ ಘಟನೆಗಳನ್ನು ನಾನು ಮೆಲುಕು ಹಾಕಿ ನೋಡಿದೆ. ಎಲ್ಲವೂ ಒಂದು ಚಮತ್ಕಾರದಂತೆ ತೋರಿತು. ನಾನು ಈ ರೀತಿ ಜೀವನವನ್ನು ಒಮ್ಮೆ ಹಿಂತಿರುಗಿ ನೋಡಿದಾಗ ನನ್ನ ಅನಿಸಿಕೆಗಳನ್ನು ನನ್ನ ಮಿತ್ರರೊಂದಿಗೆ ಹಂಚಿಕೊಳ್ಳಲಾಯಿತು. ಅವರು ನನಗೆ ಸೂಕ್ತವಾದ ಸಲಹೆಗಳನ್ನು ಕೊಟ್ಟರು ಮತ್ತು ನಾನು ವಿಷಯಗಳ ಬಗ್ಗೆ ಪುನರಾಲೋಚಿಸಿ ಸರಿಯಾದ ನಿರ್ಣಯವನ್ನು ತೆಗೆದುಕೊಳ್ಳಲು ನೆರವಾದರು.

ನಾನು ಸಮಸ್ಯೆಯು ಎದುರಾದಾಗಲೆಲ್ಲಾ ನನ್ನ ಮಿತ್ರರಿಗೆ ಫೋನು ಮಾಡಿ 'ಈಗ ನಾನು ಏನು ಮಾಡಬೇಕು ಎನ್ನುತ್ತೀಯ?' ಎಂದು ಕೇಳುತ್ತಿದ್ದೆ. ಮುಕ್ಕಾಲು ಪಾಲು ನನಗೆ

ಉತ್ತರ ಸಿಗುತ್ತಿತ್ತು. ಕೆಲವು ಸಲ ಅವರ ಸಲಹೆ ನನಗೆ ಒಪ್ಪಿಗೆ ಯಾಗುತ್ತಿರಲಿಲ್ಲ, ಆಗ ನಾವು ಆ ವಿಷಯದ ಬಗ್ಗೆ ಚರ್ಚೆ ಮಾಡುತ್ತಿದ್ದೆವು.

ನನ್ನ ಸ್ವಭಾವದ ಬಗ್ಗೆ ನಾನು ಯೋಚನೆ ಮಾಡುತ್ತಿದ್ದೆ. ಕೋಪಿಸಿಕೊಳ್ಳುವುದು ಮತ್ತು ಹಠಹಿಡಿಯುವುದನ್ನು ಹಿಡಿತದಲ್ಲಿಟ್ಟುಕೊಳ್ಳುವುದು ಬಹಳ ಕಷ್ಟ. ನನ್ನ ದೈನಂದಿನ ಜೀವನದಲ್ಲಿ ನಡೆದ ಘಟನೆಗಳನ್ನೇ ತೆಗೆದುಕೊಳ್ಳಿ, ನನ್ನ ಅಡಿಗೆಯ ಮುದ್ದಮ್ಮ ನಾನು ಹೇಳಿದ್ದನ್ನು ಪಾಲಿಸದಿದ್ದರೆ ನಾನು ತಾಳ್ಮೆಯನ್ನು ಕಳೆದುಕೊಳ್ಳುತ್ತಿದ್ದೆ. ಪಾಪ ಅವಳು ಹಳ್ಳಿಗಾಡಿನವಳು. ಅವಳಿಗೆ ಸಾಧಾರಣವಾದ ಅಡಿಗೆ ಮಾಡುವುದು ಮಾತ್ರ ಗೊತ್ತು. ಚಿಕ್ಕ ಪುಟ್ಟ ತಪ್ಪುಗಳು ನನಗೆ ಕೋಪ ಬರಿಸಿ ನಾನು 'ವಿಶ್ವರೂಪ' ತಾಳುವಂತೆ ಮಾಡುತ್ತಿದ್ದವು. ಆದರೆ, ನಾನು ಅಷ್ಟೇ ಬೇಗ ಶಾಂತವಾಗುತ್ತಿದ್ದೆ. ನನಗೆ ನಾನೇ ಈ ರೀತಿ ಮುದ್ದಮ್ಮನೊಡನೆ ತಾಳ್ಮೆ ಕಳೆದುಕೊಂಡು ಕೋಪಿಸಿಕೊಳ್ಳ ಬಾರದು ಎಂದುಕೊಳ್ಳುತ್ತಿದ್ದೆ ಮತ್ತು ಅವಳು ಇರುವುದರಿಂದ ಆಗುವ ಸಹಾಯವನ್ನು ಸ್ಮರಿಸಿಕೊಳ್ಳುತಿದ್ದೆ. ಅವಳಿಗೆ ನಾನು ಸಂಬಳ ಕೊಡುವುದು ಮುಖ್ಯವಲ್ಲ, ನಾನು ಜನರೊಂದಿಗೆ ಹೀಗೆ ನಡೆದುಕೊಳ್ಳಬಾರದು ಎಂಬುದು ಮುಖ್ಯ, ಎಂದು ಅನ್ನಿಸುತ್ತಿತ್ತು. ಒಂದು ಸಲ ಕೋಪದಲ್ಲಿ ಕೂಗಾಡಿದ ಮೇಲೆ ಅದನ್ನು ಹಿಂದೆಗೆದುಕೊಳ್ಳಲಾಗುವುದಿಲ್ಲವಲ್ಲ. ಅವಳು ನನ್ನ ಬಗ್ಗೆ ಏನು ಅಂದು ಕೊಳ್ಳುವಳು? ನಾನು ಎಷ್ಟೋಸಲ ಈ ರೀತಿ ಯಾದ ಕೂಡಲೇ ಅವಳಿಗೆ sorry ಎಂದು ಹೇಳಿ ಕ್ಷಮೆ ಯಾಚಿಸಿದ್ದೇನೆ. ಆದರೆ ಅದರಿಂದ ಏನು ಪ್ರಯೋಜನ? ಆಗಿಹೊಗಿದ್ದನ್ನು ಅಳಿಸಲಾಗುವುದಿಲ್ಲವಲ್ಲ.

ನಾನು ನನ್ನ ನಡತೆಯನ್ನು ಯಾಕೆ ಬದಲಾಯಿಸಿಕೊಳ್ಳಲಾಗುತ್ತಿಲ್ಲ ಎಂಬುದರ ಬಗ್ಗೆ ವಿಶ್ಲೇಷಿಸಿ ನೋಡಿದ್ದೇನೆ. ಅದಕ್ಕೆ ಧ್ಯಾನ ಮತ್ತು ಸಾಧನೆ ಬೇಕಾಗಿರಬಹುದು. ಬಹುಷಃ ಸ್ವಲ್ಪ ಪ್ರಾಯಶ್ಚಿತ್ತವೂ ಬೇಕಾಗಬಹುದು. ನಾನು ಅನೇಕ ಹೆಸರಾಂತ ವಿದ್ವಾಂಸರ ಉಪನ್ಯಾಸಗಳನ್ನು ಕೇಳಿದ್ದೇನೆ.ಆದರೆ ಅವುಗಳಿಂದ ಯಾವ ಪ್ರಯೋಜನವೂ ಆಗಿಲ್ಲ. ನಾವು ಎಲ್ಲವನ್ನೂ ಅರ್ಥಮಾಡಿಕೊಂಡಿದ್ದೇವೆ, ಆದರೆ ಅದನ್ನು ದೈನಂದಿನ ಜೀವನದಲ್ಲಿ ಬಳಸುವುದಿಲ್ಲ ಎಂದರೆ ಏನು ಪ್ರಯೋಜನ? ನಾವು ಇನ್ನೊಬ್ಬರ ಬಗ್ಗೆ ನಮ್ಮ ತೀರ್ಮಾನಗಳನ್ನು ಬದಿಗಿಟ್ಟು, ತೆರೆದ ಮನದಿಂದ ಅವರನ್ನು ನೋಡಲು ನನಗೆ ಒಬ್ಬ ಗುರುವಿನ ನೆರವು ಬೇಕು. ಆಗ ನಾನು ಆ ಗುರುವಿನೊಡನೆ ಬೇಕಾದಾಗ ಮಾತನಾಡಿ ನನ್ನ ಯೋಚನೆಗಳನ್ನು ಹಂಚಿಕೊಳ್ಳಬಹುದು. ನನಗೆ ಸ್ವಾಮಿ ಸುಖಬೋಧಾನಂದರು ಮತ್ತು ಸ್ವಾಮಿ ಚಿನ್ಮಯಾನಂದರೂ ಪರಿಚಿತರಿದ್ದರು. ನಾನು ಅನೇಕ ವರ್ಷಗಳು ಅವರ

ಉಪನ್ಯಾಸಗಳಿಗೆ ಹೋಗಿದ್ದೇನೆ. ಸುಖಬೋಧಾನಂದರ 'ಪ್ರಾರಬ್ಧ ಕರ್ಮ' ದ ಬಗ್ಗೆಯ ಉಪನ್ಯಾಸ ನನ್ನ ಮಟ್ಟಿಗೆ ಅತ್ಯುತ್ತಮವಾದ ಉಪನ್ಯಾಸ. ಅದು ನಾವು ನಮ್ಮ ಹಿಂದಿನ ಕರ್ಮಗಳಿಂದ ಈ ಜನ್ಮದಲ್ಲಿ ಫಲಗಳನ್ನು ಅನುಭವಿಸುತ್ತೇವೆ ಎಂದು ಹೇಳುತ್ತದೆ. ಇದನ್ನು ನಾವು ತಿಳಿದುಕೊಂಡಾಗ, ನಾವು ನಮ್ಮಜೀವನದಲ್ಲಿ ಬದಲಾವಣೆಯನ್ನು ತರಲು ಸಾಧ್ಯವಾಗುತ್ತದೆ. ನನಗೆ ನಾನು ಇನ್ನೂ ಎಷ್ಟು ವರ್ಷಗಳು ಬದುಕಿರುತ್ತೇನೆ ಎಂಬುದು ಗೊತ್ತಿಲ್ಲ. ಆದರೆ ಈಗ ನಾನು ನನ್ನ ಮನಸ್ಥಿತಿಯನ್ನು ಬದಲಾಯಿಸಿಕೊಂಡು ಮುಂದೇನಾಗುವುದು ಎಂಬುದರ ಬಗ್ಗೆ ಚಿಂತೆ ಮಾಡದೆ ಇರಬಹುದು. ಮತ್ತೆ ಎಷ್ಟೋ ಸಲ ನನಗೆ ಭವಿಷ್ಯ ಎಂಬುದು ಇದೆಯೇ, ಮರು ಜನ್ಮವೆಂಬುದು ಇದೆಯೆ? ಅಥವಾ ಅದು ಒಂದು ಮಿಥ್ಯೆಯೇ? ಎಂಬ ಯೋಚನೆ ಬರುತ್ತದೆ. ಅನೇಕ ಧರ್ಮಗಳಲ್ಲಿ ಈ ನಂಬಿಕೆ ಇಲ್ಲ. ದೇವರು ಎಂದರೇನು? ದೇವರು, ಧರ್ಮ ಎಂಬುದನ್ನು ಜನರೇ ಸೃಷ್ಟಿಸಿ ನಮ್ಮನ್ನೆಲ್ಲಾ ಈ ರೀತಿ ಮಂಕು ಮಾಡಿದ್ದಾರೆಯೇ? ಅನೇಕರು 'ನಾವು ಮಾಡಿದ ಕರ್ಮ. ಅದನ್ನು ಸವೆಸಲೇಬೇಕು' ಎನ್ನುತ್ತಾರೆ. ನನ್ನ ಮಟ್ಟಿಗೆ ಹೇಳುವುದಾದರೆ, ನನ್ನನ್ನು ಜನರು ಒಳ್ಳೆಯ ಮಿತ್ರ ಎಂದು ಭಾವಿಸಿದರೆ ಅದೇ ನನಗೆ ಸಾಕು. ಎಲ್ಲವನ್ನೂ ನಮ್ಮ ಹಿಡಿತದಲ್ಲಿಟ್ಟುಕೊಳ್ಳುವುದು ಒಂದು ವಿಧವಾದ ಆಟ. ನನಗೆ ಆ ಆಟದಲ್ಲಿ ಜಯಿಸಿ ನನ್ನ ಕೋಪವನ್ನು ಹಿಡಿತದಲ್ಲಿ ಇಟ್ಟುಕೊಳ್ಳಬೇಕು.

ನಮ್ಮೆಲ್ಲೆಲ್ಲರಲ್ಲೂ ಅನೇಕ ಅವಗುಣಗಳು ಹುದುಗಿವೆ. ಅದು ಹೊರಗೆಬಂದರೆ ನಾವು ಏನನ್ನಾದರೂ – ಕೊಲೆಯನ್ನು ಕೂಡ – ಮಾಡಬಹುದು. ಈ ಸುಪ್ತ ಅವಗುಣವನ್ನು ಯಾವುದು ಹೊರಗೆಡಹ ಬಲ್ಲದೋ ನಮಗೆ ಗೊತ್ತಿಲ್ಲ. ಆದ್ದರಿಂದ, ನಾವು ಇವನ್ನು ಹೊರತಂದು ಅವುಗಳಿಂದ ಯಾರಿಗೂ ತೊಂದರೆಯಾಗದಂತೆ ನೋಡಿಕೊಳ್ಳಬೇಕು. ಅವುಗಳಿಂದ ನಮಗೂ ಮತ್ತು ಇತರರಿಗೂ ಒಳ್ಳೆಯದು ಆಗುವಂತೆ ಮಾಡಬೇಕು. ನಮ್ಮ ಮನಸ್ಸನ್ನು ನಾವು ಹಿಡಿತದಲ್ಲಿ ಇಟ್ಟುಕೊಳ್ಳದಿದ್ದರೆ, ನಾವು ನಮ್ಮ ಪ್ರತಿಕ್ರಿಯೆಯನ್ನು ಹಿಡಿತದಲ್ಲಿ ಇಟ್ಟುಕೊಳ್ಳಲು ಸಾಧ್ಯವಾಗುವುದಿಲ್ಲ. ಆದಕ್ಕೇ ನಾವು ಯಾವಾಗಲೂ ಜೀವನವನ್ನು ಸಕಾರಾತ್ಮಕ ದೃಷ್ಟಿಯಿಂದ ನೋಡುವುದನ್ನು ಅಭ್ಯಾಸ ಮಾಡಿಕೊಳ್ಳಬೇಕು. ನನ್ನಲ್ಲೇ ನಾನು ಬದಲಾವಣೆಯನ್ನು ಕಂಡುಕೊಂಡಿದ್ದೇನೆ. ನನ್ನ ತಾಳ್ಮೆಯ ಮಿತಿಯಲ್ಲಿ.ನನ್ನ ಕಣ್ಣಿಗೆ ನಕಾರಾತ್ಮಕ ವಿಷಯಗಳೂ ಬೀಳುತ್ತವೆ, ಆದರೆ ನಾನು ಅವಕ್ಕೆ ಪ್ರತಿಕ್ರಿಯಿಸದೆ ಅವನ್ನು ಬಿಟ್ಟುಬಿಡುತ್ತೇನೆ. ನಾನು ಎಲ್ಲರನ್ನೂ ಬದಲಾಯಿಸಲಾಗುವುದಿಲ್ಲ. ಕೆಲವು ಸಲ ನನಗೆ ಇತರರು ನನ್ನೊಡನೆ ಇನ್ನೂ ಒರಟಾಗಿ ವರ್ತಿಸಿ ನನ್ನನ್ನು ಮೂಲೆಗುಂಪು ಮಾಡಿದ್ದರೆ ಬಹುಶಃ ನನ್ನ ವರ್ತನೆಯಲ್ಲಿ ಬದಲಾವಣೆಯು ಬರುತ್ತಿದ್ದೇನೋ.

ವಯಸ್ಸಾದ ನಂತರ ಎದುರಾಗುವ ಸಮಸ್ಯೆಗಳು ಮತ್ತೊಂದು ವಿಷಯ. ವರ್ಷಗಳು ಕಳೆದಂತೆ ನನಗೆ ಸ್ವಂತವಾಗಿ ಅನೇಕ ಕೆಲಸಗಳನ್ನು ಮಾಡಿಕೊಳ್ಳುವ ಕ್ಷಮತೆ ಕುಂದಿದೆ. ಮುಂಚಿನ ದಿನಗಳಲ್ಲಿ ನಾನು ಸಲೀಸಾಗಿ ಮಾಡಿಕೊಳ್ಳುತ್ತಿದ್ದಂತಹ ಅನೇಕ ಕೆಲಸಗಳು ಇಂದು ನನಗೆ ಆಗುತ್ತಿಲ್ಲ. ಮುಂಚೆ ನಾನು ಯಾರ ಸಹಾಯವೂ ಇಲ್ಲದೆ, ನೆಲದಿಂದ ವ್ಹೀಲ್ ಚೇರಿನ ಮೇಲೆ ಕುಳಿತುಕೊಳ್ಳುತ್ತಿದ್ದೆ, ನನ್ನ ಬಟ್ಟೆಗಳನ್ನು ಒಗೆದುಕೊಳ್ಳುತಿದ್ದೆ, ವ್ಹೀಲ್ ಚೇರಿನಿಂದ ಇಳಿದು ಸ್ನಾನ ಮಾಡುತಿದ್ದೆ, ಆದರೆ ಈಗ ಈ ಕೆಲಸಗಳನ್ನು ಮಾಡಲು ನನಗೆ ಇನ್ನೊಬ್ಬರ ಸಹಾಯ ಬೇಕು. ಇದು ಒಂದು ರೀತಿಯ ಪರಾವಲಂಬನ, ನನಗೆ ಅದು ಬೇಕಿಲ್ಲ. ವಿಕಲಾಂಗತೆಯ ಜೊತೆಗೆ ವೃದ್ಧಾಪ್ಯವೂ ಸೇರಿದರೆ ತೊಂದರೆಯು ಇಮ್ಮಡಿಯಾಗುತ್ತದೆ. ಮತ್ತೊಮ್ಮೆ ಬಾಲ್ಯಾವಸ್ಥೆ ಬಂದಂತಾಗುತ್ತದೆ. ಈಗ ನನಗೆ ಅರ್ಥವಾಗುತ್ತಿದೆ, ನಾನು ಚಿಕ್ಕವಳಾಗಿದ್ದಾಗ ಎಷ್ಟು ಸಹಾಯ ಬೇಕಾಗುತ್ತಿತ್ತೋ ಈಗ ಅಷ್ಟು ಸಹಾಯ ನನಗೆ ಬೇಕಾಗುತ್ತದೆ. ಆತ್ಮ ವಿಶ್ವಾಸವು ಕಮ್ಮಿಯಾಗುತ್ತದೆ. ಸ್ವತಂತ್ರವಾಗಿ ಜೀವಿಸಲು ನಾನು ಮತೊಮ್ಮೆ ಕಲಿಯಬೇಕಾಗುತ್ತದೆ. ನನ್ನ ಕಮ್ಮಿ ಎತ್ತರದ 'ಮಿನಿ ಮಾರಿಸ್' ಕಾರಿನಿಂದ ನಾನು ಸ್ವತಃ ಇಳಿದು ವ್ಹೀಲ್ ಚೇರಿನಲ್ಲಿ ಕೂರುತ್ತಿದ್ದೆ. ಯಾರಾದರೂ ವ್ಹೀಲ್ ಚೇರನ್ನು ಸ್ವಲ್ಪ ಹಿಡಿದುಕೊಂಡರೆ ಸಾಕಿತ್ತು. ಆದರೆ ಇಂದಿನ ಹೊಸ ಕಾರುಗಳಲ್ಲಿ ಜಾರ್ಜಿನ ಸಹಾಯವಿಲ್ಲದೆ ನಾನು ಹತ್ತಿ ಇಳಿಯಲಾರೆ. ಈಗಲೂ ನಾನೇ ಸ್ವತಃ ಸ್ನಾನ ಮಾಡಿಕೊಳ್ಳುತ್ತೇನೆ. ಆದರೆ ನನ್ನ ಆತ್ಮವಿಶ್ವಾಸ ಕಮ್ಮಿಯಾಗುತ್ತಿದೆ. ಸ್ನಾನದ ಮನೆಯ ಬಾಗಿಲ ಚಿಲುಕವನ್ನು ಹಾಕಿಕೊಳ್ಳಲು ಭಯವಾಗುತ್ತದೆ. ನಾನು ನನ್ನ ವ್ಹೀಲ್ ಚೇರಿನಿಂದ ಹಾಸಿಗೆಗೆ ಯಾರ ಸಹಾಯವೂ ಇಲ್ಲದೆ ಹೋಗ ಬೇಕು ಎಂದು ಅನಿಸುತ್ತದೆ, ಆದರೆ ಮಂಚದ ಎತ್ತರದಲ್ಲಿ ಸ್ವಲ್ಪ ವ್ಯೆತ್ಯಾಸವಾದರೂ, ಇದು ಒಂದು ದೊಡ್ಡ ಪ್ರಯಾಸ ವಾಗುತ್ತದೆ, ಮತ್ತು ನನಗೆ ಬಹಳ ಕೋಪ ಬರಿಸುತ್ತದೆ. ನನಗೆ ಇನ್ನೊಬ್ಬರ ಮೇಲೆ depend ಆಗುವುದು ಬೇಕಾಗಿಲ್ಲ.ಅದೇ ಅಭ್ಯಾಸ ವಾಗಿಬಿಡುತ್ತದೆ ಎಂಬ ಭಯ. ಆದ್ದರಿಂದ ನಾನು ನನ್ನ ಮನಸ್ಸನ್ನು ಹರಿತವಾಗಿ ಇಟ್ಟು ಕೊಂಡು ಎದುರಾಗುವ ಬದಲಾವಣೆಗಳಿಗೆ ಸ್ಪಂದಿಸುತ್ತೇನೆ. ಒಂದು ವಿಧದಲ್ಲಿ ಕಾರ್ಯ ಮಾಡುವ ಕ್ಷಮತೆಯನ್ನು ಕಳೆದುಕೊಂಡರೆ, ಅದನ್ನು ಮತ್ತೊಂದು ವಿಧದಲ್ಲಿ ಸ್ವತಂತ್ರವಾಗಿ ಮಾಡುವುದನ್ನು ಕಂಡು ಕೊಂಡು ಕಲಿಯಬೇಕು. ಅಂದರೆ, ಯಶಸ್ಸು ಸಿಗುವ ತನಕ ಪುನಃ ಪುನಃ ಪ್ರಯತ್ನ ಪಡ ಬೇಕು.

ನಮ್ಮ ಮನೆ ಕಟ್ಟಿದಾಗ, ನನಗೆ ಅಡುಗೆ ಮನೆಗೆ ಹೋಗಿ ಅಡಿಗೆ ಕಲಿಯುವ ಅವಕಾಶವಿದ್ದರೂ ನಾನು ಅಡುಗೆಯನ್ನು ಕಲಿಯಲಿಲ್ಲ. ನನಗೆ ಅದರ ಅಗತ್ಯವೂ ಇರಲಿಲ್ಲ. ನನ್ನ ಅಮ್ಮ ಅಡುಗೆ ಮಾಡಲು ಪ್ರಾರಂಭಿಸಿದಾಗ ನಾನು ಅವಳಿಗೆ ಸಹಾಯ ಮಾಡುತ್ತಿದ್ದೆ,

ಆದರೆ ಅದು ಅಡುಗೆ ಮನೆಯನ್ನು ಸ್ವಚ್ಛ ಗೊಳಿಸುವುದರಲ್ಲಿ ಮಾತ್ರ, ನಾನು ಅಡುಗೆಯನ್ನು ಕಲಿಯಲೇ ಇಲ್ಲ. ನಾನು ಅಡುಗೆಯನ್ನು ಕಲಿತಿದ್ದು ನೋಡಿ ನೋಡಿಯೇ. ಒಮ್ಮೆ ನನ್ನ ಕಸಿನ್ ಗಳು ನನ್ನ ತಂದೆ ತಾಯಿಯೊಡನೆ ಮಾತಾಡುತ್ತಿರುವುದನ್ನು ಕೇಳಿಸಿಕೊಂಡೆ. ಅವರು ನನ್ನ ತಂದೆ ತಾಯಿಯನ್ನು 'ನೀವು ನಿಮ್ಮ ಮಗಳ ಮನೆಗೆ ಯಾಕೆ ಹೋಗುವುದಿಲ್ಲ' ಎಂದು ಕೇಳಿದರು. ಅದಕ್ಕೆ ಅಮ್ಮ ಜವಾಬು ಕೊಡದೆ ಸುಮ್ಮನಿದ್ದಳು. ನಮ್ಮ ತಂದೆ ಆಗ 'ಹೇಮಳನ್ನು ನೋಡಿಕೊಳ್ಳುವವರು ಯಾರು?' ಎಂದು ಕೇಳಿದರು. ಇದು ನನಗೆ ಹಿಡಿಸಲಿಲ್ಲ. ಕ್ರಮೇಣ ಅವರು ಪ್ರಯಾಣ ಮಾಡಲು ಪ್ರಾರಂಭಿಸಿದರು. ನನ್ನ ನೆರವಿಗೆ ಅಡುಗೆಯವರೊಬ್ಬರಿರುತ್ತಿದ್ದರು. ನನ್ನ ಆತ್ಮ ವಿಶ್ವಾಸ ಹೆಚ್ಚಿತು. ನಾನು ಒಬ್ಬಳೇ ಇರುತ್ತೇನೆ ನೀವು ಯೋಚನೆ ಮಾಡಬೇಡಿ ಎಂದು ಅವರಿಗೆ ನಾನು ಹೇಳಿದೆ.

ನನ್ನ ಮದುವೆಯಾದ ಮೇಲೆ ನನ್ನ ಅಮ್ಮ ನನ್ನ ಅಕ್ಕತಂಗಿಯರೊಡನೆ ಒಂದು ಧೀರ್ಘವಾದ ರಜೆಯನ್ನು ಕಳೆದಳು. ಅವಳು ಹೊರದೇಶಗಳಿಗೆ ಹೋಗಿರಲಿಲ್ಲ. ಆದ್ದರಿಂದ ಅವರು ಅವಳನ್ನು ಹೊರದೇಶಕ್ಕೆ ಕರೆದುಕೊಂಡು ಹೋಗುವುದೇ ಉಚಿತ ವೆಂದು ಯೋಚಿಸಿದರು. ಮೊದಲಿಗೆ ಅವರು U.K. ಗೆ ಹೋದರು. ಅಲ್ಲಿ ನಮ್ಮ ಸ್ನೇಹಿತರೊಬ್ಬರ ಜೊತೆಯಲ್ಲಿ ಮೂರು ತಿಂಗಳುಗಳು ಇದ್ದರು. ನಂತರ ಅಲ್ಲಿಂದ ಅಮೇರಿಕಕ್ಕೆ ಹೋದರು. ಈ ವೇಳೆಯಲ್ಲಿ ನಾನು ಮತ್ತು ವೆಂಕಿ ಅಡುಗೆಮನೆಯ ಜವಾಬ್ದಾರಿಯನ್ನು ಹೊತ್ತಿದ್ದೆವು. ನಾನು ಮುಖ್ಯ chef ಮತ್ತು ಅವನು ನನ್ನ assistant. ಇದು ನನಗೆ ಒಂದು ಹೊಸದಾದ ಅನುಭವವಾಗಿತ್ತು. ದೃಷ್ಟಿ ಮಾಂಧ್ಯವಿರುವವರು ಹೇಗೆ ಕೆಲಸ ಮಾಡುತ್ತಾರೆ ಎಂಬುದನ್ನು ನಾನು ಕಲಿತೆ. ಮತ್ತೊಬ್ಬರೊಡನೆ ದೈನಂದಿನ ಜೀವನವನ್ನು ಕಳೆಯುವುದು ಮತ್ತು ಆಗು ಹೋಗುಗಳನ್ನು ಅವರ ದೃಷ್ಟಿಕೋನದಿಂದ ನೋಡುವುದು ಜೀವನದಲ್ಲಿ ಒಂದು ದೊಡ್ಡ ಕಲಿಕೆ. ಅದೂ ಆ ವ್ಯಕ್ತಿಗಳು ವಿಕಲಾಂಗರಾಗಿದ್ದರೆ, ಇಬ್ಬರಿಗೂ ಅದು ಒಂದು ದೊಡ್ಡ ಸವಾಲು.

ಕೆಲವು ಸಲ ನನಗೆ ಮನೆಯನ್ನು ಬಿಟ್ಟು ಹೊರಗೆ ಹೋಗುವ ಮನಸ್ಸೇ ಇರುವುದಿಲ್ಲ. ಬಹಳ ಹೊತ್ತು ಹೊರಗೆ ಸುತ್ತಾಡುವುದು ಕಷ್ಟವಾಗುತ್ತದೆ. ನಮ್ಮ ದೇಹವು ದೃಢವಾಗಿರಲು ಎಲ್ಲವೂ ಸರಿಯಾಗಿರಬೇಕು ಮತ್ತು ನಮ್ಮ ಹತೋಟಿಯಲ್ಲಿರಬೇಕು. ನಮ್ಮ ಕೆಲಸಗಳಿಗೆ ಇತರರ ಸಹಾಯ ಬೇಕಿದ್ದಾಗ ನಾವು ಅವುಗಳಿಂದ ವಿದಾಯ ಪಡೆಯುವುದು ಒಳ್ಳೆಯದು. ದಿವಾನ್ ಅವರು ತಿಳಿದು ಕೊಂಡಂತೆ, ಜೀವನದ ಗುಣ ಮಟ್ಟವೇ ಮುಖ್ಯ. ಒರ್ವವ್ಯಕ್ತಿಯಾಗಿ, ಜೀವನದ ಬಗ್ಗೆ ನನ್ನ ಅನಿಸಿಕೆಯು ಸಾಕಷ್ಟು ಬದಲಾಗಿದೆ. ಚಿಕ್ಕ ಹುಡುಗಿಯಾಗಿದ್ದಾಗ

ಕೈಲಾಗದ ವಿಕಲಾಂಗಿ ಕ್ರಮೇಣ ಪೋಲಿಯೋವಿನ ಜೊತೆ ಬಾಳುವುದನ್ನು ಕಲಿತಿದ್ದು, ಕೆಲಸ ಮಾಡಲು ಪ್ರಾರಂಭಿಸಿದಾಗ ಯಶಸ್ಸು ಮತ್ತು ಆತ್ಮವಿಶ್ವಾಸ ಗಳಿಸಿದ್ದು, ಪ್ರಯಾಣಗಳಿಂದ ವಿಶಾಲವಾದ ಮನಸ್ಸು ಮತ್ತು ದೃಷ್ಟಿಕೋನವನ್ನು ಬೆಳೆಸಿಕೊಂಡಿದ್ದು ಮತ್ತು ಧೈರ್ಯವನ್ನು ಗಳಿಸಿದ್ದು, ಇತ್ಯಾದಿ. ಹಿಂದೆ ನನ್ನನ್ನು ನೋಡಿ ಜನರು ಸೇರಿಕೊಂಡಾಗ ನನಗೆ ಎಲ್ಲಿಲ್ಲದ ಮುಜಗರವಾಗುತ್ತಿತ್ತು. ಎಲ್ಲರೂ ನನ್ನ ವ್ಹೀಲ್ ಚೇರನ್ನೇ ನೋಡುತಿದ್ದಾರೆ ಎನಿಸುತ್ತಿತ್ತು. ಆದರೆಈಗ ಹಾಗಿಲ್ಲ. ಜನರು ನೋಡಿದರೆ ನೋಡಲಿ, ನನಗೇನೂ ಅನಿಸುವುದಿಲ್ಲ. ಈಗ ನಾನು ನನ್ನ ಸಮಸ್ಯೆಗಳ ಬಗ್ಗೆ ಮತ್ತು ಅವುಗಳ ಪರಿಹಾರದ ಬಗ್ಗೆ ಸುಲಭವಾಗಿ ಮಾತನಾಡ ಬಲ್ಲೆ. ನಾನು ವಿಕಲಾಂಗರ ಹಕ್ಕುಗಳ ಬಗ್ಗೆ ಹೊಡೆದಾಡುವ ಒಂದು ಜೀವಂತ ಪ್ರಾತ್ಯಕ್ಷಿಕೆ ಎಂದು ಅಂದುಕೊಂಡಿದ್ದೇನೆ. ನಾನು ವ್ಹೀಲ್ ಚೇರಿನಲ್ಲಿ ಕುಳಿತು, ನನ್ನನ್ನು ಮತ್ತೊಬ್ಬರು ತಳ್ಳಿಕೊಂಡು ವೇದಿಕೆಯ ಮೇಲೆ ಕರೆದು ತರುವ ದೃಶ್ಯವು  ಜನರಲ್ಲಿ ಸಾಕಷ್ಟು ಪ್ರಭಾವವನ್ನು ಬೀರುತ್ತದೆ. ನಾನು ಮುಜುಗರ ಪಟ್ಟುಕೊಳ್ಳಬೇಕಾದುದೇ ಇಲ್ಲ.

ನಾನು ನನ್ನ ಜೀವನಕ್ಕೆ – ಅದರಲ್ಲಿ ಏನೇ ಸವಾಲುಗಳು ಬಂದರೂ – ಕೃತಜ್ಞಳಾಗಿದ್ದೇನೆ. ಒಂದು ಸಮಯದಲ್ಲಿ ನನ್ನ ಜೀವನದಲ್ಲಿ ಅನೇಕ ಸವಾಲುಗಳು ಎದುರಾಗಿ, ಆ ಜೀವನಕ್ಕೆ ಅರ್ಥವೇ ಇಲ್ಲವೇನೋ ಎಂಬಂತಾಗಿತ್ತು. ಜಿಗುಪ್ಸೆಯಿಂದ ತುಂಬಿ ನಾನು, ನನ್ನ ಅರ್ಥಹೀನ ಜೀವನದ ಉದ್ದೇಶವೇನು ಎಂದು ನನ್ನನ್ನು ಪ್ರಶ್ನಿಸಿಕೊಂಡೆ. ನನ್ನನ್ನು ಸೃಷ್ಟಿಸಿದ ದೇವರು ಯಾಕೆ ನನಗೆ ಈ ರೀತಿಯ ಕಷ್ಟಗಳನ್ನು ಕೊಡುತ್ತಿದ್ದಾನೆ? ಅವನೆಲ್ಲೋ ಕುಳಿತು ನಾನು ಕಷ್ಟಪಡುವುದನ್ನು ನೋಡಿ ನಗುತ್ತಿರಬೇಕು. ಆ ರೀತಿಯ ದೇವರು ದೊಡ್ಡವನಲ್ಲ. ಅವನೊಬ್ಬ ರಾಕ್ಷಸನೋ, ಪಿಶಾಚಿಯೋ ಆಗಿರಬೇಕು. ಈ ರೀತಿ ನಾನು ನಂಬಿಕೆ ಮತ್ತು ಅಪನಂಬಿಕೆಗಳ ನಡುವೆ ಉಯ್ಯಾಲೆ ಆಡ ತೊಡಗಿದೆ. ನನಗೆ ಜೀವನದ ಅನೇಕ ವಿಷಯಗಳ ಬಗ್ಗೆ ಮನಸ್ಸಿನಲ್ಲಿ ಗೊಂದಲವಾಯಿತು. ನಾವು ಯಾಕೆ ಜೀವಿಸಿದ್ದೇವೆ? ಜೀವನದ ಆಗು ಹೋಗುಗಳು ಯಾಕೆ ಈ ರೀತಿ ಆಗುತ್ತವೆ? ಇತ್ಯಾದಿ. ಈ ಪ್ರಶ್ನೆಗಳಿಗೆ ಉತ್ತರವಿರಲಿಲ್ಲ. ಇದರ ಬಗ್ಗೆಯ ತತ್ತ್ವಗಳು ನನಗೆ ಅರ್ಥವಾಗುತ್ತಿರಲಿಲ್ಲ. ಕೊನೆಗೆ, ಸ್ವಲ್ಪ ಸಮಯದ ನಂತರ ಬರಿಯ ಜೀವನ ಎಂಬುದು ಅರ್ಥಹೀನವಾದದ್ದು ಎಂದು ನನಗೆ ತಿಳಿಯಿತು. ನಾವು ನಮ್ಮ ಜೀವನಕ್ಕೆ ಕೊಡುವ ಅರ್ಥವೇ ಅದನ್ನು ಶಕ್ತಿಶಾಲಿ ಮತ್ತು ಅರ್ಥಮಯ ವಾಗಿಸುತ್ತದೆ. ಆಗ ಇಡೀ ಜಗತ್ತು ಒಂದು ಸುಂದರ ಪ್ರದೇಶವಾಗಿ, ಜೀವನವೂ ಸುಂದರವಾಗುತ್ತದೆ. ನಾವು ಅತ್ಯಂತ ಕಷ್ಟಕರ ವಾದ ಸನ್ನಿವೇಶದಿಂದ ಆವೃತ್ತವಾಗಿದ್ದರೂ, ನಾವು ಅದನ್ನು ದೂರದಿಂದ ನೋಡುವ ಶಕ್ತಿಯನ್ನು ಬೆಳೆಸಿಕೊಳ್ಳಬೇಕು.

ನಾನು ಕೇಳಿದ ಉಪನ್ಯಾಸಗಳೆಲ್ಲದರಲ್ಲೂ ನಿರ್ಲಿಪ್ತತೆಯ ಬಗ್ಗೆ ಹೇಳುತ್ತಿದ್ದರು. ನನಗೆ ಮೊದಲು ಮೊದಲು ಇದು ಹೇಗೆ ಕೆಲಸ ಮಾಡುತ್ತದೆ ಎಂಬುದು ಅರ್ಥವಾಗಲಿಲ್ಲ. ಆದರೆ, ನನ್ನ ದೃಷ್ಟಿಕೋನದಲ್ಲಿ ಸ್ವಲ್ಪ objectivity ಬಂದಿತು. ಮುಂಚೆ ನಾನು ಯಾವ ವಿಷಯಗಳಿಗೆ ಹೆಚ್ಚಿನ ಮೌಲ್ಯವನ್ನು ಕೊಡುತ್ತಿದ್ದೆನೋ, ಅವು ಈಗ ನನ್ನ ಕಣ್ಣಿಗೆ ದೂರದ ವಸ್ತುಗಳಾಗಿಯೂ, ಕಮ್ಮಿ ಭಾವುಕತೆಯಿಂದ ತುಂಬಿದ್ದಾಗಿಯು ಕಾಣ ತೊಡಗಿದವು. ಇದು ನನ್ನ ಉದಾಸೀನತೆ ಅಲ್ಲ. ನಾನು ಮೊದಲು ಎಷ್ಟು ಶ್ರದ್ಧೆಯಿಂದ ನಾನು ಕೆಲಸಮಾಡುತ್ತಿದ್ದೆನೋ, ಈಗಲೂ ಅಷ್ಟೇ ಶ್ರದ್ಧೆಯಿಂದ ಕೆಲಸ ಮಾಡುತ್ತೇನೆ. ಆದರೆ ನಾನು ಒಂದು ಹೆಜ್ಜೆ ಹಿಂದೆ ಸರಿದು, ಆಗು ಹೋಗುಗಳನ್ನು ಸ್ವಲ್ಪ ದೂರದಿಂದ ನೋಡುವುದನ್ನು ಕಲಿತಿದ್ದೇನೆ. ನನಗೆ ಸರಿಯೆಂಬ ರೀತಿಯಲ್ಲೇ ಎಲ್ಲರೂ ಕೆಲಸ ಮಾಡಬೇಕೆಂಬ ಹಠ ಈಗ ನನಗಿಲ್ಲ. ಅವರವರಿಗೆ ಹೇಗೆ ಸರಿತೋರುವುದೋ ಹಾಗೆ ಮಾಡಲಿ ಎಂದು  ಬಿಟ್ಟುಬಿಡುತ್ತೇನೆ. ಇದರಿಂದ ನನಗೆ ಸುಖ ಶಾಂತಿ ದೊರೆತು ಜೀವನವು ಆನಂದ ದಾಯಕವಾಗಿ ತೋರುತ್ತೆ. ಬಹುಶಃ ಈ ರೀತಿಯ ಅರಿವು ಬರಲು ಬಹಳ ಸಮಯವು ಬೇಕು. ಅರವತ್ತೈದು ವರ್ಷಗಳು ದಾಟಿದರೆ ಜೀವನವನ್ನು ಒಂದು ಹೊಸ ದೃಷ್ಟಿಯಿಂದ ನೋಡಿ, ಆನಂದ ಪಡುವ ಸಾಮರ್ಥ್ಯವನ್ನು ನಾವು ಬೆಳೆಸಿಕೊಳ್ಳುತ್ತೇವೆ.

* * *

# ಜೀವನದ ಇಂಧನ: ಕುಟುಂಬ ಮತ್ತು ಗೆಳೆಯರು

ನಾನು ಮತ್ತು ನನ್ನ ಕಸಿನ್‌ಗಳು ಆಗಾಗ ನಮ್ಮ ಹಿರಿಯರ ಬಗ್ಗೆ ಮಾತಾಡುತ್ತೇವೆ. ಅನೇಕ ವರ್ಷಗಳ ತನಕ ನಮ್ಮ ಅಜ್ಜ ಅಜ್ಜಿಯರು, ತಂದೆ ತಾಯಿಯರು, ದೊಡ್ಡಪ್ಪ ಚಿಕ್ಕಪ್ಪಂದಿರು, ದೊಡ್ಡಮ್ಮ ಚಿಕ್ಕಮ್ಮಂದಿರು, ಅತ್ತೆ ಮಾವಂದಿರುಗಳೇ ನಮ್ಮ ದೊಡ್ಡ ಸಂಸಾರದ ಆಧಾರ ಸ್ಥಂಭಗಳು. ನಮ್ಮಲ್ಲಿ ಯಾರಿಗಾದರೂ, ಏನಾದರೂ ತೊಂದರೆಯಾದರೆ, ಅದರ ಪರಿಹಾರಕ್ಕೆ ಮತ್ತು ಮನಸ್ಸಿಗೆ ಧೈರ್ಯ ತುಂಬಲು ನಾವು ಇವರನ್ನು ಕೋರುತ್ತಿದ್ದೆವು. ಅವರಿಂದ ಆ ತೊಂದರೆಗೆ ಪರಿಹಾರ ನೀಡಲಾಗದಿದ್ದರೂ, ಅವರು ನಮ್ಮ ಕಷ್ಟಗಳನ್ನು ತಾಳ್ಮೆಯಿಂದ ಕೇಳಿ ನಮಗೆ ಸ್ವಾಂತನ ನೀಡುತಿದ್ದರು. ಅವರು ನಮ್ಮ ಜೀವನದ ಒಂದು ಅವಿಭಾಜ್ಯ ಅಂಗ. ಅವರು ನಮ್ಮ ಸುತ್ತಲೂ ಒಂದು safety net ತರಹ ಇದ್ದರು. ಅವರುಗಳು ಯೋಗಿಗಳಂತೆ ಆಧ್ಯಾತ್ಮಿಕದಲ್ಲಿ ಮುಂದುವರೆದವರಾಗಿದ್ದರು. ಅವರು ಯಾರ ಬಗ್ಗೆಯೂ ಕೆಟ್ಟದ್ದನ್ನು ಹೇಳುತ್ತಿರಲಿಲ್ಲ, ಮತ್ತು ಇತರರಲ್ಲಿ ತಪ್ಪು ಕಂಡು ಹಿಡಿಯುತ್ತಿರಲಿಲ್ಲ. ಅವರು ತಮ್ಮ ಪಾಡಿಗೆ ಇರುತ್ತಿದ್ದರು ಮತ್ತು ಅವರಿಗೆ ಒಳ್ಳೆಯ ಹಾಸ್ಯ ಪ್ರಜ್ಞೆ ಇರುತ್ತಿತ್ತು.

ನನ್ನ ಚಿಕ್ಕಪ್ಪ ನುಗ್ಗೇಹಳ್ಳಿ ಕೇಶವ ಐಯಂಗಾರ್ ವೃತ್ತಿಯಲ್ಲಿ ವಕೀಲರು. ಅವರು ನನ್ನ ತಂದೆಗಿಂತ ಚಿಕ್ಕವರಾದರೂ, ಅವರೇ ಸಂಸಾರದ ಮುಖ್ಯಸ್ಥರಂತೆ ಕಾಣುತ್ತಿದ್ದರು, ಯಾಕೆಂದರೆ ಅವರು ಮೊದಲಿಂದ ಎಲ್ಲಾ ಜವಾಬ್ದಾರಿಯನ್ನೂ ವಹಿಸಿಕೊಂಡು, ಬಹಳ ಆಸ್ತೆಯಿಂದ ಕೆಲಸ ಮಾಡುತ್ತಿದ್ದರು. ಅವರ ಮಕ್ಕಳು ಮತ್ತು ನನ್ನ ಇತರ ಕಸಿನ್ ಗಳಿಗೂ ಅವರನ್ನು ಕಂಡರೆ ಭಯ. ಅವರ ಪ್ರಶ್ನೆಗಳಿಂದ ತಪ್ಪಿಸಿಕೊಳ್ಳಲು ಯತ್ನಿಸುತ್ತಿದ್ದರು. ಆದರೆ, ಅವರು ಬಹಳ ದಯಾಳು ಮತ್ತು ಪ್ರೀತಿಯುಳ್ಳವರು. ಅವರು ನಮ್ಮನ್ನು ನಾವು ಶಾಲೆಯಲ್ಲಿ ಹೇಗೆ ಓದುತಿದ್ದೇವೆ ಎಂದು ತಿಳಿಯಲು ಬೇರೆ ಬೇರೆ ವಿಷಯಗಳ ಬಗ್ಗೆ ಪ್ರಶ್ನೆಗಳನ್ನು ಕೇಳುತ್ತಿದ್ದರು. ಈ ಕಷ್ಟಕರವಾದ ಪ್ರಶ್ನೆಗಳಿಗೆ ಉತ್ತರ ಕೊಡಲು ನಾವು ಹೆಣಗಾಡುತಿದ್ದೆವು. ಪ್ರತಿ ವಾರಾಂತ್ಯದಲ್ಲಿ ಅವರು ನಮ್ಮನ್ನು ನಮ್ಮ ಹಳ್ಳಿಯಾದ ನುಗ್ಗೇಹಳ್ಳಿಗೆ ಅವರ ಕಾರಿನಲ್ಲಿ ಕರೆದುಕೊಂಡು ಹೋಗುತಿದ್ದರು. ಅಲ್ಲಿ ಅವರು ನನಗೋಸ್ಕರ ಒಂದು western style toilet ಕಟ್ಟಿಸಿದ್ದರು. ಅವರಿಗೆ ನನ್ನನ್ನು ಕಂಡರೆ ಒಂದು ವಿಶೇಶವಾದ ಪ್ರೀತಿ. ಅಲ್ಲಿ ನಾನು ಮುಂಜಾನೆ ತೋಟದಲ್ಲಿ ಸುತ್ತಾಡುತ್ತಿದ್ದೆ. ಅವರಿಗೂ ಮುಂಜಾನೆ walk ಹೋಗುವ ಅಭ್ಯಾಸವಿತ್ತು. ಅಲ್ಲದೆ ಇಬ್ಬರಿಗೂ ತೋಟಗಾರಿಕೆ ಎಂದರೆ ಪ್ರಿಯ. ಅವರು ನಾನು ಬೆಳೆಸಿರುವ ಗಿಡಗಳ ಬಗ್ಗೆ ಆಸಕ್ತಿ ತೋರುತ್ತಿದ್ದರು. ಅನೇಕ ಸ್ಥಳಗಳಲ್ಲಿ ಗಿಡ ಮರಗಳನ್ನು ಬೆಳೆಸಿದ್ದರು.

ಅವರ ಹೆಂಡತಿ ಶಾಂತ ಮತ್ತು ಅವರಿಗೆ ಮೂರು ಮಕ್ಕಳು– ರಾಮದಾಸ್, ರಮೇಶ್ ಮತ್ತು ಶ್ರೀಮತಿ ರಾಮದಾಸ್ ನಾವು ಚಿಕ್ಕವರಾಗಿದ್ದಾಗ ನಡೆಸಿದ ಅನೇಕ ಸಾಹಸಗಳ ಹೀರೋ. ರಮೇಶ್ ಎಷ್ಟು ಬುದ್ಧಿವಂತನೋ, ಅಷ್ಟೇ ತುಂಟನೂ ಕೂಡ. ರಮೇಶ್ ಮದ್ರಾಸಿಗೆ ಬರುವುದಕ್ಕೆ ಸಾಕಷ್ಟು ಮುಂಚೆಯೇ ನನಗೆ ಪತ್ರ ಬರೆದು ತಿಳಿಸುತ್ತಿದ್ದ. ನಾನು ಅವನಿಗೆ ಪ್ರತಿರಾತ್ರಿ ಕಥೆ ಹೇಳಬೇಕಿತ್ತು. ನನಗೆ ಚೆನ್ನಾಗಿ ಜ್ಞಾಪಕವಿರುವ ಘಟನೆ ಎಂದರೆ ಅವನಿಗೆ skin rash ಬಂದು ಅವನಿಂದ ಅದು ನಮ್ಮೆಲ್ಲರಿಗೂ ಹರಡಿದ್ದು. ಅದೂ ನಮ್ಮ ಅಮ್ಮ, ಅದು ಮಿಕ್ಕ ಮಕ್ಕಳಿಗೆ ಹರಡದಿರಲಿ ಎಂದು, ಅವನಿಗೆ ಒಂದು ದೊಡ್ಡ gloves ಹೊಲಿದು ಕೊಟ್ಟಮೇಲೂ ನಾವು ಸಾಕಷ್ಟು ದಿನ ಅವನಿಗೆ ಈ ವಿಷಯದ ಬಗ್ಗೆ ರೇಗಿಸುತ್ತಿದ್ದೆವು. ನಮ್ಮ ತಂದೆ ಅವರ ICI ಕಂಪನಿ ಯಿಂದ ತಂದ Tetamasol soap ಎಷ್ಟು ಚೆನ್ನಾಗಿ ಕೆಲಸ ಮಾಡುತ್ತಿದ್ದೆಂದರೆ ನಾನು ನನ್ನ school ದಿನಗಳಲ್ಲಿ ಈ ರೀತಿಯ skin rash ಬಂದಾಗ ಅದನ್ನು ಮತ್ತೆ ಉಪಯೋಗಿಸಿದೆ ಮತ್ತು ಇತರರಿಗೂ ಕೊಟ್ಟೆ. ಶ್ರೀಮತಿ ನನಗಿಂತ ಚಿಕ್ಕವಳು ಆದರೂ ನಾವು ಬಹಳ close. ಅವಳು ನನ್ನನ್ನು ಅವರ ಮನೆಯಲ್ಲಿ ಇರಲು ಹೇಳುತ್ತಿದ್ದಳು. ನನಗೆ ಎಲ್ಲವನ್ನೂ ಸರಿಯಾಗಿ ಜೋಡಿಸಿಡುವ ಹುಚ್ಚು. ಅವಳ ಕಪಾಟು ಅಸ್ತವ್ಯಸ್ತವಾಗಿರುತ್ತಿತ್ತು. ಈ ಕಾರಣಕ್ಕಾಗಿ ನಾನು ಅವಳೊಡನೆ ಅನೇಕಸಲ ಕೂಗಾಡಿದ್ದೇನೆ. ರಾಮದಾಸನ ಹೆಂಡತಿ ಗೀತಾಗೆ ತೋಟಗಾರಿಕೆಯಲ್ಲಿ ಬಹಳ ಅಭಿರುಚಿ. ಅವಳು ಅನೇಕ ವಿಧವಾದ orchids ಗಳನ್ನು ಶೇಖರಿಸಿದ್ದಾಳೆ. ರಮೇಶನ ಹೆಂಡತಿ ಹೇಮಾ ಹೆಸರಾಂತ physiotherapist, trained in Germany. ಅವಳು ಮಲ್ಲೇಶ್ವರದಲ್ಲಿ ಒಂದು clinic ಇಟ್ಟುಕೊಂಡಿದ್ದಾಳೆ. ಅವಳು ಒಳ್ಳೆಯ cook ಕೂಡ. ಅವಳು ಮಾಡುವ 'ಬಿಸಿಬೇಳೆ ಭಾತ್' ಒಮ್ಮೆ ಸವಿದರೆ ನಿಮಗೆ ಬೇರಾರು ಮಾಡುವ ಬಿಸಿಬೇಳೆ ಭಾತ್ ಹಿಡಿಸುವುದಿಲ್ಲ. ಈಗ ಇವರೆಲ್ಲರಿಗೂ ಮೊಮ್ಮಕ್ಕಳಾಗಿದೆ ಮತ್ತು ಅವರುಗಳು ಇವರ ಸಮಯವನ್ನು ಪೂರ್ಣವಾಗಿ ಆಕ್ರಮಿಸಿಕೊಂಡಿದ್ದಾರೆ.

ನನ್ನ ಅತಿ ಕಿರಿಯ ಚಿಕ್ಕಪ್ಪ ಗೋಪಾಲ ಅಯ್ಯಂಗಾರ್ ತೀರಿಕೊಂಡ ಮೇಲೆ, ನನಗೆ ಹಿರಿಯರ ತಲೆಮಾರೇ ಕಳೆದು ಹೋದಹಾಗೆ ಅನಿಸಿತು. ನನ್ನ ತಾಯಿಯ ದೇಹಾಂತವಾದ ನಂತರ ಅವರು ನನ್ನ ಕ್ಷೇಮದ ಬಗ್ಗೆ ಬಹಳ ಕಾಳಜಿ ವಹಿಸಿದ್ದರು. ಅವರು ಅನೇಕಸಲ ನನ್ನ ಗೇಟಿನ ಬಳಿ ಒಂದು ಸ್ಟೂಲಿನ ಮೇಲೆ ಕುಳಿತಿರುತ್ತಿದ್ದರು. ಅವರ ಮತ್ತು ಶಾರದಾ ಚಿಕ್ಕಮ್ಮನ ಇರುವಿಕೆ ನನಗೆ ಬಹು ದೊಡ್ಡ ಧೈರ್ಯ ಮತ್ತು ಬಲವಾಗಿತ್ತು. ಈಗ ಅವರೆಲ್ಲಾ ಎಲ್ಲಿ ಹೋದರು? ನನಗೆ ಮತ್ತು ನನ್ನ ಕಸಿನ್‌ಗಳಿಗೆ ಈಗ ನಾವೇ ಕಾಂಪೌಂಡಿನಲ್ಲಿ ದೊಡ್ಡವರುಎಂಬುದು ಹೊಳೆಯಿತು ಮತ್ತು ನಗುವೂ ಬಂದಿತು. ಈಗಲೂ ನಾನು

ಹದಿನೆಂಟು ಇಪ್ಪತ್ತು ವರ್ಷದ ಹುಡುಗಿಯಂತೆ ಇದ್ದೇನೆ. ನನಗೆ ನಾನು ದೊಡ್ಡವಳು ಎಂದು ಅನಿಸುವುದೇ ಇಲ್ಲ. ಇನ್ನು ನಮ್ಮ ಮುಂದಿನ ಪೀಳಿಗೆಗೆ ಏನು ಅನಿಸುತ್ತದೆಯೋ? ನಮ್ಮಲ್ಲಿ ನಮ್ಮ ಹಿರಿಯರ ರೀತಿಯ ಪಕ್ವತೆ ಇದೆಯೇ ಎಂಬುದೇ ನನಗೆ ಗೊತ್ತಿಲ್ಲ.

ಎಲ್ಲರೂ ಗೋಪಾಲ ಅಯ್ಯಂಗಾರರನ್ನು 'ಮಾಮ' ಎಂದು ಕರೆಯುತ್ತಿದ್ದರು. ಅವರ ಮಕ್ಕಳೂ ಕೂಡ ಅದೇರೀತಿ ಕರೆಯುತ್ತಿದ್ದರು. ಅವರು ಬಹಳ ಸ್ವಾರಸ್ಯಕರವಾದ ವ್ಯಕ್ತಿ. ಉಪನಿಷಎದ್‌ತ್‌ ಮತ್ತು ನಮ್ಮ ಹಿಂದೂ ಪುರಾಣಗಳಿಂದ ಅನೇಕ ವಿಷಯಗಳನ್ನು ಹೇಳುತ್ತಿದ್ದರು. ಅವರು ಎಪ್ಪತ್ತು ವರ್ಷಗಳು ದಾಟಿದನಂತರ ಹೋಮಿಯೋಪತಿ ವೈದ್ಯರಾಗಲು ನಿಶ್ಚಯಿಸಿ ಆ ವಿಷಯವನ್ನು ಕಲಿತರು. ಅವರು 'ರೇಕಿ' ಕಲಿತು ನನ್ನನ್ನೂ ಕಲಿಯಲು ಹೇಳಿದರು. ಅವರು 'ರೇಕಿ'ಯಲ್ಲಿ ಎಷ್ಟು ನಿಪುಣರಾದರೆಂದರೆ ಅವರು ಒಮ್ಮೆ ರೇಕಿ ಕಲಿಯಲು ಒಬ್ಬ ಗುರುವಿನ ಬಳಿ ಹೋದಾಗ ಆ ಗುರುವು ಇವರ ಆಳವಾದ ಜ್ಞಾನವನ್ನು ನೋಡಿ ಇವರನ್ನು ನೇರವಾಗಿ ಒಂದು ಚಾನೆಲ್ ಮಾಡಿದರು. ಅವರು ರೇಕಿ ಮೂಲಕ ಎದುರಿಗಿರುವರನ್ನು ಮಾತ್ರವಲ್ಲದೇ ದೂರದಲಿರುವವರನ್ನೂ ಗುಣ ಪಡಿಸುತ್ತಿದ್ದರು. ಅವರಿಗೆ ಪಿರಮಿಡ್ ಗಳ ಶಕ್ತಿಯಲ್ಲಿ ಬಹಳ ನಂಬಿಕೆ. ಅವರು ನನಗೆ ಒಂದು ಪಿರಮಿಡ್ ಮಾಡಿ ಕೊಟ್ಟು ಅದನ್ನು ನನ್ನ ಮಂಚದ ಕೆಳಗೆ ಇಟ್ಟುಕೊಂಡರೆ ನನ್ನ ಶಕ್ತಿಯು ಹೆಚ್ಚುವುದು ಎಂದು ಹೇಳಿದ್ದರು.ಅವರಿಗೆ ನನಗಾಗಿ ಒಂದು ದೊಡ್ಡ ಪಿರಮಿಡ್ ಮಾಡಿ ಅದನ್ನು ನನ್ನ ತೋಟದಲ್ಲಿ ಇಡಬೇಕು, ನಾನು ಅದರೊಳಗೆ ನಿತ್ಯವೂ ಇಪ್ಪತ್ತು ನಿಮಿಷಗಳು ಕೂತರೆ ನನ್ನ ಮನಸ್ಸು ಶಾಂತವಾಗಿ ನನ್ನ ಕಷ್ಟಗಳೆಲ್ಲಾ ನೀಗುವುವು ಎಂದು ಅನಿಸಿತ್ತು. ಅವರು ಅದಕ್ಕೆ ಬೇಕಾದ ತಯಾರಿಕೆಯನ್ನು ಮಾಡಿಕೊಂಡಿದ್ದರು. ಆದರೆ ಆ ಯೋಜನೆಯು ಸಾಕಾರವಾಗಲಿಲ್ಲ. ಅವರಿಗೆ ಮರಣಾನಂತರ ಜೀವನದ ಬಗ್ಗೆ ನಂಬಿಕೆ ಇತ್ತು, ಅವರು ಅನೇಕಸಲ planchet sessions ಮಾಡಿದ್ದರು ಎಂದು ನನ್ನ ಅಮ್ಮ ಹೇಳಿದರು.

ಶಾರದ ಚಿಕ್ಕಮ್ಮ ಸಂಸಾರವನ್ನು ನಡೆಸುವುದರಲ್ಲಿ ಮತ್ತು ಅವರ ನಾಲ್ಕು ಮಕ್ಕಳಾದ ಜಯರಾಮ, ಕೇಶವ, ಶ್ರೀಹರಿ(ಚೋಟು) ಮತ್ತು ಕೇಸರಿ (ಚಿಲ್ಲು)ಅವರುಗಳನ್ನು ನೋಡಿಕೊಳ್ಳುವುದರಲ್ಲಿ ನಿರತರಾಗಿದ್ದರು. ನಮ್ಮ ಅಜ್ಜಿಯು ತನ್ನ ಎಲ್ಲ ಮಕ್ಕಳಿಗೂ ಶ್ರೀ ರಾಮನ ಹೆಸರನ್ನು ಇಟ್ಟಿದ್ದರು. ಶ್ರೀಹರಿ ಮತ್ತು ಕೇಸರಿ ನುಗ್ಗೇಹಳ್ಳಿಯ ನರಸಿಂಹದೇವರ ಹೆಸರುಗಳಾಗಿದ್ದವು. ಅವಳಿಗೆ ಎಷ್ಟು ಆಳವಾದ ರಾಮ ಭಕ್ತಿಯಿತ್ತೆಂದರೆ ಅವಳು ನಿದ್ದೆಯಲ್ಲಿ ರಾಮನೊಡನೆ ಮಾತನಾಡುತ್ತಿದ್ದಳು ಮತ್ತು ಅನೇಕಸಲ ಅವಳ ಸುತ್ತ ಮುತ್ತಲಿದ್ದ ಬಂಧು ಬಳಗದವರ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಳ್ಳುತ್ತಿದ್ದಳು. ಒಂದು ಸಲ ಒಬ್ಬ

ಕಳ್ಳನು ಬಂದು ಬೆಳ್ಳಿಯ ವಸ್ತುಗಳು ಮತ್ತು ದೇವರ ಬೆಳ್ಳಿಯ ಮೂರ್ತಿಯನ್ನು ಕದ್ದು ಕೊಂಡು ಹೋದಾಗ, ಅವಳು ಆ ಕಳ್ಳನು ಆ ವಸ್ತುಗಳನ್ನು ಹೂತಿಟ್ಟಿರುವ ಸ್ಥಳವನ್ನು ಸರಿಯಾಗಿ ತೋರಿಸಿ ಕಳುವಾದ ಎಲ್ಲಾ ವಸ್ತುಗಳು ದೊರೆತವು. ಅವರ ಮನೆಯಲ್ಲಿ ಆ ಬೆಳ್ಳಿಯ ಮೂರ್ತಿ ಈಗಲೂ ಇದೆ. ಶಾರದ ಚಿಕ್ಕಮ್ಮ ವೀಣೆ ಮತ್ತು ಹಾರ್ಮೋನಿಯಂ ನುಡಿಸುತ್ತಿದ್ದರು. ಅವರ ಮಕ್ಕಳೆಲ್ಲಾ ಎಂಜಿನೀರಿಂಗ್ ಓದಿದ್ದಾರೆ. ಶ್ರೀಹರಿಯ ಹೆಂಡತಿ ನಿರ್ಮಲ ಓರ್ವ architect. ಅವಳು ಏ.ಪಿ.ಡಿ ಯ ಅನೇಕ ಕಟ್ಟಡಗಳ ವಿನ್ಯಾಸವನ್ನು ಮಾಡಿದ್ದಾಳೆ. ಇವುಗಳಲ್ಲಿ ಜೀವನಬೀಮಾ ನಗರದ ಮತ್ತು ಲಿಂಗರಾಜಪುರದ ಕಟ್ಟಡಗಳೂ ಸೇರಿವೆ. ಕೇಸರಿಯ ಹೆಂಡತಿ ಉಷಾ, ಅವನಂತೆಯೇ ಓರ್ವ ಎಲೆಕ್ಟ್ರಾನಿಕ್ ಎಂಜಿನಿಯರ್. ಅವಳು ಕರ್ನಾಟಕ ಶಾಸ್ತ್ರೀಯ ಸಂಗೀತವನ್ನು ಹಾಡುತ್ತಾಳೆ. ಏ.ಪಿ.ಡಿ ಯ ಅನೇಕ ಸಮಾರಂಭಗಳಲ್ಲಿ ಹಾಡಿದ್ದಾಳೆ. ಈಗ ನನ್ನ ಕಸಿನ್‌ಗಳ ಮಕ್ಕಳು ಕಾಂಪೌಂಡಿನಲ್ಲಿ ಒಂದಾಗಿ ಸೇರಿ ಆಡಿ ಸಂಭ್ರಮಿಸುತ್ತಾರೆ. ನಾವು ಬೇಗ ಮಲಗುವುದರಿಂದ ಅವರ ಒಡನಾಟಗಳಿಗೆ ಹೆಚ್ಚು ಗಮನ ಕೊಡುವುದಿಲ್ಲ. ಸಮಯವು ಬದಲಾಗಿದೆ.

ನಮ್ಮ ತಂದೆಯ ಸಹೋದರಿಯರಾದ ದೀ ಅತ್ತೆ ಮತ್ತು ಶಾರದಾ ಅತ್ತೆ ಅವರವರದೇ ಆದ ರೀತಿಯಲ್ಲಿ ಅನುಪಮರಾಗಿದ್ದರು. ಅವರಿಬ್ಬರೂ ಹೆಚ್ಚು ಓದಿಲ್ಲದಿದ್ದರೂ ಅವರಿಗೆ ಹೆಚ್ಚಿನ ಜ್ಞಾನವೂ, ಅರಿವೂ ಇದ್ದಿತು ಮತ್ತು ಇಂಗ್ಲೀಷ್ ಭಾಷೆಯನ್ನು ಚೆನ್ನಾಗಿ ಬಲ್ಲವರಾಗಿದ್ದರು. ದೀ ಅತ್ತೆಯು ಅವರ ಗಂಡನ Standard Batteries ಸಂಸ್ಥೆಯ ಕಾರ್ಯಕಲಾಪಗಳಲ್ಲಿ ನೆರವಾಗುತ್ತಿದ್ದರು. ಅವರು ವಾಣಿಜ್ಯ ಜಗತ್ತಿನಲ್ಲಿ ಜನಪ್ರಿಯರಾಗಿದ್ದರಲ್ಲದೆ, ಮುಂಬೈಯಿನ ಕೆಲವು ಹೆಸರಾಂತ ಮಹಿಳೆಯರೊಡನೆ ಸೇರಿ Family Planning Association of India ಎಂಬ ಸಂಸ್ಥೆಯನ್ನು ಹುಟ್ಟುಹಾಕಿದರು. ಇದರ ಚಟುವಟಿಕೆಗಳು ಬೃಹತ್ ಪ್ರಮಾಣದಾಗಿದ್ದವು ಮತ್ತು ದೀ ಅತ್ತೆ ಅನೇಕ ವರ್ಷಗಳು ಆ ಸಂಸ್ಥೆಯ ಖಜಾಂಚಿಯಾಗಿ ಸೇವೆ ಸಲ್ಲಿಸಿದರು.ಆಗಿನ ಕಾಲದಲ್ಲಿ ಕುಟುಂಬ ಯೋಜನೆ ಒಂದು ನಿಷಿದ್ಧವಾದ ವಿಷಯವಾಗಿತ್ತು. ಮಹಿಳೆಯರೊಂದಿಗೆ ಈ ವಿಷಯವನ್ನು ಬಹಿರಂಗವಾಗಿ ಚರ್ಚಿಸುವುದು ಬಹಳ ಕಷ್ಟವಾಗಿತ್ತು. ಅವರು ಆ ಸಂಸ್ಥೆಯ ಖಜಾಂಚಿಯ ಜವಾಬ್ದಾರಿಯಿಂದ ನಿವೃತ್ತರಾದಾಗ ಅವರು ಪ್ರಭಾವನ್ನು ಆ ಸ್ಥಾನವನ್ನು ತೆಗೆದುಕೊಳ್ಳಲು ಹೇಳಿದರು. ಅಂತೆಯೇ ಪ್ರಭಾ ಆ ಕೆಲಸವನ್ನು ಮುಂದಿನ ನಾಲ್ಕು ದಶಕಗಳ ಕಾಲ ನೋಡಿಕೊಂಡಳು.

ದೀ ಅತ್ತೆಗೆ ಬಹಳ ಸೃಜನಾತ್ಮಕ ಶಕ್ತಿ ಇದ್ದಿತು. ಅವರು ಮಾಂತ್ರಿಕರಂತೆ ಬೇಡದ ವಸ್ತುಗಳಿಂದ ಸುಂದರವಾದ ಕಲಾತ್ಮಕ ವಸ್ತುಗಳನ್ನು ತಯಾರು ಮಾಡುತ್ತಿದ್ದರು. ಅವರು

ಈ ವಸ್ತುಗಳನ್ನು ಮಾರಿ ಆದುಡ್ಡನ್ನು ಸಮಾಜ ಸೇವೆಗೆ ಉಪಯೋಗಿಸುತ್ತಿದ್ದರು. ಅವರಿಗೆ ಸಮಾಜ ಮುಖಿ ಕಾರ್ಯಗಳಿಗೆ ಹಣವನ್ನು ಹೊಂದಿಸಲು ಹೊಸ ಹೊಸ ಯೋಚನೆಗಳ ಕೊರತೆಯೇ ಇರಲಿಲ್ಲ. ಪ್ರಭನ ಮದುವೆಗೆ ಎರಡು ತಿಂಗಳ ಮುಂಚೆಯೇ ಅವರು ನಮ್ಮ ಮನೆಗೆ ಬಂದುಅನೇಕ ವಸ್ತುಗಳನ್ನು ಮಾಡುವುದನ್ನು ಹೇಳಿಕೊಟ್ಟರು. ಅವುಗಳನ್ನು ಮದುವೆಯ ಸಮಯದಲ್ಲಿ ಮಾರಿದೆವು. ನಾವು ಮಾಡಿದ ಒಂದು quilt ಅನ್ನು ಒಂದು raffle ನಲ್ಲಿ ೨೫೦ ಅಥವಾ ೩೦೦ ರೂಪಾಯಿಗೆ ಮಾರಿದೆವು. ಆಗಿನ ಕಾಲಕ್ಕೆ ಅದು ಬಹಳ ದೊಡ್ಡ ಮೊತ್ತವೆನ್ನಬಹುದು. ಕೆಲವರಿಗೆ ಜನರೊಡನೆ ಆಕರ್ಷಕವಾಗಿಯೂ, ಗೌರವದೊಡನೆಯೂ ನಡೆದುಕೊಳ್ಳುವ ಕಲೆಯು ಗೊತ್ತಿರುತ್ತದೆ. ದೀ ಅತ್ತೆಗೆ ಈ ಕಲೆಯಿತ್ತು. ಅವರು ನಮ್ಮ ಹಣ ಸಂಗ್ರಹಕ್ಕೆ role model. ನಾನು ಸಣ್ಣ ಸಣ್ಣ ಮೊತ್ತಗಳನ್ನು ಸಂಗ್ರಹಿಸಿ ಅವನ್ನು ಒಂದು ಹುಂಡಿಯಲ್ಲಿ ಹಾಕಿಡುತ್ತಿದ್ದೆ. ಒಂದು ಸಲ ನಾವು ಮಲ್ಲೇಶ್ವರದ ಕ್ಲಬ್ಬಿನಲ್ಲಿ ಒಂದು ಮ್ಯಾಜಿಕ್ ಪ್ರದರ್ಶನವನ್ನು ಏರ್ಪಡಿಸಿದ್ದೆವು. ಅದಕ್ಕೆ ಟಿಕೆಟ್ ೧ ರೂಪಾಯಿ ಮತ್ತು ೮ ಆಣೆಗಳು. ನಾನು ಮತ್ತು ನನ್ನ ಕಸಿನ್ಸ್ ಎಲ್ಲರೂ ಟಿಕೆಟ್ ಮಾರಲಾರಂಭಿಸಿದೆವು. ನಾವು ೫೦೦ ರೂ. ಟಿಕೆಟ್ಟು ಮಾರಿದೆವು. ಇದರಲ್ಲಿ ದೀ ಅತ್ತೆಯೂ ಸೇರಿದ್ದರು. ಇಂದು ಅವರು ಏ.ಪಿ.ಡಿ ಯ ಕಟ್ಟಡ ವನ್ನು ನೋಡಿದರೆ ಆಶ್ಚರ್ಯ ಪಡಬಹುದು. ಆಗ, ಆ ಕಟ್ಟಡವನ್ನು ಕಟ್ಟಿದಾಗ ಒಂದು ಕಡೇ ಗೋಡೆಗೆ ಬದಲು ದೊಡ್ಡ ಜಾಲಿ ಇತ್ತು. ಮಳೆ ಬಂದರೆ ಈ ಜಾಲಿಯ ಮೂಲಕ ನೀರು ಮತ್ತು ತಣ್ಣಗಿನ ಗಾಳಿ ಒಳಗೆ ಬರುತ್ತಿತ್ತು. ಅಲ್ಲಿ ಒಂದು ಬಾಗಿಲನ್ನು ಹಾಕಲು ನನಗೆ ೭೦೦ ರೂ. ಗಳು ಬೇಕಿದ್ದವು. ಅದು ನನ್ನ ಈ savings ನಿಂದ ಸಿಕ್ಕಿತು.

ದೀ ಅತ್ತೆಗೆ ತೋಟಗಾರಿಕೆ ಎಂದರೆ ಬಹಳ ಇಷ್ಟ. ಅವರ ಸಮುದ್ರದ ಕರೆಯಲ್ಲಿದ್ದ cottege ನಲ್ಲಿ ಒಂದು ಸುಂದರ ತೋಟವನ್ನು ಮಾಡಿದ್ದರು. ಅವರ ಮೂರು ಗಂಡು ಮಕ್ಕಳು ಮತ್ತು ಒಬ್ಬಳು ಮಗಳೂ ನನಗೆ ಬಹಳ ಬೇಕಾದವರು. ಲೋಕನಾಥ್ ಎಲ್ಲರಿಗಿಂತ ದೊಡ್ಡವನು. ಅವನು ಎತ್ತರವಾದ ಬಹಳ ಸುಂದರವಾದ ಹುಡುಗ. ಅವನ ತಮ್ಮ ಡಾ. ರಘುನಾಥ ಒಬ್ಬ orthopaedic surgeon. Army ಯಲ್ಲಿ ಕೆಲಸ ಮಾಡುತಿದ್ದ. ಅವನು ಕೆಲಸದಿಂದ ನಿವೃತ್ತನಾದ ಬಳಿಕ ನಮಗೆ ಏ.ಪಿ.ಡಿ ಯಲ್ಲಿ ಬಹಳ ಸಹಾಯ ಮಾಡಿದ. ಏ.ಪಿ.ಡಿಯ ಮಕ್ಕಳನ್ನು ಪರಿಶೀಲಿಸಿ ಅವರ ಏಕಲಾಂಗತೆಗೆ ಸೂಕ್ತ ಪರಿಹಾರವನ್ನು ತಿಳಿಸುತ್ತಿದ್ದ. ನಾವು ಚಿಕ್ಕ ವಯಸ್ಸಿನಿಂದಲೇ ಬಹಳ ನಿಕಟವಾಗಿದ್ದೆವು. ನಾನು ಆಗ ದೀ ಅತ್ತೆಯ ಮನೆಯಲ್ಲಿ ನನ್ನ ಚಿಕಿತ್ಸೆಯಿಂದ ಸುಧಾರಿಸಿಕೊಳ್ಳುತಿದ್ದೆ, ಆಗ ಅವನು ನನಗೆ ಕಥೆಗಳನ್ನು ಓದಿಹೇಳುತಿದ್ದ. ೧೯೬೨ ರಲ್ಲಿ ಚೀನಿಯರ ಜೊತೆ ಯುದ್ಧವಾದಾಗ, ಗಾಯಗೊಂಡು

ಬಹಳ ಕಾಲ ಹಿಮದಲ್ಲಿಬಿದ್ದಿದ್ದ ಒಬ್ಬ ಸೈನಿಕನಿಗೆ ಅವನು ಎರಡೂ ಕೈ ಕಾಲುಗಳನ್ನು amputate ಮಾಡಬೇಕಾಗಿ ಬಂದಿತು. ಆಗ ಅವನು ಆ ಸೈನಿಕನ ಎರಡೂ ಕೈಗಳಲ್ಲಿ ಸ್ವಲ್ಪ ಸೀಳನ್ನು ಮಾಡಿ ಅವನು ವಸ್ತುಗಳನ್ನು ಹಿಡಿದುಕೊಳ್ಳಲು ಆಗುವಂತೆ ಮಾಡಿದ. ಅವನು ನನ್ನನ್ನು ಆ ಸೈನಿಕನನ್ನು ನೋಡಲು ಒತ್ತಾಯಿಸಿದ. ನಾನು ಅವನನ್ನು ನೋಡಲು ರೆಡ್ ಕ್ರಾಸ್ ಹೋಮಿಗೆ ಹೋದೆ. ಆದರೆ ಅವನಿಗೆ ಯಾರನ್ನೂ ನೋಡಲು ಇಷ್ಟವಿರಲಿಲ್ಲ. ನಾನು ಮತ್ತು ದಿವಾನ್ ಬಿಡದೆ ಅವನನ್ನು ನೋಡಲು ಮತ್ತೆ ಮತ್ತೆ ಪ್ರಯತ್ನಿಸಿದೆವು. ಕೊನೆಗೆ ಅವನು ನಮ್ಮ ಸ್ನೇಹಿತನಾದ. ಈ ರೀತಿ ಎರಡೂ ಕೈ ಕಾಲುಗಳನ್ನು ಕಳೆದುಕೊಂಡ ವ್ಯಕ್ತಿಯ ಕಷ್ಟಗಳು ಏನು ಮತ್ತು ಅವನು ಎದುರಿಸುವ ಸಮಸ್ಯೆಗಳು ಏನು ಎಂಬುದು ನನಗೆ ಮೊದಲಬಾರಿಗೆ ತಿಳಿಯಿತು.

ನನ್ನ ಅಕ್ಕ ಪ್ರಭ ದೀ ಅತ್ತೆಯ ಮೂರನೇ ಮಗ ವಿಜಯನನ್ನು ಮದುವೆಯಾದಳು. ಅವನು ಬಹಳ ಸ್ನೇಹಮಯಿ. ಜೊತೆಗಿದ್ದವರೊಡನೆ ಸೌಹಾರ್ದದಿಂದ ವರ್ತಿಸಿ, ಸಮಯ ಬಂದರೆ ಸಹಾಯಮಾಡುತಿದ್ದ. ನನಗೆ ಅವನ ಮನೆಯಲ್ಲಿ ಯಾವಾಗಲೂ ಹಾರ್ದಿಕ ಸ್ವಾಗತವಿತ್ತು. ಪ್ರಭನ ಮನೆ ನನಗೆ ಎರಡನೆಯ ಮನೆಯಂತೆ. ಅವರ ಮನೆಯಲ್ಲಿ ನನಗೆ ಬೇಕಾದಂತೆ, ಮೆಟ್ಟಲುಗಳಿರುವ ಜಾಗಗಳಲ್ಲೆಲ್ಲಾ ಇಳಿಜಾರುಗಳು ಮತ್ತು ಅಗಲವಾದ ಬಾಗಿಲುಗಳಿದ್ದವು.ವಿಜಯನ ಅಕ್ಕ ಸರೋಜ್‌ಗೆ ಕಲಾತ್ಮಕ ವಸ್ತುಗಳ ಬಗ್ಗೆ ಬಹಳ ಆಸಕ್ತಿ ಇತ್ತು. ಅವಳೂ ಅವಳ ಗಂಡನೂ ರಂಗ ಚಟುವಟಿಕೆಗಳಲ್ಲಿ ಸಕ್ರಿಯರಾಗಿದ್ದರು ಮತ್ತು ಅನೇಕ ಜನಪ್ರಿಯ ನಾಟಕಗಳನ್ನು ತಯಾರಿಸಿದ್ದರು.

ನಮ್ಮ ತಂದೆಯ ಎರಡನೆಯ ಸಹೋದರಿ, ಶಾರದಾ ಒರ್ವ ಸರಳವಾದ ವ್ಯಕ್ತಿ. ಅವಳ ನಾಲ್ಕು ಜನ ಮಕ್ಕಳನ್ನು ಯಾವ ಆಡಂಬರವೂ ಇಲ್ಲದೆ ಸಾಕಿದ್ದಳು. ಕಳೆದ ವರ್ಷ ಅವಳ ಹಿರಿಯ ಮಗ ದೈವಾದೀನನಾದ. ಅವಳಿಗೆ ರಾಧಾ ಮತ್ತು ಪದ್ಮ ಎಂಬ ಇಬ್ಬರು ಹೆಣ್ಣು ಮಕ್ಕಳು. ನನ್ನ ಕಸಿನ್ ಶ್ರೀಮತಿ ಅವಳ ಚಿಕ್ಕ ಮಗನಾದ ಶ್ರೀಧರನನ್ನು ಮದುವೆಯಾಗಿದ್ದಾಳೆ.ಅವರು ನಮ್ಮ ಮನೆಯ ಹತ್ತಿರವೇ ಮಲ್ಲೇಶ್ವರದಲ್ಲಿ ಇದ್ದಾರೆ. ಅವರು ಹತ್ತಿರ ಇರುವುದು ನನಗೆ ಬಹಳ ಸಂತಸದ ವಿಷಯ.

ನಾನು ನಮ್ಮ ಅಮ್ಮನ ಕಡೆಯವರ ಬಗ್ಗೆ ಹೇಳಬೇಕು. ಮೊದಲಿಗೆ ಅಪ್ಪ ಮತ್ತು ದೊಡ್ಡಮ್ಮ – ನನ್ನ ತಾಯಿಯ ಕಡೆಯ ಅಜ್ಜ ಅಜ್ಜಿಯರು – ಕೃಷ್ಣ ಸ್ವಾಮಿ ಮತ್ತು ಮುತ್ತಮ್ಮ. ಅಪ್ಪ ಯಾವಾಗಲೂ positive attitude ಹೊಂದಿದ ಮನುಷ್ಯ. ಎಂತಹ ಸನ್ನಿವೇಶವೇ ಬಂದರೂ ಅವರ ಆತ್ಮ ವಿಶ್ವಾಸ ಕಮ್ಮಿಯಾಗುತ್ತಿರಲಿಲ್ಲ. 'ಇದೂ ಕಳೆದು

ಹೋಗುತ್ತದೆ' ಎಂದೇ ಹೇಳುತಿದ್ದರು. ಅವರ ತಂದೆ – ನಾನು ಅವರನ್ನು ನೋಡಿಲ್ಲ, ಕೇಳಿದ್ದೇನೆ ಮಾತ್ರ – ಸಾಕಷ್ಟು ಸೌಕರ್ಯವಂತರಾಗಿದ್ದರು ಮತ್ತು ಬೆಂಗಳೂರಿನಲ್ಲಿ ಅನೇಕ ಜಮೀನುಗಳನ್ನು ಪಡೆದಿದ್ದರಂತೆ. ಈಗಲೂ ನಮ್ಮ ಕುಟುಂಬದಲ್ಲಿ ಅವರ ಬಗ್ಗೆ ಮಾತನಾಡುತ್ತಾರೆ. ನಾನೇನಾದರೂ ಲೇಖಕಿಯಾಗಿದ್ದರೆ, ಅವರು ಹೇಳುವ ಕಥೆಗಳನ್ನು ಸಂಗ್ರಹಿಸಿ ಬರೆಯುತ್ತಿದ್ದೆ. ಅವರು ಸುಂದರವಾಗಿದ್ದರಂತೆ ಮತ್ತು ಬಹಳ ಚೆನ್ನಾಗಿ, ಬ್ರಿಟೀಷರಂತೆ ವೇಷ ಭೂಷಣಗಳನ್ನು ತೊಡುತ್ತಿದ್ದರಂತೆ. ಅವರು ತೊಡುತ್ತಿದ್ದ ಬೆಲ್ಟ್, ಶೂ ಇತ್ಯಾದಿಗಳು ಯಾವಾಗಲೂ ಮಿಂಚುತ್ತಿದ್ದವಂತೆ. ಅವನ್ನು ಅವರೇ ಪಾಲೀಶು ಮಾಡಿಕೊಳ್ಳುತಿದ್ದರಂತೆ. ಅಂತೆಯೇ ಅವರು ಮನೆಯ ಇತರರ ಶೂ ಗಳನ್ನೂ ಪಾಲೀಶು ಮಾಡುತಿದ್ದರಂತೆ. ಇವರು ಪಾಲೀಶು ಮಾಡಿದ ನಂತರ ತಮ್ಮ ಶೂ ಗಳು ಬಹಳ ನಯವಾಗಿ ಜಾರುತ್ತವೆ ಎಂದು ಇತರರು complain ಮಾಡುತಿದ್ದರಂತೆ. ಅವರಿಗೆ ಕುದುರೆಗಳನ್ನು ಕಂಡರೇ ಇದೇ ರೀತಿಯ ಪ್ರೀತಿ. ಬೆಳಗಾಗಿ ಎದ್ದು ಎರಡು ಘಂಟೆಗಳ ಕಾಲವನ್ನು ಆ ಕುದುರೆಯ ಆರೈಕೆಯಲ್ಲಿ ಕಳೆಯುತಿದ್ದರಂತೆ. ದೊಡ್ಡಮ್ಮ ಹೇಳುತಿದ್ದಳು "ಅವರಿಗೆ ಕುದುರೆ ಎಷ್ಟು ಇಷ್ಟವೆಂದರೆ ಅವಕ್ಕೋಸ್ಕರ ಪ್ರಾಣವನ್ನು ಬಿಡಲೂ ಸಿದ್ಧರಿದ್ದರು". ಅವರು ತನ್ನ ಕೊನೆಯ ಮಗ ಹುಟ್ಟಿದ ದಿನದ ಕಥೆಯನ್ನು ಹೇಳಲು ಬಹಳ ಇಷ್ಟ ಪಡುತಿದ್ದರು. ಅವರಿಗೆ ಮೈ ಸರಿಯಿಲ್ಲದೆ ಅವರು ಜ್ಞಾನ ತಪ್ಪುವ ಸ್ಥಿತಿಯನ್ನು ತಲುಪಿದ್ದರು. ಆದರೆ ಅಪ್ಪನಿಗೆ ಅವರ ಕುದುರೆಗಳ ಆರೈಕೆಯಿಂದ ಪುರುಸತ್ತೇ ಇಲ್ಲ. ಅವರ ದಾದಿಯನ್ನು ಕರೆತರುವುದನ್ನು ಮರತೇ ಬಿಟ್ಟರು. ಕೊನೆಗೆ ನನ್ನ ಅತ್ತೆಯಂದಿರು ಅವರೊಡನೆ ಕೂಗಾಡಿ ಅವರ ಹೆಂಡತಿಯ ಸ್ಥಿತಿಯು ಚಿಂತಾಜನಕವಾಗುವುದಕ್ಕೆ ಮುಂಚೆ ದಾದಿಯನ್ನು ಕರೆತರುವಂತೆ ಹೇಳ ಬೇಕಾಯಿತು. ಅವರು ಕೆಲಸದಿಂದ ನಿವೃತ್ತ ರಾದರು. ಅವರಿಗೆ ನಾಯಿ ಎಂದರೆ ಬಹಳ ಪ್ರೀತಿ. ಅವರು 'ಪ್ರಿನ್‌ಸ್' ಎಂಬ ಒಂದು ನಾಯಿಯನ್ನು ಇಟ್ಟುಕೊಂಡಿದ್ದರು. ಎಲ್ಲರೂ ನಾಯಿ ಅವರ ಕೊನೆಯ ಮಗ ಎಂದು ಲೇವಡಿ ಮಾಡುತಿದ್ದರು. ಅಪ್ಪ ಕಾಯಿಲೆ ಬಿದ್ದಾಗ ಅವರಿಗೆ ಔಷಧಿ ತೆಗೆದುಕೊಳ್ಳಲು ಬಹಳ ಪುಸಲಾಯಿಸಬೇಕಾಗಿತ್ತು, ಆ ಡಾಕ್ಟರ್ ಅವರಿಗೆ 'ನೀವು ನಾಯಿಗೋಸ್ಕರ ಗಟ್ಟಿಯಾಗಿರಬೇಕು. ಅದಕ್ಕೋಸ್ಕರ ಔಷಧಿ ತೆಗೆದುಕೊಳ್ಳಿ' ಎಂದು ಹೇಳುತಿದ್ದರು.

ನಾವು ಚಿಕ್ಕವರಾಗಿದ್ದಾಗ ಶೇಷಾದ್ರಿಪುರದಲ್ಲಿದ್ದ ನಮ್ಮ ಅಜ್ಜ ಅಜ್ಜಿಯ ಮನೆಗೆ ಹೋಗಲು ಬಹಳ ಇಷ್ಟಪಡುತಿದ್ದೆವು. ನಮ್ಮ ತಾತ ನಮಗೆ ಅವರ ಮಿತ್ರರ ಮತ್ತು ನಮ್ಮ ಕುಟುಂಬದವರ ಬಗ್ಗೆ, ಅವರುಗಳನ್ನು ಕರೆಯುತ್ತಿದ್ದ ಅಡ್ಡ ಹೆಸರುಗಳನ್ನು ಹೇಳಿ, ಅವರ ಕಥೆಗಳನ್ನು ಹೇಳುತಿದ್ದರು. ಅವರು ಬಹಳ ತಮಾಷೆಯಾಗಿ ಮಾತನಾಡುತಿದ್ದರು. ನಮ್ಮ ಅಜ್ಜ ಅಜ್ಜಿ

ಬಹಳ ಸರಳವಾಗಿ ಜೀವನ ನಡೆಸುತ್ತಿದ್ದರು. ನಾವು ಅವರ ಮನೆಯಲ್ಲಿ ನೆಲದ ಮೇಲೆ ಹಾಸಿದ ಹಾಸಿಗೆಗಳ ಮೇಲೆ ಮಲಗುತಿದ್ದೆವು. ನಮ್ಮ ತಾತ ತಮ್ಮ ವಾಕಿಂಗ್ ಮುಗಿಸಿ, ಬಾಯಲ್ಲಿ ಸಿಗಾರ್ ಇಟ್ಟುಕೊಂಡು, ಸ್ತೋತ್ರಗಳನ್ನು ಹೇಳುತ್ತಾ ಬರುತ್ತಿದ್ದರು. ಅವರಿಗೆ ಸಂಸ್ಕೃತ ಗೊತ್ತಿತ್ತು ಮತ್ತು ಸ್ತೋತ್ರಗಳ ಅರ್ಥವು ಗೊತ್ತಿತ್ತು. ಅವರಿಗೆ ಇಂಗ್ಲೀಷ್ ಭಾಷೆಯೂ ಚೆನ್ನಾಗಿ ಬರುತ್ತಿತ್ತು ಮತ್ತು ಆ ಭಾಷೆಯಲ್ಲಿ ಬಹಳ ಚೆನ್ನಾಗಿ ಬರೆಯುತ್ತಿದ್ದರು. ಇಂಗ್ಲೀಷ್ ಲೇಖಕರ ಕೃತಿಗಳಿಂದ ಆಯ್ದ ಭಾಗಗಳನ್ನು ಹೇಳುತಿದ್ದರು. ಅವರು ಇಂಗ್ಲೀಷಿನಲ್ಲಿ ಆರ್ಟ್ಸ್ ಪದವಿಯನ್ನು ಪಡೆದ ನಂತರ ಅವರಲ್ಲಿದ್ದ ಸಂಸ್ಕೃತದ ಎಲ್ಲಾ ಪುಸ್ತಕಗಳನ್ನೂ ಮದರಾಸಿನಲ್ಲಿ ಮೆರಿನಾ ಸಮುದ್ರ ತೀರದಲ್ಲಿ ಸಮುದ್ರದಲ್ಲಿ ಎಸೆದರಂತೆ. ನಂತರ ಬಹಳ ಪಶ್ಚಾತ್ತಾಪವನ್ನೂ ಪಟ್ಟರಂತೆ. ಅವರು ಬಹಳ ಉತ್ತಮ ಸಂಗಾತಿ. ನಾನು ಅವರನ್ನು ನಮ್ಮ ಜೊತೆಯಲ್ಲಿ ಬಂದು ಮದರಾಸಿನಲ್ಲಿ, ನಂತರ ಬೊಂಬಾಯಿನಲ್ಲಿ ಮತ್ತು ಬೆಂಗಳೂರಿನಲ್ಲಿ ಇರುವಂತೆ ಕೇಳಿಕೊಳ್ಳುತ್ತಿದ್ದೆ. ಅವರು ನನಗೆ ಸಂಸ್ಕೃತದಲ್ಲಿ ರಾಮಾಯಣವನ್ನು ಓದಿ ಹೇಳುತಿದ್ದರು. ನನಗೆ ಸುಮಾರಾಗಿ ಅರ್ಥವಾಗುತಿತ್ತು. ಅವರು ಕೆಲವು ಪದಗಳನ್ನು ತಿಳಿಹೇಳುತಿದ್ದರು. ಸಂಸ್ಕೃತ ಕಷ್ಟಕರವಾದ ಭಾಷೆ. ಒಂದೇ ಪದಕ್ಕೆ ಸಂದರ್ಭಾನುಸಾರವಾಗಿ ಬೇರೆ ಬೇರೆ ಅರ್ಥಗಳುಂಟು. ನನಗೂ ಅವರಿಗೂ ರಾಮಾಯಣದ ಪಾತ್ರಗಳ ಬಗ್ಗೆ ವಾದ ವಿವಾದವಾಗುತ್ತಿತ್ತು. ಅನೇಕ ಸಲ ನಾನು ಅವರನ್ನು ಮರಣದನಂತರದ ಜೀವನದ ಬಗ್ಗೆ ಪ್ರಶ್ನೆಗಳನ್ನು ಕೇಳಿದ್ದೆ. ನಾನು ಅವರಿಗೆ ಹೇಳುತಿದ್ದೆ "ಅಪ್ಪ, ನೀನು ಸತ್ತನಂತರ ಮರಳಿ ಬಂದು ನನಗೆ ಮರಣದ ನಂತರ ಏನಾಗುತ್ತದೆ ಎಂಬುದನ್ನು ಹೇಳು. ನಾನು ನಿನ್ನ ನೆಚ್ಚಿನ ಮೊಮ್ಮಗಳೆಂದರೆ ನೀನು ಬಂದು ಇದನ್ನು ಹೇಳಬೇಕು" ಎಂದು. ಅವರೇನೋ ಹಾಗೆಯೇ ಮಾಡುತ್ತೇನೆ ಎಂದು ಹೇಳಿದರು. ಅವರು ಈಗ ಮರಳಿ ಬಂದು ನನ್ನೊಡನೆ ಮಾತನಾಡುವಂತಾಗಲಿ.

ನಮ್ಮ ತಾತನ ಮತ್ತೊಂದು ಮೊಮ್ಮಗ ರವಿಶಂಕರನ ಬಗ್ಗೆ ಒಂದು ಕಥೆ ಇದೆ. ಅವನು ಅಮೇರಿಕದಲ್ಲಿ ತನ್ನ ಕುಟುಂಬದೊಡನೆ ಇದ್ದಾನೆ. ಒಂದು ರಾತ್ರಿ ಅವನಿಗೆ ನಿದ್ದೆಯಲ್ಲಿ ನಮ್ಮ ತಾತ ಬಿಳಿಯ ಪಂಚೆ ಮತ್ತು ಕರಿಯ ಕೋಟು ಮತ್ತು ಟೋಪಿ ಯೊಡನೆ ಬಂದು "ನನ್ನ ಮಗ ಬದುಕಿಲ್ಲ. ಈಗ ಅವನು ನನ್ನೊಡನೆ ಇದ್ದಾನೆ" ಎಂದು ಹೇಳಿದಹಾಗೆ ಆಯಿತು.ರವಿ ಬೆಚ್ಚಿಕೊಂಡು ಎದ್ದಮತ್ತು ತನ್ನ ಹೆಂಡತಿಗೆ ಈ ಸ್ವಪ್ನದ ಬಗ್ಗೆ ತಿಳಿಸಿದ. ಅರ್ಧ ಘಂಟೆಯ ನಂತರ ಅವನ ಅಮ್ಮನಿಂದ ಫೋನ್ ಬಂತು. ಅವನ ತಂದೆ ತೀರಿಹೋದರು ಎಂದು. ಎಂತಹ ಆಶ್ಚರ್ಯ. ಇದಕ್ಕೆ ಯಾವ explanation ಇಲ್ಲ. ಅನೇಕರ ಜೀವನದಲ್ಲಿ ಈರೀತಿಯ ಘಟನೆಗಳು ಜರಗುತ್ತವೆ

ಅಪ್ಪ ಪ್ರತಿ ತಿಂಗಳೂ ತನ್ನ ಪಿಂಚಣಿಯಾದ ೩೦ ರೂಪಾಯಿಗಳನ್ನು ಪಡೆದುಕೊಳ್ಳಲು ಟ್ರೆಜರೀಗೆ ಹೋಗುತ್ತಿದ್ದರು. ಅಲ್ಲಿಂದ ಹಿಂತಿರುಗಿ ಬರುವಾಗ ತನಗೆ ಮತ್ತು ನಮ್ಮೆಲ್ಲರಿಗೂ ಚಾಕಲೇಟು ತರುತ್ತಿದ್ದರು. ನಾವು ನಮ್ಮ ಅಜ್ಜ ಅಜ್ಜಿಯ ಮನೆಯಲ್ಲಿ ಇದ್ದಾಗ ನಮಗೆ ಸಿಗುತ್ತಿದ್ದ ಉಪಹಾರವೆಂದರೆ ನಮ್ಮ ಅಜ್ಜಿ ಮಾಡುತ್ತಿದ್ದ ಸ್ವಾದಿಷ್ಟ ಅಡಿಗೆ. ಆಗಿನ ಕಾಲದಲ್ಲಿ ದೊಡ್ಡ ಸಂಸಾರ, ಮನೆ ತುಂಬಾ ಮಕ್ಕಳು. ಯಾರೂ ಪ್ರತಿಯೊಂದು ಮಗುವಿಗೂ ತಟ್ಟೆಯಲ್ಲಿ ಊಟವನ್ನು ಬಡಿಸುತ್ತಿರಲಿಲ್ಲ. ಒಂದು ದೊಡ್ಡ ಪಾತ್ರೆಯಲ್ಲಿ ಅನ್ನವನ್ನು ಸಾರು ಅಥವಾ ಹುಳಿಹಾಕಿ ಕಲೆಸುತ್ತಿದ್ದರು. ಆ ದೊಡ್ಡವರು ಮಧ್ಯದಲ್ಲಿ ಕುಳಿತುಕೊಳ್ಳುತಿದ್ದರು, ಮತ್ತು ಮಕ್ಕಳು ಅವರ ಸುತ್ತಲೂ ಕುಳಿತುಕೊಳ್ಳುತಿದ್ದರು. ಅವರು ಒಬ್ಬೊಬ್ಬರಿಗಾಗಿ ಒಂದು ಹಿಡಿ ಕಲೆಸಿದ ಅನ್ನವನ್ನು ಕೊಡುತಿದ್ದರು. ನಾವು ಇದನ್ನು 'ಗುಕ್ಕು' ಎಂದು ಕರೆಯುತಿದ್ದೆವು. ನಮಗೆ ಈ ರೀತಿ ಊಟಮಾಡುವುದು ಬಹಳ ಹಿಡಿಸುತ್ತಿತ್ತು, ಮತ್ತು ನಾವೇ ತಿನ್ನುವುದಕ್ಕಿಂತ ಹೆಚ್ಚಾಗಿಯೇ ತಿನ್ನುತ್ತಿದ್ದೆವು. ಇತರ ಭಾರತೀಯ ಮನೆಗಳಂತೆ, ನಮ್ಮ ಮನೆಯಲ್ಲಿಯೂ ಊಟಕ್ಕೆ ಬಹಳ ಧ್ಯಾನ ಕೊಡಲಾಗುತಿತ್ತು, ಮಧ್ಯಾಹ್ನ ಎಲ್ಲರೂ ಮಲಗಿರುವಾಗ ಒಬ್ಬ ಹುರಿದ ಕಡಲೇಕಾಯಿ ಮಾರುವವನು ತನ್ನ ಗಾಡಿಯನ್ನು ತಳ್ಳಿಕೊಂಡು ಬೀದಿಯಲ್ಲಿ ಹೋಗುತಿದ್ದ, ಅವನ ಗಾಡಿಯ ಘಂಟೆಯ ಸದ್ದು ಕೇಳಿದರೆ ನಮ್ಮ ತಾತ ಹೋಗಿ ನಮಗೆ ಕಡಲೇಕಾಯಿ ತಂದು ಕೊಡುತಿದ್ದರು. ನಾನು ಅದನ್ನು ಬೆಲ್ಲದೊಡನೆ ತಿನ್ನುತಿದ್ದೆವು. ಹಾಗೆಯೇ ಅವರು ತುಪ್ಪದೊಡನೆ ಸಕ್ಕರೆಯನ್ನು ಬೆರಸಿ ಕೊಡುತಿದ್ದರು. ಬೇಸಿಗೆ ಕಾಲದಲ್ಲಿ ಮಾವಿನಹಣ್ಣು, ಇತ್ಯಾದಿ.

ಅವರಿಗೆ ತೋಟಗಾರಿಕೆ ಎಂದರೆ ಬಹಳ ಇಷ್ಟ, ಬಹಳ ಹೊತ್ತು ತೋಟದಲ್ಲಿ ಕಳೆಯುತ್ತಿದ್ದರು. ಬೆಳಿಗ್ಗೆ, ಮಧ್ಯಾಹ್ನ ತೋಟದಲ್ಲಿ ಬೇಡದ ಸಸಿಗಳನ್ನು ಕಿತ್ತು, ತಾವು ಬೆಳೆಸುತ್ತಿದ್ದ ಗಿಡಗಳಿಗೆ ನೀರುಹಾಕುವುದೇ ಅವರ ಕೆಲಸ. ಅವರಿಗೆ ರೋಜಾ ಗಿಡ ಬಹಳ ಪ್ರಿಯ. ಅವರಿಗೆ ಡಾ. ಪ್ರಹ್ಲಾದ್ ಎಂಬುವವರು ಮಿತ್ರರಿದ್ದರು. ಇವರು ಬಹಳ ಸುಂದರವಾಗಿದ್ದರು. ಒಂದು ಹಳೆಯ ಬೇಬಿ ಆಸ್ಟಿನ್ ಕಾರಿನಲ್ಲಿ ಬರುತ್ತಿದ್ದರು. ಆ ಕಾರಿಗೆ ಕ್ಯಾನವಾಸಿನ ಹೊದಿಕೆ ಇದ್ದಿತು ಮತ್ತು ಅದರ ಹಾರ್ನ್ ಕೋಳಿಯ ಕೂಗಿನಂತಿತ್ತು. ಅನೇಕ ಸಲ ನನಗೆ ಮೈ ಹಿತವಿಲ್ಲದಿದ್ದಾಗ ಅವರು ನಮ್ಮ ಮನೆಗೆ ಓಡಿಬಂದಿದ್ದಾರೆ. ಆದರೆ ಅವರನ್ನು ನೋಡಿದೊಡನೆಯೇ ನನ್ನ ಕಾಯಿಲೆ ಮಾಯವಾಗುತಿತ್ತು ಮತ್ತು ನಾನು ಬಾಗಿಲಿಗೆ ಓಡಿ ಹೋದಾಗ ಅಲ್ಲಿ ಅವರು ನನಗಾಗಿ ಎರಡು ರೋಜಾ ಹೂವನ್ನು ಹಿಡಿದುಕೊಂಡು ನಿಂತಿರುತ್ತಿದ್ದರು. ನಂತರ ನಾವು ತೋಟಗಾರಿಕೆಯ ಬಗ್ಗೆ ಹರಟುತ್ತಿದ್ದೆವು.

ಈ ನೆನಪುಗಳು ನನಗೆ ಇನ್ನೂ ಹಸಿರಾಗಿವೆ, ಏಕೆಂದರೆ ನಾನು ತೋಟಗಾರಿಕೆಯ ಬಗ್ಗೆ ಕಲಿತದ್ದೆಲ್ಲಾ ಅವರಿಂದಲೇ.

ದೊಡ್ಡಮ್ಮ, ನಮ್ಮ ಅಜ್ಜಿ, ಹದಿನಾಲ್ಕು ಮಕ್ಕಳನ್ನು ಹಡೆದಿದ್ದಳು. ಅವರಲ್ಲಿ ಹತ್ತು ಮಕ್ಕಳು ಉಳಿದುಕೊಂಡಿದ್ದರು. ಅವರು ಬೇಗನೆ ದೈವಾದೀನರಾದರು. ಆಗ ಅವರಿಗೆ ಅರವತ್ತೇ ವಯಸ್ಸು, ಆದರೆ ಅವರು ಇನ್ನೂ ಹೆಚ್ಚು ವಯಸ್ಸಾದಂತೆ ತೋರುತ್ತಿದ್ದರು ಮತ್ತು ಬಹಳ ನಿಶ್ಶಕ್ತಿಯಿಂದ ಬಳಲುತ್ತಿದ್ದರು. ಅವರು ಸತ್ತಿದ್ದು ಒಂದು ಭಯಂಕರ ಬೆಂಕಿಯ ಅಪಘಾತದಿಂದ. ಶೇಖಡ ೭೦ ರಷ್ಟು ಅವರ ಮೈ ಸುಟ್ಟು ಹೋಗಿತ್ತು, ಆದರೂ ಅವರಿಗೆ ಜ್ಞಾನ ಎದ್ದಿತು. ಆಂಬ್ಯುಲಂನ್ಸ್‌ಗೆ ಹತ್ತುವ ಮೊದಲು ತಾತನ ಕಾಲಿಗೆ ನಮಸ್ಕಾರ ಮಾಡಿದಳು. ಅವಳು ಓರ್ವ ಸಾಂಪ್ರದಾಯಿಕ ಪತ್ನಿ. ಮುತ್ತೈದೆಯಾಗಿ ಸಾಯುವುದೇ ಭಾಗ್ಯವೆಂದು ತನ್ನ ಸಾವಿಗೆ ತಯಾರಾದಳು.

ನಮ್ಮ ತಾಯಿಯು ಯಾವಾಗಲೂ ತಾನು ಮತ್ತೆ ಹುಟ್ಟುವುದಾದರೆ ತನ್ನ ತಂಗಿ ಲೀಲನಾಗಿ ಹುಟ್ಟಬೇಕೆಂದು ಹೇಳುತ್ತಿದ್ದಳು. ಲೀಲನಿಗೆ ಮದುವೆಯಾಗಿರಲಿಲ್ಲ. ಅವಳು ಅನೇಕ ವಿಷಯಗಳಲ್ಲಿ ಅಮ್ಮನಿಗೆ ಮಾದರಿಯಾಗಿದ್ದಳು. ಅಮ್ಮನಿಗೆ ಮದುವೆ, ಸಂಸಾರ ಇವೆಲ್ಲಾ ದೊಡ್ಡ ಜವಾಬ್ದಾರಿ, ಅವಳೂ ಲೀಲನಂತೆ ಒಬ್ಬಂಟಿಗಳಾಗಿ, ತನ್ನ ಪಾಡಿಗೆ ತಾನು ಸಂಪಾದಿಸುತ್ತಾ, independent ಆಗಿ ತನಗೆ ಬೇಕಾದ ಹಾಗೆ ಖರ್ಚು ಮಾಡುತ್ತಾ, ಪ್ರಪಂಚವನ್ನು ಸುತ್ತಬೇಕೆಂಬ ಆಸೆ ಇತ್ತು. ಲೀಲಾ ಚಿಕ್ಕಮ್ಮನ ಉದಾರತೆ ಮತ್ತು ತೆರೆದ ಮನಸ್ಸು, ಅವರು ತಮ್ಮ ಕುಟುಂಬದವರಿಗೂ ಮತ್ತು ಹೊರಗಿನವರಿಗೂ ಸಹಾಯ ಮಾಡಲು ನೆರವಾಗುತಿತ್ತು. ನನಗೆ ಅವರು ಬಹಳ ಉತ್ತಮ ಮತ್ತು ಸೂಕ್ತವಾದ ಉಪಹಾರಗಳನ್ನು ನೀಡಿದ್ದಾರೆ. ಅವರು ಅಮೇರಿಕದಲ್ಲಿ ಬಹಳ ಕಾಲ ಇದ್ದರು ಮತ್ತು ತಮ್ಮ ಕೊನೆಗಾಲದಲ್ಲಿ ಕುಟುಂಬದವರೊಡನೆ ಇರಲು ಭಾರತಕ್ಕೆ ಬಂದರು. ಅವರು ಒಂದು ಅಪಘಾತಕ್ಕೆ ಸಿಲುಕಿ ತಮ್ಮ ಕೊನೆಯುಸಿರೆಳೆದರು. ಅವರ ಜ್ಞಾಪಕ ಬಂದರೆ ಬಹಳ ದುಃಖವಾಗುತ್ತದೆ. ಅವರು ಇನ್ನೂ ಕೆಲವು ದಿನಗಳು ನಮ್ಮೊಡನೆ ಇರಬೇಕಾಗಿತ್ತು. ನಾನು ನನ್ನ ಆತ್ಮಕಥೆಯನ್ನು ಬರೆಯಬೇಕೆಂದಿದ್ದೇನೆಂದು ಅವರಿಗೆ ತಿಳಿದಾಗ, ಅವರಿಗೆ ಅದನ್ನು ಓದುವ ಕುತೂಹಲವಿತ್ತು. ಅವರ ಸ್ವತಂತ್ರ ಸ್ವಭಾವ ಮತ್ತು ಅವರು ತಮ್ಮನ್ನು ತಾವು ನಡೆಸಿಕೊಳ್ಳುತಿದ್ದ ವಿಧದ ಬಗ್ಗೆ ನಮ್ಮ ಅಮ್ಮನಿಗೆ ಬಹಳ ಅಭಿಮಾನವಿತ್ತು. ನಮ್ಮ ಅಮ್ಮನ ಹಿರಿಯ ಸೋದರಿಯರಾದ ಲಚ್ಚಕ್ಕ ಮತ್ತು ಪದ್ದಕ್ಕ ಇಬ್ಬರೂ ಕೂಡ ಬಹಳ ಮೆಚ್ಚುವಂತ ಮಹಿಳೆಯರು. ಆ ಕಾಲದಲ್ಲಿ ಅವರಿಗೆ ಮದುವೆಯಾದಾಗ ಹದಿನಾಲ್ಕು,

ಹದಿನೈದು ವಯಸ್ಸು. ಆ ಕಾಲದ ಪದ್ಧತಿಯಂತೆ ಇಬ್ಬರೂ ತಮ್ಮ ತಮ್ಮ ದೊಡ್ಡ ಸಂಸಾರವನ್ನು ನಿಭಾಯಿಸುದರಲ್ಲೇ ಮುಳುಗಿದ್ದರು. ಇಬ್ಬರೂ ಅವರದ್ದೇ ರೀತಿಯಲ್ಲಿ ಗಟ್ಟಿ ಹೆಂಗಸರು, ಮತ್ತು ಮಹಿಳಾವಾದಿಗಳು.

ನಮ್ಮ ಕುಟುಂಬಕ್ಕೆ ಬೇಕಾದ ಇನ್ನೂ ಅನೇಕರಿದ್ದರು. ಅವರ ನಿಸ್ವಾರ್ಥ ಸೇವೆ, ಸಹಾಯ ಮತ್ತು ಪ್ರೀತಿ ಇಲ್ಲದೆ ಬಹುಶಃ ನಾವು ಬದುಕಲೇ ಆಗುತ್ತಿರಲಿಲ್ಲವೇನೋ. ಅವರೆಲ್ಲರ ನೆನಪು ಅಮೂಲ್ಯ. ಇವರ ಪಟ್ಟಿಯಲ್ಲಿ ಮೊದಲಿಗರು 'ಮಮ್ಮೈ'.ಇವರು ನಮ್ಮ ಮನೆಯೂರಾದ ನುಗ್ಗೇ ಹಳ್ಳಿಯ ಒಂದು ಐಯ್ಯಂಗಾರ್ ಕುಟುಂಬಕ್ಕೆ ಸೇರಿದವರು. ಅವರಿಗೆ ಮದುವೆಯ ಸಮಯದಲ್ಲಿ ಅವರ ತಂದೆ ತಾಯಿ ತಮ್ಮ ಕೈಲಾದಷ್ಟು ವರದಕ್ಷಿಣೆ ಕೊಟ್ಟು ಮದುವೆಯನ್ನು ಮಾಡಿದರಂತೆ. ಆದರೆ ಅವರ ಅತ್ತೆ ಮಾವಂದಿರು ಇನ್ನೂ ಹೆಚ್ಚು ಹೆಚ್ಚು ಕೇಳುತ್ತಲೇ ಇದ್ದರಂತೆ. ಇವರು ಅದಕ್ಕೆ ಪ್ರತಿಭಟಿಸಿದಾಗ ಇವರ ಗಂಡ ಇವರನ್ನು ಹೊಡಿದು ಬಡಿದು ಮಾಡುತಿದ್ದರಂತೆ. ಇವರು ಕಣ್ಣೀರು ಹಾಕಿಕೊಂಡು ತವರಿಗೆ ಹೋಗುತ್ತಿದ್ದರಂತೆ. ಕೆಲವುದಿನಗಳ ನಂತರ ಇವರ ತಂದೆ ತಾಯಿ ಇವರನ್ನು ಮತ್ತೆ ಇನ್ನಷ್ಟು ಆಭರಣಗಳೊಡನೆ ಗಂಡನ ಮನೆಗೆ ಕರೆದೊಯ್ದು ಅಲ್ಲಿ ಇವರನ್ನು ಬಿಟ್ಟು ಬರುತಿದ್ದರಂತೆ. ಇದು ಬಹಳ ದಿನಗಳವರೆಗೆ ನಡೆಯಿತು. ಕೊನೆಗೆ ಅವರ ಕೈಯಲ್ಲಿ ಕೊಡಲು ಏನೂ ಉಳಿದಿರಲಿಲ್ಲ. ಹಳ್ಳಿಯ ಹಿರಿಯರೆಲ್ಲಾ ಸೇರಿ ವಿಷಯವನ್ನು ಚರ್ಚಿಸಿದರಂತೆ, ಆದರೆ ಈಕೆಯ ಅತ್ತೆ ಮಾವಂದಿರು ಈಕೆಯನ್ನು ಕರೆದುಕೊಳ್ಳಲು ಒಪ್ಪಲಿಲ್ಲ. ನಮ್ಮ ಅಜ್ಜಿಗೆ ಇವಳ ಮನೆಯವರ ಪರಿಚಯವಿತ್ತು, ಜೊತೆಗೆ ವಿಶಾಲವಾದ ಹೃದಯ. ಅವರು ಇವಳನ್ನು ತಮ್ಮ ಜೊತೆ ಕರೆದುಕೊಂಡು ಹೋಗುವುದಾಗಿ ಹೇಳಿ ಅವಳನ್ನು ನಮ್ಮ ಕಿರಿಯ ಚಿಕ್ಕಪ್ಪ ಗೋಪಾಲ ಅಯ್ಯಂಗಾರರ ಮನೆಗೆ ಕರೆದುಕೊಂಡು ಹೋದರು. ಆಗ ಗೋಪಾಲ ಅಯ್ಯಂಗಾರ್ ನಾಸಿಕದಲ್ಲಿ ಇದ್ದರು. ಅವರಿಗೆ ಆಗಶಾನೆ ಜಯರಾಮ್ ಹುಟ್ಟಿದ್ದ. ಇವರು ಅಲ್ಲಿ ಅಡಿಗೆ ಮಾಡಿಕೊಂಡು ಮಗುವನ್ನು ನೋಡಿಕೊಳ್ಳುತಿದ್ದರು. ಜಯರಾಮನಿಗೆ ಇವರ ಹೆಸರು ರಂಗನಾಯಕಮ್ಮ ಎಂದು ಹೇಳಲು ಬರುತ್ತಿರಲಿಲ್ಲ. ಅವನು 'ಮಮ್ಮೈ' ಎಂದು ಕರೆಯಲಾರಂಭಿಸಿದ. ಆ ಅಡ್ಡ ಹೆಸರೇ ನಿಂತು ಹೋಯಿತು.

ಪ್ರಭಳು ಹುಟ್ಟಿದಾಗ ಮಮ್ಮೈ ನಮ್ಮ ಮನೆಗೆ ಬಂದರು.ನಾನು ಹುಟ್ಟುವ ಹೊತ್ತಿಗೆ ಅವರು ನಮ್ಮ ಮನೆಯಲ್ಲಿ ಸ್ಥಿರವಾಗಿ ನೆಲೆಸಿದ್ದರು. ಅವರು ಅಮ್ಮನಿಗೆ ನನ್ನ ವಿಕಲಾಂಗತೆಯ ಸಮಸ್ಯೆಗಳನ್ನು ಎದುರಿಸುವುದರಲ್ಲಿ ಬಹಳ ದೊಡ್ಡ ನೆರವಾದರು. ನನಗೂ ಮಮ್ಮೈಗೂ ಕೆಲವೊಮ್ಮೆ ವಾಗ್ವಾದವಾಗುತಿತ್ತು. ಆಗ ಅವರು 'ನಾನು ನಿನಗಿಂತ ಮುಂಚೆ ಈ ಮನೆಗೆ

ಬಂದವಳು' ಎಂದು ಹೇಳುತಿದ್ದರು. ಅವರದ್ದೇನಾದರೂ ತಪ್ಪಾಗಿದ್ದರೆ ಕಣ್ಣೀರು ಹಾಕಿಕೊಂಡು ತನ್ನದೇ ತಪ್ಪು ಮತ್ತೊಮ್ಮೆ ಹೀಗೆ ಮಾಡುವುದಿಲ್ಲಾ ಎಂದು ಹೇಳುತಿದ್ದರು. ಆದರೆ ಮತ್ತೆ ಅದೇ ತಪ್ಪನ್ನು ಮಾಡುತಿದ್ದರು ಎಂಬುದು ಮತ್ತೊಂದು ವಿಷಯ. ಅಮ್ಮನಿಗೆ ಅವರನ್ನು ಕಂಡರೆ ಬಹಳ ಪ್ರೀತಿ. ಆದ್ದರಿಂದ ಸುಮ್ಮನಿರುತಿದ್ದರು.

ನನ್ನ ಚಿಕ್ಕಂದಿನ ನೆನಪುಗಳಲ್ಲಿ ಮಮ್ಮೈ ದೊಡ್ಡ ಪಾತ್ರ ವಹಿಸುತ್ತಾರೆ. ಅವರು ನನಗೆ ತಲೆಗೆ ನೀರು ಹಾಕುತಿದ್ದರು. ಆಗ ನನಗೂ ಅವರಿಗೂ ಯುದ್ಧವೇ ನಡೆಯಿತಿತ್ತು. ಅವರು ಒರಟಾಗಿ ನನ್ನನ್ನು handle ಮಾಡುತಿದ್ದಳು, ಆಗ ನಾನು ಅವಳಿಗೆ ಹೊಡೆಯುತ್ತಿದ್ದೆ. ಅವಳು ನನ್ನನ್ನು ರೇಗಿಸುತ್ತಿದ್ದಳು, ಆಗ ನನಗೆ ಕೋಪವು ಇನ್ನೂ ಹೆಚ್ಚುತಿತ್ತು. ಅವಳಿಗೆ ಒಳ್ಳೆಯ ಹಾಸ್ಯ ಪ್ರಜ್ಞೆ ಇತ್ತು. ಮಧ್ಯಾಹ್ನದ ಹೊತ್ತಿನಲ್ಲಿ ನಾನು ಹೋಮ್ ವರ್ಕ್ ಮಾಡುತಿದ್ದರೆ ಅವಳು ಬಂದು ನನ್ನನ್ನು ಕವಡೆ ಆಡಲು ಕರೆಯುತ್ತಿದ್ದಳು. ಆಟದಲ್ಲಿ ಜಗಳ ವಾಗಿ ಅವಳು ನನ್ನ ಕೈಯಿಂದ ಕವಡೆಗಳನ್ನು ಕಿತ್ತುಕೊಂಡು ತಾನೇ ಗೆದ್ದೆ ಎನ್ನುತಿದ್ದಳು. ಅವಳಿಗೆ ನನ್ನನು ಸೋಲಿಸಿ ನಾನು ಸೋಲನ್ನು ಎದುರಿಸುವುದನ್ನು ಕಲಿಯಬೇಕು ಎಂಬುದೇ ಮುಖ್ಯವಾಗಿತ್ತು. ಕ್ಕೆಲವು ದಿನಗಳಲ್ಲಿ ನನಗೆ ಇದು ಅರ್ಥವಾಗಿ ನಾನು ಅದಕ್ಕೆ ಸರಿಯಗಿ ಸ್ಪಂದಿಸ ತೊಡಗಿದೆ. ಅವಳು ಹಬ್ಬ ಹರಿದಿನಗಳಲ್ಲಿ ನನಗೆ ಅವಳ ಸರಗಳನ್ನು ಹಾಕಿಕೊಳ್ಳಲು ಕೊಡುತಿದ್ದಳು. ನಾನು ಅದರಲ್ಲಿದ್ದ ಮುತ್ತುಗಳನ್ನು ಕಚ್ಚಿದರೆ ಅಮ್ಮನಿಗೆ ಚಾಡಿ ಹೇಳುತಿದ್ದಳು. ಅವಳಿಗೆ ಇಬ್ಬರು ಸಹೋದರಿಯರಿದ್ದರು. ಅವರಿಬ್ಬರೂ ನಮ್ಮ ಹಳ್ಳಿಯಲ್ಲಿರುತ್ತಿದ್ದರು. ಅವರಲ್ಲಿ ಚಿಕ್ಕವಳು ರತ್ನ. ಇವಳು ಮಮ್ಮೈಗೆ ಬಹಳ favourite. ಮಾರ್ಕೆಟ್ಟಿನಲ್ಲಿ ಏನನ್ನು ಕಂಡರೂ ಮಮ್ಮೈ ಅದನ್ನು ರತ್ನಳಿಗಾಗಿ ಕೊಳ್ಳುತಿದ್ದಳು.

ಆದರೆ, ಮಮ್ಮೈ ಯಲ್ಲಿ ಒಂದು ವಿಧವಾದ ವಿರೋಧಾಭಾಸವಿತ್ತು. ಆ ದಿನಗಳಲ್ಲಿ ದೇಶದಲ್ಲಿ ಅತೀವವಾದ ಆಹಾರ ಅಭಾವವಿದ್ದಿತು. ಪ್ರತಿಯೊಂದೂ ರೇಷನ್ನಿನ ನಿಯಂತ್ರಣದಲ್ಲಿತ್ತು. ಮಮ್ಮೈ, ಆಗ ದುಬಾರಿಯಾಗಿದ್ದ ಸಕ್ಕರೆ ಮತ್ತು ಕಾಫಿಯನ್ನು ಸ್ವಲ್ಪ ಸ್ವಲ್ಪ ಕದ್ದು ಅವಳ ಪೆಟ್ಟಿಗೆಯಲ್ಲಿ ಬಚ್ಚಿಡುತಿದ್ದಳು. ಈ ರೀತಿ ಎರಡು ತಿಂಗಳು ಶೇಖರಿಸಿದ ವಸ್ತುವನ್ನು ನಂತರ ಅವಳು ತನ್ನ ಮನೆಗೆ ತೆಗೆದುಕೊಂಡು ಹೋಗುತಿದ್ದಳು. ಅಮ್ಮನಿಗೆ ಯಾಕೆ ಇಷ್ಟು ಬೇಗ ಸಕ್ಕರೆ ಮತ್ತು ಕಾಫಿ ಪುಡಿ ಖರ್ಚಾಗುತ್ತಿವೆ ಎಂದು ಯೋಚನೆ, ಆದರೆ ಮಮ್ಮೈ ಅದಕ್ಕೆ ಸೂಕ್ತ ಉತ್ತರವನ್ನು ಕೊಟ್ಟು ಅಮ್ಮನನ್ನು ಸಮಾಧಾನ ಮಾಡುತಿದ್ದಳು. ಕೊನೆಗೆ ಒಂದು ದಿನ ಅಮ್ಮ ಅವಳ ಪೆಟ್ಟಿಗೆಯ ಬೀಗವನ್ನು ಒಂದು ಡೂಪ್ಲಿಕೇಟ್ ಚಾವಿಯಿಂದ ತೆಗೆದು ನೋಡಿದಳು. ಆಗ ಅದರಲ್ಲಿ ಅವಳಿಗೆ ಕಾಫಿ ಮತ್ತು ಸಕ್ಕರೆಯ

ಪೊಟ್ಟಣಗಳು ಕಂಡವು. ಅಮ್ಮ ಅವಳನ್ನು ಈ ಪೊಟ್ಟಣಗಳು ಹೇಗೆ ಇಲ್ಲಿ ಬಂದವು ಎಂದು ಕೇಳಲಿಲ್ಲ, ಅವನ್ನು ತೆಗೆದು ಅಡಿಗೆಯ ಮನೆಯಲ್ಲಿ ವಾಪಸ್ ಇಟ್ಟಳು. ಮಮ್ಮೈ ಗೆ ವಿಷಯವುಗೊತ್ತಾಗಿರಬೇಕು, ಆದರೆ ಅವಳು ಏನೂ ಹೇಳಲಿಲ್ಲ. ಇದೊಂದು ವಿಚಿತ್ರವಾದ ಸನ್ನಿವೇಶವಾಯಿತು. ಮತ್ತೊಮ್ಮೆ ಅವಳು ಸಕ್ಕರೆಯೊಡನೆ ರವೆಯನ್ನು ಬೆರಸಿಟ್ಟಳು. ನಮ್ಮ ಕಾಫಿಯಲ್ಲಿ ನಮಗೆ ರವೆ ಸಿಗತೊಡಗಿತು. ಆಶ್ಚರ್ಯಗೊಂಡ ನಮ್ಮ ತಂದೆ ರೇಷನ್ ಆಫೀಸಿಗೆ ಹೋಗಿ ದೂರು ಕೊಟ್ಟರು. ಅಲ್ಲಿನ ಅಧಿಕಾರಿ 'ನಾವು ಮೂಟೆಗಟ್ಟಲೆ ಸಕ್ಕರೆಯನ್ನು ಮಾರಿದ್ದೇವೆ, ಆದರೆ ಈರೀತಿಯ ದೂರು ಯಾರೂ ಕೊಟ್ಟಿಲ್ಲ' ಎಂದು ಹೇಳಿದರು. ನಮ್ಮ ತಂದೆ ಸದ್ದಿಲ್ಲದೆ ಮನೆಗೆ ಹಿಂದಿರುಗಿದರು. ಅಮ್ಮ ಮತ್ತೊಮ್ಮೆ ಪತ್ತೇದಾರಿ ಕೆಲಸ ಮಾಡಿದರು. ಮಮ್ಮೈಯನ್ನು ಕೇಳಿದಾಗ ಅವಳು ತನ್ನ ಮಗಳಿಗೆ ಕೊಡಲು ಸ್ವಲ್ಪ ಸಕ್ಕರೆಯನ್ನು ಎತ್ತಿಟ್ಟಿರುವುದಾಗಿಯೂ, ಅದು ತಿಳಿಯದಿರಲೆಂದು ಉಳಿದ ಸಕ್ಕರೆಗೆ ರವೆಯನ್ನು ಸೇರಿಸಿರುವುದಾಗಿಯೂ ಒಪ್ಪಿಕೊಂಡಳು. ಅಮ್ಮ ಈ ವಿಷಯವನ್ನು ಅಷ್ಟಕ್ಕೇ ಬಿಟ್ಟಳು. ಜೀವನ ಎಂದಿನಂತೆ ಸಾಗಿತು. ಮುಖ್ಯವಾಗಿ ಮಮ್ಮೈ ನನ್ನನ್ನು ಚೆನ್ನಾಗಿ ನೋಡಿಕೊಳ್ಳುತ್ತಿದ್ದಳು, ಅಮ್ಮನಿಗೆ ಅದೇ ಮುಖ್ಯವಾಗಿತ್ತು.

ಮಮ್ಮೈ ಎಂದೂ ಶಾಲೆಗೇ ಹೋಗಿರಲಿಲ್ಲ. ಆದರೂ, ತಾನೇ ಓದು ಬರಹ ಕಲಿತಿದ್ದಳು. ಅವಳು ತನ್ನ ಮನೆಗೆ ಎಲ್ಲಾ ಮುಖ್ಯ ಸಮಾಚಾರಗಳನ್ನೂ ಮತ್ತು ಸ್ವಾರಸ್ಯಕರ ರಘುಟಿ ಬರೆಯಲು ಎರಡು ಘಂಟೆಗಳು ತೆಗೆದು ಕೊಳ್ಳುತ್ತಿದ್ದಳು. ನನಗೆ ಅವಳು ಮುಂಬೈಯಿನ ಪೋಸ್ಟ್ ಆಫೀಸಿನ ಮೆಟ್ಟಿಲುಗಳಮೇಲೆ ಕುಳಿತು ಕಾಗದ ಬರೆಯುತ್ತಿದ್ದುದು ಚೆನ್ನಾಗಿ ಜ್ಞಾಪಕವಿದೆ. ಅವಳು ತನ್ನದೇ ಆದ ಮರಾಠಿ ಹಿಂದಿ ಮಿಶ್ರಿತ ಭಾಷೆಯಲ್ಲಿ ಮಾತನಾಡುತ್ತಾ ಮುಂಬೈಯಿನ ಬಸ್‌ಗಳಲ್ಲಿ ಪ್ರಯಾಣ ಮಾಡಲು ಕಲಿತಿದ್ದಳು. ಅವಳು ಕೆಲಸದಿಂದ ನಿವೃತ್ತಿ ಪಡೆದ ನಂತರ, ಅವಳು ತಾನು ಕೂಡಿಟ್ಟಿದ್ದ ಹಣದಿಂದ, ಅವಳ ಸಹೋದರರೊಡನೆ ಬದರಿನಾಥ್ ಮತ್ತು ಕೇದಾರನಾಥ್ ಯಾತ್ರೆಗೆ ಹೋಗಿದ್ದಳು. ಅವಳ ಚಿಕ್ಕ ತಮ್ಮ ಒಬ್ಬ ಇಂಜಿನಿಯರ್. ಅವನಿಗೆ ನೇಪಾಳದಲ್ಲಿ ಒಳ್ಳೆಯ ಕೆಲಸವಿದ್ದಿತು. ಅವನು ಮಮ್ಮೈಗೆ ಆಗಾಗ ಧನ ಸಹಾಯ ಮಾಡುತ್ತಿದ್ದನು. ಮಮ್ಮೈ ನಮ್ಮೊಡನೆ ಸಂಪರ್ಕದಲ್ಲಿದ್ದಳು ಮತ್ತು ತಿಂಗಳೆರಡು ತಿಂಗಳಿಗೆ ಒಮ್ಮೆ ಬಂದು ನಮಗೆ ಸಹಾಯ ಮಾಡುತ್ತಿದ್ದಳು. ನನ್ನ ಸಹೋದರಿ ಕುಮ್ಮುವಿಗೆ ಮಗುವಾದಾಗ ಅವಳು ಬಂದು ಅವಳೊಡನೆಯೇ ಇದ್ದು, ಅಯ್ಯಂಗಾರ್ ಕುಟುಂಬದ ಮುಂದಿನ ಪೀಳಿಗೆಯನ್ನೂ ನೋಡಿಕೊಂಡು ಸಹಾಯ ಮಾಡಿದಳು.

ಅವಳ ಕೊನೆಯ ಕಾಲದಲ್ಲಿ ಅವಳು ಕಾಯಿಲೆ ಬಿದ್ದಾಗ ಅವಳ ಸಹೋದರರು ಅವಳನ್ನು ಚೆನ್ನಾಗಿ ನೋಡಿಕೊಳ್ಳಲಿಲ್ಲ. ನಮ್ಮ ಅಮ್ಮ ಅವಳನ್ನು ನೋಡಲು ಸುಗ್ಗೇಹಳ್ಳಿಗೆ

ಹೋಗಿದ್ದಳು, ಮತ್ತು ಬಹಳ ದುಃಖಕರವಾದ ಕಥೆಯೊಡನೆ ಹಿಂದಿರುಗಿದಳು. ನಾನೂ ಅಮ್ಮನ ಜೊತೆಯಲ್ಲಿ ಹೋಗಿದ್ದೆ, ಆದರೆ ಅವಳ ಮನೆಯೊಳಗೆ ಹೋಗಲಾಗಲಿಲ್ಲ. ನಾನು ಹೊರಗಿಂದಲೇ ಅವಳೊಡನೆ ಮಾತನಾಡಬೇಕಾಯಿತು. ಅವಳೂ ಒಳಗಿಂದ ಉತ್ತರಿಸಿದಳು. ಅವಳ ಧ್ವನಿ ಇನ್ನೂ ನನ್ನ ಕಿವಿಗಳಲ್ಲಿ ಕೇಳಿಸುತ್ತಿದೆ. ಅವಳು ನಮ್ಮ ಕುಟುಂಬದ ಒಂದು ಅವಿಭಾಜ್ಯ ಅಂಗವಾಗಿದ್ದಳು. ನಾವು ಯಾರೂ ಅವಳನ್ನು ಹೊರಗಿನವಳೆಂದು ಭಾವಿಸುತ್ತಿರಲಿಲ್ಲ.

ಮತ್ತೊಂದು ವ್ಯಕ್ತಿ ಯಾರಿಗೆ ನಾನು ಬಹಳ ಋಣಿಯಾಗಿದ್ದೇನೆಂದರೆ, ಅವರು ಜಾರ್ಜ್– ಕೃಷ್ಣಮೂರ್ತಿ – ನನ್ನ ಸಾರಥಿ. ಸುಮಾರು ಮೂವತ್ತು ವರ್ಷಗಳು ಅವರು ನನ್ನ ಕಾರಿನ ಡ್ರೈವರ್ ಆಗಿ ನಾನು ಎಲ್ಲಿ ಹೋಗಬೇಕೆಂದರೂ ಕರೆದು ಕೊಂಡು ಹೋಗುತ್ತಿದ್ದರು.ಅವರಿಗೆ ನನಗೆ ಯಾವ ರೀತಿಯ ಸಹಾಯ ಬೇಕು ಎಂಬುದು ತಿಳಿದಿತ್ತು. ಅವರು ನನ್ನನ್ನು ಕಾರಿನಿಂದ ವ್ಹೀಲ್ ಚೇರಿಗೆ ಮತ್ತು ವ್ಹೀಲ್ ಚೇರಿನಿಂದ ಕಾರಿಗೆ ಸ್ಥಳಾಂತರವಾಗುವುದರಲ್ಲಿ ಸಹಾಯ ಮಾಡುತ್ತಿದ್ದರು. ನಾನು ಅವರ ಈ ಸೇವೆಗೆ ಯಾವಾಗಲೂ ಕೃತಜ್ಞಳಾಗಿರುತ್ತೇನೆ. ಅವರು ಯಾವಾಗಲೂ ನಗುತ್ತಾ, ಬಹಳ ತಾಳ್ಮೆಯೊಡನೆ ಇರುತ್ತಿದ್ದರು. ಎಂದೂ ಏನನ್ನೂ ಕೇಳಿದವರಲ್ಲ. ಅವರು ತಮ್ಮ ಕುಟುಂಬವನ್ನು ನೋಡಿಕೊಂಡು ಮತ್ತು ಅವರ ಮಕ್ಕಳನ್ನು ಓದಿಸಿ ಜವಾಬ್ದಾರಿಯುತರನ್ನಾಗಿ ಮಾಡಿದ ವಿಧ ಬಹಳ ಮೆಚ್ಚುವಂತಹುದು. ನನಗೆ ಏನೋ ಒಂದು ರೀತಿಯ ಮೂಢನಂಬಿಕೆ. ನನ್ನನ್ನು ಯಾರಾದರೂ ಜಾರ್ಜ್ ನಿಮ್ಮ ಹತ್ತಿರ ಎಷ್ಟು ವರ್ಷಗಳಿಂದ ಕೆಲಸ ಮಾಡುತ್ತಿದ್ದಾರೆ ಎಂದು ಕೇಳಿದರೆ ನಾನು ಹತ್ತು ವರ್ಷಗಳಿಂದ ಎಂದು ಹೇಳಿಬಿಡುತ್ತಿದ್ದೆ. ಸರಿಯಾದ ಉತ್ತರ ಹೇಳುತ್ತಿರಲಿಲ್ಲ. ಅವರ ಕಣ್ಣು ಬಿದ್ದು ಜಾರ್ಜ್ ನಮ್ಮನ್ನು ಬಿಟ್ಟು ಹೊರಟು ಹೋದರೆ ಎಂಬ ಭಯ.

ವರ್ಷಗಳು ಕಳೆದಂತೆ ನನಗೆ ಅನೇಕರು ಮಿತ್ರರಾಗಿದ್ದಾರೆ. ಆದರೆ ನಾನು ನನ್ನ ಹಿಂದಿನ ಮಿತ್ರರಾದ ಉನ್ನಿ ಮತ್ತು ಸತ್ಯನ್ ಅವರನ್ನು ಮರೆಯಲಾಗುವುದಿಲ್ಲ. ನಾವು ಮದರಾಸಿನಲ್ಲಿ ಕಲ್ಯಾಣಿಪುರದಲ್ಲಿದ್ದಾಗ, ನಮ್ಮ ಮನೆಯ ಪಕ್ಕದಲ್ಲಿ ಮೆನನ್ ಎಂಬ ಒಬ್ಬರು ಬ್ರಹ್ಮಚಾರಿಗಳು ಇದ್ದರು. ಅವರು ಅಲ್ಲಿನ ಉಚ್ಚ ನ್ಯಾಯಾಲಯದಲ್ಲಿ ಕೆಲಸ ಮಾಡುತ್ತಿದ್ದರು. ಅವರು ಮೆಲ್ವಿಲ್ ಡಿಮೆಲ್ಲೊ ತರಹ ಮಾತನಾಡುತ್ತಿದ್ದರು ಮತ್ತು ಅವರು ನಕ್ಕರೆ ಗೆಜ್ಜೆಯ ನಾದ.ನಮ್ಮ ತಂದೆಯು ಅವರು ಮತ್ತು ಅವರ ಕಸಿನ್ ಆದ ತಿರುಮಲ್ಪಾಡ್ ಅವರುಗಳೊಡನೆ ಸಮಯ ಕಳೆಯಲು ಇಷ್ಟ ಪಡುತ್ತಿದ್ದರು. ಇವರುಗಳು ಸಂಜೆಯ ಹೊತ್ತಿನಲ್ಲಿ ಸೇರಿ

ಚರ್ಮ ಉದ್ಯೋಗ, ಅಧ್ಯಾತ್ಮ, ಅಂದಿನ ರಾಜಕೀಯ, ಇತ್ಯಾದಿ ಅನೇಕ ವಿಷಯಗಳ ಬಗ್ಗೆ ಚರ್ಚಿಸುತ್ತಿದ್ದರು. ನನ್ನ ಆಯುರ್ವೇದದ ಚಿಕಿತ್ಸೆಗೆಂದು ಮಲಬಾರಿನಿಂದ ವೈದ್ಯರು ಬಂದಾಗ ಮೆನನ್ ತಮ್ಮ ಮನೆಯನ್ನು ನಮಗೆ ಬಿಟ್ಟು ಕೊಟ್ಟಿದ್ದರು. ತಿರುಮಲ್ಪಾದ್ ಹೆಂಡತಿಯನ್ನು ಕಳೆದು ಕೊಂಡಿದ್ದರು. ಅವರಿಗೆ ನಾಲ್ಕು ಮಕ್ಕಳು. ಇಬ್ಬರು ಹುಡುಗಿಯರು – ಪದ್ಮ ಮತ್ತು ಶ್ಯಾಮಳ –residential school ನಲ್ಲಿ ಓದುತಿದ್ದರು. ಮತ್ತಿಬ್ಬರು ಹುಡುಗರು ಉನ್ನಿ ಮತ್ತು ಸತ್ಯನ್. ಇವರು ಬಹು ಬೇಗ ನನಗೆ ಮಿತ್ರರಾಗಿಬಿಟ್ಟರು. ಸತ್ಯನ್ ಮಗುವಾಗಿದ್ದಾಗಲೇ ಅವನಿಗೆ ಪೋಲಿಯೋ ಆಗಿ ಒಂದು ಕಾಲು ಸ್ವಾಧೀನ ಕಳೆದುಕೊಂಡಿತ್ತು. ಆದ್ದರಿಂದ ಅವನು ನಡೆಯುವಾಗ ಸ್ವಲ್ಪ ಕುಂಟುತ್ತಿದ್ದ. ಅವನ ಶಾಲೆಯ ನಂತರ ಉನ್ನಿ ನನ್ನೊಡನೆಯೇ ಸಮಯವನ್ನು ಕಳೆಯುತ್ತಿದ್ದ, ನಾವು ಅನೇಕ ವಿಷಯಗಳ ಬಗ್ಗೆ ಹರಟುತ್ತಿದ್ದೆವು. ದೊಡ್ಡವನಾದ ಮೇಲೆ ಅವನು ಸೈನ್ಯಕ್ಕೆ ಸೇರಿಕೊಂಡು, ದೊಡ್ಡ ಹುದ್ದೆಯಿಂದ ನಿವೃತ್ತನಾದ. ಸತ್ಯನ್ ವೆಲ್ಲೂರಿನ ಕ್ರಿಶ್ಚಿಯನ್ ಮೆಡಿಕಲ್ ಕಾಲೇಜಿನಲ್ಲಿ ಓದಿ, ನನಗೆ ಚೆನ್ನಾಗಿ ಪರಿಚಿತರಾದ ವಿಕಲಾಂಗತೆಯ ತಜ್ಞೆಯಾದ ಡಾ. ಮೇರಿ ವರ್ಗೀಸ್ ಅವರೊಡನೆ ಕೆಲಸ ಮಾಡಿದ.

ಸುಮಾರು ನಾಲ್ಕು ದಶಕಗಳ ಹಿಂದೆ, ಏ.ಪಿ.ಡಿ ಯೊಡನೆ 'ಆಕ್ಸ್‌ಫಾಮ್' ಕೆಲಸ ಮಾಡುತಿದ್ದಾಗ ನಾನು ವಳ್ಳಿ ಶೇಷನ್ ಅವರನ್ನು ಭೇಟಿಯಾದೆ. ನಮ್ಮಿಬ್ಬರಿಗೂ ಅನೇಕ ವಿಷಯಗಳಲ್ಲಿ ಕುತೂಹಲ ಮತ್ತು ನಾವಿಬ್ಬರೂ ವಿಕಲಾಂಗತೆಯ ಬಗ್ಗೆ ಒಟ್ಟಿಗೆ ಕೆಲಸ ಮಾಡಿದ್ದೇವೆ, ಮತ್ತು 'ಬೇಸಿಕ್ ನೀಡ್ಸ್' ಎಂಬ ಸಂಸ್ಥೆಯನ್ನು ಬೆಳೆಸಲು ಶ್ರಮಿಸಿದ್ದೆವೆ. ವಳ್ಳಿಯೊಡನೆ ನಾನು ಮಾತನಾಡದ ದಿನವೇ ಇಲ್ಲ ಎನ್ನ ಬಹುದು. ಅವಳೊಡನೆ ಮಾತನಾಡುವುದು ನನಗೆ 'ಟಾನಿಕ್'ಇದ್ದ ಹಾಗೆ. ಮಾತನಾಡಿದ ನಂತರ ದಿನವೆಲ್ಲಾ ಉತ್ಸಾಹದಿಂದ ಕೆಲಸ ಮಾಡಲಾಗುತ್ತದೆ. ಅವಳಂತೆ ನಮ್ಮ ಭಾರತದಲ್ಲಿ ಇರುವವರು ಬಹಳ ಅಪರೂಪ. ಅವಳೊಬ್ಬ fantastic trainer. ಅವಳು ಕೆಲಸ ಮಾಡುತ್ತಿದ್ದರೆ ಅದರ ಪ್ರಭಾವವನ್ನು ನಾವು ಅನುಭವಿಸಬಹುದು. ಅವಳು ಸಣ್ಣ ಸಣ್ಣ ವಿವರಗಳಿಗೂ ಕೊಡುವ ಧ್ಯಾನ, ವರ್ಕ್ ಶಾಪಿನ ಎಲ್ಲಾ ಆಗು ಹೋಗುಗಳಿಗೂ ಅವಳು ನೀಡುವಧ್ಯಾನ ಬಹಳ ಪ್ರಶಂಸನೀಯ. ಅವಳ 'ಸರ್ಚ್' ಸಂಸ್ಥೆಯಲ್ಲಿ – ಇವಳು ಜಾನ್ ಸ್ಟೇಲಿಯವರೊಡನೆ ಸೇರಿ ಪ್ರಾರಂಭಿಸಿದ್ದದ್ದು – ತರಬೇತಿ ಹೊಂದಿ ತಯಾರಾದವರೆಲ್ಲರೂ ಇಂದು ತಾವೇ ಒಂದು ಸಂಸ್ಥೆಯಂತೆ ಬೆಳೆದಿದ್ದಾರೆ.ವಳ್ಳಿಯ ಮನೆಯು ಒಂದು ದೊಡ್ಡ ಛತ್ರದಂತೆ. ಯಾವಾಗಲೂ ಅದರಲ್ಲಿ ಅಥಿತಿಗಳು ಇದ್ದೇ ಇರುತ್ತಿದ್ದರು. ಅವಳು ವಿಶ್ವದೆಲ್ಲೆಡೆಯಿಂದಲೂ ಎಲ್ಲರನ್ನೂ ತೆರೆದ ಮನಸ್ಸಿನಿಂದ ಸ್ವಾಗತಿಸುತ್ತಿದ್ದಳು. ನಾವು ಹೇಗೆ ನಮ್ಮ ಜೀವನವನ್ನು ಸರಳ ಮತ್ತು ಒತ್ತಡರಹಿತ ಮಾಡಿಕೊಳ್ಳಬಹುದು ಎಂದು ಮಾತನಾಡುತ್ತೇವೆ. ಆದರೆ

ಅದು ಒಂದು ಮಿಥ್ಯೆ ಎಂದು ನನಗೆ ಅನ್ನಿಸುತ್ತದೆ. ವಳ್ಳಿ ಬಹಳ ಶ್ರದ್ಧೆ ವಹಿಸಿ ಕೆಲಸ ಮಾಡುವಂತ ಹೆಂಗಸು. ಪ್ರತಿ ಕ್ಷಣವೂ ಇನ್ನೂ ಹೆಚ್ಚು ಹೆಚ್ಚು ಕೆಲಸವನ್ನು ಮಾಡ ಬಯಸುವವಳು. ಆ ರೀತಿಯ ಮತ್ತೊಬ್ಬ ಹೆಂಗಸನ್ನು, ಮಿತ್ರಳನ್ನು ನಾನು ಇದುವರೆಗೂ ನೋಡಿಲ್ಲ.

ಇಪ್ಪತ್ತೈದು ವರ್ಷಗಳ ಹಿಂದೆ ಒಂದು ದಿನ ಸಂಘಮಿತ್ರ ಅಯ್ಯಂಗಾರ್ ಎಂಬುವವರು ಎ.ಪಿ.ಡಿ ಗೆ ಕೆಲಸವನ್ನು ಹುಡುಕಿಕೊಂಡು ಬಂದಿದ್ದರು. ಎ.ಪಿ.ಡಿ ಗೆ ತನ್ನ ಬೆಳೆಯುತ್ತಿರುವ ಔಟ್ರೀಚ್ ಪ್ರೋಗ್ರಾಮಿಗೆ ಇಬ್ಬರು ಬೇಕಾಗಿತ್ತು. ಆಡಂಬರ ವಿಲ್ಲದೆ ನಿಶ್ಶಬ್ದವಾಗಿ ಕೆಲಸ ಮಾಡುತಿದ್ದ ಸಂಘಮಿತ್ರ ಅಯ್ಯಂಗಾರ್ ಒಳ್ಳೆಯ ಟೀಂ ಲೀಡರ್ ಆಗಿದ್ದರು. ಅವರು ನಮ್ಮಲ್ಲಿ ಎರಡು ವರ್ಷಗಳು ಕೆಲಸ ಮಾಡಿದರು. ಈ ಅವಧಿಯಲ್ಲಿ ನಾವು ಬಹಳ ಹತ್ತಿರದ ಮಿತ್ರರಾದೆವು. ನನಗೆ ಅವರೊಡನೆ ವಿಷಯಗಳನ್ನು ಚರ್ಚಿಸುವುದು ಸುಲಭವಾಗಿ ಕಂಡಿತು. ಸಂಘಮಿತ್ರ ಅವರ ಗಂಡ ಕಲ್ಕತ್ತದಲ್ಲಿ ಕೆಲಸ ಮಾಡುತಿದ್ದರು. ಸಂಘಮಿತ್ರ ಅವರೂ ಕಲ್ಕತ್ತಕ್ಕೆ ಹೋದರು. ನಾನು ಅವರನ್ನು 'ರೀಚ್' ಎಂಬ ಸಂಸ್ಥೆಗೆ ಪರಿಚಯ ಮಾಡಿಕೊಟ್ಟೆ. ಅವರು ಆ ಸಂಸ್ಥೆಗೆ ಕೆಲವು ದಿನ ಕೆಲಸ ಮಾಡಿದರು. ಅವರಿಗೆ ವಿಕಲಾಂಗರ ಸಮಸ್ಯೆಗಳ ಬಗ್ಗೆ ಒಳ್ಳೆಯ ಜ್ಞಾನ ಮತ್ತು ಅನುಭವವಿತ್ತು. ಅವರು ಸಮಾಜ ಸೇವೆಯಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದರಲ್ಲದೆ, ಅದರಲ್ಲಿ ಚಿನ್ನದ ಪದಕವನ್ನೂ ಗಳಿಸಿದರು. ಅವರಿಗೆ ಎಚ್ ಐವಿ/ ಏಡ್ಸ್ ಕ್ಷೇತ್ರದಲ್ಲಿ ಕೆಲಸ ಮಾಡಬೇಕು ಎಂಬ ಅಭಿಲಾಷೆ ಇತ್ತು. ಸಮೂಹ ಸಂಸ್ಥೆಯನ್ನು ನಡೆಸುತ್ತಿರುವ ನನ್ನ ಮಿತ್ರ ಪ್ರದೀಪ್ ಅವರುಕೂಡ ಈ ಕ್ಷೇತ್ರದಲ್ಲಿ ಕೆಲಸ ಮಾಡಬೇಕು ಎಂದು ಇಚ್ಛಿಸುತ್ತಿದ್ದರಿಂದ ನಾನು ಇವರಿಬ್ಬರನ್ನೂ ನನ್ನ ಮನೆಗೆ ಕರೆದು ಒಂದು ಭೇಟಿಯನ್ನು ಏರ್ಪಡಿಸಿದ್ದೆ. ಇವರುಗಳು ಸೇರಿ 'ಸಂರಕ್ಷ' ಎಂಬ ಸಂಸ್ಥೆಯನ್ನು ಪ್ರಾರಂಭಿಸಿ, ಅದರಮೂಲಕ ಬೆಂಗಳೂರು, ರಾಯಚೂರು ಜಿಲ್ಲೆಗಳಲ್ಲಿ ಬಹಳ ಕೆಲಸ ಮಾಡಿದ್ದಾರೆ. ಇದರಲ್ಲಿ ಸಂಘಮಿತ್ರಳ ಪಾತ್ರ ದೊಡ್ಡದಾಗಿತ್ತು.

ನಾನು ಅವಳನ್ನು ಪ್ರತಿಸಲ ಭೇಟಿಯಾದಾಗಲೂ, ನನಗೆ ಒಂದು ಹೊಸತನದ ಅನುಭವ. ಅವಳು ಹೊಸ ಹೊಸ ಯೋಜನೆಗಳನ್ನು ಯೋಚಿಸುವುದಲ್ಲದೆ, ಅವಳ ಅನೇಕ ಅನುಭವಗಳನ್ನು ಹಂಚಿಕೊಳ್ಳುತ್ತಿದ್ದರು. ಬೇರೆ ಬೇರೆ ತರದ ಬೆಳವಣಿಗೆಯ ಕಾರ್ಯದಲ್ಲಿ ನಿರತರಾದ ನಾವು ಸುಮಾರು ಇಪ್ಪತ್ತು ಜನರು ತಿಂಗಳಿಗೊಮ್ಮೆ ಅವಳ ಮನೆಯಲ್ಲಿ ಸೇರುತ್ತಿದ್ದೆವು. ಅಲ್ಲಿ ನಾವು ನಮ್ಮ ಚಿಂತನೆಗಳು, ಅನುಭವಗಳು ಇತ್ಯಾದಿ ವಿಷಯಗಳನ್ನು ಹಂಚಿಕೊಳ್ಳುತ್ತಿದ್ದೆವು. ಅದೊಂದು ಅಪೂರ್ವವಾದ ಅನುಭವ. ಎಷ್ಟೋ

ಹೊಸ ರೀತಿಯ ಹಾದಿಗಳು, ಯೋಚನೆಗಳು ತೋರುತ್ತಿದ್ದವು. ಅನೇಕ ಒಳ್ಳೆಯ ವಿಷಯಗಳು ಅಲ್ಲಿ ಅಂಕುರಗೊಳ್ಳುತಿದ್ದವು. ಇಂದು ಆಧುನಿಕ ಸಾಧನಗಳ ಮೂಲಕ ಅದ್ಭುತವಾಗಿ ವಿಶ್ವದೆಲ್ಲೆಡೆಯೂ ಸಂಪರ್ಕ ಸಾಧಿಸಬಹುದಾಗಿದೆ ಮತ್ತು ವಿಶ್ವದಾದ್ಯಂತ ಯುವಕರು ಮಾಡುತ್ತಿರುವ ಅದ್ಭುತ ಕೆಲಸಗಳ ಬಗ್ಗೆ ತಿಳಿದುಕೊಳ್ಳಬಹುದಾಗಿದೆ. ಸಂಘಮಿತ್ರ ನನ್ನ ಮಿತ್ರರಲ್ಲಿ ಬಹಳ ಶಕ್ತಿಯುತಳು. ಅವಳನ್ನು ಮಿತ್ರಳನ್ನಾಗಿ ಪಡೆದದ್ದು ನನ್ನ ಅದೃಷ್ಟ.

ನನ್ನ ಬಹು ಹತ್ತಿರದ ಮಿತ್ರರ ಬಗ್ಗೆ ಹೇಳುವಾಗ ನಾನು ಪಾಲ್ ಅನ್ನು ಮರೆಯುವ ಹಾಗಿಲ್ಲ. ನನ್ನ ಏ.ಪಿ.ಡಿ ಯ ದಿನಗಳಿಂದ ಅವನು ನನಗೆ ಪರಿಚಯ. ಐವಿಗೆ ಆರ್ಥ್ರೈಟಿಸ್ ನೋವಿನ ಕಾಯಿಲೆಯು ಶಾಲೆಯ ಹುಡುಗಿಯಾಗಿದ್ದಾಗಲೇ ಇದ್ದಿತು. ಗ್ರೂಪ್ ಕ್ಯಾಪ್ಟನ್ ಲಾರ್ಡ್ ಲಿಯೋನಾರ್ಡ್ ಚೆಶೈರ್ ಅವಳನ್ನು ಭೇಟಿಯಾದಾಗ Bangalore Cheshire Home ಪ್ರಾರಂಭಿಸಿದರು. ಅದರ ಮೊದಲ ನಿವಾಸಿಯೇ ಐವಿ. ದಿವಾನ್ ನನ್ನನ್ನು ಚೆಶೈರ್ ಹೋಮಿಗೆ ಕರೆದು ಕೊಂಡು ಹೋದಾಗ ನಾನು ಮೊದಲ ಬಾರಿಗೆ ಐವಿಯನ್ನು ಭೇಟಿ ಮಾಡಿದೆ. ಅವಳು ತಂದೆ ತಾಯಿಯನ್ನು ಕಳೆದುಕೊಂಡಿದ್ದಳು ಮತ್ತು ಆ ಮನೆಯಲ್ಲೇ ಬಹಳ ಕಾಲ ಇದ್ದಳು. ಮೇಟ್ರನ್ ಫ಼ಿಲೋಮಿನಾ ಮತ್ತು ಐವಿ ಯಾವಾಗಲೂ ಒಟ್ಟಿಗೇ ಇರುತ್ತಿದ್ದರು. ನಂತರ ಅವರುಗಳು ಅಲ್ಲಿಂದ ಸ್ಥಳಾಂತರಮಾಡಿ ಏ.ಪಿ.ಡಿ ಎದುರಿಗೆ ಒಂದು ಮನೆಯಲ್ಲಿ ಇದ್ದರು. ಐವಿ ಏ.ಪಿ.ಡಿ ಯಲ್ಲಿ ಕೆಲಸಕ್ಕೆ ಸೇರಿಕೊಂಡ ನಂತರ ನಾನು ಅವರನ್ನು ಮತ್ತೆ ಭೇಟಿ ಯಾಗಲು ಅವಕಾಶವು ಸಿಕ್ಕಿತು. ಅವಳು ನಮ್ಮೊಡನೆ ೩೨ ವರುಷಗಳು ಕೆಲಸ ಮಾಡಿದಳು. ಫ಼ಿಲೋ ಈ ಜಾಗದ ಎಲ್ಲರನ್ನೂ ಕಾಯುವ ದೇವತೆ. ಯಾರಿಗಾದರೂ ತೊಂದರೆಯಾದರೆ ಅವರು ಫ಼ಿಲೊಗೆ ಸಹಾಯಕ್ಕಾಗಿ ಬೇಡುತ್ತಿದ್ದರು. ಅವಳು ಹೊರದೇಶದಿಂದ ಬಂದ ವರಿಗೆಲ್ಲರಿಗೂ ಅಡುಗೆ ಮಾಡಿ ಬಡಿಸುತ್ತಿದ್ದಳು. ಅವರು ಅವಳ ಮನೆಗೆ ಬರುವುದಕ್ಕೆ ಸಂತೋಷಪಡುತಿದ್ದರು. ಅವಳ ದೇಶಾವರಿ ನಗೆಯು ಮತ್ತು ಆದರವೂ ಎಲ್ಲರನ್ನೂ ಆಕರ್ಷಿಸುತ್ತಿತ್ತು.

ಶ್ರೀಮತಿ ಎಲ್ಲನ್ ಅಂತಹವರನ್ನು ಮರೆಯಲು ಸಾಧ್ಯವೇ ಇಲ್ಲ. ಅವರು ಏ.ಪಿ.ಡಿ ಗೆ ೧೯೭೨ರಲ್ಲಿ ಭೇಟಿಕೊಟ್ಟಿದ್ದರು. ನಾನು ಅವರೊಂದಿಗೆ ಒಂದು ಶಾಲೆಯನ್ನು ಪ್ರಾರಂಭಿಸಬೇಕೆಂದು ಇದ್ದೇನೆ ಎಂದು ಹೇಳಿರಬೇಕು. ನನಗೆ ಮರತೇ ಹೋಗಿತ್ತು. ಐದು ವರ್ಷಗಳ ನಂತರ ನನಗೆ ಅವರಿಂದ ಒಂದು ಪತ್ರ ಬಂದಿತು. ಅದರಲ್ಲಿ ಅವರು ಬೇಂಗಳೂರಿಗೆ ಬರುತ್ತಿರುವುದಾಗಿಯೂ, ಆಗ ನನ್ನನ್ನೂ ನನ್ನ ಶಾಲೆಯನ್ನೂ ಭೇಟಿ ಮಾಡುವುದಾಗಿ ಬರೆದಿದ್ದರು. ನಾವು ಒಂದು ಇಡೀ ದಿವಸ ವಿಕಲಾಂಗರ ಸಮಸ್ಯೆಗಳ

ಬಗ್ಗೆ ಚರ್ಚಿಸುತ್ತಿದ್ದೆವು. ನಾವಿಬ್ಬರೂ ಬಹಳ ಒಗ್ಗಿಕೊಂಡು ಬೇಗನೆ ಒಳ್ಳೆಯ ಸ್ನೇಹಿತೆಯರಾದೆವು. ಅವರು ನಮ್ಮ ಚಟುವಟಿಕೆಗಳಿಗೆ ಬಹಳ ಪ್ರೋತ್ಸಾಹ ನೀಡುತ್ತಿದ್ದರು. ಒಂದು ಸಲ ಅವರು ತಮ್ಮ ಊರಿನಲ್ಲಿ ಹತ್ತು ಜನ ವಿಕಲಾಂಗರಿಂದ ವ್ಹೀಲ್ ಚೇರ್‌ಗಳನ್ನು ಸಂಗ್ರಹಿಸಿ ನಮ್ಮ ಸಂಸ್ಥೆಗೆ ಕಳುಹಿಸಿದರು. ಇದರ ಬಗ್ಗೆ ಜೀನ್ ಬರೆದಿರುವ ಎ.ಪಿ.ಡಿಯ ಪುಸ್ತಕದಲ್ಲಿ ದಾಖಲೆ ಇದೆ.

ಶ್ರೀಮತಿ ವಿಲ್ಸನ್ ವಿಶ್ವ ಶಾಂತಿಯಲ್ಲಿ ಬಹಳ ನಂಬಿಕೆ ಇದ್ದವರು ಮತ್ತು ಅಣು ಅಸ್ತ್ರಗಳ ವಿರುದ್ಧ ಆಂದೋಲನಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದರು. ಅವರು ಭಾರತಕ್ಕೆ ಆಗಾಗ ಭೇಟಿಕೊಡುತ್ತಿದ್ದರು. ಅವರ ಮಗ ಜಾನ್ ವಿಲ್ಸನ್ ಕೇರಳದ ವೈನಾಡ್ ಕಾಡುಗಳಲ್ಲಿ ವಾಸಿಸುತ್ತಿದ್ದ ಆದಿವಾಸಿಗಳ ಸುಧಾರಣೆಗೆ ಕೆಲಸ ಮಾಡುತ್ತಿದ್ದರು. ಅವನು ತರಬೇತಿ ಹೊಂದಿದ ನರ್ಸ್ ಆಗಿ ಆ ಕ್ಷೇತ್ರದಲ್ಲಿ ಕಳೆದ ೨೦ ವರ್ಷಗಳಿಂದ ಸೇವೆ ಸಲ್ಲಿಸುತ್ತಿದ್ದರು. ಶ್ರೀಮತಿ ವಿಲ್ಸನ್ ಬಂದರೆ ನಮ್ಮ ಮನೆಯವರು ಯಾರಾದರೂ ಅವರನ್ನು ವಿಮಾನ ನಿಲ್ದಾಣದಿಂದ ಕರೆದುತರುತ್ತಿದ್ದರು. ಮನೆಗೆ ಬಂದೊಡನೆ ಅವರು ನೇರ ನನ್ನ ಮಲಗುವ ಕೋಣೆಯೊಳಗೆ ಬಂದು, ಸೊಳ್ಳೆ ಪರದೆಯೊಳಗೆ ತೂರಿ ಹಾಸಿಗೆ ಮೇಲೆ ಕುಳಿತು, ನನ್ನೊಡನೆ ಘಂಟೆಗಟ್ಟಲೆ ಹರಟುತ್ತಿದ್ದರು.

ಅವರು ಎ.ಪಿ.ಡಿ ಗೆ ಹಣ ಸಂಗ್ರಹಿಸುತ್ತಿದ್ದರು. ಅವರ ಊರಿನ ಜನ ಸಾಮಾನ್ಯರಿಂದ ಸಂಗ್ರಹಿಸಿದ ಚಂದಾವನ್ನು ನಮಗೆ ಕೊಡುತ್ತಿದ್ದರು. ಒಂದು ದಿನ, ಇದ್ದಕ್ಕೆ ಇದ್ದಂತೆ ಅವರು ನನಗೆ ಒಂದು ಪತ್ರ ಬರೆದರು. ಅದರಲ್ಲಿ ಅವರು ತಮ್ಮ ಉಯಿಲನ್ನು ಬರೆದಿರುವುದಾಗಿಯೂ, ಅದರಲ್ಲಿ ನನ್ನೋಸ್ಕರ ಒಂದಿಷ್ಟು ಹಣವನ್ನು ಇಟ್ಟಿರುವುದಾಗಿಯೂ ತಿಳಿಸಿದರು. ಒಂದು ವಾರದ ನಂತರ ಮತ್ತೊಂದು ಪತ್ರ ಬಂದಿತು. ಅದರಲ್ಲಿ ಅವರು, ನನಗೆಂದು ಹಣ ಕೊಡಲು ನಿಶ್ಚಯಿಸಿರುವಾಗ ಅದನ್ನು ಬೇರೆಯಾಗಿ ಇಟ್ಟು ಏನು ಪ್ರಯೋಜನ, ಅದನ್ನು ಈಗಲೇ ಕೊಟ್ಟುಬಿಡುತ್ತೇನೆ ಎಂದು ತಿಳಿಸಿ ಒಂದು ಚೆಕ್ಕನ್ನೂ ಜೊತೆಗೆ ಕಳುಹಿಸಿದ್ದರು. ಅವರು ಕೆಲವು ವರ್ಷಗಳ ಹಿಂದೆ ದೈವಾಧೀನರಾದರು, ಆದರೆ ನನ್ನ ಮಟ್ಟಿಗೆ ಅವರು ಇನ್ನೂ ಜೀವಂತವಾಗಿಯೇ ಇದ್ದಾರೆ. ಅವರ ಮಕ್ಕಳು ಇಂದೂ ನನ್ನ ಸಂಪರ್ಕದಲ್ಲಿದ್ದಾರೆ. ಬಹುಶಃ ನಮಗೆ ಹಿಂದಿನ ಜನ್ಮದಲ್ಲಿ ಏನಾದರೂ ಸಂಬಂಧವಿತ್ತೇನೋ? ಅದಕ್ಕೇ ನಾವು ಅಷ್ಟು ಆತ್ಮೀಯ ಮಿತ್ರರಾಗಿದ್ದೆವು.

ನನ್ನ ಮತ್ತೊಬ್ಬ ಆತ್ಮೀಯ ಗೆಳತಿ ಮಧು ಮಿತ್ತಲ್. ಅವಳು ಉತ್ತರ ಭಾರತದ ಕಾನ್ಪುರದಿಂದ ಬಂದು ಬೆಂಗಳೂರಿನಲ್ಲಿ ಕೆಲಸ ಮಾಡಲು ಅವಕಾಶಗಳನ್ನು ಹುಡುಕುತಿದ್ದಳು.

ಆಶ್ರಯದಲ್ಲಿಯೇ ಬಾಳಿದ ಅವಳಿಗೆ ಹೊರ ಜಗತ್ತಿನ ಸವಾಲುಗಳನ್ನು ಎದುರಿಸುವುದು ಬಹಳ ಕಷ್ಟವಾಗಿತ್ತು. ಅವಳ ಭಾವಮೈದುನ ಅವಳಲ್ಲಿ ಬದಲಾವಣೆಯನ್ನು ತರುವುದರಲ್ಲಿ ದೊಡ್ಡ ಪಾತ್ರವನ್ನು ವಹಿಸಿದರು. ಅವಳು ಕೆಲವೇ ದಿನಗಳಲ್ಲಿ 'ಮಿತ್ರ ಜ್ಯೋತಿ' ಎಂಬ ಸಂಸ್ಥೆಯನ್ನು ಆರಂಭಿಸಿದಳು. ಇಂದು ಆ ಸಂಸ್ಥೆಗೆ ಇಪ್ಪತ್ತು ವರ್ಷಗಳಾಗುತ್ತವೆ. ಅವಳು ಆ ಸಂಸ್ಥೆಯನ್ನು ಪ್ರಾರಂಭಿಸಿದ ದಿನಗಳಲ್ಲಿ ನಾನು ಅವಳೊಂದಿಗೆ ಸಾಕಷ್ಟು ಸಮಯವನ್ನು ಕಳೆದೆ. ಮಧುಗೆ ಚಿಕ್ಕವಯಸ್ಸಿನಿಂದಲೇ ದೃಷ್ಟಿ ಮಾಂಧ್ಯವಿತ್ತು. ಈ ಸಂಸ್ಥೆಯನ್ನು ಕಟ್ಟುವ ಕಾರ್ಯವು ಅವಳಲ್ಲಿ ಮತ್ತು ಅವಳ ಕುಟುಂಬದವರಲ್ಲಿ ವಿಕಲಾಂಗರ ಬಗ್ಗೆ ಸದ್ಭಾವನೆಯನ್ನು ಬೆಳೆಸಿತು.

ಕಳೆದ ಐವತ್ತು ವರ್ಷಗಳಲ್ಲಿ ನಮ್ಮ ದೇಶದಲ್ಲಿ ವಿಕಲಾಂಗರಿಗಾಗಿ ನಡೆದಿರುವ ಕೆಲಸವನ್ನು ನೋಡಿದರೆ, ಕೆಲವರು ಸಜ್ಜನರು ಬೃಹತ್ ಸಂಸ್ಥೆಗಳನ್ನು ದೇಶದೆಲ್ಲೆಡೆಯೂ ಕಟ್ಟಿದ್ದಾರೆ. ಇವೆಲ್ಲದರೊಡನೆ ನನಗೆ ಸಂಪರ್ಕವಿಲ್ಲದಿದ್ದರೂ, ಇವಲ್ಲಿ ಕೆಲವನ್ನು ನಾನು ಚೆನ್ನಾಗಿ ಬಲ್ಲೆ. ನನಗೆ ಚೆನ್ನಾಗಿ ಪರಿಚಯವಿರುವ ಇಬ್ಬರು ಎಂದರೆ ಆಂತೋನಿ ಸ್ವಾಮಿ ಮತ್ತು ಸಿಸ್ಟರ್ ಸಂಗೀತ. ಎ.ಪಿ.ಡಿ ಪ್ರಾರಂಭವಾದಾಗ ಅಂತೋನಿ ಆಗತಾನೆ ಹೊರಬಂದ ಇಂಜನೀಯರ್, ಕಾಟ್ಪಾಡಿಯಲ್ಲಿ ಸ್ವೀಡಿಶ್ ರೆಡ್ ಕ್ರಾಸನ್ನು ಸೇರಿಕೊಂಡ. ನಂತರ ಈ ಸಂಸ್ಥೆಯು 'ವರ್ಶ್ ಟ್ರಸ್ಟ್' ಎಂದು ಹೆಸರನ್ನು ಬದಲಾಯಿಸಿಕೊಂಡಿತು. ನನಗೆ ಅವರ ಕಾರ್ಯ ಕಲಾಪಗಳೊಡನೆ ಹತ್ತಿರದ ನೆಂಟು. ಆಂತೋನಿ ಬಹಳ ಸೂಕ್ಷ್ಮ ಸ್ವಭಾವದವನು ಮತ್ತು ಮೃದುವಾದ ಮನಸ್ಸು. ಅವನು ಒಂದು ವರ್ಕ್ ಷಾಪನ್ನು ಸ್ಥಾಪಿಸಿದ. ಇದರಲ್ಲಿ ಅನೇಕ ಉದ್ಯೋಗಗಳಿಗೆ ಬೇಕಾದ ವಸ್ತುಗಳನ್ನು ತಯಾರು ಮಾಡುತಿದ್ದರು. ಇವರು ವ್ಹೀಲ್ ಚೇರ್‌ಮತ್ತು ಇತರ ಸಲಕರಣೆ ಗಳನ್ನು ತಯಾರು ಮಾಡುತಿದ್ದರು. ಇಂದು ಅವನು ಕೆಲಸದಿಂದ ನಿವೃತ್ತ ನಾದರೂ ಅವನ ಕೊಡುಗೆಯು ಈ ಕ್ಷೇತ್ರಕ್ಕೆ ಬಹಳ ಮಹತ್ವದ್ದಾಗಿದೆ. ಅವನ ಜ್ಞಾನ, ಅನುಭವ ಮತ್ತು ಸೌಹಾರ್ದತೆ, ಅವನನ್ನು ಅನೇಕ ಕಿರಿಯರಿಗೆ ಮಾದರಿಯಾಗಿ ಮಾಡಿದೆ.

ಸ್ವಿಟ್ಜರ್ಲ್ಯಾಂಡಿನಿಂದ ಬಂದಿದ್ದ ಸಿಸ್ಟರ್ ಸಂಗೀತ ನಮ್ಮ ಎ.ಪಿ.ಡಿ ಯ ಹತ್ತಿರದಲ್ಲೇ ಇದ್ದ ಒಂದು ಕಾನ್ವೆಂಟಿನಲ್ಲಿ ಕೆಲಸ ಮಾಡುತ್ತಿದ್ದರು. ಆ ಕಾನ್ವೆಂಟಿಗೆ ಬಂದ ಅನೇಕ ಹೊಸಬರು ನಮ್ಮಲ್ಲಿ ಸೇವೆ ಮಾಡಲು ಬರುತ್ತಿದ್ದರು. ಒಂದು ದಿನ ಸಂಗೀತ ನನ್ನನ್ನು ಅವಳು ಈ ರೀತಿಯಾದ ವಿಕಲಾಂಗರ ಶಾಲೆ ಒಂದನ್ನು ತನ್ನ ಉತ್ತರ ಪ್ರದೇಶದಲ್ಲಿರುವ ಊರಿನಲ್ಲಿ ಪ್ರಾರಂಭಿಸಬಹುದೇ? ಎಂದು ಕೇಳಿದಳು. ಕೆಲವು ವರ್ಷಗಳು ಕಳೆದ ನಂತರ ಅವಳು ವಾರಣಾಸಿಯಲ್ಲಿ ಎ.ಪಿ.ಡಿ ಯ ಮಾದರಿಯಲ್ಲಿ 'ಕಿರಣ್ ಕೇಂದ್ರ' ಎಂಬ ಸಂಸ್ಥೆಯನ್ನು

ಪ್ರಾರಂಭಿಸಿದಳು. ಕಾನ್ವೆಂಟಿನ ಕೆಲಸಕ್ಕೆ ರಾಜಿನಾಮೆ ಕೊಟ್ಟು, ತನ್ನ ಸಂಸ್ಥೆಯ ಬೆಳವಣಿಗೆ ಮತ್ತು ವಿಸ್ತಾರಕ್ಕಾಗಿ ಶ್ರಮಿಸತೊಡಗಿದಳು. ಅದರಲ್ಲಿ orthotic unit ಪ್ರಾರಂಭಿಸಬೇಕಾದಾಗ ನಾವು ನಮ್ಮ ತಂತ್ರಜ್ಞನನ್ನು ಅಲ್ಲಿಗೆ ಕಳುಹಿಸಿಕೊಟ್ಟೆವು. ಆ ವಿಕಲಾಂಗ ತಂತ್ರಜ್ಞನಿಗೆಆ ಸ್ಥಳವು ಬಹಳ ಹಿಡಿಸಿತು. ಅವನು ಅಲ್ಲಿನ unit ಅನ್ನು ಸಿದ್ಧಪಡಿಸಿದನು. ದುರದೃಷ್ಟವೆಂದರೆ ಅದಾದನಂತರ ಅವನು ಒಂದು ಅಪಘಾತಕ್ಕೆ ಈಡಾಗಿ ಮೃತ್ಯು ಹೊಂದಿದನು. ಕಿರಣ್ ಕೇಂದ್ರ ಉತ್ತಮವಾದ ಕೆಲಸವನ್ನು ಮಾಡುತ್ತಿದೆ ಮತ್ತು ಸಂಗೀತ ಅತ್ಯಂತ ಉತ್ಸುಕತೆಯಿಂದ ಅದನ್ನು ನಡೆಸುತ್ತಿದ್ದಾರೆ.

ನನಗೆ ಅನೇಕ ಅದ್ಭುತ ಮಿತ್ರರಿದ್ದರೂ, ನನಗೆ ಬಹಳ ಹತ್ತಿರವಾದವರು ನನ್ನ ಸಹೋದರಿಯರು. ನಾವು ಮೂವರ ಬಗ್ಗೆ ಯೋಚಿಸಿದಾಗ, ನಮ್ಮೆಲ್ಲರದ್ದೂ ಒಂದೇ ರೀತಿಯ ಸ್ವಭಾವ ಇರುವುದು ತಿಳಿಯುತ್ತದೆ. ಪ್ರಭಾ ಅವಳ ಓದಿನ ದಿನಗಳಲ್ಲಿ ನಮ್ಮ ಅಜ್ಜ ಅಜ್ಜಿಯೊಡನೆ ಮತ್ತು ಮುಂಬೈಯಲ್ಲಿ ನಮ್ಮ ಅತ್ತೆಯೊಡನೆ ಎಂದು ಹೆಚ್ಚು ಕಾಲ ಮನೆಯಿಂದ ದೂರವಿದ್ದಳು. ಮುಂಬೈಯಲ್ಲಿದ್ದ ದೀ ಅತ್ತೆಗೂ ಅವಳಿಗೂ ಅನೇಕ ವಿಷಯಗಳಲ್ಲಿ ಒಂದೇ ರೀತಿಯ ಆಸಕ್ತಿ ಇದ್ದಿದ್ದರಿಂದ ಇಬ್ಬರೂ ಚೆನ್ನಾಗಿ ಹೊಂದಿಕೊಂಡಿದ್ದರು. ಪ್ರಭಳಿಗೂ ಕೈಕೆಲಸವೆಂದರೆ ಬಹಳ ಇಷ್ಟ, ನಿಟ್ಟಿಂಗ್, ಕ್ರೋಶೆ, ಹೊಲಿಯುವುದು ಇತ್ಯಾದಿಗಳಲ್ಲಿ ಬಹಳ ಆಸಕ್ತಿ. ವಿಜಯನೊಂದಿಗೆ ಅವಳ ಮದುವೆಯಾದ ನಂತರ ಅವರು ಕೆಲವುದಿನ ಇಂಗ್ಲೆಂಡಿನಲ್ಲಿ ಇದ್ದು ಮುಂಬಯಿಗೆ ಹಿಂತಿರುಗಿದರು. ಅವರ ಇಬ್ಬರು ಗಂಡು ಮಕ್ಕಳು ರವಿ ಮತ್ತು ಶಂಕರ್ ಜೊತೆಗೆ ಅವರು ಭಾರತದ ಸಾಮಾಜಿಕ ಮತ್ತು ರಾಜಕೀಯ ಆಗುಹೋಗುಗಳ ಬಗ್ಗೆ ಚರ್ಚೆಮಾಡುತ್ತಾರೆ. ಅವಳಿಗೆ ಬಡವರಿಗೆ ಸಹಾಯ ಮಾಡುವುದು ಮತ್ತು ಅವರ ಮಕ್ಕಳ ಓದಿಗೆ ಹಣ ಸಂಗ್ರಹಿಸುವುದರಲ್ಲಿ ಬಹಳ ಉತ್ಸಾಹ. ಅವಳ ಮತ್ತು ಅವಳ ಸಹಪಾಟಿಗಳೊಡನೆ ಹರಟುವುದು ನನಗೆ ತೋಟಗಾರಿಕೆಯ ಬಗ್ಗೆ ಬಹಳ ಮಾಹಿತಿಯನ್ನು ನೀಡಿತು. ನಾನು ಕ್ಯಾಲಸನಹಳ್ಳಿಯಲ್ಲಿ ತೋಟಗಾರಿಕೆಯನ್ನು ಪ್ರಾರಂಭಿಸಿದಾಗ ಅವಳು ನನಗೆ ಬಹಳ ಸಹಾಯ ಮಾಡಿದಳು. ರವಿ ಈಗ ನನ್ನೊಡನೆ ಇರುತ್ತಾನೆ ಮತ್ತು ಶಂಕರನ ಹೆಂಡತಿ ಕಿವಿ ಮಾಂದ್ಯವಿರುವವರಿಗೆ ಸಹಾಯ ಮಾಡುತ್ತಾಳೆ.

ಪ್ರಭಾ ವೀಣೆಯನ್ನು ನುಡಿಸುತ್ತಿದ್ದಳು. ಚಿಕ್ಕ ವಯಸ್ಸಿನಿಂದಲೇ ಕಲಿಯಲು ಆರಂಭಿಸಿದ ಅವಳು, ವೀಣೆಯನ್ನು ತನ್ನೊಡನೆ ಇಂಗ್ಲೆಂಡಿಗೆ ತೆಗೆದುಕೊಂಡು ಹೋದಳು. ನಮ್ಮ ತಂದೆ ತಾಯಿಯರು ನಮಗೆ ಅನೇಕ ವಿಷಯಗಳನ್ನು ಕಲಿಸಿದರು, ಜೊತೆಗೆ ನಮಗೆ ಯಾವ ವಿಷಯಗಳಲ್ಲಿ ಆಸಕ್ತಿಯುಂಟೋ ಆ ವಿಷಯಗಳನ್ನು ಕಲಿಯಲು ಸ್ವಾತಂತ್ರವನ್ನು

ಕೊಟ್ಟರು. ನಮ್ಮ ಮೇಲೆ ಯಾವ ಒತ್ತಡವನ್ನೂ ಹೇರಲಿಲ್ಲ. ಎಲ್ಲವನ್ನೂ ನಮ್ಮ ಮೇಲೆಯೇ ಬಿಟ್ಟಿದ್ದರು. ಓದಿನ ವಿಷಯ ಒಂದರಲ್ಲಿ ಮಾತ್ರ ಅಮ್ಮ ಪ್ರಭಳನ್ನು ಆಂಧ್ರ ಮೆಟ್ರಿಕ್ ಪರೀಕ್ಷೆ ಬರೆಯಲು ಒತ್ತಾಯ ಮಾಡಿದರು. ಪ್ರಭ ಅದನ್ನು ಅವಳು ೯ನೆಯ ತರಗತಿಯಲ್ಲಿದ್ದಾಗಲೇ ಬರೆದು, ಪಾಸಾಗಿ, ಬಹಳ ಮುಂಚೆಯೇ ಎಸ್.ಎಸ್.ಎಲ್.ಸಿ ಸರ್ಟಿಫಿಕೇಟನ್ನು ಪಡೆದಳು.

ಪ್ರಭ ಇಲ್ಲದಿದ್ದಾಗ, ನಾನು ಮತ್ತು ಕುಮು ಬಹಳ ನಿಕಟವಾದೆವು. ನನಗೆ ಅವಳು ಮನೆಯ ಹೊರಗಡೆ ಆಡುತ್ತಿರುವುದು, ಅವಳ ಸೊಂಪಾದ ಗುಂಗರು ಕೂದಲು, ಅವಳು ಊಟದ ಹೊತ್ತಿಗೆ ಮನೆಯೊಳಗೆ ಬರುತಿದ್ದುದು, ಎಲ್ಲಾ ಚೆನ್ನಾಗಿ ನೆನಪಿದೆ. ಅವಳು ತೆಳ್ಳಗೆ, ಬಹಳ ಸೂಕ್ಷ್ಮವಾದ ಹುಡುಗಿ. ಅವಳ ಕೈಗಳು ಹುರುಳಿಕಾಯಿಯಂತೆ ತೆಳ್ಳಗಿದ್ದವು. ಎಲ್ಲಾ ಚಿಕ್ಕ ಮಕ್ಕಳಂತೆ ನಾವೂ ಜಗಳವಾಡುತಿದ್ದೆವು. ನನಗೆ ಮೈ ಸರಿಯಿಲ್ಲದೆ ನಾನು ಹಾಸಿಗೆಯಲ್ಲಿ ಮಲಗಿದ್ದಾಗ ಅವಳು ನನ್ನ ಪಕ್ಕದಲ್ಲಿಯೇ ಕುಳಿತಿರುತ್ತಿದ್ದಳು. ಆದರೆ ನಮ್ಮಲ್ಲಿ ಜಗಳ ಪ್ರಾರಂಭವಾದಾಗ ನಾನು ಅವಳನ್ನು ನನ್ನ ಬಲಗೈಯಿಂದ ಬಿಗಿಯಾಗಿ ಹಿಡಿದುಕೊಂಡುಬಿಡುತ್ತಿದ್ದೆ. ನನ್ನ ಬಲಗೈಹಿಡಿತ ಬಹಳ ಜೋರಾಗಿತ್ತು. ಅದರಿಂದ ತಪ್ಪಿಸಿಕೊಳ್ಳಲು ಅವಳು ನನ್ನ ಕೈಯನ್ನು ಕಚ್ಚುತ್ತಿದ್ದಳು. ನಮ್ಮ ಬಹಳ ದೊಡ್ಡ ಜಗಳವು ರೋಜಾ ಹೂವುಗಳಿಗಾಗಿ ಆಗುತ್ತಿತ್ತು. ನಮ್ಮ ತಾತ ಮತ್ತು ಮಾಲಿ ರೋಜಾ ಗಿಡಗಳನ್ನು ಬೆಳೆಸುತ್ತಿದ್ದರು ಮತ್ತು ಪ್ರತಿಯೊಂದು ಗಿಡದಲ್ಲಿಯೂ ಬಿಡುವ ರೋಜಾ ಹೂವುಗಳನ್ನು ಎಣ್ಣಿಸಿ, ಲೆಕ್ಕ ಇಡುತ್ತಿದ್ದರು. ನನಗೆ ನನ್ನ ರೋಜಾ ಹೂವುಗಳನ್ನು ಯಾರೂ ಮುಟ್ಟುವುದು ಇಷ್ಟವಿರಲಿಲ್ಲ. ಕುಮುವಿಗೆ ರೋಜಾ ಹೂವನ್ನು ಮುಡಿದುಕೊಂಡು ಶಾಲೆಗೆ ಹೋಗುವುದು ಬಹಳ ಇಷ್ಟ. ಜೊತೆಗೆ ಅವಳ ಟೀಚರ್‌ಗಳಿಗೂ ರೋಜಾ ಹೂವನ್ನು ಕೊಡುತ್ತಿದ್ದಳು. ನನಗೆ ಹೂವು ಮುಡಿದುಕೊಳ್ಳುವುದು ಇಷ್ಟವಿರಲಿಲ್ಲ. ಹೂವುಗಳು ಆ ಗಿಡಕ್ಕೆ ಸೇರಿದ್ದು ಎಂದು ನನ್ನ ನಂಬಿಕೆಯಾಗಿತ್ತು.

ಆ ಚಿಕ್ಕ ವಯಸ್ಸಿನಲ್ಲಿ ನಮ್ಮ ನಮ್ಮ ಈ ಚಿಕ್ಕ ಪುಟ್ಟ ಭಿನ್ನಾಭಿಪ್ರಾಯಗಳು ಬಹಳ ಮಹತ್ವವನ್ನು ಹೊಂದಿದ್ದವು. ಅವಳು ಹಾಸಿಗೆಯಲ್ಲಿ ಮಲಗಿರುವಾಗ ನಾನು ಅವಳನ್ನು ಸ್ವಲ್ಪ ಕುಡಿಯಲು ನೀರನ್ನು ಕೇಳುತ್ತಿದ್ದೆ, ಜೊತೆಗೆ ಅವಳಿಗೆ ನೀರು ಕೇಳಿದವರಿಗೆ ಕೊಡದಿದ್ದರೆ ಹಲ್ಲಿ ಜನ್ಮ ಬರುತ್ತದೆ ಎಂದು ಹಿರಿಯರು ಹೇಳಿರುವುದನ್ನು ಜ್ಞಾಪಿಸುತ್ತಿದ್ದೆ. ಕೊನೆಗೆ ಅವಳು ಕೋಪಿಸಿಕೊಂಡು ಎದ್ದುಹೋಗಿ ನೀರಿನ ಬಾಟಲ್ಲನ್ನು ತಂದು ನನ್ನ ಮುಂದೆ ಕುಕ್ಕುತ್ತಿದ್ದಳು. ಅಮ್ಮನಿಗೆ ನಮ್ಮಿಬ್ಬರ ಜಗಳಗಳನ್ನು ನೋಡಿ ಬಹಳ ಸಂಕಟವಾಗುತಿತ್ತು.

ಅವಳು ಇದನ್ನು ಪ್ರಭ ಮತ್ತು ಇತರ ಸಂಬಂಧಿಕರೊಂದಿಗೆ ಹೇಳಿಕೊಳ್ಳುತ್ತಿದ್ದಳು. ಕ್ರಮೇಣ, ನಾವು ದೊಡ್ಡವರಾದಂತೆ ಇವೆಲ್ಲಾ ಮಾಯವಾಯಿತು.

ಕುಮು ಬೆಂಗಳೂರಿನಲ್ಲಿ ಹೋಮ್ ಸೈನ್ಸ್ ಓದಿದಳು. ನಮ್ಮ ತಂದೆಯ ಕಡೆಯ ಕಸಿನ್ ಒಬ್ಬನೊಂದಿಗೆ ಅವಳ ಮದುವೆಯಾಯಿತು. ಅವಳ ಗಂಡ ಪ್ರೊ. ಗರುಡಾಚಾರ್ – ನಾವು ಮನೆಯಲ್ಲಿ ಅವನನ್ನು ಬಾಬು ಎಂದು ಕರೆಯುತ್ತಿದೆವು – ಹೈದರಾಬಾದಿನ ಒಸ್ಮಾನಿಯಾ ಯೂನಿವರ್ಸಿಟಿಯ ಎಂಜಿನೀಯರಿಂಗ್ ಕಾಲೇಜಿನಲ್ಲಿ ಪ್ರೊಫೆಸರ್ ಆಗಿದ್ದರು. ಈಗಲೂ ಅನೇಕಬಾರಿ ಅವರನ್ನು ರಾಷ್ಟ್ರೀಯ ಮಟ್ಟದಲ್ಲಿ ಸಲಹೆಗೆ ಕರೆಯುತ್ತಾರೆ. ಇವರಿಬ್ಬರೂ ಅನೇಕ ವರ್ಷಗಳು ಹೈದರಾಬಾದಿನಲ್ಲಿ ವಾಸಿಸಿದ್ದರು, ಮನೆಯನ್ನು ಕಟ್ಟಿಕೊಂಡಿದ್ದರು. ಬಾಬುವಿನ ನಿವೃತ್ತಿಯಾದ ನಂತರ ಅವರು ಬೆಂಗಳೂರಿಗೆ ಬಂದು ನೆಲಸುವ ನಿರ್ಧಾರವನ್ನು ತೆಗೆದುಕೊಂಡರು. ಈಗ ಕುಮುವಿನ ಮನೆ ನಮ್ಮ ಮನೆಯಿಂದ ಕೆಲವೇ ನಿಮಿಷಗಳ ದೂರ. ನಾನು ಪ್ರಭಳೊಂದಿಗೆ ದಿನವೂ ಮಾತನಾಡುತ್ತೇನೆ. ನಮ್ಮ ತಂದೆ ತಾಯಿಯರು ದೈವಾಧೀನರಾದಾಗ ನಾವು ಮೂರು ಜನರೂ ಕಾನ್ಫರೆಂಸ್ ಕಾಲ್ ಮಾಡಿ, ದೈನಂದಿನ ಆಗುಹೋಗುಗಳ ಬಗ್ಗೆ ಮಾತನಾಡುತ್ತಿದ್ದೆವು. ನನ್ನ ಅಳಿಯಂದಿರು ನಮ್ಮ ಮನೆಯಲ್ಲಿಯೇ ಬೆಳೆದಿದ್ದಾರೆ. ನಾನು ಅವರಿಗೆ ಬಹಳ ಶಿಸ್ತಿನ ದೊಡ್ಡಮ್ಮನಾಗಿದ್ದೇನೆ.

ದೇವರು, ಧರ್ಮದ ವಿಷಯದಲ್ಲಿ ನಮ್ಮ ಯೋಚನೆಗಳು ಬಹಳ ಭಿನ್ನವಾಗಿವೆ. ಪ್ರಭ ಅಷ್ಟೇನೂ ದೈವಭಕ್ತೆಯಲ್ಲ. ಕೆಲವು ಹಬ್ಬ ಹುಣ್ಣಿಮೆಯಲ್ಲಿ, ಸಾಂಕೇತಿಕವಾಗಿ ಕೆಲವು ಪೂಜೆಗಳನ್ನು ಮಾಡುತ್ತಾಳೆ. ನಾನು ಈ ವಿಷಯದಲ್ಲಿ ನಿರ್ಲಿಪ್ತವಾಗಿದ್ದೇನೆ. ನಾವು ಮಕ್ಕಳಾಗಿದ್ದಾಗ, ದೀಪಾವಳಿಯದಿನ ಬೆಳಗಿನ ಜಾವ ಬೇಗ ಎದ್ದು, ಸ್ನಾನ ಮಾಡಿ, ಮುಂಜಾವಿನಲ್ಲೇ ಪಟಾಕಿಗಳನ್ನು ಹಚ್ಚಲು ಹೇಳುತ್ತಿದ್ದರು. ಆದರೆ ನಾನು ಈ ಮಾತನ್ನು ಕೇಳುತ್ತಿರಲಿಲ್ಲ. ಈ ರೀತಿಯ ನಿಯಮವನ್ನು ಪಾಲಿಸದಿದ್ದಕ್ಕೆ ನನಗೆ ಯಾವ ಶಿಕ್ಷೆಯೂ ದೇವರು ಕೊಡುವುದಿಲ್ಲ ಎಂದು ನನ್ನ ನಂಬಿಕೆ. ಬೆಳಗಿನ ಜಾವ ಏಳಲು ಒಪ್ಪದಿದ್ದರೂ, ಪೂಜಾ ದಿನಗಳಲ್ಲಿ ಮಾಡುವ ಸಿಹಿ ತಿಂಡಿಗಳ ಬಗ್ಗೆ ನನ್ನದೇನೂ ಅಭ್ಯಂತರವಿರಲಿಲ್ಲ.ನಾನು ದೈವ ಎಂಬ ಶಕ್ತಿಯೊಂದು ಇದೆ. ಅದು ಈ ಜಗತ್ತನ್ನು ಸೃಷ್ಟಿಸಿದೆ ಎಂದು ನಂಬುತ್ತೇನೆ. ಆದರೆ, ಅದರಲ್ಲಿ ಇಷ್ಟೆಲ್ಲಾ ಕಷ್ಟಗಳೂ, ಸಂಕಟಗಳೂ ಯಾಕೆ? ಇಷ್ಟೆಲ್ಲಾ ವ್ಯತ್ಯಾಸಗಳು ಯಾಕೆ? ಈಗೀಗ ನನಗೆ ನಮ್ಮ 'ಕರ್ಮ'ದ ಸಿದ್ಧಾಂತವು ಮನಸ್ಸಿಗೆ ಸಾಕಷ್ಟು ಸಾಂತ್ವನ ಕೊಡುತ್ತದೆ. ಪ್ರಭ ಈ ವಿಷಯದಲ್ಲಿ ಹೀಗೊಂದು ಸಲ, ಹಾಗೊಂದು ಸಲ ಎಂಬಂತೆ

ಡೋಲಾಯಮಾನವಾಗಿರುತ್ತಾಳೆ. ಆದರೆ, ಕುಮು ಬಹಳ ಸಂಪ್ರದಾಯ ಶೀಲೆ. ಅವಳು ಎಲ್ಲಾ ಪೂಜೆ ಪುನಸ್ಕಾರಗಳನ್ನು ಶಾಸ್ತ್ರಗಳಲ್ಲಿ ಹೇಳಿರುವಂತೆ ಮಾಡುತ್ತಾಳೆ. ಕುಮು ಒಬ್ಬ ರೇಖಿ ಮಾಸ್ಟರ್. ಅನೇಕ ವರ್ಷಗಳಿಂದ ರೇಖಿ ಅಭ್ಯಾಸ ಮಾಡುತಿದ್ದಾಳೆ. ಅವಳಿಗೆ ಪ್ರಾರ್ಥನೆಯ ಮೂಲಕ ಏನು ಬೇಕಾದರೂ ಸಾಧಿಸಬಹುದು ಎಂಬ ಧೃಢ ನಂಬಿಕೆ ಇದೆ.

ಈಗ, ನನ್ನ ಜೀವನದ ಬಗ್ಗೆ ಒಂದು ಹಿನ್ನೋಟ ಹಾಕಿದರೆ, ನನ್ನ ಜೀವನ ಸುಗಮವಾಗಿಯೇ ಇತ್ತು ಎನ್ನಬಹುದು. ಜೀವನದಲ್ಲಿ ನಮ್ಮ ಕುಟುಂಬ, ಮಿತ್ರರು, ನಾವು ಇರುವ, ಕಲಿಸಿಕೊಳ್ಳುವ ವಾತಾವರಣ, ಇವುಗಳು ಬಹಳ ದೊಡ್ಡ ಪಾತ್ರವನ್ನು ವಹಿಸುತ್ತವೆ. ಈ ವಿಷಯದಲ್ಲಿ ನಾನು ಅದೃಷ್ಟವಂತೆ. ವಿಕಲಾಂಗತೆ ನನಗೇನೂ ಶಾಪವಾಗಿರಲಿಲ್ಲ. ಇತರರು ನನ್ನಬಗ್ಗೆ ಕೆಟ್ಟದಾಗಿ ಮಾತನಾಡಿದ್ದರೆ, ಅಥವಾ ನನ್ನನ್ನು ಪ್ರೀತಿ ಆದರಗಳಿಂದ ವಂಚಿತಳನ್ನಾಗಿ ಮಾಡಿದ್ದರೆ ಹೇಗೆ ಅನಿಸುತ್ತಿತ್ತೋ ಗೊತ್ತಿಲ್ಲ. ನನ್ನ ಜೀವನದಲ್ಲಿ ನಾನು ಸಾಫಲ್ಯವನ್ನು ಕಂಡಿದ್ದೇನೆ. ನಾನು ನನ್ನ ಜೀವನದಲ್ಲಿ ಏನೇನನ್ನು –ಸಾಧಿಸಬೇಕೆಂದಿದ್ದೆನೋ ಅದನೆಲ್ಲಾ ಸಾಧಿಸಿದ್ದೇನೆ. ನಾನು ಬೃಹತ್ ಕನಸುಗಳನ್ನು ಕಾಣುವ ಧೈರ್ಯವನ್ನು ತೋರಿಸಿದೆ, ಮತ್ತು ಅವನ್ನು ಕಾರ್ಯಗತ ಮಾಡಲೂ ಮುಂದಾದೆ. ಇದಕ್ಕೆಲ್ಲಾ ನನ್ನ ಕುಟುಂಬ ಮತ್ತು ಮಿತ್ರರ ಸಹಾಯವೇ ಕಾರಣ.

ನನಗೆ ಈಗ ನಾನು ಮತ್ತೊಮ್ಮೆ ಪ್ರಾರಂಭ ಮಾಡಿ ಎಲ್ಲವನ್ನೂ ಪುನರಾವರ್ತಿಸಬಹುದು ಎಂದು ಅನೇಕಸಲ ಅನಿಸುತ್ತದೆ. ಆದರೆ, ಮನಸ್ಸು ಉತ್ಸಾಹದಿಂದ ತುಂಬಿ ತುಳುಕುತ್ತಿದ್ದರೂ, ದೇಹವು ಬಳಲಿ ಬೆಂಡಾಗಿದೆ. ನನಗೆ ಇನ್ನೂ, ವಿಕಲಾಂಗರ ಕ್ಷೇತ್ರದ ಹೊರಗೂ ಮಾಡಬೇಕಾದ ಅನೇಕ ಕೆಲಸಗಳು ತೋಚುತ್ತವೆ. ದೇವರು ನನ್ನನ್ನು ಎಲ್ಲಿಗೆ ಕಳುಹಿಸುತ್ತಾನೋ? ಅವನನ್ನು ನಾನು ಬೇಡ ಬಹುದಾದರೆ, ನಾನು ಮುಂದಿನ ಜನ್ಮದಲ್ಲಿ ತೋಟಗಾರನಾಗಿ ಹುಟ್ಟಲು ಬಯಸುತ್ತೇನೆ. ನನಗೆ ಜನರಿಗಿಂತ ಪ್ರಕೃತಿಯೊಡನೆ ಇರಲು ಇಷ್ಟ. ಇದೆಲ್ಲಾ ಮೊದಲೇ ನಿಶ್ಚಿತವಾಗಿರಬಹುದು, ಆ ದೇವನಿಗೇ ಗೊತ್ತು. ಬಹುಷಃ ನಾನು ಎ.ಪಿ.ಡಿ ಯಲ್ಲಿ ವಹಿಸಿದ ಪಾತ್ರಕ್ಕೋಸ್ಕರವೇ ನನ್ನನ್ನು ವಿಕಲಾಂಗಳಾಗಿ ಹುಟ್ಟಿಸಿರ ಬಹುದು. ಜೀವನವೆಂಬ ವೇದಿಕೆಯಮೇಲೆ ನನಗೆ ಕೊಟ್ಟಿದ್ದ ಪಾತ್ರವನ್ನು ನಾನು ಪರಿಪೂರ್ಣತೆಯಿಂದ ನಡೆಸಿದ್ದೇನೆ ಎಂದು ನಂಬಿದ್ದೇನೆ. ಈಗ ನನ್ನ ಪಾತ್ರವು ಮುಗಿದಿರುವುದರಿಂದ, ನಾನು ಪಕ್ಕಕ್ಕೆ [illegible] ಪ್ರೇಕ್ಷಕರೊಂದಿಗೆ ಕುಳಿತುಕೊಳ್ಳಲು ಆಶಿಸುತ್ತೇನೆ. ಈಗ ಹೊಸದಾದ [illegible] ತೆರೆದುಕೊಳ್ಳಬೇಕು. ಆ ಸನ್ನಿವೇಶವು ನನ್ನಲ್ಲಿ ಸ್ವಾರಸ್ಯವನ್ನು ಮೂಡಿಸಿದರೆ, [illegible]

ವೇದಿಕೆಯನ್ನು ಹತ್ತಿ ಪಾತ್ರ ವಹಿಸಬಹುದು. ಮುಂದೆ ಏನಾಗುವುದೋ ಯಾರಿಗೆ ಗೊತ್ತು? ಯಾವ ದಾರಿ ತೆರೆದುಕೊಳ್ಳುವುದೋ? ವಿಧಿಯ ಚಕ್ರಗಳು ಎಲ್ಲಿಗೆ ಕೊಂಡು ಹೋಯ್ಯುವುದೋ?

* * *



ಹೇಮಾ ಬರೆದಿರುವ ಪಂಡಿತ್ ನೆಹರು ಚಿತ್ರಕ್ಕೆ ಅವರು ಸಹಿ ಹಾಕುತ್ತಿರುವುದು.
ಪಂಡಿತ ನೆಹರು ಸಹಿಹಾಕಿರುವ, ಹೇಮಾ ಬಿಡಿಸಿರುವ ಅವರ ಭಾವಚಿತ್ರ





ಎಂ.ಎ.ಎನ್.ಪ್ರಸಾದ್ ಮೂಲತಃ ಬೆಂಗಳೂರಿನವರು. ಫಾರ್ಮಸಿ ಮತ್ತು ಮಾರ್ಕೆಟಿಂಗ್ ಪದವಿಗಳನ್ನು ಪಡೆದ ಇವರು ಔಷಧಿ ಮತ್ತು ಗ್ರಾಹಕವಸ್ತುಗಳ ಮಾರಾಟ ಸಂಸ್ಥೆಗಳಲ್ಲಿ ಹಿರಿಯ ಅಧಿಕಾರಿಯಾಗಿ ಕೆಲಸ ಮಾಡಿ ನಂತರ ಈ ಕ್ಷೇತ್ರದಲ್ಲಿ ಸಲಹೆಗಾರರಾಗಿ ಕೆಲಸ ಮಾಡಿದ್ದಾರೆ. ಮುಂಬೈಯಲ್ಲಿ 30 ವರ್ಷಗಳು ಕಳೆದು ಈಗ ಬೆಂಗಳೂರಿಗೆ ಮರಳಿದ್ದಾರೆ.

ಸಂಗೀತ, ನಾಟಕ, ಕಲೆ, ಸಾಹಿತ್ಯ, ಇತ್ಯಾದಿ ಅನೇಕ ಕ್ಷೇತ್ರಗಳಲ್ಲಿ ಆಸಕ್ತಿಯುಳ್ಳ ಇವರು ಮುಂಬಯಿಯ ಅನೇಕ ಸಂಘ ಸಂಸ್ಥೆಗಳ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದರು. ಬೆಂಗಳೂರಿಗೆ ಹಿಂದಿರುಗಿದ ಮೇಲೆ ಅಲ್ಲಿ 'ಕಲಾ ಪ್ರೇಮಿ ಫೌಂಡೇಷನ್' ಎಂಬ ಸಂಸ್ಥೆಯನ್ನು ಪ್ರಾರಂಭಿಸಿ ಕಲೆ ಮತ್ತು ಸಂಸ್ಕೃತಿಯ ಬಗ್ಗೆ ಹೆಚ್ಚಿನ ಅರಿವು ಮತ್ತು ಅಭಿರುಚಿಯನ್ನು ಬೆಳೆಸುವಂತಹ ಕಾರ್ಯಕ್ರಮಗಳನ್ನು ನಡೆಸುತ್ತಿದ್ದಾರೆ. ಇವರು ರಚಿಸಿರುವ ಕೃತಿಗಳಲ್ಲಿ ತಿರುಪಲ್ಲಾಂಡು, ತಿರುಪ್ಪಾವೈ, ಗದ್ಯತ್ರಯ ಇವುಗಳ ಅಂಗ್ಲ ಅನುವಾದವು ಬಹಳ ಜನಪ್ರಿಯವಾಗಿವೆ.

ಬೆಲೆ: ರೂ. 200/-

ISBN: 978-81-902767-3